Kannada

# ಡ್ರಾಮಾ

## DRAMA




ವಾಹ್ ಡ್ರಾಮಾ ವಾಹ್...!

ವಾಹ್ ಬಾಬಾ ವಾಹ್..!

ವಾಹ್ ರೇ ನನ್ನ ಶ್ರೇಷ್ಠ ಭಾಗ್ಯ ವಾಹ್...!

# ಅವ್ಯಕ್ತ ಡ್ರಾಮಾ



# “ಅವ್ಯಕ್ತ ಡ್ರಾಮಾ”

ಕೃತಿ

(ಸಂಕಲನ)

**ಸ್ಪಾರ್ಕ್ (SpARC)**


## ಪ್ರಜಾಪಿತ ಬ್ರಹ್ಮಾಕುಮಾರೀಸ್ ಈಶ್ವರೀಯ ವಿಶ್ವ ವಿದ್ಯಾಲಯ

ಮತ್ತು

**ರಾಜಯೋಗ ಎಜುಕೇಷನ್ ಅಂಡ್ ರಿಸರ್ಚ್ ಫೌಂಡೇಶನ್**

ಪಾಂಡವ ಭವನ, ಅಬು ಪರ್ವತ, ರಾಜಸ್ಥಾನ



ಕನ್ನಡ ಅನುವಾದ – ಬೆಂಗಳೂರು ಸಿಟಿ ಸಬ್ ಜೋನ್

## ಸ್ಪಾರ್ಕ್ (SpARC)

ಸ್ಪಾರ್ಕ್ ಒಂದು ಸಂಶೋಧನ ವಿಭಾಗವಾಗಿದೆ. ದೇಶ ಮತ್ತು ವಿದೇಶದ ಅನೇಕ ಸ್ಥಳಗಳಲ್ಲಿ ಇದರ ಕಾರ್ಯವು ನಡೆಯುತ್ತಿದೆ. **ಸ್ಪಾರ್ಕ್ ಶಬ್ದದ ವಿಸ್ತಾರ – ಸ್ಪಿರಿಚ್ಯುಯಲ್ ಅಪ್ಲಿಕೇಷನ್ಸ್ ಅಂಡ್ ರಿಸರ್ಚ್ ಸೆಂಟರ್ (Spiritual Applications and Research Centre).** ವಿಶ್ವ ನವ ನಿರ್ಮಾಣದ ಕಾರ್ಯದಲ್ಲಿ ಆಧ್ಯಾತ್ಮಿಕತೆ ಹಾಗೂ ವಿಜ್ಞಾನವನ್ನು ಒಂದು ಮತ್ತೊಂದರ ಸಹಯೋಗಿಯನ್ನಾಗಿ ಮಾಡುವುದೇ ಇದರ ಲಕ್ಷ್ಯವಾಗಿದೆ. ಈ ಲಕ್ಷ್ಯವನ್ನು ಪೂರ್ಣಗೊಳಿಸುವುದಕ್ಕಾಗಿ ಸ್ಪಾರ್ಕ್ ಮನನ ಚಿಂತನೆ ಹಾಗೂ ವಿಚಾರ ಸಾಗರ ಮಂಥನದ ಮುಖಾಂತರ ಈಶ್ವರೀಯ ಜ್ಞಾನವನ್ನು ವೈಜ್ಞಾನಿಕ ರೀತಿಯಲ್ಲಿ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಮತ್ತು ವಿಜ್ಞಾನದ ಎಲ್ಲಾ ಕ್ಷೇತ್ರಗಳಲ್ಲಿ ಆಧ್ಯಾತ್ಮಿಕ ಹಿನ್ನಲೆಯನ್ನು ಕೊಡುವುದರ ಮೂಲಕ ಜ್ಞಾನ ಹಾಗೂ ಆಧ್ಯಾತ್ಮಿಕತೆಯನ್ನು ಒಂದರ ಸಮೀಪದಲ್ಲಿ ಮತ್ತೊಂದನ್ನು ತರಲು ಕಾರ್ಯ ನಿರ್ವಹಿಸುತ್ತಿದೆ.

ಈ ಕಾರ್ಯದಲ್ಲಿ ತೀವ್ರಗತಿಯಲ್ಲಿ ಮುಂದುವರೆಯಲು ಮತ್ತು ಜೀವನದ ಎಲ್ಲಾ ದಿಕ್ಕುಗಳಲ್ಲಿ ಆಧ್ಯಾತ್ಮಿಕತೆಯ ಪ್ರಯೋಗ ಮತ್ತು ಉಪಯೋಗದಿಂದ ಪ್ರಾಪ್ತವಾಗುವ ಪರಿಣಾಮುಗಳನ್ನು ಸರ್ವಮಾನ್ಯವನ್ನಾಗಿ ಮಾಡಲು ಪ್ರಭಾವಶಾಲಿಯಾದ ವಿಧಿ, ಸಾಧನೆ ಮತ್ತು ತಾಂತ್ರಿಕತೆಯ ವಿಕಾಸವನ್ನು ತರುವ ಕಾರ್ಯದಲ್ಲಿ ಸ್ಪಾರ್ಕ್ ವಿಭಾಗವು ಎಲ್ಲಾ ಪ್ರಕಾರದ ಸಂಶೋಧನೆಗಳಿಗೆ ಪ್ರೋತ್ಸಾಹವನ್ನು ನೀಡುತ್ತದೆ.

## ವಾಹ್ ಡ್ರಾಮಾ ವಾಹ್

## ಲೇಖನ – 1

ಒಂದಲ್ಲ ಒಂದು ಮಾತು ಜೀವನದಲ್ಲಿ ಸಮಸ್ಯೆಯಾಗುತ್ತದೆ. ಈಗಂತೂ ಕಲಿಯುಗದ ಅಂತಹ ಸಮಯವಾಗಿದೆ. ಮುಖ್ಯವಾಗಿ ಈ ಸಮಯದಲ್ಲಿ ಕೆಲವರಿಗೆ ಮಕ್ಕಳು, ಕೆಲವರಿಗೆ ಶರೀರ, ಕೆಲವರಿಗೆ ತಮ್ಮ ಪರಿಸ್ಥಿತಿ, ಸರ್ಕಾರದ ಕಾನೂನು, ವ್ಯಾಪಾರದಲ್ಲಿ ಏರುಪೇರು, ಹೀಗೆ ಒಂದಲ್ಲ ಒಂದು ಮಾತು ಅಸಂತುಷ್ಟ ಮಾಡುತ್ತದೆ. ಬಾಬಾರವರು ಹೇಳುತ್ತಾರೆ – 'ಡ್ರಾಮಾ' ಎಂಬ ಗುರಾಣಿಯನ್ನು ನೆನಪಿಡಿ ಸಾಕು. ಹಿಂದಿನ ಕಾಲದಲ್ಲಿ ಸೈನಿಕರು ಯುದ್ಧ ಮಾಡಲು ಹೋಗುವಾಗ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಗುರಾಣಿಯನ್ನು ಬಳಸುತ್ತಿದ್ದರು. ಎದುರಿನಲ್ಲಿ ಇರುವ ಶತ್ರುವಿನ ಪ್ರಹಾರದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಗುರಾಣಿಯನ್ನು ಬಳಸುತ್ತಿದ್ದರು. ಒಂದುವೇಳೆ ಕವಚ ಮತ್ತು ಗುರಾಣಿ ಇಲ್ಲದಿದ್ದರೆ ಶತ್ರುವಿನ ಕತ್ತಿಯ ಪೆಟ್ಟು ಬೀಳುತ್ತದೆ ಮತ್ತು ಗಾಯಾಳುವಾಗ ಬೇಕಾಗುತ್ತದೆ. ವಿಶೇಷವಾಗಿ ಈ ಪುರುಷಾರ್ಥಿ ಜೀವನದಲ್ಲಿ ನಾವು ಗಾಯಾಳುಗಳು ಆಗಬಾರದು, ದುಃಖಿಗಳಾಗಬಾರದು. ಇದಕ್ಕಾಗಿ ಕವಚ ಮತ್ತು ಗುರಾಣಿ ಇದೆ. ಆಕ್ರಮಣದಿಂದ ಪಾರಾಗುವ ವಿಧಾನ ಯಾವುದೆಂದರೆ – 'ವಾಹ್ ಡ್ರಾಮಾ ವಾಹ್'. ಸಾಕಾರದಲ್ಲಿ ಬಾಬಾರವರು ಯಾವಾಗ 'ವಾಹ್ ಡ್ರಾಮಾ ವಾಹ್' ಎನ್ನುತ್ತಿದ್ದರೋ ಆಗ ಮುಖವನ್ನು ನೋಡುವಂತೆ ಆಕರ್ಷಣಾಮಯವಾಗುತ್ತಿತ್ತು. ಯಾವಾಗ ವ್ಯಕ್ತಿಯು ಅಸಂತುಷ್ಟನಾಗುತ್ತಾನೋ, ಆಗ ಅವನಿಗೆ ಯಾವುದಾದ ರೊಂದು ಗುರಾಣಿ ಅಥವಾ ಯಾವುದಾದರೂ ಕವಚ ಅಥವಾ ತಮ್ಮ ರಕ್ಷಣೆಯ ಯಾವುದಾದರೊಂದು ಸಾಧನ ಬೇಕಾಗುತ್ತದೆ. ಮತ್ತು ಆ ಸಾಧನವೇ ಆಗಿದೆ – **"ಡ್ರಾಮಾ"**.

### ಡ್ರಾಮಾದ ಮೇಲೆ ನಿಶ್ಚಯ ಇಡುವುದರಿಂದ ಬಹಳ ಲಾಭವಾಗುತ್ತದೆ

ಈ ಡ್ರಾಮಾ ಯಾವುದಿದೆಯೋ, ಇದು ಬಹಳ ದೊಡ್ಡ ವಿದ್ಯೆಯಾಗಿದೆ. ಡ್ರಾಮಾದ ಕಂಬಿಯ ಮೇಲೆ ಒಂದುವೇಳೆ ಯಾರು ನಿಲ್ಲುವುದಿಲ್ಲವೋ, ಅವರು ಬಹಳ ದುಃಖದ ಅನುಭವ ಮಾಡಬೇಕಾಗುತ್ತದೆ. ಒಂದುವೇಳೆ ರೈಲುಗಾಡಿಯು ತನ್ನ ಕಂಬಿಯ ಮೇಲೆ ಚಲಿಸದಿದ್ದರೆ ಎಷ್ಟೊಂದು ಬೋಗಿಗಳು ಬಿದ್ದುಹೋಗುತ್ತವೆ. ಎಷ್ಟೊಂದು ಜನರು ಸಾಯುತ್ತಾರೆ. ಇದಕ್ಕೆ ಕಾರಣವೇನು? ಗಾಡಿಯು ಕಂಬಿಯ ಮೇಲೆ ಇಲ್ಲದಿರುವುದಾಗಿದೆ. ಹಾಗೆಯೇ 'ಡ್ರಾಮಾ' ಎಂಬ ಕಂಬಿಯ ಮೇಲೆ ನಾವು ಚಲಿಸಬೇಕು. ಅತ್ತಿತ್ತ ಅಲುಗಾಡಬಾರದು, ಆ ಪಟ್ಟಿಯ ಮೇಲೆಯೇ ಇರಬೇಕು. ದಾರಿಯು ಅಡೆ ತಡೆ ಇಲ್ಲದಂತಿರಬೇಕು. ಇದು ಬಹಳ ದೊಡ್ಡ ಮಾತಾಗಿದೆ. ಆದ್ದರಿಂದ ನಮ್ಮ ಅನುಭವದ ಮಾತಾಗಿದೆ – ಮೊದಲು ಬಾಬಾರವರನ್ನು ಮಿಲನ ಮಾಡಲು ಹೋಗುತ್ತಿದ್ದಾಗ ನಮಗೆ 108 ಸಲ ನಿಶ್ಚಯ ಪತ್ರವನ್ನು ಬರೆಯಲು ಹೇಳುತ್ತಿದ್ದರು, ಅದರಲ್ಲಿ "ಡ್ರಾಮಾದ ಮೇಲೆ ನನಗೆ ಪೂರ್ಣ ನಿಶ್ಚಿಯವಿದೆ" ಎಂದು ಬರೆಸುತ್ತಿದ್ದರು. ಡ್ರಾಮಾದ ಮೇಲೆ ನಿಶ್ಚಯ ಇರುವುದರಿಂದ ಜೀವನದಲ್ಲಿ ಅನೇಕ ಮಾತುಗಳು ಬಂದುಬಿಡುತ್ತವೆ. ಈರ್ಷ್ಯೆ ಅಂತ್ಯಗೊಳ್ಳುತ್ತದೆ, ಏಕೆಂದರೆ ಪ್ರತಿಯೊಂದು ಆತ್ಮ ತನ್ನ ಪಾತ್ರವನ್ನು ನಿರ್ವಹಿಸುತ್ತದೆ, ಇದು ನನ್ನ ಪಾತ್ರವಾಗಿದೆ, ಅವರು ತಮ್ಮ ಪಾತ್ರವನ್ನು ಮಾಡುತ್ತಿದ್ದಾರೆ, ನಾನು ನನ್ನ ಪಾತ್ರವನ್ನು ಅಭಿನಯಿಸುತ್ತಿದ್ದೇನೆ ಎಂಬ ನಿಶ್ಚಯ ಆಗಿಬಿಟ್ಟಾಗ, ಈರ್ಷ್ಯೆ ಯಾವ ಮಾತಿಗೆ? ದ್ವೇಷ ಯಾವ ಮಾತಿಗೆ? ತಿರಸ್ಕಾರ ಭಾವನೆ ಯಾವ ಮಾತಿಗೆ? ಜಗಳ ಯಾವುದಕ್ಕಾಗಿ?

### ಇದು ಮಾಡಿ ಮಾಡಲ್ಪಟ್ಟ ಡ್ರಾಮಾ ಆಗಿದೆ

'ಇದು ಮಾಡಿ ಮಾಡಲ್ಪಟ್ಟ ಡ್ರಾಮಾ ಆಗಿದೆ' ಎಂಬ ಮಾತನ್ನು ತಿಳಿದುಕೊಳ್ಳದ ಕಾರಣದಿಂದ ಬಹಳ ಮಾತುಗಳು ಬರುತ್ತವೆ. 'ಇದು ಕೇವಲ ಡ್ರಾಮಾ ಅಲ್ಲ, ಇದು ಮಾಡಿ ಮಾಡಲ್ಪಟ್ಟ ಡ್ರಾಮಾ ಆಗಿದೆ' ಎಂದು ಬಾಬಾರವರು ಹೇಳುತ್ತಾರೆ. ಇಂತಹ ಶಬ್ದವನ್ನು ತಾವು ಎಲ್ಲೂ ಕೇಳಿರಲಿಕ್ಕಿಲ್ಲ. ಸಹೋದರರೇ, ಒಂದೋ ಮಾಡುವ ಡ್ರಾಮಾ ಆಗಿರುತ್ತದೆ ಅಥವಾ ಮಾಡಲ್ಪಟ್ಟಿರುವ ಡ್ರಾಮಾ ಆಗಿರುತ್ತದೆ. ಎರಡೂ ಆಗಿರಲು ಸಾಧ್ಯವಿಲ್ಲತಾನೆ? ಆದರೆ ಬಾಬಾರವರ ಭಾಷೆಯೇ ಬೇರೆಯಾಗಿರುತ್ತದೆ – 'ಇದು ಮಾಡಿ ಮಾಡಲ್ಪಟ್ಟ ಡ್ರಾಮಾ ಆಗಿದೆ' ಎಂದು. 'ಮಾಡಿ ಮಾಡಲ್ಪಟ್ಟ' ಎಂಬ ಮಾತಿನ ಅರ್ಥವೇನು? ಯಾವುದೇ ವಸ್ತುವು ಮಾಡಿ ಮಾಡಲ್ಪಟ್ಟದ್ದಾಗಿರುತ್ತದೆಯೆ? ರೊಟ್ಟಿಯು ಮಾಡಿ ಮಾಡಲ್ಪಟ್ಟಿರುತ್ತದೆಯೇ? ರೊಟ್ಟಿಯನ್ನು ಯಾರಾದರೂ ಬೇಯಿಸುತ್ತಾರೆ ಅಥವಾ ತಯಾರು ಮಾಡುತ್ತಾರೆ. ಆದರೆ ಬಾಬಾ ಹೇಳುತ್ತಾರೆ – ಡ್ರಾಮಾ ಅನಾದಿಯಾಗಿದೆ. ಇದನ್ನು ನಾನು ತಯಾರು ಮಾಡಿಲ್ಲ, ನಾನು ಕೂಡ

ಡ್ರಾಮದ ಅನುಸಾರವಾಗಿಯೇ ನಡೆಯುತ್ತೇನೆ. ಇದು ಅನಾದಿ ಕಾಲದಿಂದ ನಡೆಯುತ್ತಾ ಬಂದಿದೆ, ಇದನ್ನು ನಡೆಸಬೇಕಾಗಿಲ್ಲ, ಹಾಗೆಯೇ ನಡೆಯುತ್ತಲೇ ಇರುತ್ತದೆ. ಇದು ಕಲ್ಪ ಕಲ್ಪವೂ ಹೀಗೆಯೇ ನಡೆಯುತ್ತದೆ. ಮಕ್ಕಳೇ, ಒಂದು ಸೊಳ್ಳೆ ಇಲ್ಲಿಂದ ಎದ್ದು ಹಾರಿ ನಿಮ್ಮ ಮೂಗಿನ ಮೇಲೆ ಕುಳಿತಿತೆಂದರೆ, 5000 ವರ್ಷಗಳ ನಂತರವೂ ಹೀಗೆಯೇ ಕುಳಿತುಕೊಳ್ಳುತ್ತದೆ. ಇದು ಬದಲಾಗುವಂತಹದ್ದಲ್ಲ. ಈ ಡ್ರಾಮಾ ಎಂದಿಗೂ ಬದಲಾಗುವುದಿಲ್ಲ. ಮತ್ತು ಬಾಬಾ ಹೇಳುತ್ತಾರೆ – ಈ ಡ್ರಾಮಾವು ನಿಖರವಾಗಿದೆ, ಚಮತ್ಕಾರಿಯಾಗಿದೆ! ಅಪಘಾತವಾಗಿ ನಮ್ಮ ಕಾಲು ಮುರಿದರೂ ಡ್ರಾಮಾದಲ್ಲಿ ಇದು ಸರಿಯಾಗಿದೆ. ನಮ್ಮ ಕಾಲು ಮುರಿದು ಬಿದ್ದಿದೆ ಮತ್ತು ಡ್ರಾಮಾ ಅಕ್ಯೂರೇಟ್ ಆಗಿದೆ. ಆ ಸಮಯದಲ್ಲಿ ವ್ಯಕ್ತಿಯು ಈ ರೀತಿ ಯೋಚಿಸಿದರೆ ಹೇಗಿರುತ್ತದೆ?

ಬಾಬಾರವರ ಜೀವನದಲ್ಲಿ ನಾವು ಹಗುರತೆಯನ್ನು ನೋಡುತ್ತಿದ್ದೆವು, ಎಂದಿಗೂ ಭಾರವಾಗಿ ಇರುತ್ತಿರಲಿಲ್ಲ, ಚಿಂತೆ ಇರುತ್ತಿರಲಿಲ್ಲ. ಇದಕ್ಕೆ ಕಾರಣವೇನು? ಈ ಡ್ರಾಮಾ ಬಹಳ ಸರಿಯಾಗಿದೆ, ಬಹಳ ಅದ್ಭುತವಾಗಿದೆ, ಮಾಡಿ ಮಾಡಲ್ಪಟ್ಟಿದೆ. ಇದು ಮಾಡಿ ಮಾಡಲ್ಪಟ್ಟಿರುವುದಾಗಿದೆ, ಭಗವಂತನು ಮಾಡಲಿಲ್ಲ, ಇಲ್ಲದಿದ್ದರೆ ಪರಮಾತ್ಮನ ಮೇಲೆ ದೋಷ ಬಂದು ಬಿಡುತ್ತಿತ್ತು. ಇದು ಮಾಡಲ್ಪಟ್ಟ ಡ್ರಾಮಾ ಆಗಿದೆ.

**ಡ್ರಾಮಾ ಇರುವುದೇ ಸಂತೋಷಕ್ಕಾಗಿ**

ಈ ಡ್ರಾಮಾ ಮಾಡಿ ಮಾಡಲ್ಪಟ್ಟದ್ದಾಗಿದೆ. ಆದ್ದರಿಂದ ಭಗವಂತನ ಮೇಲೆ ದೋಷ ಬರುವುದಿಲ್ಲ. ನಮ್ಮ ಮೇಲೆಯೂ ದೋಷ ಬರುವುದಿಲ್ಲ. ಏಕೆಂದರೆ ಡ್ರಾಮಾದಲ್ಲಿ ಪ್ರತಿಯೊಬ್ಬರ ಪಾತ್ರ ಇದೆ. ಪ್ರತಿಯೊಬ್ಬರ ಪಾತ್ರವನ್ನು ನೋಡಿ ಖುಷಿಯಾಗಿರಿ. ಖುಷಿಗಾಗಿ, ಮನೋರಂಜನೆಗಾಗಿ ಡ್ರಾಮಾವನ್ನು ಮಾಡುತ್ತಾರೆ ಮತ್ತು ನೋಡುತ್ತಾರೆ. ಕೆಲವರು "ಇದು ಪ್ರಭುವಿನ ಲೀಲೆ" ಎಂದು ಹೇಳುತ್ತಾರೆ. ಮತ್ತೆ ಕೆಲವರು "ಇದು ನಾಲ್ಕು ದಿನದ ನಾಟಕ" ಎಂದು ಹೇಳುತ್ತಾರೆ. ಡ್ರಾಮಾದ ಬಗ್ಗೆ ಬಾಬಾರವರು ಹೇಳುವುದೇನೆಂದರೆ, "ಬಹಳ ನಿಖರವಾಗಿದೆ, ಅನಾದಿಯಾಗಿದೆ ಮತ್ತು ವಾಹ್ ಡ್ರಾಮಾ ವಾಹ್ ಎಂದು ಹೇಳುತ್ತಾ ಮುಂದುವರೆಯಿರಿ" ಎಂದು. ಇದರಿಂದ ಖುಷಿಯಾಗಿರಿತ್ತೀರಿ. ಖುಷಿಯಾಗಿದ್ದಾಗ ಸಂತುಷ್ಟರಾಗಿರುತ್ತೀರಿ. ಯಾವಾಗ ಈ ಡ್ರಾಮಾ ಇರುವುದೇ ಖುಷಿಯಾಗಿರುವುದಕ್ಕಾಗಿ ಎಂದು ತಿಳಿದಾಗ ಮಾತ್ರ ಖುಷಿಯಾಗಿರುತ್ತೀರಿ. ಇದರ ವಿನಹ ಪ್ರತಿಯೊಂದು ಪರಿಸ್ಥಿತಿಯಲ್ಲೂ ಸಂತುಷ್ಟರಾಗಿ ಇರಲು ಸಾದ್ಯವಾಗುವುದಿಲ್ಲ.

**ಇವೆಲ್ಲವು ಆಶ್ಚರ್ಯ ಹಾಗೂ ನ್ಯಾಯಬದ್ಧವಾಗಿ ಆಗುವ ಮಾತುಗಳಾಗಿವೆ**

ಬಾಬಾ ಹೇಳುತ್ತಾರೆ – ಹೇಗೆ ಆತ್ಮನನ್ನು ಅರಿಯುವುದು, ಪರಮಾತ್ಮನನ್ನು ಅರಿಯುವುದು, ಕರ್ಮದ ಗುಹ್ಯಗತಿಯನ್ನು ಅರಿಯುವುದು, ಭಗವಂತನ ಅವತರಣೆ ಮತ್ತು ಅವನ ಕರ್ತವ್ಯ – ಸ್ಥಾಪನೆ, ಪಾಲನೆ ಮತ್ತು ವಿನಾಶದ ರಹಸ್ಯವನ್ನು ತಿಳಿಯುವುದು ಅವಶ್ಯಕವಾಗಿದೆಯೋ ಅದೇ ರೀತಿಯಲ್ಲಿ ಡ್ರಾಮಾವನ್ನು ಅರಿಯುವುದು ಸಹ ಅಷ್ಟೇ ಅವಶ್ಯಕವಾಗಿದೆ. ಇದು ಕಡಿಮೆ ಮಹತ್ವದ ಮಾತಲ್ಲ. ಎಷ್ಟೋ ಜನರು ಜ್ಞಾನವನ್ನು ಬಿಟ್ಟುಹೋದರು ಏಕೆಂದರೆ ಅವರಿಗೆ ಈ ಡ್ರಾಮಾದ ಅರಿವಾಗಲಿಲ್ಲ. ಅವರು ಡ್ರಾಮಾದ ಪಟ್ಟಿಯ ಮೇಲೆ ನಿಲ್ಲಲಾಗಲಿಲ್ಲ. ಇದರ ಪರಿಣಾಮವಾಗಿ, ಇಂತಹ ಅದ್ಭುತವಾದ ಜ್ಞಾನವನ್ನು ತೊರೆದು, ಇಷ್ಟು ದೊಡ್ಡ ಭಾಗ್ಯವನ್ನು ಕಾಲಿನಿಂದ ಒದ್ದು, ತಮ್ಮ ಅದೃಷ್ಟದ ರೇಖೆಯನ್ನು ಸಮಾಪ್ತಿ ಮಾಡಿಕೊಂಡು ಹೊರಟು ಹೋದರು. ಆಗಲು ಬಾಬಾರವರು "ವಾಹ್ ಡ್ರಾಮಾ ವಾಹ್" ಎಂದು ಹೇಳುತ್ತಾರೆ. ತಾವೇ ಯೋಚಿಸಿ, ಬಾಬಾರವರ ಕಾಲದಲ್ಲಿ ಎಷ್ಟು ಜನ ಬಂದರು. "ಭಗವಂತನು ಬ್ರಹ್ಮಾರವರ ತನುವಿನಲ್ಲಿ ಬಂದು ಓದಿಸುತ್ತಿದ್ದಾರೆ ಎಂಬುದು ನಮಗೆ ನಿಶ್ಚಯವಿದೆ" ಎಂದು ರಕ್ತದಲ್ಲಿಯೂ ಸಹ ಬರೆದು ಕೊಟ್ಟರು. ಆದರೂ ಹೊರಟು ಹೋದರು. ಎಷ್ಟೆಷ್ಟು ವರ್ಷ ಶ್ರಮದ ಫಲವನ್ನು ಪಡೆದುಕೊಂಡರು, ಬಾಬಾರವರ ಪಾಲನೆ ಪಡೆದರು. ಆದರೂ ಹೊರಟು ಹೋದರು. ಆದರೂ ಬಾಬಾರವರು, 'ನಾನು ಇಷ್ಟೊಂದು ಶ್ರಮವಹಿಸಿದೆ, ಇದೇನಾಯಿತು?' ಎಂದು ದುಃಖಿಸಲಿಲ್ಲ. ಯಾರದ್ದಾದರೂ ವಯಸ್ಸಿಗೆ ಬಂದ ಮಗ ಮರಣ ಹೊಂದಿದರೆ ಎಷ್ಟು ದುಃಖವಾಗುತ್ತದೆ. ಆದರೆ ಬಾಬಾರವರು ಯಾರಿಗಾಗಿ ಎಷ್ಟೊಂದು ಶ್ರಮ ವಹಿಸಿದರೋ, ಸ್ವಂತ ಮಕ್ಕಳಿಗೆ ಮಾಡುವುದಕ್ಕಿಂತ ಕಡಿಮೆ ಏನೂ ಮಾಡಲಿಲ್ಲ, ಶ್ರಮಿಸಿದರು, ಹಗಲು ರಾತ್ರಿ ಸೇವೆ ಮಾಡಿದರು, ಆದರೂ ಅವರು ಯಜ್ಞವನ್ನು ಮತ್ತು ಬಾಬಾರವರನ್ನು ತೊರೆದು ಹೊರಟು ಹೋದರು, ಕೃತಘ್ನರಾದರು. ಆದರೂ ಸಹ

ಬಾಬಾರವರು ಅಂತಹವರನ್ನು ದೋಷಿತರನ್ನಾಗಿ ಮಾಡಲಿಲ್ಲ, ಒಳ್ಳೆಯದು ಮಕ್ಕಳೇ "ಡ್ರಾಮಾ" ಎಂದು ಹೇಳಿದರು, ಅವರ ಅದೃಷ್ಟ ಎಂದರು. ಯಾವುದೇ ಕೋಪದ, ದುಃಖದ ಅಂಶವೂ ಬರಲಿಲ್ಲ. ಪ್ರತಿ ಮಾತಿನಲ್ಲೂ ಸಂತುಷ್ಟರಾಗಿದ್ದರು. ಯಾರಿಗೆ ಡ್ರಾಮಾದಲ್ಲಿ ಪಾತ್ರವಿದೆಯೋ ಅವರು ಬರುತ್ತಾರೆ. ಅವರು ಆಸ್ತಿಯನ್ನು ಪಡೆದೇ ಪಡೆಯುತ್ತಾರೆ. ಯಾರಿಗೆ ಪಾತ್ರವಿಲ್ಲವೋ, ಎಷ್ಟೇ ಪ್ರಯತ್ನಿಸಿದರೂ ಅವರು ಬರುವುದೇ ಇಲ್ಲ. ಬಂದರೂ ಬಂದು ಹೊರಟು ಹೋಗುತ್ತಾರೆ ಎಲ್ಲರೂ ಆಸ್ತಿ ಪಡೆಯುವುದಿಲ್ಲ ಏನು ಮಾಡುವುದು? ಮತ್ತು ಬಂದವರಲ್ಲೂ ಸಹ ಕೆಲವರು ದಾಸ ದಾಸಿಯರಾಗುವಂತಹ ರೀತಿಯಲ್ಲಿ ನಡೆಯುತ್ತಾರೆ. ತಿನ್ನುವುದು, ಕುಡಿಯುವುದು, ಉಡುವುದು, ತೊಡುವುದು, ಮಜಾ ಮಾಡುವುದು, ಸುತ್ತಾಡುವುದು ಇದರಲ್ಲೇ ಕಳೆಯುತ್ತಾರೆ. ಶ್ರಮ ಪಡುವುದಿಲ್ಲ, ಪುರುಷಾರ್ಥ ಮಾಡುವುದಿಲ್ಲ, ಎಂದಾಗ ಏನಾಗುತ್ತಾರೆ? ದಾಸ ದಾಸಿಯರೇ ಆಗುತ್ತಾರಲ್ಲವೇ? ಬಾಬಾ ಹೇಳುತ್ತಾರೆ – ಹೊಸ ಸೃಷ್ಟಿಯು ತಯಾರಾಗುತ್ತಿದೆ ಎಂದ ಮೇಲೆ ಪ್ರತಿಯೊಂದು ರೀತಿಯ ಪ್ರಜೆಗಳು ತಯಾರಾಗುತ್ತಿದ್ದಾರೆ, ಆದ್ದರಿಂದ ಚಿಂತಿಸುವ ಮಾತಿಲ್ಲ ಮಕ್ಕಳೇ, ಅವರ ಲಕ್ಷಣದಿಂದ ಮತ್ತು ವ್ಯವಹಾರದಿಂದ ಯಾರು ಏನಾಗುತ್ತಾರೆ ಎಂಬುದು ಈಗಲೇ ಕಂಡುಬರುತ್ತದೆ. ಆದರೆ ಡ್ರಾಮಾದ ರಹಸ್ಯವನ್ನು ಮುಂದಿಟ್ಟುಕೊಂಡು 'ಇದು ಇವರ ಪಾತ್ರವಾಗಿದೆ' ಎಂದುಕೊಂಡು ಸಂತುಷ್ಟರಾಗಿರಿ.

### ಸಂತುಷ್ಟತೆಯಿಲ್ಲದೆ ಯೋಗವು ನಿಲ್ಲವುದಿಲ್ಲ

ಎಲ್ಲಿಯವರೆಗೆ ಸಂತುಷ್ಟತೆ ಇರುವುದಿಲ್ಲವೋ ಅಲ್ಲಿಯವರೆಗೆ ಯೋಗದ ಸ್ಥಿತಿಯಲ್ಲಿ ಸ್ಥಿತರಾಗುವುದಕ್ಕೆ ಸಾಧ್ಯವಾಗುವುದಿಲ್ಲ, ಅಲುಗಾಡುತ್ತಿರುತ್ತದೆ. ತಾವು ಯಾವಾಗಲಾದರು ನೋಡಿ, ಯೋಗವು ಭಂಗವಾಗಿರುತ್ತದೆ. ಡ್ರಾಮಾದ ಬಗ್ಗೆ ಏರು ಪೇರಾದಾಗ, ಸ್ಥಿರವಾಗಿ ನಿಲ್ಲದಿದ್ದರೆ, ಯೋಗವೂ ಸ್ಥಿರವಾಗಿರುವುದಿಲ್ಲ ಮತ್ತು ಸ್ಥಿತಿಯೂ ಅಚಲ ಅಡೋಲವಾಗಿರುವುದಿಲ್ಲ. ಆ ಸಮಯದಲ್ಲಿ ಅಲುಗಾಡುತ್ತೀರಿ. ಆದ್ದರಿಂದ ನಾವು ಸಂತುಷ್ಟರಾಗಿ ಇರುವುದು ಅವಶ್ಯಕವಾಗಿದೆ. ಆಗ ಯೋಗ ಹಿಡಿಯುತ್ತದೆ. (1) ಪರಿಸ್ಥಿತಿಗಳಿಂದಲೂ, (2) ವ್ಯಕ್ತಿಗಳ ಬಗ್ಗೆಯೂ, (3) ತಮ್ಮ ಬಗ್ಗೆಯೂ ಮತ್ತು (4) ಬಾಬಾರವರ ಬಗ್ಗೆಯೂ ಸಂತುಷ್ಟರಾಗಿರಬೇಕು. ಬಾಬಾರವರು ನಮಗೆ ಒಳ್ಳೆಯ ಪಾತ್ರ ಕೊಡಲಿಲ್ಲ ಎಂದು ತಿಳಿಯಬಾರದು. ಇದು ಬಹಳ ಆಳವಾದ ಮಾತಾಗಿದೆ. ಬಾಬಾರವರು ಹೇಳುತ್ತಾರೆ – ಮಕ್ಕಳೇ ಇದು ಬಹಳ ಆಳವಾದ ರಹಸ್ಯಯುಕ್ತ ಮಾತಾಗಿದೆ. ಬೆಲ್ಲ ಮತ್ತು ಬೆಲ್ಲದ ಚೀಲಕ್ಕೆ ಗೊತ್ತು ಎನ್ನುವ ರೀತಿ ಕೇವಲ ಕೆಲವರು ಮಾತ್ರ ಇದನ್ನು ಅರಿಯುತ್ತಾರೆ. ನೀವು ಎಷ್ಟೇ ತಿಳಿದಿದ್ದರೂ, ಬಾಬಾರವರ ಮಾತಿನಂತೆ ನಡೆಯಿರಿ ಮತ್ತು ಯಾವಾಗಲು "ವಾಹ್ ಡ್ರಾಮಾ ವಾಹ್", "ವಾಹ್ ಬಾಬಾ ವಾಹ್", "ವಾಹ್ ನನ್ನ ಭಾಗ್ಯವೇ" ಎಂದು ನೆನಪಿಡಿ ಮತ್ತು ಖುಷಿಯಾಗಿರಿ. ನಾನು ಮತ್ತೆ ಬಂದಿದ್ದೇನೆ, ಭಗವಂತನ ಮಗುವಾಗಿದ್ದೇನೆ, ಅವರಿಂದ ಆಸ್ತಿ ದೊರೆಯುತ್ತದೆ, ಅವರೊಂದಿಗೆ ಪಾತ್ರವನ್ನು ಮಾಡುತ್ತಿದ್ದೇನೆ, ಹೊಸ ಸೃಷ್ಟಿಯ ಸ್ಥಾಪನೆಯಲ್ಲಿ ನಾನೂ ನಿಮಿತ್ತನಾಗಿದ್ದೇನೆ, ಕಣದಷ್ಟಾದರೂ ಸೇವೆ ಮಾಡಿ ನಾನೂ ನನ್ನ ಭವಿಷ್ಯವನ್ನು ಶ್ರೇಷ್ಠ ಮಾಡಿಕೊಳ್ಳುತ್ತಿದ್ದೇನೆ ಎಂದು ತಿಳಿಯಿರಿ. ಈ ರೀತಿ ಖುಷಿಯಾಗಿರಿ ಮತ್ತು ಸಂತುಷ್ಟರಾಗಿರಿ. ಇದನ್ನೇ ಸಕಾರಾತ್ಮಕ ಚಿಂತನೆ ಎಂದು ಹೇಳಲಾಗುತ್ತದೆ. ತಮ್ಮಲ್ಲಿ ಖುಷಿ ಮತ್ತು ಸಂತುಷ್ಟತೆ ಹೆಚ್ಚಾಗುವ ರೀತಿಯಲ್ಲಿ ಚಿಂತನೆ ಮಾಡಿರಿ. ಏಕೆಂದರೆ ಸಂತುಷ್ಟತೆ ಇಲ್ಲದಿದ್ದರೆ ಯೋಗ ನಿಲ್ಲುವುದಿಲ್ಲ.

## ವಾಹ್ ಡ್ರಾಮಾ ವಾಹ್

## ಲೇಖನ – 2

### ಡ್ರಾಮಾದ ಭೂಮಿಕೆಯ ಮೇಲೆ ಒಂದು ಬಹುಮುಖವಾದ ಚಿಂತನೆ

ವಿಶಾಲ ವಿಶ್ವದ ಈ ರಂಗಮಂಟಪದಲ್ಲಿ ಯಾವ ಮಹಾಲೀಲೆಯನ್ನು ನಾವು ಕಾಣುತ್ತೇವೋ, ಆ ಎಲ್ಲಾ ಪಾತ್ರಗಳೂ ರಂಗಮಂಟಪದ ತೆರೆಯ ಹಿಂಭಾಗದಲ್ಲಿ ಮೊದಲೇ ಉಪಸ್ಥಿತವಾಗಿರುತ್ತವೆ. ರಂಗಮಂಟಪದ ನಿಯಮಾನುಸಾರ ಅಭಿನಯ ಕ್ರಮದಲ್ಲಿ, ಯಾವ ಸಮಯದಲ್ಲಿ ಯಾರ ಉಪಸ್ಥಿತಿಯ ಅವಶ್ಯಕತೆ ಇರುತ್ತದೆಯೋ, ಅವರ ಆಗಮನವಾಗುತ್ತದೆ. ಮತ್ತು ನಿಗದಿತ ಪಾತ್ರವನ್ನು ನಿರ್ವಹಿಸಿದ ನಂತರ ಅವರು ಪುನಃ ಮುಖ್ಯ ತೆರೆಯ ಹಿಂಭಾಗಕ್ಕೆ ಹೊರಟು ಹೋಗುತ್ತಾರೆ. ಅನಂತ ಕಾಲದಿಂದಲೂ ಅಭಿನಯದ ಈ ವಿರಾಮವಿಲ್ಲದ ಯಾತ್ರೆಯು ನಮ್ಮ ಜೀವನದಲ್ಲಿ ಅನೇಕಾನೇಕ ಕಟು, ಮೃದು ಅನುಭವಗಳಿಂದ ನಮ್ಮ ಪ್ರಾಣಗಳನ್ನು ಸ್ಪಂದಿತವನ್ನಾಗಿ ಮಾಡುತ್ತಿರುತ್ತದೆ. ಘಾತ– ಪ್ರತಿಘಾತ, ಉತ್ಥಾನ–ಪತನ, ಸಂಹಾರ–ಸೃಷ್ಟಿ ಹಾಗೂ ಅನೇಕಾನೇಕ ಕಥೆಗಳು, ಕಳೆದು ಹೋದ ಸಮಯದ ಸ್ಮೃತಿಪಟಲವನ್ನು

ಅಲ್ಲೋಲ ಕಲ್ಲೋಲ ಮಾಡುತ್ತಿರುತ್ತದೆ. ಸೃಷ್ಟಿ ಚಕ್ರದಲ್ಲಿ ನಡೆಯುವಂತಹ ಈ ಮಹಾ ಲೀಲೆಯನ್ನು ನಿರ್ಣಯಿಸುವಂತಹ ಕೇಂದ್ರ ಬಿಂದು ಎಲ್ಲಿದೆ? ಸಾಧಾರಣ ಜನಮನಗಳಿಗೆ ಇದರ ರಹಸ್ಯ ಹೇಗೆ ತಾನೇ ಅರಿವಾಗಲು ಸಾಧ್ಯ? ತನ್ನ ಅಲಂಕರಿಸಿ ಸಿದ್ಧ ಮಾಡಿದ ಅಭಿಲಾಷೆ ಮತ್ತು ಶ್ರದ್ಧೆಗಳನ್ನು ಆಧರಿಸಿ, ಮಾನವನು ವಿಕಾಸ ಯಾತ್ರೆಯಲ್ಲಿ ಮುಂದೆ ಸಾಗುವ ಪುರುಷಾರ್ಥವನ್ನಂತೂ ಮಾಡುತ್ತಿರುತ್ತಾನೆ. ಆದರೆ ಅವನ ಪ್ರತಿಯೊಂದು ಹೆಜ್ಜೆಯಲ್ಲೂ ಅದೃಶ್ಯವಾಗಿರುವ ವಿಧಿಯ ಪ್ರಬಲ ಶಕ್ತಿ ನಿಂತಿರುತ್ತದೆ. ಮತ್ತು ಆ ಶಕ್ತಿಯು ಮಾನವನ ಸಂಕಲ್ಪಿತ ಇಚ್ಛೆಯನ್ನು ಅವನ ಯೋಜನೆಯ ವಿರುದ್ಧವಾಗಿ ಎಲ್ಲೆಂದರಲ್ಲಿ ತಿರುಗಿಸಿ ಬಿಡುತ್ತದೆ. ಆಗ ಮಾನವನು ಇಚ್ಛಿಸದಿದ್ದರೂ ವಿಧಿಯು ಕರೆದೊಯ್ದ ಕಡೆ ಸಾಗಬೇಕಾಗುತ್ತದೆ. ಒಂದೊಂದು ಸಲ ಸಫಲತೆಯ ಎಲ್ಲ ಚದುರಿದ ಸೂತ್ರಗಳೂ ಕೈಗೆ ಸಿಕ್ಕಿಬಿಟ್ಟಂತೆ ಅನ್ನಿಸುತ್ತದೆ. ಆದರೆ ಶೀಘ್ರದಲ್ಲಿಯೇ ಸಮಯದ ವೇಗವಾದ ಧಾರೆಯಲ್ಲಿ ಆ ಸೂತ್ರಗಳು ಮತ್ತೆ ಚದುರಿಹೋಗಿ, ಅವುಗಳ ಅಸ್ತಿತ್ವವೇ ಇಲ್ಲದಂತಾಗಿ ವ್ಯಕ್ತಿಯು ಹತಾಶನಾಗಿ ಅಸಹಾಯಕನಾಗಿ ಆ ಅಸಫಲತೆಯನ್ನು ನೋಡುತ್ತಾ ನಿಲ್ಲಬೇಕಾಗು ತ್ತದೆ. ಮಾನವ ಜೀವನದ ಪ್ರಾಂಗಣದಲ್ಲಿ ಕ್ಷಣ – ಪ್ರತಿ ಕ್ಷಣ ಅನೇಕ ಘಟನೆಗಳ ಸಂಯೋಗ–ವಿಯೋಗ, ಅನುಕೂಲ–ಪ್ರತಿಕೂಲ, ಕಟು ಮತ್ತು ಮೃದು ಹೀಗೆ ಅನೇಕ ಅಧ್ಯಾಯಗಳ ನಿರ್ಮಾಣವಾಗುತ್ತಿರುತ್ತದೆ. ಪ್ರತ್ಯೇಕ ವ್ಯಕ್ತಿಯ ಅಂತರ್ಮನವು ಆಕಸ್ಮಾತ್ತಾಗಿ ಘಟಿಸುವ ಅಸಹನೀಯ ಘಟನೆಗಳನ್ನು ಎದುರಿಸಲು ಸಮರ್ಥ ವಾಗಿರುವುದಿಲ್ಲ. ಆದರೆ ಅವನು ಬಯಸದಿದ್ದ ಮಾತ್ರಕ್ಕೆ ಯಾವುದನ್ನೂ ತಡೆಯಲು ಸಾಧ್ಯವಿಲ್ಲ. ಕಣ್ಣರೆಪ್ಪೆಯನ್ನು ಪೂರ್ತಿ ತೆರೆಯುವ ಮೊದಲೇ ಕನಸು ಚೂರು ಚೂರಾಗಿರುತ್ತದೆ. ಅಶುಭವನ್ನು ಮರೆತು ಶುಭವನ್ನು ಬಯಸಿದರೂ ವ್ಯಕ್ತಿ ಎಷ್ಟು ಸಾಧಿಸುತ್ತಾನೆ ಮತ್ತು ಅಂತ್ಯದಲ್ಲಿ ಎಷ್ಟು ಸಫಲನಾಗುತ್ತಾನೆ ಇದೆಲ್ಲವೂ ಅವರವರ ವ್ಯಕ್ತಿಗತ ಅನುಭವವಾಗಿರುತ್ತದೆ ಮತ್ತು ಈ ಅನುಭವವನ್ನು ಅಲ್ಲಗಳೆಯಲು ಸಾಧ್ಯವಿಲ್ಲ.

**ವಿಧಿ ನಿರ್ಣಯದ ಅರ್ಥ**

ಮೇಲೆ ಹೇಳಿದಂಥ ಸ್ಥಿತಿಯಿಂದ ಏನು ಸ್ಪಷ್ಟವಾಗುತ್ತದೆಯೆಂದರೆ ಲೀಲಾ ಚಕ್ರದಲ್ಲಿ ಏನೇನು ನಡೆಯಿತೋ, ನಡೆಯುತ್ತಿದೆಯೋ ಮತ್ತು ನಡೆಯುವುದೋ ಇವೆಲ್ಲವೂ ಮೊದಲೇ ನಿರ್ಧರಿತವಾಗಿದೆ. ಈ ಲೀಲೆ ಅಥವಾ ಡ್ರಾಮಾ ಮಾಡಿ ಮಾಡಲ್ಪಟ್ಟದ್ದಾಗಿರುತ್ತದೆ. ಇದು ಚಾಚೂ ತಪ್ಪದಂತೆ ಪ್ರತಿ ಐದು ಸಾವಿರ ವರ್ಷಕ್ಕೊಮ್ಮೆ ಪುನರಾವರ್ತನೆಯಾಗುತ್ತದೆ. ಈ ಡ್ರಾಮಾದ ಪರಿವರ್ತನೆಯಲ್ಲಿ ವ್ಯಕ್ತಿ ಸ್ವತಂತ್ರನಲ್ಲ. ವಿಶ್ವದ ವಿಶಾಲ ರಂಗಮಂಟಪದಲ್ಲಿ ಜಡ ಮತ್ತು ಚೇತನಗಳ ಅನೇಕ ಸಂಯೋಗ ಮತ್ತು ನಿಮಿತ್ತರಾದವರೊಡನೆ ಸೇರಿ ಯಾವ ಘಟನೆಗಳು ಹಿಂದೆ ಸಂಭವಿಸಿವೆಯೋ, ವರ್ತಮಾನದಲ್ಲಿ ಸಂಭವಿಸುತ್ತಿವೆಯೋ ಮತ್ತು ಭವಿಷ್ಯದಲ್ಲಿ ಸಂಭವಿಸಲಿವೆಯೋ ಅವೆಲ್ಲವೂ ಪೂರ್ವ ನಿಯೋಜಿತವಾಗಿದೆ ಅಂದರೆ ಮಾಡಿ ಮಾಡಲ್ಪಟ್ಟದ್ದಾಗಿವೆ. ಇದರಲ್ಲಿ ಲೇಶಮಾತ್ರವೂ ಬದಲಾಗುವ ಯಾವುದೇ ಸಂಭವವಿಲ್ಲ. ಡ್ರಾಮಾದ ಈ ರಹಸ್ಯವು ಮೂರು ಕಾಲಕ್ಕೂ ಸತ್ಯವಾಗಿದೆ. ಏನಾಗಬೇಕಾಗಿತ್ತೋ ಅದೇ ಆಯಿತು, ಅದೇ ಆಗುತ್ತಿದೆ ಮತ್ತು ಅದೇ ಆಗುತ್ತದೆ. ಈ ಸತ್ಯವನ್ನು ತಿಳಿಸಲು ಸಂಯೋಗ, ಆಗುವಂಥದ್ದು, ಏನಾಗಬೇಕಿತ್ತೋ ಅದು, ಪ್ರಾರಬ್ಧ, ಭಾಗ್ಯ. ಡ್ರಾಮಾ ಅಥವಾ ಲೀಲೆ ಇತ್ಯಾದಿ ಅನೇಕ ಶಬ್ದಗಳಿವೆ. ಇದನ್ನೇ ನಾವು ನಿಯತಿ ಅಥವಾ ವಿಧಿ ಎನ್ನುತ್ತೇವೆ. ವಿರಾಮವಿಲ್ಲದ ಲೀಲೆಯು ನಿರಂತರವಾಗಿ ನಡೆಯುತ್ತಿದೆ. ಜ್ಞಾನದ ಪರಿಪಕ್ವತೆ ಇಲ್ಲದ ಕಾರಣ ವ್ಯಕ್ತಿಯು 'ಇದನ್ನು ನಾನು ಮಾಡಿದೆ, ಇದು ನನ್ನ ಪರಿವಾರ, ಇದು ನನ್ನ ಸಂಪತ್ತು, ಇವನನ್ನು ನಾನು ಕೊಂದೆ, ಇವನನ್ನು ನಾನು ಕಾಪಾಡಿದೆ' ಹೀಗೆ ಎಷ್ಟೋ ಲೆಕ್ಕವಿಲ್ಲದಷ್ಟು ವ್ಯರ್ಥವಾದ ಕ್ಷುದ್ರ ಅಹಂಗಳ ಹೊಣೆಗಾರಿಕೆಯನ್ನು ತನ್ನ ಮೇಲೆ ಹೊತ್ತುಕೊಳ್ಳುತ್ತಾನೆ. ಸಮಯದ ಗತಿಯು ಬಹಳ ಮೃದು ಮತ್ತು ಬಹಳ ನಿರ್ಮಲವಾಗಿದೆ. ಅದರ ದಾರಿಯು ಮಾತ್ರ ಕೆಲವೆಡೆ ಆರಾಮವಾಗಿರುತ್ತದೆ ಮತ್ತು ಕೆಲವೆಡೆ ವಿಷಮವಾಗಿರುತ್ತದೆ. ಆದರೆ ಪೂರ್ವ ನಿಗದಿತ ಪ್ರಕ್ರಿಯೆಗೆ ಅನುಸಾರವಾಗಿಯೇ ಎಲ್ಲರೂ ನಡೆಯಬೇಕಾಗಿದೆ. ಭೂತ, ವರ್ತಮಾನ ಮತ್ತು ಭವಿಷ್ಯದ ಎಲ್ಲಾ ಕ್ರಿಯೆಗಳೂ ಅದೃಶ್ಯ ಶಕ್ತಿಗಳ ಮುಂದಾಳತ್ವದಲ್ಲಿ ನಡೆಯುತ್ತಿರುತ್ತವೆ. ಇದನ್ನೇ ದಾರ್ಶನಿಕರ ಚಿಂತನೆಯ ಭಾಷೆಯಲ್ಲಿ ಡ್ರಾಮಾ ಅಥವಾ ನಿಯತಿ (ವಿಧಿ) ಎನ್ನುತ್ತೇವೆ.

ಹಿಂದೆ ಎಷ್ಟು ಕ್ರಿಯೆಗಳು ನಡೆದವೋ, ವರ್ತಮಾನದ ಎಷ್ಟು ಲೀಲೆಗಳು ಕಣ್ಣಿಗೆ ಕಾಣುತ್ತಿವೆಯೋ ಅಥವಾ ಭವಿಷ್ಯದಲ್ಲಿ ಎಷ್ಟು ಕ್ರಿಯೆಗಳು ನಡೆಯಲಿವೆಯೋ, ಯಾವುದರಲ್ಲಿ ಶ್ರದ್ಧೆ ಅಥವಾ ಅನಾಸಕ್ತಿ ಉಂಟಾಗುವುದೋ, ಇವೆಲ್ಲವೂ ಪೂರ್ವ ನಿಶ್ಚಿತವಾಗಿತ್ತು, ಆಗಿದೆ ಮತ್ತು ಆಗಿರುತ್ತದೆ. ವಿಧಿಗೆ ವಿರುದ್ಧವಾದುದು ಅಥವಾ ಬೇರೆಯಾದುದು ಯಾವುದೂ ಇಲ್ಲ. ಆಧ್ಯಾತ್ಮದಲ್ಲಿ ಒಳ್ಳೆಯ ಸಾಧನೆ ಮಾಡಿದವನು ತಾನು

ಕರ್ತಾ ಎಂದುಕೊಳ್ಳದೆ ಸಾಕ್ಷೀಭಾವದಲ್ಲಿ ಘಟನೆಗಳ ಪ್ರವಾಹವನ್ನು ಏಕರಸ ಸ್ಥಿತಿಯಲ್ಲಿ ನೋಡುತ್ತಿರುತ್ತಾನೆ. ಅಣು-ಅಣುವಿನಲ್ಲೂ ಉಂಟಾಗುವ ಪ್ರಕಂಪನವೂ ಕೂಡ ಪೂರ್ವ ನಿರ್ಧರಿತವಾಗಿರುತ್ತದೆ. ಜನನ-ಮರಣದ ಆಟವೂ ಸಹ ಪೂರ್ವ ನಿರ್ಧರಿತವಾಗಿದೆ. ಭಾವ ಮತ್ತು ಸಂಕಲ್ಪದ ರೂಪದಲ್ಲಿ ಯಾವ ಪ್ರಕಂಪನ ಹುಟ್ಟುವುದೋ, ಅದೂ ಪೂರ್ವ ನಿಯೋಜಿತವಾಗಿದೆ. ಮೂರು ಕಾಲದಲ್ಲೂ ಜಡ ಅಥವಾ ಚೈತನ್ಯಗಳಲ್ಲಿ ಯಾವ ಸ್ಥಿತಿ ಉಂಟಾಗುತ್ತದೆ, ಯಾವುದೇ ಪರಿವರ್ತನೆಯಾಗುತ್ತದೆ, ಅದು ಅನುಕೂಲಕರ ವಾಗಿರಲಿ ಅಥವಾ ಪ್ರತಿಕೂಲವಾಗಿರಲಿ, ನಿಮಿತ್ತರಾದವರಲ್ಲಿ ಅಥವಾ ಸಾಧನಗಳಲ್ಲಿ ಯಾಗಲೀ, ಯಾವುದೇ ಪರಿವರ್ತನೆಯಾದರೂ ಆಗುವುದು ನಿಯತಿ (ವಿಧಿ) ಯಲ್ಲಿದ್ದರೆ, ಅದು ಆಗಿಯೇ ತೀರುತ್ತದೆ. ಏಕೆಂದರೆ ಅವೆಲ್ಲವೂ ನಿಯತಿಯ ಕ್ರಮಬದ್ಧ ವ್ಯವಸ್ಥೆಯಾಗಿದೆ. ಚರ್ಮಚಕ್ಷುವಿನಿಂದ ನೋಡಿದಾಗ ಎಲ್ಲಾ ಹರ್ಷ-ವಿಷಾದ, ಹಾನಿ-ಲಾಭ, ಸಂಯೋಗ-ವಿಯೋಗ ಇತ್ಯಾದಿಗಳು ಘಟಿಸುವುದೆಲ್ಲವೂ ಪರಿಸ್ಥಿತಿಯ ಪ್ರಭಾವದಿಂದ ಆಗುತ್ತಿರುವಂತೆ ಕಾಣಿಸುತ್ತದೆ. ಆದರೆ ಜ್ಞಾನಜ್ಯೋತಿಯ ದೀಪದಿಂದ ಇವೆಲ್ಲವೂ ಮೊದಲೇ ನಿರ್ಧರಿತವಾದಂತೆ ಸಾಧಕನಿಗೆ ಅನುಭವ ವಾಗುತ್ತದೆ. ನಿಯತಿಯ ಅನುಸಾರವಾಗಿ ವ್ಯಕ್ತಿಯು ಇಲ್ಲಿ ಅಥವಾ ಅಲ್ಲಿ ನಿಮಿತ್ತನಾಗಬಹುದು. ಆಗ ಒಂದುವೇಳೆ ಎಲ್ಲವೂ ಪೂರ್ವ ನಿಯೋಜಿತ ವಾಗಿದ್ದರೆ, ಏನಾಗಬೇಕೋ ಅದೇ ಆಗುವಂತಿದ್ದರೆ, ವ್ಯಕ್ತಿಯು ಏನು ಮಾಡಲೂ ಸ್ವತಂತ್ರನಲ್ಲವೇನು? ಈ ಸಿದ್ಧಾಂತವು ಕರ್ಮಯೋಗದ ತೇಜಸ್ಸನ್ನು ನಷ್ಟ ಮಾಡುವುದಿಲ್ಲವೇನು? ಈ ರೀತಿಯ ಚಿಂತನೆಯಿಂದ ವ್ಯಕ್ತಿ ಸೋಮಾರಿ ಯಾಗುವುದಿಲ್ಲವೇನು? ಎಂಬ ಪ್ರಶ್ನೆಗಳು ಏಳುತ್ತವೆ. ಬನ್ನಿರಿ, ಈ ಮಾತುಗಳ ಮೇಲೆ ತಟಸ್ಥ ದೃಷ್ಟಿಯಿಂದ ಚಿಂತನೆ ಮಾಡೋಣ.

## ಎಲ್ಲವೂ ಪೂರ್ವ ನಿಯೋಜಿತವಾಗಿದೆ

ವಿಧಿ ಪ್ರಬಲವಾಗಿದೆ. ಅನೇಕ ಉದಾಹರಣೆಗಳು ಬೇಹದ್ದಿನ ಡ್ರಾಮಾದಲ್ಲಿ ನಮಗೆ ಸಿಗುತ್ತವೆ. ಒಂದುವೇಳೆ ಸರ್ವಜ್ಞನಾದ ಪರಮಾತ್ಮನ ಮಾತನ್ನು ಬಿಟ್ಟರೂ ಸಹ ಜ್ಯೋತಿಷ್ಯ ಶಾಸ್ತ್ರದಲ್ಲಿ ವಿಧಿಯು ಪ್ರಬಲವಾಗಿದೆ ಎಂದು ಅನೇಕ ಉದಾಹರಣೆಗಳನ್ನು ಪ್ರಸ್ತುತಪಡಿಸುತ್ತಾರೆ. ಅನೇಕ ಜನರು ಮುಂದೆ ಆಗುವ ಘಟನೆಗಳನ್ನು ಸ್ವಪ್ನದಲ್ಲಿಯೇ ಕಂಡಿರುತ್ತಾರೆ. ಆ ಘಟನೆಯು ನಡೆದ ನಂತರ, ಇದರ ಸೂಚನೆ ನನಗೆ ಮೊದಲೇ ಸಿಕ್ಕಿತ್ತು ಎಂದು ಕೆಲವರು ಹೇಳುತ್ತಾರೆ. ಇದು ಹೇಗೆ ಸಾಧ್ಯವಾಗುತ್ತದೆ? ಸ್ವಪ್ನದಲ್ಲಿ ಚಲನ ಚಿತ್ರದ ರೀತಿಯಲ್ಲಿ, ಅಸ್ತಿತ್ವದಲ್ಲಿ ಇಲ್ಲದುದು ಇದ್ದಂತೆ ಕಾಣುವುದು, ಕಾರ್ಯ ಮತ್ತು ಕಾರಣದ ಕ್ರಮಬದ್ಧ ಸೂತ್ರದಲ್ಲಿ ನಿಶ್ಚಿತವಾಗಿರುತ್ತದೆ. ಯೋಗಿಗಳ ಜೀವನದಲ್ಲಿ ಧ್ಯಾನಮಾಡುವ ಸಮಯದಲ್ಲಿ ಶುದ್ಧ ಅನುಭೂತಿಯಲ್ಲಿ ಯಾವಾಗ ಯಾವುದೇ ಭವಿಷ್ಯದ ಕಾರ್ಯವು ಮೊದಲೇ ಅನುಭವಕ್ಕೆ ಬಂದಿದೆಯೋ, ಮುಂದೆ ನಿಶ್ಚಿತ ಸಮಯದಲ್ಲಿ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಆ ಘಟನೆಯು ನಡೆದ ಬಗ್ಗೆ ಉದಾಹರಣೆಗಳಿವೆ. ವರ್ತಮಾನದಲ್ಲಿ ನಾಸ್ಟರ್‌ಡಾಮಸ್‌ನ ಭವಿಷ್ಯವಾಣಿಯ ಅಧ್ಯಯನವು ಇದನ್ನು ಪ್ರಮಾಣೀಕರಿಸುತ್ತದೆ. 400 ವರ್ಷಗಳ ಮೊದಲೇ ಅವನು ಇಂದು ಆಗುವಂತಹ ಘಟನೆಗಳನ್ನು ನೋಡಿದ್ದನು. ಇದು ಪೂರ್ವ ನಿಯೋಜಿತ ವಿಧಿಯಲ್ಲದೆ ಮತ್ತೇನು? ಹೋಗಲಿ, ಇದರ ಇನ್ನೊಂದು ಮುಖವನ್ನು ನೋಡೋಣ.

ಇಚ್ಛೆ, ಪುರುಷಾರ್ಥ ಮತ್ತು ಪ್ರಮಾಣ - ಇದು ವಿಧಿಯ ಅಂಗವಾಗಿದೆ. ಒಂದುವೇಳೆ ಯಾರಾದರೂ ಸಾಧಕನು ಪಕ್ಷಪಾತವಿಲ್ಲದೆ ಜಾಗೃತನಾಗಿ ತನ್ನ ಜೀವನ ಮತ್ತು ಅಕ್ಕಪಕ್ಕದವರ ಜೀವನದಲ್ಲಿ ನಡೆಯುವ ಘಟನೆಗಳ ಅಧ್ಯಯನ ಮತ್ತು ಅವಲೋಕನ ಮಾಡಿದರೆ ಅವನಿಗೆ ಹೇಗೆ ಅದೃಶ್ಯ ಮತ್ತು ರಹಸ್ಯಮಯವಾದ ವಿಧಿಯು ತನಗೆ ತಾನೇ ಒಂದು ಶಾಶ್ವತ ಹಾಗು ಸತ್ಯವಾದ ಸಿದ್ಧಾಂತವಾಗಿದೆ ಎಂದು ಅರಿವಾಗುತ್ತದೆ. ಆಗ 'ಹಾಗಾದರೆ ವ್ಯಕ್ತಿಯು ಕರ್ಮ ಮತ್ತು ಪುರುಷಾರ್ಥದಲ್ಲಿ ಸ್ವತಂತ್ರನಲ್ಲವೇನು' ಎಂಬ ಪ್ರಶ್ನೆ ಏಳುತ್ತದೆ. ಒಬ್ಬ ಕ್ರೂರ ವ್ಯಕ್ತಿಯು ಆಕಸ್ಮಿಕವಾಗಿ ಸಣ್ಣ ಘಟನೆಯಿಂದ ಕರುಣೆಯ ಮೂರ್ತಿಯಾಗಿ ಬದಲಾಗುತ್ತಾನೆ. ಭಯಂಕರ ಕ್ರೋಧಿಯು ಕರುಣೆ ಮತ್ತು ಕ್ಷಮೆಯ ಅವತಾರವಾಗುತ್ತಾನೆ. ಕುಖ್ಯಾತ ಕೊಲೆಗಾರನು ಸಜ್ಜನಿಕೆಯ ಸಾಕಾರ ಮೂರ್ತಿಯಾಗುತ್ತಾನೆ. ಆಗ ವಿಧಿಯ ಸತ್ಯತೆ ಮತ್ತು ಮಹಾನತೆಯ ಬಗ್ಗೆ ಆ ವ್ಯಕ್ತಿಗೆ ಅರಿವಾಗುತ್ತದೆ. ಜೀವನವು ಬದಲಾಗುವುದಿದ್ದರೆ ಒಂದು ಕ್ಷಣದಲ್ಲಿ ಬದಲಾಗುತ್ತದೆ. ಇಲ್ಲದಿದ್ದರೆ ವರ್ಷಗಳೇ ಬೇಕಾಗುತ್ತದೆ. ಪುರುಷಾರ್ಥವೇ ಇಲ್ಲದೆ ಇಷ್ಟು ದೊಡ್ಡ ಬದಲಾವಣೆಯು ವಿಧಿಯಲ್ಲದೆ ಮತ್ತೇನು. ಶ್ರೇಷ್ಠ ಮತ್ತು ಶುಭ ಭಾವನೆಯಿಂದ ಇಂತಹ ದೊಡ್ಡ ಪರಿವರ್ತನೆಯು ತಾನಾಗಿಯೇ ಆದರೆ ಇದು ವಿಧಿಯಲ್ಲದೆ ಮತ್ತೇನು? ಆದ್ದರಿಂದ ವಿಧಿಯೇ ಶ್ರೇಷ್ಠವಾದುದಾಗಿದೆ.

## ನಿಯಂತ (ಭಗವಂತನು) ನಿಯತಿಗಿಂತ (ವಿಧಿಗಿಂತ) ಮೇಲಿದ್ದಾನೆ

ಸೃಷ್ಟಿಯ ಮಹಾನ್ ಪರಿವರ್ತನೆಯಲ್ಲಿ ಎಲ್ಲವೂ ನಿಯತಿಯೇ (ವಿಧಿಯೇ) ಅಲ್ಲ, ಆದರೆ ನಿಯತಿಗಿಂತ ಮೇಲೆ ನಿಯಂತನು (ಭಗವಂತನು) ಕುಳಿತಿದ್ದಾನೆ. ಯಾರನ್ನು ನಾವು ಪರಮಪಿತ ಪರಮಾತ್ಮ ಶಿವ ಎಂದು ಕರೆಯುತ್ತೇವೆಯೋ ಅವರೇ ಪರಮಾತ್ಮ, ಅವರೇ ನಿಯಂತರಾಗಿದ್ದಾರೆ. ಸೃಷ್ಟಿಯ ನಿಯತಿಯಲ್ಲಿ ಅವರು ಯಾವುದೇ ಅನ್ಯ ಬದಲಾವಣೆ ಮಾಡುವುದಿಲ್ಲ ಆದರೆ ಅವರು ನಿಯತಿಯ ಹಿಡಿತದಿಂದ ಸದಾ – ಸರ್ವದಾ ಮುಕ್ತರಾಗಿದ್ದಾರೆ. ಈ ಪರಮ ಲೀಲೆಯಲ್ಲಿ ಯಾವ ಸಂಯೋಗದಿಂದ ಸುಖ ದುಃಖದ ಘಟನೆಗಳಾಗುತ್ತವೆಯೋ ಅವುಗಳೆಲ್ಲಾ ಮನುಷ್ಯಾತ್ಮರು ಮತ್ತು ಪ್ರಕೃತಿಯಿಂದ ಉಂಟಾದ ಕ್ರಮಬದ್ಧ ಶೃಂಖಲೆಯಾಗಿದೆ. ಆದರೆ ನಿಯಂತನು ನಿಯತಿಯ ಎಲ್ಲಾ ಗತಿ ವಿಧಿಗಳನ್ನು ನೋಡುತ್ತಾರೆ ಮತ್ತು ಅರಿಯುತ್ತಾರೆ ಆದರೆ ಅದರ ಫಲ ಮತ್ತು ಪರಿಣಾಮದಿಂದ ಸದಾ ಮುಕ್ತರಾಗಿ, ತಮ್ಮ ಪರಮ ವಿಶಿಷ್ಟ ಸ್ಥಾನದಲ್ಲಿ ಸ್ಥಿತರಾಗಿರುತ್ತಾರೆ. ಅವರು ಈ ಸೃಷ್ಟಿಯಲ್ಲಿ ನಡೆಯುತ್ತಿರುವ ಮಹಾಲೀಲೆಯಲ್ಲಿ ಬಹಳ ಕಾಲದವರೆಗೂ ಮನುಷ್ಯನ ಸುಖ–ಶಾಂತಿಪೂರ್ಣ ಜೀವನದ ನಿಯತಿಯನ್ನು ಮಾಡುವುದಕ್ಕಾಗಿ ತಮ್ಮ ಪಾತ್ರವನ್ನು ಮಾಡಲು ಬರುತ್ತಾರೆ. "ನಾನೂ ಸಹ ಈ ಡ್ರಾಮಾದ ಸಿಹಿಯಾದ ಬಂಧನದಲ್ಲಿ ಬಂಧಿತನಾಗಿದ್ದೇನೆ" ಎಂದು ಅವರು ಹೇಳುತ್ತಾರೆ. ಇದು ಅವರ ಪರಮ ನಿರ್ಮಾಣತೆಯಾಗಿದೆ ಮತ್ತು ಅವರ ಈ ಹೇಳಿಕೆಯು ಮನುಷ್ಯಾತ್ಮರಿಗೆ ಅವರೊಡನೆ ಸರ್ವ ಸಂಬಂಧ ಜೋಡಿಸುವಿಕೆಯಲ್ಲಿ ಮತ್ತು ಸರ್ವಪ್ರಾಪ್ತಿ ಮಾಡಿಕೊಳ್ಳುವುದರಲ್ಲಿ ಸಹಾಯಕವಾಗಿದೆ. ಅನ್ಯಥಾ ಅವರು ನಮ್ಮ ರೀತಿ ಕರ್ಮದ ಫಲವನ್ನು ಸ್ವೀಕರಿಸುವುದಿಲ್ಲ, ಪಾತ್ರ ಅಥವಾ ನಿಯಮದ ಅಧೀನರಾಗಿ ಶರೀರದಲ್ಲಿ ಬಂಧಿತರಾಗುವುದಿಲ್ಲ. ಯಾವಾಗ ಬೇಕೋ ಆಗ ಬರುತ್ತಾರೆ, ಯಾವಾಗ ಬೇಕೋ ಆಗ ಹೋಗುತ್ತಾರೆ. ಅವರು ಪರಮ ಸ್ವತಂತ್ರರಾಗಿದ್ದಾರೆ. ಆದರೆ ಯಾವುದೇ ವ್ಯಕ್ತಿ ನಿಯತಿಯಿಂದ ಸ್ವತಂತ್ರರಲ್ಲ. ಈ ಸ್ಥಾನ ಮತ್ತು ಸಮಯದ ಪರಿಧಿಯನ್ನು ಮೀರಿ ಎಲ್ಲಿ ನಿಯತಿಯ ಯಾವುದೇ ಹೆಜ್ಜೆಯ ಸಪ್ಪಳ ಕೂಡ ಕೇಳುವುದಿಲ್ಲವೋ, ಆ ಶಾಂತಿಧಾಮದಲ್ಲಿ ಅವರು ಸದಾ ಮುಕ್ತರಾಗಿರುತ್ತಾರೆ. ನಿಯತಿಯ ಕಲ್ಯಾಣ ಮತ್ತು ಅಕಲ್ಯಾಣದಿಂದ ದೂರವಾಗಿ ಅವರು ಸದಾ ಕಲ್ಯಾಣಕಾರಿ ನಿಯತಿಯ ಪಾತ್ರ ನಿರ್ವಹಿಸುತ್ತಾರೆ ಮತ್ತು ಅರ್ಧಕಲ್ಪದವರೆಗೂ ಸೃಷ್ಟಿಯನ್ನು ಕಲ್ಯಾಣದ ನಿಯತಿ, ಸುಖದ ನಿಯತಿಯನ್ನಾಗಿ ಮಾಡುವಂಥ ಪಾತ್ರವನ್ನು ಸದಾ ಬಂಧನಮುಕ್ತರಾಗಿ ನಿರ್ವಹಣೆ ಮಾಡಲು ನಿಮಿತ್ತರಾಗುತ್ತಾರೆ. ಇದರಿಂದಲೂ ಸಹ ನಾವು ಅವರನ್ನು "ನಿಯಂತ (ಭಗವಂತ)" ಎಂದು ಹೇಳುತ್ತೇವೆ. ಜಗದ ನಿಯಂತರಾದ ಪರಮಪಿತ ಶಿವನು ನಮಗೆ "ಹೇ ಆತ್ಮಗಳೇ, ಪ್ರತಿಯೊಬ್ಬ ಮನುಷ್ಯಾತ್ಮನಿಗೆ ಅವನ ಎಲ್ಲಾ ಜನ್ಮಗಳ ಮುಕ್ಕಾಲು ಭಾಗ ಸುಖವೇ ನಿಯತಿಯಾಗಿದೆ. ಮಾನವನ ಅಲ್ಪಜ್ಞತೆಯ ಕಾರಣದಿಂದ ಈ ಡ್ರಾಮಾವು ಅವನಿಗೆ ಸುಖ ಮತ್ತು ದುಃಖದ ಅನುಭವ ಮಾಡಿಸುತ್ತದೆ. ಆದರೆ ಅಂತ್ಯದಲ್ಲಿ ಆತ್ಮನು ಕಲ್ಯಾಣಕಾರೀ ನಿಯತಿಯೊಂದಿಗೆ ಜೋಡಿಸಲ್ಪಟ್ಟಿದ್ದಾನೆ ಎಂಬುದೇ ಸತ್ಯವಾಗಿದೆ" ಎಂದು ಹೇಳಿದ್ದಾರೆ.

## ನಿಯತಿಯ ಚಿಂತನೆಯಿಂದ ಲಾಭ

ಏಕಾಂತರೂಪದಲ್ಲಿ ವರ್ತಮಾನ ಸಮಯದಲ್ಲಿ ನಾವು ನಿಯತಿ ಹಾಗೂ ನಿಯಂತ ಇಬ್ಬರ ಚಿಂತನೆಯೊಂದಿಗೂ ಜೋಡಿಸಲ್ಪಟ್ಟಿದ್ದೇವೆ. ನಿಯತಿಯ ಅರಿವು ವ್ಯಕ್ತಿಯನ್ನು ಆಲಸಿಯಲ್ಲ, ಕರ್ಮಶೀಲನಾಗಿ ಮಾಡುತ್ತದೆ. ಏಕೆ? ಏಕೆಂದರೆ ನಿಯತಿಯ ಚಿಂತನೆಯೇ ವ್ಯಕ್ತಿಯನ್ನು ಎಲ್ಲ ರೀತಿಯ ದುಶ್ಚಿಂತನೆಗಳಿಂದ ಮುಕ್ತರನ್ನಾಗಿಸುತ್ತದೆ. ಯಾವಾಗಲೂ ಯಾರ ಬಗ್ಗೆಯೂ ಈರ್ಷ್ಯೆ ಅಥವಾ ದ್ವೇಷದ ಭಾವನೆ ಹುಟ್ಟುವುದಿಲ್ಲ. ನಿಯತಿಯ ಚಿಂತನೆಯಿಂದ ವ್ಯಕ್ತಿ ಸೋಮಾರಿಯಾಗುವುದಿಲ್ಲ. ಆದರೆ ಆಲಸ್ಯವು ವ್ಯಕ್ತಿಯ ನಿಯತಿಯಾಗಿದೆ. ಕರ್ಮಶೀಲನಾಗುವುದು ವ್ಯಕ್ತಿಯ ನಿಯತಿಯಾಗಿದೆ. ನಿಯತಿ ಮತ್ತು ನಿಯಂತ ಈ ಸಮತೋಲನೆಯ ಚಿಂತನೆ ಮಾನವನ ಮನಸ್ಸನ್ನು ನಿರ್ಭಯ ಮತ್ತು ನಿರ್ದ್ವಂದ್ವವನ್ನಾಗಿ ಮಾಡುತ್ತದೆ. ನಿಯತಿಯ ಭಾವ ಅಥವಾ ಈ ಸತ್ಯದ ಚಿಂತನೆ ಸಾಧಕನನ್ನು ಸಮಭಾವದ ಅತ್ಯುನ್ನತ ಶಿಖರಕ್ಕೆ ಏರಿಸುತ್ತದೆ. ಈ ಹಿನ್ನಲೆಯಲ್ಲಿ ಸಾಧಕನಿಗೆ ದಿವ್ಯತೆಯಿಂದ ಕೂಡಿದ ಜೀವನದ ಪ್ರಾಪ್ತಿಗಳಿಂದ ಶುಭಾಶುಭಗಳ ಸೀಮಿತಭಾವನೆಯಿಂದ ಹೊರಗೆ ಕರೆದೊಯ್ಯುವಂತಹ ಪ್ರಜ್ಞಾರಶ್ಮಿಗಳು ಪ್ರಕಟವಾಗುತ್ತವೆ. ನಿಯತಿಯ ಈ ಚಿಂತನೆ ಸಾಧಕನನ್ನು ರಾಗ ದ್ವೇಷಗಳ ವ್ಯಾಕುಲತೆಯಿಂದ ವಿಚಲಿತರನ್ನಾಗಿಸುವುದಿಲ್ಲ, ಬದಲಾಗಿ– ವಿಘ್ನ ಬಾಧೆಗಳ ಎಷ್ಟೇ ಪರ್ವತಗಳು ಎದುರಾದರೂ, ಆ ಸಾಧಕನು ವಿರಾಟರೂಪದ ಏಕರಸಭಾವದಿಂದ ಕೂಡಿರುತ್ತಾನೆ. ನಿಯತಿ ಮತ್ತು ನಿಯಂತನ ಈ ಚಿಂತನೆ ಮಾನವನ ಮನಸ್ಸನ್ನು ಅನೇಕ ಲೋಪಗಳು, ದ್ವಂದ್ವ ಮತ್ತು ಆತಂಕಗಳಿಂದ ಮುಕ್ತರನ್ನಾಗಿಸಿ "ನಾನು" ಎಂಬ ಅಹಂಭಾವ ಅಥವಾ ನಾನೇ ಮಾಡಿದ್ದು ಎಂಬ ಕರ್ತಾಭಾವವನ್ನು ತ್ಯಾಗ ಮಾಡುವಂಥ ಪಾವನ ಸಂದೇಶವನ್ನು ನೀಡುತ್ತದೆ.

ಏನಾಗಬೇಕೋ ಅದಾಗುತ್ತದೆ, ಆಗಬಾರದ್ದು ಯಾವಾಗಲೂ ಆಗಿಲ್ಲ, ಆಗುವುದೂ ಇಲ್ಲ. ಶಾಂತಚಿತ್ತದಿಂದ ಕರ್ಮ ಮಾಡಬೇಕು. ಆ ಕೆಲಸ ಸಮಯದೊಳಗೇ ಆಗುವುದಿದ್ದರೆ ಆಗುತ್ತದೆ, ಇಲ್ಲದಿದ್ದರೆ ಇಲ್ಲ. ಅನುಕೂಲ ಅಥವಾ ಪ್ರತಿಕೂಲ ಎರಡು ಫಲಗಳನ್ನೂ ನಿಯಂತನಿಗೆ ಸಮರ್ಪಣೆ ಮಾಡಿಬಿಡಬೇಕು. ಆದ್ದರಿಂದ ನಿಯತಿವಾದದ ಸಿದ್ಧಾಂತವು ಮಾನವನ ಮನಸ್ಸನ್ನು ನಿಷ್ಕಲ್ಮಷ ಜ್ಞಾನದ ತೇಜೋಮಯ ಕಿರಣದಿಂದ ಪ್ರತಿಕ್ಷಣ ಬೆಳಗುವಂಥ ಮಂಗಳ ಸಂದೇಶ ನೀಡುತ್ತದೆ. ಈ ಚಿಂತನೆಯು ವಿಕಾರದ ಹಾಹಾಕಾರವನ್ನು ಶಾಂತ ಮಾಡುವಂಥ ಪ್ರಶಾಂತ ಸಾಗರವಾಗಿದೆ ಮತ್ತು ಪರಮ ಶಾಂತ ಸ್ನಿಗ್ಧ ವಾತಾವರಣದ ಹಿತವಾದ ಸುಗಂಧದಲ್ಲಿ ಆತ್ಮನು ಲೀನನಾಗಿ ಹೋಗುತ್ತಾನೆ. ನಿಯತಿ ಮತ್ತು ನಿಯಂತನ ಈ ರಹಸ್ಯವನ್ನು ಸಕಾರಾತ್ಮಕ ನಿಟ್ಟಿನಲ್ಲಿ ತಿಳಿದುಕೊಂಡು ಏಕರಸ ಸ್ಥಿತಿಯನ್ನು ಪಡೆದುಕೊಳ್ಳುವುದೂ ಸಹ ನಿಯತಿಯಾಗಿದೆ. ನೀವು ಇದನ್ನು ಅರಿತುಕೊಂಡರೆ ಅರಿತುಕೊಳ್ಳಿ, ಇಲ್ಲದಿದ್ದರೆ ಇದೂ ಸಹ ತಮ್ಮ ನಿಯತಿಯಾಗಿದೆ.

## ವಾಹ್ ಡ್ರಾಮಾ ವಾಹ್
## (ಲೇಖನ–3)
## ಸಾಕ್ಷೀಭಾವ

ಆನಂದವನ್ನು ಪ್ರಾಪ್ತಿಮಾಡಿಕೊಳ್ಳುವುದೇ ಜೀವನದ ಲಕ್ಷ್ಯವಾಗಿದೆ ಮತ್ತು ಎಲ್ಲರೂ ಅದಕ್ಕಾಗಿ ಪ್ರಯತ್ನಶೀಲರಾಗಿದ್ದಾರೆ. ಆದರೆ ಆನಂದಕ್ಕಾಗಿ ನಿರಂತರ ಪ್ರಯತ್ನಿಸುತ್ತಿದ್ದರೂ ಇಂದು ಮಾನವರು ದುಃಖಿಗಳು ಹಾಗೂ ಅಶಾಂತರಾಗಿದ್ದಾರೆ. ಆದ್ದರಿಂದ ಅವಶ್ಯವಾಗಿ ಮನುಷ್ಯನ ದೃಷ್ಟಿಕೋನವು ಜೀವನದ ಬಗ್ಗೆ ಭ್ರಾಂತಿಯಿಂದ ಕೂಡಿದೆ ಮತ್ತು ತಪ್ಪಾಗಿದೆ ಎಂದು ತಿಳಿಯಬೇಕಾಗಿದೆ. ಆನಂದದ ಪ್ರಾಪ್ತಿಗಾಗಿ ನಾವು ಯಾವ ಹಾದಿಯನ್ನು ಹಿಡಿದಿದ್ದೇವೆಯೋ, ಅದರಲ್ಲಿ ಮುಂದುವರೆದಾಗ ಒಂದುವೇಳೆ ದುಃಖವೇ ದೊರೆತರೆ ಆಗ ನಿಂತು ನಾವು ತಪ್ಪು ಹಾದಿಯನ್ನು ಹಿಡಿದಿದ್ದೇವೆಯೇ ಎಂದು ಯೋಚಿಸಬೇಕಾಗಿದೆ. ವಾಸ್ತವವಾಗಿ ಇಂದು ಜೀವನದ ಬಗ್ಗೆ ನಮ್ಮ ದೃಷ್ಟಿಕೋನವು ಯಥಾರ್ಥವಾಗಿಲ್ಲ.

ಸೃಷ್ಟಿಯು ಒಂದು ವಿರಾಟ ರಂಗಮಂಟಪವಾಗಿದೆ. ಇಲ್ಲಿ ವೈವಿಧ್ಯತೆಯಿಂದ ಕೂಡಿದ ಮನರಂಜಿಸುವ ನಾಟಕವು ನಡೆಯುತ್ತಿದೆ. ನಾಟಕದ ಆನಂದವನ್ನು ಪಡೆಯಲು ಸಾಕ್ಷೀಭಾವದ ಅತಿ ಅವಶ್ಯಕತೆಯಿದೆ. ಯಾವುದರಲ್ಲಿ ನಾವು ಲೀನವಾಗಿ ಬಿಡುತ್ತೇವೋ ಅದು ನಮ್ಮ 'ಪ್ರಪಂಚ' ವಾಗುತ್ತದೆ ಮತ್ತು ಯಾವುದನ್ನು ನಾವು ಸಾಕ್ಷೀಭಾವದಿಂದ ನೋಡುತ್ತೇವೋ ಅದು 'ನಾಟಕ' ವಾಗುತ್ತದೆ. ಪ್ರಪಂಚ ಮತ್ತು ನಾಟಕ ಎರಡರ ನಡುವೆ ಇಷ್ಟೇ ವ್ಯತ್ಯಾಸ. ಈ ಅಂತರವು ಮುಖ್ಯವಾಗಿ ದೃಷ್ಟಿ ಕೋನದಲ್ಲಿದೆ. ಕಾಮಾಲೆ ರೋಗದವನಿಗೆ ಎಲ್ಲವೂ ಹಳದಿಯಾಗಿ ಕಾಣುತ್ತದೆ ಮತ್ತು ಶ್ರಾವಣ ಮಾಸದಲ್ಲಿ ಕುರುಡರಿಗೆ ಎಲ್ಲವೂ ಹಸಿರಾಗಿ ಕಾಣುತ್ತದೆ. ಕಪ್ಪು ಕನ್ನಡಕ ಹಾಕಿದವನಿಗೆ ಎಲ್ಲವೂ ಕಪ್ಪಾಗಿಯೇ ಕಾಣುತ್ತದೆ. ಕೆಂಪು ಕನ್ನಡಕ ಧರಿಸಿದವನಿಗೆ ಎಲ್ಲವೂ ಕೆಂಪಾಗಿಯೇ ಕಾಣುತ್ತದೆ. ಅದರಲ್ಲೇ ಲೀನವಾಗುವ ಭಾವ ಮತ್ತು ಆಸಕ್ತಿಯ ಮನೋವೃತ್ತಿ ಇರುವುದರಿಂದ ಪ್ರಪಂಚವು ದುಃಖದಾಯಕ, ಜಟಿಲ ಮತ್ತು ಕಷ್ಟಕರವಾಗಿ ಕಾಣುತ್ತದೆ. ಸಾಕ್ಷಿ ಭಾವ ಮತ್ತು ಅನಾಸಕ್ತ ಮನೋವೃತ್ತಿ ಇರುವುದರಿಂದ ಆನಂದದಾಯಕ ನಾಟಕವೆನಿಸುತ್ತದೆ. ಆದ್ದರಿಂದ ಪರಿಸ್ಥಿತಿಯನ್ನಲ್ಲ, ಸ್ವಸ್ಥಿತಿಯನ್ನು ಬದಲಿಸುವ ಪುರುಷಾರ್ಥ ಮಾಡಬೇಕಾಗಿದೆ. ಸಾಕ್ಷೀ ಸ್ಥಿತಿಯಲ್ಲಿ ಸ್ಥಿತನಾದ ವ್ಯಕ್ತಿಗೆ ಈ ಪ್ರಪಂಚವು ಒಂದು ನಾಟಕವೆನಿಸುತ್ತದೆ. ಅವನು ಅನೇಕಾನೇಕ ಆತ್ಮಗಳ ವಿವಿಧ ಪಾತ್ರಗಳನ್ನು ನೋಡುತ್ತಾ ಸದಾ ಹರ್ಷಿತನಾಗಿರುತ್ತಾನೆ. ಮನೋರಂಜನೆಗಾಗಿ ಅವನಿಗೆ ಯಾವುದೇ ನಾಟ್ಯ ಶಾಲೆ ಅಥವಾ ಸಿನೆಮಾಗೆ ಹೋಗುವ ಅವಶ್ಯಕತೆ ಇರುವುದಿಲ್ಲ. ಅವನ ಮುಂದೆ ಸದಾ ಕಾಲವು ಮನೋರಂಜಕವಾದ ನಾಟಕವು ನಡೆಯುತ್ತಿರು ತ್ತದೆ. ಶತ್ರು–ಮಿತ್ರ, ಸ್ವಜನ–ಪರಿಜನಗಳ ವಿಭಿನ್ನವಾದ ಆಟಗಳನ್ನು ನೋಡುತ್ತಾ ಅವನು ಸದಾ ಹಗುರ ಮತ್ತು ಹರ್ಷಿತನಾಗಿರುತ್ತಾನೆ. ಇದಕ್ಕೆ ವಿರುದ್ಧವಾಗಿ ಒಂದುವೇಳೆ ಅದರಲ್ಲೇ ಮುಳುಗಿ ಹೋಗುವ ಮನೋವೃತ್ತಿ ಇದ್ದರೆ ನಾಟಕವೂ ಸಹ ಪ್ರಪಂಚದಂತೆ ಬಂಧಿಸುವಂತೆ ಆಗಿ ಬಿಡುತ್ತದೆ. ನಾಟಕದ ಕಾಲ್ಪನಿಕ ಪಾತ್ರಗಳೊಂದಿಗೆ ಮುಳುಗಿಹೋಗುವಂತಹ ಭಾವನೆಯನ್ನು ಮಾಡಿಕೊಳ್ಳುವುದ ರಿಂದ ಎಷ್ಟೋ ಜನ ಸಿನೆಮಾ ಹಾಲ್‌ನಲ್ಲಿ ಕುಳಿತು ಕಣ್ಣೀರು ಹರಿಸುತ್ತಾರೆ ಮತ್ತು ಭಾರವಾದ ಮನಸ್ಸಿನಿಂದ ಹೊರಗೆ ಬರುತ್ತಾರೆ.

ನಾಟಕದ ಪಾತ್ರಧಾರಿಗೆ ತಾನು ಯಾವ ಪಾತ್ರವನ್ನು ಮಾಡುತ್ತಿದ್ದಾನೋ ಅದರಿಂದ ಭಿನ್ನನಾಗಿದ್ದೇನೆ ಎಂದು ಸದಾ ಆಂತರಿಕವಾಗಿ ತಿಳಿದಿರುತ್ತದೆ. ಇದರ ಪರಿಣಾಮವಾಗಿ ಅವನು ಸುಖ–ದುಃಖದ ಆಟದಿಂದ ಅನಾಸಕ್ತನಾಗಿರು ತ್ತಾನೆ ಮತ್ತು ಅಭಿನಯದ ಆನಂದವನ್ನು ಅನುಭವಿಸುತ್ತಾನೆ. ವಾಸ್ತವವಾಗಿ

ಆತ್ಮಗಳಾದ ನಾವೂ ಸಹ ಈ ಸೃಷ್ಟಿ ನಾಟಕದಿಂದ ದೂರವಾಗಿರುವ ಬ್ರಹ್ಮಲೋಕದ ನಿವಾಸಿಗಳಾಗಿದ್ದೇವೆ ಮತ್ತು ಜ್ಯೋತಿ ಬಿಂದು ಸ್ವರೂಪರಾಗಿದ್ದೇವೆ. ಈ ಸೃಷ್ಟಿ ನಾಟಕದಲ್ಲಿ ನಾವು ಶರೀರವನ್ನು ಧಾರಣೆ ಮಾಡಿ ನಾಟಕವನ್ನು ಆಡುತ್ತಿದ್ದೇವೆ. ಆದರೆ ಯಥಾರ್ಥದಲ್ಲಿ ನಾವು ಶರೀರವಲ್ಲ, ಆದರೆ ಅದರಿಂದ ಭಿನ್ನರಾದ ಆತ್ಮಗಳಾಗಿದ್ದೇವೆ. ಆತ್ಮಗಳಾದ ನಾವು ಈ ವಿರಾಟ ಸೃಷ್ಟಿ ನಾಟಕದಲ್ಲಿ ವಿಧ ವಿಧವಾದ ಉಡುಪುಗಳನ್ನು (ಶರೀರವನ್ನು) ಧರಿಸಿ ವೈವಿಧ್ಯಮಯವಾದ, ಸೋಲು ಗೆಲುವಿನ ಮನೋರಂಜಕವಾದ ಆಟ ಆಡುತ್ತಿದ್ದೇವೆ. ಪರಮಧಾಮದಿಂದ ಈ ಸೃಷ್ಟಿ ನಾಟಕದಲ್ಲಿ ನಾವು ಆಟದ ಆನಂದವನ್ನು ಪಡೆಯಲು ಬಂದಿದ್ದೇವೆಯೇ ವಿನಃ ಇದರಲ್ಲಿ ಸಿಕ್ಕಿಕೊಂಡು ದುಃಖಿಗಳೂ ಅಶಾಂತರೂ ಆಗಲು ಬಂದಿಲ್ಲ. ಆಟದಲ್ಲಿ ನಾವು ಶತ್ರು–ಮಿತ್ರ, ಪಿತಾ–ಪುತ್ರ, ಪತಿ–ಪತ್ನಿಯ ಅಥವಾ ಅನ್ಯ ಯಾವುದೇ ಅಭಿನಯವನ್ನು ಮಾಡಬಹುದು, ಆದರೆ ಆತ್ಮ ರೂಪದಲ್ಲಿ ನಾವೆಲ್ಲರೂ ನಿರಾಕಾರ ಪರಮಪಿತ ಪರಮಾತ್ಮ ಶಿವನ ಸಂತಾನರಾಗಿರುವ ಕಾರಣ ಸಹೋದರ–ಸಹೋದರರಾಗಿದ್ದೇವೆ. ಆದ್ದರಿಂದ ನಾಟಕದ ಅಭಿನಯದ ಯಾವ ಪ್ರಭಾವವೂ ಆತ್ಮಗಳಾದ ನಮ್ಮ ಮೂಲ ಸಂಬಂಧದ ಮೇಲೆ ಬೀಳಬಾರದು. ಇದೇ ಜೀವನದ ಯಥಾರ್ಥ ದೃಷ್ಟಿಕೋನವಾಗಿದೆ. ಇದನ್ನು ಮರೆತು ಮನುಷ್ಯನ ಜೀವನವು ಇಷ್ಟೊಂದು ಕಠಿಣಕರ, ಆತಂಕಕರ ಮತ್ತು ದುಃಖ–ಅಶಾಂತಿಮಯ ವಾಗಿದೆ.

## ಸಾಕ್ಷೀ ಸ್ಥಿತಿಯೇ ಶಾಂತಿಯ ಜನನಿಯಾಗಿದೆ

ಯಾವುದೇ ಸಿದ್ಧಾಂತದ ಸತ್ಯತೆಯ ಪರೀಕ್ಷೆಯ ಪರಿಣಾಮವನ್ನು ವ್ಯವಹಾರಿಕ ಜೀವನದಲ್ಲಿ ನೋಡುತ್ತೇವೆ. ಆಸಕ್ತಿಯಿಂದ ಕೂಡಿದ ಮನುಷ್ಯನ ಜೀವನವು ಸದಾ ಚಿಂತೆ, ಆತಂಕ ಅಥವಾ ಗೊಂದಲಗಳಿಂದ ತುಂಬಿರುತ್ತದೆ. ಇದಕ್ಕೆ ಬದಲಾಗಿ ಸಾಕ್ಷೀಭಾವದಿಂದ ಕೂಡಿದ ಮನುಷ್ಯನು ಸದಾ ನಿಶ್ಚಿಂತತೆ, ಹಗುರ ಮತ್ತು ಹರ್ಷಿತಮುಖದವನಾಗಿರುತ್ತಾನೆ. ಕಠಿಣಾತಿ ಕಠಿಣ ಪರಿಸ್ಥಿತಿ ಅಥವಾ ಆಪತ್ತಿನಲ್ಲೂ ಅವನು ಅಲುಗಾಡುವುದಿಲ್ಲ. ಆ ಘಟನೆಗಳನ್ನು ಸಹ ವಿವಿಧತೆಯಿಂದ ಕೂಡಿದ ನಾಟಕದ ಒಂದು ಅಂಗವೆಂದು ಭಾವಿಸಿ ಅವನು ಅಚಲ ಅಡೋಲನಾಗಿರುತ್ತಾನೆ. ಒಂದುವೇಳೆ ಯಾರಾದರೂ ತಮ್ಮನ್ನು ಅಪಮಾನ ಮಾಡಿದರೆ, ಮತ್ತು ತಾವು ಸಾಕ್ಷೀಭಾವದಿಂದ 'ಈ ಆತ್ಮವು ಅಜ್ಞಾನ ವಶದಿಂದ ಉಲ್ಟಾ ಕಾರ್ಯವನ್ನು ಮಾಡುತ್ತಿದೆ, ಮತ್ತು ಇದರ ಪರಿಣಾಮವನ್ನು ಈ ಆತ್ಮವು ಅನುಭವಿಸಬೇಕಾಗುತ್ತದೆ' ಎಂದು ನೋಡಿದಾಗ, ಯಾವ ಅಪಮಾನವು ಈ ಮೊದಲು ತಮ್ಮ ಹೃದಯಕ್ಕೆ ಬಾಣದ ತರಹ ಚುಚ್ಚುತ್ತಿತ್ತೋ ಅದು ಈಗ ತಮ್ಮನ್ನು ಹುಲ್ಲಿನಷ್ಟೂ ಸ್ಪರ್ಶಿಸುವುದಿಲ್ಲ. ಆ ಅಜ್ಞಾನಿ ಆತ್ಮದ ಬಗ್ಗೆ ತಮ್ಮ ಹೃದಯದಲ್ಲಿ ಕ್ರೋಧದ ಬದಲು ಕರುಣೆಯ ಭಾವನೆ ಉಂಟಾಗುತ್ತದೆ. ಆದ್ದರಿಂದ ಅವರ ಯಾವ ಕಟುನುಡಿಗಳು ತಮ್ಮ ಬಹಳ ದಿನದ ನಿದ್ರೆ ಮತ್ತು ನೆಮ್ಮದಿಯನ್ನು ಹಾಳು ಮಾಡುತ್ತಿತ್ತೋ ಅದು ಈಗ ತಮ್ಮ ಮೇಲೆ ಯಾವ ಪ್ರಭಾವವನ್ನೂ ಬೀರುವುದಿಲ್ಲ. ತಮ್ಮ ಆತ್ಮವು ಕಮಲ ಪುಷ್ಪದ ರೀತಿ ಮಾನ–ಅಪಮಾನ, ನಿಂದನೆ–ಸ್ತುತಿ, ಸುಖ–ದುಃಖಗಳಿಂದ ಸದಾ ಮೇಲೆ ಇದ್ದು ಆನಂದದಿಂದ ಇರುತ್ತದೆ.

ಈ ಅನಾದಿ ನಿಶ್ಚಿತವಾದ ಸೃಷ್ಟಿ ನಾಟಕವು ಎಷ್ಟೊಂದು ಕಲ್ಯಾಣಕಾರಿ, ಯುಕ್ತಿ ಯುಕ್ತ ಮತ್ತು ನ್ಯಾಯಪೂರ್ಣವಾಗಿ ಮಾಡಲ್ಪಟ್ಟಿದೆ ಎಂದರೆ ಯಾರೂ ಯಾರಿಗೂ ಕಾರಣವಿಲ್ಲದೆ ದುಃಖ ಕೊಡುವುದಿಲ್ಲ. ಯಾವ ಸುಖ–ದುಃಖಗಳು ನಮಗೆ ಸಿಗುತ್ತದೆಯೋ ಅವುಗಳು ನಮ್ಮ ಹಿಂದಿನ ಕರ್ಮಗಳ ಲೆಕ್ಕಾಚಾರದ ಕಾರಣದಿಂದ ಬರುತ್ತದೆ. ಆದ್ದರಿಂದ ಸಾಕ್ಷೀ ಭಾವದ ಮನುಷ್ಯನು ಕಷ್ಟ ಮತ್ತು ದುಃಖವನ್ನು ತನ್ನ ಪೂರ್ವಜನ್ಮದ ಕರ್ಮದ ಫಲವೆಂದು ಭಾವಿಸಿ ಪ್ರಸನ್ನನಾಗಿರುತ್ತಾನೆ. ಇದರಿಂದ ನನ್ನ ವಿಕರ್ಮದ ಖಾತೆ ಮುಗಿಯುತ್ತಿದೆ ಮತ್ತು ನಾನು ಕರ್ಮಾತೀತರಾಗುತ್ತಿದ್ದೇನೆ ಎಂದು ತಿಳಿಯುತ್ತಾನೆ. ಜೊತೆಗೆ ಸುಖಮಯವಾದ ಭವಿಷ್ಯಕ್ಕಾಗಿ ಅವನು ಶ್ರೇಷ್ಠ ಕರ್ಮದ ಪುರುಷಾರ್ಥವನ್ನು ಮಾಡುತ್ತಿರುತ್ತಾನೆ. ಕಾಯಿಲೆಗಳನ್ನು ಅವನು ತನ್ನ ಕರ್ಮಭೋಗವೆಂದು ಭಾವಿಸಿ, ಸಾಹಸದಿಂದ ಮತ್ತು ಪ್ರಸನ್ನತೆಯಿಂದ ಸಹನೆ ಮಾಡಿಕೊಳ್ಳುತ್ತಾನೆ ಮತ್ತು ಬೇರೆಯವರಿಗೆ ಒಂದು ಉನ್ನತವಾದ ಆದರ್ಶವನ್ನು ಪ್ರದರ್ಶಿಸುತ್ತಾನೆ. ಕಠಿಣ ರೋಗದಲ್ಲಿಯೂ ಸಹ ಅವನು ಆನಂದಪೂರ್ವಕವಾಗಿ ಪತಿತ ಪಾವನ ಪರಮಪಿತ ಪರಮಾತ್ಮ ಶಿವನ ಪಾವನ ಸ್ಮೃತಿಯಲ್ಲಿ ಇರುತ್ತಾನೆ. ಇದರಿಂದ ರೋಗವೂ ಸಹ ಅವನಿಗೆ ಕಷ್ಟವನ್ನು ಕೊಡುವುದಿಲ್ಲ ಮತ್ತು ಅವನ ವಿಕರ್ಮದ ಖಾತೆಯೂ ಸಹ ಬೇಗನೆ ಸಮಾಪ್ತಿಯಾಗುತ್ತದೆ.

ಕಷ್ಟಗಳು ನಮ್ಮ ಮನೋವೃತ್ತಿಯ ಸೂಚಕವಾಗಿವೆ. ಸಮಚಿತ್ತ ಮನೋವೃತ್ತಿಯುಳ್ಳ ಮನುಷ್ಯನು ಪರ್ವತದಂತಹ ಬಾಧೆಗಳನ್ನೂ ಸಹ ಸಾಸಿವೆಯಂತೆ ಭಾವಿಸುತ್ತಾನೆ ಮತ್ತು ತಪ್ಪಾದ ಮನೋವೃತ್ತಿಯಿದ್ದಾಗ ಸಣ್ಣ ವಸ್ತುವೂ ಸಹ ದಾರಿಯಲ್ಲಿ ಪರ್ವತದಂತೆ ತೋರುತ್ತದೆ. ವಾಸ್ತವದಲ್ಲಿ ಕಷ್ಟಗಳು ನಮಗೆ ಸಹನಶೀಲತೆ,

ನಿರ್ಭಯತೆ ಮತ್ತು ಹರ್ಷಿತಮುಖತೆಯ ಪಾಠವನ್ನು ಕಲಿಸಲು ಬರುತ್ತದೆ. ಕಷ್ಟಗಳನ್ನು ಹರ್ಷಿತರಾಗಿ ಸಹಿಸುವುದರಿಂದಲೇ ನಮ್ಮ ಆತ್ಮ ಅಷ್ಟಶಕ್ತಿಗಳಿಂದ ಮತ್ತು ಸರ್ವಗುಣಗಳಿಂದ ಸಂಪನ್ನವಾಗುತ್ತದೆ. ಆದರೆ ಯಾರು ಕಷ್ಟಗಳಿಗೆ ಹೆದರುತ್ತಾರೋ ಅವರು ಸದಾ ಕಾಲಕ್ಕೆ ನಿರ್ಬಲರಾಗುತ್ತಾರೆ. ಸಾಕ್ಷೀ ದೃಷ್ಟಿಯುಳ್ಳ ಮನುಷ್ಯನು ಕಷ್ಟಗಳನ್ನು ಸದಾ ಸ್ವಾಗತ ಮಾಡುತ್ತಾನೆ ಮತ್ತು ದಾರಿಯಲ್ಲಿರುವ ಚಪ್ಪಡಿ ಕಲ್ಲುಗಳನ್ನು ಸ್ವರ್ಗಕ್ಕೆ ಏರುವ ಮೆಟ್ಟಿಲುಗಳನ್ನಾಗಿ ಮಾಡಿಕೊಳ್ಳುತ್ತಾನೆ. ಬಿರುಗಾಳಿಯೂ ಅವನಿಗಾಗಿ ದಿವ್ಯಗುಣಗಳ ಬಹುಮಾನವನ್ನು ತರುತ್ತದೆ ಮತ್ತು ಅಲೆಗಳ ಹೊಡೆತವನ್ನು ಆನಂದದಿಂದ ಸಹನೆ ಮಾಡಿಕೊಂಡು ಅವನು ಭಿಕಾರಿಯಿಂದ ಮಹಾರಾಜನಾಗಿಬಿಡುತ್ತಾನೆ.

"ಸಾಕ್ಷಿ" ಎಂಬ ಈ ಎರಡು ಅಕ್ಷರಗಳಲ್ಲಿ ಧರ್ಮ ಮತ್ತು ಆನಂದದ ರಹಸ್ಯವು ಅಡಗಿದೆ. ಯಾರು ಸಾಕ್ಷೀ ಭಾವವನ್ನು ಜೀವನದಲ್ಲಿ ಅಳವಡಿಸಿ ಕೊಂಡಿರುತ್ತಾರೋ ಅವರೇ ಸತ್ಯವಾದ ಧಾರ್ಮಿಕರು ಮತ್ತು ಅವರ ಜೀವನವೇ ಆನಂದಮಯವಾಗಿರುತ್ತದೆ. ಪರಮಾತ್ಮನು ಆನಂದದ ಸಾಗರನಾಗಿದ್ದಾರೆ. ಏಕೆಂದರೆ ಅವರು ಸದಾ ಸಾಕ್ಷಿಯಾಗಿರುತ್ತಾರೆ. ಸೃಷ್ಟಿಯ ಉತ್ಥಾನ ಮತ್ತು ಪತನದ ಆಟವನ್ನು ಅವರು ಸಾಕ್ಷಿಯಾಗಿ ನೋಡುತ್ತಿರುತ್ತಾರೆ. ಏಕೆಂದರೆ ಜ್ಞಾನಸಾಗರನಲ್ಲಿ ಸೃಷ್ಟಿ ನಾಟಕದ ಆದಿ-ಮಧ್ಯ-ಅಂತ್ಯದ ಯಥಾರ್ಥ ಜ್ಞಾನವಿದೆ. ಮನುಷ್ಯಾತ್ಮರು ಸಹ ಸತ್ಯಯುಗ ತ್ರೇತಾಯುಗದಲ್ಲಿ ಆತ್ಮಾಭಿಮಾನಿಯಾಗಿರುವ ಕಾರಣ ಸುಖಿಯಾಗಿರುತ್ತಾರೆ. ಆದರೆ ದ್ವಾಪರ ಕಲಿಯುಗದಲ್ಲಿ ಸಾಕ್ಷೀ ಭಾವವನ್ನು ಕಳೆದುಕೊಳ್ಳುವದರಿಂದ ಸಣ್ಣ ಸಣ್ಣ ಮಾತುಗಳಿಗೆ ಏಕೆ, ಏನು, ಹೇಗೆ- ಇತ್ಯಾದಿ ಪ್ರಶ್ನೆಗಳ ಸಾಲನ್ನು ರಚಿಸುತ್ತಾರೆ. ಇದರಿಂದಾಗಿ ಅವರು ಘೋರ ದುಃಖಿಗಳು, ಅಶಾಂತರಾದರು. ಇಂತಹ ಸಮಯದಲ್ಲಿ ಜ್ಞಾನಸಾಗರ ಪರಮಾತ್ಮನು ನಮಗೆ ಮತ್ತೆ ಅನಾದಿ ನಿಶ್ಚಿತ ಡ್ರಾಮಾದ ಆದಿ-ಮಧ್ಯ-ಅಂತ್ಯದ ಜ್ಞಾನವನ್ನು ನೀಡಿ ಪೂರ್ಣವಾಗಿ ಸಾಕ್ಷಿಯುಳ್ಳವರನ್ನಾಗಿ ಮಾಡುತ್ತಿದ್ದಾರೆ. ಸೃಷ್ಟಿ ನಾಟಕವನ್ನು ಮತ್ತು ತಮ್ಮ ಸಂಕಲ್ಪ-ವಿಕಲ್ಪಗಳನ್ನು ಸಾಕ್ಷಿಯಾಗಿ ನೋಡುವ ಮನುಷ್ಯನೇ ಸತ್ಯವಾದ ಯೋಗಿಯಾಗಿದ್ದಾನೆ.

## ವಾಹ್ ಡ್ರಾಮಾ ವಾಹ್!

ಈ ದಿನ ವತನಕ್ಕೆ ಹೋದಾಗ ನಾನು ಹೋಗುತ್ತಲೇ ಬಾಪ್‌ದಾದಾರವರು ಎದುರಿಗೆ ಇದ್ದರು ಮತ್ತು ಬ್ರಹ್ಮಾಬಾಬಾರವರ ಕೊರಳಿನಲ್ಲಿ ಅನೇಕಾನೇಕ ಮಾಲೆಗಳು ಧರಿಸಲ್ಪಟ್ಟಿದ್ದವು. ನಂತರ ಬಾಬಾರವರು "ಮಾಲೆಯನ್ನು ಬಿಚ್ಚಿ ನೋಡು" ಎಂದು ಹೇಳಿದರು. ಮಾಲೆಯನ್ನು ಬಿಚ್ಚಿದಾಗ ಕೆಲವು ದೊಡ್ಡ ಮಾಲೆಗಳು ಮತ್ತು ಕೆಲವು ಸಣ್ಣ ಮಾಲೆಗಳಿದ್ದವು. ನಾನು ಬಾಬಾರವರನ್ನು ಇದರ ರಹಸ್ಯವೇನೆಂದು ಕೇಳಿದೆ. "ಇದು ಎಲ್ಲಾ ಮಕ್ಕಳ ಆಕ್ಷೇಪಣೆಗಳ ಮಾಲೆಯಾಗಿದೆ" ಎಂದು ಬಾಬಾರವರು ಹೇಳಿದರು. ಏಕೆಂದರೆ ಮಕ್ಕಳು ಏಕಾಂತದಲ್ಲಿ ಕುಳಿತಾಗ ಬಾಬಾರವರಿಗೆ ಸ್ನೇಹದಿಂದ ಆಕ್ಷೇಪಣೆಗಳನ್ನು ಕೊಡುತ್ತಾರೆ. ಪ್ರತಿಯೊಂದು ಮಗುವೂ ತಂದೆಗೆ ಆಕ್ಷೇಪಣೆಗಳ ಮಾಲೆಯನ್ನು ಖಂಡಿತ ಹಾಕಿದ್ದಾರೆ. ಬಾಬಾ ಹೇಳಿದರು - ಮಕ್ಕಳಿಗೆ ಡ್ರಾಮಾದ ನೆನಪಿದೆ ಆದರೆ ಪ್ರಾಣಕ್ಕಿಂತ ಪ್ರಿಯವಾದ ವಸ್ತುವು ಇದೆ. ಆದ್ದರಿಂದ ಇದ್ದಕ್ಕಿದ್ದಂತೆ ಡ್ರಾಮಾವನ್ನು ಆಶ್ಚರ್ಯದಿಂದ ನೋಡಿ ಪ್ರತಿಯೊಂದು ಮಗುವು ಮನಸ್ಸಿನಲ್ಲಿಯೇ ಆಕ್ಷೇಪಣೆಗಳನ್ನು ಕೊಡುತ್ತಿರುತ್ತಾರೆ. ಜ್ಞಾನವಂತೂ ಮಕ್ಕಳಿಗೆಲ್ಲಾ ಗೊತ್ತಿದೆ ಆದರೆ ಜ್ಞಾನದ ಜೊತೆಗೆ ಪ್ರೇಮದ ಸ್ನೇಹವೂ ಇದೆ ಆದ್ದರಿಂದ ಈ ಆಕ್ಷೇಪಣೆಗಳನ್ನು ತಪ್ಪೆಂದು ಹೇಳುವುದಿಲ್ಲ.

ಇಂದು ವತನಕ್ಕೆ ಹೋದಾಗ ಹೋಗುತ್ತಲೇ ಏನು ನೋಡಿದೆನೆಂದರೆ ಶಿವಬಾಬಾ ಮತ್ತು ಬ್ರಹ್ಮಾಬಾಬಾ ಇಬ್ಬರೂ ಒಟ್ಟಿಗೆ ಕುಳಿತಿದ್ದರು ಮತ್ತು ಎದುರಿಗೆ ಒಂದು ಚಿಕ್ಕ ಬೆಟ್ಟ ಕಾಣುತ್ತಿತ್ತು ಅದು ಏನಾಗಿತ್ತು? ನೋಡಿದಾಗ ರಾಶಿ ರಾಶಿ ಪತ್ರಗಳು ಕಾಣಿಸಿತು. ಎಷ್ಟೊಂದು ಪತ್ರಗಳಿತ್ತೆಂದರೆ ಬೆಟ್ಟದಷ್ಟಾಗಿತ್ತು. ನಾನು ಅಲ್ಲಿಗೆ ಸೇರಿದ ತಕ್ಷಣ ಬ್ರಹ್ಮಾಬಾಬಾರವರು ನನ್ನನ್ನು ನೋಡಿದರು ಮತ್ತು ಈಶೂ ಬೆಹೆನ್ ಎಲ್ಲಿ ಎಂದು ಕೇಳಿದರು. ಇಷ್ಟೊಂದು ಪತ್ರ ಸೇರಿಬಿಟ್ಟಿದೆ. 'ಬಾಬಾ ನಾನು ಬಂದಿದ್ದೇನೆ' ಎಂದು ನಾನು ಹೇಳಿದೆ. ಬಾಬಾ ಕೇಳಿದರು "ಈಶೂ ಮಗುವನ್ನು ಸಹ ಜೊತೆಯಲ್ಲಿ ಕರೆತಂದಿದ್ದೀಯ ಅಲ್ಲವೇ? ನೋಡಿ, ಈಶೂ ಮಗು ಮತ್ತು ನಾನು ಎರಡು ನಿಮಿಷದಲ್ಲಿ ಇಷ್ಟೊಂದು ಪತ್ರಗಳನ್ನು ಓದಿ ಮುಗಿಸಿಬಿಡುತ್ತೇವೆ". ಶಿವಬಾಬಾರವರು ಸಾಕ್ಷಿಯಾಗಿ ಮುಗುಳು ನಗುತ್ತಿದ್ದರು. ಅಷ್ಟರಲ್ಲಿ ಈಶೂ ಬೆಹೆನ್ ಕೂಡಾ ಅಲ್ಲಿ ಇಮರ್ಜ್ ಆದರು. ಈಶುವಿನ ಮುಖಚರ್ಯೆ ಅತ್ಯಂತ ಶಾಂತವಾಗಿತ್ತು. "ಮಗು ಏನು ಯೋಚಿಸುತ್ತಿದ್ದೀಯ? ಈ ದಿನ ಪತ್ರಗಳಿಗೆ ಉತ್ತರ ಕೊಡಬೇಕಾಗಿದೆ" ಎಂದು ಬಾಬಾ ಹೇಳಿದರು. ಅದೇ ಸಮಯದಲ್ಲಿ ಸಾಕಾರ ವತನದ ಸಂಸ್ಕಾರವು ಪೂರ್ಣ ರೀತಿಯಲ್ಲಿ ಇಮರ್ಜ್ ಆಗಿತ್ತು. ಮಮ್ಮಾರವರು ನಿಂತು ನೋಡುತ್ತಿದ್ದರು. ಇಷ್ಟರಲ್ಲೇ ಶಿವಬಾಬಾರವರು ಬ್ರಹ್ಮಾಬಾಬಾರವರನ್ನು "ನೀವು

ಎಲ್ಲಿದ್ದೀರ? "ವತನದಲ್ಲಿ ಕುಳಿತ್ತಿದ್ದೀರ" ಎಂದು ಕೇಳಿದರು. ಆಗ ಒಂದು ಸೆಕೆಂಡಿನಲ್ಲಿ ರೂಪ ಬದಲಾಯಿತು. ಬಾಬಾರವರು ಏನೂ ಹೇಳಲಿಲ್ಲ. ಒಂದೇ ಕ್ಷಣದಲ್ಲಿ ನಿಶಬ್ಧತೆ ಆವರಿಸಿತ್ತು. ಇಷ್ಟರಲ್ಲಿ ಬಾಬಾರವರು ನನಗೆ "ಮಗು, ಈ ಪತ್ರವನ್ನು ತೆರೆದು ನೋಡು" ಎಂದು ಹೇಳಿದರು. ನಾನು "ಬಾಬಾ, ಪತ್ರಗಳು ಬಹಳ ಇದೆ" ಎಂದು ಹೇಳಿದೆ. ಅದಕ್ಕೆ ಬಾಬಾ "ಮಗು ಇದಕ್ಕೆ ಒಂದೇ ಒಂದು ಸೆಕೆಂಡ್ ಬೇಕಾಗುತ್ತದೆ ಏಕೆಂದರೆ ಎಲ್ಲದರಲ್ಲೂ ಒಂದೇ ಮಾತಿದೆ" ಎಂದು ಹೇಳಿದರು. ನಂತರ ಬಾಬಾರವರು "ಎಲ್ಲಾ ಪತ್ರಗಳಲ್ಲೂ ಮಕ್ಕಳ ಆಕ್ಷೇಪಣೆಗಳೇ ಇದೆ. ಈಗ ನೋಡಿ ಬಾಬಾರವರು ಮಕ್ಕಳಿಗೆ ಪ್ರತಿಕ್ರಿಯಿಸುತ್ತಾರೆ. ನೋಡಿರಿ, ಒಂದೇ ಸೆಕೆಂಡ್‌ನಲ್ಲಿ ನಾನು ಉತ್ತರ ಕೊಡುತ್ತೇನೆ" ಎಂದು ಹೇಳಿದರು. ನಂತರ ಬಾಬಾರವರು ಕೆಂಪು ಅಕ್ಷರಗಳಲ್ಲಿ ಇಲ್ಲಿಯ ರೀತಿಯೇ ಪತ್ರ ಬರೆದರು. ಪತ್ರದಲ್ಲಿ ಏನಿತ್ತೆಂದರೆ –

"ಬ್ರಾಹ್ಮಣ ಕುಲ ಭೂಷಣ, ಸ್ವದರ್ಶನ ಚಕ್ರಧಾರಿ, ಕಣ್ಮಣಿಗಳಾದ ಮಕ್ಕಳಿಗೆ ಸಮಾಚಾರವೇನೆಂದರೆ ಎಲ್ಲಾ ಮಕ್ಕಳ ಆಕ್ಷೇಪಣೆಗಳ ಪತ್ರಗಳು ಸೂಕ್ಷ್ಮವತನಕ್ಕೆ ಬಂದಿವೆ. ಅದಕ್ಕೆ ಉತ್ತರವಾಗಿ ಬಾಪ್‌ದಾದಾರವರು ಮಕ್ಕಳಿಗೆ ಹೇಳುತ್ತಿದ್ದಾರೆ, ಡ್ರಾಮಾದ ನಿಗದಿತವಾದ ಬಂಧನದಲ್ಲಿ ಎಲ್ಲಾ ಆತ್ಮಗಳು ಬಂಧಿತರಾಗಿದ್ದಾರೆ, ಎಲ್ಲರೂ ಪಾತ್ರವನ್ನು ಮಾಡುತ್ತಿದ್ದಾರೆ. ಅದೇ ಡ್ರಾಮಾದ ಸಿಹಿ ಸಿಹಿಯಾದ ಬಂಧನದ ಅನುಸಾರ ಈ ದಿನ ಅವ್ಯಕ್ತ ವತನದಲ್ಲಿ ಪಾತ್ರ ಮಾಡುತ್ತಿದ್ದೇನೆ. ಪ್ರತಿಯೊಂದು ಮಗುವಿಗೆ ಮನಸ್ಸಿನಿಂದ ಮತ್ತು ಹೃದಯದಿಂದ ಪ್ರೀತಿ, ಪ್ರೇಮದಿಂದ ಅವ್ಯಕ್ತ ರೂಪದಲ್ಲಿ ಬಹಳ ಬಹಳ ಬಹಳ ನೆನಪು, ಪ್ರೀತಿಯನ್ನು ಸ್ವೀಕರಿಸಿರಿ. ಹೇಗೆ ತಂದೆಯ ಸ್ಥಿತಿ ಇದೆಯೋ ಅದೇ ರೀತಿ ಮಕ್ಕಳು ಸ್ಥಿತಿಯನ್ನೂ ಇಟ್ಟಿಕೊಳ್ಳಬೇಕಾಗಿದೆ.

ನಂತರ ನಾನು ಬಾಬಾರವರಿಗೆ ಹೇಳಿದೆನು – ಬಾಬಾ, ಎಲ್ಲಾ ಮಕ್ಕಳು ಹೇಳುತ್ತಾರೆ – ಒಂದುವೇಳೆ ನಾವೆಲ್ಲರೂ ಬಾಬಾರವರ ಮುಂದೆ ಇದ್ದಿದರೆ ಬಾಬಾರವರನ್ನು ತಡೆದು ನಿಲ್ಲಿಸುತ್ತಿದ್ದೆವು – ಎಂದು ಹೇಳಿದೆ. ಆಗ ಬಾಬಾ ಹೇಳಿದರು – "ಮಗು, ತಡೆದಿದ್ದರೆ – ಈ ಡ್ರಾಮಾ ಹೇಗೆ ಆಗುತ್ತಿತ್ತು?". ಆಗ ನಾನು "ಬಾಬಾ, ಈ ದೃಶ್ಯ ಈಗ ಕೃತಕ ಎನ್ನಿಸುತ್ತಿದೆ, ನಿಜವಾದ ಡ್ರಾಮಾ ಎನ್ನಿಸುತ್ತಿಲ್ಲ." ಎಂದು ಹೇಳಿದೆ. ಬಾಬಾ ಹೇಳಿದರು – "ಮಗು, ಈ ಸ್ನೇಹದ ಸಿಹಿಯಾದ ತಂತಿ ಜೋಡಿಸಿರುವುದರಿಂದ ನಿಮಗೆ ಅಂತ್ಯದವರೆಗೆ ಇದೇ ಅದ್ಭುತವು ಕಂಡು ಬರುತ್ತದೆ ಮತ್ತು ಇಲ್ಲಿಯವರೆವಿಗೂ ಸಂಬಂಧವಿತ್ತು. ಸಾಕಾರ ರಥವು ಹೋಗಿರಬಹುದು, ಆದರೆ ಬ್ರಹ್ಮಾರ ರೂಪದಲ್ಲಿ ಅವ್ಯಕ್ತ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. "ಬಾಬಾ ಹೇಳಿದರು – ನಾನೂ ಸಹ ಆಗಾಗ ಸಾಕಾರ ವತನಕ್ಕೆ ಹೊರಟುಹೋಗುತ್ತೇನೆ". ಆಗ ಶಿವಬಾಬಾರವರು "ಎಲ್ಲಿ ಕುಳಿತಿದ್ದೀಯ" ಎಂದು ಕೇಳುತ್ತಾರೆ. ಇಲ್ಲೇ ಕುಳಿತು ಸಾಕಾರ ವತನದಲ್ಲಿ ಮನೆ ಕಟ್ಟುತ್ತಿರುವ ಜಾಗದ ತನಕ ಹೋಗುತ್ತೇನೆ". ನಾನು, "ಬಾಬಾ ಇಲ್ಲಿ ಎಲ್ಲೆಡೆ ಓಡಾಡುತ್ತಿದ್ದಾರೆ ಎಂದು ಒಮ್ಮೊಮ್ಮೆ ಅನಿಸುತ್ತದೆ" ಎಂದು ಹೇಳಿದೆ. ಬಾಬಾ ಹೇಳಿದರು – "ನಾನು ಎಲ್ಲಡೆ ಸಂಚರಿಸುತ್ತೇನೆ" ಆಗ ಅದರ ಅನುಭವವು ಮಕ್ಕಳಿಗೆ ಆಗಿಯೇ ಆಗುತ್ತದೆ". ಅಂದರೆ ಆತ್ಮಿಕ ವಾರ್ತಾಲಾಪ ನಡೆಯುತ್ತಿತ್ತು.

ನಂತರ ಬಾಬಾರವರು ಒಂದು ದೃಶ್ಯವನ್ನು ತೋರಿಸಿದರು. ಒಂದು ಚಕ್ರದ ಒಳಗೆ ಬಹಳ ಚಕ್ರಗಳು ಕಾಣಿಸಿದವು. ಚಕ್ರದ ರಚನೆ ಹೇಗಿತ್ತೆಂದರೆ, ಆ ಚಕ್ರದಿಂದ ಹೊರಬರಲು ನಾಲ್ಕೈದು ರಸ್ತೆಗಳು ಕಾಣಿಸಿದವು, ಆದರೆ ಹೊರಬರಲಾಗಲಿಲ್ಲ. ಕೇವಲ ಬ್ರಹ್ಮಾಬಾಬಾರವರದ್ದನ್ನು ಮಾತ್ರವೇ ತೋರಿಸಿದರು – "ಚಕ್ರದಲ್ಲಿ ನಡೆಯುತ್ತಾ ನಡೆಯುತ್ತಾ ಪಾಯಿಂಟ್ (ಸೊನ್ನೆ) ಸ್ಥಾನದ ಬಳಿ ನಿಂತುಬಿಟ್ಟರು, ಹೊರಬರಲಿಲ್ಲ". ಬಾಬಾ ತಿಳಿಸಿದರು – ಇದು ಡ್ರಾಮಾದ ಬಂಧನವಾಗಿದೆ. ಬ್ರಹ್ಮಾ ಕೂಡ ಡ್ರಾಮಾದ ಚಕ್ರದಿಂದ ಹೊರಬರಲಾಗುವುದಿಲ್ಲ. ಡ್ರಾಮಾದ ಬಂಧನದಿಂದ ಯಾರೂ ಹೊರಬಲಾರರು. ಆ ಜೀರೋ ಪಾಯಿಂಟ್‌ನವರೆಗೆ ತಲುಪಿದರು, ಆದರೂ ಕೂಡ ಡ್ರಾಮಾದ ಸಿಹಿಯಾದ ಬಂಧನವಾಗಿದೆ. ಈ ಸಿಹಿಯಾದ ಬಂಧನವನ್ನು ಆಟದ ರೂಪದಲ್ಲಿ ತೋರಿಸಿದರು. ನಂತರ ಖರ್ಜೂರ, ಒಣದ್ರಾಕ್ಷಿ, ಬಾದಾಮಿ ತಿನ್ನಿಸಿದರು, ಬೀಳ್ಕೊಟ್ಟರು ಮತ್ತು "ಹೊರಡು ಮಗು, ಬಹಳ ಸಮಯವಾಗಿದೆ" ಎಂದು ಹೇಳಿದರು.

ಈ ದಿನ ವತನಕ್ಕೆ ಹೋದಾಗ ಯಾರೂ ಕಾಣಸಲಿಲ್ಲ. ದೂರದಿಂದ ಒಂದು ಧ್ವನಿಯು ಕೇಳುತ್ತಿತ್ತು. ಯಾವುದೋ ಮುಖ್ಯವಾದ ಕೆಲಸ ನಡೆಯುತ್ತಿರುವಂತೆ ತೋರುತ್ತಿತ್ತು. ನಾನು ಮೊದಲು ಸ್ವಲ್ಪ ನಿಂತೆ, ನಂತರ ಮುಂದೆ ಹೋಗಿ ಏನು ನೋಡಿದೆ ಎಂದರೆ – ಶಿವಬಾಬಾ, ಬ್ರಹ್ಮಾಬಾಬಾ, ಮಮ್ಮಾ ಮತ್ತು ವಿಶ್ವ ಕಿಶೋರ್ – ನಾಲ್ವರು ಪರಸ್ಪರದಲ್ಲಿ ಮಾತನಾಡುತ್ತಿದ್ದರು ಮತ್ತು ಬಹಳ ಯೋಜನೆಗಳ ನಕ್ಷೆಗಳು ಅವರ ಮುಂದೆ ಇಡಲ್ಪಟ್ಟಿದ್ದವು. ಅವುಗಳಲ್ಲಿ ಕೆಲವು ಗುರುತುಗಳು ಕಾಣಿಸುತ್ತಿದ್ದವು. ಮಮ್ಮಾರವರು ಎಲ್ಲಾ ಮಕ್ಕಳ ಸ್ಥಿತಿಗತಿಗಳನ್ನು ಕೇಳುತ್ತಿದ್ದರು. "ಮಮ್ಮಾ, ತಾವು ಬಾಬಾರವರನ್ನು

ಕರೆದುಕೊಂಡುಬಿಟ್ಟಿರಿ" ಎಂದು ನಾನು ಹೇಳಿದೆ. ಅದಕ್ಕೆ ಮಮ್ಮಾರವರು "ಮಕ್ಕಳು ತಂದೆ– ತಾಯಿಗಳ ಸಾಕಾರ ಜೊತೆಯಿಂದ ಅಗಲಿರುವುದು ಮಮ್ಮಾರವರಿಗೂ ಇಷ್ಟವಿಲ್ಲ, ಆದರೆ ಇದು ಡ್ರಾಮಾ!" ಎಂದು ಹೇಳಿದರು. ನಂತರ ನಾನು ಬ್ರಹ್ಮಾಬಾಬಾರವರನ್ನು "ಬಾಬಾ, ಈ ನಕ್ಷೆಗಳೆಲ್ಲಾ ಏನು?" ಎಂದು ಕೇಳಿದೆ. "ಮಗು, ಹೇಗೆ ಮಾರ್ಷಲ್‌ನ ಬಳಿ ಎಲ್ಲೆಲ್ಲಿ ಏನೇನು ನಡೆಯುತ್ತಿದೆ, ಮುಂದೇನು ಆಗಬೇಕು ಎಂಬ ನಕ್ಷೆ ಇರುತ್ತದೆಯೊ ಹಾಗೆಯೇ ಇಲ್ಲಿಯೂ ಸಹ ಸ್ಥಾಪನೆಯ ಕಾರ್ಯದ ಬಗ್ಗೆಯೇ ಮಾತುಕತೆ ನಡೆಯುತ್ತಿದೆ, ಅದೇನೆಂದು ಮುಂದೆ ತಿಳಿಸುತ್ತೇನೆ" ಎಂದು ಬಾಬಾ ಹೇಳಿದರು. **(18–01–1969)**

ಒಂದುವೇಳೆ ಬ್ರಹ್ಮಾಬಾಬಾರವರ ಜೊತೆ ಸ್ನೇಹವಿದೆ ಎಂದರೆ ಸ್ನೇಹದ ಗುರುತು ಏನಾಗಿದೆ? ಸ್ನೇಹ ಎಂದರೆ ಕೇವಲ ಎರಡು ಹನಿ ಕಣ್ಣೀರು ಸುರಿಸಿ ಬಿಡುವುದಲ್ಲ. ಯಾವ ವಸ್ತುವಿನ ಮೇಲೆ ಬಾಬಾರವರ ಸ್ನೇಹವಿತ್ತೋ ಅದೇ ವಸ್ತುವಿನ ಮೇಲೆ ತಮ್ಮ ಪ್ರೀತಿಯೂ ಇರುವುದಕ್ಕೆ ಸ್ನೇಹ ಎಂದು ಹೇಳಲಾಗುತ್ತದೆ. ಬಾಬಾರವರ ಸ್ನೇಹ ಸೇವೆಯಲ್ಲಿ ಇತ್ತು. ಕೊನೆಯಲ್ಲಿಯೂ ಸೇವೆಯ ರುಜುವಾತನ್ನು ತೋರಿಸಿದರು ಅಲ್ಲವೆ? ಆದ್ದರಿಂದ ಸೇವೆಯಲ್ಲಿ ಪ್ರೀತಿ, ಅವರ ಆಜ್ಞೆಗಳಲ್ಲಿ ಪ್ರೀತಿ ಇರುವುದನ್ನೇ ಸ್ನೇಹ ಎಂದು ಹೇಳಲಾಗುತ್ತದೆ. ಉಳಿದಂತೆ ಮಕ್ಕಳ ಅರಿವಿಗೆ ತರದೆ ನಮ್ಮಿಂದ ಬೀಳ್ಕೊಡುಗೆ ತೆಗೆದುಕೊಳ್ಳದೆ ಸಾಕಾರ ಬಾಬಾರವರನ್ನು ವತನಕ್ಕೆ ಏಕೆ ಕರೆಸಿಕೊಂಡರು ಎಂದು ಯಾರೂ ಹೀಗೆ ಭಾವಿಸಬಾರದು. ಆದರೆ ಬೀಳ್ಕೊಡಲು ಕೇಳಿದರೆ ತಾವು ಬಿಡುತ್ತಿದ್ದಿರಾ? ಡ್ರಾಮಾದಲ್ಲಿ ಮೊದಲೇ ಯಾರೆಲ್ಲಾ ಹೋದರೋ ಅವರು ಬೀಳ್ಕೊಡುಗೆ ಪಡೆದು ಹೋಗಲಿಲ್ಲವೆಂದು ನೋಡಿರುವಿರಿ. ಆದ್ದರಿಂದ ಡ್ರಾಮಾದಲ್ಲಿ ಬ್ರಾಹ್ಮಣ ಕುಲದ ಪದ್ಧತಿ ಇದೇ ಎಂದು ತಿಳಿದುಕೊಳ್ಳಿ. ಯಾವುದು ಡ್ರಾಮಾದಲ್ಲಿ ನಿಗದಿ ಯಾಗಿದೆಯೋ ಅದೇ ಪದ್ಧತಿ ಇಲ್ಲಿ ನಡೆಯಿತು. ನಮಗೆ ತಿಳಿದಿದೆ ತಮಗೆಲ್ಲಾ ಸಾಕಾರ ಬಾಬಾರವರೊಡನೆ ಬಹಳ ಪ್ರೀತಿ ಇತ್ತು ಎಂದು. ಇತ್ತು ಅಲ್ಲ, ಈಗಲೂ ಇದೆ. ಪ್ರೀತಿ ಇಲ್ಲದಿದ್ದರೆ ಈ ಸಭೆಯಲ್ಲಿ ಹೇಗೆ ಇರುತ್ತಿದ್ದಿರಿ? ಸಾಕಾರದಲ್ಲಿ ಅನುಕರಣೆ ಮಾಡಲು ಇವರದೇ ಶರೀರವಿತ್ತು, ಹಾಗಾಗಿ ಪ್ರೀತಿ ಏಕೆ ಇರುವುದಿಲ್ಲ? ಸ್ನೇಹವಿತ್ತು ಮತ್ತು ಈಗಲೂ ಇದೆ. ಇದು ತಂದೆ ಮಕ್ಕಳ ಗುರುತಾಗಿದೆ. ಆದ್ದರಿಂದಲೇ ಸಾಕಾರಬಾಬಾರವರು ಸಹ ವತನದಲ್ಲಿ ಮುಗುಳ್ನಗುತ್ತಿದ್ದಾರೆ. ಮಕ್ಕಳಿಗೆ ಸ್ನೇಹವಿದೆ ಎಂದ ಮೇಲೆ ನನಗೆ ಸ್ನೇಹವಿಲ್ಲವೇ? ಆದರೆ ಡ್ರಾಮಾದಲ್ಲಿ ಯಾವ ಪಾತ್ರವಿದೆಯೋ ಅದು ಕಲ್ಯಾಣಕಾರಿಯಾಗಿದೆ ಎಂದು ಬಾಬಾರವರಿಗೆ ಗೊತ್ತಿದೆ. ಅವರು ವಿಚಲಿತರಾಗುವುದಿಲ್ಲ, ಅವರು ಸಂಪೂರ್ಣ ಅಚಲ, ಅಡೋಲ, ಸ್ಥಿರವಾಗಿದ್ದರು ಮತ್ತು ಈಗಲೂ ಇದ್ದಾರೆ. ಆದರೆ ಮಕ್ಕಳಾದ ತಮಗಿಂತಲೂ ಸಾವಿರ ಪಟ್ಟು ಹೆಚ್ಚಿನ ಸ್ನೇಹವು ಬಾಬಾರವರಲ್ಲಿದೆ. ಈಗ ಸ್ನೇಹದ ರುಜುವಾತನ್ನು ಕೊಡಬೇಕಾಗಿದೆ. ಇದು ಕೂಡ ಒಂದು ಮುಚ್ಚಿಟ್ಟುಕೊಳ್ಳುವ ಆಟವಾಗಿದೆ. ಆದ್ದರಿಂದ ವಿಚಾರ ಸಾಗರ ಮಂಥನ ಮಾಡಿರಿ, ಏರುಪೇರಿನ ಮಂಥನ ಮಾಡಬೇಡಿ. ಯಾವ ಶಕ್ತಿಯನ್ನು ಪಡೆದಿದ್ದೀರೋ ಅದನ್ನು ಪ್ರತ್ಯಕ್ಷತೆಯಲ್ಲಿ ತನ್ನಿ. "ಭಾರತ ಮಾತೆಯು ಶಕ್ತಿಯ ಅವತಾರ" ಎಂಬುದೇ ಅಂತ್ಯದ ಸ್ಲೋಗನ್ ಆಗಿದೆ (ಉದ್ಘೋಷವಾಗಿದೆ). "ಮಗ ತಂದೆಯನ್ನು ಪ್ರತ್ಯಕ್ಷಪಡಿಸುತ್ತಾನೆ". ಡ್ರಾಮಾದ ನಿಗದಿಯು ಮಾಡಿಸುತ್ತದೆ. ಸಾಕಾರ ಬಾಬಾ ಹೇಳಿದ್ದಾರೆ – ನಾನು ಮಕ್ಕಳ ಜೊತೆ ಮಿಲನ ಮಾಡಲು ಬರುತ್ತೇನೆ. ಒಂದುವೇಳೆ ಈ ದಿನ ಬಂದಿದ್ದರೆ ಮಕ್ಕಳು ಕಂಬನಿ ಹರಿಸುತ್ತಿದ್ದರು. **(21–1–1969)**

ಬಾಪ್‌ದಾದಾರವರು ಹೇಳಿದರು – ಈ ಆಟವನ್ನು ತಂದೆಯು ಪ್ರಾಕ್ಟಿಕಲ್ ಆಗಿ ರಚಿಸಿದ್ದಾರೆ. ಯಾವ ಮಕ್ಕಳ ಜೀವನ ರೂಪೀ ದೋಣಿಯು ತಂದೆಯ ಜೊತೆಯಲ್ಲಿರುತ್ತದೋ, ಅದು ಅಲುಗಾಡುವುದಿಲ್ಲ. ಈಗ ನೀವು ಪರೀಕ್ಷೆಗಳೆಂಬ ಸಾಗರದ ನಡುವೆ ನಡೆಯುತ್ತಿದ್ದೀರಿ. ಆದ್ದರಿಂದ ಯಾರ ಸಂಪರ್ಕ ಅಂದರೆ ಯಾರ ಕೈ ಬಾಪ್‌ದಾದಾರವರ ಕೈಯಲ್ಲಿದೆಯೋ ಅವರ ಈ ಜೀವನ ರೂಪೀ ದೋಣಿಯು ಅಲುಗಾಡುವುದೂ ಇಲ್ಲ, ಮುಳುಗುವುದೂ ಇಲ್ಲ. ಮಕ್ಕಳಾದ ನೀವು ಇದನ್ನು ಡ್ರಾಮಾದಲ್ಲಿ ಒಂದು ಆಟವೆಂದು ಭಾವಿಸಿ ನಡೆದದ್ದೇ ಆದರೆ ಹೆದರುವುದಿಲ್ಲ. ಮತ್ತು ಯಾರ ಬುದ್ಧಿ ರೂಪೀ ಕೈ (ಹಾಥ್) ಮತ್ತು ಜೊತೆ (ಸಾಥ್) ಸಡಿಲವಾಗಿರುತ್ತದೆಯೋ ಅವರು ಅಲುಗಾಡುತ್ತಿರುತ್ತಾರೆ. ಆದ್ದರಿಂದ ಮಕ್ಕಳು ಬುದ್ಧಿ ರೂಪೀ ಕೈಯನ್ನು ದೃಢವಾಗಿ ಇಟ್ಟುಕೊಳ್ಳುವ ಬಗ್ಗೆ ವಿಶೇಷ ಗಮನವನ್ನಿಡಬೇಕು. **(22–01–1969)**

ಈ ದಿನ ನಾನು ಮಕ್ಕಳಾದ ತಮ್ಮನ್ನೆಲ್ಲಾ ಅವ್ಯಕ್ತ ರೂಪದಲ್ಲಿ ಮಿಲನ ಮಾಡಲು ಬಂದಿದ್ದೇನೆ. ಯಾವ ನನ್ನ ಮಕ್ಕಳು ಅವ್ಯಕ್ತ ರೂಪದಲ್ಲಿ ಸ್ಥಿತರಾಗಿರುತ್ತಾರೋ ಅವರೇ ಇದನ್ನು ತಿಳಿಯಬಲ್ಲವರಾಗಿದ್ದಾರೆ. ತಾವೆಲ್ಲಾ ಮಕ್ಕಳು ಅವ್ಯಕ್ತ ರೂಪದಲ್ಲಿ ಸ್ಥಿತರಾಗಿ ಯಾರನ್ನು ನೋಡುತ್ತಿದ್ದೀರಿ? ತಾವು ವ್ಯಕ್ತ ರೂಪದಲ್ಲೋ ಅಥವಾ ಅವ್ಯಕ್ತ ರೂಪದಲ್ಲೋ? ವ್ಯಕ್ತದಲ್ಲಿದ್ದೀರಾ ಅಥವಾ ಅವ್ಯಕ್ತ ರೂಪದಲ್ಲಿದ್ದೀರಾ? ಒಂದುವೇಳೆ

ವ್ಯಕ್ತದಲ್ಲಿ ನೋಡುವಿರಾದರೆ ತಂದೆಯನ್ನು ನೋಡಲಾರಿರಿ. ಇಂದು ಅವ್ಯಕ್ತ ವತನದಿಂದ ತಮ್ಮನ್ನು ಭೇಟಿಮಾಡಲು ಬಂದಿದ್ದೇನೆ. ಅವ್ಯಕ್ತ ವತನದಲ್ಲಿ ಶಬ್ದವಿರುವುದಿಲ್ಲ. ಆದರೆ ಇಲ್ಲಿ ಶಬ್ದದಲ್ಲಿ ಬಂದಿದ್ದೇನೆ. ತಾವೆಲ್ಲಾ ಮಕ್ಕಳ ಒಳಗೆ ಯಾವ ಸಂಕಲ್ಪ ನಡೆಯುತ್ತಿದೆ? ಈಗ ಇದು ಅವ್ಯಕ್ತ ಭೇಟಿಯಾಗಿದೆ. ಹೇಗೆ ಕಲ್ಪದ ಪೂರ್ವದಲ್ಲಿ ನಡೆದಂತೆಯೇ, ಮಕ್ಕಳೊಂದಿಗೆ ಆತ್ಮಿಕ ವಾರ್ತಾಲಾಪ ನಡೆಯುತ್ತಿದೆ. ಆತ್ಮಿಕ ವಾರ್ತಾಲಾಪ ಮಾಡಲು ಮಧುರ ಮಧುರರಾದ ತಂದೆಯು, ತಾವೆಲ್ಲಾ ಮಕ್ಕಳೊಂದಿಗೆ ಮಿಲನ ಮಾಡಲು ಕಳುಹಿಸಿದ್ದಾರೆ. ಯಾರಿದ್ದರೋ ಅವರು ಈಗಲೂ ಇದ್ದಾರೆ. ಎರಡು–ಮೂರು ದಿನ ಮೊದಲು ಮಧುರ ಮಧುರಾತಿ ತಂದೆಯೊಡನೆ ಆತ್ಮಿಕ ಸಂಭಾಷಣೆ ನಡೆದಿತ್ತು. ಯಾವ ವಿಷಯದ ಬಗ್ಗೆ ಆತ್ಮಿಕ ಸಂಭಾಷಣೆ ನಡೆಯುತ್ತಿತ್ತು ಗೊತ್ತಿದೆಯೇ? ಬಾಬಾರವರು ಹೇಳಿದರು – "ವತನದ ಅನುಭವ ಮಾಡಲು ತಯಾರಾಗಿದ್ದೀರಾ?" ಏನು ಉತ್ತರ ಕೊಟ್ಟಿರಬಹುದು? "ತಂದೆಯ ಆಜ್ಞೆ ಏನಿದೆಯೋ ಹಾಗೆಯೇ ನಡೆಯುತ್ತೇವೆ, ಹೇಗೆ ನಡೆಸುತ್ತಾರೋ, ಎಲ್ಲಿ ಕೂರಿಸುತ್ತಾರೋ, ಯಾವ ರೂಪದಲ್ಲಿ ಕೂರಿಸುತ್ತಾರೋ ಹಾಗೆಯೇ ಕುಳಿತುಕೊಳ್ಳುತ್ತೇವೆ" ಎಂದು ಮಕ್ಕಳು ಉತ್ತರಿಸಿದರು. ಮಕ್ಕಳ ಮನಸ್ಸಿನಲ್ಲಿ 'ಬಾಪ್‌ದಾದಾರವರು ಬೀಳ್ಕೊಡುಗೆ ಏಕೆ ತೆಗೆದುಕೊಳ್ಳಲಿಲ್ಲ?' ಎಂಬ ಸಂಕಲ್ಪವಿರಬಹುದು. ತಂದೆಯವರಿಗೂ ಇದನ್ನೇ ಹೇಳಿದರು. ಬಾಬಾ ಹೇಳಿದರು – ಒಂದುವೇಳೆ ಎಲ್ಲಾ ಮಕ್ಕಳನ್ನು ಒಂದೆಡೆ ಸೇರಿಸಿ ಬೀಳ್ಕೊಡಲು ಹೇಳಿದರೆ ಬೀಳ್ಕೊಡುವಿರೇನು? ಬ್ರಹ್ಮಾಬಾಬಾರವರು ಸಹ ಮಕ್ಕಳನ್ನು ನೋಡಿ, ಸೇವೆಯನ್ನು ನೋಡಿ, ಸ್ನೇಹದಲ್ಲಿ ಬಂದುಬಿಡುತ್ತಾರೆ. ಆದ್ದರಿಂದ ಬಾಬಾರವರು ಏನು ಮಾಡಿಸಿದರೋ ಅದೇ ಡ್ರಾಮಾದಲ್ಲಿ ನಿಶ್ಚಿತವಾಗಿದೆ. ವ್ಯಕ್ತ ರೂಪದಲ್ಲಿ ಇಲ್ಲ, ಆದರೆ ಅವ್ಯಕ್ತ ರೂಪದಲ್ಲಿ ಭೇಟಿ ಮಾಡುತ್ತಲೇ ಇದ್ದೇನೆ. ಸೇವೆಯಲ್ಲಿ ವೃದ್ಧಿ ಹಾಗೆಯೇ ಇದೆ, ಮಕ್ಕಳ ನೆನಪು ಹಾಗೆಯೇ ಇದೆ. ಆದರೆ ವ್ಯತ್ಯಾಸವೇನೆಂದರೆ ಅವರು ವ್ಯಕ್ತದಲ್ಲಿದ್ದೂ ಅವ್ಯಕ್ತರಾಗಿದ್ದರು. ಮತ್ತು ಈಗ ಅವ್ಯಕ್ತರೇ ಆಗಿದ್ದಾರೆ.

**(ಬೀಳ್ಕೊಡುವ ಸಮಯದಲ್ಲಿ)**

'ಯಾವುದು ಡ್ರಾಮಾದ ಪಾತ್ರವಿದೆಯೋ, ಇದರಲ್ಲಿ ಯಾವುದೋ ಗುಪ್ತ ರಹಸ್ಯ ತುಂಬಿಕೊಂಡಿದೆ' ಎಂಬುದು ಮಕ್ಕಳಿಗೆ ಗೊತ್ತೇ ಇದೆ. ಯಾವ ರಹಸ್ಯ ತುಂಬಿದೆ ಎಂಬುದನ್ನು ಸಮಯಾನುಸಾರ ತಿಳಿಸುತ್ತಾ ಹೋಗುತ್ತೇನೆ. ಈಗಂತೂ ಯಾವುದು ಆಕಾಶದಲ್ಲಿ ಮಿನುಗುತ್ತಿದೆಯೋ ಅದೇ ತಮ್ಮ ನೆನಪಿನ ಗುರುತಾಗಿದೆ. ಈ ಧರಣಿಯ ತಾರೆಗಳು ಯಾರ ಶ್ರೀಮತದಂತೆ ನಡೆಯುತ್ತಿದ್ದಾರೆ ಎಂದು ಪ್ರಪಂಚದವರು ಈ ಕಣ್ಣುಗಳಿಂದ ನೋಡುತ್ತಾರೆ ಮತ್ತು ಭಾವಿಸುತ್ತಾರೆ. ಬಾಬಾ ಹೇಳಿದರು – "ಹೆಚ್ಚು ಸಮಯದವರೆಗೆ ಅಲ್ಲಿ ಕುಳಿತುಕೊಳ್ಳಬಾರದು" ಎಂದು. **(23–01–1969)**

ಸಮರ್ಪಣೆಯಂತೂ ಆಗಿದ್ದೀರಿ ಆದರೆ ಈಗ ಸಮರ್ಪಣೆಯ ಸ್ಥಿತಿಯು ಉನ್ನತವಾಗಿದೆ. ಯಾರು ಶ್ವಾಸ ಶ್ವಾಸದಲ್ಲಿ ಬಾಬಾರವರ ಸ್ಮೃತಿಯಲ್ಲಿರುತ್ತಾರೋ ಅವರಿಗೇ ಸಮರ್ಪಿತರು ಎಂದು ಹೇಳಬಹುದು. ಒಂದು ಶ್ವಾಸವೂ ವಿಸ್ಮೃತಿಯಿಂದ ಕೂಡಿರಬಾರದು. ಪ್ರತಿಯೊಂದು ಶ್ವಾಸದಲ್ಲೂ ಸ್ಮೃತಿ ಇರುವವರ ಗುರುತೇನಾಗಿದೆ? ಅವರ ಮುಖದಲ್ಲಿ ಏನು ಕಾಣಿಸುತ್ತದೆ? ತಿಳಿದಿದೆಯೆ? (ಹರ್ಷಿತಮುಖಿ). ಹರ್ಷಿತಮುಖತೆಯಲ್ಲದೆ ಮತ್ತೇನಾದರು ಇರುತ್ತದೆಯೇ? ಯಾರು ಎಷ್ಟು ಸಹನಶೀಲರಾಗಿರುತ್ತಾರೋ ಅವರಲ್ಲಿ ಅಷ್ಟೇ ಶಕ್ತಿಯು ಹೆಚ್ಚುತ್ತದೆ. ಯಾರು ಶ್ವಾಸ ಶ್ವಾಸದಲ್ಲೂ ಸ್ಮೃತಿಯಲ್ಲಿರುತ್ತಾರೆಯೋ ಅವರಲ್ಲಿ ಸಹನಶೀಲತೆಯ ಗುಣ ಅವಶ್ಯಕವಾಗಿರುತ್ತದೆ. ಮತ್ತು ಸಹನಶೀಲರಾಗಿರುವ ಕಾರಣ – ಒಂದು ಹರ್ಷಿತರಾಗಿರುತ್ತಾರೆ ಮತ್ತು ಎರಡನೆಯದು ಶಕ್ತಿಯು ಗೋಚರವಾಗಿರುತ್ತದೆ. ಅವರ ಮುಖದಲ್ಲಿ ನಿರ್ಬಲತೆ ಇರುವುದಿಲ್ಲ. ಆಗಾಗ ಬಾಯಿಯಿಂದ ಹೇಗೆ ಮಾಡುವುದು? ಏನಾಗುವುದೋ? ಇತ್ಯಾದಿ ನಿರ್ಬಲತೆಯ ಯಾವ ಶಬ್ದಗಳು ಹೊರಡುತ್ತವೆಯೋ ಇಂತಹ ಶಬ್ದಗಳು ಬರಬಾರದು. ಯಾವಾಗ ಮನಸ್ಸಿನಲ್ಲಿ ಹುಟ್ಟುತ್ತದೆಯೋ ಆಗ ಬಾಯಿಂದಲೂ ಬರುತ್ತದೆ. ಆದರೆ ಮನಸ್ಸಿನಲ್ಲೂ ಬರಬಾರದು. ಮನ್ಮನಾಭವ, ಮದ್ಯಾಜೀ ಭವ! ಮನ್ಮನಾಭವದ ಅರ್ಥ ಬಹಳ ಗುಹ್ಯವಾಗಿದೆ. ಹೇಗೆ ಡ್ರಾಮಾದ ಪ್ರತಿ ಕ್ಷಣವೂ ಯಾವ ರೀತಿ ಚಲಿಸುತ್ತದೆಯೋ, ಅದರ ಜೊತೆ ಜೊತೆಯಲ್ಲಿ ಮನಸ್ಸಿನ ಸ್ಥಿತಿಯೂ ಸಹ ಡ್ರಾಮಾದ ಕಂಬಿಯ ಮೇಲೆ ಸರಿಯಾಗಿ ನಡೆಯುತ್ತಿರಬೇಕು. ಸ್ವಲ್ಪವೂ ಅತ್ತಿತ್ತ ಅಲುಗಬಾರದು. ಸಂಕಲ್ಪದಲ್ಲಿಯಾಗಲೀ, ವಾಣಿಯಲ್ಲಿಯಾಗಲೀ ಇಂತಹ ಸ್ಥಿತಿ ಇರಬೇಕು. ಡ್ರಾಮಾದ ಪಥದಲ್ಲೇ ನಡೆಯುತ್ತಿರಬೇಕು. ಆದರೆ ಆಗಾಗ ನಿಂತುಬಿಡುತ್ತೀರಿ, ಮುಖ ಸಪ್ಪೆಯಾಗುತ್ತದೆ. ಮನಸ್ಸಿನ ಸ್ಥಿತಿ ಅಲುಗಾಡುತ್ತದೆ. ಮತ್ತೆ ನೀವು ಪಥವನ್ನು ಹಿಡಿಯುತ್ತೀರ. ಆದರೆ ಇದೂ ಸಹ ಒಂದು ಮಚ್ಚೆಯಾಗಿ ಉಳಿಯುತ್ತದೆ.

ಆದರೂ ಸಹ ಯಾವ ಒಂದು ಮಾತು ಕೇವಲ ವಾಣಿಯವರೆಗೆ ಬಂದಿದೆ, ಆದರೆ ಕಾರ್ಯದಲ್ಲಿ ಬಂದಿಲ್ಲ, ಯಾವ ಮಾತು ವಾಣಿಯವರೆಗೆ ಬಂದಿದೆ, ಪ್ರತ್ಯಕ್ಷದಲ್ಲಿ ಬಂದಿಲ್ಲ. ಇದೇ ಡ್ರಾಮಾದ ಕವಚವಾಗಿದೆ. ಇದರ ಬಗ್ಗೆ ತಿಳಿಸಲಾಯಿತು. **(25–01–1969)**

ಈಗ ಎಲ್ಲರ ಮನಸ್ಸಿನಲ್ಲಿ ಬೇಗ ಬೇಗ ಡ್ರಾಮಾದ ದೃಶ್ಯವು ಮುಗಿದುಹೋಗಲಿ ಎಂಬ ಇದೇ ಸಂಕಲ್ಪವಿದೆ. ಆದರೆ ಅದು ಬೇಗ ಆಗುವುದೇ? ಆಗಲು ಸಾಧ್ಯವೇ? ಆಗುವುದೋ ಅಥವಾ ಆಗಬಹುದೋ? ಭವಿಷ್ಯವು ಯಾವುದು ರೂಪಿಸಲ್ಪಟ್ಟಿದೆಯೋ ಅದು ಹಾಗೆಯೇ ಇರುತ್ತದೆ. ಆದರೆ ಮಾಡಲ್ಪಟ್ಟಿರುವ ಭವಿಷ್ಯದಲ್ಲಿ ಹೀಗೆ ಕಾಣಿಸುತ್ತದೆ – ಒಂದುವೇಳೆ ಕಲ್ಪದ ಹಿಂದಿನಂತೆಯೇ ಸಂಕಲ್ಪದ ಜೊತೆ ಜೊತೆಯಲ್ಲಿ ಪುರುಷಾರ್ಥವನ್ನು ತೀವ್ರ ಮಾಡಿಕೊಂಡಿದ್ದರೆ, ಆಗ ಡ್ರಾಮಾದ ದೃಶ್ಯಗಳನ್ನು ಬೇಗನೆ ಪೂರ್ಣಗೊಳಿಸಿ ಎಲ್ಲರೂ ಅವ್ಯಕ್ತವತನ ವಾಸಿಗಳಾಗೋಣ ಎಂಬ ಸಂಕಲ್ಪವು ಬರುತ್ತದೆ. ಹಾಗೆ ಆಗಲೇಬೇಕಾಗಿದೆ.

ಅನೇಕ ಮಕ್ಕಳ ಮನಸ್ಸಿನಲ್ಲಿ "ಬಾಪ್‌ದಾದಾರವರು ಎಲ್ಲರನ್ನೂ ಜೊತೆಯಲ್ಲಿ ಕರೆದೊಯ್ಯುವೆ ಎಂದು ಹೇಳುತ್ತಿದ್ದರು, ಆದರೆ ಈಗ ಅವರೇ ಹೊರಟು ಹೋಗಿದ್ದಾರೆ" ಎಂಬ ಪ್ರಶ್ನೆ ಇದೆ. ಆದರೆ ಬಾಬಾರವರು ಹೊರಟು ಹೋಗಿರುವರೇ? ದಿಬ್ಬಣ (ಬರಾತ್) ಹಾಗೂ ಮಕ್ಕಳು (ಬಚ್ಚೇ) ಇಲ್ಲದೆ ಮುಕ್ತಿಧಾಮಕ್ಕೆ ಹೋಗಲು ಆಗುವುದಿಲ್ಲ. ದಿಬ್ಬಣವಿಲ್ಲದೆ ಒಬ್ಬರೇ ಹೋಗಲು ಸಾಧ್ಯವೇ? ದಿಬ್ಬಣ ಸಿದ್ಧವಾಗಿದೆಯೆ? ಇಲ್ಲಿಯವರೆಗೆ ದಿಬ್ಬಣದ ಜೊತೆಯಲ್ಲೇ ಹೋಗುವೆವೆಂದು ಕೇಳಿದ್ದೀರಿ. ಆದ್ದರಿಂದ ದಿಬ್ಬಣವು ಸಿದ್ಧವಾಗುತ್ತಿರುವಾಗ ಒಬ್ಬರೇ ಹೇಗೆ ಹೋಗುತ್ತಾರೆ? ಸದ್ಯಕ್ಕಂತೂ ಸೂಕ್ಷ್ಮವತನದಲ್ಲಿಯೇ ಅವ್ಯಕ್ತ ರೂಪದಲ್ಲಿ ಸ್ಥಾಪನೆಯ ಕಾರ್ಯ ನಡೆಯುತ್ತಿದೆ. ಎಲ್ಲಿಯವರೆಗೆ ಸ್ಥಾಪನೆಯ ಕಾರ್ಯ ಮುಗಿಯುವುದಿಲ್ಲವೋ ಅಲ್ಲಿಯವರೆಗೆ ಕಾರ್ಯವನ್ನು ಪೂರ್ಣ ಮಾಡದೆ ಮನೆಗೆ ಹಿಂದಿರುಗುವುದಿಲ್ಲ. ಜೊತೆಯಲ್ಲೇ ಹೋಗುತ್ತೇವೆ ಮತ್ತು ಹೋದನಂತರ ಏನು ಮಾಡುತ್ತೀರಾ? ಗೊತ್ತಿದೆಯೇ? ಏನು ಮಾಡುತ್ತೇವೆ? ಜೊತೆಯಲ್ಲಿ ಹೋಗುತ್ತೇವೆ ಮತ್ತು ಜೊತೆಯಲ್ಲೇ ಇರುತ್ತೇವೆ ಮತ್ತು ಜೊತೆ ಜೊತೆಯಲ್ಲಿ ಸೃಷ್ಟಿಯ ಮೇಲೆ ಬರುತ್ತೇವೆ. ಎಂದಿಗೂ ಕೈ ಮತ್ತು ಜೊತೆಯನ್ನು ಬಿಡುವುದಿಲ್ಲವೆಂದು ಮಕ್ಕಳಾದ ನಿಮ್ಮ ಗಾಯನವಿದೆ. ಮಕ್ಕಳದೂ ಪ್ರತಿಜ್ಞೆಯಿದೆ ಮತ್ತು ತಂದೆಯವರದೂ ಪ್ರತಿಜ್ಞೆಯಿದೆ. ತಂದೆಯವರು ತಮ್ಮ ಪ್ರತಿಜ್ಞೆಯನ್ನು ಬದಲಾಯಿಸುವುದಿಲ್ಲ. ಬೇರೇನಾದರೂ ಪ್ರಶ್ನೆ ಇದೆಯೆ? ಸಮಯ ಸಮಯಕ್ಕೆ ಎಲ್ಲವೂ ಸ್ಪಷ್ಟವಾಗುತ್ತಾ ಹೋಗುತ್ತದೆ. ಕೆಲವರ ಮನದಲ್ಲಿ ಜನ್ಮವಾಗುವುದೋ ಇಲ್ಲವೋ ಎಂಬ ಪ್ರಶ್ನೆಯು ಇದೆ. ಜನ್ಮವಾಗುವುದಾ? ಹೇಗೆ ನಿಮ್ಮ ಮಮ್ಮಾರವರ ಜನ್ಮವಾಯಿತೋ ಅದೇ ರೀತಿ ಮತ್ತೆ ಜನ್ಮವಾಗುವುದೇ? ಮಕ್ಕಳಾದ ತಮ್ಮ ವಿವೇಕ ಏನು ಹೇಳುತ್ತದೆ? ಡ್ರಾಮಾದ ನಿಶ್ಚಿತತೆಯನ್ನು ನೋಡಬಲ್ಲಿರಾ? ಸ್ವಲ್ಪ ಸ್ವಲ್ಪ ನೋಡಬಲ್ಲಿರಾ? ತಾವು ಎಲ್ಲರಿಗೂ "ನಾವು ತ್ರಿಕಾಲದರ್ಶಿ ತಂದೆಯ ಮಕ್ಕಳು" ಎಂದು ಹೇಳುತ್ತೀರಿ. ಹಾಗಾದರೆ ಮುಂದೆ ಬರುವ ಸಮಯವನ್ನು ತಿಳಿಯಲಾರಿರೇನು? ನಿಮ್ಮ ಮನಸ್ಸಿನ ವಿವೇಕದ ಅನುಸಾರ ಏನಾಗ ಬೇಕಾಗಿದೆ? ಅವ್ಯಕ್ತ ಸ್ಥಿತಿಯಲ್ಲಿ ಕುಳಿತು 'ಹೌದು' ಅಥವಾ 'ಅಲ್ಲ' ಎಂದು ಹೇಳಿರಿ, ಆಗ ಉತ್ತರ ಸಿಗುತ್ತದೆ (ಈ ರೀತಿ ಬಾಪ್‌ದಾದಾರವರು ನಾಲ್ಕಾರು ಜನರನ್ನು ಕೇಳಿದರು) ಬಹಳ ಜನರ ವಿಚಾರ 'ಆಗುವುದಿಲ್ಲ' ಎಂದು ಇತ್ತು. ಈ ದಿನವೇ ಉತ್ತರ ಬಯಸುವಿರೋ ಅಥವಾ ನಂತರವೋ? ಏರುಪೇರಂತೂ ಆಗುತ್ತಿಲ್ಲ ಅಲ್ಲವೇ? ಈ ಒಂದು ಆಟವನ್ನು ರಚಿಸಲಾಗುತ್ತದೆ. ಚಿಕ್ಕ ಚಿಕ್ಕ ಮಕ್ಕಳು ಕೊಳದಲ್ಲಿ ಕಲ್ಲು ಎಸೆದು ಅದರ ಅಲೆಗಳ ಜೊತೆ ಆಟವಾಡುತ್ತಾರೆ. ಅದೇ ರೀತಿ ಇದು ಒಂದು ಆಟವಾಗಿದೆ. ತಂದೆಯು ನಿಮ್ಮೆಲ್ಲರ ವಿಚಾರ ಸಾಗರದಲ್ಲಿ ಪ್ರಶ್ನೆಗಳ ಕಲ್ಲನ್ನು ಎಸೆದು ನಿಮ್ಮ ಬುದ್ಧೀ ರೂಪೀ ಸಾಗರದಲ್ಲಿ ಅಲೆಗಳನ್ನು ಉತ್ಪನ್ನ ಮಾಡುತ್ತಿದ್ದಾರೆ. ಅದೇ ಅಲೆಗಳ ಆಟವನ್ನು ಬಾಪ್‌ದಾದಾ ನೋಡುತ್ತಿದ್ದಾರೆ. ಈಗ ತಮ್ಮೆಲ್ಲರ ಜೊತೆಯಲ್ಲೇ ಅವ್ಯಕ್ತ ರೂಪದಲ್ಲಿ ಸ್ಥಾಪನೆಯ ಕಾರ್ಯದಲ್ಲಿ ತೊಡಗಿರುತ್ತೇನೆ. ಎಲ್ಲಿಯವರೆಗೆ ಸ್ಥಾಪನೆಯ ಪಾತ್ರವಿದೆಯೋ, ಅಲ್ಲಿಯವರೆಗೆ ಅವ್ಯಕ್ತ ರೂಪದಲ್ಲಿ ತಮ್ಮೆಲ್ಲರ ಜೊತೆಯಲ್ಲಿ ಇದ್ದಾರೆ, ಇರುತ್ತಾರೆ. ತಿಳಿಯಿತೆ?

ಸ್ನೇಹವನ್ನು ನೋಡಿದಾಗ ಡ್ರಾಮಾದ ನೆನಪಾಗುತ್ತದೆ. ಡ್ರಾಮಾದ ನೆನಪಾದಾಗ ನಿಶ್ಶಬ್ದರಾಗುತ್ತಾರೆ. ಸ್ನೇಹದಲ್ಲಿ ಬಂದಾಗ ಯಾವ ಸ್ಥಿತಿ ಇರುತ್ತದೆ? ನದಿಯಾಗುತ್ತಾರೆ. ಆದರೆ ಅಲ್ಲ. ಇದೂ ಡ್ರಾಮಾ. ಯಾವ ಕರ್ಮ ನಾವು ಮಾಡುತ್ತೇವೋ ಅದನ್ನೆ ಎಲ್ಲರೂ ಮಾಡುತ್ತಾರೆ ಆದ್ದರಿಂದ ನಿಶ್ಶಬ್ದರಾಗಿರಿ. ಒಂದುವೇಳೆ ಎಲ್ಲರೂ ಜೊತೆಯಲ್ಲಿದ್ದರೆ ಯಾವ ಅಂತಿಮ ಸಮಯದ ಕರ್ಮಾತೀತ ಅವಸ್ಥೆಯ ಅನುಭವವಿದೆಯೋ ಅದು ಡ್ರಾಮಾದ ಅನುಸಾರ ಬೇರೇನೋ ಆಗಿರುತ್ತಿತ್ತು. ಆದರೆ ಇದ್ದುದ್ದೇ ಹೀಗೆ – ಆದ್ದರಿಂದ ಸ್ವಲ್ಪ ಜನರು ಮಾತ್ರ ಎದುರಿಗಿದ್ದರು. ಎದುರಿಗೆ ಇದ್ದರೂ ಇಲ್ಲದಂತಿದ್ದರು. ಸ್ನೇಹವು ವತನದಲ್ಲಿಯೂ ಇದೆ ಮತ್ತು ಇರುತ್ತದೆ. ಅವಿನಾಶಿಯಾಗಿದೆಯಲ್ಲವೇ? ಆದರೆ ಸ್ನೇಹವನ್ನು ಡ್ರಾಮಾ

ಸೈಲೆನ್ಸ್‌ನಲ್ಲಿ ಕರೆತರುತ್ತದೆ ಎಂದು ಹೇಳಿದೆನಲ್ಲವೇ? ಹಾಗೂ ಇದೇ ನಿಶ್ಶಬ್ದತೆಯು ಶಕ್ತಿಯನ್ನು ತರುತ್ತದೆ ಮತ್ತೆ ಅಲ್ಲಿ ಸಾಕಾರದಲ್ಲಿ ಮಿಲನವಾಗುವುದು ಈಗ ಅವ್ಯಕ್ತ ರೂಪದಲ್ಲಿ ಮಿಲನ ಮಾಡುತ್ತೇವೆ ನಂತರ ಸಾಕಾರ ರೂಪದಲ್ಲಿ ಸತ್ಯಯುಗದಲ್ಲಿ ಮಿಲನಮಾಡುತ್ತೇವೆ. ಆ ದೃಶ್ಯವಂತೂ ನೆನಪಿಗೆ ಬರುತ್ತದೆಯಲ್ಲವೇ? ಆಟವಾಡುತ್ತೇವೆ, ಪಾಠಶಾಲೆಗೆ ಬರುತ್ತೇವೆ, ಮಿಲನ ಮಾಡುತ್ತೇವೆ. ಕಣ್ಮಣಿಗಳಾದ ತಾವು ಸತ್ಯಯುಗದ ದೃಶ್ಯಗಳನ್ನು ವತನದಲ್ಲಿ ಆಗಾಗ ನೋಡುತ್ತಿರುತ್ತೀರಿ. ಯಾವುದನ್ನು ತಂದೆ ನೋಡುತ್ತಾರೋ ಅದನ್ನು ಮಕ್ಕಳು ಸಹ ನೋಡುತ್ತಿರುತ್ತಾರೆ ಮತ್ತು ನೋಡುತ್ತಾ ಹೋಗುತ್ತಾರೆ. **(02–02–1969)**

ಇದಂತೂ ಈಗ ವಿದ್ಯಾಭ್ಯಾಸದ ಸಮಯವಾಗಿದೆ. ತಂದೆಯು ತಮ್ಮ ಕರ್ತವ್ಯವನ್ನು ಮಾಡುತ್ತಿದ್ದಾರೆ, ನಿರ್ದೇಶನವನ್ನು ಕೊಡುತ್ತಾರೆ, ಓದಿಸುತ್ತಾರೆ. ಎಲ್ಲಿಯವರೆಗೆ ಓದಿಸಬೇಕೋ, ಓದಿಸುತ್ತಾ ಇರುತ್ತಾರೆ. ವಿನಾಶವು ಎದುರಲ್ಲಿ ನಿಂತಿದೆ. ಇದರ ಸಂಬಂಧವು ತಂದೆಯ ಜೊತೆ ಇದೆ. ತಂದೆಯ ಅಗಲಿಕೆ ಎಂದು ಭಾವಿಸಬೇಡಿ. ಬೀಳ್ಕೊಡುಗೆಯೂ ಅಲ್ಲ ಅಗಲಿಕೆಯೂ ಅಲ್ಲ. ಎಲ್ಲಿಯವರೆಗೆ ವಿನಾಶವಾಗುವುದಿಲ್ಲವೋ ಅಲ್ಲಿಯವರೆಗೆ ತಂದೆ ಜೊತೆಯಲ್ಲಿರು ತ್ತಾರೆ. ತಂದೆಯು ವತನಕ್ಕೆ ಯಾವುದೋ ಕಾರ್ಯಕ್ಕಾಗಿ ಹೋಗಿದ್ದಾರೆ. ಸಮಯಾನುಸಾರ ಎಲ್ಲವೂ ಆಗುತ್ತಾ ಇರುತ್ತದೆ. ಇದರಲ್ಲಿ ಯಾವುದೇ ಅಗಲಿಕೆ ಅಥವಾ ಬೀಳ್ಕೊಡುಗೆ ಆಗುವುದಿಲ್ಲ. ಅಗಲಿದ್ದಾರೆ ಎನ್ನಿಸುತ್ತದೆಯೇ? ತಾವು ಬೀಳ್ಕೊಡುಗೆ ಕೊಟ್ಟಿದ್ದೀರಾ? ಬೀಳ್ಕೊಡುಗೆ ಕೊಟ್ಟಿದ್ದರೆ, ಅಗಲಿಕೆಯು ಸಹ ಇರುತ್ತದೆ. ವಿದಾಯ ಇಲ್ಲ ಎಂದರೆ ಅಗಲಿಕೆಯೂ ಸಹ ಇಲ್ಲ. ಡ್ರಾಮಾದ ಒಳಗೆ ಈ ಪಾತ್ರ ನಡೆಯುತ್ತಿರುತ್ತದೆ. ತಂದೆಯ ಆಟ ನಡೆಯುತ್ತಿದೆ. ಆಟದಲ್ಲಿ ಆಟ ನಡೆಯುತ್ತಿರುತ್ತದೆ. ಮುಂದೆಯಂತೂ ಬಹಳ ಆಟ ನೋಡಬೇಕಾಗಿದೆ. ಇಷ್ಟು ಧೈರ್ಯವಿದೆಯೇ? ನೀವು ಧೈರ್ಯವನ್ನು ಇಟ್ಟುಕೊಂಡರೆ ಬಹಳಷ್ಟು ನೋಡಬಲ್ಲಿರಿ. ಮುಂದೆ ಬಹಳಷ್ಟು ನೋಡಬೇಕಾಗಿದೆ. ಆದರೆ ಹೆಜ್ಜೆಯನ್ನು ಎಚ್ಚರಿಕೆಯಿಂದ ಇಡಬೇಕಾಗಿದೆ. ಒಂದುವೇಳೆ ಎಚ್ಚರಿಕೆಯಿಂದ ನಡೆಯದಿದ್ದರೆ ಕೆಲವೆಡೆ ಹಳ್ಳ ದಿಣ್ಣೆ ಬರುತ್ತದೆ, ಅಪಘಾತವೂ ಆಗುತ್ತದೆ. ಮಕ್ಕಳೊಂದಿಗೆ ಮಿಲನ ಮಾಡಲು ಸ್ವಲ್ಪ ಸಮಯಕ್ಕಾಗಿ ಬಂದಿದ್ದೇನೆ. ಬಹಳ ಕಾರ್ಯಗಳನ್ನು ಮಾಡಬೇಕಾಗಿದೆ. ವತನದಿಂದ ಬಹಳಷ್ಟು ಕಾರ್ಯ ಮಾಡಬೇಕಾಗುತ್ತದೆ. ಮಕ್ಕಳ ಆಶಯಗಳನ್ನು ಪೂರ್ಣ ಮಾಡಬೇಕಾಗುತ್ತದೆ, ಭಕ್ತರ ಆಶಯಗಳನ್ನು ಪೂರ್ಣ ಮಾಡಬೇಕಾಗುತ್ತದೆ. ಎಲ್ಲ ಕಾರ್ಯಗಳೂ ಸಂಗಮಯುಗದಲ್ಲೇ ಆಗುತ್ತವೆ. ತಂದೆಯ ಪರಿಚಯ ಸಿಕ್ಕಿತು, ಖಜಾನೆ, ಲಾಟರಿ ಸಿಕ್ಕಿತು. ಇಲ್ಲಿಗೆ ಮಕ್ಕಳ ಸೇವೆ ಪೂರ್ಣವಾಯಿತು. ವತನದಿಂದ ಎಲ್ಲರ ಸೇವೆ ಮಾಡಬೇಕಾಗಿದೆ. ಸ್ವಂತ ಮಕ್ಕಳೂ ಇದ್ದಾರೆ, ಮಲತಾಯಿ ಮಕ್ಕಳೂ ಇದ್ದಾರೆ. ಎಲ್ಲರ ಸೇವೆಯನ್ನು ಮಾಡಬೇಕಾಗಿದೆ. ಬೆಳಗಿನ ಸಮಯದಲ್ಲೂ ಬಂದು ದೃಷ್ಟಿಯಿಂದ ಪರಿಚಯ ನೀಡಿದೆ. ದೃಷ್ಟಿಯ ಮೂಲಕ ಸರ್ಚ್ ಲೈಟ್ ನೀಡಿ, ಎಲ್ಲರಿಗೂ ಸುಖ ಕೊಡುವುದು ತಂದೆಯ ಕರ್ತವ್ಯವಾಗಿದೆ. **(15–02–1969)**

ಸಂಗಮಯುಗದಲ್ಲಿ ಆತ್ಮದ ದೀಪವನ್ನು ಬೆಳಗಿಸುವುದು ತಮ್ಮ ಮುಖ್ಯ ಶೃಂಗಾರವಾಗಿದೆ. ಇದರ ಗುರುತಾಗಿ ಬಲ್ಬನ್ನು ಉರಿಸುತ್ತಾರೆ. ಆದರೆ ಇವೆಲ್ಲದರ ಜೊತೆಗೆ ಹೋಲಿಯ ಅರ್ಥವನ್ನು ನೆನಪಿಡಬೇಕು. "ಹೋಲಿ" ಎಂದರೆ ಏನೇನಾಯಿತೋ ಅವೆಲ್ಲಾ ಆಗಿ ಹೋಯಿತು, ನಡೆದು ಬಿಟ್ಟಿತು. ಯಾವ ದೃಶ್ಯ ಆಯಿತೋ ಅದು ಆಗಿ ಹೋಯಿತು ಅರ್ಥಾತ್ ಕಳೆದು ಹೋಯಿತು. ವರ್ತಮಾನ ಸಮಯದಲ್ಲಿ ನೆನಪಿಡಬೇಕಾದ ಅಂಶ ಯಾವುದೆಂದರೆ ಈ 'ಹೋಲಿ'ಯ ಅಂದರೆ ಡ್ರಾಮಾದ ಕವಚದ ಬಗ್ಗೆ. ಯಾವಾಗ ನೀವು ಇದರ ಬಗ್ಗೆ ದೃಢವಾಗಿರುತ್ತೀರೋ ಆಗ ಹೋಲಿಯ ಬಣ್ಣವೂ ಚೆನ್ನಾಗಿ ಅಂಟುತ್ತದೆ. ಒಂದುವೇಳೆ "ಹೋಲಿ" ಎಂಬುದರ ಅರ್ಥವನ್ನು ಜೀವನದಲ್ಲಿ ತರಲಿಲ್ಲ ಎಂದರೆ ಬಣ್ಣವೂ ಸರಿಯಾಗಿ ಅಂಟುವುದಿಲ್ಲ. ಪಕ್ಕಾ ಬಣ್ಣ ಅಂಟಬೇಕಾದರೆ ಪ್ರತಿ ಸಮಯದಲ್ಲೂ ಹೋಲಿ ಅಂದರೆ ಯಾವುದು ಕಳೆದು ಹೋಯಿತೋ ಅದು ಮುಗಿದ ಕಥೆ ಎಂಬುದಾಗಿ ಯೋಚಿಸಿ. ಇಂತಹ ಹೋಲಿಯನ್ನು ಆಚರಿಸುತ್ತಿದ್ದೀರಾ? ಅಥವಾ ಆಗಾಗ ಡ್ರಾಮಾದ ದೃಶ್ಯಗಳನ್ನು ನೋಡಿ ಏನಾದರೂ ವಿಚಾರ ನಡೆಯುತ್ತದೆಯೇ? ಜ್ಞಾನದ ಚಿಂತನೆ ಬೇರೆ ಮಾತು. ಆದರೆ ಡ್ರಾಮಾದ ದೃಶ್ಯದ ಬಗ್ಗೆ ಏಕೆ, ಏನು, ಹೇಗೆ ಎಂದು ಚಿಂತಿಸುವುದು ಇದು ಯಾವುದರ ಮಂಥನವಾಗಿದೆ? ಮೊಸರನ್ನು ಕಡೆದಾಗ ಬೆಣ್ಣೆ ಬರುತ್ತದೆ. ಆದರೆ ನೀರನ್ನು ಕಡೆದರೆ ಏನು ಸಿಗುತ್ತದೆ? ಏನೂ ಇಲ್ಲ. ಪರಿಣಾಮ ರೂಪದಲ್ಲಿ ಒಂದು – ಆಯಾಸವಾಗುತ್ತದೆ ಮತ್ತೊಂದು – ಸಮಯ ವ್ಯರ್ಥವಾಗುತ್ತದೆ. ಆದ್ದರಿಂದ ಈ ಚಿಂತನೆ ನೀರನ್ನು ಕಡೆದಂತೆ ವ್ಯರ್ಥ. ಇಂತಹ ಮಂಥನ ಮಾಡುವ ಬದಲು ಜ್ಞಾನದ ಮಂಥನ ಮಾಡಬೇಕಾಗಿದೆ. **(04–03–1969)**

ಒಂದುವೇಳೆ ಕಳೆದು ಹೋದ ಮಾತುಗಳನ್ನು ಚಿಂತಿಸುತ್ತಿದ್ದರೆ ಇದೂ ಒಂದು ಸಮಸ್ಯೆಯಾಗಿ ಬಿಡುತ್ತದೆ. ಸಮಸ್ಯೆಗಳು ಬಹಳ ಬರುತ್ತವೆ. ಇದೂ ಒಂದು ಹೊಸ ಸಮಸ್ಯೆಯನ್ನು ತಂದು ನಿಲ್ಲಿಸುತ್ತದೆ. ಕಳೆದು ಹೋದುದನ್ನು ಪರಿವರ್ತನೆ ಮಾಡುವ, ಬಲ ತುಂಬಿಸಿಕೊಳ್ಳುವ ನಿಟ್ಟಿನಲ್ಲಿ ಚಿಂತಿಸಿ. ಅದರ ಬದಲು ಏಕೆ, ಹೇಗಾಯಿತು, ಈಗ ಏನು ಮಾಡುವುದು, ನಾನು ಮುಂದುವರಿಯುವೆನೋ ಇಲ್ಲವೋ – ಎಂಬ ಈ ಪ್ರಶ್ನೆಗಳನ್ನು ಮಾಡಬೇಡಿ. ಪ್ರಶ್ನೆ ಚಿಹ್ನೆಯ ಬದಲು ಪೂರ್ಣವಿರಾಮ, ಬಿಂದುವನ್ನು ಇಟ್ಟುಬಿಡಿ. ಬಿಂದು ಇಡುವುದು ಸಹಜವಾಗಿದೆ. ಪ್ರಶ್ನೆ ಚಿಹ್ನೆಯನ್ನು ಬರೆಯುವುದಕ್ಕೆ ಆಗುವುದೋ ಇಲ್ಲವೋ, ಆದರೆ ಈ ಪ್ರಶ್ನೆಗಳನ್ನು ಕೇಳುವುದು ಎಲ್ಲರಿಗೂ ಬರುತ್ತದೆ. ಬಿಂದು ಇಡುತ್ತಾ ಹೋಗಿ. ಆಗ ಬಿಂದು ರೂಪದಲ್ಲಿ ಸ್ಥಿತರಾಗಲು ಸಾಧ್ಯವಾಗುತ್ತದೆ. **(28–11–1969)**

ಸತ್ಯಯುಗದಲ್ಲಿ ಆಟಿಕೆಗಳು ಹೇಗಿರುತ್ತವೆ? ಅಲ್ಲಿ ರತ್ನಗಳೊಂದಿಗೆ ಆಟವಾಡುವಿರಿ. ತಾವುಗಳು ಸತ್ಯಯುಗೀ ಸುಖದ ಪಟ್ಟಿ ಮತ್ತು ಕಲಿಯುಗದ ದು:ಖದ ಪಟ್ಟಿಯನ್ನು ಮಾಡಿದ್ದೀರಿ. ಆದರೆ ಸಂಗಮಯುಗದ ಸುಖದ ಪಟ್ಟಿ ಮಾಡಿದರೆ ಇದಕ್ಕಿಂತ ದ್ವಿಗುಣವಾಗಿರುತ್ತದೆ. ಅದೇ ಸತ್ಯಯುಗದ ಸಂಸ್ಕಾರಗಳನ್ನು ಈಗಲೇ ತುಂಬಿಸಿಕೊಳ್ಳಬೇಕಾಗಿದೆ. ಹೇಗೆ ಚಿಕ್ಕ ಮಕ್ಕಳು ಇಡೀ ದಿನ ಆಟದಲ್ಲಿ ಮಗ್ನರಾಗಿರುತ್ತಾರೋ, ಯಾವ ಮಾತಿನ ಬಗ್ಗೆಯೂ ಚಿಂತೆ ಇರುವುದಿಲ್ಲೋ, ಹಾಗೆಯೇ ಪ್ರತಿ ಸಮಯ ಸುಖದ ಲಿಸ್ಟ್, ರತ್ನದ ಲಿಸ್ಟ್ ಬುದ್ಧಿಯಲ್ಲಿ ಮೆಲುಕು ಹಾಕಿರಿ ಅಥವಾ ಈ ಸುಖರೂಪೀ ರತ್ನಗಳೊಡನೆ ಆಟವಾಡುತ್ತಿರಿ ಆಗ ಡ್ರಾಮಾದ ಆಟದಲ್ಲಿ ಎಂದಿಗೂ ಸೋಲಾಗುವುದಿಲ್ಲ. ಈಗಲಾದರೂ ಅಲ್ಲಲ್ಲಿ ಸೋಲು ಕೂಡ ಆಗಿರುತ್ತದೆ. **(17–05–1969)**

ಇನ್ನೊಂದು ಪ್ರಶ್ನೆ ಕೊಡುತ್ತೇನೆ. ನಿಮ್ಮ ಹೋಂ ವರ್ಕ್ ಅಂತೂ ನಡೆಯುತ್ತಿದೆ. ಅದರ ಬಗ್ಗೆ ವಿಶೇಷ ಗಮನವನ್ನು ಸೆಳೆಯುತ್ತೇನೆ. ಈ ಪಾತ್ರ ಯಾವುದು ನಿಗದಿತವಾಗಿದೆಯೋ ಆ ಸಾಕಾರ ರೂಪವನ್ನು ಅವ್ಯಕ್ತವೆಂದು ಏಕೆ ಮಾಡಿದೆವು? ಇದರದ್ದೂ ಅನೇಕ ಗುಹ್ಯ ರಹಸ್ಯಗಳಿವೆ. ಇದರ ಆಳಕ್ಕೆ ಹೋಗಿ. ಸಾಗರದ ಅಲೆಗಳಲ್ಲಿ ಸ್ನಾನ ಮಾಡಲು ತೊಡಗಬೇಡಿ. ಆದರೆ ಸಾಗರದ ಆಳಕ್ಕೆ ಹೋಗಿ. ಆಗ ಯಾವ ರತ್ನಗಳು ಸಿಗುವುವೋ ಅದನ್ನು ತೆಗೆದುಕೊಂಡು ಬನ್ನಿ. ಇದರ ಗುಹ್ಯ ರಹಸ್ಯ ಡ್ರಾಮಾದಲ್ಲಿ ಅಡಗಿದೆಯೇ? ಮೇಲೆ ಏನಾದರೂ ರಹಸ್ಯ ಕಾಣುತ್ತಿದೆಯೇ, ರಹಸ್ಯವಿಲ್ಲದೆ ಯಾವುದೇ ಘಟನೆ ನಡೆಯುವುದಿಲ್ಲ. ಒಳ್ಳೆಯದು. ಈಗ ಸಮಯ ಆಗಿದೆ. **(26–06–1969)**

ಇಂದಿನ ಸಭೆಯಲ್ಲಿ ಯಾವ ವಿಶೇಷ ಸುಗಂಧವೂ ಇದೆ ಮತ್ತು ವಿಶೇಷ ಆಕರ್ಷಣೆಯೂ ಇದೆ? ಸ್ನೇಹವಂತೂ ಎಲ್ಲರಲ್ಲೂ ಇದ್ದೇ ಇದೆ. ತಮ್ಮನ್ನು ಏತಕ್ಕೆ ಕರೆಸಿಕೊಳ್ಳಲಾಗಿದೆ? ಇಲ್ಲಿ ಯಾರೆಲ್ಲ ಬಂದಿದ್ದಾರೋ ಎಲ್ಲರೂ ವಾಪಸ್ ಹೋಗಲು ತಯಾರಿ ಮಾಡಿಕೊಂಡು ಬಂದಿದ್ದಾರೆ ಎಂದು ತಿಳಿಯೋಣವೆ? ಯಾರು ಎವರೆಡಿ ಆಗಿರುತ್ತಾರೋ ಅವರು ಸದಾ ತಯಾರಾಗಿಯೇ ಇರುತ್ತಾರೆ. ಕರೆ ಬಂತು ಎಂದ ತಕ್ಷಣ ಒಂದು ಸೆಕೆಂಡಿನಲ್ಲಿ ಬಾಕಿ ಇರುವ ತಮ್ಮದೆಲ್ಲವನ್ನು ಮುದುಡಿಕೊಳ್ಳುತ್ತಾರೆ ಮತ್ತು ಜಂಪ್ ಸಹ ಮಾಡುತ್ತಾರೆ. ಪ್ರತ್ಯಕ್ಷದಲ್ಲಿ ನೋಡಿದಿರಲ್ಲವೆ? ಡ್ರಾಮಾದ ಕರೆ ಬಂದ ತಕ್ಷಣ ಎಷ್ಟು ಸಮಯ ಹಿಡಿಯಿತು? ಒಂದುಕಡೆ ಎಲ್ಲವನ್ನೂ ಮುದುಡಿಕೊಳ್ಳುವುದು, ಮತ್ತೊಂದು ಕಡೆ ಹೈ ಜಂಪ್ ಮಾಡುವುದು (ಮೇಲೆ ಹಾರುವುದು). ಇವೆರಡೂ ದೃಶ್ಯವನ್ನು ನೋಡಿದಿರಿ. ಇದು ಡ್ರಾಮಾದಲ್ಲಿ ಏತಕ್ಕಾಗಿ ಆಯಿತು? ಕಲಿಸುವುದಕ್ಕಾಗಿ ಆಯಿತು. ಈ ರೀತಿ ಎವರೆಡಿ ಆಗಬೇಕಾಗುತ್ತದೆ. ಈಗಾಗಲೇ ಎವರೆಡಿಯ ಸಾಲು ಪ್ರಾರಂಭವಾಗಿದೆ. ಈ ಸಾಲಿನಲ್ಲಿ ಯಾರ ನಂಬರ್ ಬೇಕಾದರೂ ಬರಬಹುದಾಗಿದೆ. ಯಾವುದು ಎಲ್ಲರ ಸಂಕಲ್ಪದಲ್ಲಿದೆಯೋ ಅದು ಯಾವಾಗಲೂ ಆಗುವುದಿಲ್ಲ. ಆಗುವ ಸಮಯ ಬಂದಾಗ ಅನಾಯಾಸವಾಗಿ ಆಗುತ್ತದೆ. ಈ ಬ್ರಾಹ್ಮಣ ಕುಲದ ರೀತಿ ನೀತಿಗಳು ಪ್ರಾರಂಭವಾಗಿ ಬಿಟ್ಟಿವೆ. ಈ ರೀತಿ ನೀತಿಗಳು ಡ್ರಾಮಾದಲ್ಲಿ ಏಕೆ ಮಾಡಲ್ಪಟ್ಟಿವೆ. ಅದರದ್ದು ಬಹಳ ಗುಹ್ಯ ರಹಸ್ಯವಿದೆ. ಆದ್ದರಿಂದ ತಕ್ಷಣ ಮುದುಡಿಕೊಳ್ಳುವ ಮತ್ತು ಹೈ ಜಂಪ್ ಮಾಡಲು ಸಾಧ್ಯವಾಗುವಂತೆ ಈಗಿನಿಂದಲೇ ಪುರುಷಾರ್ಥವನ್ನು ಮಾಡಿರಿ. ಅಡಕ ಮಾಡಿಕೊಳ್ಳುವ ಶಕ್ತಿ ಯಾರಲ್ಲಿ ಇರುತ್ತದೆ? ಯಾರು ಸರಳ ಸ್ವಭಾವದವರಾಗಿರುತ್ತಾರೋ ಅವರಲ್ಲಿ ಅಡಕಗೊಳಿಸುವ ಶಕ್ತಿ ಸಹಜವಾಗಿ ಬರುತ್ತದೆ. ಯಾರು ಸರಳ ಸ್ವಭಾವದವರಾಗಿರು ತ್ತಾರೋ ಅವರು ಎಲ್ಲರಿಗೂ ಸಹಯೋಗಿಯೂ ಆಗಿರುತ್ತಾರೆ. ಯಾರು ಎಲ್ಲರ ಸ್ನೇಹಿಯಾಗಿರುತ್ತಾರೋ ಅವರಿಗೆ ಎಲ್ಲರಿಂದಲೂ ಸಹಯೋಗ ಸಿಗುತ್ತದೆ. ಆದ್ದರಿಂದ ಎಲ್ಲಾ ಮಾತುಗಳನ್ನು ಎದುರಿಸುವ ಮತ್ತು ಅಡಕ ಮಾಡಿಕೊಳ್ಳು ವುದನ್ನು ಸಹಜವಾಗಿ ಮಾಡಿಕೊಳ್ಳುತ್ತಾರೆ. ಮತ್ತು ಎಷ್ಟು ಸರಳ ಸ್ವಭಾವದವ ರಾಗಿರುತ್ತಾರೋ ಅಷ್ಟು ಮಾಯೆ ಕಡಿಮೆ ಎದುರಿಸಲು ಬರುತ್ತದೆ. ಅವರು ಎಲ್ಲರಿಗೂ ಪ್ರಿಯರೆನಿಸುತ್ತಾರೆ. ಸರಳ ಸ್ವಭಾವದವರಿಗೆ ವ್ಯರ್ಥ ಸಂಕಲ್ಪ ಎಂದಿಗೂ ನಡೆಯುವುದಿಲ್ಲ,

ಸಮಯ ವ್ಯರ್ಥವಾಗುವುದಿಲ್ಲ. ವ್ಯರ್ಥ ಸಂಕಲ್ಪ ನಡೆಯದ ಕಾರಣ ಅವರ ಬುದ್ಧಿ ವಿಶಾಲ ಮತ್ತು ದೂರದೃಷ್ಟಿಯಿಂದ ಕೂಡಿರುತ್ತದೆ. ಆದ್ದರಿಂದ ಅವರ ಮುಂದೆ ಯಾವುದೇ ಸಮಸ್ಯೆ ಎದುರಿಸಲು ಬರುವುದಿಲ್ಲ. ಎಷ್ಟು ಸರಳತೆ ಇರುವುದೋ ಅಷ್ಟು ಸ್ವಚ್ಛತೆಯೂ ಇರುವುದು. ಸ್ವಚ್ಛತೆಯು ಎಲ್ಲರನ್ನೂ ತನ್ನೆಡೆಗೆ ಆಕರ್ಷಿಸುತ್ತದೆ. ಸ್ವಚ್ಛತೆ ಎಂದರೆ ಸತ್ಯತೆ ಮತ್ತು ಶುದ್ಧತೆ. ಯಾವಾಗ ನಮ್ಮ ಸ್ವಭಾವವನ್ನು ಸರಳ ಮಾಡಿಕೊಳ್ಳುತ್ತೇವೋ ಆಗ ಸತ್ಯತೆ ಮತ್ತು ಶುದ್ಧತೆಯು ಬರುತ್ತದೆ. ಸರಳ ಸ್ವಭಾವದವರು ಬಹುರೂಪಿಗಳೂ ಆಗಬಹುದು.

'ಅಂತಿಂಥವರು ಇಲ್ಲಿ ಕಾಲಿಡಲು ಸಾಧ್ಯವಿಲ್ಲ' ಎಂದು ಮಧುಬನದ ಗಾಯನವಿದೆ. ಮಧುಬನವು ಸೌಭಾಗ್ಯದ ರೇಖೆಯಾಗಿದೆ, ಅದರ ಒಳಗೆ ಬೇರಾರೂ ಕಾಲಿಡಲು ಆಗುವುದಿಲ್ಲ. ಬಾಪ್‌ದಾದಾರವರು ತಮಗೆಲ್ಲರಿಗೂ ತಿಳಿಸುತ್ತಾರೆ – ಇದು ಸ್ನೇಹದ ರೇಖೆಯಾಗಿದೆ ಮತ್ತು ಇದರ ಪರಿಧಿಯ ಒಳಗೆ ಬಾಪ್‌ದಾದಾರವರು ವಾಸ ಮಾಡುತ್ತಾರೆ. ಇದರೊಳಗೆ ಯಾರೂ ಬರಲಾಗುವುದಿಲ್ಲ. ತಮ್ಮ ಶಿರವನ್ನು ಕಡಿದುಕೊಂಡರೂ ಆಗುವುದಿಲ್ಲ. ಸಾಕಾರ ರೂಪದಲ್ಲಿ ಸ್ನೇಹ ಸಿಗುವುದು ಸಣ್ಣ ಮಾತಲ್ಲ. ಅದಕ್ಕಾಗಿ ಮುಂದೆ ಅನ್ಯರು ಅಳುವುದನ್ನು ನೋಡಿದಾಗ ತಮಗೆ ಅದರ ಬೆಲೆಯ ಅರಿವಾಗುತ್ತದೆ. ಅತ್ತು ಅತ್ತು ತಮ್ಮ ಪಾದಗಳಿಗೆ ಬೀಳುತ್ತಾರೆ. ಸ್ನೇಹದ ಒಂದು ಹನಿಗಾಗಿ ಬಾಯಾರಿ ತಮ್ಮ ಕಾಲಿಗೆ ಬೀಳುತ್ತಾರೆ. ಮಕ್ಕಳಾದ ತಾವು ಸ್ನೇಹದ ಸಾಗರನನ್ನು ತಮ್ಮಲ್ಲಿ ಸಮಾವೇಶ ಮಾಡಿಕೊಂಡಿದ್ದೀರಿ. ಬೇರೆಯವರು ಒಂದು ಹನಿಗಾಗಿ ಬಾಯಾರಿರುತ್ತಾರೆ. ಇಂತಹ ಸೌಭಾಗ್ಯ ಯಾರಿಗೆ ಸಿಗುತ್ತದೆ? ಸರ್ವ ಸಂಬಂಧದ ಸುಖ, ಸವಿ ಯಾವುದು ಆತ್ಮಗಳಾದ ತಮ್ಮಲ್ಲಿ ತುಂಬಿದೆಯೋ ಅದು ಬೇರೆ ಯಾರಲ್ಲಿಯೂ ಇರಲು ಸಾಧ್ಯವಿಲ್ಲ. ಆದ್ದರಿಂದ ಡ್ರಾಮಾದಲ್ಲಿ ತಮ್ಮ ಇಂತಹ ಶ್ರೇಷ್ಠ ಭಾಗ್ಯವನ್ನು ಸದಾ ಎದುರಿನಲ್ಲಿ ಇಟ್ಟುಕೊಳ್ಳಿರಿ. ಎದುರಿನಲ್ಲಿ ಇಟ್ಟುಕೊಂಡಾಗ ಭಾಗ್ಯದ ರಿಟರ್ನ್ ಕೊಡುವುದು ತಾನಾಗಿಯೇ ನೆನಪಿಗೆ ಬರುತ್ತದೆ. **(06–12–1969)**

ಈ ವರ್ಷದಲ್ಲಿ ಮೊದಲನೇ ಪರೀಕ್ಷೆ ಯಾವುದಾಗಿತ್ತು? ಈ ನಿಶ್ಚಯದ ಪರೀಕ್ಷೆಯಲ್ಲಿ ಪ್ರತಿಯೊಬ್ಬರೂ ಎಷ್ಟೆಷ್ಟು ಅಂಕಗಳನ್ನು ತೆಗೆದುಕೊಂಡಿರಿ? ಅದನ್ನು ನೀವೇ ಸ್ವಯಂ ತಿಳಿದಿದ್ದೀರಿ. ನಿಶ್ಚಯದ ಪರೀಕ್ಷೆಯಂತೂ ಆಯಿತು. ಈಗ ಯಾವ ಪರೀಕ್ಷೆ ಆಗಬೇಕಾಗಿದೆ. ಪರೀಕ್ಷೆ ಯಾವುದೆಂದು ತಿಳಿದಿದ್ದರೂ ಸಹ ಫೇಲು ಆಗುತ್ತೀರಿ. ಕೆಲವರಿಗೆ ಇದೇ ದೊಡ್ಡ ಪರೀಕ್ಷೆಯಾಗಿದೆ. ಕೆಲವರಿಗೆ ದೊಡ್ಡ ಪರೀಕ್ಷೆ ಇನ್ನೂ ಆಗಬೇಕಾಗಿದೆ. ಹೇಗೆ ಈ ಪೇಪರ್‌ನಲ್ಲಿ ನಿಶ್ಚಯದ ಪರೀಕ್ಷೆ ಆಯಿತೋ ಹಾಗೆಯೇ ಈಗ ಯಾವ ಪರೀಕ್ಷೆ ಆಗಬೇಕಾಗಿದೆ? ವ್ಯಕ್ತದಲ್ಲಿಯೂ ಈಗಲೂ ಸಹಾಯವಿದೆ. ಹೇಗೆ ಮೊದಲೂ ಸಹ ನಿಮಿತ್ತವಾದ ಸಾಕಾರ ತನುವಿನ ಆಸರೆ ಇತ್ತೋ, ಹಾಗೆಯೇ ಈಗಲೂ ಡ್ರಾಮಾದಲ್ಲಿ ನಿಮಿತ್ತವಾದ ಸಾಕಾರದ ಆಸರೆ ಇದೆ. ಮೊದಲನೆಯವರೂ ನಿಮಿತ್ತರೇ ಆಗಿದ್ದರು. ಈಗಲೂ ನಿಮಿತ್ತರೇ ಆಗಿದ್ದಾರೆ. ಈ ಪೂರ್ತಿ ಪರಿವಾರದ ಸಾಕಾರದ ಆಸರೆ ಬಹಳ ಶ್ರೇಷ್ಠವಾಗಿದೆ. ಅವ್ಯಕ್ತದಲ್ಲಂತೂ ಜೊತೆಯಾಗಿ ಇದ್ದೇ ಇರುವರು. ಎಷ್ಟು ಸ್ನೇಹವಿದೆಯೋ ಅಷ್ಟು ಸಹಯೋಗವೂ ಸಹ ಸಿಗುವುದು. ಸ್ನೇಹದ ಕೊರತೆ ಇದ್ದರೆ ಸಹಯೋಗವೂ ಕಡಿಮೆ ದೊರೆಯುತ್ತದೆ. ಸಾಕಾರದೊಂದಿಗೆ ಸ್ನೇಹ ಎಂದರೆ ಇಡೀ ವಂಶಾವಳಿಯೊಂದಿಗೆ ಸ್ನೇಹ. ಸಾಕಾರವು ಒಂಟಿಯಲ್ಲ. ಪ್ರಜಾಪಿತ ಬ್ರಹ್ಮಾ ಎಂದರೆ ಅವರೊಡನೆ ಪರಿವಾರವೂ ಇದೆ. ಮಾಲೆಯ ಮಣಿಗಳಲ್ಲವೆ? ಮಾಲೆಯಲ್ಲಿ ಒಂದೇ ಮಣಿ ಇರುವುದಿಲ್ಲ. ಮಾಲೆಯಲ್ಲಿ ಒಬ್ಬರದೇ ನೆನಪಿನ ಸೂತ್ರದಲ್ಲಿ, ಸ್ನೇಹದಲ್ಲಿ ಪರಿವಾರವೂ ಅಡಕವಾಗಿದೆ. ಮಾಲೆಯಲ್ಲಿ ಸ್ನೇಹದ ಸೂತ್ರದಲ್ಲಿ ಪೋಣಿಸಲ್ಪಟ್ಟಂತೆ ಇದೆ. ದೈವೀ ಕುಲವಂತೂ ಭವಿಷ್ಯದಲ್ಲಿ ಇದೆ, ಈ ಬ್ರಾಹ್ಮಣ ಕುಲದ ಮಹತ್ವ ಬಹಳ ಇದೆ. ಎಷ್ಟೆಷ್ಟು ಬ್ರಾಹ್ಮಣ ಕುಲದೊಡನೆ ಸ್ನೇಹ ಮತ್ತು ಸಮೀಪತೆ ಇರುತ್ತದೆಯೋ ಅಷ್ಟಷ್ಟು ದೈವೀ ರಾಜ್ಯದಲ್ಲೂ ಸಮೀಪತೆ ಇರುತ್ತದೆ. **(18–01–1970)**

ಕೇಳಿದ ಮಾತುಗಳನ್ನು ವರ್ಣನೆ ಮಾಡುವುದು ಸ್ವಲ್ಪ ಕಷ್ಟವಾಗುತ್ತದೆ. ಆದರೆ ನೋಡಿದ ಮಾತುಗಳನ್ನು ವರ್ಣಿಸುವುದು ಸಹಜವಾಗುತ್ತದೆ ಮತ್ತು ಸ್ಪಷ್ಟವಾಗಿರುತ್ತದೆ. ಆದ್ದರಿಂದ ಈ ದಿವ್ಯ ನೇತ್ರ ಅಥವಾ ಅವ್ಯಕ್ತ ನೇತ್ರಗಳ ಮೂಲಕ ಪ್ರತಿಯೊಬ್ಬರ ಮೂರೂ ರೂಪಗಳನ್ನು ಅಷ್ಟೇ ಸಹಜವಾಗಿ ವರ್ಣಿಸಲು ಆಗುತ್ತದೆ. ಆ ರೀತಿ ನೋಡಿದಾಗ ತಮಗೆಲ್ಲರಿಗೂ ಪ್ರತಿಯೊಬ್ಬರ ಈ ಮೂರು ರೂಪಗಳು ಕಾಣಿಸುತ್ತವೆ. ಈಗ ಸದ್ಯಕ್ಕೆ ಯಥಾಯೋಗ್ಯ ಯಥಾಶಕ್ತಿ ಇದೆ. ಆದರೆ ಸ್ವಲ್ಪ ಸಮಯದ ನಂತರ ಈ ಯಥಾಶಕ್ತಿ ಎಂಬ ಶಬ್ದವೇ ಮುಗಿದು ಹೋಗುತ್ತದೆ. ಮತ್ತು ಪ್ರತಿಯೊಬ್ಬರೂ ತಮ್ಮ ತಮ್ಮ ನಂಬರ್‌ನ ಅನುಸಾರ ಸಂಪೂರ್ಣತೆಯನ್ನು ಪಡೆದುಕೊಳ್ಳುತ್ತಾರೆ. ಹಾಗಾಗಿ ಬಾಪ್‌ದಾದಾರವರು ತಮ್ಮೆಲ್ಲರ ಸಂಪೂರ್ಣ ಮುಖವನ್ನು ನೋಡುತ್ತಾರೆ. ಸಂಪೂರ್ಣತೆಯು ನಂಬರ್‌ವಾರ್ ಆಗಿರುತ್ತದೆ. ಮಾಲೆಯ 108 ಮಣಿಗಳು

ಯಾವುದಿದೆಯೋ, ಅದರಲ್ಲಿ ಒಂದನೇ ಮಣಿ ಮತ್ತು ನೂರೆಂಟನೆಯ ಮಣಿ – ಎರಡನ್ನೂ ಸಂಪೂರ್ಣರು ಎನ್ನುತ್ತೇವೋ ಇಲ್ಲವೋ? ವಿಜಯಿರತ್ನ ಎನ್ನುತ್ತೇವೆಯೇ? ವಿಜಯಿರತ್ನ ಎಂದರೆ ತಮ್ಮ ನಂಬರ್ ಅನುಸಾರ ಸಂಪೂರ್ಣತೆಯನ್ನು ಪಡೆದುಕೊಳ್ಳುವವರು. ಅವರಿಗೆ ಇಡೀ ಡ್ರಾಮಾದ ಒಳಗೆ ಅದೇ ಸಂಪೂರ್ಣತೆಯ ಮೊದಲನೇ ಸ್ಟೇಜ್ ಆಗಿರುತ್ತದೆ. ಹೇಗೆ ಸತ್ಯಯುಗದಲ್ಲಿ ವಿಶ್ವ ಮಹಾರಾಜನೆಂದು ಎಂಟನೇಯವರನ್ನೂ ಕರೆಯಲಾಗುತ್ತದೆ, ಆದರೆ ಮೊದಲನೇ ವಿಶ್ವ ಮಹಾರಾಜನ ಸೃಷ್ಟಿಯ ಸಂಪೂರ್ಣ ಸುಖ ಮತ್ತು ಎಂಟನೇ ಮಹಾರಾಜನ ಸಂಪೂರ್ಣ ಸುಖದಲ್ಲಿ ವ್ಯತ್ಯಾಸವಿರುತ್ತದೆ ಯಲ್ಲವೆ? ಹಾಗೆಯೇ ಇಲ್ಲಿಯೂ ಪ್ರತಿಯೊಬ್ಬರೂ ತಮ್ಮ ತಮ್ಮ ನಂಬರ್ ಅನುಸಾರ ಸಂಪೂರ್ಣತೆಯನ್ನು ಪಡೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಬಾಪ್‌ದಾದಾರವರು ಸಂಪೂರ್ಣತೆಯ ಸ್ಟೇಜ್‌ನ್ನು ನೋಡುತ್ತಿರುತ್ತಾರೆ ಮತ್ತು ವರ್ತಮಾನ ಸಮಯದ ಪುರುಷಾರ್ಥವನ್ನು ನೋಡುತ್ತಿರುತ್ತಾರೆ. ಏನಾಗಿದ್ದಾರೆ ಮತ್ತು ಏನಾಗುವವರಾಗಿದ್ದಾರೆ ಎಂದು.

ಅವ್ಯಕ್ತ ಮಿಲನವೂ ಸಹ ಮಿಲನವೇ ಆಗಿದೆ. ಆದ್ದರಿಂದ ಎಲ್ಲರಿಗೂ ನಾವು ರಾಜ್ಯ ಪದವಿಯನ್ನು ಪಡೆದುಕೊಂಡೇ ತೀರುತ್ತೇವೆ ಎನ್ನುವ ನಿಶ್ಚಯವಿರಬೇಕಾಗಿದೆ. ನಾವು ಆಗದಿದ್ದರೆ ಮತ್ತೆ ಯಾರು ಆಗುತ್ತಾರೆ? ಕೋಟಿಯಲ್ಲಿ ಕೆಲವರು ಎಂದು ಎಂತಹ ಆತ್ಮಗಳನ್ನು ಎಣಿಸುತ್ತಾರೆ? ಇಂತಹ ಕೋಟಿಯಲ್ಲಿ ಕೆಲವರಾದ ನಾವು ಆತ್ಮಗಳು ಡ್ರಾಮಾದಲ್ಲಿ ಇದ್ದೇವೆ. ಈ ನಿಮ್ಮ ನಿಶ್ಚಯವನ್ನು ಮರೆಯಬಾರದು. ಬಾಪ್‌ದಾದಾರವರು ಪ್ರತಿಯೊಬ್ಬ ಮಕ್ಕಳ ಭವಿಷ್ಯವನ್ನು ನೋಡಿ ಹರ್ಷಿತರಾಗುತ್ತಾರೆ. ಪ್ರತಿಯೊಬ್ಬರನ್ನು ಮಿಲನ ಮಾಡುವುದು, ಇದು ಮನಸ್ಸಿನ ಮಾತಾಗಿದೆ. ಆದರೆ ತಮ್ಮೆಲ್ಲರ ಸಮಾನ ಈ ವ್ಯಕ್ತ ಪ್ರಪಂಚದಲ್ಲಿ..... ಬಾಪ್‌ದಾದಾರವರಿಗೂ ಇದು ವ್ಯಕ್ತ ಪ್ರಪಂಚವಲ್ಲ. ಆದ್ದರಿಂದ ತಮ್ಮ ಪ್ರಪಂಚದ ಅನುಸಾರ ಸಮಯವನ್ನು ಸಹ ನೋಡಬೇಕಾಗುತ್ತದೆ. ವತನದಲ್ಲಿ ಸಮಯ ಇರುವುದಿಲ್ಲ. ಗಡಿಯಾರ ಇರುವುದಿಲ್ಲ. ಆದರೆ ಈ ವ್ಯಕ್ತ ಪ್ರಪಂಚದಲ್ಲಿ ಇವುಗಳನ್ನೆಲ್ಲಾ ನೋಡ ಬೇಕಾಗುತ್ತದೆ. ಅಲ್ಲಂತೂ ಸೂರ್ಯ ಚಂದ್ರರೇ ಇಲ್ಲವೆಂದಾಗ ಹಗಲು ರಾತ್ರಿ ಯಾವ ಲೆಕ್ಕಾಚಾರದಲ್ಲಿರುತ್ತದೆ? ಆದ್ದರಿಂದ ಸಮಯದ ಬಂಧನ ಇರುವುದಿಲ್ಲ. **(22–01–1970)**

ಮಂಥನ ಮಾಡುವುದಕ್ಕಂತೂ ಬಹಳಷ್ಟು ಖಜಾನೆಗಳಿವೆ. ಇವುಗಳಲ್ಲಿ ಮನಸ್ಸನ್ನು ವ್ಯಸ್ತವಾಗಿ ಇಟ್ಟುಕೊಳ್ಳಬೇಕು. ಸಮಯದ ವೇಗವು ತೀವ್ರವಾಗಿದೆಯೋ ಅಥವಾ ತಮ್ಮ ಪುರುಷಾರ್ಥದ ವೇಗವು ತೀವ್ರವಾಗಿದೆಯೋ? ಒಂದುವೇಳೆ ಸಮಯವು ವೇಗವಾಗಿ ಚಲಿಸುತ್ತಿದೆ ಮತ್ತು ನಿಮ್ಮ ಪುರುಷಾರ್ಥವು ನಿಧಾನವಾದರೆ ಅದರ ಫಲಿತಾಂಶ ಏನಾಗುತ್ತದೆ? ಸಮಯವು ಮುಂದೆ ಹೋಗಿಬಿಡುತ್ತದೆ ಮತ್ತು ಪುರುಷಾರ್ಥಿಗಳು ಹಿಂದುಳಿಯುತ್ತಾರೆ. ಸಮಯದ ಗಾಡಿಯು ತಪ್ಪಿ ಹೋಗುತ್ತದೆ. ಸವಾರಿ ಮಾಡುವವರು ಅಲ್ಲೇ ಉಳಿಯುತ್ತಾರೆ. ಸಮಯದ ಯಾವ ವೇಗವನ್ನು ನೋಡುತ್ತೀರಿ? ಸಮಯಕ್ಕೆ "ಕಳೆದುದ್ದು ಕಳೆದುಹೋಯಿತು" ಎಂಬಂತೆ ಮಾಡುವ ವೇಗವಿದೆ. ಅದೇ ಮಾತನ್ನು ಸಮಯವು ಪುನರಾವರ್ತನೆ ಮಾಡುತ್ತದೆಯೇನು? ಆದ್ದರಿಂದ ಪುರುಷಾರ್ಥದಲ್ಲಿ ಏನೇ ಕೊರತೆಯಿದ್ದರೂ ಅದನ್ನು "ಕಳೆದುದು ಕಳೆದು ಹೋಯಿತು" ಎಂದು ತಿಳಿದು ಮುಂದೆ ಪ್ರತಿಯೊಂದು ಸೆಕೆಂಡ್‌ನಲ್ಲಿಯೂ ಉನ್ನತಿಯನ್ನು ತರುತ್ತಾ ಹೋಗಿರಿ. ಆಗ ಸಮಯದಂತೆಯೇ ವೇಗವಾಗಿ ಚಲಿಸಬಲ್ಲವರಾಗುತ್ತೀರಿ. ಸಮಯವಂತೂ ರಚನೆಯಾಗಿದೆ ಅಲ್ಲವೆ? ರಚನೆಯಲ್ಲಿ ಈ ಗುಣವಿದೆ ಎಂದ ಮೇಲೆ ರಚಯಿತನಲ್ಲಿಯೂ ಇರಬೇಕಲ್ಲವೆ? ಡ್ರಾಮಾ ಎನ್ನುವುದು ಸೃಷ್ಟಿಯಾಗಿದೆ ಎಂದಮೇಲೆ ನೀವು ಸೃಷ್ಟಿಕರ್ತನ ಮಕ್ಕಳಾಗಿದ್ದೀರಿ ಅಲ್ಲವೆ? ಅಂದ ಮೇಲೆ ಸೃಷ್ಟಿಕರ್ತನ ಮಕ್ಕಳು ಸೃಷ್ಟಿಗಿಂತ ದುರ್ಬಲರು ಏಕೆ? ಆದ್ದರಿಂದ ಕೇವಲ ಒಂದು ಮಾತನ್ನು ನೆನಪಿನಲ್ಲಿಡಿ. ಡ್ರಾಮಾದಲ್ಲಿ ಪ್ರತಿ ಸೆಕೆಂಡು ಅಥವಾ ಯಾವ ಮಾತು ಕಳೆದು ಹೋಯಿತೋ, ಯಾವ ರೂಪದಲ್ಲಿ ಕಳೆದು ಹೋಯಿತೋ ಅದು ಮತ್ತೆ ಪುನರಾವರ್ತನೆ ಆಗುವುದಿಲ್ಲ. ಮತ್ತೆ 5000 ವರ್ಷಗಳ ನಂತರ ಪುನರಾವರ್ತನೆಯಾಗುತ್ತದೆ. ಹಾಗೆಯೇ ದೌರ್ಬಲ್ಯಗಳನ್ನು ಪದೇ ಪದೇ ಪುನರಾವರ್ತನೆ ಏಕೆ ಮಾಡುತ್ತೀರಿ? ಒಂದುವೇಳೆ ಈ ದೌರ್ಬಲ್ಯಗಳು ಪುನರಾವರ್ತನೆ ಆಗದಿದ್ದರೆ ಪುರುಷಾರ್ಥವು ತೀವ್ರವಾಗುತ್ತದೆ. ಯಾವಾಗ ದೌರ್ಬಲ್ಯಗಳು ಅಡಗಿ ಬಿಡುತ್ತವೆಯೋ ಆಗ ದೌರ್ಬಲ್ಯದ ಜಾಗದಲ್ಲಿ ಶಕ್ತಿ ತುಂಬಿಕೊಳ್ಳುತ್ತದೆ. ಒಂದುವೇಳೆ ದೌರ್ಬಲ್ಯಗಳು ಮತ್ತೆ ಮತ್ತೆ ಪುನರಾವರ್ತನೆ ಆಗುತ್ತಿದ್ದರೆ ಶಕ್ತಿಯು ತುಂಬಿಕೊಳ್ಳುವುದಿಲ್ಲ. ಆದ್ದರಿಂದ ಯಾವುದು ಕಳೆದು ಹೋಯಿತೋ, ಅದು ಕಳೆದು ಹೋಯಿತು. ಕಳೆದು ಹೋದ ದೌರ್ಬಲ್ಯದ ಮಾತುಗಳು ಮತ್ತೆ ಸಂಕಲ್ಪದಲ್ಲೂ ಬರಬಾರದು. ಒಂದುವೇಳೆ ಸಂಕಲ್ಪದಲ್ಲಿ ಬಂದಿತು ಎಂದರೆ ಆಗ ವಾಣಿ ಮತ್ತು ಕರ್ಮದಲ್ಲೂ ಬಂದು ಬಿಡುತ್ತದೆ. ಸಂಕಲ್ಪದಲ್ಲಿಯೇ ಮುಕ್ತಾಯ ಮಾಡಿಬಿಟ್ಟರೆ ವಾಣಿ ಮತ್ತು ಕರ್ಮದಲ್ಲಿ ಬರುವುದಿಲ್ಲ. ಆಗ ಮನಸ್ಸು, ವಾಣಿ ಮತ್ತು ಕರ್ಮ –

ಮೂರೂ ಶಕ್ತಿಶಾಲಿಯಾಗಿ ಬಿಡುತ್ತದೆ. ಕೆಟ್ಟ ವಸ್ತುಗಳನ್ನು ಸದಾ ತಕ್ಷಣವೇ ಎಸೆಯುತ್ತಾರೆ. ಒಳ್ಳೆಯ ವಸ್ತುಗಳನ್ನು ಉಪಯೋಗಿಸುತ್ತಾರೆ. ಆದ್ದರಿಂದ ಕೆಟ್ಟ ಮಾತುಗಳನ್ನು, ಕೆಟ್ಟ ವಸ್ತುಗಳನ್ನು ಎಸೆಯುವಂತೆ ಎಸೆದುಬಿಡಿ. ಆಗ ಸಮಯವು ಪುರುಷಾರ್ಥಕ್ಕಿಂತ ವೇಗವಾಗಿ ಹೋಗುವುದಿಲ್ಲ. ಸಮಯದ ನಿರೀಕ್ಷೆಯನ್ನು ನೀವು ಮಾಡುವುದಾದರೆ, ನಾವು ಸಿದ್ಧವಾಗಿ ಕುಳಿತಿದ್ದೇವೆ, ಸಮಯ ಬಂದ ತಕ್ಷಣ ನಾವು ಹೊರಟು ಬಿಡುತ್ತೇವೆ ಎಂಬಂತಹ ಸ್ಥಿತಿ ಉಂಟಾಗುತ್ತದೆ. ತಮ್ಮ ತಯಾರಿ ಆಗಿಲ್ಲ ಎಂದಾಗ ಸಮಯವು ನಮಗಾಗಿ ಸ್ವಲ್ಪ ನಿಲ್ಲಲಿ ಎಂದು ಯೋಚಿಸಬೇಕಾಗುತ್ತದೆ. **(26–01–1970)**

ಮಕ್ಕಳ ಹತ್ತಿರ ಈಗ ಯಾವ ಕ್ಯೂ (ಸಾಲು) ನಿಂತಿದೆ? ಯಾವಾಗ ಈ ಕ್ಯೂ ಮುಗಿಯುವುದೋ ಆಗ ಆ ಕ್ಯೂ ಪ್ರಾರಂಭವಾಗುತ್ತದೆ. ಈಗ ಯಾವ ಕ್ಯೂ ಪ್ರಾರಂಭವಾಗಿದೆ ತಿಳಿದಿದೆಯೆ? (ಸಂಕಲ್ಪದ ಕ್ಯೂ) ಸಂಕಲ್ಪಗಳಲ್ಲೂ ಮುಖ್ಯವಾಗಿ ಯಾವ ಸಂಕಲ್ಪವು ಪುರುಷಾರ್ಥವನ್ನು ಸಡಿಲ ಮಾಡುತ್ತದೆ? ವ್ಯರ್ಥ ಸಂಕಲ್ಪಗಳಿಗೆ ಮೂಲ ಕಾರಣ ಏನಾಗಿದೆ? ಹಳೆಯ ಸಂಸ್ಕಾರಗಳು ಯಾವ ರೂಪದಲ್ಲಿ ಬರುತ್ತದೆ? ವ್ಯರ್ಥ ಸಂಕಲ್ಪವು ಬರುವಂತಹ ಒಂದು ಶಬ್ದವನ್ನು ಹೇಳಿರಿ. 'ಇದು ಏಕೆ ಆಯಿತು' ಎಂಬ ಒಂದೇ ಶಬ್ದವು ಬುದ್ಧಿಯಲ್ಲಿ ಬರುವುದರಿಂದಲೇ ವ್ಯರ್ಥ ಸಂಕಲ್ಪ ಅಥವಾ ವಿಕಲ್ಪಗಳು ನಡೆಯುವುದಕ್ಕೆ ಕಾರಣವಾಗಿದೆ. "ಏಕೆ" ಎಂಬ ಶಬ್ದದಿಂದ ವ್ಯರ್ಥ ಸಂಕಲ್ಪದ ಕ್ಯೂ ಪ್ರಾರಂಭವಾಗುತ್ತದೆ. ಇಂಗ್ಲೀಷ್‌ನಲ್ಲೂ ತಾವು ನೋಡುತ್ತಿರಿ, 'ಏಕೆ?' ಎಂಬ ಶಬ್ದದ ಗುರುತು ಎಲ್ಲದಕ್ಕಿಂತಲೂ ಡೊಂಕಾಗಿದೆ. ಆದ್ದರಿಂದ 'ಏಕೆ' ಎಂಬುದರ 'ಕ್ಯೂ' ಬಹಳ ಉದ್ದವಾಗಿದೆ. ಈ 'ಏಕೆ' ಎಂಬ ಕ್ಯೂ ಸಮಾಪ್ತಿಯಾದಾಗಲೇ ಸಂಪೂರ್ಣತೆ ಬರುತ್ತದೆ. ಆಗ ಆ ಕ್ಯೂ ಬರುತ್ತದೆ. ಯಾವಾಗ 'ಏಕೆ' ಎಂಬ ಶಬ್ದ ದೂರವಾಗುತ್ತದೋ, ಆಗ ಡ್ರಾಮಾದಲ್ಲಿ ಏನು ಅಡಕವಾಗಿದೆಯೋ, ಅದರ ಮೇಲೆ ಏಕರಸವಾಗಿ ನಿಲುತ್ತದೆ. ಆದ್ದರಿಂದ ಈಗ 'ಏಕೆ' ಎಂಬ ಕ್ಯೂ ಅನ್ನು ಸಮಾಪ್ತಿ ಮಾಡಬೇಕಾಗಿದೆ. ತಿಳಿಯಿತೆ? ಒಂದು 'ಏಕೆ' ಎಂಬ ಶಬ್ದದಲ್ಲಿ ಒಂದು ಸೆಕೆಂಡಿನಲ್ಲಿ ಎಷ್ಟೊಂದು ಸಂಕಲ್ಪಗಳು ಹುಟ್ಟುತ್ತವೆ. 'ಏಕೆ" ಎನ್ನುವುದರಿಂದ ಕಲ್ಪನೆಗಳು ಪ್ರಾರಂಭವಾಗಿಬಿಡುತ್ತದೆ. ಆದ್ದರಿಂದ ತಂದೆಯೂ ಸಹ ಮಕ್ಕಳಿಂದ ಈ ವ್ಯರ್ಥ ಸಂಕಲ್ಪಗಳಿಂದ ಮುಕ್ತರಾಗುವುದಕ್ಕೆ ಪ್ರತಿಜ್ಞೆ ಮಾಡಿಸಲು ಬಂದಿದ್ದಾರೆ. ಯಾವುದೇ ಪ್ರತಿಜ್ಞೆ ಮಾಡುವುದಕ್ಕಾಗಿ ನೀರನ್ನು ಸಾಕ್ಷಿಯಾಗಿ ಇಟ್ಟುಕೊಳ್ಳುತ್ತಾರೆ. ಆದ್ದರಿಂದ ಈಗ ಈ ಪ್ರತಿಜ್ಞೆಯನ್ನು ಮಾಡಬೇಕಾಗಿದೆ. **(05–03–1970)**

**ದೀದಿಯವರೊಂದಿಗೆ:** ಬಾಲಕನು ಮಾಲೀಕನಾಗಿದ್ದಾನೆ. ಆದ್ದರಿಂದ ಸಿಂಹಾಸನದ ಮೇಲೆ (ಗದ್ದಿಯ ಮೇಲೆ) ಸಮಾನವಾಗಿ ಕುಳ್ಳಿರಿಸಿಕೊಳ್ಳುತ್ತಾರೆ. ವ್ಯಕ್ತ ರೂಪದಲ್ಲಂತೂ ಈ ಸಮಾರಂಭವನ್ನು ಮಾಡಿಕೊಳ್ಳುತ್ತಿದ್ದೀರಿ ಆದರೆ ಅವ್ಯಕ್ತ ರೂಪದಲ್ಲಿ ಈ ಸಮಾರಂಭವು ನಡೆಯುತ್ತದೆಯೆ? ಬಾಲಕನನ್ನು ಮಾಲಿಕನನ್ನಾಗಿ ಮಾಡಿ, ಈಗಿನಿಂದಲೇ ಸಿಂಹಾಸನಾಧಿಕಾರಿಗಳನ್ನಾಗಿ ಮಾಡುತ್ತಾರೆ. ಸಾಕಾರದಲ್ಲಿ ಹೃದಯ ಸಿಂಹಾಸನವಿದೆ, ಈಗ ಸೇವೆಯ ಸಿಂಹಾಸನಾಧಿಕಾರಿಗಳು ಮತ್ತು ಭವಿಷ್ಯದಲ್ಲಿ ರಾಜ್ಯ ಸಿಂಹಾಸನಾಧಿಕಾರಿಗಳು. ಸಂಗಮದಲ್ಲಿ ಸಿಂಹಾಸನದ ಆಸೀನರು ಈಗಲೇ ಆಗುತ್ತೀರ. ಡ್ರಾಮಾದಲ್ಲಿ ಯಾವ ಪಾತ್ರ ಅಡಕವಾಗಿದೆಯೋ ಅದು ಎಷ್ಟೊಂದು ರಹಸ್ಯಯುಕ್ತವಾಗಿದೆ. ಇದನ್ನು ದಿನಗಳು ಕಳೆದಂತೆ ಸ್ಪಷ್ಟವಾಗಿ ತಿಳಿಯುತ್ತಾ ಹೋಗುತ್ತೀರಿ. ಸ್ನೇಹದಿಂದಲೂ ಕೆಲವು ಬಾರಿ ಕರ್ತವ್ಯದ ಬಂಧನದಲ್ಲಿ ಬಂದಿಸಲ್ಪಡುತ್ತದೆ. ಹೇಗೆ ಸ್ನೇಹದ ಬಂಧನವಿದೆಯೋ ಹಾಗೆ ಕರ್ತವ್ಯದ ಬಂಧನವೂ ಇದೆ. ಆದ್ದರಿಂದ ಇದು ಕರ್ತವ್ಯದ ಬಂಧನವಾಗಿದೆ. ಕರ್ತವ್ಯದ ಬಂಧನದಲ್ಲಿ ಅವ್ಯಕ್ತರೂಪದಲ್ಲಿದ್ದಾರೆ. ಸ್ನೇಹದ ಬಂಧನದಲ್ಲಿ ಸಾಕಾರ ರೂಪದಲ್ಲಿದ್ದರು. **(23–03–1970)**

ಈಗ ಭಾಷೆಯು ಬದಲಾಗಬೇಕಾಗಿದೆ. ಸಾಕಾರ ರೂಪದಲ್ಲಿ ಎಲ್ಲವನ್ನೂ ತೋರಿಸಿದರು. ನಾನು ಇದನ್ನು ನಡೆಸುತ್ತಿದ್ದೇನೆ ಎಂದು ಯಾವಾಗ ಹೇಳಿದರು? ನಾನು ಮುರಳಿಯನ್ನು ಚೆನ್ನಾಗಿ ನುಡಿಸಿದೆ ಎಂದು ಯಾವಾಗ ಹೇಳಿದರು? ನಾನು ಸರ್ವಿಸ್ ಮಾಡಿದೆ, ನಾನು ಮಕ್ಕಳಿಗೆ ಟಚ್ ಮಾಡಿಸಿದೆ ಎಂದು ಯಾವಾಗ ಹೇಳಿದರು? ಈ ಸ್ವೀಕರಿಸುವಿಕೆ ಮುಕ್ತಾಯವಾಗಬೇಕಾಗಿದೆ. ಇದಕ್ಕೆ 'ಯಾವ ಪ್ರತಿಜ್ಞೆಯನ್ನು ಮಾಡಿದೆನೋ ಅದನ್ನು ನಿಭಾಯಿಸುವುದು' ಎಂದು ಹೇಳಲಾಗುತ್ತದೆ. ಮಕ್ಕಳಾದ ತಾವು ಒಂದು ಹಾಡನ್ನು ಹೇಳುತ್ತಿದ್ದಿರಿ. ನಿನಗಾಗಿ ಸಾಯುತ್ತೇವೆ.... ಎಂದು ನೆನಪಿದೆಯೆ? ಸಾಯುವುದು ಎಂದು ಯಾವುದಕ್ಕೆ ಹೇಳಲಾಗುತ್ತದೆ? 'ನನ್ನತನ' ಎಂಬುದನ್ನು ಅಳಿಸಿ ಹಾಕುವುದನ್ನೇ ಸಾಯುವುದು ಎನ್ನಲಾಗುತ್ತದೆ. ಅಂಗೀಕರಿಸುವುದನ್ನು ಬಿಟ್ಟರೆ ಮಾಯೆಗೆ ಚಾಲೆಂಜ್ ಮಾಡಬಹುದು. ಯಾವುದೇ ಮಾತಿನಲ್ಲಿ ನಿಂದಾ–ಸ್ತುತಿ, ನಾನಲ್ಲ, ನೀನಲ್ಲ, ನನ್ನದಲ್ಲ, ನಿನ್ನದಲ್ಲ, ಯಾವುದನ್ನೂ ಸ್ವೀಕಾರ ಮಾಡದಿದ್ದಾಗ ಚಾಲೆಂಜ್ ಮಾಡಬಹುದು. ತಾವು ಮನಸ್ಸಿನಲ್ಲಿ ಸಂಕಲ್ಪವನ್ನು ಆಮೇಲೆ ಮಾಡುತ್ತೀರ. ತಮ್ಮ ಮನಸ್ಸಿನಲ್ಲಿ

ಸಂಕಲ್ಪ ಬರುತ್ತಲೇ ಅಲ್ಲಿ ತಲುಪಿ ಬಿಡುತ್ತೀರಿ. ಏಕೆ ಮೊದಲೇ ತಲುಪುತ್ತೀರಿ ಎಂಬುದು ಸಹ ಗುಹ್ಯವಾದ ಒಗಟಾಗಿದೆ. ತಾವು ಮನಸ್ಸಿನಲ್ಲಿ ಯಾವ ಸಂಕಲ್ಪ ಮಾಡುತ್ತಿರೋ ಅದು ತಮ್ಮ ಬಳಿ ನಂತರ ಬರುತ್ತದೆ. ಅದಕ್ಕೆ ಮೊದಲು ಬಾಪ್‍ದಾದಾರವರ ಬಳಿ ಸ್ಪಷ್ಟವಾಗಿ ಬಿಡುತ್ತದೆ. ಏಕೆಂದರೆ ಸಂಪೂರ್ಣರಾದಾಗ ಡ್ರಾಮಾದ ಪ್ರತಿಯೊಂದು ವಿಷಯವು ಸ್ಪಷ್ಟವಾಗಿ ಕಾಣಿಸುತ್ತದೆ. ಆದ್ದರಿಂದ ಡ್ರಾಮಾದ ಪ್ರತಿಯೊಂದು ವಿಷಯವನ್ನು ಮೊದಲೇ ನೋಡಬಹು ದಾಗಿದೆ. ಆದ್ದರಿಂದ ಭವಿಷ್ಯವನ್ನು ನೋಡಿ ಎಂದು ಮೊದಲೇ ತಿಳಿಸಿದ್ದಾರೆ. ಹೇಗೆ ಮೊದಲೇ ಆಗಿಯೇ ಬಿಟ್ಟಿದೆ ಎನ್ನುವಂತೆ ತಿಳಿಸುತ್ತಾರೆ. ನಂತರ ಯಾವಾಗ ತಾವು ಪಾತ್ರವನ್ನು ಮಾಡುತ್ತೀರೋ ಆಗ ಬಾಪ್‍ದಾದಾರವರೂ ಪಾತ್ರ ಮಾಡುತ್ತಾರೆ. ತಾವು ಆತ್ಮಿಕ ವಾರ್ತಾಲಾಪ ಮಾಡುವ ಪಾತ್ರವನ್ನು ಅಭಿನಯಿಸುತ್ತೀರಿ, ಬಾಪ್‍ದಾದಾರವರು ಕೇಳುವ ಪಾತ್ರವನ್ನು ಅಭಿನಯಿಸುತ್ತಾರೆ. ತಿಳಿಯಿತೆ? ಯಾರು ಹೇಗಿದ್ದಾರೋ ಹಾಗೆ ತಮ್ಮನ್ನು ತಾವು ತಿಳಿಯಲು ಸಾಧ್ಯವಾಗದಿದ್ದರೂ, ಬಾಪ್‍ದಾದಾರವರಿಗೆ ತಿಳಿಯಲು ಸಾಧ್ಯವಾಗುತ್ತದೆ. ಆದ್ದರಿಂದ ಈಗ ನಾಲ್ಕೂ ಬಲಗಳಲ್ಲಿ ಸಮಾನತೆಯನ್ನು ತರಬೇಕಾಗಿದೆ. ಆಗ ಸಾಕಾರ ಬಾಬಾರವರ ಸಮಾನರಾಗಿ ಬಿಡುತ್ತೀರಿ. ಸಂಸ್ಕಾರದಲ್ಲಿ ಎಷ್ಟು ಸಮಾನತೆಯನ್ನು ತರುತ್ತೀರೋ ಅಷ್ಟೇ ಸಮೀಪ ಬರುತ್ತೀರಿ. ಎಂತಹ ಸಂಸ್ಕಾರ? ಸಾಕಾರ ಬಾಬಾರ ಸಂಸ್ಕಾರ ಉಪರಾಮ ವೃತ್ತಿ ಮತ್ತು ಸಾಕ್ಷೀಭಾವ. ಇದು ಸಾಕಾರದ ಸಂಪೂರ್ಣ ಸ್ಥಿತಿಯ ಶ್ರೇಷ್ಠ ಲಕ್ಷಣವಾಗಿತ್ತು. ಈ ಸಂಸ್ಕಾರಗಳಲ್ಲಿ ಸಮಾನತೆ ತರಬೇಕಾಗಿದೆ. ಈ ಗುಣಗಳಿಂದ ಎಲ್ಲರ ಹೃದಯ ಗೆಲ್ಲಬಹುದಾಗಿದೆ. ಯಾರು ಸಂಗಮ ಯುಗದಲ್ಲಿ ಸರ್ವರ ಹೃದಯವನ್ನು ಗೆಲ್ಲುತ್ತಾರೋ ಅವರೇ ಭವಿಷ್ಯದಲ್ಲಿ ವಿಶ್ವ ಮಹಾರಾಜರು ಆಗುತ್ತಾರೆ. ವಿಶ್ವ ಎಂದೊಡನೆ ಎಲ್ಲರೂ ಬರುತ್ತಾರೆ. ಆದ್ದರಿಂದ ಬೀಜ ಇಲ್ಲಿ ಬಿತ್ತಬೇಕು, ಫಲವನ್ನು ಅಲ್ಲಿ ಪಡೆಯಬೇಕು. **(02–04–1970)**

ಪ್ರತಿಯೊಬ್ಬರೂ ತಮ್ಮ ಫಲಿತಾಂಶವನ್ನು ನೋಡುತ್ತಲಂತೂ ಇದ್ದೀರ. ಅಧಿಕವಾಗಿ ಏನು ಕಾಣಿಸುತ್ತದೆ? ಕೆಲವರಲ್ಲಿ ಸ್ನೇಹೀತನದ ವಿಶೇಷತೆ ಇದೆ, ಕೆಲವರಲ್ಲಿ ಸಹಯೋಗಿತನದ ವಿಶೇಷತೆ ಇದೆ. ಆದರೆ ಶಕ್ತಿರೂಪದ ಧಾರಣೆ ಕಡಿಮೆ ಇದೆ. ಇದರ ಗುರುತು ಹೇಗೆ ಕಾಣಿಸುತ್ತದೆ? ತಿಳಿದಿದೆಯೆ? ಶಕ್ತಿರೂಪದ ಕೊರತೆಯ ಗುರುತೇನಾಗಿದೆ? ಪರೀಕ್ಷಿಸುವ ಶಕ್ತಿಯ ಕೊರತೆಯ ಗುರುತೇನಾಗಿದೆ? ಒಂದು ಮಾತಂತೂ ಹೇಳಿದಿರಿ ಸೇವೆಯಲ್ಲಿ ಸಫಲತೆ ಇಲ್ಲ ಎಂದು. ಅದರ ಸ್ಪಷ್ಟವಾದ ಗುರುತು ಎರಡೇ ಶಬ್ದಗಳಲ್ಲಿ ಹೇಳುವುದಾದರೆ ಅವರ ಪ್ರತಿಯೊಂದು ಮಾತಿನಲ್ಲಿ ಏಕೆ, ಹೇಗೆ, ಏನು... ಎನ್ನುವುದು ಕಂಡು ಬರುತ್ತದೆ. ಪ್ರಶ್ನೆಯ ಚಿಹ್ನೆ ಬಹಳವಾಗಿರುತ್ತದೆ. ಡ್ರಾಮಾದಲ್ಲಿ ಪೂರ್ಣವಿರಾಮ ಹಾಕುವುದು ಅವರಿಗೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಸ್ವಯಂ ತಾವೇ ಏಕೆ, ಹೇಗೆ, ಏನು ಎಂಬ ಕಗ್ಗಂಟಿನಲ್ಲಿ ಸಿಲುಕಿರುತ್ತಾರೆ. **(22–01–1971)**

ಸದಾಕಾಲ ಪ್ರತಿಯೊಂದು ಸಂಕಲ್ಪದಲ್ಲೂ ನಿಶ್ಚಯ ಬುದ್ಧಿ ಇರಬೇಕು. ಕರ್ಮ ಮಾಡುವುದರ ಮೊದಲೇ 'ನಮ್ಮ ವಿಜಯವು ಆಗಿಯೇಬಿಟ್ಟಿದೆ, ನಾನು ಅನೇಕ ಕಲ್ಪದಲ್ಲಿ ವಿಜಯಿ ಆಗಿದ್ದೇನೆ' ಎಂಬ ನಿಶ್ಚಯವಿರಬೇಕು. ಅನೇಕ ಕಲ್ಪ, ಅನೇಕ ಬಾರಿ ವಿಜಯಿಗಳಾಗಿ ವಿಜಯ ಮಾಲೆಯಲ್ಲಿ ಮಣಿಗಳಾಗಿ ಪೋಣಿಸಲ್ಪಟ್ಟಿರುವವರು, ಪೂಜ್ಯರಾಗಿದ್ದವರು, ಈಗ ಅದನ್ನೇ ಪುನರಾವರ್ತನೆ ಮಾಡುವುದಿಲ್ಲವೇ? ಆಗಿರುವಂತ ಅದೇ ಕರ್ಮವನ್ನು ಇನ್ನೊಂದು ಬಾರಿ ಪುನರಾವರ್ತನೆ ಮಾಡಬೇಕಾಗಿದೆ. ಆದರಿಂದಲೇ 'ಮಾಡಿ ಮಾಡಲ್ಪಟ್ಟ ಡ್ರಾಮಾ' ಎಂದು ಹೇಳಲಾಗುತ್ತದೆ. ಮಾಡಲ್ಪಟ್ಟಿದೆ. ಆದರೆ ಈಗ ಪುನಃ ರಿಪೀಟ್ ಮಾಡಿ 'ಮಾಡಿ–ಮಾಡಲ್ಪಟ್ಟ' ಎಂಬ ಮಾತನ್ನು ಪೂರ್ಣ ಮಾಡಬೇಕಾಗಿದೆ. **(24–05–1971)**

ಸಹನಶೀಲತೆಯು ಬಹಳ ಮುಖ್ಯ ಧಾರಣೆಯಾಗಿದೆ. ಎಷ್ಟು ಸಹನಶೀಲತೆಯು ತಮ್ಮಲ್ಲಿ ಇದೆಯೋ ಅಷ್ಟೇ ಸ್ವಯಂನ ಬಗ್ಗೆ ಸಂತುಷ್ಟ ರಾಗಿರುತ್ತೀರಿ ಮತ್ತು ಅನ್ಯರೂ ಸಂತುಷ್ಟರಾಗಿರುತ್ತಾರೆ ಎಂದು ತಿಳಿಯಿರಿ. ಸಂತುಷ್ಟರಾಗುವುದು ಎಂದರೆ ಸಫಲತೆಯನ್ನು ಹೊಂದುವುದು. ಯಾರು ಯಾವುದೇ ಮಾತನ್ನು ಸಹನೆ ಮಾಡಿಕೊಳ್ಳುತ್ತಾರೋ, ಸಹನೆ ಮಾಡಿಕೊಳ್ಳುವುದು ಎಂದರೆ ಆ ವಿಷಯದ ಆಳಕ್ಕೆ ಹೋಗುವುದು ಎಂದು ಅರ್ಥ. ಹೇಗೆ ಸಾಗರದ ಆಳಕ್ಕೆ ಹೋದರೆ ರತ್ನಗಳು ಸಿಗುತ್ತದೆಯೋ ಹಾಗೆಯೇ ಯಾರು ಸಹನಶೀಲರಾಗಿರುತ್ತಾರೋ ಅವರು ಆಳಕ್ಕೆ ಹೋಗುತ್ತಾರೆ, ಮತ್ತು ಆ ಆಳದಿಂದ ಬಹಳ ಶಕ್ತಿಗಳ ಪ್ರಾಪ್ತಿ ಆಗುತ್ತದೆ. ಸಹನಶೀಲರೇ ಮನನ ಶಕ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಯಾರು ಸಹನಶೀಲರಾಗಿರುತ್ತಾರೋ ಅವರು ಆಂತರಿಕದೊಳಗೇ ತಮ್ಮ ಮನನದಲ್ಲಿ ನಿರತರಾಗಿರುತ್ತಾರೆ ಮತ್ತು ಯಾರು ಮನನ ಮಾಡುವುದರಲ್ಲಿ ನಿರತರಾಗಿರುತ್ತಾರೋ ಅವರೇ ಮಗ್ನರಾಗಿರುತ್ತಾರೆ. ಆದ್ದರಿಂದ ಸಹನಶೀಲತೆ ಬಹಳ ಅವಶ್ಯವಾಗಿದೆ. ಅವರ ಚಹರೆಯೇ ಗುಣಮೂರ್ತಿಯಾಗಿ ಬಿಡುತ್ತದೆ. ಸಹನಶೀಲತೆಯ ಧಾರಣೆಯ ಬಗ್ಗೆ ಇಷ್ಟೊಂದು ಗಮನ ಇಡಬೇಕಾಗಿದೆ. ಸಹನಶೀಲರೇ 'ಡ್ರಾಮಾ' ಎಂಬ ಗುರಾಣಿಯ

ಮೇಲೆ ನಿಲ್ಲುವವರಾಗುತ್ತಾರೆ. ಸಹನಶೀಲತೆ ಇಲ್ಲದಿದ್ದರೆ ಡ್ರಾಮಾ ಎಂಬ ಗುರಾಣಿಯನ್ನು ಹಿಡಿದುಕೊಳ್ಳಲು ಕಷ್ಟವಾಗುತ್ತದೆ. ಸಹನಶೀಲತೆ ಉಳ್ಳವರೇ ಸಾಕ್ಷೀ ಆಗಬಲ್ಲರು ಮತ್ತು ಡ್ರಾಮಾದ ಗುರಾಣಿಯನ್ನು ಹಿಡಿದುಕೊಳ್ಳಲು ಸಾಧ್ಯವಾಗುತ್ತದೆ. **(08–06–1971)**

ನಿಶ್ಚಯ ಬುದ್ಧಿಯುಳ್ಳವರಾಗಿ ಕಲ್ಯಾಣದ ಭಾವನೆ ಇಡುವುದರಿಂದ ದೃಷ್ಟಿ ಮತ್ತು ವೃತ್ತಿ ಎರಡೂ ಬದಲಾಗಿ ಬಿಡುತ್ತದೆ. ಎಂತಹ ಕ್ರೋಧಿಯೇ ಆಗಿರಲಿ, ಎದುರಿಸುವವರೇ ಆಗಿರಲಿ, ಎಂತಹ ಅಪಮಾನ ಮಾಡುವ ವ್ಯಕ್ತಿಯೇ ಆಗಿರಲಿ, ನಿಂದನೆ ಮಾಡುವಂತಹ ವ್ಯಕ್ತಿಯೇ ಇರಲಿ, ಆದರೆ ಯಾವಾಗ ಪ್ರತಿಯೊಬ್ಬರ ಮೇಲೆ ಕಲ್ಯಾಣದ ಭಾವನೆ ಇರುತ್ತದೋ ಆಗ ಜೋರು ಮಾಡುವ ಸ್ವಭಾವ ಬದಲಾಗಿ ದಯಾ ಹೃದಯಿ ಆಗಿಬಿಡುತ್ತಾರೆ. ಆಗ ಫಲಿತಾಂಶ ವೇನಾಗುತ್ತದೆ? ಅಂತಹವರನ್ನು ಅಲುಗಾಡಿಸಲು ಸಾಧ್ಯವೇ? ಆ ರೀತಿಯ ಶುಭ ಮತ್ತು ಕಲ್ಯಾಣದ ಭಾವನೆಯು ಅವರು ಸಂಸ್ಕಾರ ಪರಿವರ್ತನೆ ಮಾಡಿಕೊಂಡಿರುವ ಫಲವಾಗಿ ಕಾಣಿಸುತ್ತದೆ. ಅದು ಅವಶ್ಯಕವಾಗಿ ಅಗುತ್ತದೆ – ಕೆಲವು ಬೀಜದಿಂದ ಪ್ರತ್ಯಕ್ಷ ಫಲ ಕಾಣಿಸುತ್ತದೆ. ಕೆಲವು ಬೀಜಗಳು ಬೇಗ ಫಲ ಕೊಡುವುದಿಲ್ಲ ಸ್ವಲ್ಪ ಸಮಯ ಹಿಡಿಯುತ್ತದೆ. ಇದರಿಂದ ಫಲ ಸಿಗುವುದೇ ಇಲ್ಲ ಎಂದು ಧೈರ್ಯಗೆಡಬಾರದು. ಎಲ್ಲಾ ಫಲಗಳು ತಕ್ಷಣ ದೊರಕುವುದಿಲ್ಲ. ಕೆಲವು ಬೀಜಗಳು ಸ್ವಾಭಾವಿಕವಾದ ಮಳೆಯಿಂದ ಫಲ ನೀಡುತ್ತವೆ. ನೀರು ಹಾಕುವುದರಿಂದ ಫಲ ಕೊಡುವುದಿಲ್ಲ. ಇದು ಡ್ರಾಮಾದಲ್ಲಿ ನಿಗಧಿತವಾಗಿದೆ. ಈಗ ಯಾವ ಅವಿನಾಶಿ ಬೀಜವನ್ನು ಬಿತ್ತುತ್ತಿದ್ದೀರೋ ಅದರಿಂದ ಪ್ರತ್ಯಕ್ಷ ಫಲ ಯಾವುದೇ ರೀತಿಯಲ್ಲಿ ಕಾಣಿಸಿಯೇ ತೀರುತ್ತದೆ. ಯಾವುದಾದರೂ ಪ್ರಾಕೃತಿಕ ವಿಕೋಪ ಉಂಟಾದಾಗ, ಡ್ರಾಮಾದ ದೃಶ್ಯಗಳು ಬದಲಾವಣೆಯಾಗಬೇಕಾದಾಗ ಆ ಪ್ರಾಕೃತಿಕ ವಾಯುಮಂಡಲ, ವಾತಾವರಣಗಳು ಆ ಬೀಜದ ಫಲವನ್ನು ಹೊರತರುತ್ತದೆ. ವಿನಾಶವಂತೂ ಆಗುತ್ತದೆ – ಇದಂತೂ ಗ್ಯಾರಂಟಿಯಾಗಿದೆ. ಯಾವಾಗ ಬೀಜವು ಅವಿನಾಶಿಯಾಗಿದೆಯೋ ಆಗ ಫಲ ಸಿಗುವುದಿಲ್ಲ ಎಂಬುದು ಸಾಧ್ಯವೇ ಇಲ್ಲ. ಆದರೆ ಕೆಲವರು ಹತ್ತಿರ ಬರುತ್ತಾರೆ, ಕೆಲವರು ನಿಧಾನವಾಗಿ ನಂತರ ಬರುತ್ತಾರೆ ಎಂದಾಗ ಈಗಲೇ ಹೇಗೆ ಬರುತ್ತಾರೆ? ಆ ಬೀಜದ ಫಲವೂ ನಂತರ ಸಿಗುತ್ತದೆ. ಆದ್ದರಿಂದ ಎಂದಿಗೂ ಸರ್ವಿಸ್ ಮಾಡುವಾಗ 'ಯಾವುದನ್ನು ಮಾಡಿದೆವೋ ಅದು ವ್ಯರ್ಥವಾಯಿತು' ಎಂದು ನೋಡಬೇಡಿ, ಯೋಚಿಸಬೇಡಿ. ನಂಬರ್‌ವಾರ್ ಸಮಯದ ಅನುಸಾರ ಫಲ ಕಂಡುಬರುತ್ತಾ ಹೋಗುತ್ತದೆ. **(11–07–1971)**

ಮಾಸ್ಟರ್ ರಚಯಿತ ಎಂಬ ಸ್ಥಿತಿಯಲ್ಲಿ ನಿಲ್ಲುವುದರಿಂದ ಇಂತಹ ದೃಶ್ಯ ಕಾಣಿಸುತ್ತದೆ. ಯಾವುದೇ ಸಾರವು ಕಾಣಿಸುವುದಿಲ್ಲ. ಅರ್ಥವಿಲ್ಲದ ಮಾತುಗಳು ಕಾಣಿಸುತ್ತವೆ. ಅಂದರೆ ಸತ್ಯತೆಯನ್ನು ಪ್ರಸಿದ್ಧ ಮಾಡುವ ಧೈರ್ಯ ಮತ್ತು ಉತ್ಸಾಹ ಬರುತ್ತದೆಯೇ? ಸತ್ಯವನ್ನು ಪ್ರಸಿದ್ಧ ಮಾಡುವ ಉತ್ಸಾಹ ಬರುತ್ತದೆಯೇ ಅಥವಾ ಇನ್ನೂ ಸಮಯವಿದೆಯೇ? ಈಗಲೂ ಸತ್ಯವನ್ನು ಪ್ರಸಿದ್ಧ ಮಾಡುವುದಕ್ಕೆ ಸಮಯ ಉಳಿದಿದೆಯೇ? ಫಲಕ್ (ಹೆಮ್ಮೆ) ಸಹ ಇರಲಿ ಮತ್ತು ಝಲಕ್ (ಹೊಳಪೂ) ಸಹ ಆಗಲಿ. ಸತ್ಯದ ಮುಂದೆ ನಮ್ಮ ಅಲ್ಪಕಾಲದ ಈ ಆಡಂಬರ ನಡೆಯುವುದಿಲ್ಲ ಎಂದು ಅನುಭವವಾಗುವಂತಹ ಫಲಕ್ ಇರಲಿ. ಹೇಗೆ ವಿಕಾರಗಳು ವಿದಾಯ ಹೇಳುತ್ತಾ ಕೈ ಮುಗಿಯುತ್ತದೆ ಮತ್ತು ತಲೆಯನ್ನು ಬಗ್ಗಿಸಿ ಹೊರಟು ಹೋಗುವಂತೆ ಸ್ಟೇಜಿನ ಮೇಲೆ ನಾಟಕ ತೋರಿಸುತ್ತೀರಲ್ಲವೆ? ಇಂತಹ ಡ್ರಾಮಾವನ್ನು ವಿಶ್ವದ ಬೇಹದ್ದಿನ ವೇದಿಕೆಯ ಮೇಲೆ ಪ್ರತ್ಯಕ್ಷದಲ್ಲಿ ಮಾಡಿ ತೋರಿಸಬೇಕಾಗಿದೆ. ಈಗ ಈ ಡ್ರಾಮಾವನ್ನು ವಿಶ್ವದ ಬೇಹದ್ದಿನ ವೇದಿಕೆಯ ಮೇಲೆ ಮಾಡಿ ತೋರಿಸಿರಿ. ಇದನ್ನೇ 'ಸರ್ವಿಸ್' ಎಂದು ಹೇಳಲಾಗುತ್ತದೆ. ಇಂತಹ ಸೇವಾಧಾರಿಗಳೇ ವಿಜಯ ಮಾಲೆಯ ವಿಶೇಷ ಮಣಿಗಳಾಗುತ್ತಾರಲ್ಲವೇ? ಹಾಗಾದರೆ ಇಂತಹ ಸೇವಾಧಾರಿಗಳಾಗ ಬೇಕಾಗಿದೆ. ಈಗ ಇನ್ನೂ ಇದರ ಅಭ್ಯಾಸ ಮಾಡುತ್ತಿದ್ದೀರಿ. ಮೊದಲು ಅಭ್ಯಾಸ ಮಾಡುವಾಗ ಸಣ್ಣ ಪುಟ್ಟ ಬೇಟೆಗಳನ್ನಾಡುತ್ತಾರೆ ನಂತರ ಸಿಂಹದ ಬೇಟೆಯನ್ನಾಡುತ್ತಾರೆ. ಕೊನೆಯ ಪ್ರತ್ಯಕ್ಷ ಪಾತ್ರವನ್ನು ಒಂದು ಸಣ್ಣ ಡ್ರಾಮಾವನ್ನು ನೋಡಿದ ರೀತಿಯಲ್ಲೇ ನೋಡುತ್ತಾರೆ. ಆಗ ಒಂದು ಕಡೆ ಜಯ ಜಯಕಾರ ಮತ್ತೊಂದು ಕಡೆ ಹಾಹಾಕಾರವಾಗುತ್ತದೆ. ಎರಡೂ ಒಂದೇ ಸ್ಟೇಜ್ ಮೇಲೆ ಆಗುತ್ತದೆ. **(27–09–1971)**

ನಿಶ್ಚಯ ಬುದ್ಧಿಯವರು ತಮ್ಮ ವಿಜಯ ಅಥವಾ ಸಫಲತೆಯು ನಿಶ್ಚಿತವೆಂದು ತಿಳಿದು ನಡೆಯುತ್ತಾರೆ. ನಿಶ್ಚಯದಿಂದ ಯಾರು ಸಫಲತೆಯನ್ನು ನಿಶ್ಚಿತವೆಂದು ತಿಳಿದು ನಡೆಯುತ್ತಾರೋ ಅವರ ಸ್ಥಿತಿ ಹೇಗಿರುತ್ತದೆ? ಅವರ ಚೆಹರೆಯಲ್ಲಿ ಯಾವ ವಿಶೇಷ ಹೊಳಪು ಕಾಣಿಸುತ್ತದೆ? ಖಂಡಿತವಾಗಿಯೂ ನಮ್ಮ ವಿಜಯವು ನಿಶ್ಚಿತವಾಗಿದೆ ಎಂದು ನಿಶ್ಚಯವನ್ನಂತೂ ತಿಳಿಸಿದಿರಿ, ಆದರೆ ಆಂತಹವರ ಚೆಹರೆಯಲ್ಲಿ ಏನು ಕಾಣಿಸುತ್ತದೆ? ಯಾವಾಗ ವಿಜಯವು ನಿಶ್ಚಿತವಾಗಿದೆಯೋ ಆಗ ನಿಶ್ಚಿಂತರಾಗಿರುತ್ತೀರಿ ಅಲ್ಲವೇ? ಯಾವುದೇ ಮಾತಿನಲ್ಲಿ

ಚಿಂತೆಯ ಗೆರೆಗಳು ಕಾಣಿಸುವುದಿಲ್ಲ. ಇಂತಹ ನಿಶ್ಚಯಬುದ್ಧಿಗಳು, ನಿಶ್ಚಿತ ಹಾಗೂ ಸದಾ ನಿಶ್ಚಿಂತರು ಆಗಿರುವವರಲ್ಲವೇ? ಒಂದುವೇಳೆ ಆಗಿಲ್ಲ ಎಂದರೆ 100% ನಿಶ್ಚಯ ಬುದ್ಧಿ ಎಂದು ಹೇಗೆ ಹೇಳಲು ಸಾಧ್ಯ? 100% ನಿಶ್ಚಯ ಬುದ್ಧಿ ಎಂದರೆ ನಿಶ್ಚಿತ ವಿಜಯಿಗಳು ಮತ್ತು ನಿಶ್ಚಿಂತರು. ಈಗ ಇದರಿಂದ ಪ್ರತಿ ಮಾತಿನಲ್ಲಿಯೂ 100% ನಿಶ್ಚಯ ಬುದ್ಧಿ ಇದೆಯೆ? ಎಂದು ತಮ್ಮನ್ನು ತಾವು ನೋಡಿಕೊಳ್ಳಿ. ಕೇವಲ ತಂದೆಯ ಮೇಲೆ ನಿಶ್ಚಯವಿದ್ದಲ್ಲಿ ನಿಶ್ಚಯ ಬುದ್ಧಿ ಎಂದು ಹೇಳಲಾಗುವುದಿಲ್ಲ. ತಂದೆಯ ಮೇಲೆ ನಿಶ್ಚಯ ಮತ್ತು ಜೊತೆ ಜೊತೆಗೆ ಸ್ವಯಂ ತಮ್ಮ ಮೇಲೆಯೂ ನಿಶ್ಚಯಬುದ್ಧಿ ಇರಬೇಕಾಗಿದೆ ಮತ್ತು ಜೊತೆ ಜೊತೆಯಲ್ಲಿ ಡ್ರಾಮಾದ ಪ್ರತಿ ಸೆಕೆಂಡಿನ ಯಾವೆಲ್ಲಾ ಪಾತ್ರವು ಪುನರಾವರ್ತನೆ ಆಗುತ್ತಿದೆಯೋ ಇದರ ಮೇಲೆಯೂ 100% ನಿಶ್ಚಯ ಬುದ್ಧಿ ಇರಬೇಕಾಗಿದೆ. ಇದಕ್ಕೇ 'ನಿಶ್ಚಯಬುದ್ಧಿ' ಎಂದು ಹೇಳಲಾಗುತ್ತದೆ. ಹೇಗೆ ತಂದೆಯ ಮೇಲೆ 100% ನಿಶ್ಚಯಬುದ್ಧಿಯುಳ್ಳವರು ಆಗಿದ್ದಿರಲ್ಲವೇ?, ಇದರಲ್ಲಿ ಸಂಶಯದ ಮಾತಿಲ್ಲ. ಕೇವಲ ಒಂದು ವಿಷಯದಲ್ಲಿ ಉತ್ತೀರ್ಣರಾಗುವುದಲ್ಲ. 'ನಾನೂ ಸಹ ಕಲ್ಪದ ಹಿಂದಿನ ತಂದೆಯ ಜೊತೆಯಲ್ಲಿ  ಪಾತ್ರ ಮಾಡುವಂತಹ ಶ್ರೇಷ್ಠ ಆತ್ಮನಾಗಿದ್ದೇನೆ' ಎಂದು ಸ್ವಯಂ ತಮ್ಮ ಮೇಲೆಯೂ ಇಷ್ಟೇ ನಿಶ್ಚಯವಿರಬೇಕಾಗಿದೆ. ಜೊತೆ ಜೊತೆಗೆ ಡ್ರಾಮಾದ ಪ್ರತಿಯೊಂದು ಪಾತ್ರವು ಶ್ರೇಷ್ಠ ಆತ್ಮನಾದ ನನಗೆ ಕಲ್ಯಾಣಕಾರಿಯಾಗಿದೆ ಎಂಬ ಸ್ಥಿತಿಯಿಂದ ನೋಡಿರಿ. ಯಾವಾಗ ಈ ಮೂರು ಪ್ರಕಾರದ ನಿಶ್ಚಯದಲ್ಲಿ ಉತ್ತೀರ್ಣರಾಗುತ್ತೀರೋ ಇಂತಹ ನಿಶ್ಚಯ ಬುದ್ಧಿಯುಳ್ಳವರೇ ಮುಕ್ತಿ ಮತ್ತು ಜೀವನ್ಮುಕ್ತಿಯಲ್ಲಿ ತಂದೆಯ ಹತ್ತಿರ ಇರುತ್ತೀರಿ. **(27–2–1972)**

ಪ್ರತಿಯೊಂದು ಕರ್ಮ ಮತ್ತು ಸಂಕಲ್ಪ ಮಹಾನ್ ಆಗಿದೆಯೇ ಹಾಗೂ ಮೆಹಮಾನ್ (ಅತಿಥಿ) ಗಳಂತೆ ನಡೆಯುತ್ತಿದ್ದೇವೆಯೇ ಅಥವಾ ಕಾರ್ಯ ಮಾಡುತ್ತಿದ್ದೇವೆಯೇ ಎಂದು ಪರಿಶೀಲನೆ ಮಾಡಿಕೊಳ್ಳಬೇಕು. ಆಗ ಮೋಹ, ಆಸಕ್ತಿ ಕಡಿಮೆ ಆಗಿ ಬಿಡುತ್ತದೆ. ಕೇವಲ ಈ ಸೃಷ್ಟಿಗೆ ಮಾತ್ರ ಅತಿಥಿ ಅಲ್ಲ, ಈ ಶರೀರ ರೂಪೀ ಮನೆಯಲ್ಲೂ ಅತಿಥಿಗಳಾಗಿರಬೇಕು. ಯಾವಾಗ ತಮ್ಮನ್ನು ಅತಿಥಿಗಳೆಂದು ತಿಳಿಯುತ್ತೀರೋ ಆಗ ದೈಹಿಕ ಭಾವದ ಯಾವ ಆಕರ್ಷಣೆಯಾಗುತ್ತದೆಯೋ ಅಥವಾ ಸ್ಮೃತಿಯ ರೂಪದಲ್ಲಿ ಯಾವ ಸಂಸ್ಕಾರಗಳು ನಿಂತಿವೆಯೋ ಅವು ಬಹಳ ಸಹಜವಾಗಿ ಕೊನೆಗೊಳ್ಳುತ್ತದೆ. ತಮ್ಮ ಮನೆಯನ್ನು ತಾವು ಯಾವುದೋ ಕಾರಣದಿಂದ ಮಾರಿಬಿಡುತ್ತೀರಿ ಎಂದು ಭಾವಿಸಿರಿ. ಮಾರಿದ ಆ ಮನೆಯ ಮೇಲೆ ತಮ್ಮದು ಎನ್ನುವ ಭಾವನೆ ಹೊರಟು ಹೋಗುತ್ತದೆ ನಂತರ ಒಂದುವೇಳೆ ಅದೇ ಮನೆಯಲ್ಲೇ ಇದ್ದರೂ ಕೂಡ ಅತಿಥಿಗಳೆಂದು ಭಾವಿಸಿ ವಾಸಿಸುತ್ತೀರಿ. ತಮ್ಮದು ಎಂದು ಭಾವಿಸಿ ವಾಸಿಸುವುದಕ್ಕೂ, ಅತಿಥಿಗಳೆಂದು ಭಾವಿಸಿ ವಾಸಿಸುವುದಕ್ಕೂ ಎಷ್ಟೊಂದು ವ್ಯತ್ಯಾಸವಾಗಿ ಬಿಡುತ್ತದೆ. ಆದ್ದರಿಂದ ಈ ಶರೀರ, ಯಾವುದನ್ನು ನಿಮ್ಮದೆಂದು ಭಾವಿಸಿದ್ದೀರೋ, ಈಗ ಇದನ್ನು ನನ್ನದಲ್ಲ ಎಂದು ಭಾವಿಸಿರಿ. ಈಗ ನನ್ನದು ಎಂದು ಹೇಳುವಿರಾ? ಯಾವುದರಿಂದ ಮರುಜೀವ ಆಗಿದ್ದೀರಿ ಎಂದ ಮೇಲೆ ಇದು ನನ್ನ ಶರೀರವಲ್ಲ. ನನ್ನ ಶರೀರವೂ ಸಹ ಅಲ್ಲ. ಶರೀರವನ್ನು ಅರ್ಪಣೆ ಮಾಡಿದ್ದೀರೋ ಅಥವಾ ನನ್ನದೆಂದು ಭಾವಿಸುತ್ತೀರೋ? ಈಗ ಈ ಹಳೆಯ ಶರೀರದ ಆಯಸ್ಸಂತೂ ಮುಗಿದು ಹೋಗಿದೆ. ಡ್ರಾಮಾದ ಅನುಸಾರ ಈಶ್ವರೀಯ ಕರ್ತವ್ಯದ ಸಲುವಾಗಿ ಈ ಶರೀರ ನಡೆಯುತ್ತಿದೆ. ಆದ್ದರಿಂದ ತಾವು ಇದನ್ನು ನನ್ನ ಶರೀರವೆಂದು ಹೇಳಲು ಸಾಧ್ಯವಿಲ್ಲ. ಈ ಶರೀರದಿಂದಲೂ ಮಮತ್ವವು ಸಮಾಪ್ತಿಯಾಗಿ ಬಿಟ್ಟಿತು. ತಂದೆಯು ಆತ್ಮಕ್ಕೆ ಕರ್ಮ ಮಾಡುವ ಸಲುವಾಗಿ ತಾತ್ಕಾಲಿಕವಾಗಿ ಸಾಲದ ರೂಪದಲ್ಲಿ ಈ ಶರೀರವನ್ನು ನೀಡಿದ್ದಾರೆ. ಹೇಗೆ ತಂದೆಯು ನನಗೆ ಶರೀರವಿಲ್ಲ, ಶರೀರವನ್ನು ಸಾಲ ತೆಗೆದುಕೊಂಡು ಕರ್ತವ್ಯ ಮಾಡುವುದಕ್ಕಾಗಿ ಪಾತ್ರ ಮಾಡುತ್ತಿದ್ದೇನೆ ಎಂದು ತಿಳಿದಿದ್ದಾರೋ, ಹಾಗೆಯೇ ತಾವೂ ಕೂಡ ತಂದೆಯ ಸಮಾನ ಆಗಿದ್ದೀರಲ್ಲವೇ? ನನ್ನ ಶರೀರ ಎಂದು ಭಾವಿಸಿದರೆ ಎಲ್ಲ ಮಾತುಗಳು ಬಂದು ಬಿಡುತ್ತವೆ. 'ನಾನು' ಎಂಬ ಶಬ್ದದ ಜೊತೆಯಲ್ಲಿ ಬಹಳ ವಿಷಯ ಅಡಗಿದೆ. ನನ್ನತನವೇ ಸಮಾಪ್ತಿಯಾಗಿ ಬಿಟ್ಟಾಗ ಅದರ ಅನೇಕ ಜೊತೆಗಾರರು ಸಮಾಪ್ತಿಯಾಗಿ ಬಿಡುತ್ತಾರೆ. ಉಪರಾಮ ಆಗಿಬಿಡುತ್ತೀರಿ. ಈ ಶರೀರವನ್ನು ಈಶ್ವರೀಯ ಕರ್ತವ್ಯದ ಸಲುವಾಗಿ ಸಾಲವಾಗಿ ತೆಗೆದುಕೊಂಡಿದ್ದೀರಿ. ಈ ಶರೀರವು ಬೇರಾವ ಕರ್ತವ್ಯಕ್ಕಾಗಿ ಇಲ್ಲ. ಈ ರೀತಿಯಾಗಿ ತಮ್ಮನ್ನು ಮೆಹಮಾನ್ (ಅತಿಥಿ) ಎಂದು ತಿಳಿದು ನಡೆಯುವುದರಿಂದ ಪ್ರತಿಯೊಂದು ಕರ್ಮವೂ ತಾನಾಗಿಯೇ ಮಾಹಾನ್ ಆಗುತ್ತದೆ. **(02–04–1972)**

ತಮ್ಮ ಅದೃಷ್ಟವನ್ನು ರೂಪಿಸಿಕೊಳ್ಳಬಹುದಾಗಿದೆಯೇ ಅಥವಾ  ರೂಪಿಸಿಕೊಂಡಿರುವ ಅದೃಷ್ಟದ ಮೇಲೆ ನಡೆಯುತ್ತಿದ್ದೀರೋ? ಅದೃಷ್ಟವನ್ನು ಬದಲಾವಣೆ ಮಾಡಬಹುದೋ ಅಥವಾ ಇಲ್ಲವೋ? ನತದೃಷ್ಟರಿಂದ ಅದೃಷ್ಟವಂತರು ಆಗಬಲ್ಲಿರಾ? ಅದೃಷ್ಟವನ್ನು ಮಾಡಿಕೊಳ್ಳಲು ಪುರುಷಾರ್ಥದಲ್ಲಿ ಅವಕಾಶವಿದೆಯೆ? (ಹೌದು) ಅದೃಷ್ಟವನ್ನು ಬೆಳಗಿಸಿಕೊಂಡು ಬಂದಿದ್ದೀರಾ ಅಥವಾ ಬೆಳಗಿಸಿಕೊಳ್ಳಲು

ಬಂದಿದ್ದೀರಾ? ಬೆಳಗಿರುವ ಅದೃಷ್ಟವನ್ನು ಜೊತೆಯಲ್ಲಿ ತಂದಿದ್ದೀರಿ ಅಲ್ಲವೇ? ಮತ್ತೆ ಯಾವ ಅದೃಷ್ಟವನ್ನು ಮಾಡಿಕೊಳ್ಳುತ್ತೀರಿ? ಯಾವ ಅದೃಷ್ಟವನ್ನು ಬೆಳಗಿಸಿಕೊಂಡು ಬಂದಿದ್ದೀರೋ, ಅದರ ಅನುಸಾರವಾಗಿಯೇ ತಂದೆಯ ಮಕ್ಕಳಾಗಿದ್ದೀರಿ, ಆದರೆ ತಂದೆಯ ಮಕ್ಕಳಾಗುವುದೇ ಅದೃಷ್ಟದ ಮಾತಾಗಿದೆಯಲ್ಲವೆ? ಅದೃಷ್ಟವನ್ನು ಪಡೆದುಕೊಂಡೂ ಬಂದಿದ್ದೀರಿ ಮತ್ತು ಮುಂದೆಯೂ ಪಡೆದುಕೊಳ್ಳುತ್ತೀರಿ, ಹೀಗೇನು? ಯಾವುದಾದರು ಮಾತಿನಲ್ಲಿ ಹೆಚ್ಚು ಪುರುಷಾರ್ಥ ಮಾಡಬೇಕಾಗಿ ಬಂದಾಗ 'ನನ್ನ ಅದೃಷ್ಟದಲ್ಲಿ ಹೀಗೆಯೇ ಬರೆದಿದೆ' ಎಂಬ ಸಂಕಲ್ಪ ತಮ್ಮಲ್ಲಿ ಬರುತ್ತದೆಯೇ? ಪುರುಷಾರ್ಥದ ನಂತರವೂ ಸಫಲತೆ ಸಿಗದಿದ್ದಾಗ ನನ್ನ ಅದೃಷ್ಟದಲ್ಲಿ ಹೀಗೆಯೇ ಇದೆ ಎಂದು ತಿಳಿಯುತ್ತೀರ ಅಲ್ಲವೆ? ಸಫಲತೆ ಸಿಗದಿರಲು ಕಾರಣವೇನು? ತಮ್ಮ ರೀತಿಯಲ್ಲಿ ಪುರುಷಾರ್ಥ ಮಾಡಿದರೂ ಸಫಲತೆ ಸಿಗದಿದ್ದರೆ ಏನು ಹೇಳುತ್ತೀರಿ? ಡ್ರಾಮಾದಲ್ಲಿ ಹೀಗೆಯೇ ಇದೆ. ಆದ್ದರಿಂದ ಡ್ರಾಮಾದಲ್ಲಿ ಮಾಡಲ್ಪಟ್ಟಿರುವ ಅದೃಷ್ಟವನ್ನೇ ತೆಗೆದುಕೊಂಡು ಬಂದಿದ್ದೀರಿ ಅಲ್ಲವೆ? **(27–04–1972)**

ಮುಖ್ಯವಾಗಿ ಬಹಳ ಸಹಜ ಮತ್ತು ಎಲ್ಲರೂ ಮಾಡುವಂತಹದ್ದಾಗಿರುವ ಯಾವ ವಿಷಯದ ಬಗ್ಗೆ ವಿಶೇಷವಾಗಿ ಗಮನ ಇಡಬೇಕಾಗಿದೆ. ರಿವೈಜ್ ಕೋರ್ಸ್‌ನಲ್ಲಿಯೂ ಅದೇ ಸಹಜವಾದ ಯುಕ್ತಿಯನ್ನು ಪುನಃ ಪುನಃ ರಿವೈಜ್ ಮಾಡಲಾಗುತ್ತಿದೆ. ರಿವೈಜ್ ಕೋರ್ಸ್ ಅನ್ನು ಗಮನವಿಟ್ಟು ಕೇಳುತ್ತೀರಾ? ಓದುತ್ತಿರಾ? ನಾವು ಎಲ್ಲವನ್ನೂ ತಿಳಿದುಕೊಂಡು ಬಿಟ್ಟಿದ್ದೇವೆ ಎಂದು ಭಾವಿಸುವುದಿಲ್ಲ ತಾನೆ? ತಮ್ಮನ್ನು ಎಲ್ಲವನ್ನು ತಿಳಿದುಕೊಂಡವರಾಗಿದ್ದೇವೆ ಎಂದು ಭಾವಿಸಿ ರಿವೈಜ್ ಕೋರ್ಸ್ ಅನ್ನು ಹಗುರವಾಗಿ ತಿಳಿದು ಬಿಟ್ಟುಬಿಡುವುದಿಲ್ಲ ತಾನೆ? ಈ ದಿನ ಪರೀಕ್ಷೆ ಮಾಡುತ್ತೇನೆ. ಯಾರು ಒಂದು ದಿನವೂ ರಿವೈಜ್ ಕೋರ್ಸ್ ಅನ್ನು ತಪ್ಪಿಸಿಕೊಳ್ಳುವುದಿಲ್ಲವೋ ಅಥವಾ ಧಾರಣೆ ಬಗ್ಗೆ ಗಮನ ಕೊಡುವುದಿಲ್ಲವೋ ಅವರು ಕೈ ಮೇಲೆತ್ತಿ. ಹೋಗುವಾಗ ಬರುವಾಗ ಮುರಳಿಯನ್ನು ತಪ್ಪಿಸಿಕೊಳ್ಳುತ್ತೀರೋ ಅಥವಾ ಓದುತ್ತೀರೋ ಅಥವಾ ತಪ್ಪಿಹೋಗುತ್ತದೆಯೋ? ಜ್ಞಾನವೆಲ್ಲವನ್ನೂ ತಿಳಿದುಕೊಂಡಿದ್ದೇವೆ ಎಂದು ಭಾವಿಸುವುದಿಲ್ಲತಾನೆ? ತಿಳಿದುಕೊಂಡಿರಬಹುದು ಆದರೆ ತಿಳಿದುಕೊಳ್ಳ ಬೇಕಾಗಿರುವುದು ಇನ್ನೂ ಬಹಳ ಉಳಿದು ಬಿಟ್ಟಿದೆ. ಯಾರು ರಿವೈಜ್ ಕೋರ್ಸ್ ಅನ್ನು ಚೆನ್ನಾಗಿ ರಿವೈಜ್ ಮಾಡುತ್ತಾರೋ ಅವರು ಸ್ವಯಂ ಹೀಗೆಯೇ ಅನುಭವ ಮಾಡುತ್ತಾರೆ. ಅವರು ರಿವೈಜ್ ಮಾಡುವಾಗ ಹಳೆಯದೆಂದು ಅನಿಸುತ್ತದೆಯೋ ಅಥವಾ ಹೊಸದೆಂದು ಅನಿಸುತ್ತದೆಯೇ? ಹೊಸಬರಿಗಂತೂ ಅನೇಕ ಮಾತುಗಳಿರುತ್ತವೆ ಆದರೆ ಹಳಬರು ಪುನಃ ರಿವೈಜ್ ಕೋರ್ಸ್‌ನ್ನು ಮಾಡಿದಾಗ ಏನು ಅನುಭವವಾಗುತ್ತದೆ? ಹೊಸದೆಂದು ಎನಿಸುತ್ತದೆಯೇ? ಏಕೆಂದರೆ ಡ್ರಾಮಾ ಅನುಸಾರ ರಿವೈಜ್ ಏಕಾಯಿತೋ ಅದೂ ಡ್ರಾಮಾದಲ್ಲಿ ನಿಗದಿಯಾಗಿದೆ. ರಿವೈಜ್ ಏಕೆ ಮಾಡಲಾಗುತ್ತದೆ? ಯಾವಾಗ ಗಮನ ಕಡಿಮೆಯಾಗುತ್ತದೋ, ಸ್ಮೃತಿ ಕಡಿಮೆಯಾಗುತ್ತದೋ ಆಗ ಪದೇ ಪದೇ ರಿವೈಜ್ ಮಾಡಿಸಲಾಗುತ್ತದೆ. ಈಗ ಇನ್ನೂ ಪ್ರಾಕ್ಟಿಕಲ್‌ನಲ್ಲಿ ಅನುಷ್ಠಾನಕ್ಕೆ ತಂದಿಲ್ಲವಾದ್ದರಿಂದ ರಿವೈಜ್ ಮಾಡಲಾಗುತ್ತಿದೆ. ಎಷ್ಟು ಕೇಳಿದ್ದೀರೋ, ಎಷ್ಟು ಹೇಳುತ್ತೀರೋ ಅಷ್ಟು ಇನ್ನೂ ಆಚರಣೆಗೆ ತಂದಿಲ್ಲ. ಆದ್ದರಿಂದ ಶಕ್ತಿಶಾಲಿಗಳನ್ನಾಗಿ ಮಾಡಲು ಪುನಃ ಈ ಕೋರ್ಸ್ ನಡೆಯುತ್ತಿದೆ. ಹಳಬರನ್ನು ಶಕ್ತಿಶಾಲಿಗಳನ್ನಾಗಿ ಮಾಡಲು ಮತ್ತು ಹೊಸಬರನ್ನು ಶಕ್ತಿಶಾಲಿಗಳನ್ನಾಗಿ ಮಾಡುವುದರ ಜೊತೆ ಜೊತೆಗೆ ತಮ್ಮ ಹಕ್ಕನ್ನು ಪೂರ್ತಿ ಪಡೆದುಕೊಳ್ಳಲೂ ಸಹಾ ಈ ರಿವೈಜ್ ಕೋರ್ಸ್ ನಡೆಯುತ್ತಿದೆ. ಆದ್ದರಿಂದ ಈಗ ಈ ಕೊರತೆಯನ್ನು ತುಂಬಿಸಿಕೊಳ್ಳಲು ಗಮನವನ್ನು ಮತ್ತೆ ಮತ್ತೆ ರಿವೈಜ್ ಮಾಡಿರಿ. **(24–06–1972)**

ಪರೀಕ್ಷೆಗಳು ಬಹಳ ಬರಲಿವೆ. ಪೇಪರ್ ಅಂತೂ ಬಂದೇ ಬರುತ್ತದೆ. ಹೇಗೆ ಹೇಗೆ ಅಂತಿಮದ ಫಲಿತಾಂಶದ ಸಮಯ ಸಮೀಪ ಬರುತ್ತಿದೆಯೋ, ಹಾಗೆಯೇ ಆಗಾಗ ಪ್ರಾಕ್ಟಿಕಲ್ ಪೇಪರ್ ಸ್ವತಃ ಬರುತ್ತಾ ಇರುತ್ತದೆ. ಪರೀಕ್ಷೆಯನ್ನು ನಿಗಧಿಯಾದ ಕಾರ್ಯಕ್ರಮದಂತೆ ತೆಗೆದುಕೊಳ್ಳುವುದಿಲ್ಲ. ಆಟೋಮೆಟಿಕ್ ಆಗಿ ಡ್ರಾಮಾನುಸಾರ ಆಗಾಗ ಪ್ರತಿಯೊಬ್ಬರ ಪ್ರಾಕ್ಟಿಕಲ್ ಪರೀಕ್ಷೆ ನಡೆಯುತ್ತಿರುತ್ತದೆ. ಆದ್ದರಿಂದ ಪರೀಕ್ಷೆಯಲ್ಲಿ ಉತ್ತೀರ್ಣರಾಗುತ್ತೇವೆ ಎಂಬ ಧೈರ್ಯ ತಮ್ಮಲ್ಲಿದೆ ಎಂದು ಭಾವಿಸುವಿರಾ? ಗಾಬರಿಯಾಗುವುದಿಲ್ಲ ತಾನೆ? ಅಂಗದನ ಸಮಾನ ಸ್ವಲ್ಪವೂ ತಮ್ಮ ಬುದ್ಧಿಯೋಗವನ್ನು ಅಲುಗಾಡಿಸುವವರಲ್ಲ ತಾನೆ? **(12–07–1972)**

ಈಗ ಚಿಂತೆಯಾಗುತ್ತಿದೆಯೇ? ಒಂದುವೇಳೆ ಇಲ್ಲಿಯವರೆಗೂ ನಿಮ್ಮಲ್ಲಿ ಯಾವುದೇ ಪ್ರಕಾರದ ಚಿಂತೆಯಿದ್ದರೆ ಅನ್ಯರ ತೊಂದರೆಗಳನ್ನು ಹೇಗೆ ದೂರ ಮಾಡುವಿರಿ? ಚಿಂತೆಗಳನ್ನು ದೂರ ಮಾಡುವವರಾಗಿದ್ದೀರೋ ಅಥವಾ ನೀವೇ ಚಿಂತಾಗ್ರಸ್ತರಾಗುವವರಾಗುತ್ತೀರೋ? ಹೇಗೆ ಯಾವುದೇ ಭಟ್ಟಿಯನ್ನು ಮಾಡಿದಾಗ ಅದರ ಸಮಾಪ್ತಿ ಸಮಾರಂಭ ಅಥವಾ ಪರಿವರ್ತನಾ ಸಮಾರಂಭವನ್ನು

ಮಾಡುತ್ತೀರಲ್ಲವೇ? ಯಾವ ಈ ಬೇಹದ್ದಿನ ಭಟ್ಟಿ ನಡೆಯುತ್ತಿದೆಯೋ ಇದರಲ್ಲಿ ಬಲಹೀನತೆಗಳ ಸಮಾಪ್ತಿ ಸಮಾರಂಭ ಅಥವಾ ಪರಿವರ್ತನಾ ಸಮಾರಂಭವನ್ನು ಯಾವಾಗ ಆಚರಿಸುವಿರಿ? ಇದಕ್ಕೆ ಯಾವುದಾದರೂ ನಿಗದಿಯಾದ ದಿನಾಂಕ ಇದೆಯೆ? ಡ್ರಾಮಾ ಮಾಡಿಸುತ್ತದೆಯೇ? ಡ್ರಾಮಾ ಅಂತೂ ಸರ್ವ ಆತ್ಮಗಳಿಗೂ ಹಳೆಯ ಪ್ರಪಂಚದಿಂದ ಸಮಾಪ್ತಿ ಸಮಾರಂಭವನ್ನು ಮಾಡಿಸುತ್ತದೆ, ಆದರೆ ತೀವ್ರ ಪುರುಷಾರ್ಥಿ ಶ್ರೇಷ್ಠ ಆತ್ಮಗಳಾದ ತಾವು ಮೊದಲೇ ಬಲಹೀನತೆಗಳ ಸಮಾಪ್ತಿ ಸಮಾರಂಭವನ್ನು ಆಚರಿಸಬೇಕಲ್ಲವೆ? ಅಥವಾ ತಾವೂ ಸಹ ಅನ್ಯ ಆತ್ಮಗಳ ಜೊತೆಯಲ್ಲಿ ಅಂತ್ಯದಲ್ಲಿ ಆಚರಿಸುವಿರೋ? ಹೇಗೆ ಬೇರೆ ಸೆಮಿನಾರ್‌ಗಳನ್ನು ಮಾಡುವಾಗ ಅದರ ದಿನಾಂಕವನ್ನು ನಿಗದಿ ಮಾಡಿರುತ್ತೀರಿ. ಅದರ ಪ್ರಕಾರವೇ ಸಿದ್ಧತೆಗಳನ್ನು ಮಾಡಿಕೊಳ್ಳುತ್ತೀರಿ ಮತ್ತು ಆ ಕಾರ್ಯವನ್ನು ಸಫಲ ಮತ್ತು ಸಂಪನ್ನ ಮಾಡುತ್ತೀರಿ. ಹಾಗೆಯೇ ಈ ಬಲಹೀನತೆಗಳನ್ನು ಸಮಾಪ್ತಿ ಮಾಡಿಕೊಳ್ಳುವ ದಿನಾಂಕವು ನಿಗದಿಯಾಗಲು ಸಾಧ್ಯವಿಲ್ಲವೇ? ಈ ಸೆಮಿನಾರ್ ಆಗುವ ಸಂಭವವಿದೆಯೇ? **(18–07–1972)**

ಈಗ ಯಾವುದನ್ನು ಸ್ವಪ್ನದಲ್ಲೂ, ಸಂಕಲ್ಪದಲ್ಲೂ ಊಹಿಸಿರುವುದಿಲ್ಲವೋ ಅಂತಹ ಪರೀಕ್ಷೆಗಳು ಬರಲಿವೆ. ಹದ್ದಿನ ಡ್ರಾಮಾವನ್ನು ಹೇಗೆ ನೋಡುತ್ತೀರೋ ಹಾಗೆಯೇ ಈ ಪರೀಕ್ಷೆಗಳನ್ನೂ ನೋಡುವ ಅಭ್ಯಾಸ ಮಾಡಬೇಕಾಗಿದೆ. ಆಗ, ದುಃಖದಾಯಕವಾಗಿರಲಿ ಅಥವಾ ಹಾಸ್ಯಮಯವಾಗಿರಲಿ, ಎರಡೂ ಪಾತ್ರಗಳನ್ನು ಸಾಕ್ಷಿಯಾಗಿ ನೋಡುವಿರಿ, ಏನೂ ವ್ಯತ್ಯಾಸವಾಗುವುದಿಲ್ಲ. ಏಕೆಂದರೆ ಡ್ರಾಮಾವನ್ನು ತಿಳಿದುಕೊಂಡಿರುವಿರಿ. ಇಂತಹ ಏಕರಸ ಸ್ಥಿತಿಯು ಇರಬೇಕಾಗಿದೆ. ರಮಣೀಕ ವಾದ ಪಾತ್ರವಾಗಲೀ ಅಥವಾ ಯಾವುದೋ ಸ್ನೇಹಿ ಆತ್ಮದ ಗಂಭೀರ ಪಾತ್ರವಿರಲಿ ಅಗಲೂ ಸಾಕ್ಷಿಯಾಗಿ ನೋಡಿರಿ. ಸಾಕ್ಷಿಯಾಗಿ ನೋಡುವಂತಹ ಸ್ಥಿತಿ ಇರಬೇಕಾಗಿದೆ. ಗಾಬರಿಯಾಗಿರುವ ಅಥವಾ ಯುದ್ಧ ಮಾಡುತ್ತಿರುವ ಸ್ಥಿತಿ ಇರಬಾರದು. ಕೆಲವರು ಹೆದರುವುದಿಲ್ಲ, ಆದರೆ ಯುದ್ಧದಲ್ಲಿ ತೊಡಗಿಬಿಡುತ್ತಾರೆ. ಖಂಡಿತವಾಗಿ ಏನೋ ಕಲ್ಯಾಣವಾಗುವುದು. ಆದರೆ ಸಾಕ್ಷಿದ್ರಷ್ಟಾನ ಸ್ಥಿತಿಯು ಸಂಪೂರ್ಣ ಭಿನ್ನವಾಗಿದೆ. ಇದನ್ನೇ ಏಕರಸ ಸ್ಥಿತಿ ಎನ್ನಲಾಗುತ್ತದೆ. **(19–09–1972)**

ಯಾರಾದರೂ ತಮ್ಮ ಸ್ವಭಾವ ಅಥವಾ ಸಂಸ್ಕಾರದ ರೂಪದಲ್ಲಿ ನಿಮ್ಮ ಮುಂದೆ ಪರೀಕ್ಷೆಯ ರೂಪದಲ್ಲಿ ಬರಲಿ, ಆದರೆ ತಾವು ಒಂದು ಸೆಕೆಂಡಿನಲ್ಲಿ ತಮ್ಮ ಶ್ರೇಷ್ಠ ಸಂಸ್ಕಾರ, ಒಬ್ಬರ ಸ್ಮೃತಿಯಿಂದ ಇಂತಹ ಆತ್ಮದ ಬಗ್ಗೆಯೂ ದಯಾಹೃದಯದ ಸಂಸ್ಕಾರ ಅಥವಾ ಸ್ವಭಾವವನ್ನು ಧಾರಣೆ ಮಾಡಿಕೊಳ್ಳಬಲ್ಲಿರಾ? ಯಾರಾದರೂ ದೈಹಿಕ ದೃಷ್ಟಿಯಿಂದ ತಮ್ಮ ಮುಂದೆ ಬಂದರೂ ತಾವು ಒಂದು ಸೆಕೆಂಡಿನಲ್ಲಿ ಅವರ ದೃಷ್ಟಿಯನ್ನು ಆತ್ಮಿಕ ದೃಷ್ಟಿಯನ್ನಾಗಿ ಪರಿವರ್ತನೆ ಮಾಡಿ ಬಿಡಿ. ಯರಾದರೂ ಬೀಳಿಸುವ ಮನೋಭಾವದಿಂದ ಅಥವಾ ತಮ್ಮ ಸಂಗದೋಷದಲ್ಲಿ ತರುವಂತಹ ದೃಷ್ಟಿಯಿಂದ ಎದುರಿಗೆ ಬಂದರೂ ತಾವು ಸದಾ ಶ್ರೇಷ್ಠ ಸಂಗದ ಆಧಾರದಿಂದ ಅವರನ್ನೂ ಸಹ ಸಂಗದೋಷದಿಂದ ಬಿಡಿಸಿ ಶ್ರೇಷ್ಠ ಸಂಗದಲ್ಲಿ ಇರುವವರನ್ನಾಗಿ ಮಾಡಿಬಿಡಿ. ಇಂತಹ ಪರಿವರ್ತನೆ ಮಾಡುವ ಯುಕ್ತಿ ಬರುವುದರಿಂದ ಎಂದಿಗೂ ವಿಘ್ನಗಳಿಂದ ಸೋಲನ್ನು ಅನುಭವಿಸಲಾರಿರಿ. ತಮ್ಮ ಸಂಪರ್ಕದಲ್ಲಿ ಬರುವವರೆಲ್ಲರೂ ತಮ್ಮ ಈ ಸೂಕ್ಷ್ಮ ಶ್ರೇಷ್ಠ ಸೇವೆಗೆ ಬಲಿಹಾರಿಯಾಗುವರು. ಹೇಗೆ ತಂದೆಯು ಆತ್ಮಗಳನ್ನು ಪರಿವರ್ತನೆ ಮಾಡಿದಾಗ ತಂದೆಗೆ ಧನ್ಯವಾದಗಳನ್ನು ಹೇಳುತ್ತೀರೋ, ಬಲಿಹಾರಿಯಾಗು ತ್ತೀರೋ ಹಾಗೆಯೇ ತಮ್ಮ ಸಂಪರ್ಕದಲ್ಲಿ ಬರುವ ಎಲ್ಲಾ ಆತ್ಮಗಳು ತಮಗೆ ಧನ್ಯವಾದವನ್ನು ತಿಳಿಸುತ್ತಾರೆ. ಒಂದೇ ಒಂದು ಸಹಜ ಯುಕ್ತಿಯಾಗಿದೆಯಲ್ಲವೆ? ಹೇಗೂ ಯಾವುದೇ ಮಾತು, ಯಾವುದೇ ದೃಶ್ಯ, ಯಾವುದೇ ವಸ್ತು ಪರಿವರ್ತನೆ ಯಂತೂ ಆಗಲೇ ಬೇಕಾಗಿದೆ. ಹೇಗೆ ನೀವು ಎಲ್ಲರಿಗೂ ವಿನಾಶ ಆಗಿಯೇ ಆಗುತ್ತದೆ, ಮುಕ್ತಿಧಾಮಕ್ಕೆ ಎಲ್ಲರೂ ಹೋಗಲೇ ಬೇಕಾಗಿದೆ ಎಂದು ತಿಳಿಸುತ್ತೀರಿ. ಆದರೆ ವಿನಾಶಕ್ಕೆ ಮೊದಲು ಜ್ಞಾನ – ಯೋಗದ ಆಧಾರದಿಂದ ವಿಕರ್ಮಗಳನ್ನು ವಿನಾಶ ಮಾಡಿಕೊಂಡರೆ ಶಿಕ್ಷೆಗಳಿಂದ ಬಿಡುಗಡೆಯಾಗುತ್ತೀರಿ. ಹೋಗಲೇ ಬೇಕಾಗಿದೆ ಎಂದ ಮೇಲೆ ಯಾರು ಮಾಡುತ್ತಾರೋ ಅವರು ಪಡೆಯುತ್ತಾರೆ. **(24–12–1972)**

ಈಗ ಡ್ರಾಮಾದ ರೀಲ್ ಬೇಗ ಬೇಗ ಪರಿವರ್ತನೆ ಆಗಬೇಕಾಗಿದೆ. ಯಾವುದು ವರ್ತಮಾನ ಸಮಯವು ನಡೆಯುತ್ತಿದೆಯೋ, ಆ ಎಲ್ಲಾ ಮಾತುಗಳು ಪರಿವರ್ತನೆಯಾಗಲಿವೆ. ವ್ಯಕ್ತದ ಮೂಲಕ ಅವ್ಯಕ್ತದ ಮಿಲನ – ಇವೆಲ್ಲವೂ ತೀವ್ರ ಪರಿವರ್ತನೆಯಾಗಲಿವೆ. ಈ ಕಾರಣದಿಂದ ಅವ್ಯಕ್ತ ಮಿಲನದ ವಿಶೇಷ ಅನುಭವ ವಿಶೇಷ ರೂಪದಲ್ಲಿ ಮಾಡಿಸಲಾಗಿದೆ ಮತ್ತು ಮುಂದೆಯೂ ಅವ್ಯಕ್ತ ಸ್ಥಿತಿಯ ಮೂಲಕ ಅವ್ಯಕ್ತ ಮಿಲನದ ವಿಚಿತ್ರ ಅನುಭವವನ್ನು ಬಹಳ ಮಾಡುತ್ತೀರಿ. ಈ ವರ್ಷದಲ್ಲಿ ಅವ್ಯಕ್ತ ಮಿಲನದ ಮೂಲಕ ವಿಶೇಷ ಶಕ್ತಿಗಳನ್ನು ಪ್ರಾಪ್ತಿ ಮಾಡಿಕೊಳ್ಳುವ ವರದಾನ ಸಿಕ್ಕಿದೆ. ಆದ್ದರಿಂದ ಈ

ತಿಂಗಳು ಮುಗಿದು ಹೋಯಿತು ಎಂದು ತಿಳಿಯಬೇಡಿ. ಆದರೆ ಇದೇ ಅಭ್ಯಾಸವನ್ನು ಯಾರು ನಿರಂತರವಾಗಿ ಮುಂದೆಯೂ ಹೆಚ್ಚಿಸಿಕೊಳ್ಳುತ್ತಾ ಇರುತ್ತಾರೋ, ಅವರಿಗೆ ಬಹಳ ಹೊಸ ಹೊಸ ಅನುಭವಗಳು ಆಗುತ್ತಾ ಹೋಗುತ್ತವೆ. ತಿಳಿಯಿತೆ? **(23–01–1973)**

ಯಾವ ಯಾವ ಶಕ್ತಿಗಳಿವೆಯೋ, ಅವುಗಳನ್ನು ಪ್ರಾಕ್ಟಿಕಲ್‌ನಲ್ಲಿ ತರುವುದೇ ಗುಣವಾಗಿದೆ. ಮತ್ತು ಕರ್ತವ್ಯ ಏನಾಗಿದೆ? ಕಷ್ಟವನ್ನು ಸುಲಭ ಮಾಡುವುದು, ಪರಿವರ್ತನೆ ಮಾಡುವುದು. ಹೆದರಿ ಓಡುವುದಲ್ಲ. ಯಾವ ಸ್ಥಾನದಲ್ಲಿ ಸ್ಥಿತರಾಗುವುದರಿಂದ ಬ್ರಾಹ್ಮಣತನದ ಮುಖ್ಯ ಕರ್ತವ್ಯವನ್ನು ಬಹಳ ಚೆನ್ನಾಗಿ ಮಾಡಬಲ್ಲಿರಿ ಅಂತಹ ನಿವಾಸ ಸ್ಥಾನ ಯಾವುದು? ಬುದ್ಧಿಯನ್ನು ಸ್ಥಿರಗೊಳಿಸುವುದು ಬ್ರಾಹ್ಮಣರ ಮುಖ್ಯ ಕರ್ತವ್ಯವಾಗಿದೆ. ಯಾವ ಸ್ಥಾನದಲಿ ನಿರಂತರ ಸ್ಥಿತರೂ ಆಗಬಹುದಾಗಿದೆ. ನಡೆಯುತ್ತಾ ಓಡಾಡುತ್ತಾ ಸಹ ಆ ಸ್ಥಿತಿಯಲ್ಲಿ ಇರಬಹುದಾಗಿದೆ. ಎಲ್ಲಾ ಮಾತುಗಳ ಸಾರವು ಅದರಲ್ಲೇ ಬರುವಂತಹದ್ದಾಗಿದೆ. ವಿಸ್ತಾರದಲ್ಲಂತೂ ಈ ಎಲ್ಲಾ ಮಾತುಗಳು ಬರುತ್ತವೆ. ಆದರೆ ವಿಸ್ತಾರವನ್ನು ಒಂದೇ ಶಬ್ದದಲ್ಲಿ ಅಡಗಿಸಿ. ನಿವಾಸ ಸ್ಥಾನ ಎಂದರೆ ಸದಾ ಯಾವ ಸ್ಥಿತಿಯಲ್ಲಿ ಸ್ಥಿತರಾಗಬೇಕೋ ಆ ಸ್ಥಾನವಾಗಿದೆ 'ಸಾಕ್ಷೀದೃಷ್ಟ'. ಈ ಸಾಕ್ಷೀದೃಷ್ಟದ ಕವಚ ಹಾಗೂ ಡ್ರಾಮಾದ ಪಟ್ಟಿಯ ಮೇಲೆ ಪ್ರತಿಯೊಂದು ಕರ್ಮ ಮತ್ತು ಸಂಕಲ್ಪ ಮಾಡಲು ಈ ಸಾಕ್ಷೀದೃಷ್ಟಿಯ ಸ್ಥಿತಿ ಸದಾ ಇರಬೇಕಾಗಿದೆ. **(09–04–1973)**

ಈಗಂತೂ ಪ್ರತಿಯೊಬ್ಬರು ತಮ್ಮ ಪುರುಷಾರ್ಥ ಮತ್ತು ತಮ್ಮ ಶರೀರಕ್ಕಾಗಿ ಸಮಯವನ್ನು ಕೊಡಬೇಕಾಗುತ್ತದೆ, ಶಕ್ತಿಯನ್ನೂ ಕೊಡಕಾಗುತ್ತದೆ. ತಮ್ಮ ಪುರುಷಾರ್ಥಕ್ಕಾಗಿ ಮನಸ್ಸನ್ನು ತೊಡಗಿಸಬೇಕಾಗುತ್ತದೆ, ನಂತರ ಈ ಸ್ಟೇಜ್ ಸಮಾಪ್ತಿಯಾಗಿ ಬಿಡುತ್ತದೆ. ನಂತರ ಈ ಪುರುಷಾರ್ಥವು ಬದಲಾಗಿ ತಮ್ಮ ಒಂದು ಸೆಕೆಂಡ್ ಮತ್ತು ಒಂದು ಸಂಕಲ್ಪವೂ ಸಹ ಸ್ವಯಂನ ಪ್ರತಿ ಹೋಗದೆ ವಿಶ್ವಕಲ್ಯಾಣಕ್ಕಾಗಿ ಉಪಯೋಗವಾಗುತ್ತಿದೆ ಎಂದು ಅನುಭವವಾಗುತ್ತದೆ. ಇಂತಹ ಸ್ಥಿತಿಗೆ 'ಸಂಪೂರ್ಣ ಅಂದರೆ ಸಂಪನ್ನ ಸ್ಥಿತಿ' ಎಂದು ಹೇಳಲಾಗುತ್ತದೆ. ಒಂದುವೇಳೆ ಸಂಪನ್ನರಾಗಿಲ್ಲವೆಂದರೆ ಸಂಪೂರ್ಣರೂ ಆಗಿಲ್ಲವೆಂದು ಅರ್ಥ. ಏಕೆಂದರೆ ಸಂಪನ್ನತೆಯ ಸ್ಥಿತಿಯೇ ಸಂಪೂರ್ಣತೆಯ ಸ್ಥಿತಿಯಾಗಿದೆ. ಈ ರೀತಿಯಾಗಿ ತಮ್ಮ ಪುರುಷಾರ್ಥವನ್ನು ಮತ್ತಷ್ಟು ಸೂಕ್ಷ್ಮವಾಗಿ ಮಾಡಿಕೊಳ್ಳುತ್ತಾ ಹೋಗಬೇಕಾಗಿದೆ. ವಿಶೇಷ ಆತ್ಮಗಳ ಪುರುಷಾರ್ಥವೂ ಸಹ ಅವಶ್ಯವಾಗಿ ಭಿನ್ನವಾಗಿರುತ್ತದೆ. ಆದ್ದರಿಂದ ಪುರುಷಾರ್ಥದಲ್ಲಿ ಇಂತಹ ಪರಿವರ್ತನೆಯು ಅನುಭವ ಆಗುತ್ತಿದೆಯೆ? ಈಗಂತೂ ದಾತಾನ ಮಕ್ಕಳು ದಾತ–ತನದ ಸ್ಥಿತಿಯಲ್ಲಿ ಬರಬೇಕಾಗಿದೆ. ನಾವು ಕೊಡುವುದೇ ಅವರು ಪಡೆದುಕೊಳ್ಳುವ ವಿಧಾನವಾಗ ಬೇಕಾಗಿದೆ. ಆದ್ದರಿಂದ ಈಗ ಸಮಯದ ಸಮೀಪತೆಯ ಜೊತೆಗೆ ಸಂಪನ್ನತೆಯ ಸ್ಥಿತಿಯೂ ಕೂಡ ಬರಬೇಕಾಗಿದೆ. ಆತ್ಮಗಳಾದ ತಮ್ಮ ಸಂಪನ್ನ ಸ್ಥಿತಿಯೇ ಸಂಪೂರ್ಣತೆಯನ್ನು ಸಮೀಪ ತರುತ್ತದೆ. ಹೇಗೆ ಮೊದಲು ತಮ್ಮ ಪುರುಷಾರ್ಥಕ್ಕಾಗಿ ಸಮಯ ಹೋಗುತ್ತಿತ್ತು ಈಗ ದಿನ ಕಳೆದಂತೆ ಅನ್ಯರಿಗಾಗಿ ಹೆಚ್ಚು ಸಮಯ ಹೋಗುತ್ತಿದೆಯೆ? ಎಂಬುದನ್ನು ಸ್ವಯಂ ತಮ್ಮನ್ನು ತಾವು ಈಗಲೇ ಪರೀಕ್ಷೆ ಮಾಡಿಕೊಳ್ಳಿ. ತಮ್ಮ ಅಭಿಮಾನವು ಸ್ವಾಭಾವಿಕವಾಗಿ ಡ್ರಾಮಾ ಅನುಸಾರ ಸಮಾಪ್ತಿಯಾಗುತ್ತಾ ಹೋಗುತ್ತದೆ. ಸಂದರ್ಭದ ಅನುಸಾರವಾಗಿಯೂ ಹೀಗೆ ಆಗುತ್ತಾ ಹೋಗುತ್ತದೆ. ಇದರಿಂದ ಆಟೋಮೆಟಿಕ್ ಆಗಿ ಆತ್ಮಾಭಿಮಾನಿ ಸ್ಥಿತಿಯು ಇರುತ್ತದೆ. ಕಾರ್ಯದಲ್ಲಿ ತೊಡಗಿಸುವುದು ಎಂದರೆ ಆತ್ಮಾಭಿಮಾನಿ ಯಾಗುವುದಾಗಿದೆ. ಆತ್ಮಾಭಿಮಾನ ಇಲ್ಲದಿದ್ದರೆ ಕಾರ್ಯವು ಸಫಲವಾಗುವುದಿಲ್ಲ. ಆದ್ದರಿಂದ ನಿರಂತರ ಆತ್ಮಾಭಿಮಾನಿಯಾಗುವ ಸ್ಥಿತಿಯು ಸ್ವತಃ ಆಗಿಬಿಡುತ್ತದೆ. ವಿಶ್ವ ಕಲ್ಯಾಣಕಾರಿಗಳಾಗಿದ್ದೀರೋ? ಅಥವಾ ಆತ್ಮ–ಕಲ್ಯಾಣಕಾರಿಗಳಾಗಿದ್ದೀರೋ? ತಮ್ಮ ಲೆಕ್ಕಾಚಾರ ಮುಗಿಸುವುದರಲ್ಲೇ ಬಿಜಿಯಾಗಿದ್ದೀರೋ (ವ್ಯಸ್ತರಾಗಿದ್ದೀರೋ) ಅಥವಾ ವಿಶ್ವದ ಸರ್ವ ಆತ್ಮಗಳ ಲೆಕ್ಕಚಾರವನ್ನು ಮುಗಿಸುವುದರಲ್ಲಿ ಬಿಜಿಯಾಗಿದ್ದೀರೋ? ಯಾವುದರಲ್ಲಿ ಬಿಜಿಯಾಗಿದ್ದೀರ? ಲಕ್ಷ್ಯವಿಟ್ಟುಕೊಂಡಿದ್ದೀರಿ, ಸದಾ ವಿಶ್ವಕಲ್ಯಾಣಕ್ಕಾಗಿ ತನು, ಮನ, ಧನ ಎಲ್ಲವನ್ನು ತೊಡಗಿಸಿರಿ. **(13–04–1973)**

ಎಂತಹದೇ ಪರಿಸ್ಥಿತಿ ಬರಲಿ, ಎಂತಹದೇ ವಿಘ್ನವು ಅಲುಗಾಡಿಸಲು ಬರಲಿ, ಆದರೆ ಯಾರ ಜೊತೆಯಲ್ಲಿ ಸ್ವಯಂ ಸರ್ವಶಕ್ತಿವಂತ ತಂದೆ ಇದ್ದಾರೋ ಅಂತವರ ಎದುರಲ್ಲಿ ಆ ವಿಘ್ನವೇನು ಮಹಾ? ಅಂತವರ ಎದುರಿನಲ್ಲಿ ವಿಘ್ನವು ಪರಿವರ್ತನೆ ಹೊಂದಿ ಏನಾಗಿ ಬಿಡುತ್ತದೆ? ವಿಘ್ನಗಳು ಲಗನ್‌ನ ಸಾಧನಗಳಾಗಿ ಬಿಡುತ್ತವೆ. ಖುಷಿಯಾಗುತ್ತೀರಲ್ಲವೆ? ಒಂದುವೇಳೆ ಯಾವುದೇ ಪರಿಸ್ಥಿತಿ ಅಥವಾ ವ್ಯಕ್ತಿ ವಿಘ್ನ ತರುವುದಕ್ಕೆ ನಿಮಿತ್ತರಾದರೆ, ಅವರ ಬಗ್ಗೆ ತಿರಸ್ಕಾರದ ದೃಷ್ಟಿ, ವ್ಯರ್ಥ ಸಂಕಲ್ಪಗಳ ಉತ್ಪನ್ನ ಆಗಬಾರದು ಆದರೆ ಅವರ ಬಗ್ಗೆ ವಾಹ್ – ವಾಹ್ ಎಂಬುದು ಬರಬೇಕು. ಒಂದುವೇಳೆ ಇಂತಹ ದೃಷ್ಟಿಯನ್ನು ಇಟ್ಟುಕೊಂಡರೆ ತಮ್ಮೆಲ್ಲರ ದೃಷ್ಟಿಯೂ ಶ್ರೇಷ್ಠವಾಗಿ ಬಿಡುತ್ತದೆ. ಯಾರು ಹೇಗೇ

ಇರಲಿ, ತಮ್ಮ ದೃಷ್ಟಿ ಮತ್ತು ವೃತ್ತಿ ಸದಾ ಶುಭಚಿಂತಕತನದ್ದಾಗಿರಬೇಕು ಮತ್ತು ಕಲ್ಯಾಣದ ಭಾವನೆ ಇರಬೇಕು. ಪ್ರತಿಯೊಂದು ಮಾತಿನಲ್ಲೂ ಕಲ್ಯಾಣವು ಕಂಡುಬರಬೇಕು. ಕಲ್ಯಾಣಕಾರಿ ತಂದೆಯ ಮಕ್ಕಳು ಕಲ್ಯಾಣಕಾರಿಗಳಲ್ಲವೆ? ಕಲ್ಯಾಣಕಾರಿಗಳಾದ ಮೇಲೆ ಯಾವುದೇ ಅಕಲ್ಯಾಣದ ಮಾತು ಆಗುವುದೇ ಇಲ್ಲ. ಈ ನಿಶ್ಚಯ ಮತ್ತು ಸ್ಮೃತಿ–ಸ್ವರೂಪ ಆಗಿಬಿಟ್ಟರೆ ತಮ್ಮಲ್ಲಿ ಎಂದಿಗೂ ಏರುಪೇರಾಗುವುದಿಲ್ಲ.

ಹೇಗೆ ಯಾರಾದರೂ ಹಸಿರು ಅಥವಾ ಕೆಂಪು ಕನ್ನಡಕ ಹಾಕಿಕೊಂಡಿದ್ದರೆ ಅವರಿಗೆ ಎಲ್ಲವೂ ಹಸಿರು ಅಥವಾ ಕೆಂಪಾಗಿಯೇ ಕಾಣುತ್ತದೆ. ಹಾಗೆಯೇ ತಮ್ಮೆಲ್ಲರ ಮೂರನೇ ಕಣ್ಣಿನಲ್ಲಿ ಕಲ್ಯಾಣಕಾರಿಯ ಕನ್ನಡಕವಿದೆ. ಮೂರನೆಯ ನೇತ್ರವು ಸದಾ ಕಲ್ಯಾಣಕಾರಿಯಾಗಿಯೇ ಇದೆ. ಅದರಲ್ಲಿ ಅಕಲ್ಯಾಣ ಕಾಣಿಸಲು ಸಾಧ್ಯವೇ ಇಲ್ಲ. ಯಾವುದನ್ನು ಆಜ್ಞಾನಿಗಳು ಅಕಲ್ಯಾಣವೆಂದು ತಿಳಿಯುತ್ತಾರೋ ಆ ಅಕಲ್ಯಾಣದಲ್ಲೂ ನಿಮ್ಮ ಕಲ್ಯಾಣವೇ ಅಡಕಗೊಂಡಿದೆ. ಹೇಗೆ ಜನರು ವಿನಾಶವನ್ನು ಅಕಲ್ಯಾಣವೆಂದು ತಿಳಿಯುತ್ತಾರೆ ಆದರೆ ಇದರಿಂದಲೇ ಗತಿ ಸದ್ಗತಿಯ ಬಾಗಿಲು ತೆರೆಯುತ್ತದೆ ಎಂದು ತಾವು ತಿಳಿಯುತ್ತೀರಿ. ಆದ್ದರಿಂದ ಯಾವುದೇ ಮಾತು ಎದುರಿಗೆ ಬಂದರೂ 'ಎಲ್ಲದರಲ್ಲೂ ಕಲ್ಯಾಣವೇ ತುಂಬಿದೆ' ಎಂಬ ನಿಶ್ಚಯಬುದ್ಧಿಯುಳ್ಳವರಾಗಿ ನಡೆದಾಗ ಏನು ಪ್ರಾಪ್ತಿಯಾಗುತ್ತದೆ? ಏಕರಸ ಸ್ಥಿತಿಯು ಉಂಟಾಗಿ ಬಿಡುತ್ತದೆ. ಯಾವುದೇ ಮಾತಿನಲ್ಲೂ ನಿಲ್ಲಬಾರದು. ಯಾರು ನಿಲ್ಲುತ್ತಾರೋ ಅವರು ದುರ್ಬಲರಾಗುತ್ತಾರೆ. ಮಹಾವೀರರು ಎಂದೂ ನಿಲ್ಲುವುದಿಲ್ಲ. ವಿಘ್ನ ಬಂತು, ನಿಂತುಬಿಟ್ಟರು – ಈ ರೀತಿ ಅಲ್ಲ. **(20–06–1973)**

ಒಂದುವೇಳೆ ಯಾವಾಗಲಾದರೂ ಸ್ಥಿತಿಯು ಏರುಪೇರಾದರೆ ಅದಕ್ಕೆ ಕಾರಣ ಮೇಳ ಅರ್ಥಾತ್ ಮಿಲನದಿಂದ ಬುದ್ಧಿಯನ್ನು ದೂರ ಮಾಡುತ್ತೀರಿ ಅರ್ಥಾತ್ ಮೇಳದಿಂದ ದೂರವಾಗುತ್ತೀರಿ ಮತ್ತು ಅದನ್ನು ಆಟವೆಂದು ತಿಳಿದುಕೊಳ್ಳುವುದಿಲ್ಲ. ಆದ್ದರಿಂದ ಮೇಳ ಮತ್ತು ಆಟ (ಮೇಲಾ ಔರ್ ಕೇಲಾ) ಎಂಬ ಈ ಎರಡು ಶಬ್ದಗಳನ್ನು ಸದಾ ನೆನಪಿಡಿ. 'ಮೇಳ' ಎಂಬ ಶಬ್ದದಲ್ಲಿ ಎಲ್ಲಾ ಮಾತುಗಳು ಬಂದುಬಿಡುತ್ತವೆ. ಮಿಲನವು ಯಾವ ಯಾವ ಮಾತುಗಳಲ್ಲಿ ಆಗುತ್ತದೆ ಎಂದು ಮೊದಲೇ ಹೇಳಿರುವೆನಲ್ಲವೇ? 'ಮೇಳ' ಎಂಬ ಶಬ್ದ ನೆನಪಾದಂತೆ ಸಂಸ್ಕಾರಗಳ ಮಿಲನ, ತಂದೆ ಮತ್ತು ಮಕ್ಕಳ ಮಿಲನ ಮತ್ತು ಸರ್ವ ಸಂಬಂಧಗಳಿಂದ ಸದಾ ಪ್ರಾಪ್ತಿಯ ಮಿಲನ, ಇವೆಲ್ಲವೂ ಈ ಮೇಳದಲ್ಲಿ ಬಂದು ಬಿಡುತ್ತದೆ. ಈ ಸೃಷ್ಟಿಯು ಒಂದು ಆಟವಾಗಿದೆ, ಇದು ಮುಖ್ಯವಾದ ಮಾತಾಗಿದೆ. ಆದರೆ ಈ ಮಾಯೆಯ ಯಾವ ಭಿನ್ನ ಭಿನ್ನ ಪರೀಕ್ಷೆಗಳು ಅಥವಾ ಪರಿಸ್ಥಿತಿಗಳು ಬರುತ್ತವೆಯೋ ಇವೂ ಸಹ ಮಕ್ಕಳಾದ ತಮಗೆ ಒಂದು ಆಟವಾಗಿದೆ. ಒಂದುವೇಳೆ ಇದನ್ನು ಆಟವೆಂದು ತಿಳಿದರೆ ಆಟದಲ್ಲಿ ಎಂದಿಗೂ ಚಿಂತೆಗೊಳಗಾಗುವುದಿಲ್ಲ. ನಗುತ್ತಿರುತ್ತೀರಿ. ಆದ್ದರಿಂದ ಪರೀಕ್ಷೆಗಳೂ ಒಂದು ಆಟವಿದ್ದಂತೆ. ಮೂರನೇ ಮಾತು, ಆಟವೆಂದು ತಿಳಿಯುವುದರಿಂದ ಯಾವ ಭಿನ್ನ ಭಿನ್ನವಾದ ವಿವಿಧ ಸಂಸ್ಕಾರಗಳ ಪಾತ್ರವನ್ನು ನೋಡುತ್ತೀರೋ ಆ ಪಾತ್ರಧಾರಿಗಳ ಈ ಪಾತ್ರವು ಈ ಬೇಹದ್ ಆಟದಲ್ಲಿ ಅಡಕವಾಗಿದೆ. ಈ ಸ್ಮೃತಿಯಲ್ಲಿರುವುದರಿಂದ ಎಂದಿಗೂ ಸ್ಥಿತಿಯು ಏರುಪೇರಾಗುವುದಿಲ್ಲ. ಸದಾ ಕಾಲ ಏಕರಸ ಸ್ಥಿತಿ ಇರುತ್ತದೆ. ಯಾವಾಗ ಇದು ವಿವಿಧ ಪಾತ್ರಗಳುಳ್ಳ ಡ್ರಾಮಾ ಅಥವಾ ಆಟವಾಗಿದೆ ಎಂಬ ಸ್ಮೃತಿ ಇರುತ್ತದೆ ಎಂದ ಮೇಲೆ ವೆರೈಟಿ (ವೈವಿಧ್ಯತೆಯ) ಆಟದಲ್ಲಿ ಪಾತ್ರಗಳು ಇಲ್ಲದಿರಲು ಸಾಧ್ಯವೇ? ಯಾವಾಗ ಹೆಸರೇ ವೆರೈಟಿ ಡ್ರಾಮಾ ಎಂದು ಇದೆಯೋ. ಹೇಗೆ ಹದ್ದಿನ ಸಿನಿಮಾದಲ್ಲಿ ಬೇರೆ ಬೇರೆ ಹೆಸರಿನಿಂದ ಕೂಡಿದ ಬೇರೆ ಬೇರೆ ಆಟಗಳು ಇರುತ್ತವೆ. ಒಂದುವೇಳೆ ಹೆಸರೇ ರಕ್ತಮಯವಾದ ಆಟ – ಎಂದ ಮೇಲೆ ಒಂದುವೇಳೆ ಅದರಲ್ಲಿ ಭಯಾನಕ ಅಥವಾ ದುಃಖಮಯವಾದ ದೃಶ್ಯವನ್ನು ನೋಡಿದಾಗ ವಿಚಲಿತರಾಗುವಿರೇನು? ಏಕೆಂದರೆ ಇದು ರಕ್ತಮಯವಾದ ಆಟ ಎಂದು ತಿಳಿಯುತ್ತೀರಿ. ಮೊದಲೇ ಈ ರೀತಿ ತಿಳಿದುಕೊಂಡು ನಂತರ ನೋಡುತ್ತೀರಿ. ಒಂದುವೇಳೆ ಯಾವುದಾದರೂ ಯುದ್ಧ, ಜಗಳ, ಕ್ರೋಧಿ ಕಥೆಗಳು ಇದ್ದರೆ ಅದನ್ನು ನೋಡಿ ನಗುತ್ತೀರೋ ಅಥವಾ ಅಳುತ್ತೀರೋ? ಖಂಡಿತ ನಗುತ್ತೀರಿ ಅಲ್ಲವೇ? ಏಕೆಂದರೆ ಇದು ಕೇವಲ ಒಂದು ಆಟವೆಂದು ತಿಳಿದಿರುತ್ತೀರಿ. ಹಾಗೆಯೇ ಈ ಬೇಹದ್ದಿನ ಆಟದ ಹೆಸರೇ ಆಗಿದೆ ವೆರೈಟಿ (ವೈವಿಧ್ಯಮಯವಾದ) ಡ್ರಾಮಾ ಅರ್ಥಾತ್ ಆಟ. ಹಾಗಾಗಿ ಇದರಲ್ಲಿ ವೈರಿಟಿ ಸಂಸ್ಕಾರ, ವೈರಿಟಿ ಸ್ವಭಾವ ಅಥವಾ ವೈರಿಟಿ ಪರಿಸ್ಥಿತಿಗಳನ್ನು ನೋಡಿ ವಿಚಲಿತರಾಗುವಿರೇನು? ಅಥವಾ ಅದನ್ನು ಸಾಕ್ಷಿಯಾಗಿ ಏಕರಸ ಸ್ಥಿತಿಯಲ್ಲಿ ಸ್ಥಿತರಾಗಿ ನೋಡುವಿರೋ? ಆದ್ದರಿಂದ ಒಂದುವೇಳೆ ಇದು ಒಂದು ವೆರೈಟಿ (ವೈವಿಧ್ಯತೆಯ) ಆಟ ಎಂಬುದನ್ನು ನೆನಪಿಟ್ಟುಕೊಂಡರೇ, ಯಾವ ಪುರುಷಾರ್ಥವನ್ನು ಕಷ್ಟವೆಂದು ಭಾವಿಸುವಿರೋ ಅದು ಸಹಜವಾಗುವುದಿಲ್ಲವೇ?

ಈ ಎರಡು ಶಬ್ದಗಳನ್ನು ಮರೆತು ಬಿಡುತ್ತೀರಿ, ಮೇಳ ಮತ್ತು ಆಟ (ಮೇಳಾ ಔರ್ ಕೇಲಾ) ಎಂಬ ಎರಡು ಶಬ್ಧಗಳನ್ನು ಮರೆತುಬಿಡುತ್ತೀರಿ. ಮರೆಯುವುದರಿಂದಲೇ ಸ್ವಯಂ ಚಿಂತಿತರಾಗುತ್ತೀರಿ. ಏಕೆಂದರೆ ಸ್ಮೃತಿ ಎಂದರೆ ಸಾಕ್ಷೀಭಾವದ ಆಸನವನ್ನು ಬಿಟ್ಟುಬಿಡುತ್ತೀರಿ. ಒಂದುವೇಳೆ ಆಸನವನ್ನು ಬಿಟ್ಟು ಯಾರಾದರೂ ಡ್ರಾಮಾವನ್ನು ನೋಡಿದರೆ ಅವರ ಸ್ಥಿತಿ ಏನಾಗುತ್ತದೆ? ಆದ್ದರಿಂದ ಸೀಟ್‌ನಲ್ಲಿ ಸೇಟ್ ಆಗಿ ವೆರೈಟಿ ಡ್ರಾಮಾ ಎಂಬ ಸ್ಮೃತಿಯನ್ನಿಟ್ಟುಕೊಂಡು ಪ್ರತಿಯೊಬ್ಬ ಪಾತ್ರಧಾರಿಯ ಪಾತ್ರವನ್ನು ನೋಡಿದರೆ ಸದಾ ಹರ್ಷಿತರಾಗಿರುತ್ತೀರಿ. ಬಾಯಿಯಿಂದ 'ವಾಹ್ ವಾಹ್', 'ವಾಹ್ ಸಿಹಿಯಾದ ಡ್ರಾಮಾ' ಎಂದು ಹೊರಬರುತ್ತದೆ. ಇದೇನಾಯಿತು? ಏಕಾಯಿತು? ಎಂಬ ಮಾತು ಬಾಯಿಂದ ಬರುವುದಿಲ್ಲ. ಬದಲಿಗೆ 'ವಾಹ್ ವಾಹ್' ಎಂಬ ಶಬ್ದ ಬಾಯಿಂದ ಹೊರಬರುತ್ತದೆ ಅರ್ಥಾತ್ ಸದಾ ಖುಷಿಯಲ್ಲಿ ತೇಲಾಡುತ್ತಿರುತ್ತೀರಿ. ಸದಾ ತಮ್ಮನ್ನು ಮಾಸ್ಟರ್ ಸರ್ವಶಕ್ತಿವಂತರು ಎಂದು ಅನುಭವ ಮಾಡುತ್ತೀರಿ. ಹೀಗೆ ಸ್ವಯಂ ಅನ್ನು ಪ್ರಾಕ್ಟಿಕಲ್ ಆಗಿ ಅನುಭವ ಮಾಡುತ್ತೀರ? **(08–07–1973)**

ಅಡ್ವಾನ್ಸ್ ಪಾರ್ಟಿಯ ಕಾರ್ಯ ಏನು ನಡೆಯುತ್ತಿದೆ? ಮಕ್ಕಳಾದ ತಮಗಾಗಿ ಇಂದು ಇಡೀ ಮೈದಾನವನ್ನು ತಯಾರು ಮಾಡುತ್ತಿದ್ದಾರೆ. ಅವರ ಪರಿವಾರದಲ್ಲಿ ನೀವು ಬರಲಿ ಅಥವಾ ಬರದಿರಲಿ, ಆದರೆ ಯಾವ ಸ್ಥಾಪನೆಯ ಕಾರ್ಯ ಆಗಬೇಕಾಗಿದೆಯೋ ಅದಕ್ಕಾಗಿ ಅವರು ನಿಮಿತ್ತರಾಗುತ್ತಾರೆ. ಕೆಲವರು ಶಕ್ತಿಶಾಲಿ ಸ್ಟೇಜ್ ಅನ್ನು ಪಡೆದು ನಿಮಿತ್ತರಾಗುತ್ತಾರೆ. ಎಂತಹ ಶಕ್ತಿಗಳನ್ನು ಪಡೆಯುತ್ತಾರೆಂದರೆ, ಆ ಶಕ್ತಿಗಳಿಂದ ಸ್ಥಾಪನೆಯ ಕಾರ್ಯದಲ್ಲಿ ಸಹಾಯಕರಾಗು ತ್ತಾರೆ. ಈಗಿನ ದಿನಗಳಲ್ಲಿ ದಿನ ಕಳೆದಂತೆ ಹೊಸ ರಕ್ತದ ಯುವಕರಿಗೆ ಗೌರವ ಹೆಚ್ಚಾಗಿದೆ ಎಂಬುದನ್ನು ತಾವು ನೋಡುತ್ತೀರಿ. ಎಷ್ಟು ಮುಂದುವರೆಯುತ್ತಿರೋ, ಅಷ್ಟು ಚಿಕ್ಕವರ ಬುದ್ಧಿ ಕೆಲಸ ಮಾಡುತ್ತದೆ, ದೊಡ್ಡವರದು ಮಾಡುವುದಿಲ್ಲ. ದೊಡ್ಡ ವಯಸ್ಸಿನವರಿಗೆ ಹೋಲಿಸಿದರೆ ಸಣ್ಣ ವಯಸ್ಸಿನಲ್ಲಿ ಸತೋಪ್ರಧಾನತೆ ಇರುತ್ತದೆ. ಒಂದಲ್ಲಾ ಒಂದು ಪವಿತ್ರತೆಯ ಶಕ್ತಿಯಿರುವ ಕಾರಣ ಚಿಕ್ಕವರ ಬುದ್ಧಿ ಹೇಗೆ ಕೆಲಸ ಮಾಡುತ್ತದೆಯೋ ಹಾಗೆ ದೊಡ್ಡವರ ಬುದ್ಧಿ ಕೆಲಸ ಮಾಡುವುದಿಲ್ಲ. ಇಂತಹ ಬದಲಾವಣೆ ಆಗುತ್ತದೆ. ದೊಡ್ಡವರೂ ಮಕ್ಕಳ ಅಭಿಪ್ರಾಯಕ್ಕೆ ಗೌರವ ಕೊಡುತ್ತಾರೆ. ಈಗಲೂ ಯಾರು ಹಿರಿಯರಿದ್ದಾರೋ ಅವರು ನಾವು ಹಳೆಯ ಕಾಲದವರು, ಇವರೆಲ್ಲಾ ಈಗಿನ ಕಾಲದವರು. ಅವರಿಗೆ ಗೌರವ ಕೊಡದಿದ್ದರೆ, ಅವರನ್ನು ದೊಡ್ಡವರೆಂದು ತಿಳಿದು ನಡೆಸಿಕೊಳ್ಳದಿದ್ದರೆ ಯಾವ ಕೆಲಸವು ಆಗುವುದಿಲ್ಲ ಎಂದು ತಿಳಿದಿದ್ದಾರೆ. ಮೊದಲು ಮಕ್ಕಳನ್ನು ಜೋರು ಮಾಡಿ ನಡೆಸುತ್ತಿದ್ದರು. ಈಗ ಆ ರೀತಿ ಆಗುವುದಿಲ್ಲ. ಮಕ್ಕಳನ್ನೂ ಮಾಲೀಕರೆಂದು ತಿಳಿದು ನಡೆಸುತ್ತಾರೆ. ಈ ಪಾತ್ರವೂ ಸಹ ಡ್ರಾಮಾದಲ್ಲಿ ಇದೆ. ಚಿಕ್ಕವರೇ ಅದ್ಭುತವನ್ನು ಮಾಡಿ ತೋರಿಸುತ್ತಾರೆ. ಅಡ್ವಾನ್ಸ್ ಪಾರ್ಟಿಯವರದಂತು ತಮ್ಮ ಕಾರ್ಯ ನಡೆಯುತ್ತಿದೆ ಆದರೆ ಅವರೂ ತಮ್ಮ ಸ್ಥಿತಿಯು ಅಡ್ವಾನ್ಸ್‌ನಲ್ಲಿ ಹೋಗುವುದಕ್ಕಾಗಿ ಕಾಯುತ್ತಾ ನಿಂತಿದ್ದಾರೆ. ಅವರ ಕಾರ್ಯವೂ ತಮ್ಮ ಸಂಪರ್ಕದಿಂದಲೇ ನಡೆಯಬೇಕಾಗಿದೆ. **(02–08–1973)**

ಎಲ್ಲರೂ ಉನ್ನತಿಯ ಕಡೆಗೆ ಮುಂದುವರೆಯುತ್ತಿದ್ದೀರಾ? ಏರುವ ಕಲೆಯ ಗುರುತೇನಾಗಿದೆ, ಅದನ್ನು ತಿಳಿದಿರುವಿರಾ? ಸದಾ ಲಗ್ನದಲ್ಲಿ ಮಗ್ನ ಮತ್ತು ವಿಘ್ನವಿನಾಶಕ ಇವೆರಡೂ ಗುರುತುಗಳು ಅನುಭವದಲ್ಲಿ ಬರುತ್ತಿದೆಯೇ? ಅಥವಾ ವಿಘ್ನಗಳನ್ನು ನೋಡಿ, ವಿಘ್ನವಿನಾಶಕರಾಗುವ ಬದಲು ತಮ್ಮ ಸ್ಥಿತಿಯಿಂದ ಕೆಳಗೆ ಬರುತ್ತಿಲ್ಲ ತಾನೇ? ಅನೇಕ ಪ್ರಕಾರದಲ್ಲಿ ಬರುವ ಬಿರುಗಾಳಿಯು ತಮ್ಮ ಬುದ್ಧಿಯಲ್ಲಿ ಬಿರುಗಾಳಿಯನ್ನು ಹುಟ್ಟಿಸುತ್ತಿಲ್ಲ ತಾನೇ? ಹೇಗೆ ಯಾರಿಂದಲಾದರೂ ಉಡುಗೊರೆ ಸಿಕ್ಕಿದಾಗ ಬುದ್ಧಿಯಲ್ಲಿ ಏರುಪೇರು ಆಗುವುದಿಲ್ಲ, ಬದಲಾಗಿ ಉಲ್ಲಾಸವಾಗುತ್ತದೆ. ಅದೇ ರೀತಿಯಲ್ಲಿ ಬಂದಿರುವ ಬಿರುಗಾಳಿಯು ಉಲ್ಲಾಸವನ್ನು ಹೆಚ್ಚಿಸುತ್ತದೆಯೋ ಅಥವಾ ಏರುಪೇರನ್ನು ಹೆಚ್ಚಿಸುತ್ತದೆಯೋ? ಒಂದುವೇಳೆ ಬಿರುಗಾಳಿಯನ್ನು ಬಿರುಗಾಳಿ ಎಂದು ತಿಳಿದರೆ ಏರುಪೇರಾಗುತ್ತದೆ. ಬದಲಿಗೆ ಉಡುಗೊರೆ ಎಂದು ತಿಳಿದರೆ ಅಥವಾ ಅನುಭವ ಮಾಡಿದರೆ ಅದರಿಂದ ಉಲ್ಲಾಸ ಮತ್ತು ಧೈರ್ಯ ಹೆಚ್ಚಾಗುತ್ತದೆ. ಇದಾಗಿದೆ ಏರುವ ಕಲೆಯ ಗುರುತು. ಗಾಬರಿಯಾಗುವ ಬದಲು ಆಳಕ್ಕೆ ಹೋಗಿ ಅನುಭವದ ಹೊಸ ಹೊಸ ರತ್ನಗಳನ್ನು ಈ ಪರೀಕ್ಷೆಗಳ ಸಾಗರದಲ್ಲಿ ಪ್ರಾಪ್ತಿ ಮಾಡಿಕೊಂಡಾಗ ಈ ರೀತಿ ಅನುಭವ ಮಾಡುವಿರಾ? ಇದೇನಾಗುತ್ತಿದೆ? ಏಕಾಗುತ್ತಿದೆ? ಹೀಗಾದರೆ ಹೇಗೆ ನಡೆಯುತ್ತದೆ? ಇಂತಹ ಸಂಕಲ್ಪಗಳು ನಡೆಯುವುದಕ್ಕೆ ಏರುಪೇರೆಂದು ಹೇಳಲಾಗುತ್ತದೆ. ಏರುಪೇರಿನ ಒಳಗೆ ರತ್ನಗಳು ಅಡಗಿವೆ. ಮೇಲೆ ಮೇಲೆ ಅರ್ಥಾತ್ ಬಹಿರ್ಮುಖತೆಯ ದೃಷ್ಟಿ ಮತ್ತು ಬುದ್ಧಿಯಿಂದ ನೋಡಿದಾಗ ಏರುಪೇರು ಕಾಣಿಸುತ್ತದೆ ಅಥವಾ ಅನುಭವವಾಗುತ್ತದೆ. ಆದರೆ ಬಂದಿರುವ ಅದೇ ಮಾತುಗಳನ್ನು ಅಂತರ್ಮುಖತೆಯ ದೃಷ್ಟಿ ಮತ್ತು ಬುದ್ಧಿಯಿಂದ ನೋಡಿದಾಗ ಅನೇಕ ಪ್ರಕಾರದ ಜ್ಞಾನ ರತ್ನಗಳು ಅರ್ಥಾತ್ ಪಾಯಿಂಟ್‌ಗಳು ಪ್ರಾಪ್ತಿಯಾಗುತ್ತವೆ.

ಒಂದುವೇಳೆ ಯಾವುದೇ ಮಾತನ್ನು ನೋಡುತ್ತಾ ಅಥವಾ ಕೇಳುತ್ತಾ ಆಶ್ಚರ್ಯದ ಅನುಭವವಾದರೆ, ಇದೂ ಸಹ ಅಂತಿಮ ಸ್ಟೇಜ್ ಅಲ್ಲ. ಡ್ರಾಮಾ ಎಂದು ತಿಳಿದಿದ್ದಾಗಲೂ ಹೀಗೆ ಆಗಬಾರದಾಗಿತ್ತು, ಒಳ್ಳೆಯದು ಏನಾಯಿತೋ ಅದು ಆಗಲೇ ಬೇಕಾಗಿತ್ತು ಎಂಬುದಾಗಿ ಒಂದುವೇಳೆ ಇಂತಹ ಸಂಕಲ್ಪಗಳು ಉತ್ಪನ್ನವಾಗುತ್ತಿದ್ದರೆ, ಇದನ್ನೂ ಸಹ ಅಂಶ ಮಾತ್ರದ ಏರುಪೇರಿನ ರೂಪವೆಂದು ಹೇಳಲಾಗುತ್ತದೆ. ಇಲ್ಲಿಯವರೆಗೂ ಈ ಏಕೆ, ಏನು ಎಂಬ ಪ್ರಶ್ನೆಗಳ ಅರ್ಥವಾಗಿದೆ 'ಏರುಪೇರು' ಎಂದು. ವಿಘ್ನ ಬರುವುದು ಅವಶ್ಯಕವಾಗಿದೆ. ವಿಘ್ನಗಳು ಬರುವುದು ಎಷ್ಟು ಅವಶ್ಯಕವಾಗಿದೆಯೋ ಹಾಗೆಯೇ ಈ ಪಾಯಿಂಟ್‌ಗಳು ಬುದ್ಧಿಯಲ್ಲಿ ಇದ್ದಾಗ, ಇಂತಹ ಮಹಾರಥಿಗಳು ಅಷ್ಟೇ ಹರ್ಷಿತರಾಗಿರುತ್ತಾರೆ. 'ನಥಿಂಗ್ ನ್ಯೂ' (ಯಾವುದೂ ಹೊಸದಲ್ಲ). ಇದಾಗಿದೆ ಅಂತಿಮ ಸ್ಟೇಜ್. ಯಾರೇ ಆಗಲಿ ಏರುಪೇರಿನ ಕರ್ತವ್ಯ ಮಾಡಿದರೆ ಅಥವಾ ಪಾತ್ರ ಮಾಡಿದರೆ ಸಾಗರದ ಸಮಾನ ಮೇಲೆ ಏರುಪೇರು ಕಂಡರೂ ಅಂದರೆ ಕರ್ಮೇಂದ್ರಿಯಗಳಿಂದ ಏರುಪೇರಿನಲ್ಲಿ ಬಂದರೂ ಸ್ಥಿತಿಯಲ್ಲಿ ನಥಿಂಗ್ ನ್ಯೂ ಎಂಬುದಿರಲಿ. ಏಕಾಗ್ರ, ಏಕರಸ, ಏಕಾಂತ ಅಂದರೆ ಒಬ್ಬ ರಚಯಿತ ಮತ್ತು ರಚನೆಯ ಅಂತ್ಯವನ್ನು ತಿಳಿದಿರುವ ತ್ರಿಕಾಲದರ್ಶಿಯ ಸ್ಟೇಜ್‌ನಲ್ಲಿ, ಆರಾಮವಾಗಿ ಶಾಂತಿಯ ಸ್ಟೇಜ್‌ನಲ್ಲಿ ಸ್ಥಿತರಾಗಿದ್ದೀರೋ ಅಥವಾ ಕರ್ಮೇಂದ್ರಿಯಗಳ ಏರುಪೇರು ಒಳಗಿನ ಸ್ಥಿತಿಯನ್ನು ಅಲುಗಾಡಿಸುತ್ತದೆಯೇ? ಸ್ಥೂಲವಾದ ಸಾಗರವು ಈ ಎರಡೂ ರೂಪವನ್ನು ತೋರಿಸುವಾಗ, ಮಾಸ್ಟರ್ ಜ್ಞಾನ ಸಾಗರರು ಇಂತಹ ರೂಪವನ್ನು ತೋರಿಸಲಾಗುವುದಿಲ್ಲವೇ? ಈ ಪ್ರಕೃತಿಯು ಪುರುಷನಿಂದ ಕಾಪಿ ಮಾಡಿದೆ. ತಾವಾದರೋ ಪುರುಷೋತ್ತಮರಾಗಿದ್ದೀರಿ. ಪ್ರಕೃತಿಯೂ ತನ್ನ ವಿಶೇಷತೆಯನ್ನು ತೋರಿಸುತ್ತಿರುವಾಗ, ಪುರುಷೋತ್ತಮರು ಈ ವಿಶೇಷತೆಯನ್ನು ತೋರಿಸಲಾರಿ ರೇನು? **(15–04–1974)**

ಈ ದಿನ ಮಕ್ಕಳೆಲ್ಲರಿಗೂ ಸೂಕ್ಷ್ಮವತನದ ಸಮಾಚಾರವನ್ನು ತಿಳಿಸುತ್ತೇನೆ. ಸೂಕ್ಷ್ಮವತನದ ಸಂಚಾರ ಮಾಡಬೇಕು, ಒಂದು ಸಲವಾದರೂ ನೋಡಬೇಕೆಂದು ತಮಗೆಲ್ಲರಿಗೂ ಆಸೆ ಆಗುತ್ತದೆಯಲ್ಲವೇ? ಈ ಇಚ್ಛೆ ಅಥವಾ ಸಂಕಲ್ಪ ಏಕೆ ಬರುತ್ತದೆಯೆಂದು ತಿಳಿದಿದೆಯೇ? ಏಕೆಂದರೆ ಬಾಪ್‌ದಾದಾರವರು ಸೂಕ್ಷ್ಮವತನ ವಾಸಿಗಳಾಗಿ ಪಾತ್ರ ಮಾಡುತ್ತಾರೆ, ಆದ್ದರಿಂದ ನಾವೂ ಸಹ ಒಂದು ಸಲ ಬಾಪ್‌ದಾದಾರವರೊಡನೆ ಈ ಅನುಭವ ಮಾಡಬೇಕೆಂದು ಸಂಕಲ್ಪ ಬರುತ್ತದೆ. ಆದ್ದರಿಂದ ಬಾಪ್‌ದಾದಾರವರು ಸಹ ತಮ್ಮ ಅನುಭವವನ್ನು ತಿಳಿಸಿ ಬಿಡುತ್ತಾರೆ. ಎಲ್ಲದಕ್ಕಿಂತ ಮುಖ್ಯ ಅನುಭವ ಮಾಡುವ ಮತ್ತು ಕೇಳುವ ದೃಶ್ಯ ಯಾವ ಸಮಯದಲ್ಲಿ ಆಗುತ್ತದೆ ಎಂದು ತಿಳಿದಿದೆಯಲ್ಲವೇ? ಮಕ್ಕಳಿಗಾಗಿ ವಿಶೇಷವಾಗಿ ಅಮೃತವೇಳೆಯೇ ನಿಶ್ಚಿತವಾಗಿದೆ. ಆನಂತರ ವಿಶ್ವದ ಅನ್ಯ ಆತ್ಮಗಳಿಗಾಗಿ, ಯಥಾ ಶಕ್ತಿ ಭಾವನೆಯ ಫಲ ಅಥವಾ ಯಾವುದೇ ರಜೋಪ್ರಧಾನ ಕರ್ಮ, ಅಲ್ಪಕಾಲಕ್ಕಾಗಿ ಯಾವ ಆತ್ಮಗಳ ಮೂಲಕ ನಡೆಯುವುದೋ, ಅವರಿಗೂ ಅವರ ಕರ್ಮದ ಅನುಸಾರ ಅಲ್ಪಕಾಲದ ಫಲ ಕೊಡುವ ಸಲುವಾಗಿ, ಜೊತೆ ಜೊತೆಯಲ್ಲಿ ಸತ್ಯವಾದ ಭಕ್ತರ ಕೂಗನ್ನು ಕೇಳಲು ಮತ್ತು ಭಕ್ತರ ಭಿನ್ನ ಭಿನ್ನ ಪ್ರಕಾರದ ಭಾವನೆಯ ಅನುಸಾರ ಸಾಕ್ಷಾತ್ಕಾರ ಮಾಡಿಸಲು ಮತ್ತು ಇಲ್ಲಿಯವರೆಗೂ ನಾಲ್ಕೂ ಕಡೆಗಳಲ್ಲಿ ಅಡಗಿರುವ ಕಲ್ಪದ ಹಿಂದಿನ ಬ್ರಾಹ್ಮಣ ಆತ್ಮಗಳಿಗೆ ಸಂದೇಶ ಮುಟ್ಟಿಸಲು, ಮಕ್ಕಳನ್ನು ನಿಮಿತ್ತ ಮಾಡುವ ಕಾರ್ಯದಲ್ಲಿ, ಹಳೆಯ ಪ್ರಪಂಚವನ್ನು ಸಮಾಪ್ತಿ ಮಾಡುವುದಕ್ಕಾಗಿ ನಿಮಿತ್ತರಾಗಿರುವ ವಿಜ್ಞಾನಿಗಳ ಯೋಗಕ್ಷೇಮ ನೋಡಲು, ಜ್ಞಾನೀ ಆತ್ಮ, ಸ್ನೇಹಿ ಮತ್ತು ಸಹಯೋಗಿ ಮಕ್ಕಳಿಗೆ, ಇಡೀ ದಿನದಲ್ಲಿ ಈಶ್ವರೀಯ ಸೇವೆಯನ್ನು ಮಾಡಲು ಮತ್ತು ಮಾಯಾಜೀತ್ ಆಗಲು – 'ಧೈರ್ಯ ಮಕ್ಕಳದು, ಸಹಯೋಗ ತಂದೆಯದು (ಹಿಮ್ಮತೇ ಬಚ್ಚೆ, ಮದದೇ ಬಾಪ್)' ಎಂಬ ನಿಯಮದ ಅನುಸಾರ ಅವರಿಗೂ ಸಹಾಯ ನೀಡುವ ಕರ್ತವ್ಯದಲ್ಲಿ, ಡ್ರಾಮಾನುಸಾರ ನಿಮಿತ್ತರಾಗಿದ್ದಾರೆ. ತಂದೆಯು ಇಡೀ ದಿನ ಏನು ಮಾಡುತ್ತಾರೆಂದು ಈಗ ತಿಳಿಯಿತೇ? ಸಾಕಾರ ತಂದೆಯೂ ಈಗ ಅವ್ಯಕ್ತರಾಗಿರುವ ಕಾರಣ ತ್ವರಿತ ವೇಗವಾಗಿ ನಿರಾಕಾರ ತಂದೆಯ ಜೊತೆಗಾರ ಮತ್ತು ಸಹಯೋಗಿ ಸದಾಕಾಲಕ್ಕಾಗಿ ಆಗಿರುವಂತಹ ಪಾತ್ರವನ್ನು ಮಾಡಬಹುದಾಗಿದೆ.

ವಿಜ್ಞಾನಿಗಳು ಸಮಯವನ್ನು ಮತ್ತು ತಮ್ಮ ಶಕ್ತಿ ಅರ್ಥಾತ್ ಪರಿಶ್ರಮವನ್ನು, ಸಾಧನಗಳ ವಿಸ್ತಾರವನ್ನು ಸೂಕ್ಷ್ಮ ಮತ್ತು ಸಂಕ್ಷಿಪ್ತ ಮಾಡುತ್ತಿದ್ದಾರೆ. ಕಡಿಮೆ ಎಂದರೆ ಕಡಿಮೆ ಒಂದು ಸೆಕೆಂಡಿನವರೆಗೆ ತಲುಪುವ ತೀವ್ರ ಪುರುಷಾರ್ಥವನ್ನು ಮಾಡುತ್ತಿದ್ದಾರೆ ಮತ್ತು ಸಫಲತೆಯನ್ನು ಪಡೆಯುತ್ತಿದ್ದಾರೆ. ಹೇಗೆ ವಿನಾಶಕ್ಕಾಗಿ ನಿಮಿತ್ತರಾಗಿರುವ ಆತ್ಮಗಳ ವೇಗ ಸೂಕ್ಷ್ಮ ಮತ್ತು ತೀವ್ರವಾಗುತ್ತ ಹೋಗುತ್ತಿದೆಯೋ, ಅದೇ ರೀತಿ ಸ್ಥಾಪನೆಗಾಗಿ ನಿಮಿತ್ತರಾಗಿರುವಂತಹ ಆತ್ಮಗಳ ಸ್ಥಿತಿ ಮತ್ತು ವೇಗವೂ ಕೂಡ ಸೂಕ್ಷ್ಮ ಮತ್ತು ತೀವ್ರವಾಗಬೇಕಲ್ಲವೇ? ಆಗಲೇ ಎರಡೂ ಕಾರ್ಯಗಳು ಸಂಪನ್ನವಾಗುತ್ತವೆ. ಆದ್ದರಿಂದ ಈಗ

ವ್ಯಕ್ತ ಶರೀರದಲ್ಲಿ ಮತ್ತು ಅವ್ಯಕ್ತ ಶರೀರದಲ್ಲಿ ವ್ಯತ್ಯಾಸವಿದೆಯೆಂದು ತಿಳಿದಿರಾ? ಅವ್ಯಕ್ತವಾಗುವುದು ಸಹ ಡ್ರಾಮಾದ ಅನುಗುಣವಾಗಿ ಯಾವುದಾದರೂ ಒಂದು ಸೇವೆಗೆ ನಿಮಿತ್ತ ಮಾಡಲ್ಪಟ್ಟಿದೆ, ಹಾಗಾದರೆ ಈ ರಹಸ್ಯವನ್ನು ತಿಳಿದುಕೊಂಡಿರಾ? ಬ್ರಹ್ಮಾರವರ ಪಾತ್ರ ಸ್ಥಾಪನೆಯ ಕಾರ್ಯದಿಂದ ಹಿಡಿದು ಅಂತಿಮದವರೆಗೆ ನೊಂದಾಯಿಸ ಲ್ಪಟ್ಟಿದೆ. ಎಲ್ಲಿಯವರೆಗೆ ಸ್ಥಾಪನೆಯ ಕಾರ್ಯ ಸಂಪನ್ನವಾಗುವುದಿಲ್ಲವೋ, ಅಲ್ಲಿಯವರೆಗೆ ನಿಮಿತ್ತವಾದಂಥ ಆತ್ಮದ (ಬ್ರಹ್ಮಾರ) ಪಾತ್ರವೂ ಸಮಾಪ್ತಿಯಾಗ ಬಾರದಾಗಿದೆ. ಅಲ್ಲಿಯವರೆಗೆ ಅವರು (ಬ್ರಹ್ಮಾರವರು) ಬೇರೆ ಪಾತ್ರ ಮಾಡಲಿಕ್ಕೆ ಸಾಧ್ಯವಿಲ್ಲ. ಜಗತ್ ಪಿತನ ಹೊಸ ಜಗತ್ತಿನ ರಚನೆಯನ್ನು ಪೂರ್ಣಗೊಳಿಸುವ  ಕಾರ್ಯವೂ ಸಹ ನಾಟಕದಲ್ಲಿ ನಿಗದಿತವಾಗಿದೆ. ಮನುಷ್ಯ ಸೃಷ್ಟಿಯ ಸರ್ವ ವಂಶಾವಳಿಯನ್ನು ರಚಿಸುವುದು ಕೇವಲ ಬ್ರಹ್ಮಾನಿಗಾಗಿಯೇ ಗಾಯನವಿದೆ. ಅದಕ್ಕಾಗಿಯೇ ಅವರನ್ನು ಗ್ರೇಟ್ ಗ್ರೇಟ್ ಗ್ರಾಂಡ್ ಫಾದರ್ ಎಂದು ಗಾಯನ ಮಾಡುತ್ತಾರೆ. ಕೇವಲ ಸ್ಥಿತಿ, ಸ್ಥಾನ ಮತ್ತು ವೇಗದ ಪರಿವರ್ತನೆ ಆಗಿದೆ, ಆದರೆ ಬ್ರಹ್ಮಾರವರ ಪಾತ್ರ ಇಲ್ಲಿಯವರೆಗೂ ಅದೇ ಆಗಿದೆ.

ಇಷ್ಟು ಸಮಯ ಬಾಬಾರವರು ಏನು ಮಾಡುತ್ತಿದ್ದಾರೆ ಎಂಬ ಅನೇಕರ ಸಂಕಲ್ಪ ಬಾಬಾರವರಿಗೆ ತಲುಪುತ್ತಿದೆ. ಬ್ರಹ್ಮಾರವರ ಜೊತೆಗೆ ಬ್ರಾಹ್ಮಣರ, ಸರ್ವ ಆತ್ಮಗಳ ಕಲ್ಯಾಣಕ್ಕಾಗಿ ನಿಮಿತ್ತರಾಗುವ ಪಾತ್ರ ಮತ್ತು ಹೊಸ ಸೃಷ್ಟಿಯ ಸ್ಥಾಪನೆಯ ನಿಗದಿತವಾದಂಥ ಪಾತ್ರ ಸಮಾಪ್ತಿ ಆಗಿದೆಯೇ ಎಂಬ ಪ್ರಶ್ನೆಯನ್ನು ಸಹ ಬಾಬಾರವರು ಕೇಳುತ್ತಾರೆ. ಯಾವಾಗ ಪಾತ್ರ ಸಮಾಪ್ತಿ ಆಗಿಲ್ಲ ಮತ್ತು ಸೃಷ್ಟಿಯ ಪರಿವರ್ತನೆಯೇ ಆಗಿಲ್ಲ ಎಂದ ಮೇಲೆ ಬ್ರಹ್ಮಾರವರ ಪಾತ್ರ ಹೇಗೆ ಸಮಾಪ್ತಿ ಯಾಗುತ್ತದೆ? ಸ್ನೇಹದ ಕಾರಣದಿಂದಲೇ ವತನದಲ್ಲಿ ಇಷ್ಟೊಂದು ಸಮಯ ಏನು ಮಾಡುತ್ತಿದ್ದಾರೆ ಎಂಬ ಸಂಕಲ್ಪ ಬರುತ್ತದೆ. ವತನದ ಪಾತ್ರ ಇಷ್ಟೊಂದು ಸಮಯ ಏಕೆ ಮತ್ತು ಹೇಗೆ ಎಂಬ ಸಂಕಲ್ಪ ಯಾವಾಗಲಾದರೂ ಬರುತ್ತದೆಯೇ? ಇದೂ ಕೂಡ ಒಂದು ಗುಪ್ತ ರಹಸ್ಯವಾಗಿದೆ. ಕರ್ಮಬಂಧನದಿಂದ ಮುಕ್ತ, ಸಂಪನ್ನರಾದಂತಹ ಆತ್ಮ, ಈ ಕಲ್ಪದ ಜನನ–ಮರಣ ಚಕ್ರವನ್ನು ಸಮಾಪ್ತಿ ಮಾಡುವಂತಹ ಆತ್ಮ, ನಿರಾಕಾರ ತಂದೆಯ ಮೊದಲನೆಯ ನಂಬರಿನ ಜೊತೆಗಾರ ಆತ್ಮ, ವಿಶ್ವ ಕಲ್ಯಾಣಕ್ಕಾಗಿ ನಿಮಿತ್ತರಾದಂತಹ ಪ್ರಥಮ ಆತ್ಮ, ಸ್ವಯಂನ ಬಗ್ಗೆ ಮತ್ತು ವಿಶ್ವದ ಬಗ್ಗೆ ಸರ್ವ ಸಿದ್ಧಿಗಳನ್ನು ಪ್ರಾಪ್ತಿ ಮಾಡಿಕೊಂಡಂತಹ ಆತ್ಮ, ಎಲ್ಲಿ ಬೇಕೋ, ಎಷ್ಟು ಸಮಯ ಬೇಕೋ ಅಷ್ಟು ಅಲ್ಲಿ ಸ್ವತಂತ್ರವಾಗಿ ಪಾತ್ರವನ್ನು ಮಾಡಬಹುದಾಗಿದೆ.  ಯಾವಾಗ ಅಲ್ಪಕಾಲದ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುವ ಆತ್ಮಗಳು ತಮ್ಮ ಸಿದ್ಧಿಯ ಆಧಾರದ ಮೇಲೆ ತಮ್ಮ ರೂಪವನ್ನು ಪರಿವರ್ತನೆ ಮಾಡಿಕೊಳ್ಳಲಿಕ್ಕೆ ಸಾಧ್ಯವಾಗುತ್ತದೆ ಎಂದಾಗ, ಸರ್ವ ಸಿದ್ಧಿಗಳನ್ನು ಪ್ರಾಪ್ತಿ ಮಾಡಿಕೊಂಡಂತಹ ಆತ್ಮ. ಅವ್ಯಕ್ತ ರೂಪಧಾರಿಯಾಗಿ ಎಷ್ಟು ಸಮಯ ಬೇಕೋ ಅಷ್ಟು ಸಮಯ ಡ್ರಾಮಾನುಸಾರ ಇರಲು ಸಾಧ್ಯವಿಲ್ಲವೇ? **(30–06–1974)**

ಮುಖ್ಯವಾಗಿ ಎರಡು ದೂರುಗಳು ಇದೆ. ಒಂದೆರಡು ಪಾರ್ಟಿಗಳ ಜೊತೆ ಭೇಟಿಯಾದಾಗ, ವಿಶೇಷವಾಗಿ ಈ ದೂರುಗಳ ಬಗ್ಗೆಯೇ ಚರ್ಚೆ ನಡೆಯುತ್ತದೆ. ಅದಕ್ಕಾಗಿಯೇ ಡ್ರಾಮಾ ಅನುಸಾರ ಪದೇ ಪದೇ ಈ ವಿಚಾರದ ಬಗ್ಗೆಯೇ ಮಾತನಾಡುವುದು ಮತ್ತು ಪದೇ ಪದೇ ಬಾಬಾರವರಿಂದ ಇದರ ಬಗ್ಗೆಯೇ ಶಿಕ್ಷಣ ಪಡೆದುಕೊಳ್ಳುವುದು ಕೂಡ ಲೆಕ್ಕಾಚಾರವಾಗುತ್ತದೆ. ಅದಕ್ಕಾಗಿ ಡ್ರಾಮಾ ಅನುಸಾರ, ಇಲ್ಲಿಯವರೆಗೂ ಕೂಡ ಬಾಬಾರವರಿಂದ ವಿಶೇಷ ಸೇವೆ ಪಡೆದುಕೊಳ್ಳುವ ಪಾತ್ರ ಸಮಾಪ್ತಿಯಾಗುತ್ತಲಿದೆ. ಇದರಲ್ಲಿಯೂ ಕೂಡ ರಹಸ್ಯ ಅಡಕವಾಗಿದೆ. ಅದೇ ವಿಚಾರವನ್ನು ಅನೇಕ ಸಲ ಕೇಳುತ್ತೀರಿ. ಮುಂದಿನ ವರ್ಷ ಈ ದೂರು ಇರುವುದಿಲ್ಲವೆಂದು ಒಂದು ವರ್ಷ ಪ್ರತಿಜ್ಞೆ ಮಾಡಿ ಹೋಗುತ್ತೀರಿ, ಆದರೆ ಎರಡನೆಯ ವರ್ಷ ಪುನಃ ಮುಂದಿನ ವರ್ಷ ದೂರು ಇರುವುದಿಲ್ಲವೆಂದು ಹೇಳುತ್ತೀರಿ. ಯಾವ ವರ್ಷ ಕಳೆಯಿತೋ ಅದು ಯಾವ ಖಾತೆಗೆ ಹೋಯಿತು. ಬಾಪ್‌ದಾದಾರವರು ಮಕ್ಕಳು ಮಾಡಿದ ಪ್ರತಿಜ್ಞೆಯನ್ನು ಮರೆತುಬಿಡುತ್ತಾರೆ ಎಂದು ತಿಳಿಯುತ್ತಾರೆ. ಬಾಪ್‌ದಾದಾರವರಿಗೆ ಏನು ನೆನಪಿರುತ್ತದೆ ಎಂದು ತಿಳಿದುಕೊಳ್ಳುತ್ತಾರೆ. ಬಾಪ್‌ದಾದಾರವರಿಗೆ ಎಲ್ಲರ ಪ್ರತಿಜ್ಞೆಗಳು ನೆನಪಿರುತ್ತದೆ. ಆದರೆ ಬಾಪ್‌ದಾದಾರವರು ಮಕ್ಕಳಿಗೆ ಅಗೌರವವನ್ನು ತೋರಿಸುವುದಿಲ್ಲ. ಎದುರಿಗೆ ಕುಳಿತುಕೊಂಡು ಪ್ರತಿಜ್ಞೆಯನ್ನು ಪಾಲನೆ ಮಾಡಿಲ್ಲ ಎಂದು ಹೇಳುವುದು ಕೂಡ ಮಕ್ಕಳಿಗೆ ಅಗೌರವ ತೋರಿಸಿದಂತೆ. ತಂದೆಯ ತಲೆಯ ಮೇಲಿನ ಕಿರೀಟವನ್ನಾಗಿ ಮಾಡುತ್ತಿರುವಾಗ, ಸ್ವಯಂಗಿಂತಲೂ  ಮಕ್ಕಳನ್ನು ಮುಂದೆ ಇಡುತ್ತಿದ್ದಾರೆ ಎಂದಾಗ ಅಂತಹ ಆತ್ಮಗಳ ಅಗೌರವವನ್ನು ಹೇಗೆ ಮಾಡುತ್ತಾರೆ? ಅದಕ್ಕಾಗಿಯೇ ಕೇವಲ ಮುಗಳ್ನಗುತ್ತಾರೆ.  ನೆನಪಿರುವುದಿಲ್ಲ ಎಂದು ಅರ್ಥವಲ್ಲ. ಆತ್ಮಗಳನ್ನಂತೂ ನಡೆಸಿಕೊಂಡು ಬಿಡುತ್ತೀರಿ, ನಿಮಿತ್ತರಾದಂತಹ ಶಿಕ್ಷಕರನ್ನೂ ಬಹಳ ಚತುರತೆಯಿಂದ ನಡೆಸಿಕೊಂಡು ಬಿಡುತ್ತೀರಿ. ತಾವು ನಮ್ಮ ಬಾವಾರ್ಥವನ್ನು ತಿಳಿದುಕೊಂಡಿಲ್ಲ, ನಮ್ಮ ಭಾವನೆಯು ಈ ರೀತಿಯಾಗಿ ಇರಲಿಲ್ಲ,

ಆದರೆ ಬಾಯಿಂದ ಶಬ್ದವು ಆಕಸ್ಮಿಕವಾಗಿ ಬಂದುಬಿಟ್ಟಿತು ಎಂದು ಮಕ್ಕಳು ಹೇಳುತ್ತಾರೆ. ಆದರೆ ಬಾಪ್‍ದಾದಾರವರು ಭಾವದ ಭಾವವನ್ನೂ ಸಹ ಚೆನ್ನಾಗಿ ತಿಳಿದಿದ್ದಾರೆ. ಆದ್ದರಿಂದ ಬಚ್ಚಿಡಲು ಸಾಧ್ಯವಿಲ್ಲ. ಶಿಕ್ಷಕರು ನನ್ನಿಂದ ತಪ್ಪಾಗಿದೆ ಎಂದು ತಿಳಿಯುತ್ತಾರೆ, ಇದು ಆಗಬಹುದು. ಆದರೆ ತಂದೆಯಿಂದ ತಪ್ಪು ಆಗಲು ಸಾಧ್ಯವಿಲ್ಲ ತಾನೆ? ಅದಕ್ಕಾಗಿ ಈಗ ಚಿಕ್ಕ ಪುಟ್ಟ ವಿಚಾರಗಳಿಗೆ ಸಮಯವಿಲ್ಲ. ಅದೂ ಕೂಡ ವ್ಯರ್ಥದ ಖಾತೆಗೆ ಜಮಾ ಆಗಿಬಿಡುತ್ತದೆ. ತಂದೆಯಿಂದ ಎಷ್ಟು ಪರಿಶ್ರಮ ತೆಗೆದುಕೊಳ್ಳುತ್ತೀರೋ ಅಷ್ಟೇ ಅವರಿಗೆ ಪ್ರತಿಫಲವನ್ನು ಕೊಡಬೇಕಾಗುತ್ತದೆ. ವ್ಯಕ್ತ ರೂಪದಲ್ಲಿ ಪರಿಶ್ರಮವನ್ನು ತೆಗೆದುಕೊಂಡಿರಿ, ಅವ್ಯಕ್ತ ರೂಪದಲ್ಲಿಯೂ ಸಹ ಎಷ್ಟೊಂದು ವರ್ಷ ಕಳೆದು ಹೋಯಿತು. ಆರನೇ ವರ್ಷ ನಡೆಯುತ್ತಿದೆ. ಅವ್ಯಕ್ತ ರೂಪದಿಂದಲೂ ಆರು ವರ್ಷ ಇದೇ ವಿಷಯಗಳ ಬಗ್ಗೆ ಜ್ಞಾನ ದೊರೆಯುತ್ತಲಿದೆ. ಇಲ್ಲಿಯವರೆಗೂ ಅದೇ ಶಿಕ್ಷಣ ಬೇಕೇ? ಈಗ ತಂದೆಯಿಂದ ಸೇವೆ ಪಡೆದುಕೊಳ್ಳುವ ಸಮಯವೋ ಅಥವಾ ಅವರಿಗೆ ಪ್ರತಿಫಲ ಕೊಡುವ ಸಮಯವಾಗಿದೆಯೋ? ಒಂದು ವೇಳೆ ರಿಟರ್ನ್ ಮಾಡಲಿಲ್ಲ ಎಂದರೆ ಪ್ರಜೆಗಳನ್ನು ತಯಾರು ಮಾಡಿಕೊಳ್ಳಲಾಗುವುದಿಲ್ಲ. ಆದ್ದರಿಂದ ಈಗ ಸ್ವಯಂ ತಮ್ಮನ್ನು ತಾವು ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಿರಿ, ಜ್ಞಾನ ಪೂರ್ಣರನ್ನಾಗಿ ಮಾಡಿಕೊಳ್ಳಿರಿ. ಅನೇಕ ಪ್ರಕಾರದ ಕ್ಯೂಗಳಿಂದ ಸ್ವಯಂ ಅನ್ನು ಮುಕ್ತರನ್ನಾಗಿ ಮಾಡಿಕೊಳ್ಳಿ. ಯಾವ ಯುಕ್ತಿಗಳು ದೊರೆಯುತ್ತವೆಯೋ ಅವುಗಳನ್ನು ಕಾರ್ಯದಲ್ಲಿ ತೊಡಗಿಸುವುದಿಲ್ಲ. ಈ ಕಾರಣದಿಂದಲೇ ಮುಕ್ತರಾಗುತ್ತಿಲ್ಲ. ಒಳ್ಳೆಯದು. ಇದಾಗಿದೆ ಕ್ಯೂಗೆ ಉತ್ತರ. ಈಗ ಬಾಪ್‍ದಾದಾರವರು ಮಕ್ಕಳಿಂದ ಬಿಳ್ಕೊಡುಗೆ ಪಡೆಯುತ್ತಾರೆ. **(11–07–1974)**

ಕಲ್ಯಾಣಕಾರಿ ತಂದೆಯ ಶ್ರೀಮತದ ಅನುಸಾರವಾಗಿ ನಡೆಯುವಂತಹ ಆತ್ಮಗಳು ಕಲ್ಯಾಣದ ಹಾಗೂ ಏರುವ ಕಲೆಯ ವಿಚಾರವನ್ನು ಬಿಟ್ಟರೆ ಬೇರೆ ಯಾವ ಸಂಕಲ್ಪಗಳನ್ನೂ ಮಾಡುವುದಿಲ್ಲ. ಅವರ ಪ್ರತಿಯೊಂದು ಸಂಕಲ್ಪ ಪ್ರತಿ ಕಾರ್ಯದ ಬಗ್ಗೆ, ವರ್ತಮಾನ ಮತ್ತು ಭವಿಷ್ಯದ ಬಗ್ಗೆ ಕೇವಲ ಸಮರ್ಥ ಸಂಕಲ್ಪ ಮಾತ್ರ ಇರುತ್ತದೆ, ವ್ಯರ್ಥ ಇರುವುದಿಲ್ಲ. ಭಯಪಡುವುದಿಲ್ಲತ್ತಾನೆ? ಎದುರಿಸಬೇಕಾಗುತ್ತದೆ, ಪರೀಕ್ಷೆಯನ್ನು ಎದುರಿಸುವುದು ಅಂದರೆ ಮುಂದುವರಿಯು ವುದು, ಅಂದರೆ ಸಂಪೂರ್ಣತೆಯ ಅತೀ ಸಮೀಪಕ್ಕೆ ಮುಟ್ಟುವುದು. ಈಗ ಇಂತಹ ಪರೀಕ್ಷೆ ಬರಲಿದೆ. ಸ್ವಯಂ ಸ್ಪಷ್ಟ ಬುದ್ಧಿಯುಳ್ಳವರಾಗಿದ್ದಾಗ ಅನ್ಯರಿಗೂ ಸ್ಪಷ್ಟಗೊಳಿಸಬಲ್ಲಿರಿ. ಇದರ ಅರ್ಥ ಆಗಬಾರದು ಎಂದು ತಿಳಿದುಕೊಳ್ಳುವುದಲ್ಲ. ಡ್ರಾಮಾದಲ್ಲಿ ಸಮಯ ಪ್ರತಿ ಸಮಯ ಏನಾಗುತ್ತಾ ಇದೆಯೋ ಅದರಲ್ಲಿ ಬೆಣ್ಣೆಯಲ್ಲಿರುವ ಕೂದಲನ್ನು ತೆಗೆಯುತ್ತೀರಲ್ಲವೆ? ಏನಾದರೂ ಕಷ್ಟವಾಯಿತೇ? ಬಾಪ್‍ದಾದಾರವರು ನಯನಗಳಲ್ಲಿ ಕುಳ್ಳಿರಿಸಿಕೊಂಡು, ಹೃದಯ ಸಿಂಹಾಸನದಲ್ಲಿ ಕುಳ್ಳಿರಿಸಿಕೊಂಡು ಪಾರು ಮಾಡುತ್ತಾ ಕರೆದುಕೊಂಡು ಬರುತ್ತಿರುವರಲ್ಲವೆ? ಅಂತ್ಯದವರೆಗೂ ಜೊತೆಯನ್ನು ನಿಭಾಯಿಸುವ ಮತ್ತು ಯಾವುದೇ ಪರಿಸ್ಥಿತಿಯಿಂದ ಪಾರು ಮಾಡಿ ಕರೆದುಕೊಂಡು ಹೋಗುವ ವಾಗ್ದಾನವನ್ನು ಅನ್ಯ ಯಾರಾದರೂ ಮಾಡುತ್ತಾರೆಯೇ? ಇಲ್ಲ. ಜೊತೆಯಲ್ಲಿ ಕರೆದುಕೊಂಡು ಹೋಗಲೇ ಬೇಕಲ್ಲವೇ? ಸರ್ವಶಕ್ತಿವಂತ ತಂದೆ ಜೊತೆಯಲ್ಲಿ ಇದ್ದಾಗಲೂ ಇಂತಹ ಸಂಕಲ್ಪಗಳು ಉತ್ಪನ್ನವಾಯಿತು ಎಂದರೆ ಅಂತಹವರಿಗೆ ಏನೆಂದು ಹೇಳಬೇಕು? ಇಂತಹ ವ್ಯರ್ಥ ಸಂಕಲ್ಪಗಳನ್ನು ಸಮಾಪ್ತಿ ಮಾಡಿ ಯಾವ ಸ್ಥಾಪನೆಯ ಕಾರ್ಯಕ್ಕೆ ನಿಮಿತ್ತರಾಗಿದ್ದೀರೋ, ಬಾಪ್‍ದಾದಾರವರಿಗೆ ಸಹಾಯಕರಾಗಿದ್ದೀರೋ ಆ ಕಾರ್ಯದಲ್ಲಿ ಮಗ್ನರಾಗಿರಿ. ತಮ್ಮ ಲಗನ್‍ನಿನ ಅಗ್ನಿಯನ್ನು ತೀವ್ರ ಮಾಡಿಕೊಳ್ಳಿ. ಈ ಲಗನ್‍ನಿನ ಅಗ್ನಿಯಿಂದಲೇ ವಿನಾಶದ ಅಗ್ನಿಯು ತೀವ್ರಗತಿಯ ಸ್ವರೂಪವನ್ನು ಧಾರಣೆ ಮಾಡಿಕೊಳ್ಳುತ್ತದೆ. ತಾವೇ ರಚಿಸಲ್ಪಟ್ಟ ಅವಿನಾಶಿ ಜ್ಞಾನ ಯಜ್ಞದಲ್ಲಿ, ನಿಮಿತ್ತ ಬ್ರಾಹ್ಮಣರಾದ ತಾವು ಮೊದಲು ಸ್ವಯಂನಲ್ಲಿರುವ ಬಲಹೀನತೆಗಳನ್ನು, ಕೊರತೆಗಳನ್ನು ಆಹುತಿ ಮಾಡಿರಿ, ಆಗ ಹಳೆಯ ಪ್ರಪಂಚದ ಆಹುತಿಯಾಗಿ ನಂತರ ಸಮಾಪ್ತಿ ಆಗುತ್ತದೆ. ಈಗ ದೃಢ ಸಂಕಲ್ಪದ ಜ್ವಾಲೆಯನ್ನು ಹೆಚ್ಚಿಸಿಕೊಳ್ಳಿ ಆಗ ಇದು ಸಂಪನ್ನವಾಗುತ್ತದೆ. **(08–02–1975)**

ಹೇಗೆ ಪಾಂಡವರು ಬಾಣವನ್ನು ಹೊಡೆದರು ಮತ್ತು ಭೂಮಿಯಿಂದ ನೀರು ಹೊರಬಂತು ಎಂಬ ಕಲ್ಪದ ಹಿಂದಿನ ಗಾಯನವಿದೆಯೋ, ಹಾಗೆಯೇ ಪುರುಷಾರ್ಥ ಮಾಡಿದಿರಿ ಮತ್ತು ಫಲವು ಸಿಕ್ಕಿಬಿಟ್ಟಿತು. ಈಗ ಪ್ರತ್ಯಕ್ಷ ಫಲದ ಸಮಯವಾಗಿದೆ. ಸೀಜನ್ ಇದೆ, ಸಮಯದ ವರದಾನವಿದೆ. ಇದರ ಲಾಭವನ್ನು ಪಡೆದುಕೊಳ್ಳಿ. ತಮ್ಮ ಸಾಧನಗಳು, ಸಮಯ ಮತ್ತು ಸಂಪತ್ತನ್ನು ತ್ಯಾಗ ಮಾಡಿರಿ, ಆಗ ಪ್ರತ್ಯಕ್ಷ ಫಲದ ಭಾಗ್ಯವನ್ನು ಪ್ರಾಪ್ತಿಮಾಡಿಕೊಳ್ಳಬಲ್ಲಿರಿ. ಸ್ವಯಂಗೆ ಆರಾಮ, ಸೇವೆಯ ಸಲುವಾಗಿ ಅರ್ಪಣೆ ಮಾಡಿದ ಸಂಪತ್ತನ್ನು ಸ್ವಯಂಗಾಗಿ ಉಪಯೋಗಿಸಿಕೊಳ್ಳುವುದರಿಂದ ಎಂದಿಗೂ ಸಫಲತೆ ದೊರೆಯುವುದಿಲ್ಲ. ಹೇಗೆ ಸೇವೆಯ ಪ್ರಾರಂಭದಲ್ಲಿ ತಮ್ಮ ಭೋಜನವನ್ನೂ ಕಡಿಮೆ ಮಾಡಿ ಪ್ರತಿಯೊಂದು ವಸ್ತುವನ್ನು ಸೇವೆಯಲ್ಲಿ ತೊಡಗಿಸಿದ್ದರಿಂದ ಅದರ ಪ್ರತ್ಯಕ್ಷ ಫಲವೇ ತಾವು ಆತ್ಮಗಳಾಗಿದ್ದೀರಿ. ಇದೇ

ರೀತಿ ಮಧ್ಯದಲ್ಲಿ ತಂದೆ ಮತ್ತು ಡ್ರಾಮಾವೂ ಸಹಜ ಸಾಧನಗಳನ್ನು ಸ್ವಯಂ ಪ್ರತಿಯಾಗಿ ತೊಡಗಿಸುವ ಅನುಭವನ್ನು ಕೂಡ ಮಾಡಿಸಿದ್ದಾರೆ ಆದರೆ ಈಗ ಅಂತಿಮ ಸಮಯದಲ್ಲಿ ಪ್ರಕೃತಿಯು ದಾಸಿ ಆದರೂ ಸಹ, ಸರ್ವ ಸಾಧನಗಳು ಪ್ರಾಪ್ತಿಯಾಗಿದ್ದರೂ ಸಹ, ಸ್ವಯಂ ಪ್ರತಿಯಾಗಿ  ಅಲ್ಲ, ಆದರೆ ಸೇವೆಯ ಪ್ರತಿ ತೊಡಗಿಸಿ. ಏಕೆಂದರೆ ಈಗ ಮುಂದುವರೆದಂತೆ ಅನೇಕ ಆತ್ಮಗಳು ಸಾಧನ ಮತ್ತು ಸಂಪತ್ತನ್ನು ತಮ್ಮ ಮುಂದೆ ಹೆಚ್ಚು ಹೆಚ್ಚು ಅರ್ಪಣೆ ಮಾಡುತ್ತಾರೆ. ಆದರೆ ಸ್ವಯಂ ಪ್ರತಿಯಾಗಿ ಎಂದಿಗೂ ಸ್ವೀಕಾರ ಮಾಡಬೇಡಿ. ಸ್ವಯಂ ಪ್ರತಿ ಸ್ವೀಕಾರ ಮಾಡಿದ್ದೀರಾ ಎಂದರೆ ಸ್ವಯಂ ಅನ್ನು ಶ್ರೇಷ್ಠ ಪದವಿಯಿಂದ ವಂಚಿತರನ್ನಾಗಿ ಮಾಡಿಕೊಂಡಂತೆ. **(10–02–1975)**

ಸ್ವಯಂನ್ನು ಮೊದಲನೇ ನಂಬರ್‌ನವರೆಂದು ತಿಳಿದುಕೊಳ್ಳುತ್ತೀರೋ  ಅಥವಾ ಎರಡನೇ ನಂಬರ್‌ನವರೆಂದು ತಿಳಿದುಕೊಳ್ಳುತ್ತೀರೋ? ಲಂಡನ್‌ನ ಗ್ರೂಪ್ ಯಾವ ನಂಬರ್‌ನಲ್ಲಿ ಇದ್ದೀರಾ? ಡಬಲ್ ವಿದೇಶಿ ಗ್ರೂಪ್ ಬಾಪ್‌ದಾದಾರವರನ್ನು ವಿಶೇಷವಾಗಿ ಆಹ್ವಾನಿಸಿದ್ದಾರೆ. ಎಲ್ಲರೂ ವಿದೇಶಿಗಳೆ, ಆದರೆ ನೀವು ಡಬಲ್ ವಿದೇಶಿಗಳಾಗಿದ್ದೀರಿ. ಆದ್ದರಿಂದ ಡಬಲ್ ವಿದೇಶಿಗಳು ವಿಶೇಷ ರೂಪದಿಂದ ಬಾಪ್‌ದಾದಾರವರನ್ನು ಪ್ರತ್ಯಕ್ಷ ಮಾಡಬೇಕಾಗಿದೆ. ಯಾವಾಗ ನೀವು ಬಾಪ್‌ದಾದಾರವರ ಕಣ್ಮಣಿಗಳು ಆಗುತ್ತೀರೋ ಆಗ ಮಾಡಬಲ್ಲಿರಿ, ಭುಜಗಳಾಗುವುದರಿಂದ ಅಲ್ಲ. ವಿದೇಶಿಯರು ಸೇವೆಯ ಹೊಸ ಹೊಸ ಯೋಜನೆಗಳನ್ನು ಮಾಡಿಕೊಳ್ಳಬೇಕಾಗಿದೆ. ಹೇಗೆ ಭಾರತದಲ್ಲಿ ನಿವಾಸ ಮಾಡುವ ಸೇವಾಧಾರಿ ಆತ್ಮಗಳು ಹೊಸ ಹೊಸ ಸಂಶೋಧನೆಗಳನ್ನು ಮಾಡುತ್ತಿದ್ದಾರೋ, ಹಾಗೆ ಡಬಲ್ ವಿದೇಶಿಗಳು ಯಾವ ಸಂಶೋಧನೆ ಮಾಡಿದ್ದಿರಾ? ಹೇಗೆ ಭಾರತದಿಂದ ಮಾಡಲ್ಪಟ್ಟ ಸಂಶೋಧನೆಗಳನ್ನು ವಿದೇಶದಲ್ಲಿ ಮಾಡುತ್ತಾರೋ, ಅದೇ ರೀತಿ ವಿದೇಶದ ಸಂಶೋಧನೆಗಳನ್ನು ಭಾರತದಲ್ಲಿ ಮಾಡಬೇಕು. ಹೇಗೆ ಪ್ರದರ್ಶನಗಳು, ರ್‍ಯಾಲಿ, ಪ್ರೊಜೆಕ್ಟರ್ ಷೋ. ಗೀತಾ ಪಾಠಶಾಲೆ ಇವುಗಳು ಭಾರತದಲ್ಲಿ ನಿವಾಸ ಮಾಡುವವರ ಸೇವೆಯ ಹೊಸ ಸಂಶೋಧನೆಗಳಾಗಿವೆ. ಅದೇ ರೀತಿ ವಿದೇಶೀಯರು ಯಾವ ಸಂಶೋಧನೆಯನ್ನು ಮಾಡಿದ್ದೀರಾ? (ಮಾರಿಷಿಯಸ್‌ನಲ್ಲಿ ಪ್ರಧಾನ ಮಂತ್ರಿಯನ್ನು ಆಹ್ವಾನಿಸಲಾಗಿತ್ತು.) ಯಾರನ್ನಾದರೂ ಕರೆಸುವುದು, ಇದೂ ಸಹ ಇಲ್ಲಿಂದಲೇ ಆರಂಭವಾಯಿತು. ಆದರೆ ಅದನ್ನು ಅಲ್ಲಿ ಪ್ರಾಕ್ಟಿಕಲ್‌ನಲ್ಲಿ ತಂದರು. ಭಾರತದಲ್ಲಿ ಇನ್ನೂ ಪ್ರಾಕ್ಟಿಕಲ್‌ನಲ್ಲಿ ಮಾಡಿಲ್ಲ.  ಇದಂತೂ ಸರಿಯಾಗಿದೆ. ಏನು ಮಾಡಿದ್ದೀರೋ ಅದಕ್ಕೆ ಬಾಪ್‌ದಾದಾರವರು ಧನ್ಯವಾದವನ್ನು ಹೇಳುತ್ತಾರೆ. ಆದರೆ ಅಲ್ಲಿಂದ ಏನಾದರು ಹೊಸ ಸಂಶೋಧನೆಗಳು ಹೊರಬಂದಿದೆಯೇ? ವಿದೇಶಿಗಳು ಅಲ್ಲಿಯ ವಾತಾವರಣಕ್ಕೆ ಅನುಗುಣವಾಗಿ ಸ್ವಲ್ಪ ಸಮಯದಲ್ಲೇ ಎಲ್ಲರಿಗೂ ಸಂದೇಶ ತಲುಪುವಂತಹ ಯಾವುದಾದರೂ ವಿಹಂಗ ಮಾರ್ಗದ ಸೇವೆಯ ಸಂಶೋಧನೆಯನ್ನು ಮಾಡಿದ್ದೀರಾ? ಟಿ.ವಿ, ರೇಡಿಯೊಗಳಲ್ಲಿ ತಮ್ಮ ಸಂದೇಶ ಬರುತ್ತದೆ. ಇದು ವಿದೇಶದಲ್ಲಿ ಸಾಧಾರಣ ವಿಚಾರವಾಗಿದೆ. ನಿಮ್ಮ ಕಾರ್ಯಕ್ರಮ ಹೇಗೆ ಬರುತ್ತದೋ ಹಾಗೆಯೇ ಬೇರೆಯವರದೂ ಬರುತ್ತದೆ. ಭಾರತದಲ್ಲಿ ಇದು ದೊಡ್ಡ ಮಾತಾಗಿದೆ. ಆದರೆ ಇದೇ ಮಾತು ಕೆಲವು ಸ್ಥಾನಗಳಲ್ಲಿ ಸಾಮಾನ್ಯದ್ದಾಗಿದೆ. ಆದ್ದರಿಂದ ಎಷ್ಟು ಪುರುಷಾರ್ಥ ಮಾಡಿದ್ದೀರೋ, ಸ್ವಲ್ಪ ಸಮಯದಲ್ಲೇ ಧೈರ್ಯ, ಉತ್ಸಾಹ, ಉಲ್ಲಾಸವನ್ನು ತೋರಿಸುತ್ತಾ ಸೇವೆಯನ್ನು ಮುಂದುವರೆಸಿದ್ದೀರಿ ಅದಕ್ಕೆ ಬಾಪ್‌ದಾದಾರವರು 'ಲಾಸ್ಟ್ ಈಸ್ ಫಾಸ್ಟ್' ಎಂಬ ಟೈಟಲ್‌ನ್ನು ಕೊಟ್ಟೇ ಕೊಡುತ್ತಾರೆ. ಆದರೆ ಈಗ ಎಲ್ಲಾ ವಿದೇಶಿಯರು ಒಟ್ಟಾಗಿ ಸೇರಿಕೊಂಡು ವಿದೇಶದಲ್ಲಿ ಶಕ್ತಿಶಾಲಿಯಾಗಿ ಶಬ್ಧ ಮಾಡಿ ಭಾರತ ವಾಸಿಗಳವರೆಗೂ ತಲುಪುವಂತಹ ಯಾವುದಾದರೂ ಹೊಸ ಸಂಶೋಧನೆಯನ್ನು ಮಾಡಿರಿ. ವಿದೇಶದ ಸೇವೆಯ ಮೂಲ ಫೌಂಡೇಷನ್‌ನ್ನೇ ವಿದೇಶಿ ಶಬ್ಧದ ಮೂಲಕ ಭಾರತದ ಕುಂಭಕರ್ಣರು ಎಚ್ಚೆತ್ತುಕೊಳ್ಳುವಂತೆ ಮಾಡುವುದಾಗಿದೆ. ವಿದೇಶದ ಸೇವೆಯ ಮುಖ್ಯ ಗುರಿಯೇ ಇದಾಗಿದೆ. ವಿದೇಶದವರು ವಿದೇಶದಲ್ಲಿ ತೋರಿಸುವುದು ದೊಡ್ಡ ವಿಚಾರವಲ್ಲ. ಯಾವ ಲಕ್ಷ್ಯದಿಂದ ವಿದೇಶದ ಸೇವೆಯು ಡ್ರಾಮಾದಲ್ಲಿ ನಿಗದಿತವಾಗಿದೆಯೋ ಮತ್ತು ಇಲ್ಲಿಯವರೆಗೂ ಯಾವುದೇ ಸಂಶೋಧನೆಯ ಧ್ವನಿ ವಿದೇಶದಿಂದಲೇ ಬರುತ್ತಿದೆ.  ಸಂಶೋಧನೆಯು ಭಾರತದ್ದೇ ಆಗಿರುತ್ತದೆ. ಆದರೆ ಭಾರತದವರು ಭಾರತದ ಸಂಶೋಧನೆಯನ್ನು ವಿದೇಶಿಯರ ಮೂಲಕವೇ ಒಪ್ಪಿಕೊಳ್ಳುತ್ತಾರೆ. ಅದೇ ರೀತಿ ಈ ಈಶ್ವರೀಯ ಪ್ರತ್ಯಕ್ಷತೆಯ ಧ್ವನಿ ವಿದೇಶದ ಸೇವೆಯಿಂದಲೇ ಭಾರತದಲ್ಲಿ ಪ್ರಸಿದ್ಧವಾಗುತ್ತದೆ.   ವಿದೇಶಿಯರು ಈ ಕಾರ್ಯಕ್ಕಾಗಿಯೇ ನಿಮಿತ್ತರಾಗಿದ್ದೀರಿ. ಆದ್ದರಿಂದ ಇಂತಹ ಸಂಶೋಧನೆ ಯನ್ನು ಕಂಡು ಹಿಡಿಯಿರಿ. ಯಾರಾದರೂ ಇಂತಹ ಆತ್ಮವನ್ನು ನಿಮಿತ್ತ ಮಾಡಿ, ಅವರದು ಕೇವಲ ಬಾಯಿಯ ಮಾತಾಗದೇ ಅನುಭವದ ಮಾತಾಗಿರಬೇಕು. ಅನುಭವದ ಧ್ವನಿ ವಿದೇಶದಿಂದ ಭಾರತವನ್ನು ತಲುಪಬೇಕು. ಅಂತಿಮ ಸಮಯದಲ್ಲಿ ವಿದೇಶದ ಸೇವೆಗೆ ಇಷ್ಟೊಂದು ಮಹತ್ವವನ್ನು ಏಕೆ ಕೊಡಲಾಗಿದೆ, ವಿದೇಶಕ್ಕೆ ಹೋಗುವಂತಹವರಿಗೂ ಇಂತಹ ಸೂಕ್ಷ್ಮ ಮತ್ತು ಅಂತಿಮದ ಸಮಯದಲ್ಲಿ ವಿದೇಶಕ್ಕೆ ಏಕೆ ಕಳಿಸುತ್ತಿದ್ದಾರೆ ಎನ್ನುವ ಸಂಕಲ್ಪವು

ಬರುವಂತೆ. ಕೊನೆಗೆ ಎಲ್ಲರೂ ವಿದೇಶದಿಂದ ಭಾರತಕ್ಕೇ ಬರಬೇಕಾಗಿದೆ. ಆದರೂ ವಿದೇಶದ ಸೇವೆ ಮುಂದುವರೆಯುತ್ತಿದೆ. ಭಾರತದಲ್ಲಿ ಅವಶ್ಯಕತೆಯಿದ್ದರೂ ಒಳ್ಳೆ ಒಳ್ಳೆಯ ಸೇವಾಧಾರಿಗಳನ್ನು ವಿದೇಶ ಸೇವೆಗಾಗಿ ಕಳುಹಿಸಿಕೊಡಲಾಗುತ್ತಿದೆ. ಇಲ್ಲಿಯೇ ನಿಮಂತ್ರಣವಿದ್ದರೂ ಸಹ ಏಕೆ ವಿದೇಶಕ್ಕೆ ಕಳುಹಿಸಿಕೊಡಲಾಗುತ್ತಿದೆ? ಮತ್ತು ಅನ್ಯ ಮತದವರು ಸ್ವರ್ಗದಲ್ಲಿ ಬರುವ ಪಾತ್ರವಿಲ್ಲ ಎಂದು ತಿಳಿದಿದ್ದರೂ, ಆದರೆ ಯಾರು ಟ್ರಾನ್ಸ್‌ಫರ್ ಆಗಿಬಿಟ್ಟಿದ್ದಾರೋ ಅವರು ಅನ್ಯ ಧರ್ಮದಲ್ಲಿ ಮತಾಂತರಗೊಂಡಿದ್ದಾರೆ. ಆ ಆತ್ಮಗಳು ಬಹಳ ಕಡಿಮೆಯಿದ್ದರೂ ಸಹ ಅವರನ್ನು ತಮ್ಮ ಆದಿ ಧರ್ಮಕ್ಕೆ ಕರೆತರಲು ಕಳುಹಿಸಿಕೊಡಲಾಗುತ್ತಿದೆ. ಇದರ ಮೂಲ ಆಧಾರ ಅಥವಾ ವಿದೇಶದ ಸೇವೆಯ ಮುಖ್ಯ ಗುರಿ ಉದ್ದೇಶವೆಂದರೆ ವಿದೇಶದ ಮೂಲಕವೇ ಧ್ವನಿಯು ಭಾರತವನ್ನು ತಲುಪಬೇಕಾಗಿದೆ. ಈ ರಹಸ್ಯವೂ ಸಹ ಡ್ರಾಮಾದಲ್ಲಿ ನಿಗದಿಯಾಗಿದೆ. ಅದಕ್ಕಾಗಿಯೇ ವಿದೇಶದ ಸೇವೆಗೆ ಪ್ರಥಮ ಅವಕಾಶ ಕೊಡಲಾಗಿದೆ. ಉಳಿದಂತೆ ಗೀತಾ ಪಾಠ ಶಾಲೆಗಳನ್ನು ತೆರೆಯಲಾಗಿದೆ, ಟಿ.ವಿ.ಯಲ್ಲಿ ಹೇಳಲಾಗಿದೆ ಎಂಬ ವಿಚಾರ ಮುಖ್ಯ ಗುರಿ–ಉದ್ದೇಶವಲ್ಲ. ಇವೆಲ್ಲ ಸಾಧನಗಳು ಮುಖ್ಯ ಗುರಿಯನ್ನು ತಲುಪಲು ಮಾತ್ರ ಇವೆ. ತಿಳಿಯಿತಾ? ಈಗ ಆದಷ್ಟು ಬೇಗ ಭಾರತದವರೆಗೂ ಧ್ವನಿಯನ್ನು ಹೇಗೆ ತಲುಪಿಸುವುದು ಎಂದು ತಾವೆಲ್ಲರೂ ಪರಸ್ಪರ ವಿಚಾರ ವಿನಿಮಯ ಮಾಡಿರಿ. ವಿದೇಶದ ಮೂಲಕ ಭಾರತದಲ್ಲಿ ಎಂಥಹ ಧ್ವನಿ ಮೊಳಗಬೇಕು? **(02-08-1975)**

ಇವರ ಆಹ್ವಾನದ ಜೊತೆಗೆ ಮತ್ತೊಂದು ಕಡೆ ಬಾಪ್‌ದಾದಾರವರು ಸಹ ಸಮಾನ ಮತ್ತು ಸಂಪೂರ್ಣ ಆಗಿ ಸೂಕ್ಷ್ಮವತನ ನಿವಾಸಿಗಳಾಗಿ ತಂದೆಯ ಜೊತೆಯಲ್ಲಿ ಮನೆಗೆ ಹೋಗಬೇಕೆಂದು ಆಹ್ವಾನ ಮಾಡುತ್ತಿದ್ದಾರೆ. ಅಥವಾ ಸಂಗಮಯುಗವು ಹೆಚ್ಚು ಪ್ರಿಯವಾಗಿದೆಯೇ? ಎವರ್‌ರೆಡಿ ಆಗಿಬಿಟ್ಟಿದ್ದೀರೇನು? ಎಲ್ಲಿ ಕೂರಿಸಲಿ, ಯಾವ ರೂಪದಲ್ಲಿ ಕೂರಿಸಲಿ ಮತ್ತು ಎಲ್ಲಿಯವರೆಗೆ ಕೂರಿಸಲಿ..... ಎಂಬ ಪ್ರತಿಜ್ಞೆಯಲ್ಲಿ ಸದಾ ಸ್ಥಿತರಾಗಿರುತ್ತೀರಾ? ಕೊನೆಯ ಆಜ್ಞೆ ಆತ್ಮಿಕ ಸೈನಿಕರಿಗೆ ಎಷ್ಟು ಸಮಯದಲ್ಲಿ ದೊರೆಯುತ್ತದೆ? ಒಂದು ಸೆಕೆಂಡಿನ ಆಜ್ಞೆ ಆಗಿರುತ್ತದೆ. ಒಂದು ಗಂಟೆ ಮೊದಲು ತಿಳಿಸಲಾಗುವುದಿಲ್ಲ. ಅದಕ್ಕಾಗಿಯೇ ಎಂಟು ರತ್ನಗಳು ಮಾತ್ರ ಆಗುತ್ತಾರೆ. ದಿನಾಂಕವನ್ನು ತಿಳಿಸಿ ಪರೀಕ್ಷೆಯನ್ನು ಕೊಡುವುದಿಲ್ಲ ಅಂದರೆ ಡ್ರಾಮಾದಲ್ಲಿ ಯಾವ ಕೊನೆಯ ದಿನಾಂಕವು ನಿಗದಿಯಾಗಿದೆಯೋ, ಆ ನಿಶ್ಚಿತ ದಿನಾಂಕ ಮತ್ತು ಸಮಯವನ್ನು ಹೇಳಲಾಗುವುದಿಲ್ಲ. ಅದನ್ನು ಅಂದಾಜಿನಲ್ಲಿ ಹೇಳಬಹುದು. ಆದರೆ ಲಾಸ್ಟ್ ಪೇಪರ್ ಒಂದೇ ಪ್ರಶ್ನೆಯ ಮತ್ತು ಒಂದೇ ಸೆಕೆಂಡಿನದು ಮಾತ್ರ ಇರುತ್ತದೆ. ಅದಕ್ಕಾಗಿಯೇ ಮಕ್ಕಳು ಎವರ್‌ರೆಡಿ ಆಗಿರಬೇಕು. **(02-09-1975)**

ಫರಿಶ್ತಾ ಸ್ವರೂಪದ ಸ್ಥಿತಿಯಲ್ಲಿ ಸದಾ ಸ್ಥಿತರಾಗಿರುತ್ತೀರಾ? ಫರಿಶ್ತಾ ಸ್ವರೂಪದ ಪ್ರಕಾಶದಲ್ಲಿ ಅನ್ಯ ಆತ್ಮಗಳಿಗೂ ಕೇವಲ ಪ್ರಕಾಶವೇ ಕಂಡು ಬರುತ್ತದೆ. ಹದ್ದಿನ ಪಾತ್ರಧಾರಿಗಳು ಹದ್ದಿನ ನಾಟಕದಲ್ಲಿ ತಮ್ಮ ಪಾತ್ರವನ್ನು ಅಭಿನಯಿಸು ತ್ತಿದ್ದಾಗ, ಬೆಳಕಿನ ಕಾರಣ ಅತಿ ಸುಂದರವಾಗಿ ಕಂಡು ಬರುತ್ತಾರೆ. ಅದೇ ಪಾತ್ರಧಾರಿ ಸಾಧಾರಣ ಜೀವನದಲ್ಲಿ, ಸಾಧಾರಣ ಬೆಳಕಿನಲ್ಲಿ ಪಾತ್ರ ಮಾಡುವಾಗ ಹೇಗೆ ಕಂಡುಬರುತ್ತಾರೆ. ಹಗಲು–ರಾತ್ರಿಯ ವ್ಯತ್ಯಾಸ ಕಂಡುಬರುತ್ತದೆ ಅಲ್ಲವೆ? ಪ್ರಕಾಶದ ಕಿರಣಗಳು ಅವರ ಲಕ್ಷಣಗಳನ್ನೇ ಪರಿವರ್ತನೆ ಮಾಡಿಬಿಡುತ್ತದೆ. ಅದೇ ರೀತಿ ಬೇಹದ್ದಿನ ಡ್ರಾಮಾದ ನಾಯಕ ನಾಯಕಿ ಪಾತ್ರಧಾರಿಗಳಾದ ತಾವುಗಳು ಅವ್ಯಕ್ತ ಸ್ಥಿತಿಯ ಪ್ರಕಾಶದ ಒಳಗೆ ಪ್ರತಿಯೊಂದು ಪಾತ್ರವನ್ನು ಮಾಡಿದಲ್ಲಿ ಏನು ಕಾಣಿಸುತ್ತದೆ? ಅಲೌಕಿಕ ಫರಿಶ್ತಾಗಳು. ಸಾಕಾರದ ಬದಲು ಸೂಕ್ಷ್ಮವತನ ವಾಸಿಗಳಾಗಿ ಕಂಡುಬರುತ್ತಾರೆ. ಸಾಕಾರಿಗಳು ಆಗಿದ್ದರೂ ಸಹ ಆಕಾರಿ ರೂಪದ ಅನುಭವ ಆಗುತ್ತದೆ. ಪ್ರತಿಯೊಂದು ಪಾತ್ರವೂ ಪ್ರತಿಯೊಬ್ಬರನ್ನೂ ಆಕರ್ಷಣೆ ಮಾಡುವಂಥಹದ್ದಾಗಿರುತ್ತದೆ.

ಹೇಗೆ ವರ್ತಮಾನ ಸಮಯದಲ್ಲಿ ಹದ್ದಿನ ಸಿನಿಮಾ ಅಥವಾ ನಾಟಕಗಳು ಕಲಿಯುಗೀ ಮನುಷ್ಯರ ಆಕರ್ಷಣೆಯ ಮುಖ್ಯಕೇಂದ್ರವಾಗಿವೆ. ಬಿಡಬೇಕೆಂದರೂ, ನೋಡದೆ ಇರಬೇಕೆಂದರೂ ಕೂಡ, ಹದ್ದಿನ ಪಾತ್ರಧಾರಿಗಳ ಪಾತ್ರವು ತನ್ನ ಕಡೆಗೆ ಸೆಳೆದು ಬಿಡುತ್ತದೆ. ಅದಕ್ಕೆ ಆಧಾರ ಪ್ರಕಾಶ ಆಗಿದೆ. ಅದೇ ರೀತಿ ಈ ಅಂತಿಮ ಸಮಯದಲ್ಲಿ ಮಾಯೆಯ ಅತಿಯಾದ ಅಕರ್ಷಣೆ ಅಂತ್ಯವಾಗುವ ಕಾರಣದಿಂದ ಬೇಹದ್ದಿನ ಹೀರೋ ಪಾತ್ರಧಾರಿಗಳು, ಯಾರು ಸದಾ ಜಿರೋ (ನಿರಾಕಾರ) ಸ್ಥಿತಿಯಲ್ಲಿ ಇರುತ್ತಾ, ಜಿರೋ ತಂದೆಯ ಜೊತೆಗೆ ಪ್ರತಿಯೊಂದು ಪಾತ್ರವನ್ನು ಮಾಡುವವರು ಆಗಿದ್ದಾರೋ ಮತ್ತು ದಿವ್ಯ ಜ್ಯೋತಿ ಸ್ವರೂಪದವರು, ಯಾರ ಸ್ಥಿತಿಯೂ ಸಹ ಹಗುರವಾಗಿರುತ್ತದೆ ಮತ್ತು ಸ್ಟೇಜಿನ ಮೇಲೆ ಪ್ರತಿಯೊಂದು ಪಾತ್ರವನ್ನೂ ಬೆಳಕಿನಲ್ಲಿ ಮಾಡುತ್ತಿರುತ್ತಾರೋ ಅಂದರೆ ಯಾರು ಡಬಲ್ ಲೈಟ್ ಫರಿಶ್ತಾ ಆಗಿರುತ್ತಾರೋ ಅವರು ಪ್ರತಿಯೊಂದು ಆತ್ಮವನ್ನು ಸ್ವತಃ ತಮ್ಮ ಕಡೆಗೆ ಅಕರ್ಷಿಸುತ್ತಾರೆ. ವರ್ತಮಾನ

ಸಮಯದಲ್ಲಿ ನಾಟಕವನ್ನು ಬಿಟ್ಟು ಫರಿಶ್ತೆಗಳ ದೃಷ್ಟಿಯ ಸಮಾನ ಅಕರ್ಷಣೆ ಮಾಡುವಂತಹ ಅನ್ಯ ಯಾವ ವಸ್ತುವಿದೆ. ಟಿ.ವಿ. ಹೇಗೆ ಟಿವಿಯ ಮೂಲಕ ಈ ಪ್ರಪಂಚದ ಎಂಥಂಥ ದೃಶ್ಯಗಳನ್ನು ನೋಡುತ್ತ ಅನೇಕರು ಆಕರ್ಷತರಾಗುತ್ತಾರೆ ಅಂದರೆ ಇಳಿಯುವ ಕಲೆಯಲ್ಲಿ ಹೋಗುತ್ತಾರೆ. ಅದೇ ರೀತಿಯಲ್ಲಿ ಫರಿಶ್ತೆಗಳ ಕಣ್ಣುಗಳು ದಿವ್ಯ ದೂರದರ್ಶನದ ಕೆಲಸವನ್ನು ಮಾಡುತ್ತವೆ. ಪ್ರತಿಯೊಬ್ಬರ ಕಣ್ಣುಗಳ ಮೂಲಕ ಈ ಪ್ರಪಂಚವನ್ನಷ್ಟೇ ಅಲ್ಲ ಮೂರೂ ಲೋಕಗಳ ದರ್ಶನ ಮಾಡುತ್ತಾರೆ. ಈ ರೀತಿಯಲ್ಲಿ ಫರಿಶ್ತೆಗಳ ಮಸ್ತಕದಲ್ಲಿ ಹೊಳೆಯುತ್ತಿರುವ ಮಣಿ ಆತ್ಮಗಳಿಗೆ ಸರ್ಚ್‌ಲೈಟ್ ಅಥವಾ ಲೈಟ್‌ಹೌಸ್‌ನ ಸಮಾನ ಸ್ವಯಂನ ಸ್ವರೂಪ, ಸ್ವ–ಮಾರ್ಗ ಮತ್ತು ಶ್ರೇಷ್ಠ ಗುರಿಯನ್ನು ಸ್ಪಷ್ಟವಾಗಿ ಸಾಕ್ಷಾತ್ಕಾರ ಮಾಡಿಸುತ್ತದೆ. **(05–09–1975)**

ಮಾಯೆಯ ಅನೇಕ ಪ್ರಕಾರದ ಚಕ್ರಗಳ ಗುರುತು ಏನಾಗಿದೆ? ಹೇಗೆ ಚಕ್ರಧಾರಿ ಆತ್ಮ ಪ್ರಕಾಶದ ಕಿರೀಟಧಾರಿ ಆಗಿರುತ್ತದೆಯೋ ಮತ್ತು ತಂದೆಯ ಆಸ್ತಿಗೆ ಅಧಿಕಾರಿ ಆಗಿರುತ್ತದೆಯೋ, ಅದೇ ರೀತಿಯಲ್ಲಿ ಮಾಯೆಯ ಆನೇಕ ಪ್ರಕಾರದ ಚಕ್ರದಲ್ಲಿ ಬರುವವರ ಗುರುತು ಏನಾಗಿದೆ? ಹೇಗೆ ಅವರ ತಲೆಯ ಮೇಲೆ ಪ್ರಕಾಶದ ಕಿರೀಟ ಇರುತ್ತದೋ ಅದೇ ರೀತಿ ಇವರ ತಲೆಯ ಮೇಲೆ ಅನೇಕ ಪ್ರಕಾರದ ವಿಘ್ನಗಳ ಹೊರೆ ಇರುತ್ತದೆ, ಕಿರೀಟ ಇರುವುದಿಲ್ಲ. ಸದಾ ಒಂದಲ್ಲ ಒಂದು ವಿಧವಾದ ಹೊರೆ ಅವರ ತಲೆಯ ಮೇಲೆ ಅಂದರೆ ಬುದ್ಧಿಯಲ್ಲಿ ಅನುಭವಿಸುತ್ತಿರುತ್ತಾರೆ. ಇಂತಹ ಆತ್ಮ ಸದಾ ಸಾಲದ ಸುಳಿಯಲ್ಲಿ ಸಿಕ್ಕಿಹಾಕಿ ಕೊಂಡಿರುವವರು ಮತ್ತು ಮುಳುಗಿರುವವರು ಆಗಿರುತ್ತಾರೆ. ಅವರ ಮಸ್ತಕದ ಮೇಲೆ, ಚಹರೆಯ ಮೇಲೆ ಸದಾ ಪ್ರಶ್ನಾರ್ಥಕ ಚಿನ್ಹೆ ಇರುತ್ತದೆ. ಪ್ರತಿಯೊಂದು ಮಾತಿನಲ್ಲೂ ಏಕೆ, ಏನು ಮತ್ತು ಹೇಗೆ ಎಂಬ ಪ್ರಶ್ನೆಗಳು ಇರುತ್ತದೆ. ಒಂದು ಸೆಕೆಂಡ್ ಸಹ ಬುದ್ಧಿಯು ಏಕಾಗ್ರ ಅಂದರೆ ಪೂರ್ಣವಿರಾಮದಲ್ಲಿ ಇರುವುದಿಲ್ಲ. ಪೂರ್ಣವಿರಾಮದ ಚಿಹ್ನೆ ಬಿಂದು (.) ಆಗಿರುತ್ತದೆ ಅಂದರೆ ಮನಸ್ಸಿನಲ್ಲೂ ಸಹ ಬಿಂದು ಸ್ವರೂಪದ ಸ್ಥಿತಿ ಇರುವುದಿಲ್ಲ. ವಾಚಾ ಮತ್ತು ಕರ್ಮದಲ್ಲೂ ಸಹ ಕಳೆದು ಹೋದದ್ದು ಕಳೆದು ಹೋಯಿತು, ನಥಿಂಗ್ ನ್ಯೂ (ಹೊಸದೇನೂ ಇಲ್ಲ) ಎಂಬುದಾಗಿ ಯಾರು ಇರುತ್ತಾರೋ ಅವರು ಕಲ್ಯಾಣಕಾರಿಗಳಾಗಿರುತ್ತಾರೆ. ಇಂತಹ ಪೂರ್ಣವಿರಾಮ ಅಂದರೆ ಬಿಂದು ಹಾಕಲು ಬರುವುದಿಲ್ಲವೇ. **(18–09–1978)**

ಈ ವಿಶೇಷ ದುರ್ಬಲತೆಯನ್ನು ಸಮಾಪ್ತಿ ಮಾಡಿಕೊಳ್ಳುವುದಕ್ಕಾಗಿ ವಿಶೇಷ ಸಂಘಟನೆಯ ಅವಶ್ಯಕತೆ ಇದೆ. ತಮ್ಮ ಯೋಗ ಅಗ್ನಿಯ ಪ್ರಭಾವದಿಂದ ಈ ವಾತಾವರಣವನ್ನು ಪರಿವರ್ತನೆ ಮಾಡುವಂತಹ ಮಹಾಕಾಳಿ ಸ್ವರೂಪದ ಶಕ್ತಿಯರ ಸಂಘಟನೆ ಬೇಕಾಗಿದೆ. ಈಗಂತೂ ಡ್ರಾಮಾ ಅನುಸಾರ ಪ್ರತಿಯೊಬ್ಬರ ನಡತೆ ಎಂಬ ದರ್ಪಣದಲ್ಲಿ ಅಂತಿಮ ಫಲಿತಾಂಶ ಸ್ಪಷ್ಟವಾಗುವುದಿದೆ. ಮುಂದುವರೆದಂತೆ ಪ್ರತಿಯೊಂದು ಮಹಾರಥಿ ಮಕ್ಕಳು ತಮ್ಮ ಜ್ಞಾನದ ಶಕ್ತಿಯ ಮೂಲಕ ಪ್ರತಿಯೊಬ್ಬರ ಚಹರೆಯಿಂದ ಅವರ ಕರ್ಮಕಥೆಯನ್ನು ಸ್ಪಷ್ಟವಾಗಿ ನೋಡಬಹುದಾಗಿದೆ. ಹೇಗೆ ಮಾಂಸಾಹಾರಿ ಭೋಜನದ ದುರ್ವಾಸನೆಯು ತಿಳಿಯಲ್ಪಡುತ್ತದೆಯೋ, ಅದೇ ರೀತಿ ಅಶುದ್ಧ ಸಂಕಲ್ಪ ರೂಪದ ಆಹಾರವನ್ನು ಸ್ವೀಕಾರ ಮಾಡುವಂತಹ ಆತ್ಮಗಳ ವೈಬ್ರೇಷನ್ಸ್‌ನ ಮೂಲಕ ಬುದ್ಧಿಗೆ ಸ್ಪಷ್ಟವಾಗಿ ತಿಳಿಯುತ್ತದೆ. ಇದರ ಯಂತ್ರವೇ ಬುದ್ಧಿಯ ಸ್ವಚ್ಛತೆ ಆಗಿದೆ. ಯಾರ ಈ ಯಂತ್ರವು ಶಕ್ತಿಶಾಲಿಯಾಗಿ ಇರುತ್ತದೆಯೋ ಅವರು ಸಹಜವಾಗಿ ಅರಿತುಕೊಳ್ಳಲು ಸಾಧ್ಯವಾಗುತ್ತದೆ. **(28–10–1975)**

ಈಗ ಪ್ರತ್ಯಕ್ಷತೆಯ ವರ್ಷವನ್ನು ಆಚರಿಸುವುದಕ್ಕೆ ಮೊದಲು ಸ್ವಯಂನಲ್ಲಿ ಮತ್ತು ನಿಮಿತ್ತ ಆಗಿರುವಂತಹ ಸೇವಾಧಾರಿಗಳಲ್ಲಿ ಸಂಘಟಿತ ರೂಪದಲ್ಲಿ ಈ ಶಕ್ತಿಯು ಸಹ ಪ್ರತ್ಯಕ್ಷವಾಗಬೇಕಾಗಿದೆ. ಒಂದುವೇಳೆ ಸ್ವಯಂನಲ್ಲೇ ಈ ಶಕ್ತಿಯ ಪ್ರತ್ಯಕ್ಷತೆ ಇಲ್ಲವೆಂದ ಮೇಲೆ ತಂದೆಯನ್ನು ಪ್ರತ್ಯಕ್ಷತೆ ಮಾಡಲು ಎಷ್ಟು ಸಫಲತೆ ಬೇಕೆಂದು ಇಚ್ಛಿಸುತ್ತೀರೋ ಅಷ್ಟು ಆಗುವುದಿಲ್ಲ. ಡ್ರಾಮಾನುಸಾರ ಏನಾಗಬೇಕೋ ಅದಂತೂ ಆಗಿಯೇ ಆಗುತ್ತದೆ. ಆದರೆ ನಿಮಿತ್ತರಾಗಿರುವವರಿಗೆ ನಿಮಿತ್ತತೆಯ ಫಲ ಯಾವುದು ಸಿಗಬೇಕಾಗಿದೆಯೋ ಅದು ಸಿಗುವುದಿಲ್ಲ. ನಿಶ್ಚಿತವಾದದ್ದು ಮಾಡಿಸುತ್ತಿದೆ. **(09/12/1975)**

ಈಗ ನಾನು ಎಂತಹ ದೀಪದ ಹುಳುವಾಗಿದ್ದೇನೆ ಎಂಬುದಾಗಿ ನಿಮ್ಮನ್ನು ನೀವೇ ಕೇಳಿಕೊಳ್ಳಿ. ಅನೇಕ ಪ್ರಕಾರದ ಸ್ಮೃತಿಗಳ ಚಕ್ರ ಸಮಾಪ್ತಿ ಆಗಿದೆಯಾ ಅಥವಾ ಇಲ್ಲಿಯವರೆಗೂ ಯಾವುದಾದರೊಂದು ಚಕ್ರವು ನಿಮ್ಮನ್ನು ತನ್ನ ಕಡೆಗೆ ಸೆಳೆದು ಬಿಡುತ್ತದೆಯೇ? ಒಂದುವೇಳೆ ಯಾವುದಾದರೂ ವ್ಯರ್ಥ ಸ್ಮೃತಿಯ ಚಕ್ರವನ್ನು ಇನ್ನೂ ಸುತ್ತು ಹಾಕುತ್ತಾ ಇದ್ದರೆ, ಸಂಗಮಯುಗಿ ಬ್ರಾಹ್ಮಣರ ಟೈಟಲ್ ಆದ 'ಸ್ವದರ್ಶನ ಚಕ್ರಧಾರಿ' ಎಂಬ ಟೈಟಲ್ ಪ್ರಾಪ್ತಿಯಾಗುವುದಿಲ್ಲ. ಯಾರು ಸ್ವದರ್ಶನ ಚಕ್ರಧಾರಿ ಅಲ್ಲವೋ

ಅವರು ಭವಿಷ್ಯದ ಚಕ್ರವರ್ತಿ ರಾಜರೂ ಸಹ ಅಗುವದಿಲ್ಲ. 63 ಜನ್ಮಗಳು ಭಕ್ತಿ ಮಾರ್ಗದ ಅನೇಕ ಪ್ರಕಾರದ ವ್ಯರ್ಥ ಚಕ್ರವನ್ನು ಸುತ್ತುವುದರಲ್ಲಿ ಸಮಯವನ್ನು ಹಾಳು ಮಾಡಿಕೊಂಡಿದ್ದೀರಿ. ಇಷ್ಟ ಇಲ್ಲದಿದ್ದರೂ ಕೂಡ ಅವೇ ಸಂಸ್ಕಾರಗಳನ್ನು ಸಂಗಮಯುಗದಲ್ಲಿ ಪುನಃ ಏಕೆ ಇಮರ್ಜ್ ಮಾಡಿಕೊಳ್ಳುತ್ತೀರಾ? ಚಕ್ರ ಸುತ್ತುವುದರಲ್ಲಿ ಪ್ರಾಪ್ತಿಯ ಅನುಭವ ವಾಗುತ್ತದೆಯೇ ಅಥವಾ ನಿರಾಶೆ ಆಗುತ್ತದೆಯೇ? 63 ಜನ್ಮಗಳ ಚಕ್ರವನ್ನು ಸುತ್ತುತ್ತಾ ಎಲ್ಲವನ್ನೂ ಕಳೆದುಕೊಂಡು ಸ್ವಯಂ ತಮ್ಮನ್ನು ತಾವು ಮತ್ತು ತಂದೆಯನ್ನು ಮರೆತು ಇಲ್ಲಿಯವರೆಗೂ ಸುಸ್ತಾಗಿಲ್ಲವೇ? ನೆಲೆ ಸಿಕ್ಕಿದರೂ ಸಹ ಇನ್ನೂ ಚಕ್ರ ಸುತ್ತುತೀರಾ? ಅವಿನಾಶಿ ಪ್ರಾಪ್ತಿ ದೊರೆತ್ತಿದ್ದರೂ ಕೂಡ ವಿನಾಶಿ ಅಲ್ಪಕಾಲದ ಪ್ರಾಪ್ತಿ ಇಲ್ಲಿಯವರೆಗೂ ನಿಮ್ಮನ್ನು ಆಕರ್ಷಿತರನ್ನಾಗಿ ಮಾಡುತ್ತಿದೆಯೇ? ಇಲ್ಲಿಯವರೆಗೂ ಪ್ರಾಪ್ತಿ ಮಾಡಿಸುವ ಬೇರೆ ಯಾವುದಾದರೂ ನೆಲೆ ದೃಷ್ಟಿಗೆ ಬೀಳುತ್ತಿದೆಯೇ? ಅಥವಾ ಶ್ರೇಷ್ಠ ನೆಲೆಯನ್ನು ತಿಳಿದಿದ್ದರೂ ಸಹ ಅಲ್ಪಕಾಲದ ನೆಲೆ, ಆಪತ್ತಿನ ಸಮಯದಲ್ಲಿ ಇರಲಿ ಅಂತಾ ಇಟ್ಟುಕೊಂಡಿದ್ದೀರಾ? ಇಂತಹ ಬಹಳ ಚತುರರೂ ಸಹ ಇದ್ದಾರೆ. ಪಡೆದುಕೊಳ್ಳುವ ಸಮಯದಲ್ಲಿ ಎಲ್ಲವನ್ನೂ ಪಡೆದುಕೊಳ್ಳುವ ಬುದ್ಧಿವಂತರಾಗಿದ್ದಾರೆ, ಆದರೆ ಬಿಡುವ ಸಮಯದಲ್ಲಿ ತಂದೆಯ ಜೊತೆ ಚತುರತೆಯನ್ನು ತೋರಿಸುತ್ತಾರೆ. ಯಾವ ಚತುರತೆಯನ್ನು ತೋರಿಸುತ್ತಾರೆ? ಬಿಡುವ ಸಮಯದಲ್ಲಿ ಮುಗ್ಧರಾಗಿ ಬಿಡುತ್ತಾರೆ. ಪುರುಷಾರ್ಥಿಗಳು ಆಗಿದ್ದೇವೆ, ಸಮಯಕ್ಕೆ ಅನುಗುಣವಾಗಿ ಬಿಟ್ಟು ಹೋಗುತ್ತವೆ, ಪರಿಸ್ಥಿತಿಗಳೇ ಈ ರೀತಿಯಾಗಿವೆ, ಲೆಕ್ಕಚಾರಗಳು ಬಹಳ ಕಠಿಣವಾಗಿವೆ, ಬಿಡಬೇಕು ಎಂದು ಬಯಸಿದರೂ ಬಿಡಲಾಗುತ್ತಿಲ್ಲ, ಏನು ಮಾಡಲಿ? ನಿಧಾನವಾಗಿ ಅಗಿಯೇ ಆಗುತ್ತದೆ – ಈ ರೀತಿ ಮುಗ್ಧರಾಗಿ ಮಾತುಗಳನ್ನು ಹೇಳುತ್ತೀರಿ. ಜ್ಞಾನಸಾಗರ ತಂದೆಗೂ ಜ್ಞಾನ ಹೇಳಲು ಪ್ರಾರಂಭಿಸುತ್ತೀರಿ. ಕರ್ಮದ ಗತಿಯನ್ನು ಅರಿತುಕೊಂಡವರಿಗೂ ತಮ್ಮ ಕರ್ಮದ ಕಥೆಯನ್ನು ತಿಳಿಸುತ್ತೀರಿ. ಆದರೆ ತೆಗೆದುಕೊಳ್ಳುವ ಸಮಯದಲ್ಲಿ 'ತಾವಂತೂ ದಯಾಹೃದಯಿಗಳಾಗಿದ್ದೀರಿ, ವರದಾತಾರಾಗಿದ್ದೀರಿ, ನಾನು ಸಹ ಅಧಿಕಾರಿ ಆಗಿದ್ದೇನೆ, ಮಗು ಆಗಿದ್ದೇನೆ, ಅದಕ್ಕಾಗಿ ಪೂರ್ಣ ಅಧಿಕಾರ ನನಗೆ ದೊರೆಯಲೇ ಬೇಕು' ಎಂಬುದಾಗಿ ಚತುರರಾಗಿ ಬಿಡುತ್ತೀರಿ. ಪಡೆದುಕೊಳ್ಳುವಾಗ ಪೂರ್ತಿಯಾಗಿ ಪಡೆದುಕೊಳ್ಳುವುದು ಮತ್ತು ಬಿಡುವಾಗ ಏನ್ನಾನದರೂ ಬಚ್ಚಿಟ್ಟುಕೊಳ್ಳುವುದು ಅಂದರೆ ಯಾವುದಾದರೂ ತಮ್ಮ ಹಳೆಯ ಸಂಸ್ಕಾರ, ಸ್ವಭಾವ ಅಥವಾ ಸಂಬಂಧ ಇವುಗಳನ್ನು ಜೊತೆ ಜೊತೆಗೆ ಇಟ್ಟುಕೊಂಡಿರುವುದು ಮಾಡುತ್ತೀರಿ. ಆದ್ದರಿಂದ ಚತುರರಾಗಿ ಬಿಟ್ಟಿರಲ್ಲವೇ? ಪಡೆಯುವುದು ಪೂರ್ಣ, ಆದರೆ ಬಿಡುವುದು ಮಾತ್ರ ಯಥಾಶಕ್ತಿ. ಈ ರೀತಿಯ ಚತುರತೆಯನ್ನು ಮಾಡುವವರು ಯಾವ ರೀತಿಯ ಪ್ರಾಲಬ್ಧವನ್ನು ಪಡೆಯುತ್ತಾರೆ? ಇಂತಹ ಚತುರ ಮಕ್ಕಳ ಜೊತೆ ಡ್ರಾಮಾ ಅನುಸಾರವಾಗಿ ಎಂತಹ ಚತುರತೆ ಆಗುತ್ತದೆ?

ಸ್ವರ್ಗದ ಅಧಿಕಾರಿಗಳಂತೂ ಎಲ್ಲರೂ ಆಗುತ್ತಾರೆ. ಆದರೆ ರಾಜಧಾನಿಯಲ್ಲಿ ನಂಬರವಾರ್ ಅಂತೂ ಅಗುತ್ತದೆಯಲ್ಲವೇ? ಸ್ವರ್ಗದ ಆಸ್ತಿಯನ್ನು ತಂದೆಯು ಎಲ್ಲರಿಗೂ ಕೊಡುತ್ತಾರೆ, ಆದರೆ ಸೀಟ್ ಮಾತ್ರ ಪ್ರತಿಯೊಬ್ಬರಿಗೂ ಅವರವರ ನಂಬರ್‌ನ ಅನುಗುಣವಾಗಿ ದೊರೆಯುತ್ತದೆ. ಡ್ರಾಮಾ ಅನುಸಾರವಾಗಿ ಪುರುಷಾರ್ಥ ಹೇಗಿದೆಯೋ ಅದೇ ರೀತಿಯಲ್ಲಿ ಪದವಿಯು ಪ್ರಾಪ್ತಿಯಾಗುತ್ತದೆ. ತಂದೆಯು ನಂಬರನ್ನು ಮಾಡುವುದಿಲ್ಲ. ಕೆಲವರಿಗೆ ರಾಜನ, ಕೆಲವರಿಗೆ ಪ್ರಜೆಯ ಜ್ಞಾನವನ್ನು ಬೇರೆ ಬೇರೆಯಾಗಿ ಕೊಡುವದಿಲ್ಲ. ಕೆಲವರಿಗೆ ಸೂರ್ಯವಂಶಿ, ಕೆಲವರಿಗೆ ಚಂದ್ರವಂಶಿಯ ಪಾಠವನ್ನು ಪ್ರತ್ಯೇಕವಾಗಿ ಓದಿಸುವದಿಲ್ಲ. ಕೆಲವರಿಗೆ ಮಹಾರಥಿಗಳ, ಕೆಲವರಿಗೆ ಕುದುರೆ ಸವಾರರ ಮುದ್ರೆ ಒತ್ತುವುದಿಲ್ಲ. ಆದರೆ ಡ್ರಾಮಾದ ಅನುಸಾರವಾಗಿ ಯಾರು ಹೇಗೆ ಹಾಗೂ ಎಷ್ಟು ಪುರುಷಾರ್ಥ ಮಾಡುತ್ತಾರೋ ಅದೇ ರೀತಿಯಲ್ಲಿ ಪದವಿಯನ್ನು ಪ್ರಾಪ್ತಿಮಾಡಿಕೊಳ್ಳುತ್ತಾರೆ. ಆದ್ದರಿಂದ ಪಡೆಯುವುದರಲ್ಲಿ ಹೇಗೆ ಚತುರರಾಗುತ್ತೀರೋ, ಹಾಗೆಯೇ ಕೊಡುವುದರಲ್ಲಿಯೂ ಚತುರರು ಆಗಿರಿ. ಮುಗ್ಧರು ಆಗಬೇಡಿ. ಮಾಯೆಯ ಚತುರತೆಯನ್ನು ಅರಿತುಕೊಂಡು ಮಾಯಾಜೀತರು ಆಗಿರಿ. ಒಂದು ಯಥಾರ್ಥವಾದ ನೆಲೆಯ ವಿನಹ ಇಷ್ಟವಿಲ್ಲದಿದ್ದರೂ ಬುದ್ಧಿ ಹೋಗುವಂತಹ ಬೇರೆ ಯಾವುದೋ ಅಲ್ಪಕಾಲದ ನೆಲೆ ಇನ್ನೂ ಉಳಿದು ಬಿಟ್ಟಿಲ್ಲತಾನೇ? ಎಂಬುದನ್ನು ಪರಿಶೀಲನೆ ಮಾಡಿಕೊಳ್ಳಿ. ಬುದ್ಧಿಯ ಅಲೆದಾಟ ಎಂದರೆ ನೆಲೆ ಇದೆ ಎಂದು ಅರ್ಥ. ಆದ್ದರಿಂದ ಎಲ್ಲಾ ಅಲ್ಪಕಾಲದ ನೆಲೆಗಳನ್ನು ಪರಿಶೀಲನೆ ಮಾಡಿಕೊಂಡು ಸಮಾಪ್ತಿ ಮಾಡಿರಿ. ಇಲ್ಲವಾದರೆ ಇದೇ ನೆಲೆಯು ಸದಾಕಾಲ ಶ್ರೇಷ್ಠ ನೆಲೆಯಿಂದ ದೂರ ಮಾಡಿಬಿಡುತ್ತದೆ. ಬಾಬಾರವರು ಈ ರೀತಿ ನಡೆಯಬೇಕೆಂದು ಸ್ಪಷ್ಟ ಶ್ರೀಮತವನ್ನು ಕೊಡುತ್ತಾರೆ. ಆದರೆ ಮಕ್ಕಳು 'ಈ ರೀತಿ' ಎನ್ನುವುದನ್ನು 'ಹೇಗೆ' ಎಂಬುದಾಗಿ (ಐಸೇ ಕೋ ಕೈಸೇ ಮೇ) ಬದಲಾಯಿಸುತ್ತಾರೆ. 'ಹೇಗೆ (ಕೈಸೆ)' ಎಂಬುದನ್ನು ಸಮಾಪ್ತಿ ಮಾಡಿ, ತಂದೆಯು ಯಾವ ರೀತಿಯಲ್ಲಿ ನಡೆಸುತ್ತಾರೋ ಆ ರೀತಿಯಲ್ಲಿ ನಡೆಯಿರಿ. **(01–02–1976)**

ಭಕ್ತರ ಲೆಕ್ಕದ ಪುಸ್ತಕದಲ್ಲಿ, ಭಕ್ತರಿಗೆ ಪ್ರಾಪ್ತಿಯಾಗುವಂತಹ ಅಲ್ಪಕಾಲದ ಫಲವನ್ನು ನೋಡಿದಾಗ ಅದರಲ್ಲಿ 75% ಭಕ್ತರು ಕೇವಲ ತಮ್ಮ ಹೆಸರು, ಗೌರವ ಮತ್ತು ಮರ್ಯಾದೆಗಳ ಪ್ರಾಪ್ತಿಗಾಗಿ ಸ್ವಾರ್ಥ ಸ್ವರೂಪದ ಭಕ್ತರಾಗಿದ್ದಾರೆ. ಈ ಕಾರಣದಿಂದಾಗಿ ಅವರ ಕರ್ಮದ ಫಲದ ಖಾತೆಯು ಸಮಾಪ್ತಿಯಾಗಿ ಬಿಟ್ಟಿದೆ. ತಂದೆಗೆ ಫಲ ಕೊಡುವ ಅವಶ್ಯಕತೆ ಇಲ್ಲ. ಉಳಿದ 25% ಭಕ್ತರು ತಮ್ಮ ನಂಬರ್‌ವಾರ್ ಲಗನ್‌ನ (ಏಕಾಗ್ರತೆಯ ನೆನಪಿನ) ಅನುಸಾರವಾಗಿ ಭಕ್ತಿಯನ್ನು ಮಾಡುತ್ತಿದ್ದಾರೆ. ಅವರಿಗೆ ಅವರ ಭಕ್ತಿಯ ಫಲ ಈ ಹಳೆಯ ಪ್ರಪಂಚದಲ್ಲೇ ಸಿಗಬೇಕಾಗಿದೆ. ಏಕೆಂದರೆ ಭಕ್ತಿಯ ಖಾತೆಯು ಈಗ ಅರ್ಧ ಕಲ್ಪಕ್ಕಾಗಿ ಸಮಾಪ್ತಿಯಾಗಬೇಕಾಗಿದೆ. ಭಕ್ತರಿಗೆ ತಮ್ಮ ಭಕ್ತಿಯ ಫಲ ಈಗೀಗ ಮಾಡಿದರು, ಈಗೀಗ ಸಿಕ್ಕಿದಂತಹ ವಿಧಿಯನ್ನು ನೋಡಿದಿರಿ. ಅಂದರೆ ಅಲ್ಪಕಾಲದ ಲಗನ್ನಿನ (ಅನನ್ಯವಾದ ನೆನಪಿನ) ಫಲ ಈಗಲೇ ಅಲ್ಪಕಾಲಕ್ಕಾಗಿ ಪ್ರಾಪ್ತಿಯಾಗುತ್ತದೆ, ಭವಿಷ್ಯಕ್ಕಾಗಿ ಜಮಾ ಅಗುವುದಿಲ್ಲ. ಭಕ್ತರ ಪ್ರಾಪ್ತಿಯ ಸ್ವರೂಪವು ಹೇಗಿದೆ ಎಂದರೆ ಹೇಗೆ ಮಳೆ ಬಂದಾಗ ಇರುವೆಗಳಿಗೆ ರೆಕ್ಕೆಗಳು ಬಂದು ಬಹಳ ಖುಷಿಯಿಂದ ಹಾರಲು ತೊಡಗುತ್ತವೆ. ಆದರೆ ಈ ಅಲ್ಪಕಾಲದ ಹಾರುವಿಕೆಯು ಆ ಸಮಯದಲ್ಲೇ ಸಮಾಪ್ತಿಯಾಗಿ ಬಿಡುತ್ತದೆ. ಅಲ್ಲಿಯೇ ಪ್ರಾಪ್ತಿ, ಅಲ್ಲಿಯೇ ಸಮಾಪ್ತಿ. ಹಾಗೆಯೇ ಈಗಿನ ಭಕ್ತರು ಅಂದರೆ ಕಲಿಯುಗೀ ತಮೋಪ್ರಧಾನ ಭಕ್ತರು ಅಲ್ಪಕಾಲದ ಫಲದ ಪ್ರಾಪ್ತಿಯಲ್ಲಿ ಖುಷಿಯಾಗಿ ಬಿಡುವವರಾಗಿದ್ದಾರೆ. ಅದ್ದರಿಂದ ಅವರ ಫಲದ ಪ್ರಾಪ್ತಿಯ ಕಾರ್ಯ ಡ್ರಾಮಾದ ಅನುಸಾರ ಸಮಾಪ್ತಿಯಾಗಿಯೇ ಬಿಟ್ಟಿದೆ. ಕೇವಲ 5% ಪ್ರಾಪ್ತಿಯ ಕಾರ್ಯ ಮಾತ್ರ ಈಗ ಉಳಿದಿದೆ. ಈ ಕಾರಣದಿಂದಾಗಿ ಅವರು 'ವರದಾನಗಳನ್ನು ಕೊಡಿ, ಶಕ್ತಿಯನ್ನು ಕೊಡಿ, ಸಾಹಸ ಮತ್ತು ಧೈರ್ಯವನ್ನು ಕೊಡಿ' ಎಂದು ಜೋರಾಗಿ ಕೂಗುತ್ತಾರೆ. ಈಗ ಇದು ಅತಿಯಲ್ಲಿ ಹೋಗಿ ನಂತರ ಸಮಾಪ್ತಿಯಾಗುವುದಿದೆ. ಆದ್ದರಿಂದ ಭಕ್ತರ ಲೆಕ್ಕಾಚಾರದ ಪುಸ್ತಕವಂತೂ ಸಮಾಪ್ತಿಯಾಗಿಯೇ ಬಿಟ್ಟಿದೆ. ಸ್ವಲ್ಪ ಸ್ವಲ್ಪ ಯಾವುದು ಉಳಿದಿದೆಯೋ ಅದು ಈಗೀಗ ಕರ್ಮ, ಈಗೀಗ ಫಲದ ರೂಪದಲ್ಲಿ ಸಮಾಪ್ತಿಯಾಗಿ ಬಿಡುತ್ತದೆ. ಇದಾಗಿದೆ ಭಕ್ತರ ಸಮಾಚಾರ. **(02–02–1976)**

ಮಹಾರಥಿಗಳ ಮಹಾನ್ ಸ್ಥಿತಿಯ ಯಾವ ವಿಶೇಷ ಗುರುತಿನಿಂದ ಇದು ಮಹಾರಥಿತನದ ಪುರುಷಾರ್ಥವಾಗಿದೆ ಎಂದು ಸ್ಪಷ್ಟವಾಗುತ್ತದೆ. ಅದು ಏನಾಗಿದೆ? ಒಂದಾಗಿದೆ ಮಹಾನ್ ಪುರುಷಾರ್ಥಿ ಅಂದರೆ ಮಹಾರಥಿಗಳು ಯಾವುದೇ ದೃಶ್ಯವನ್ನು ನೋಡಿದಾಗ ಇದು ಡ್ರಾಮಾ ಪ್ಲಾನ್ ಅನುಸಾರ ಅನೇಕ ಸಲ ಆಗಿರುವುದು ಈಗ ಪುನಃ ಪುನಾರ್ತನೆ (ರಿಪೀಟ್) ಆಗುತ್ತಿದೆ, ಅದು 'ನಥಿಂಗ್ ನ್ಯೂ' ಎಂದು ಅನಿಸುತ್ತದೆ. ಏಕೆ ಮತ್ತು ಏನು ಎನ್ನುವ ಪ್ರಶ್ನೆಗಳು ಉತ್ಪನ್ನವಾಗುವಂತೆ ಯಾವುದೇ ಹೊಸ ಮಾತು ಎಂದು ಅನುಭವ ಆಗುವುದಿಲ್ಲ. ಎರಡನೆಯದಾಗಿ ಅವರ ಸ್ಮೃತಿಯಲ್ಲಿ 'ನಾವು ಅನೇಕ ಸಲ ಪ್ರತ್ಯಕ್ಷದಲ್ಲಿ ನೋಡಿರುವ ದೃಶ್ಯವಾಗಿದೆ, ಈಗ ಕೇವಲ ನಿಮಿತ್ತ ಮಾತ್ರವಾಗಿ ರಿಪೀಟ್ ಅಗುತ್ತಾ ಇದೆ' ಎನ್ನುವ ಅನುಭವವಾಗುತ್ತದೆ. ಯಾವುದೇ ಹೊಸ ಮಾತು ನಡೆಯುತ್ತಿಲ್ಲ, ಆದರೆ ರಿಪೀಟ್ ಆಗುತ್ತಿದೆ, ಸ್ಮೃತಿಯನ್ನು ತರಿಸಿಕೊಳ್ಳ ಬೇಕಾಗಿಲ್ಲ. ಕಲ್ಪದ ಹಿಂದೆ ಯಾವುದು ನಡೆದಿತ್ತೋ ಆದೇ ಈಗ ನಡೆಯುತ್ತಿದೆ. ಹೇಗೆ ಒಂದು ಸೆಕೆಂಡಿನ ಹಿಂದೆ ನಡೆದ ಮಾತುಗಳು ಬಹಳ ಸ್ಪಷ್ಟವಾಗಿ ಸ್ಮೃತಿದಲ್ಲಿರುತ್ತದೋ, ಅದೇ ರೀತಿಯಲ್ಲಿ ಕಲ್ಪದ ಹಿಂದೆ ಕಳೆದಿದ್ದ ದೃಶ್ಯ ಒಂದು ಸೆಕೆಂಡಿನ ಹಿಂದೆ ನಡೆದಿರುವ ದೃಶ್ಯದಂತೆ ಸ್ಪಷ್ಟವಾಗಿ ಕಾಣುತ್ತದೆ. ಏಕೆಂದರೆ ಒಂದು ಸಾಕ್ಷಿತನ ಮತ್ತು ಎರಡನೆಯದು ತ್ರಿಕಾಲದರ್ಶಿತನ. ಈ ಎರಡೂ ಸ್ಥಿತಿಗಳು ಮಹಾರಥಿಗಳಲ್ಲಿ ಇರುವ ಕಾರಣದಿಂದ ಕಲ್ಪದ ಮೊದಲಿನ ಸ್ಮೃತಿ ಪೂರ್ಣ ಫ್ರೆಶ್ ಮತ್ತು ಹೊಸತನದ್ದಾಗಿರುತ್ತದೆ. ಆದ್ದರಿಂದ ನಥಿಂಗ್ ನ್ಯೂ ವಿನಹ ಮತ್ತೇನಾಗಿರುತ್ತದೆ.?

ಯಾವುದು ಏಷ್ಟೇ ವಿಕರಾಳ ರೂಪದ ಪರಿಸ್ಥಿತಿ ಇರಬಹುದು ಅಥವಾ ದೊಡ್ಡ ರೂಪದ ಸಮಸ್ಯೆಗಳಿರಬಹುದು, ಆದರೆ ತಮ್ಮ ಸ್ಥಿತಿ ಶ್ರೇಷ್ಠವಾಗಿರುವ ಕಾರಣ ಅವು ಬಹಳ ಚಿಕ್ಕದಾಗಿ ಕಾಣುತ್ತವೆ. ದೊಡ್ಡ ರೂಪದ ಅನುಭವ ಅಥವಾ ವಿಕರಾಳ ರೂಪದ ಅನುಭವವಾಗುವುದಿಲ್ಲ. ಹೇಗೆ ಎತ್ತರವಾದ ಬೆಟ್ಟದ ಮೇಲೆ ನಿಂತುಕೊಂಡು ಕೆಳಗಿರುವ ಯಾವುದೇ ವಸ್ತುಗಳನ್ನು ನೋಡಿದಾಗ ದೊಡ್ಡ ವಸ್ತುವೂ ಸಹ ಚಿಕ್ಕದಾಗಿ ಕಾಣುತ್ತದೆಯಲ್ಲವೆ. ದೊಡ್ಡ ದೊಡ್ಡ ಕಾರ್ಖಾನೆಯು ಸಹ ಒಂದು ಚಿಕ್ಕ ಮಾಡೆಲ್ ರೂಪದಲ್ಲಿ ಕಂಡುಬರುತ್ತದೆ. ಇದೇ ರೀತಿಯಲ್ಲಿ ಮಹಾರಥಿಗಳ ಮಹಾನ್ ಪುರುಷಾರ್ಥದ ಮುಂದೆ ಯಾವುದೇ ದೊಡ್ಡ ಮಾತು ಸಹ ದೊಡ್ಡದಾಗಿ ಅನುಭವವಾಗುವುದಿಲ್ಲ. ಆದ್ದರಿಂದ ಮಹಾವೀರರು ಅಂದರೆ ಮಹಾರಥಿಗಳ ಮಹಾನ್ ಪುರುಷಾರ್ಥವೆಂದರೆ ಈ ಎರಡು ಗುರುತುಗಳಿವೆ, ಇದನ್ನು ಇನ್ನೊಂದು ಶಬ್ದದಲ್ಲಿ ಹೇಳುವುದಾದರೆ 'ಶೂಲದಿಂದ ಮುಳ್ಳಿನ ಸಮಾನ' (ಸೂಲಿ ಸೇ ಕಾಂಟ) ಎಂದು ಅನುಭವ ವಾಗುತ್ತದೆ. ಇಂತಹ ಮಹಾವೀರರ ಬಾಯಿಂದ ಯಾವುದು ಆಗುವಂತಹ ರಿಜಲ್ಟ್

ಇರುತ್ತದೋ ಅಂದರೆ ಯಾವುದು ಆಗಿಯೇ ಆಗುತ್ತದೋ ಅಂದರೆ ಹಿಂದೆ ಡ್ರಾಮಾದಲ್ಲಿ ನಡೆದಿತ್ತೋ ಅದೇ ಶಬ್ದಗಳು ಹೊರಬರುತ್ತವೆ. ಇವರಿಗೇ ಸಿದ್ಧಿ ಸ್ವರೂಪರು ಎಂದು ಹೇಳಲಾಗುತ್ತದೆ. ಯಾವ ಮಾತು ಹೊರಡುತ್ತದೆಯೋ, ಯಾವ ಕರ್ಮವಾಗುತ್ತದೆಯೋ, ಅದು ಸಿದ್ಧವಾಗುವಂತಹದ್ದಾಗಿರುತ್ತದೆ, ವ್ಯರ್ಥವಾಗುವುದಿಲ್ಲ. ವಿಕರ್ಮಗಳ ಖಾತೆಯು ಸಮಾಪ್ತಿ ಆಗುವುದರ ಜೊತೆಗೆ ವ್ಯರ್ಥದ ಖಾತೆಯೂ ಸಹ ಸಮಾಪ್ತಿಯಾಗುತ್ತದೆ. ಇದು ಮಹಾರಥಿಗಳ ಗುರುತಾಗಿದೆ. ಮಾಸ್ಟರ್ ಸರ್ವಶಕ್ತಿವಂತರಾಗಿದ್ದಾರಲ್ಲವೇ? ಆದ್ದರಿಂದ ಮಾಸ್ಟರ್ ಸರ್ವಶಕ್ತಿವಂತ ಸ್ಥಿತಿಯ ಪ್ರತ್ಯಕ್ಷ ಸ್ವರೂಪ ವಿಕರ್ಮಗಳ ಖಾತೆಯ ಜೊತೆ ಜೊತೆಗೆ ವ್ಯರ್ಥದ ಖಾತೆಯು ಸಮಾಪ್ತಿಯಾಗುವುದಾಗಿದೆ. ಇದೇ ಮಹಾರಥಿಗಳ ಪುರುಷಾರ್ಥದ ಗುರುತಾಗಿದೆ. **(07–02–1976)**

ಎಲ್ಲರೂ ಸದಾ ಖುಷಿಯಿಂದ ಇದ್ದೀರಾ? ಯಾರು ಮೂರೂ ಕಾಲದ ರಹಸ್ಯ (ರಾಝ್) ವನ್ನು ತಿಳಿದಿದ್ದೀರೋ ಅವರು ರಾಜಿಯಾಗಿದ್ದೀರಲ್ಲವೇ? ಯಾವಾಗಲಾದರೂ ಬೇಸರಗೊಳ್ಳುತ್ತೀರಿ ಎಂದರೆ ಡ್ರಾಮಾದ ರಹಸ್ಯವನ್ನು ಮರೆತಂತೆ. ಯಾರು ಡ್ರಾಮಾದ ರಹಸ್ಯವನ್ನು ಹಾಗೂ ಮೂರೂ ಕಾಲಗಳನ್ನು ತಿಳಿದಿರುತ್ತಾರೋ ಅವರು ರಾಜಿಯಾಗಿರುತ್ತಾರೆ. ರಹಸ್ಯವನ್ನು ತಿಳಿದುಕೊಂಡಿರದ ಕಾರಣದಿಂದಲೇ ಬೇಸರಗೊಳ್ಳುತ್ತಾರೆ. ಮೂರೂ ಕಾಲಗಳನ್ನು ತಿಳಿದುಕೊಂಡಿರು ವವರನ್ನೇ ತ್ರಿಕಾಲದರ್ಶಿಗಳು ಎನ್ನುತ್ತಾರೆ. ಅವರು ಸದಾ ರಾಜಿ ಮತ್ತು ಖುಷಿಯಿಂದ ಇರುತ್ತಾರೆ. ಮಧುಬನ ನಿವಾಸಿಗಳು ಎಂದರೆ ಸದಾ ಖುಷಿ ಮತ್ತು ರಾಜಿಯಾಗಿ ಇರುವಂತಹವರು. ಅನ್ಯರ ಜೊತೆಯಲ್ಲಿ ಬೇಸರಗೊಳ್ಳುವುದು ಎಂದರೆ ತಾವು ರಹಸ್ಯ ತಿಳಿದಿರುವ ಸ್ಥಿತಿಗಿಂತ ಕೆಳಗೆ ಬಂದಿರುವವರು ಎಂದು ಅರ್ಥ. ಸಿಂಹಾಸನವನ್ನು ಬಿಟ್ಟು ಕೆಳಗೆ ಇಳಿಯುವ ಕಾರಣದಿಂದ ಬೇಸರಗೊಳ್ಳುತ್ತೀರಿ. ತ್ರಿಕಾಲದರ್ಶಿಗಳು ಎಂದರೆ ನಾಲೆಡ್ಜ್‌ಫುಲ್ (ಜ್ಞಾನಪೂರ್ಣರು) ಆಗಿರುವವರು. ಜ್ಞಾನಪೂರ್ಣರ ಸ್ಥಿತಿಯು ಒಂದು ಶ್ರೇಷ್ಠವಾದ ಸಿಂಹಾಸನವಾಗಿದೆ. ಯಾವಾಗ ಈ ಸಿಂಹಾಸನವನ್ನು ಬಿಟ್ಟು ಕೆಳಗೆ ಬರುತ್ತೀರೋ ಆಗ ಬೇಸರಗೊಳ್ಳುತ್ತೀರಿ. ಎಂತಹ ಸ್ಥಾನವೋ ಅಂತಹ ಸ್ಥಿತಿ ಇರಬೇಕಾಗಿದೆ. **(29–01–1977)**

'ಸ್ಮೃತಿಯಲ್ಲಿ ಇದ್ದಾಗ ಸಮರ್ಥತೆ ಬರುತ್ತದೆ'. ಒಂದುವೇಳೆ ಸಮರ್ಥತೆ ಇದ್ದಾಗ ಯಾವುದೇ ಪರಿಸ್ಥಿತಿಗಳು ಸ್ವ–ಸ್ಥಿತಿಯನ್ನು ಏರುಪೇರು ಮಾಡುವುದಿಲ್ಲ. ಪರೀಕ್ಷೆಗಳನ್ನು ಒಂದು ಆಟ ಎಂದು ತಿಳಿದುಕೊಂಡು ನಡೆಯುತ್ತಾರೆ. ಒಂದುವೇಳೆ ಆಟದಲ್ಲಿ ಮತ್ತು ನಾಟಕದಲ್ಲಿ ಯಾವುದೇ ಪ್ರಕಾರದ ಪರಿಸ್ಥಿತಿಯನ್ನು ನೋಡುತ್ತಿದ್ದರೂ ಸಹ ಏರುಪೇರಾಗುತ್ತಾರೇನು? ಯಾರಾದರೂ ಸಾಯಲಿ ಅಥವಾ ಇನ್ನೇನೇ ಆಗಲಿ ಆದರೆ ಸ್ಥಿತಿ ಏರುಪೇರು ಆಗುವುದಿಲ್ಲ. ಏಕೆಂದರೆ ಇದು ಆಟವೆಂದು ತಿಳಿದುಕೊಳ್ಳುತ್ತಾರೆ. ಅದೇ ರೀತಿಯಲ್ಲಿ ಪರಿಸ್ಥಿತಿಗಳನ್ನು ಸಹ ಒಂದು ಪಾತ್ರ ಎಂದು ತಿಳಿದುಕೊಳ್ಳಿ. ಪರಿಸ್ಥಿತಿಯ ಪಾತ್ರವನ್ನು ಸಾಕ್ಷಿಯಾಗಿ ನೋಡುವುದರಿಂದ ಏರುಪೇರು ಆಗುವುದಿಲ್ಲ, ಮುಖವು ಬಾಡುವುದಿಲ್ಲ, ಆದರೆ ಮಜಾ ಬರುತ್ತದೆ. ಡ್ರಾಮಾದ ಪಾಯಿಂಟ್‌ನ್ನು ಮರೆತುಬಿಟ್ಟಾಗ ಮುಖವು ಬಾಡಿಹೋಗುತ್ತದೆ. **(28–04–1977)**

ಬಾಪ್‌ದಾದಾರವರು ಬೇಹದ್ದಿನ ಅನಾದಿ ಅವಿನಾಶಿ ಡ್ರಾಮಾದ ದೃಶ್ಯದಲ್ಲಿ ವಿಶೇಷವಾಗಿ ಯಾವ ದೃಶ್ಯವನ್ನು ನೋಡಿ ಹರ್ಷಿತರಾಗುತ್ತಾರೆ? ತಿಳಿದಿದೆಯೇ? ವರ್ತಮಾನ ಸಮಯದಲ್ಲಿ ಬಾಪ್‌ದಾದಾರವರು ಬ್ರಾಹ್ಮಣರ ಲೀಲೆ, ವಿಚಿತ್ರ ಮತ್ತು ನಗುಬರುವಂತಹುದನ್ನು ನೋಡುತ್ತಿದ್ದಾರೆ. ಹೇಗೆ "ಹೇ ಪ್ರಭು ನಿಮ್ಮ ಲೀಲೆ ಅಪರಂಅಪಾರವಾಗಿದೆ" ಎಂದು ಮಕ್ಕಳು ಹೇಳುತ್ತಾರೋ ಹಾಗೆ ತಂದೆಯೂ ಸಹ "ಮಕ್ಕಳ ಲೀಲೆ ಬಹಳ ಆಶ್ಚರ್ಯಕರವಾಗಿದೆ, ವೆರೈಟಿ ಲೀಲೆಯಾಗಿದೆ' ಎಂದು ಹೇಳುತ್ತಾರೆ. ಎಲ್ಲದಕ್ಕಿಂತ ಆಶ್ಚರ್ಯಕರವಾದ ಲೀಲೆ ಯಾವುದು ಕಂಡುಬರುತ್ತದೆಯೋ ಅದನ್ನು ತಿಳಿದಿದ್ದೀರಾ? ಈಗೀಗ 'ಬಹಳ ಇದೆ' ಎಂದು ಹೇಳುತ್ತೀರಿ, ಆದರೆ ಮಾಡುವುದೇನು? ಅದನ್ನು ಸ್ವಯಂ ತಿಳಿದುಕೊಂಡಿದ್ದಾರೆ, ಏನು ಮಾಡುತ್ತಿದ್ದಾರೆಂದು ಸಹ ತಿಳಿಯುತ್ತಾರೆ. ಹೇಗೆ ಯಾವುದೇ ಆತ್ಮದ ಅಥವಾ ಯಾವುದೇ ವಿಕಾರಕ್ಕೆ ವಶೀಭೂತರಾದಂತಹ ಆತ್ಮ, ಪರವಶ ಆತ್ಮ, ಮೂರ್ಛಿತ ಆತ್ಮ ಏನು ಹೇಳುತ್ತದೆ, ಏನು ಮಾಡುತ್ತದೆ ಎನ್ನುವುದನ್ನು ಸ್ವಲ್ಪವೂ ತಿಳಿಯಲಾಗುವುದಿಲ್ಲ. ಇಂತಹ ಲೀಲೆಗಳನ್ನು ಬ್ರಾಹ್ಮಣರೂ ಮಾಡುತ್ತಾರೆ. ಆಗ ಬಾಪ್‌ದಾದಾರವರು ಇಂತಹ ಲೀಲೆಗಳನ್ನು ನೋಡಿ ದಯಾಹೃದಯಿಗಳೂ ಆಗುತ್ತಾರೆ ಮತ್ತು ಜೊತೆ ಜೊತೆಯಲ್ಲಿ ನ್ಯಾಯಾಧಿಕಾರಿ ಸುಪ್ರಿಂ ಜಸ್ಟೀಸ್ ಸಹ ಆಗುತ್ತಾರೆ. ಅಂದರೆ ಪ್ರೀತಿ ಹಾಗೂ ಕಾನೂನು (ಲವ್ ಅಂಡ್ ಲಾ) ಎರಡರ ಬ್ಯಾಲೆನ್ಸ್ ಮಾಡುತ್ತಾರೆ. ಒಂದು ಕಡೆ ದಯಾ ಸ್ವರೂಪರಾಗಿ ತಂದೆಯ ಸಂಬಂಧದಿಂದ ರಿಯಾಯಿತಿಯನ್ನು ತೋರಿಸುತ್ತಾರೆ ಅಂದರೆ ಒಂದು, ಎರಡು, ಮೂರು ಸಲ ಕ್ಷಮೆಯನ್ನು ಸಹ ಮಾಡುತ್ತಾರೆ. ಇನ್ನೊಂದು ಕಡೆ ಸುಪ್ರೀಮ್

ಜಸ್ಟೀಸ್‌ನ ರೂಪದಲ್ಲಿ ಕಲ್ಯಾಣಕಾರಿ ಆಗಿರುವ ಕಾರಣ ಮಕ್ಕಳ ಕಲ್ಯಾಣಾರ್ಥವಾಗಿ ಈಶ್ವರೀಯ ಕಾನೂನನ್ನು ತಿಳಿಸುತ್ತಾರೆ. ಸಂಗಮಯುಗದಲ್ಲಿ ಎಲ್ಲದಕ್ಕಿಂತ ದೊಡ್ಡದಾದ ಅನಾದಿ ಕಾನೂನು ಯಾವುದಾಗಿದೆ? ಡ್ರಾಮಾ ಪ್ಲಾನ್ ಅನುಸಾರವಾಗಿ ಒಂದಕ್ಕೆ ಲಕ್ಷ ಪಟ್ಟು ಪ್ರಾಪ್ತಿ ಮಾಡಿಕೊಳ್ಳುವ, ಪಶ್ಚಾತ್ತಾಪ ಪಡುವ ಅಥವಾ ಅನುಭವಿಸುವ ಕಾನೂನು ಅಂದರೆ ನಿಯಮ ಆಟೋಮೆಟಿಕ್ ಆಗಿ ನಡೆಯುತ್ತಲೇ ಇರುತ್ತದೆ. ತಂದೆಗೆ 'ಈ ಕರ್ಮಕ್ಕೆ ಇದನ್ನು ಪಡೆಯಿರಿ, ಈ ಕರ್ಮಕ್ಕೆ ಈ ಶಿಕ್ಷೆ ಅನುಭವಿಸಿರಿ' ಎಂದು ಸ್ಥೂಲ ರೀತಿ ಪದ್ಧತಿಯಂತೆ ಹೇಳಬೇಕಾಗುವುದಿಲ್ಲ ಅಥವಾ ಮಾಡಬೇಕಾಗುವುದಿಲ್ಲ. ಆದರೆ ಇದು ಆಟೋಮೆಟಿಕ್ ಈಶ್ವರೀಯ ಮೆಷಿನರಿ ಆಗಿದೆ (ಸ್ವಯಂ ಚಾಲಿತ ಈಶ್ವರೀಯ ಯಂತ್ರವಾಗಿದೆ). ಈ ಮೆಷಿನರಿಯನ್ನು ಯಾವ ಮಕ್ಕಳೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದಲೇ 'ಕರ್ಮದ ಗತಿ ಅತಿ ಗುಹ್ಯವಾಗಿದೆ' ಎನ್ನುವ ಗಾಯನವಿದೆ.

ಯಾವ ಆಧಾರ ವಿನಾಶಿ ಮತ್ತು ಪರಿವರ್ತನಾಶೀಲವಾಗಿದೆಯೋ, ಅದನ್ನು ಆಧಾರವನ್ನಾಗಿ ಮಾಡಿಕೊಳ್ಳುವ ಕಾರಣ, ಸ್ವಯಂ ಸಹ ಸರ್ವ ಪ್ರಾಪ್ತಿಗಳ ಅನುಭವವನ್ನು ವಿನಾಶಿ ಸಮಯದವರೆಗೆ ಮಾತ್ರ ಅನುಭವ ಮಾಡುತ್ತೀರಿ ಮತ್ತು ಸ್ಥಿತಿಯೂ ಸಹ ಏಕರಸವಾಗಿ ಇರುವುದಿಲ್ಲ. ಆದರೆ ಪದೇ ಪದೇ ಪರಿವರ್ತನೆ ಆಗುತ್ತಿರುತ್ತದೆ. ಈಗೀಗ ಬಹಳ ಖುಷಿ ಮತ್ತು ಆನಂದದಲ್ಲಿ ಇರುತ್ತೀರಿ, ಈಗೀಗ ಬಾಡಿ ಹೋಗಿರುವ ಮೂರ್ತಿ, ಉದಾಸ ಮತ್ತು ನೀರಸಮೂರ್ತಿಯಾಗಿರುತ್ತೀರಿ. ಇದಕ್ಕೆ ಕಾರಣ? ಮಾಡಿಕೊಂಡಿರುವ ಆಧಾರವೇ ಆ ರೀತಿಯಾಗಿದೆ. ಕೆಲವು ಆತ್ಮಗಳು ಬಹಳ ಒಳ್ಳೆಯ ಉಲ್ಲಾಸ ಉತ್ಸಾಹ, ಧೈರ್ಯ ಮತ್ತು ತಂದೆಯ ಸಹಯೋಗದಿಂದ ಬಹಳ ಮುಂದೆ ಹೋಗುತ್ತಾ ಗುರಿಯ ಸಮೀಪದವರೆಗೆ ತಲುಪಿ ಬಿಡುತ್ತಾರೆ. ಆದರೆ 63 ಜನ್ಮಗಳ ಲೆಕ್ಕಚಾರಗಳು ಇಲ್ಲೇ ಚುಕ್ತಾ ಆಗಬೇಕಾಗಿದೆ. ತಮ್ಮ ಹಳೆಯ ಸಂಸ್ಕಾರ, ಸ್ವಭಾವಗಳು ಹೊರಗಡೆ ಪ್ರಕಟವಾಗಿ ಸದಾ ಕಾಲಕ್ಕಾಗಿ ಸಮಾಪ್ತಿಯಾಗುತ್ತಿದೆ. ಈ ಕರ್ಮದ ಗುಹ್ಯಗತಿಯನ್ನು ತಿಳಿದುಕೊಳ್ಳದೆ ಭಯ ಪಡುತ್ತಾರೆ. ಕೊನೆಯವರೆಗೂ ಇದೇ ನಡೆಯುತ್ತದೆಯೇನು? ಇಲ್ಲಿಯವರೆಗೂ ಈ ಘರ್ಷಣೆ ಏಕೆ ಆಗುತ್ತದೆ. ಈ ವ್ಯರ್ಥ ಸಂಕಲ್ಪಗಳ ಗೊಂದಲದ ಕಾರಣ ಪ್ರೀತಿ ಮಾಡುವುದಕ್ಕೆ ಆಗುವುದಿಲ್ಲ. ಯೋಚಿಸುವುದರಲ್ಲೇ ಸಮಯವನ್ನು ವ್ಯರ್ಥ ಮಾಡುತ್ತಾರೆ. ಕೋಟಿಯಲ್ಲಿ ಕೆಲವರು ಮಾತ್ರ ಡ್ರಾಮಾದ ಬಿರುಗಾಳಿಯನ್ನು ಬಹುಮಾನ ಎಂದು ತಿಳಿದು, ಸ್ವಭಾವ ಸಂಸ್ಕಾರಗಳ ಘರ್ಷಣೆಯು ಮುಂದುವರಿಯುವುದಕ್ಕೆ ಆಧಾರ ಎಂದು ತಿಳಿದು, ಮಾಯೆಯನ್ನು ಗುರುತಿಸುತ್ತಾ ಪಾರಾಗುತ್ತಾರೆ. ಸದಾ ತಂದೆಯನ್ನು ಜೊತೆಗಾರರನ್ನಾಗಿ ಮಾಡಿಕೊಳ್ಳುತ್ತಾ ಸಾಕ್ಷಿಯಾಗಿ ಪ್ರತಿ ಪಾತ್ರವನ್ನು ನೋಡುತ್ತಾ ಸದಾ ಹರ್ಷಿತರಾಗಿ ನಡೆಯುತ್ತಿರುತ್ತಾರೆ. ಇನ್ನೇನು ಗುರಿಯನ್ನು ತಲುಪಿಬಿಡುತ್ತೇವೆ ಎನ್ನುವ ನಿಶ್ಚಯದಲ್ಲೇ ಸದಾ ಇರುತ್ತಾರೆ. ಬಾಬಾರವರು ಮಕ್ಕಳ ಇಷ್ಟೊಂದು ಪ್ರಕಾರದ ಲೀಲೆಯನ್ನು ನೋಡುತ್ತಾರೆ. **(03–05–1977)**

ನಿಶ್ಚಯ ಬುದ್ಧಿಯ ಗುರುತಾಗಿದೆ ಸದಾ ನಿಶ್ಚಿಂತತೆ. ಯಾರು ನಿಶ್ಚಿಂತರಾಗಿರುತ್ತಾರೋ ಅವರೇ ಏಕರಸವಾಗಿರುತ್ತಾರೆ. ಏನೇ ಆದರೂ ಯೋಚನೆ ಮಾಡಬೇಡಿ. ಏಕೆ, ಏನು ಎನ್ನುವುದರಲ್ಲಿ ಎಂದಿಗೂ ಹೋಗಬೇಡಿ. ತ್ರಿಕಾಲದರ್ಶಿಗಳಾಗಿ ನಿಶ್ಚಿಂತರಾಗಿ ಇರಿ. ಪ್ರತಿ ಹೆಜ್ಜೆಯಲ್ಲೂ ಕಲ್ಯಾಣವಿದೆ. ಯಾವ ಮಾತಿನಲ್ಲಿ ಅಕಲ್ಯಾಣವು ಕಂಡು ಬಂದರೂ, ಅದರಲ್ಲೂ ಕಲ್ಯಾಣವು ಅಡಗಿದೆ. ಕೇವಲ ಅಂತರ್ಮುಖಿಗಳಾಗಿ ನೋಡಿ. ಬ್ರಾಹ್ಮಣರಿಗೆ ಎಂದಿಗೂ ಅಕಲ್ಯಾಣವು ಅಗಲು ಸಾಧ್ಯವಿಲ್ಲ. ಏಕೆಂದರೆ ಕಲ್ಯಾಣಕಾರಿ ತಂದೆಯ ಕೈಯನ್ನು ಹಿಡಿದಿದ್ದೀರಲ್ಲವೇ? **(05–05–1977)**

ಎಲ್ಲಾ ಪ್ರಕಾರದ ಟೆನ್ಷನ್‌ನಿಂದ (ಒತ್ತಡಗಳಿಂದ) ದೂರವಾಗಿ, ಸ್ವಯಂ ಮತ್ತು ಸಮಯದ, ತಂದೆಯ ಜೊತೆಯನ್ನು ಗಮನದಲ್ಲಿಡುತ್ತ ಒಂದೊಂದು ಸೆಕೆಂಡ್ ಸೆಕೆಂಡ್ (ಕ್ಷಣ ಕ್ಷಣದ) ಪಾತ್ರವನ್ನು ಮಾಡಬೇಕು. ಮಾಸ್ಟರ್ ಸರ್ವಶಕ್ತಿವಾನ್, ಆಲ್‌ಮೈಟಿ ಅಥಾರಿಟಿಯ ಸಂತಾನ, ಇಂತಹ ನಾಲೆಡ್ಜ್‌ಫುಲ್ (ಜ್ಞಾನಪೂರ್ಣ) ಆತ್ಮಗಳಲ್ಲಿ ಒತ್ತಡ ಬರುವುದಕ್ಕೆ ಕಾರಣ ಎರಡು ಶಬ್ದಗಳಾಗಿವೆ. ಯಾವ ಎರಡು ಶಬ್ದ? 'ಏಕೆ' ಮತ್ತು 'ಏನು'. ಯಾವುದೇ ಮಾತಿನಲ್ಲಿ ಇದು ಏಕೆ ಅಯಿತು, ಇದು ಏನು ಆಯಿತು? ಯಾವಾಗ ಈ ಎರಡು ಶಬ್ದಗಳು ಬುದ್ಧಿಯಲ್ಲಿ ಬಂದು ಬಿಡುತ್ತದೆಯೋ ಆಗ ಯಾವುದೋ ಪ್ರಕಾರದ ಒತ್ತಡವು ಜನ್ಮ ತಾಳುತ್ತದೆ. ಆದರೆ ಸಂಗಮಯುಗಿ ಶ್ರೇಷ್ಠ ಪಾತ್ರಧಾರಿ ಆತ್ಮಗಳಿಗೆ ಎಲ್ಲವೂ ತಿಳಿದಿರುವ ಕಾರಣ ಏಕೆ, ಏನು ಎನ್ನುವ ಟೆನ್ಷನ್ ಇಟ್ಟುಕೊಳ್ಳುವುದಿಲ್ಲ. ಸಾಕ್ಷಿ ಮತ್ತು ಸಾಥಿತನದ (ಜೊತೆಗಾರತನದ) ವಿಶೇಷತೆಯಿಂದ, ಡ್ರಾಮಾದ ಪ್ರತಿ ಪಾತ್ರವನ್ನು ಅಭಿನಯಿಸುತ್ತಾ ಎಂದಿಗೂ ಟೆನ್ಷನ್‌ನಲ್ಲಿ ಬರುವುದಿಲ್ಲ. ಹಾಗಾಗಿ ತಮ್ಮ ಈ ವಿಶೇಷವಾದ ಕಲ್ಯಾಣಕಾರಿ ಸಮಯವನ್ನು ತಿಳಿಯುತ್ತ ಪ್ರತಿ ಸೆಕೆಂಡಿನ ಸಂಸ್ಕಾರಗಳ ರೆಕಾರ್ಡ್ ಅನ್ನು ನಂಬರ್ ಒನ್ ಸ್ಥಿತಿಯಲ್ಲಿ ತುಂಬಿಸಿಕೊಳ್ಳುತ್ತಾ ಹೋಗಿ. **(09–05–1977)**

**ಪ್ರಶ್ನೆ:** ಯಾವ ಭೋಜನವು ಆತ್ಮವನ್ನು ಸದಾ ಶಕ್ತಿಶಾಲಿಯನ್ನಾಗಿ ಮಾಡುತ್ತದೆ?

**ಉತ್ತರ:** ಖುಷಿಯ ಭೋಜನ. 'ಖುಷಿಯಂತಹ ಟಾನಿಕ್ ಇಲ್ಲ' ಎಂದು ಹೇಳಲಾಗುತ್ತದೆ. ಖುಷಿಯಲ್ಲಿರುವಂತಹವರು ಶಕ್ತಿಶಾಲಿಗಳಾಗಿರುತ್ತಾರೆ. ಡ್ರಾಮಾದ ಗುರಾಣಿಯನ್ನು ಒಳ್ಳೆಯ ರೀತಿಯಲ್ಲಿ ಕಾರ್ಯದಲ್ಲಿ ತರುವುದರಿಂದ ಸದಾ ಖುಷಿಯಲ್ಲಿರುತ್ತಾರೆ. ಬಾಡುವುದಿಲ್ಲ. ಒಂದುವೇಳೆ ಸದಾ ಡ್ರಾಮಾದ ಸ್ಮೃತಿಯಲ್ಲಿ ಇದ್ದರೆ ಎಂದಿಗೂ ಬಾಡುವುದಿಲ್ಲ. ಸದಾ ಖುಷಿಯು ಬುದ್ಧಿಯವರೆಗೆ ಜ್ಞಾನದ ರೂಪದಲ್ಲಿ ಮಾತ್ರ ಅಲ್ಲ, ಯಾವುದೇ ದೃಶ್ಯವಿರಲಿ ತಮ್ಮ ಕಲ್ಯಾಣವನ್ನು ಮಾಡಿಕೊಳ್ಳಬೇಕು. ಆಗ ಸದಾ ಖುಷಿಯಲ್ಲಿರುತ್ತೀರಿ. **(14–05–1977)**

**ದೀದೀಜಿಯವರ ಜೊತೆ:** ಸಾಕ್ಷಿಯಾಗಿರುತ್ತಾ ಸರ್ವ ಆತ್ಮಗಳ ಅವರವರ ಪಾತ್ರವನ್ನು ನೋಡುತ್ತಾ ಯಾರದೇ ಪಾತ್ರವನ್ನು ನೋಡಿ, 'ಹೀಗೆ ಏಕೆ' ಎನ್ನುವ ಏರುಪೇರು ಆಗುತ್ತದೆಯೇ? ಮಹಾರಥಿಗಳಲ್ಲಿ ಮತ್ತು ಕುದುರೆ ಸವಾರರಲ್ಲಿ ವಿಶೇಷವಾಗಿ ಈ ಅಂತರವಿರುತ್ತದೆ. ಕುದುರೆ ಸವಾರರ ಗುರುತುಗಳು ಏನಾಗಿದೆ? ಪ್ರಶ್ನೆ(?) ಚಿಹ್ನೆ ಮತ್ತು ಮಹಾರಥಿಗಳ ಗುರುತಾಗಿದೆ ಪೂರ್ಣವಿರಾಮ(.). ಹೇಗೆ ಯಾವುದೇ ಸೇನೆಯಲ್ಲಿ ಇವರು ಮೊದಲನೇ ನಂಬರಿನವರು, ಇವರು ಎರಡನೇ ನಂಬರಿನವರು ಎನ್ನುವ ಚಿಹ್ನೆಗಳು ಇರುತ್ತವೆ. ನಂತರ ಅವರಿಗೆ ಅದೇ ರೀತಿಯ ಪದಕಗಳು ಸಿಗುತ್ತದೆ. ಇದರಿಂದ ಇವರು ಮೊದಲನೇ ನಂಬರಿನವರು, ಇವರು ಎರಡನೇ ನಂಬರಿನವರು ಎಂದು ತಿಳಿದುಕೊಳ್ಳಲಾಗುತ್ತದೆ. ಆದರೆ ಅನಾದಿ ಡ್ರಾಮಾದ ಆತ್ಮಿಕ ಸೇನೆಯ ಸೇನಾನಿಗಳಿಗೆ ಯಾವುದೇ ಪದಕಗಳನ್ನು ಕೊಡುವುದಿಲ್ಲ, ಆದರೆ ಆಟೋಮೆಟಿಕ್ ಆಗಿ ಡ್ರಾಮಾನುಸಾರ ಅವರಿಗೆ ಸ್ಥಿತಿ ರೂಪದ ಪದಕಗಳು ಪ್ರಾಪ್ತಿ ಆಗಿಯೇ ಆಗುತ್ತದೆ. ಯಾರೂ ಮೆಡಲ್‌ನ್ನು ಹಾಕುವುದಿಲ್ಲ, ಸ್ವತಃವಾಗಿ ಹಾಕಿರುವಂತಹದ್ದು ಅಗಿರುತ್ತದೆ. ಮಹಾವೀರರ ಪದಕ ಫುಲ್ ಸ್ಟಾಪ್ (ಪೂರ್ಣವಿರಾಮ) ಎಂದು ಹೇಳಲಾಗಿದೆ. ಕೇವಲ ವಿರಾಮವಲ್ಲ ಪೂರ್ಣವಿರಾಮ. ಮತ್ತು ಎರಡನೇ ನಂಬರ್‌ನವರು ಅಂದರೆ ಕುದುರೆ ಸವಾರರ ಗುರುತಾಗಿದೆ – ಕೆಲವೊಮ್ಮೆ ವಿರಾಮ, ಕೆಲವೊಮ್ಮೆ ಪ್ರಶ್ನೆ. ವಿಶೇಷವಾಗಿ 'ಪ್ರಶ್ನೆ' ಚಿಹ್ನೆ ಇರುತ್ತದೆ. ಇದರಿಂದಲೇ ಯಾವ ಸ್ಟೇಜ್‌ನ ಆತ್ಮಗಳೆಂದು ತಿಳಿದುಕೊಳ್ಳಬಹುದಾಗಿದೆ. ಈ ಗುರುತೇ ಮೆಡಲ್ ಆಗಿದೆ. ಸ್ಪಷ್ಟವಾಗಿ ಕಾಣಿಸುತ್ತದೆಯಲ್ಲವೇ? ದಿನ ಪ್ರತಿದಿನ ಪ್ರತಿಯೊಂದು ಆತ್ಮ ಸ್ವಯಂ ತಮ್ಮ ಸಾಕ್ಷಾತ್ಕಾರ ಮಾಡಿಸುತ್ತಿರುತ್ತದೆ. ಇಷ್ಟವಿಲ್ಲದಿದ್ದರೂ ಸಹ ಪ್ರತಿಯೊಬ್ಬರ ಸ್ಥಿತಿಯ ಅನುಸಾರ ಸ್ಥಿತಿಯು ಕಾಣುತ್ತಲೇ ಹೋಗುತ್ತಿದೆ. ಎಂತಹ ಪರಿಸ್ಥಿತಿಗಳು, ಸಮಸ್ಯೆಗಳು ಅವರ ಮುಂದೆ ಬರುತ್ತವೆ ಎಂದರೆ ಇಷ್ಟವಿಲ್ಲದಿದ್ದರೂ ಸ್ವಯಂ ಅನ್ನು ಬಚ್ಚಿಟ್ಟುಕೊಳ್ಳಲು ಸಾಧ್ಯವಾಗುವುದಿಲ್ಲ. ಏಕೆಂದರೆ ಈಗ ಹೇಗೆ ಸಮಯವು ಸಮೀಪ ಬರುತ್ತಿದೆಯೋ, ಸಮೀಪ ಸಮಯವಾಗಿರುವ ಕಾರಣದಿಂದ ಮಾಲೆಯು ಸ್ವಯಂ ಆಗಿಯೇ ತನ್ನ ಸಾಕ್ಷಾತ್ಕಾರವನ್ನು ಮಾಡಿಸುತ್ತದೆ. ಸ್ಥಿತಿಯು ಆಟೋಮೆಟಿಕ್ ಆಗಿ ತಮ್ಮ ನಂಬರನ್ನು ಪ್ರಸಿದ್ಧ ಮಾಡುತ್ತಾ ಹೋಗುತ್ತಿದೆ. ಈ ರೀತಿ ಅನುಭವವಾಗುತ್ತಿದೆಯಲ್ಲವೇ? ಯಾರಿಗೆ ಮುಂದೆ ಹೋಗಬೇಕೋ ಅವರಿಗೆ ಅದೇ ರೀತಿಯಲ್ಲಿ ಅವಕಾಶ ಸಿಕ್ಕಿಬಿಡುತ್ತದೆ. ಯಾರದು ಕೊನೆಯ ನಂಬರು ಇರುತ್ತದೋ ಅವರಿಗೆ ಆಟೋಮೆಟಿಕ್ ಆಗಿ ಎಂತಹ ಸಮಸ್ಯೆಗಳು ಅಥವಾ ಮಾತುಗಳು ಬರುತ್ತವೆಯೆಂದರೆ ಆ ಕಾರಣದಿಂದ ಸ್ವತಃ ಮುಂದೆ ಹೋಗುವುದಿಲ್ಲ, ನಿಲ್ಲುವ ಕಲೆಯವರಾಗಿ ಬಿಡುತ್ತಾರೆ. ಎಷ್ಟೇ ಬಯಸಿದರೂ ಮುಂದೆ ಹೋಗಲು ಆಗುವುದಿಲ್ಲ. ಗೋಡೆಯನ್ನು ಪಾರು ಮಾಡುವಂತಹ ಶಕ್ತಿ ಇರುವುದಿಲ್ಲ. ಇದಕ್ಕೆ ಮೂಲ ಕಾರಣ, ಪ್ರಾರಂಭದಿಂದಲೂ ಪ್ರತಿಯೊಂದು ಗುಣದ, ಶಕ್ತಿಗಳ ಪಾಯಿಂಟ್‌ನ ಅನುಭವಿಗಳಾಗಿ ನಡೆಯದೇ ಇರುವುದಾಗಿದೆ. ಬಹಳ ಕೆಲವೇ ಆತ್ಮಗಳ ಫೌಂಡೇಷನ್ 'ಅನುಭವ'ವಾಗಿದೆ. ಆದರೆ ಮೆಜಾರಿಟಿ ಆತ್ಮಗಳ ಆಧಾರ ಸಂಘಟನೆಯನ್ನು ನೋಡುವುದು ಅಥವಾ ಕೇವಲ ಸಾತ್ವಿಕ ಜೀವನಕ್ಕೆ ಪ್ರಭಾವಿತರಾಗುವುದು, ಒಂದು ಆಶ್ರಯ ಎಂದು ತಿಳಿದು ನಡೆಯುವುದು, ಯಾರ ಜೊತೆಯ ಉಲ್ಲಾಸ ಉತ್ಸಾಹದಿಂದ ನಡೆಯುವುದು, ಅನ್ಯರು ಹೇಳಿದ್ದರಿಂದ ನಡೆಯುವುದು, ಜ್ಞಾನ ಚೆನ್ನಾಗಿದೆ ಎನ್ನುವ ಆಧಾರದಿಂದ ನಡೆಯುವುದು – ಈ ರೀತಿ ನಡೆಯುವಂತಹವರ ಅನುಭವದ ಫೌಂಡೇಷನ್ ಶಕ್ತಿಶಾಲಿ ಆಗಿರದ ಕಾರಣದಿಂದಾಗಿ ನಡೆಯುತ್ತಾ ನಡೆಯುತ್ತಾ ಬಹಳ ಗೊಂದಲದಲ್ಲಿ ಬರುತ್ತಾರೆ. ಆದರೆ ನಂಬರು ಅಂತು ಆಗಲೇ ಬೇಕಾಗಿದೆ. ಕೆಲವರು ಈಗಲೂ ಯೋಗವನ್ನು ಕಲಿಸುತ್ತಾರೆ ಆದರೆ ಯೋಗದ ಅನುಭವವೇ ಆಗುವುದಿಲ್ಲ. ಇಂತಹವರೂ ಇದ್ದಾರೆ. ಯೋಗ ಎಂದು ಯಾವುದಕ್ಕೆ ಹೇಳಲಾಗುತ್ತದೆ, ಯೋಗದಿಂದ ಇವೆಲ್ಲವೂ ಪ್ರಾಪ್ತಿಯಾಗುತ್ತದೆ ಎಂದು ವರ್ಣನೆ ಮಾಡುತ್ತಾರೆ, ಆದರೆ ಯೋಗಿ ಜೀವನವೆಂದು ಯಾವುದಕ್ಕೆ ಹೇಳಲಾಗುತ್ತದೆ ಎಂಬುದರ ಅನುಭವ ಬಹಳ ಅಲ್ಪಕಾಲದ್ದಾಗಿರುತ್ತದೆ. 'ಡ್ರಾಮಾ' ಎಂದು ಹೇಳುತ್ತಾರೆ, ಆದರೆ ಡ್ರಾಮಾದ ರಹಸ್ಯವನ್ನು ತಿಳಿದುಕೊಂಡು ಡ್ರಾಮಾದ ಆಧಾರದ ಮೇಲೆ ಜೀವನದ

ಅನುಭವ ಮಾಡುವುದು ಬಹಳ ಕಡಿಮೆ ಇದೆ. ಈ ರೀತಿ ಕಂಡು ಬರುತ್ತಿದೆಯಲ್ಲವೆ? ಆದರೂ ಅಂತಹ ಆತ್ಮಗಳಿಗೂ ಜೊತೆಯನ್ನು ಕೊಡುತ್ತಾ ಗುರಿಯವರೆಗೆ ಕರೆದುಕೊಂಡು ಹೋಗಲೇ ಬೇಕಲ್ಲವೇ? ಎಂದು ತಂದೆಯು ಹೇಳುತ್ತಾರೆ. ತಂದೆಯ ಸಮಾನ ತಮ್ಮ ಪ್ರತಿಜ್ಞೆಯನ್ನು ನಿಭಾಯಿಸುತ್ತೀರಲ್ಲವೆ? ಆದರೆ ಸಂಗಮಯುಗದ 'ಶ್ರೇಷ್ಟ ಭಾಗ್ಯದ' ಪ್ರಾಪ್ತಿ ಯಾವುದು ಇದೆಯೋ ಅದರಿಂದ ಖಾಲಿ ಆಗಿ ಇದ್ದು ಬಿಡುತ್ತಾರೆ. ಸಹಯೋಗದ ಲಿಫ್ಟಿನಿಂದ ನಡೆಯುತ್ತಿರುತ್ತಾರೆ. ಆದರೆ ಇಡೀ ಕಲ್ಪದಲ್ಲಿ ಯಾವುದು ಸಿಗುವುದಿಲ್ಲವೊ ಮತ್ತು ಈಗ ಸಿಗುತ್ತಿದೆಯೋ ಅದರಿಂದ ವಂಚಿತರಾಗಿ ಉಳಿಯುತ್ತಾರೆ. ಇಂತಹವರನ್ನು ನೋಡಿದಾಗ ದಯೆಯೂ ಬರುತ್ತದೆ, ಅನುಕಂಪವೂ ಉಂಟಾಗುತ್ತದೆ. ಸಾಗರನ ಮಕ್ಕಳಾಗಿಯೂ ಸಹ ಕೊಳದಲ್ಲಿ ವಾಸ ಮಾಡುವಂತಹ ಆಧಿಕಾರಿಗಳಾಗಿ ಬಿಡುತ್ತಾರೆ. ತಮ್ಮ ಚಿಕ್ಕ ಚಿಕ್ಕ ಬಲಹೀನತೆಯ ಮಾತುಗಳಲ್ಲಿ ಸಮಯವನ್ನು ಕಳೆಯುವುದು ಕೊಳದಲ್ಲಿ ವಾಸ ಮಾಡಿದಂತಲ್ಲವೇ? **(19–05–1977)**

ಸೇವಾಧಾರಿಗಳಿಗೆ ಸದಾ ಹರ್ಷಿತರು, ಸದಾ ಸಂತುಷ್ಟರು ಎಂಬ ಈ ಪ್ರಾಪ್ತಿಯ ವರದಾನ ಸ್ವತಃವಾಗಿ ಪ್ರಾಪ್ತಿಯಾಗುತ್ತದೆ. ಏಕೆಂದರೆ ಪ್ರತಿಯೊಂದು ಆತ್ಮದಲ್ಲಿ ಭಿನ್ನ ಭಿನ್ನವಾದಂತಹ ಪಾತ್ರವಿದೆ ಎಂದು ತಿಳಿದುಕೊಂಡಿರುತ್ತಾರೆ. ಪಾತ್ರಧಾರಿಗಳ ಯಾವುದೇ ಪ್ರಕಾರದ ಪಾತ್ರಗಳನ್ನು ನೋಡಿ ಅಸಂತುಷ್ಟರಾಗ ಬಾರದು. ಇಂತಹ ಸೇವಾಧಾರಿಗಳ ಮನಸ್ಸಿನಿಂದ ಸದಾ ಹರ್ಷಿತರು ಮತ್ತು ಸಂತುಷ್ಟರಾಗಿರುವ ಯಾವ ಗೀತೆಯು  ಹೊರಬರುತ್ತಿರುತ್ತದೆ? 'ವಾಹ್ ಬಾಬಾ', 'ವಾಹ್ ನನ್ನ ಪಾತ್ರ' ಮತ್ತು 'ವಾಹ್ ಮಧುರ ಡ್ರಾಮಾ' ಎಂಬುದು. ಯಾವಾಗ ಸ್ವಯಂ ಸದಾ ಈ ಮನಸ್ಸಿನ ಗೀತೆಯನ್ನು ಹಾಡುತ್ತಿರುತ್ತೀರೋ ಆಗಲೇ ಸರ್ವ ಆತ್ಮಗಳೂ ಸಹ ಈ ಸಮಯದಲ್ಲೂ ಮತ್ತು ಇಡೀ ಕಲ್ಪದಲ್ಲಿಯೂ ಅಂತಹವರಿಗೆ 'ವಾಹ್ ವಾಹ್' ಎನ್ನುತ್ತಾರೆ. **(21–05–1977)**

ಪೂರ್ತಿ ಡ್ರಾಮಾದ ಒಳಗೆ ಅನ್ಯ ಧರ್ಮದ ಆತ್ಮಗಳನ್ನು ನೋಡಿರಿ ಮತ್ತು ತಮ್ಮನ್ನು ತಾವು ನೋಡಿಕೊಂಡಾಗ ಮಹಾನ್ ಅಂತರವಿದೆ. ಮೊದಲನೆಯದಾಗಿ 'ನೀವು ಡೈರೆಕ್ಟ್ ಮಕ್ಕಳಾಗಿದ್ದೀರಿ' ಎಂಬುದನ್ನು ತಿಳಿಸಿಕೊಡಲಾಗಿದೆ. ತಂದೆ–ತಾಯಿಯ ಮತ್ತು ಸರ್ವ ಸಂಬಂಧದ ಸುಖವನ್ನು ಅನುಭವ ಮಾಡುವಂತಹ, ಡೈರೆಕ್ಟ್ ಮಕ್ಕಳಾಗಿರುವ ಕಾರಣ, ವಿಶ್ವದ ರಾಜ್ಯದ ಆಸ್ತಿಯು ಸಹಜವಾಗಿ ಪ್ರಾಪ್ತಿಯಾಗಿ ಬಿಡುತ್ತದೆ. ಸೃಷ್ಟಿಯ ಆದಿಕಾಲ ಸತ್ಯಯುಗ ಆಂದರೆ ಸ್ವರ್ಗದ ಸತೋಪ್ರಧಾನ, ಸಂಪೂರ್ಣ ಪ್ರಾಪ್ತಿಯು ತಾವು ಆತ್ಮಗಳಿಗೆ ಮಾತ್ರ ಪ್ರಾಪ್ತಿಯಾಗುತ್ತದೆ. ಮತ್ತು ಎಲ್ಲಾ ಆತ್ಮಗಳು ಬರುವುದೇ ಮಧ್ಯ ಕಾಲದಲ್ಲಿ. ತಾವು ಶ್ರೇಷ್ಠ ಆತ್ಮಗಳು ಅನುಭವಿಸಿದಂತಹ ಸುಖ ಮತ್ತು ರಾಜ್ಯವನ್ನು, ರಜೋಪ್ರಧಾನದಲ್ಲಿ ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ತಾವು ಆತ್ಮಗಳಿಗೆ ಹೇಗೆ ಧರ್ಮ ಮತ್ತು ರಾಜ್ಯ ಎರಡೂ ಪ್ರಾಪ್ತಿಯಾಗುತ್ತದೆ, ಆದರೆ ಅನ್ಯ ಆತ್ಮಗಳಿಗೆ ಧರ್ಮವಿದ್ದಾಗ ರಾಜ್ಯವಿರುವುದಿಲ್ಲ, ರಾಜ್ಯವಿದ್ದಾಗ ಧರ್ಮವಿರುವುದಿಲ್ಲ. ಏಕೆಂದರೆ ದ್ವಾಪರ ಯುಗದಿಂದ ಧರ್ಮ ಮತ್ತು ರಾಜ್ಯದ ಎರಡೂ ಪುರಗಳು ಬೇರೆ ಬೇರೆಯಾಗಿರುತ್ತವೆ. ಇದರ ಗುರುತಾಗಿ ಡ್ರಾಮಾದ ಒಳಗೆ ಡಬ್ಬಲ್ ಕಿರೀಟದಾರಿಗಳು ಕೇವಲ ತಾವಾಗಿದ್ದೀರಿ. ಅನ್ಯ ಯಾರನ್ನಾದರೂ ನೋಡಿದ್ದೀರಾ? ಇನ್ನೂ ಅನೇಕ ವಿಶೇಷತೆಗಳಿವೆ. ಸಂಪೂರ್ಣ ಪ್ರಾಪ್ತಿ ಎಂದರೆ ತನು, ಮನ, ಧನ, ಸಂಬಂಧ ಮತ್ತು ಪ್ರಕೃತಿಯ ಸರ್ವ ಸುಖಗಳು, ಇದರಲ್ಲಿ ಆಪ್ರಾಪ್ತಿ ಎನ್ನುವ ಯಾವ ವಸ್ತುವೂ ಇಲ್ಲ, ದುಃಖದ ಹೆಸರೂ, ಚಿಹ್ನೆಯೂ ಇಲ್ಲ, ಇಂತಹ ಶ್ರೇಷ್ಠ ಪ್ರಾಪ್ತಿ ಅನ್ಯ ಯಾವ ಆತ್ಮಗಳಿಗೂ ಪ್ರಾಪ್ತವಾಗುವುದಿಲ್ಲ. ಡೈರೆಕ್ಟ್ ಮಕ್ಕಳಾಗಿರುವ ಕಾರಣ, ಶ್ರೇಷ್ಠಾತಿ ಶ್ರೇಷ್ಠ ತಂದೆಗೆ ಸಂತಾನರಾಗಿರುವ ಕಾರಣ, ಪರಮಪೂಜ್ಯ ತಂದೆಗೆ ಸಂತಾನರಾಗಿರುವ ಕಾರಣ, ತಾವು ಆತ್ಮಗಳೂ ಸಹ ಡಬ್ಬಲ್ ರೂಪದಲ್ಲಿ ಪೂಜಿಸಲ್ಪಡುವಿರಿ. ಒಂದು ಸಾಲಿಗ್ರಾಮ ರೂಪದಲ್ಲಿ, ಎರಡನೆಯದು ದೇವಿ ದೇವತಾ ರೂಪದಲ್ಲಿ. ಈ ರೀತಿಯ ವಿಧಿ ಪೂರ್ವಕವಾದ ಪೂಜ್ಯರು ಧರ್ಮಪಿತರಾಗಲೀ ಅಥವಾ ಅನ್ಯ ಯಾವುದೇ ಹೆಸರುವಾಸಿಯಾದಂತಹ ಆತ್ಮಗಳು ಆಗುವುದಿಲ್ಲ. ಇದಕ್ಕೆ ಕಾರಣವೇನು? ತಾವು ಡೈರೆಕ್ಟ್ ವಂಶಾವಳಿ ಯಾಗಿದ್ದೀರಿ. ತಾವು ಎಷ್ಟೊಂದು ಭಾಗ್ಯಶಾಲಿಗಳಾಗಿದ್ದೀರಿ, ಸ್ವಯಂ ಭಗವಂತನು ನಿಮ್ಮ ಭಾಗ್ಯವನ್ನು ಬೆಳಗಿಸುತ್ತಿದ್ದಾರೆ ಎಂದು ತಿಳಿದುಕೊಂಡಿದ್ದೀರಾ.  ಆದ್ದರಿಂದ ಸದಾ ತಮ್ಮ ಇಂತಹ ಭಾಗ್ಯವನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳಿ. ಬಲಹೀನತೆಯ ಹಾಡನ್ನು ಹಾಡಬೇಡಿ. ಭಕ್ತರು ಬಲಹೀನತೆಯ ಹಾಡನ್ನು ಹಾಡುತ್ತಾರೆ ಮತ್ತು ಮಕ್ಕಳು ಭಾಗ್ಯದ ಗೀತೆಯನ್ನು ಹಾಡುತ್ತಾರೆ. ಆದ್ದರಿಂದ ತಾವು ಭಕ್ತರಾಗಿದ್ದೀರಾ ಅಥವಾ ಮಕ್ಕಳಾಗಿದ್ದೀರಾ ಎಂದು ತಮ್ಮನ್ನು ತಾವು ಕೇಳಿಕೊಳ್ಳಿ. ತಮ್ಮ ಶ್ರೇಷ್ಠ ಭಾಗ್ಯವನ್ನು ಅರಿತುಕೊಂಡಿರಾ? **(24–05–1977)**

**(ಪರದಾದಿ [ನಿರ್ಮಲ್‌ಶಾಂತ ದಾದಿ] ಯವರಿಗೆ):** ಡ್ರಾಮಾವು ತಮ್ಮನ್ನೂ ಸಹ ಸಮೀಪದಲ್ಲಿ ಪಾತ್ರವನ್ನು ಅಭಿನಯಿಸುವುದಕ್ಕೆ  ನಿಮಿತ್ತರನ್ನಾಗಿ ಮಾಡುತ್ತದೆ. ಕಲ್ಪದ ಹಿಂದೆ ಹೇಗೆ ಅಭಿನಯಿಸಿದ್ದಿರೋ, ಅದೇ ರೀತಿ ಈಗಲೂ ಸಹ ಅಭಿನಯಿಸುತ್ತೀರಿ. ಪ್ಲಾನ್ ಯೋಚಿಸುವುದರಿಂದ ಆಗುವುದಿಲ್ಲ, ಆದರೆ

ಬೇಡವೆಂದರೂ ಡ್ರಾಮಾದ ಪಾತ್ರವು ನಿಮಿತ್ತರನ್ನಾಗಿ ಮಾಡಿಬಿಡುತ್ತದೆ. ಇದರಲ್ಲಿಯೂ ದೊಡ್ಡ ರಹಸ್ಯವಿದೆ. ತಮಗೆ ವರದಾನವಿದೆ. ಲೌಕಿಕ ಮತ್ತು ಅಲೌಕಿಕ ತಂದೆಯ ಕುಲದ ಹೆಸರನ್ನು ಪ್ರಸಿದ್ಧ ಮಾಡುವಂತಹ ನಿಮಿತ್ತ ಆತ್ಮ ಆಗಿದ್ದೀರಿ. ಇದೂ ಸಹ ವಿಶೇಷ ವರದಾನವಾಗಿದೆ. ಆದ್ದರಿಂದ ತಮ್ಮನ್ನು ನೋಡಿದಾಗ ಎರಡೂ ನೆನಪಿಗೆ ಬರುತ್ತದೆ. ಲೌಕಿಕದ ಫೀಚರ್ (ಮುಖ) ನೆನಪಿಗೆ ಬರುತ್ತದೆ ಮತ್ತು ಫೀಚರ್‌ನಿಂದ ಯಾವ ಫ್ಯೂಚರ್ (ಭವಿಷ್ಯ) ರೂಪಗೊಳ್ಳುತ್ತದೋ ಅದೂ ಸಹ ನೆನಪಿಗೆ ಬರುತ್ತದೆ. ತಮ್ಮ ಪ್ರತಿ ಹೆಜ್ಜೆಯಲ್ಲಿ ಎರಡೂ ಕುಲದ ಹೆಸರನ್ನು ಪ್ರಸಿದ್ಧ ಮಾಡುವಂತಹ ವರದಾನ ಅಡಗಿದೆ. ಡ್ರಾಮಾವು ಸ್ವತಃ ಸೀಟ್‌ನ ಕಡೆಗೆ ಸೆಳೆಯುತ್ತಾ ಹೋಗುತ್ತದೆ. **(28–05–1977)**

ಮತ್ತೇನು ಹೇಳುತ್ತೀರೆಂದರೆ, ಸಂಬಂಧಿಗಳು ಕೇಳಿಸಿಕೊಳ್ಳುವುದಿಲ್ಲ, ಸಂಗ ಚೆನ್ನಾಗಿಲ್ಲ, ಈ ಕಾರಣದಿಂದ ಶಕ್ತಿಶಾಲಿಗಳು ಆಗುವುದಿಲ್ಲ ಎಂದು. ಪ್ರತಿಯೊಂದು ಆತ್ಮದ ಪಾತ್ರ ತಮ್ಮ ತಮ್ಮದು ಮತ್ತು ಭಿನ್ನ ಭಿನ್ನದ್ದು ಆಗಿದೆ ಎಂದು ಬಾಪ್‌ದಾದಾರವರು ಮೊದಲೇ ಹೇಳಿಬಿಟ್ಟಿದ್ದಾರೆ. ಕೆಲವರದು ಸತೋಗುಣ, ಕೆಲವರದು ರಜೋಗುಣ, ಕೆಲವರದು ತಮೋಗುಣವಿದೆ. ಯಾವಾಗ ವೆರೈಟಿ ಆತ್ಮಗಳಿದ್ದಾರೆ ಮತ್ತು ವೆರೈಟಿ ಡ್ರಾಮಾ ಆಗಿದೆ ಎಂದಾಗ ಎಲ್ಲಾ ಆತ್ಮಗಳ ಪಾತ್ರಗಳು ಒಂದೇ ರೀತಿ ಇರಲು ಸಾಧ್ಯವಿಲ್ಲ. ಒಂದುವೇಳೆ ಯಾವುದೇ ಆತ್ಮದ ತಮೋಗುಣದ ಅಂದರೆ ಅಜ್ಞಾನದ ಪಾತ್ರವಿದ್ದಲ್ಲಿ, ಆಗ ಶುಭ ಭಾವನೆ ಮತ್ತು ಶುಭ ಕಾಮನೆಯಿಂದ ಆ ಆತ್ಮಕ್ಕೆ ಶಾಂತಿ ಮತ್ತು ಶಕ್ತಿಗಳ ದಾನವನ್ನು ಕೊಡಿ. ಆದರೆ ಆ ಅಜ್ಞಾನಿ ಆತ್ಮದ ಪಾತ್ರವನ್ನು ನೋಡಿ ತಮ್ಮ ಶ್ರೇಷ್ಠ ಸ್ಥಿತಿಯ ಅನುಭವವನ್ನು ಏಕೆ ಮರೆತು ಹೋಗುತ್ತೀರಿ? ತಮ್ಮ ಸ್ಥಿತಿಯನ್ನು ಏಕೆ ಏರು–ಪೇರು ಮಾಡಿಕೊಳ್ಳುತ್ತೀರಿ? ಸಾಕ್ಷಿಯಾಗಿ ಪಾತ್ರವನ್ನು ನೋಡುತ್ತಾ, ಯಾವ ಶಕ್ತಿಯ ದಾನವನ್ನು ಕೊಡಬೇಕೋ ಅದನ್ನು ಕೊಡಿ. ಆದರೆ ಭಯ ಪಡಬೇಡಿ. ತಮ್ಮ ಸತೋಪ್ರಧಾನ ಪಾತ್ರದಲ್ಲಿ ಸ್ಥಿತರಾಗಿ ಇರಿ. ತಾವು ಸದಾ ತಂದೆಯ ಶ್ರೇಷ್ಠ ಸಂಗದಲ್ಲಿ ಇರದ ಕಾರಣದಿಂದಲೇ ತಮೋಗುಣಿ ಆತ್ಮದ ಸಂಗದ ಪ್ರಭಾವ ತಮ್ಮ ಮೇಲೆ ಬೀಳುತ್ತದೆ. ಸದಾ ಶ್ರೇಷ್ಠ ಸಂಗದಲ್ಲಿ ಇರುವಂತಹ ಆತ್ಮಗಳ ಮೇಲೆ ಅನ್ಯ ಯಾವುದೇ ಸಂಗದ ರಂಗಿನ ಪ್ರಭಾವ ಬೀಳುವುದಿಲ್ಲ. ಆದ್ದರಿಂದ ನಿವಾರಣೆಯನ್ನು ಯೋಚಿಸಿ. **(31–05–1977)**

ಬಾಪ್–ದಾದಾರವರು ಮಕ್ಕಳನ್ನು ತ್ರಿಕಾಲದರ್ಶಿಗಳನ್ನಾಗಿ ಮಾಡುವ ಉದ್ದೇಶದಿಂದ ಸರ್ವ ರಹಸ್ಯಗಳನ್ನು ಮಕ್ಕಳ ಮುಂದೆ ಸ್ಪಷ್ಟ ಮಾಡುತ್ತಾರೆ. ತಂದೆಯು ಡ್ರಾಮಾದ ರಹಸ್ಯಗಳ ಅನುಸಾರವಾಗಿ ಪುರುಷಾರ್ಥಿಗಳಿಗೆ ರಾಜಧಾನಿಯ ರಹಸ್ಯಗಳನ್ನು ತಿಳಿಸುತ್ತಾರೆ – ಡ್ರಾಮಾದಲ್ಲಿ ರಾಜಧಾನಿಯಲ್ಲಿ ಎಲ್ಲಾ ಪ್ರಕಾರದ ಪದವಿಗಳನ್ನು ಪಡೆಯುವಂತಹವರು ಇರುತ್ತಾರೆ. ಮತ್ತು ಮಾಲೆಯಲ್ಲಿ ನಂಬರ್‌ವಾರ್ ಆಗುವ ಕಾರಣ ಎಲ್ಲರೂ ಮಹಾರಥಿಗಳಂತೂ ಆಗುವುದಿಲ್ಲ ಅಥವಾ ಎಲ್ಲರೂ ವಿಜಯ ಮಾಲೆಯಲ್ಲಿ ಬರಲು ಸಾಧ್ಯವಿಲ್ಲ. ಎಲ್ಲರೂ ಮಹರಾಜರು ಆಗುವುದಿಲ್ಲ. ಈ ಕಾರಣದಿಂದ ನಮ್ಮ ಪಾತ್ರವೇ ಆ ರೀತಿ ಕಂಡುಬರುತ್ತದೆ. ಬಾಬಾರವರು ಮಕ್ಕಳಿಗೆ ಅಡ್ವಾನ್ಸ್‌ನಲ್ಲಿ ಹೋಗುವುದ ಕ್ಕಾಗಿಯೇ ತಿಳಿಸುತ್ತಾರೆ. ಆದರೇ ಮಕ್ಕಳು ಅಡ್ವಾನ್ಸ್‌ನಲ್ಲಿ ಹೋಗುವ ಬದಲು ಉಲ್ಟಾ ಅಡ್ವಾಂಟೇಜ್‌ನ್ನು (ಲಾಭವನ್ನು) ತೆಗೆದುಕೊಂಡು ಬಿಡುತ್ತಾರೆ. ಅಂದರೆ ತಮ್ಮ ಆಲಸ್ಯ ಮತ್ತು ಹುಡುಗಾಟಿಕೆಯನ್ನು ತೆಗೆದುಹಾಕುವುದಿಲ್ಲ, ಆದರೆ ತಂದೆಯ ಮಾತಿನ ಭಾವವನ್ನು ಬದಲಾಯಿಸಿ ಅದೇ ಮಾತನ್ನು ಆಧಾರವನ್ನಾಗಿ ಮಾಡಿಕೊಂಡು ಬಿಡುತ್ತಾರೆ ಮತ್ತು ತಂದೆಗೇ 'ತಾವು ಈ ರೀತಿ ಹೇಳಿರುವಿರಿ' ಎಂದು ತಿಳಿಸುತ್ತಾರೆ. ಇದೇ ರೀತಿ ತಮ್ಮ ಭಿನ್ನ ಭಿನ್ನ ಸ್ವಭಾವಕ್ಕೆ ವಶರಾಗಿ ಯಥಾರ್ಥ ಮಾತುಗಳ ಭಾವವನ್ನು ಬದಲಾಯಿಸಿ ನಿಲ್ಲುವ ಕಲೆಯ ಆಟವನ್ನು ಬಹಳ ಚೆನ್ನಾಗಿ ತೋರಿಸುತ್ತಾರೆ. ಮಾಯಾಜೀತ್ ಆಗುವ ಯುಕ್ತಿಗಳನ್ನು ಸಮಯದಲ್ಲಿ ಕಾರ್ಯದಲ್ಲಿ ಉಪಯೋಗಿಸುವುದಕ್ಕೆ ಸ್ವತಃ ಗಮನವನ್ನು ಕಡಿಮೆ ಇಡುತ್ತಾರೆ, ಆದರೆ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ತಂದೆಯ ಮಾತನ್ನು ಉಪಯೋಗಿಸಿಕೊಳ್ಳುತ್ತಾರೆ ಮತ್ತು ಏನೆಂದು ಹೇಳುತ್ತಾರೆಂದರೆ, 'ತಾವೇ ಹೇಳಿದ್ದಿರಿ ಮಾಯೆ ದೊಡ್ಡ ಶಕ್ತಿಶಾಲಿಯಾಗಿದೆ, ಬ್ರಹ್ಮಾಬಾಬಾರವರನ್ನೂ ಬಿಡುವುದಿಲ್ಲ, ಮಹಾರಥಿಗಳ ಜೊತೆಯಲ್ಲೂ ಸಹ ಮಾಯೆ ಯುದ್ಧ ಮಾಡುತ್ತದೆ. ಬ್ರಹ್ಮಬಾಬಾರವರನ್ನೇ ಬಿಡುವುದಿಲ್ಲ, ಮಹಾರಥಿಗಳನ್ನೂ ಸಹ ಬಿಡುವುದಿಲ್ಲ ಎಂದಾಗ ನಮ್ಮ ಹತ್ತಿರ ಬಂದಾಗ ಸೋತು ಹೋದರೆ ಇದೇನು ದೊಡ್ಡ ಮಾತೇ? ಅಂತ್ಯದವರೆಗೂ ಇದು ನಡೆಯಲೇಬೇಕು. ಈ ರೀತಿಯಾಗಿ ಪುರುಷಾರ್ಥದಲ್ಲಿ ನಿಲ್ಲುವಂತಹ ಮಾತನ್ನು ತಮ್ಮ ಆಧಾರವನ್ನಾಗಿ ಮಾಡಿಕೊಂಡು ಏರುವ ಕಲೆಯಲ್ಲಿ ಹೋಗುವುದರಿಂದ ವಂಚಿತರಾಗಿಬಿಡುತ್ತಾರೆ. ಮಾಯೆ ಬರುತ್ತದೆ, ಆದರೆ ಮಾಯಾಜೀತ್ ಜಗತ್‌ಜೀತ್‌ರಾಗುವುದು ಯಾರ ಗಾಯನವಾಗಿದೆ? ಎಂದು ಬಾಬಾರವರು ತಿಳಿಸುತ್ತಾರೆ. ಒಂದುವೇಳೆ ಮಾಯೆಯೇ ಬರಲಿಲ್ಲವೆಂದರೆ, ಶತ್ರುಗಳನ್ನು ಎದುರಿಸದೇ ಯಾರನ್ನಾದರೂ ವಿಜಯಿಗಳು ಎಂದು ಹೇಳಲಾಗುತ್ತದೆಯೇ? ಮಾಯೆ ಬರುತ್ತದೆ

ಆದರೆ ಸೋಲುವ ಮಾತನ್ನು ತಂದೆ ಹೇಳುವುದಿಲ್ಲ. ಮಾಯೆಯ ಮೇಲೆ ಯುದ್ಧ ಮಾಡಬೇಕೇ ವಿನಹ ಸೋಲಬಾರದು. ಕಲ್ಪ ಕಲ್ಪದ ವಿಜಯಿ ರತ್ನಗಳಾಗಿದ್ದೇವೆ ಮತ್ತು ವಿಜಯಿಗಳಾಗಿ ತೋರಿಸುತ್ತೇವೆ ಎನ್ನುವ ಸಮರ್ಥ ಮಾತು ಮರೆತು ಹೋಗುತ್ತದೆ. ಆದರೆ ತಮ್ಮ ಬಲಹೀನತೆಯ ಕಾರಣದಿಂದ ತಂದೆಯ ಮಾತನ್ನೂ ಸಹ ಬಲಹೀನವನ್ನಾಗಿ ಮಾಡಿಬಿಡುತ್ತೀರಿ. ಬ್ರಹ್ಮಾಬಾಬಾರವರು ಹೇಗೆ ಕಲ್ಪ ಕಲ್ಪದ ಜ್ಞಾಪಕಾರ್ಥವಾಗಿ ಉಳಿಯುವಂತೆ ಮಾಯಾಜೀತ್‌ರಾಗಿ ಜಗತ್‌ಜೀತ್‌ರಾಗುವ ಪದವಿಯನ್ನು ಪ್ರಾಪ್ತಿ ಮಾಡಿಕೊಂಡುಬಿಟ್ಟರೋ, ಹಾಗೆಯೇ ಬ್ರಹ್ಮಾಬಾಬಾರವರು ಮಾಯೆ ಪ್ರಬಲವಾಗಿದ್ದರೂ ಸ್ವಯಂನ್ನು ಶಕ್ತಿಶಾಲಿಯನ್ನಾಗಿ ಮಾಡಿಕೊಂಡರೇ ವಿನಹ ಭಯಪಡಲಿಲ್ಲ. ಈ ರೀತಿಯಲ್ಲಿ ತಂದೆಯನ್ನು ಅನುಸರಿಸಬೇಕು.

ಸದಾ 'ನಿಶ್ಚಯಬುದ್ಧಿ ವಿಜಯಿರತ್ನಗಳು' ಎಂಬ ಸ್ಮೃತಿ ಇರುತ್ತದೆಯೇ? ನಿಶ್ಚಯದ ಫಲವಾಗಿದೆ 'ವಿಜಯ'. ಯಾವುದೇ ಕಾರ್ಯವನ್ನು ಮಾಡುತ್ತಾ ಸ್ವಯಂನ ಮೇಲೆ, ತಂದೆಯ ಮೇಲೆ, ಡ್ರಾಮಾದ ಮೇಲೆ ನಿಶ್ಚಯವಿದ್ದರೆ, ಎಲ್ಲಾ ಪ್ರಕಾರದಿಂದ ನಿಶ್ಚಯವಿದ್ದರೆ ಎಂದಿಗೂ ವಿಜಯ ಸಿಗಲಿಲ್ಲ ಎಂಬ ಮಾತೇ ಇಲ್ಲ. ಒಂದುವೇಳೆ ಸೋಲಾಯಿತು ಎಂದರೆ ಅದಕ್ಕೆ ಕಾರಣ ನಿಶ್ಚಯದ ಕೊರತೆ. ಒಂದುವೇಳೆ ಸ್ವಯಂನ ಮೇಲೆ ಸಂಶಯವಿದ್ದರೆ, ಇದು ಆಗುತ್ತದೆಯೋ ಇಲ್ಲವೋ, ಸಫಲತೆ ಸಿಗುತ್ತದೆಯೋ ಇಲ್ಲವೋ, ಈ ರೀತಿ ಇದ್ದಾಗ ಸಂಪೂರ್ಣ ನಿಶ್ಚಯವುಳ್ಳವರು ಎಂದು ಹೇಳಲಾಗುವುದಿಲ್ಲ. ನಿಶ್ಚಯ ಬುದ್ಧಿಯುಳ್ಳವರ ಸಂಕಲ್ಪ ದೃಢವಾಗಿರುತ್ತದೆ, ಬಲಹೀನತೆಯ ಸಂಕಲ್ಪವಿರುವುದಿಲ್ಲ. ಏನು ಆಗುತ್ತದೆಯೋ ಅದನ್ನು ಮಾಡುತ್ತೇವೆ ಎನ್ನುವುದು ಸಹ ಸಂಶಯದ ಸಂಕಲ್ಪವಾಗಿದೆ. ಏನು ಆಗುತ್ತದೋ ಎಂಬುದಾಗಿ ಅಲ್ಲ, ಆಗಿಯೇಬಿಟ್ಟಿದೆ ಎನ್ನುವುದು ನಿಶ್ಚಯ. ಕರ್ಮ ಮಾಡುವುದಕ್ಕೆ ಮೊದಲು ಇದು ಆಗಿಯೇಬಿಟ್ಟಿದೆ ಎನ್ನುವಂತಹ ನಿಶ್ಚಯವಿರಬೇಕು. ಇಂತಹ ಸ್ಥಿತಿ ಇದೆಯೇ? ಯಾವುದೇ ರೀತಿಯಲ್ಲಿ ಮಾಯೆ ಬಂದರೂ ನಾವು ಏರುಪೇರು ಆಗಬಾರದು. ನಿಶ್ಚಯ ಬುದ್ಧಿಯುಳ್ಳವರು ಪ್ರತಿ ಬಿರುಗಾಳಿಯನ್ನು ಮತ್ತು ಮಾಯೆಯ ವಿಘ್ನಗಳನ್ನು ಏನೂ ಇಲ್ಲವೇನೋ ಎನ್ನುವ ರೀತಿಯಲ್ಲಿ ಪಾರು ಮಾಡುತ್ತಾರೆ. ಹೇಗೆ ವಿಜ್ಞಾನದ ಸಾಧನೆಗಳಿಂದ ಸೆಕೆ ಇದ್ದರೂ ಸೆಕೆಯ ಅನುಭವವಾಗುವುದಿಲ್ಲವೋ, ಹಾಗೆಯೇ ನಿಶ್ಚಯ ಬುದ್ಧಿಯುಳ್ಳವರ ಮುಂದೆ ಬಿರುಗಾಳಿಗಳು ಬಂದರೆ ಅದು ದೊಡ್ಡ ಮಾತು ಎನಿಸುವುದಿಲ್ಲ. ಅವರ ಹತ್ತಿರ ಸುರಕ್ಷಿತರಾಗುವುದಕ್ಕೆ ಸಾಧನಗಳು ಇರುವ ಕಾರಣದಿಂದ ಮಾಯಾಜೀತ್ ಆಗಿ ಬಿಡುತ್ತಾರೆ.
**(07–06–1977)**

ಬ್ರಹ್ಮಕುಮಾರಿಯರು ಏನು ಹೇಳುತ್ತಾರೆ, ಏನು ಮಾಡುತ್ತಾರೆ ಎಂಬುದನ್ನು ಎಲ್ಲರು ನೋಡುತ್ತಿರುತ್ತಾರೆ. ಆದ್ದರಿಂದ ಏನನ್ನು ಹೇಳುತ್ತೀರೋ ಅದನ್ನು ಮಾಡುವಂತಹವರು ಆಗಿರಿ. 'ಭಗವಂತ ಸಿಕ್ಕಿಬಿಟ್ಟರು' ಎಂಬುದಾಗಿ ಘೋಷಣೆ ಕೂಗುತ್ತೀರಿ, ಆದರೆ ಭಗವಂತ ಸಿಕ್ಕಿದರು ಎಂದ ಮೇಲೆ ಬುದ್ಧಿಯು ಬೇರೆ ಕಡೆ ಹೋಗುವುದಕ್ಕೆ ಏನಾದರು ಉಳಿದಿದೆಯೇ. ಆದ್ದರಿಂದ ಸರ್ವ ಪ್ರಾಪ್ತಿಗಳ ಅನುಭವವನ್ನು ಎಲ್ಲರ ಮುಂದೆ ತೋರಿಸಿರಿ. ಈಗ ಎಲ್ಲರೂ ತಮ್ಮ ಶಕ್ತಿಸ್ವರೂಪ ಸ್ಥಿತಿಯನ್ನು ನೋಡಲು ಬಯಸುತ್ತಾರೆ. ಈಗ ಮಹಾರಥಿಗಳೆಲ್ಲರೂ ಯಾವುದಾದರೂ ಪ್ಲಾನ್‌ನ್ನು ಮಾಡಬೇಕಾಗಿದೆ. ವಿಘ್ನವಿನಾಶಕರಾಗುವ ಸಾಧನ ಯಾವುದಾಗಿದೆ? ಡ್ರಾಮಾ ಅನುಸಾರ ಏನು ನಡೆಯುತ್ತಿದೆಯೊ ಅದನ್ನು 'ನಿಶ್ಚಿತವಾಗಿದೆ' ಎಂದು ತಿಳಿದುಕೊಂಡು ಮುಂದೆ ನಡೆಯುತ್ತಾ ಇರಿ. ಆತ್ಮಗಳಿಗೆ ಯಾವುದು ಅಕಲ್ಯಾಣವಾಗುತ್ತದೋ, ಅದನ್ನು ದಯಾಸ್ವರೂಪದ ಮೂಲಕ ಆ ಆತ್ಮಗಳಿಗೆ ಅಕಲ್ಯಾಣವಾಗದಂತೆ ಏನು ಮಾಡಬೇಕಾಗಿದೆ. ಇದಕ್ಕಾಗಿ ಒಂದಲ್ಲ ಒಂದು ಯುಕ್ತಿಯನ್ನು ರಚಿಸಬೇಕಾಗಿದೆ. ವಾತಾವರಣವನ್ನೂ ಶಕ್ತಿಶಾಲಿಯನ್ನಾಗಿ ಮಾಡುವುದಕ್ಕಾಗಿ ಈಗ ಯಾವುದಾದರೂ ಪ್ಲಾನ್ ಬೇಕಾಗಿದೆ. ಈಗ ಒಂದಾಗಿದೆ ಸಾಮಾನ್ಯ ವಿಘ್ನ, ಮತ್ತೊಂದಾಗಿದೆ ಅನೇಕ ಆತ್ಮಗಳಿಗೆ ಅಕಲ್ಯಾಣವಾಗುತ್ತಿರುವುದು. ಈ ಒಂದು ಅಲೆ ಬೀಸುತ್ತಿದೆ. ಈಗಿನ ಸಮಯದಲ್ಲಿ ಅನೇಕ ಆತ್ಮಗಳು ತಮಗೆ ತಾವೇ ಅಕಲ್ಯಾಣಕ್ಕೆ ನಿಮಿತ್ತರಾಗುವ ಅಲೆ ಇದೆ. ಅವರಿಗಾಗಿ ಪ್ಲಾನ್ ಅನ್ನು ಮಾಡಿರಿ. ಮಹಾರಥಿಗಳು ಸ್ವಲ್ಪವು ಮಾಡುವುದು ಅಥವಾ ಪ್ಲಾನ್‌ಅನ್ನು ಮಾಡುವುದು, ಇದೂ ಸಹಾ ವಾತಾವರಣದಲ್ಲಿ ಹರಡುತ್ತದೆ. ವಾತಾವರಣವನ್ನು ಬದಲಾವಣೆ ಮಾಡಬೇಕಾಗಿದೆ. ವರ್ತಮಾನ ಸಮಯದಲ್ಲಿ 'ವಿಘ್ನವಿನಾಶಕರು' ಎನ್ನುವ ಹೆಸರು ಯಾವುದಿದೆಯೋ ಅದು ತಮ್ಮ ಸಂಕಲ್ಪ, ಮಾತು ಹಾಗೂ ಕರ್ಮದಲ್ಲಿ ಕಾಣುವಂತಹ ಅವಶ್ಯಕತೆ ಇದೆ. ಹೇಗೆ ಬೆಂಕಿಯನ್ನು ಆರಿಸು ವಂತಹವರು ಎಲ್ಲಿ ಬೆಂಕಿ ಹತ್ತಿರುತ್ತದೆಯೋ, ಎಂತಹದ್ದೇ ಕಠಿಣ ಕೆಲಸವಿರಲಿ, ಯೋಜನೆಯನ್ನು ಮಾಡಿ ಆ ಬೆಂಕಿಯನ್ನು ಆರಿಸದೆ ಬಿಡುವುದಿಲ್ಲವೋ, ಆರಿಸಿಯೇ ಆರಿಸುತ್ತಾರೋ, ಅದೇ ರೀತಿಯಲ್ಲಿ ತಾವೂ ಸಹ ವಿಘ್ನವಿನಾಶಕ ರಾಗಿದ್ದೀರಿ. ವಾತಾವರಣವನ್ನು ಹೇಗೆ ಬದಲಾವಣೆ ಮಾಡುತ್ತೀರಿ?

ಸಂಕಲ್ಪವನ್ನು ಮಾಡುತ್ತೀರ, ಆಗಲೇ ವಾಯುಮಂಡಲವು ಪರಿವರ್ತನೆಯಾಗುತ್ತದೆ. 'ವಿಘ್ನಗಳಂತೂ ಆದಿಯಿಂದಲೂ ಬರುತ್ತಿದೆ, ಈ ವಿಘ್ನಗಳಂತೂ ಬೀಳಲೇ ಬೇಕಾಗಿದೆ' ಎನ್ನುವುದಾಗಿ ಹಗುರವಾಗಿ ತೆಗೆದುಕೊಳ್ಳಬೇಡಿರಿ. ಮರವಂತೂ ಶಿಥಿಲವಾಗಲೇಬೇಕು. ವಿಘ್ನ ಬಿದ್ದಿರುವುದನ್ನು ಸಮಾಪ್ತಿ ಮಾಡಿ. ಹೇಗೆ ಯಾವುದಾದರೂ ಸ್ಥೂಲ ನಷ್ಟವಾಗುತ್ತಿರುವುದನ್ನು ನೋಡುತ್ತಾ ಹಾಗೇ ಬಿಡುವುದಿಲ್ಲವೋ, ಆ ನಷ್ಟವನ್ನು ತಪ್ಪಿಸಲು ದೂರದಿಂದಲೇ ಓಡುತ್ತಿರೋ, ಸ್ವತಃವಾಗಿ ಅದನ್ನು ರಕ್ಷಿಸಬೇಕು ಎನ್ನುವ ಸಂಕಲ್ಪವು ಬರುತ್ತದೆಯೋ, ಇದಂತೂ ಆಗುತ್ತಲೆ ಇರುತ್ತದೆ ಎಂಬ ರೀತಿ ಇರಬಾರದು. ಇದು ಡ್ರಾಮಾ ಆಗಿದೆ. ಪ್ರತಿಯೊಬ್ಬರ ಪಾತ್ರವು ಅವರವರದೇ ಆಗಿದೆ ಎಂಬುದಾಗಿ ಏರುಪೇರಿನಲ್ಲಿ ಬರುವುದಿಲ್ಲ, ಆದರೆ ನಾವು ಸುರಕ್ಷೆ ಮಾಡುವವರು ಮತ್ತು ದಯೆ ತೋರಿಸುವವರಾಗಿದ್ದೇವೆ ಎಂಬ ಭಾವನೆಯಿಂದ ಯೋಚಿಸಬೇಕಾಗಿದೆ. 'ವಿಘ್ನವಿನಾಶಕ' ರಾಗಿದ್ದೇವೆ ಎಂಬ ಲಕ್ಷ್ಯವನ್ನು ಇಟ್ಟುಕೊಳ್ಳಬೇಕಾಗಿದೆ. ಯಾವ ಮಾತಿನ ಬಗ್ಗೆ ಲಕ್ಷ್ಯವನ್ನು ಇಟ್ಟುಕೊಳ್ಳುತ್ತೀರೋ ಆ ರೀತಿ ನಿಧಾನ ನಿಧಾನವಾಗಿ ಆಗಿಬಿಡುತ್ತೀರಿ. ಕೇವಲ ಲಕ್ಷ್ಯ ಮತ್ತು ಗಮನ ಇಡಬೇಕಿದೆ. ಮಹಾರಥಿಗಳು ಕೇವಲ ಸ್ವಯಂಗಾಗಿ ಸರ್ವ ವಿಧಿಗಳನ್ನು ಸರ್ವ ಶಕ್ತಿಗಳನ್ನು ಉಪಯೋಗಿಸುವುದಿಲ್ಲ ಎಂಬ ಈ ಯೋಚನೆ ಈಗ ನಡೆಯುತ್ತದೆಯೋ ಇಲ್ಲವೋ? ನಡೆಯಬೇಕಾಗಿದೆ. ಇವರಿಂದ ದೂರವಾಗಬಾರದು. ದೂರವಾದರೆ ಸ್ವಯಂಗಾಗೇ ರಾಜ ಆಗುತ್ತಿರಾ, ವಿಶ್ವಮಹಾರಾಜ ಆಗುವುದಿಲ್ಲ. ವಿಶ್ವಕಲ್ಯಾಣದ ಭಾವನೆಯನ್ನು ಇಟ್ಟುಕೊಳ್ಳು ವುದರಿಂದ 'ವಿಶ್ವಮಹಾರಾಜರು' ಆಗುತ್ತೀರ. **(10–06–1977)**

ಸದಾ ಸಾಕ್ಷಿತನದ ಸ್ಥಾನದಲ್ಲಿ ಸ್ಥಿತರಾಗಿ ತಮ್ಮ ಮತ್ತು ಅನ್ಯರ ಪಾತ್ರವನ್ನು ನೋಡುತ್ತೀರಾ? ಡ್ರಾಮಾದ ಯಾವುದೇ ದೃಶ್ಯವನ್ನು, ಸೀಟ್‌ನಲ್ಲಿ ಸೆಟ್ ಆಗಿ ನೋಡಿದಾಗ ಮಜಾ ಉಂಟಾಗುತ್ತದೆ, ಸೀಟ್ ಇಲ್ಲದೆ ಯಾವುದೇ ದೃಶ್ಯವನ್ನು ನೋಡಲು ಸಾಧ್ಯವಿಲ್ಲ. ಆದ್ದರಿಂದ ಸಾಕ್ಷಿತನದ ಸ್ಥಾನದಲ್ಲಿ ಸದಾ ಸ್ಥಿತರಾಗಿರುತ್ತೀರಾ? ಈ ಬೇಹದ್ದಿನ ಡ್ರಾಮಾವು ಸದಾ ನಡೆಯುತ್ತಿರುತ್ತದೆ. ಇದು 2–3 ಘಂಟೆಗಳದ್ದು ಅಲ್ಲ, ಅವಿನಾಶಿಯಾಗಿದೆ. ಆದ್ದರಿಂದ ಸದಾ ನೋಡಲು ಸೀಟ್ ಸಹ ಸದಾ ಬೇಕಾಗಿದೆ. ಎರಡು ಘಂಟೆಗಳು ಮಾತ್ರ ಸೀಟ್‌ನಲ್ಲಿ ಕುಳಿತು ನಂತರ ಕೆಳಗೆ ಇಳಿದು ಬಿಡುವುದಲ್ಲ. ಯಾರು ಸದಾ ಸಾಕ್ಷಿಯಾಗಿ ನೋಡುತ್ತಾರೋ ಅವರು **'ಕೆಲವೊಮ್ಮೆ ಗೆಲವು, ಕೆಲವೊಮ್ಮೆ ಸೋಲು'** ಈ ದೃಶ್ಯವನ್ನು ನೋಡಿದರೂ ಏರುಪೇರು ಆಗುವುದಿಲ್ಲ. ಡ್ರಾಮಾವು ನೆನಪಿದ್ದರೆ ಸದಾ ಏಕರಸವಾಗಿರುವಿರಿ. ಡ್ರಾಮಾವನ್ನು ಮರೆತರೆ ಏರುಪೇರಾಗುತ್ತೀರಿ. ಒಂದುವೇಳೆ ಡ್ರಾಮಾದ ನೆನಪು ಆಗಾಗ ಬಂದರೆ ರಾಜ್ಯವನ್ನೂ ಸಹ ಆಗಾಗ ಮಾಡುತ್ತೀರಿ. ಒಂದುವೇಳೆ ಸಾಕ್ಷಿ ಸ್ಥಿತಿ ಆಗಾಗ ಇದ್ದರೆ ಸ್ವರ್ಗದಲ್ಲಿ ಕೆಲವೊಮ್ಮೆ ಮಾತ್ರ ಜೊತೆಯಲ್ಲಿ ಇರುತ್ತೀರಿ. ಜ್ಞಾನ ಸ್ವರೂಪರಂತೂ ಆಗಿದ್ದೀರಲ್ಲವೇ? ಎಲ್ಲವನ್ನೂ ತಿಳಿದುಕೊಂಡಿದ್ದೀರಿ, ಆದರೆ ತಿಳಿದುಕೊಂಡೂ ಸಾಕ್ಷಿತನದ ಸ್ಥಿತಿಯಲ್ಲಿ ಇಲ್ಲದಿರುವ ಕಾರಣ ಗಮನದಲ್ಲಿ ಹುಡುಗಾಟಿಕೆ, ಸ್ವಚಿಂತನೆಗೆ ಬದಲಾಗಿ ತಮ್ಮ ವ್ಯರ್ಥವಾದ ಮಾತಿನಲ್ಲಿ ಸ್ವಚಿಂತನೆಯನ್ನು ಕಳೆದುಬಿಡುತ್ತೀರಿ. ಸ್ವಚಿಂತನೆಯಲ್ಲಿ ಇಲ್ಲದೆ ಇರುವಂತಹವರು ಸಾಕ್ಷಿಯಲ್ಲಿ ಇರಲು ಸಾಧ್ಯವಿಲ್ಲ. ಪರಚಿಂತನೆಯನ್ನು ಸಮಾಪ್ತಿ ಮಾಡುವ ಆಧಾರ ಯಾವುದಾಗಿದೆ? ಒಂದುವೇಳೆ ಪ್ರತಿಯೊಬ್ಬ ಆತ್ಮದ ಬಗ್ಗೆ ಶುಭಚಿಂತಕರಾಗಿದ್ದರೆ ಎಂದಿಗೂ ಪರಚಿಂತನೆಯನ್ನು ಮಾಡುವುದಿಲ್ಲ. ಆದ್ದರಿಂದ ಸದಾ ಶುಭಚಿಂತನೆ ಮತ್ತು ಶುಭಚಿಂತಕರಾಗಿದ್ದಾಗ ಸದಾ ಸಾಕ್ಷಿಯಾಗಿ ಇರುತ್ತೀರಿ. ಸಾಕ್ಷಿ ಎಂದರೆ ಈಗಲೂ ಜೊತೆಯಲ್ಲಿರುವುದು ಮತ್ತು ಭವಿಷ್ಯದಲ್ಲಿಯೂ ಸಹ ಜೊತೆಗಾರರು. **(14–06–1977)**

ಸದಾ ತಮ್ಮನ್ನು ನಿಶ್ಚಯ ಬುದ್ಧಿ ನಿಶ್ಚಿಂತ ಆತ್ಮ ಎಂದು ಅನುಭವ ಮಾಡುತ್ತೀರ? ಯಾರು ನಿಶ್ಚಯ ಬುದ್ಧಿಯುಳ್ಳವರಾಗುತ್ತಾರೋ ಅವರು ನಿಶ್ಚಿಂತರಾಗಿರುತ್ತಾರೆ. ಯಾವುದೇ ಪ್ರಕಾರದ ಚಿಂತನೆ ಮತ್ತು ಚಿಂತೆಗಳು ಇರುವುದಿಲ್ಲ. ಏನು ಆಯಿತು, ಏಕೆ ಆಯಿತು, ಈ ರೀತಿ ಆಗುವುದಲ್ಲ..... ಎಂದು ಹೇಳುವುದು ವ್ಯರ್ಥ ಚಿಂತನೆಯಾಗಿದೆ. ನಿಶ್ಚಯ ಬುದ್ಧಿ, ನಿಶ್ಚಿಂತರು ವ್ಯರ್ಥ ಚಿಂತನೆ ಮಾಡುವುದಿಲ್ಲ. ಸದಾ ಸ್ವಚಿಂತನೆಯಲ್ಲಿ ಇರುವಂತಹವರು, ಸ್ವಸ್ಥಿತಿಯಲ್ಲಿ ಇರುವುದರಿಂದ ಪರಿಸ್ಥಿತಿಯ ಮೇಲೆ ವಿಜಯವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೆ. ಬೇರೆಯವರಿಂದ ಬಂದಂತಹ ಪರಿಸ್ಥಿತಿಗಳನ್ನು ಏಕೆ ಸ್ವೀಕಾರ ಮಾಡುತ್ತೀರಿ? ಪರಿಸ್ಥಿತಿಗಳನ್ನು ತಿರಸ್ಕರಿಸಿದಾಗ ಸದಾ ಸ್ವಚಿಂತನೆಯಲ್ಲಿ ಇರುತ್ತೀರಿ ಮತ್ತು ಯಾರು ಸ್ವಸ್ಥಿತಿಯಲ್ಲಿ ಸ್ಥಿತರಾಗುತ್ತಾರೋ ಅವರು ಸದಾ ಸುಖದ ಸಾಗರದಲ್ಲಿ ಸಮಾವೇಶರಾಗಿ ಇರುತ್ತಾರೆ. **(16–06–1977)**

ಯಾವುದೇ ರೀತಿಯ ಪರೀಕ್ಷೆಗಳು ಬಂದಾಗ ಹೆದರಬೇಡಿ. 'ಹೀಗೆ ಏಕೆ ಆಯಿತು' ಎನ್ನುವ ಪ್ರಶ್ನಾರ್ಥಕದಲ್ಲಿ ಬರಬೇಡಿ. ಈ ರೀತಿ ಯೋಚಿಸುವುದರಲ್ಲಿ ಸಮಯವನ್ನು ವ್ಯರ್ಥಮಾಡಬೇಡಿ. ಪ್ರಶ್ನಾರ್ಥಕ ಚಿಹ್ನೆ ಸಮಾಪ್ತಿ ಮಾಡಿ ಪೂರ್ಣ ವಿರಾಮ ಹಾಕಿದಾಗ ತರಗತಿಯು ಬದಲಾಗುತ್ತದೆ

ಅಂದರೆ ಪರೀಕ್ಷೆಯಲ್ಲಿ ಪಾಸಾಗುತೀರಿ. ಪೂರ್ಣ ವಿರಾಮ ಹಾಕುವಂತಹವರು ಪೂರ್ಣ ರೀತಿಯಲ್ಲಿ ಪಾಸಾಗುತ್ತಾರೆ ಏಕೆಂದರೆ ಪೂರ್ಣ ವಿರಾಮವಾಗಿದೆ ಬಿಂದು ಸ್ಥಿತಿ. **(22–06–1977)**

ವರ್ತಮಾನ ಸಮಯದಲ್ಲಿ ವಿಚಾರಗಳು ಯಾವ ರೀತಿಯದಾಗಿದೆ? ಹೇಗೆ ಪ್ರಾರಂಭದಲ್ಲಿ ಮಹಾರಥಿಗಳ ಮನಸ್ಸಿನಲ್ಲಿ ತಮ್ಮ ಜೊತೆಗಾರರನ್ನು ಅಪವಿತ್ರತೆಯಿಂದ ಪವಿತ್ರರನ್ನಾಗಿ ಮಾಡುವಂತಹ ಉತ್ಸುಕತೆ ಇತ್ತೋ, ಮೊದಲಿನ ಆ ಉತ್ಸುಕತೆ ನೆನಪಿದೆಯೇ? ಯಾವ ರೀತಿ ಲಗನ್ ಇತ್ತು? ಎಲ್ಲರನ್ನೂ ಬಿಡಿಸುವಂತಹ ಲಗನ್ ಇತ್ತು, ಶಕ್ತಿಗಳನ್ನು ತುಂಬುವಂತಹ ಲಗನ್ ಇತ್ತು. ಪ್ರಾರಂಭದಲ್ಲಿ ನಮ್ಮ ಸಹೋದರರನ್ನು ಮುಕ್ತಗೊಳಿಸಬೇಕು, ರಕ್ಷಿಸಬೇಕು ಎನ್ನುವ ಉತ್ಸುಕತೆ ಇತ್ತು. ಈಗ ಇಂತಹ ಅಲೆಯು ಇದೆಯೆ? ನಡೆಯುತ್ತಾ ನಡೆಯುತ್ತಾ ಬಲಹೀನರಾಗುವಂತಹ ಅಥವಾ ಬಂಧನದಲ್ಲಿರುವ ಹೊಸ ಆತ್ಮಗಳನ್ನು ಬಂಧನ ಮುಕ್ತರನ್ನಾಗಿ ಮಾಡುವ ಉತ್ಸುಕತೆ ಇದೆಯೆ? ಅಥವಾ ಡ್ರಾಮಾ ಎಂದು ತಿಳಿದು ಬಿಟ್ಟುಬಿಡುವಿರೇ? ವರ್ತಮಾನ ಸಮಯದಲ್ಲಿ ತಾವು ಆತ್ಮಗಳ ಪಾತ್ರ ಯಾವುದಾಗಿದೆ? ವರದಾನಿಯ, ಮಹಾದಾನಿಯ, ಕಲ್ಯಾಣಕಾರಿಯ ಪಾತ್ರ. ಡ್ರಾಮಾ ಅಂತೂ ಇದ್ದೇ ಇದೆ, ಆದರೆ ಡ್ರಾಮಾದಲ್ಲಿ ತಮ್ಮ ಪಾತ್ರ ಯಾವುದಾಗಿದೆ? ಅಂದಾಗ ಈ ಅಲೆಯನ್ನು ಅವಶ್ಯಕವಾಗಿ ಹರಡಬೇಕಾಗಿದೆ. ಹೇಗೆ ಬೆಂಕಿಯನ್ನು ಆರಿಸುವ ದಳದವರು ಬೆಂಕಿ ಹತ್ತಿಕೊಂಡಿದ್ದಾಗ ಅದನ್ನು ಆರಿಸುವ ಜೋಶ್‌ನಲ್ಲಿ ಇರುತ್ತಾರೆ, ಅವರನ್ನು ತಡೆಯಲು ಸಾಧ್ಯವಾಗುವುದಿಲ್ಲ, ಆ ರೀತಿಯ ಅಲೆಗಳು ಇರಬೇಕಾಗಿದೆ. ತಮ್ಮ ಅಲೆಗಳ ಮುಖಾಂತರ ಅವರ ರಕ್ಷಣೆ ಆಗಬೇಕು. ಒಂದುವೇಳೆ ತಾವು ಡ್ರಾಮಾ ಎಂದು ಬಿಟ್ಟುಬಿಟ್ಟರೆ ಅಥವಾ ರಾಜಧಾನಿ ತಯಾರಾಗುತ್ತಿದೆ ಎಂದು ಅಂದುಕೊಂಡರೆ ಅವರ ಕಲ್ಯಾಣವು ಹೇಗೆ ಆಗುತ್ತದೆ? ಜ್ಞಾನ ಸ್ವರೂಪರಾಗಿರುವ ಕಾರಣ ಇದು ಡ್ರಾಮಾ ಎನ್ನುವ ಜ್ಞಾನವಿದೆ ಆದರೆ ಡ್ರಾಮಾದಲ್ಲಿ ತಮ್ಮ ಕರ್ತವ್ಯವೇನಾಗಿದೆ? ಹಾಗಾದರೆ ಮಹಾರಥಿಗಳ ಅಲೆ ಏನಾಗಬೇಕಾಗಿದೆ? ಏನೇ ಕೇಳಿಸಿಕೊಂಡರೂ **'ಶುಭಚಿಂತನೆ'** ನಡೆಯಬೇಕು, ಪರಚಿಂತನೆ ಅಲ್ಲ. ತಮ್ಮ ಶುಭ ಚಿಂತನೆಗಳು ಅವರ ಬುದ್ಧಿಯನ್ನು ಶೀತಲ ಮಾಡುತ್ತದೆ. ತಾವು ಬಿಟ್ಟು ಬಿಟ್ಟರೆ ಅವರು ಹೋಗಿ ಬಿಡುತ್ತಾರೆ. ಏಕೆಂದರೆ ಪ್ರತ್ಯಕ್ಷದಲ್ಲಿ ನಿಮಿತ್ತರಾದ ಶಕ್ತಿಯರ ಪಾತ್ರವಿದೆ. ತಂದೆಯಂತೂ ಬೆನ್ನೆಲುಬು ಆಗಿದ್ದಾರೆ. ಶಕ್ತಿಯರು ಯಾವ ಸ್ಥಿತಿಯಲ್ಲಿ ಇರಬೇಕಾಗಿದೆ? ಹೇಗೆ ದೇವಿಯರ ಚಿತ್ರದಲ್ಲಿ ಮುಖದಲ್ಲಿ ಮಾತೃಭಾವನೆ ಮತ್ತು ಕೈಯಲ್ಲಿ ಶಸ್ತ್ರವನ್ನು ಧರಿಸಿರುವುದು ಅಂದರೆ ಅಸುರರನ್ನು ಸಂಹಾರ ಮಾಡುತ್ತಿರುವ ಎರಡು ವಿಶೇಷತೆಗಳನ್ನು ತೋರಿಸುತ್ತಾರೆ. ಮಾತೃಭಾವನೆ ಎಂದರೆ ದಯಾಭಾವನೆ ಮತ್ತು ಸಂಹಾರದ ಭಾವನೆಯು ಸಹ ಇರುವುದು. ಸಂಹಾರ ಮಾಡುವುದು ಎಂದರೆ ಅವರಲ್ಲಿನ ಅಸುರೀ ಸಂಸ್ಕಾರಗಳನ್ನು ವಿನಾಶ ಮಾಡುವಂತಹ ಯೋಜನೆಯು ಇರುವುದು ಮತ್ತು ದಯೆಯೂ ಸಹ ಇರುವುದು. ಪ್ರೀತಿ ಮತ್ತು ಕಾನೂನಿನ (Loveful and Lawful) ಸಮತೋಲನವಿರಲಿ, ಎರಡೂ ಜೊತೆ ಜೊತೆಯಲ್ಲಿರಲಿ. ಯಾವುದೆಲ್ಲ ಬಲಹೀನತೆಯ ಅಲೆಗಳಿವೆಯೋ, ವಿನಾಶದ ಕಾರಣದಿಂದ ಪ್ರತ್ಯಕ್ಷವಾಯಿತು ಎಂದಲ್ಲ, ಬಲಹೀನತೆಗಳು ಬಹಳ ಸಮಯದಿಂದ ಇರುವಂತಹದು, ಆದರೆ ಅದನ್ನು ಈಗ ಮುಚ್ಚಿಡಲು ಸಾಧ್ಯವಿಲ್ಲ. ಮೊದಲು ಆಂತರಿಕದಲ್ಲೇ ಗುಪ್ತವಾಗಿ ಬಲಹೀನತೆಗಳು ನಡೆಯುತ್ತಿರುತ್ತದೆ, ಈಗ ಸಮಯವು ಹತ್ತಿರ ಬರುತ್ತಿರುವ ಕಾರಣದಿಂದ ಬಲಹೀನತೆಗಳು ಮುಚ್ಚಿಡಲಾಗುವುದಿಲ್ಲ. ರಾಜ ಆಗುವವರು, ಪ್ರಜೆ ಪದವಿಯವರು, ಕಡಿಮೆ ಪದವಿಯನ್ನು ಪಡೆದುಕೊಳ್ಳುವವರು, ಸೇವಾಧಾರಿ ಆಗುವಂತಹವರು, ಎಲ್ಲರೂ ಈಗ ಪ್ರತ್ಯಕ್ಷರಾಗುತ್ತಾರೆ. ಅಂತ್ಯದಲ್ಲಿ ಯಾವ ಸಾಕ್ಷಾತ್ಕಾರ ಎಂದು ಹೇಳಲಾಗಿದೆಯೋ ಅದು ಹೇಗೆ ಆಗುತ್ತದೆ? ಈ ಸಾಕ್ಷಾತ್ಕಾರ ಮಾಡಿಸಲಾಗುತ್ತಿದೆ. ಆದರೆ ಬಲಹೀನತೆಗಳು ಇರಲಿಲ್ಲ, ಈಗ ಬಂದಿತು ಎಂದಲ್ಲ. ಆದರೆ ಈಗ ಪ್ರತ್ಯಕ್ಷ ರೂಪದಲ್ಲಿ ಪ್ರಕಟವಾಗುವ ಅವಕಾಶ ಸಿಕ್ಕಿದೆ. ಹೇಗೆ ಸಮಾಪ್ತಿಯ ಸಮಯದಲ್ಲಿ ಎಲ್ಲಾ ಕಾಯಿಲೆಗಳು ಹೊರಗೆ ಬರುತ್ತದೆಯೋ ಹಾಗೆಯೇ ಸಮಾಪ್ತಿಯ ಸಮಯವಾಗಿರುವ ಕಾರಣ ಪ್ರತಿಯೊಬ್ಬರ ಭಿನ್ನ ಭಿನ್ನ ಬಲಹೀನತೆಗಳು ಪ್ರತ್ಯಕ್ಷವಾಗುತ್ತದೆ. ಈಗಂತೂ ಒಂದು ಅಲೆಯನ್ನು ನೋಡಿದಿರಿ ಮತ್ತು ಇನ್ನೂ ಅನೇಕ ಅಲೆಗಳನ್ನು ನೋಡುತ್ತೀರಿ. ಅತಿಯಲ್ಲಿ ಹೋಗುವುದು ಅವಶ್ಯಕವಾಗಿದೆ. ಅತಿಯಾದಾಗಲೇ ಅಂತ್ಯವಾಗುತ್ತದೆ. ಯಾವುದೆಲ್ಲಾ ಒಳಗಿರುವ ಬಲಹೀನತೆಗಳು ಒಳಗಡೆ ಮುಚ್ಚಿಟ್ಟುಕೊಂಡಿರುವುದಿಲ್ಲ, ಒಂದಲ್ಲಾ ಒಂದು ರೂಪದಲ್ಲಿ ಪ್ರತ್ಯಕ್ಷ ರೂಪದಲ್ಲಿ ಬರುತ್ತದೆ. ಆದರೆ ಇವರೆಲ್ಲರ ಕಲ್ಯಾಣವಾಗಲಿ ಎನ್ನುವ ಭಾವನೆ ತಮ್ಮಲ್ಲಿ ಇರುತ್ತದೆ. ತಾವು ವರದಾನಿಗಳಾಗಿದ್ದೀರಿ ಆದ್ದರಿಂದ ತಮ್ಮ ಪ್ರತಿ ಸಂಕಲ್ಪ ಪ್ರತಿ ಆತ್ಮದ ಬಗ್ಗೆ ಕಲ್ಯಾಣಕಾರಿಯಾಗಿರಬೇಕು. ಅಲೆಗಳಂತೂ ಇನ್ನಷ್ಟು ಬರುತ್ತಲೇ ಇರುತ್ತದೆ. ಒಂದು ಮುಗಿದರೆ ಎರಡನೆಯದು ಬರುತ್ತದೆ. ಇವೆಲ್ಲವೂ ಮನೋರಂಜನೆಯ ದೃಶ್ಯಗಳಾಗಿವೆ. ಮತ್ತು ಪದವಿಯೂ ಸ್ಪಷ್ಟವಾಗುತ್ತಾ ಹೋಗುತ್ತದೆ ಮತ್ತು ಹೋಗುತ್ತಾ ಇರುತ್ತದೆ. ಆಶ್ಚರ್ಯಕರವಾದ ದೃಶ್ಯವಾಗ ಬೇಕಾಗಿದೆ. ಒಂದು ಕಡೆ ಹೊಸ ಹೊಸಬರು ಓಟದಲ್ಲಿ ಮುಂದಿರುವುದು ಕಾಣುತ್ತದೆ

ಮತ್ತೊಂದು ಕಡೆ ಸುಸ್ತಾಗುವವರು, ನಿಲ್ಲುವವರು ಸಹ ಪ್ರಸಿದ್ಧರಾಗುತ್ತಾರೆ. ಮೂರನೆಯದು ಯಾವುದು ಬಹಳ ಸಮಯದಿಂದ ಬಲಹೀನತೆಗಳು ಒಳಗೆ ಇವೆಯೋ ಅವೂ ಸಹ ಪ್ರತ್ಯಕ್ಷವಾಗುತ್ತದೆ. ನಥಿಂಗ್ ನ್ಯೂ ಆಗಿದೆ. ಆದರೆ ದಯಾ ದೃಷ್ಟಿ ಮತ್ತು ಭಾವನೆ ಎರಡೂ ಜೊತೆಯಲ್ಲಿರಬೇಕು. **(25–06–1977)**

ತಮಗೆ ಇರುವಂತಹ ದೊಡ್ಡ ಪರಿವಾರ ಇನ್ಯಾರಿಗೆ ಇದೆ? ಆದ್ದರಿಂದ ಎಲ್ಲಾ ಆತ್ಮಗಳನ್ನು ತಮ್ಮ ಮುಂದೆ ಇಟ್ಟುಕೊಂಡು ಸ್ವಯಂ ಅನ್ನು ಬೇಹದ್ದಿನ ಸೇವೆಗಾಗಿ ನಿಮಿತ್ತ ಎಂದು ತಿಳಿದುಕೊಂಡು ತಮ್ಮ ಸಮಯ ಮತ್ತು ಶಕ್ತಿಗಳನ್ನು ಕಾರ್ಯದಲ್ಲಿ ಉಪಯೋಗಿಸುತ್ತೀರಾ? ಮಾಸ್ಟರ್ ರಚೆಯಿತಾ ಎಂಬ ಸ್ಥಿತಿಯು ಸ್ಮೃತಿಯಲ್ಲಿರುತ್ತದೆಯೇ ಅಥವಾ ತಮ್ಮ ಬಗ್ಗೆಯೇ ಸಂಪಾದನೆ ಮಾಡಿಕೊಂಡಿರಿ ಮತ್ತು ತಿಂದಿರಿ, ಅಥವಾ ಸ್ವಲ್ಪ ತಿನ್ನುವುದು, ಸ್ವಲ್ಪ ಕಳೆದುಕೊಳ್ಳುವುದು ಈ ರೀತಿ ಹುಡುಗಾಟಿಕೆಯಲ್ಲಿ ನಡೆಯುತ್ತಿದ್ದೀರಾ? ಆದ್ದರಿಂದ ತಮ್ಮ ಖಜಾನೆಗಳ ಬಡ್ಜೆಟ್ (ಯೋಜನೆ) ಮಾಡಿಕೊಳ್ಳಿ. ಇಷ್ಟು ದೊಡ ಜವಾಬ್ದಾರಿಯ ಕಾರ್ಯವನ್ನು ತೆಗೆದುಕೊಳ್ಳುವ ಆತ್ಮಗಳು ಒಂದುವೇಳೆ ಜಮಾ ಆಗಿಲ್ಲದಿದ್ದರೆ ಕಾರ್ಯವನ್ನು ಹೇಗೆ ಸಫಲ ಮಾಡಿಕೊಳ್ಳುತ್ತೀರಿ. ಡ್ರಾಮಾನುಸಾರ ಆಗಿಯೇ ಆಗಬೇಕು ಎಂದು ತಿಳಿಯುವುದು ಜ್ಞಾನದ ಮಾತಾಗಿದೆ. ಆದರೆ ಡ್ರಾಮಾದಲ್ಲಿ ನಾನೇ ನಿಮಿತ್ತ ಆಗಿ ಸೇವೆಯ ಮೂಲಕ ಶ್ರೇಷ್ಟ ಪ್ರಾಪ್ತಿ ಮಾಡಿಕೊಳ್ಳಬೇಕು ಎಂಬ ಲಕ್ಷ್ಯವನ್ನು ಇಟ್ಟುಕೊಂಡು ಎಲ್ಲಾ ಖಜಾನೆಗಳ ಯೋಜನೆಯನ್ನು (ಬಡ್ಜೆಟ್) ಮಾಡಿಕೊಳ್ಳಿ. **(28–06–1977)**

ಪರಿಶ್ರಮವನ್ನು ತುಂಬಾ ಪಡುತ್ತಾರೆ, ತ್ಯಾಗವನ್ನೂ ಮಾಡಿದ್ದಾರೆ, ಸಹನೆಯನ್ನೂ ಬಹಳ ಮಾಡಿದ್ದಾರೆ ಎಂಬುದನ್ನು ಬಾಪ್‌ದಾದಾರವರು ತಿಳಿದುಕೊಂಡಿದ್ದಾರೆ. ಆದರೆ ಯಾರ ಜೊತೆಯಲ್ಲಿ ಸ್ನೇಹವಿರುತ್ತದೋ ಅವರ ಸಣ್ಣ ಬಲಹೀನತೆಯನ್ನೂ ಸಹ ನೋಡಲಾಗುದಿಲ್ಲ. ಸದಾ ಶ್ರೇಷ್ಠರನ್ನಾಗಿ ಮಾಡುವಂತಹ ಶುಭ ಭಾವನೆಯು ಇರುತ್ತದೆ. ಆದ್ದರಿಂದ ಇವೆಲ್ಲವನ್ನು ನೋಡುತ್ತಿದ್ದರೂ, ಕೇಳಿಸಿಕೊಳ್ಳುತ್ತಿದ್ದರೂ ಸಂಪನ್ನರನ್ನಾಗಿ ಮಾಡುವುದಕ್ಕಾಗಿ ಸೂಚನೆಯನ್ನು ಕೊಡುತ್ತಿರುತ್ತಾರೆ. ಬಾಪ್‌ದಾದಾರವರು ಸದಾ ಮಕ್ಕಳ ಜೊತೆ ಪ್ರತಿ ಹೆಜ್ಜೆಯಲ್ಲಿ ಸಹಯೋಗಿ ಆಗಿದ್ದಾರೆ ಮತ್ತು ಅಂತ್ಯದವರೆಗೂ ಇರುತ್ತಾರೆ. ಬಾಬಾರವರಿಗೆ ಯಾರ ಬಗ್ಗೆಯೂ ತಿರಸ್ಕಾರ ಭಾವನೆ ಇರುವುದಿಲ್ಲ. ಸದಾ ಅಪಕಾರಿಗಳಿಗೂ 'ಶುಭಚಿಂತಕ' ರಾಗಿದ್ದಾರೆ. ಆದ್ದರಿಂದ ಸದಾ ಸಹಯೋಗವನ್ನು ತೆಗೆದುಕೊಳ್ಳುತ್ತಾ ನಡೆಯುತ್ತಾ ಹೋಗಿರಿ. ಅಮೃತವೇಳೆಯ ಮಹತ್ವವನ್ನು ತಿಳಿದು ಬಾಬಾರವರಿಂದ ವರದಾನವನ್ನು ತೆಗೆದುಕೊಳ್ಳುತ್ತಾ ಇರಿ. ಸೀಜನ್‌ನ ಸಮಾಪ್ತಿ ಎಂದರೆ ಸಹಯೋಗದ ಸಮಾಪ್ತಿ ಆಯಿತು ಎಂದಲ್ಲ. ಪ್ರತಿಯೊಂದು ಮಕ್ಕಳ ಜೊತೆಯಲ್ಲಿ ಸರ್ವ ಸ್ವರೂಪದಿಂದಲೂ, ಸರ್ವ ಸಂಬಂಧದಿಂದಲೂ 'ಬಾಪ್‌ದಾದಾರವರ ಕೈ ಮತ್ತು ಜೊತೆ ಸದಾ ಇರುತ್ತದೆ'. ಈಗ ಡ್ರಾಮಾನುಸಾರ ಸಮಯವು ಸಿಕ್ಕಿದೆ. ಇದನ್ನು ತಮ್ಮ ಭಾಗ್ಯವೆಂದು ತಿಳಿದು ಸಮಯದ ಲಾಭವನ್ನು ತೆಗೆದುಕೊಳ್ಳಿ. ವಿನಾಶದ ಗಡಿಯಾದ ಮುಳ್ಳು 'ತಾವು' ಆಗಿದ್ದೀರಿ. ತಾವು ಸಂಪನ್ನರಾಗುವುದೇ ಸಮಯದ ಸಂಪನ್ನತೆಯಾಗಿದೆ. ಆದ್ದರಿಂದ ಸದಾ ಸ್ವಚಿಂತನೆ ಸ್ವದರ್ಶನ ಚಕ್ರಧಾರಿಗಳಾಗಿರಿ. ಒಳ್ಳೆಯದು.

ಕೇಳಿಸಿಕೊಳ್ಳುವಂತಹ ಸಾಮರ್ಥ ಎಷ್ಟಿದೆ? ಈ ಸೀಜನ್‌ನಲ್ಲೂ ಸಹ ಎಷ್ಟೊಂದು ಕೇಳಿಸಿಕೊಂಡಿರಬಹುದು? ಈಗ ಶಬ್ದದಿಂದ ದೂರ ಆಗಬೇಕಾಗಿದೆ ಎಂಬ ಡ್ರಾಮಾದ ನಿಶ್ಚಿತತೆಯನ್ನು ಹೇಳುತ್ತಿದ್ದೇನೆ. ಈ ಶರೀರದ ಏರುಪೇರು ಸಹ ನೀವು ಪಡೆದುಕೊಂಡ ಶಿಕ್ಷಣವು ಬಹಳವಾಗಿದೆ ಎಂದು ಹೇಳುತ್ತಿದೆ. ಈಗ ಕೇಳಿಸಿಕೊಂಡು ಸಮಾವೇಶ ಮಾಡಿಕೊಳ್ಳುವ ಅಥವಾ ಸ್ವರೂಪವಾಗುವಂತಹ ಸೀಜನ್ ಆಗಿದೆ. ಕೇಳಿಸಿಕೊಳ್ಳುವಂತಹ ಸಮಯ ಎಷ್ಟು ವರ್ಷಗಳು ನಡೆಯಿತು. ಸಾಕಾರದ ಮೂಲಕ, ರಿವೈಜ್ ಕೋರ್ಸ್‌ನ ಮೂಲಕ ಕೇಳುವಂತಹ ಸಮಯ ಬಹಳಷ್ಟು ನಡೆಯಿತು. ಈಗ ಸ್ವರೂಪದ ಮೂಲಕ ಸೇವೆ ಮಾಡಬೇಕಾಗಿದೆ. ಈಗ ಅಂತಿಮವಾಗಿ ಇದೇ ಸೀಜನ್ ಉಳಿದುಬಿಟ್ಟಿದೆ, ಇದರಲ್ಲೇ ಪ್ರತ್ಯಕ್ಷತೆಯ ನಗಾರಿ ಭಾರಿಸಲ್ಪಡುತ್ತದೆ. ಶಬ್ದವು ನಿಂತುಹೋಗುತ್ತದೆ, ಶಾಂತಿ ನೆಲೆಸುತ್ತದೆ. ಆದರೆ ಶಾಂತಿಯ ಮೂಲಕವೇ ನಗಾರಿಯು ಬಾರಿಸಲ್ಪಡುತ್ತದೆ. ಎಲ್ಲಿಯವರೆಗೆ ಬಾಯಿಂದ ಶಬ್ದವು ಹೆಚ್ಚು ಬರುತ್ತಿರುತ್ತದೆಯೋ ಅಲ್ಲಿಯವರೆಗೆ ಪ್ರತ್ಯಕ್ಷತೆ ಆಗುವುದಿಲ್ಲ. ಯಾವಾಗ ಪ್ರತ್ಯಕ್ಷತೆಯ ನಗಾರಿ ಬಾರಿಸುತ್ತದೋ ಆಗ ಬಾಯಿಯ ನಗಾರಿ ಸಮಾಪ್ತಿಯಾಗುತ್ತದೆ. ಶಾಂತಿಯ ಮೂಲಕ ವಿಜ್ಞಾನದ ಮೇಲೆ ವಿಜಯ ಎಂಬ ಗಾಯನವಿದೆಯೇ ವಿನಹ ವಾಣಿಯ ಮೂಲಕ ಅಲ್ಲ. ಸಮಯದ ಸಮಾಪ್ತಿಯ ಸಂಕೇತಗಳು ಏನಾಗಿದೆ? ಆಟೋಮೆಟಿಕ್ ಆಗಿ ಶಬ್ದದಲ್ಲಿ ಬರುವುದಕ್ಕೆ ಮನಸ್ಸಾಗುವುದಿಲ್ಲ. ಯೋಜನೆಯ ಅನುಸಾರವಾಗಿ ಅಲ್ಲ, ಆದರೆ ಸ್ವಾಭಾವಿಕ ಸ್ಥಿತಿ. ಹೇಗೆ ಸಾಕಾರ ಬಾಬಾರವರನ್ನು ನೋಡಿದಾಗ ಯಾವ ಸಂಪೂರ್ಣತೆಯ ಸಂಕೇತಗಳು ಕಂಡುಬಂದಿತು. ಎರಡು ನಿಮಿಷ ಇದೆ ಅಥವಾ ಒಂದು ನಿಮಿಷ ಇದೆ ಎಂಬುದರ

ಗುರುತು ಈ ಸ್ಥಿತಿಯಿಂದಲೇ ಆಗುತ್ತಾ ಇದೆ. ಸಹಜವಾಗಿ ಹೆಚ್ಚು ಶಬ್ದದಲ್ಲಿ ಬರುವುದರಿಂದ ವೈರಾಗ್ಯವು ಉಂಟಾಗುತ್ತದೆ. ಹೇಗೆ ಈಗ ಬೇಡವೆಂದರೂ ಅಭ್ಯಾಸವು ಶಬ್ದದಲ್ಲಿ ತರುತ್ತದೆ, ಹಾಗೆಯೇ ಆಗ ಬೇಕು ಎಂದರೂ ಶಬ್ದದಿಂದ ದೂರವಾಗುತ್ತೀರಿ. ಸಂದರ್ಭವನ್ನು ನಿಗದಿ ಮಾಡಿಕೊಂಡು ಶಬ್ದದಲ್ಲಿ ಬರುತ್ತೀರಿ. ಯಾವಾಗ ಈ ಬದಲಾವಣೆ ಕಂಡು ಬರುತ್ತದೋ ಆಗ ವಿಜಯದ ನಗಾರಿಯು ಬಾರಿಸುವುದಿದೆ ಎಂದು ತಿಳಿದುಕೊಳ್ಳಿ. ವರ್ತಮಾನ ಸಮಯದಲ್ಲಿ ಬಹಳಮಟ್ಟಿಗೆ ಯಾರನ್ನು ಕೇಳಿದರೂ ಸುಖಕ್ಕಿಂತ, ಶಾಂತಿಯನ್ನು ಹೆಚ್ಚಾಗಿ ಬಯಸುತ್ತಾರೆ. ಅವರು ಒಂದು ಘಳಿಗೆಯ ಶಾಂತಿಯ ಅನುಭವವನ್ನು, ಭಗವಂತನ ಪ್ರಾಪ್ತಿಯಷ್ಟೇ ಶ್ರೇಷ್ಠ ಎಂದು ಭಾವಿಸುತ್ತಾರೆ. ಅಂದಾಗ ಒಂದು ಸೆಕೆಂಡಿನಲ್ಲಿ ಶಾಂತಿಯ ಅನುಭವ ಮಾಡಿಸುವಂತಹವರು, ಸ್ವಯಂ ಶಾಂತ ಸ್ವರೂಪದಲ್ಲಿ ಸ್ಥಿತರಾಗಿರುವಿರಲ್ಲವೇ? ವಿನಾಶ ಯಾವಾಗ ಆಗುತ್ತದೆ? ಇದಕ್ಕೆ ಯಾರು ನಿಮಿತ್ತರಾಗುತ್ತಾರೆ? ಗಡಿಯಾರದ ಮುಳ್ಳು ಯಾವುದಾಗಿರುತ್ತದೆ? ಗಂಟೆಯು ಬಾರಿಸುವುದಕ್ಕೆ ನಿಮಿತ್ತ ಮುಳ್ಳಾಗುತ್ತದೆ ಯಲ್ಲವೇ? ಅಂದಾಗ ವಿನಾಶದ ಗಂಟೆ ಬಾರಿಸುವುದಕ್ಕೆ ನಿಮಿತ್ತವಾದ ಮುಳ್ಳು ಯಾವುದು? **(30–06–1977)**

ಬಾಪ್‌ದಾದಾರವರು, ಎಲ್ಲಾ ಮಕ್ಕಳ ವರ್ತಮಾನ ಸ್ವರೂಪದಲ್ಲಿ ಧಾರಣಾ ಸ್ವರೂಪವನ್ನು ನೋಡುತ್ತಾ ವಿಶೇಷವಾಗಿ ಒಂದು ಮಾತನ್ನು ನೋಡುತ್ತಿದ್ದಾರೆ. ಅದು ಯಾವುದಾಗಿದೆ? ಎಲ್ಲಾ ಮಕ್ಕಳಲ್ಲಿ ಸದಾ ಸಂತುಷ್ಟಮಣಿಗಳಾಗಿರುವವರು ಎಷ್ಟಿದ್ದಾರೆ? 'ಸಂತುಷ್ಟತೆ'ಯು ಮುಖದಲ್ಲಿ ಹೊಳೆಯುವಂತಹ ಎಲ್ಲದಕ್ಕಿಂತಲೂ ವಿಶೇಷವಾದ ಗುಣವಾಗಿದೆ. ಮೂರೂ ಪ್ರಕಾರದ ಸಂತುಷ್ಟತೆಯು ಬೇಕಾಗಿದೆ. ಒಂದು ತಂದೆಯೊಂದಿಗೆ ಸಂತುಷ್ಟತೆ, ಎರಡನೆಯದು ಸದಾ ತಮ್ಮೊಂದಿಗೆ ತಮಗೆ ಸಂತುಷ್ಟತೆ ಮತ್ತು ಮೂರನೆಯದು ಸರ್ವ ಸಂಬಂಧ ಮತ್ತು ಸಂಪರ್ಕದಿಂದ ಸಂತುಷ್ಟತೆ. ಇದರಲ್ಲಿ ಚೈತನ್ಯ ಆತ್ಮಗಳು ಹಾಗೂ ಪ್ರಕೃತಿ ಎರಡೂ ಬರುತವೆ. ಸಂತುಷ್ಟತೆಯ ಸಂಕೇತವಾಗಿ ಪ್ರಸನ್ನತೆಯು ಪ್ರತ್ಯಕ್ಷ ರೂಪದಲ್ಲಿ ಕಂಡು ಬರುತ್ತದೆ. ಸದಾ ಪ್ರಸನ್ನಚಿತ್ತರು. ಈ ಪ್ರಸನ್ನತೆಯ ಆಧಾರದ ಮೇಲೆ ಪ್ರತ್ಯಕ್ಷ ಫಲವಾಗಿ, ಇಂತಹ ಆತ್ಮಗಳ ಪ್ರಶಂಸೆಯು ಸದಾ ಸರ್ವರಿಂದ ಆಗುತ್ತಿರುತ್ತದೆ. ವಿಶೇಷತೆಯೇ ಸಂತುಷ್ಟತೆಯಾಗಿದೆ. ಇದರ ಗುರುತೇ ಪ್ರಸನ್ನತೆ ಆಗಿದೆ, ಇದರ ಪ್ರತ್ಯಕ್ಷ ಫಲ ಪ್ರಶಂಸೆ. ಈಗ ಪ್ರಸನ್ನತೆಯಿಂದಲೇ ಪ್ರಶಂಸೆಯನ್ನು ಪ್ರಾಪ್ತಿ ಮಾಡಿಕೊಳ್ಳಬಲ್ಲಿರಾ ಎಂದು ತಮ್ಮನ್ನು ತಾವು ನೋಡಿಕೊಳ್ಳಿರಿ. ಯಾರು ಸದಾ ಸ್ವಯಂ ಸಂತುಷ್ಟರು ಮತ್ತು ಪ್ರಸನ್ನರಾಗಿರುತ್ತಾರೋ, ಅವರನ್ನು ಪ್ರತಿಯೊಬ್ಬರೂ ಅವಶ್ಯವಾಗಿ ಪ್ರಶಂಸೆ ಮಾಡುತ್ತಾರೆ. ನಡೆಯುತ್ತಾ–ನಡೆಯುತ್ತಾ ಪುರುಷಾರ್ಥಿ ಜೀವನದಲ್ಲಿ ಸಮಸ್ಯೆಗಳು ಹಾಗೂ ಪರಿಸ್ಥಿತಿಗಳು ಡ್ರಾಮಾ ಅನುಸಾರವಾಗಿ ಬರಲೇ ಬೇಕಾಗಿದೆ. ಜನ್ಮವನ್ನು ಪಡೆದುಕೊಳ್ಳುತ್ತಿದ್ದಂತೆಯೇ ಮುಂದುವರೆಯುವ ಲಕ್ಷ್ಯವನ್ನು ಇಟ್ಟುಕೊಳ್ಳುವುದೆಂದರೆ, ಪರೀಕ್ಷೆಗಳನ್ನು, ಸಮಸ್ಯೆಗಳನ್ನು ಆಹ್ವಾನ ಮಾಡಿದಂತೆ. ತಾವು ಮಾಡಿದಂತಹ ಆಹ್ವಾನವನ್ನು ಮರೆತು ಬಿಡುತ್ತೀರಿ. ಯಾವಾಗ ದಾರಿಯಲ್ಲಿ ನಡೆಯ ಬೇಕಾಗಿದೆಯೋ ಆಗ ದಾರಿಯಲ್ಲಿ ದೃಶ್ಯಗಳು ಇಲ್ಲದೇ ಇರಲು ಸಾಧ್ಯವೇ? ದೃಶ್ಯಗಳನ್ನು ನೋಡುತ್ತಾ ನಿಂತು ಬಿಡುತ್ತೀರಿ. ಈ ಕಾರಣದಿಂದಾಗಿ ಗುರಿಯು ದೂರ ಇರುವಂತೆ ಅನುಭವ ಮಾಡುತ್ತೀರಿ. ದೃಶ್ಯವನ್ನು ನೋಡುತ್ತಾ, ಪಾರು ಮಾಡುತ್ತಾ ಮುನ್ನಡೆಯಬೇಕು. ಆದರೆ ದೃಶ್ಯವನ್ನು ನೋಡಿ, 'ಇದು ಏಕೆ? ಇದು ಏನು, ಇದು ಈ ರೀತಿ ಅಲ್ಲ, ಆ ರೀತಿ ಅಲ್ಲ' ಎಂಬ ಇಂತಹ ಮಾತುಗಳಲ್ಲಿ ನಿಂತು ಬಿಡುತ್ತೀರಿ. ಪ್ರತಿಯೊಂದು ದೃಶ್ಯವನ್ನು ಸರಿ ಪಡಿಸುವುದರಲ್ಲಿ ವ್ಯಸ್ತರಾಗುತ್ತೀರಿ. ಪಾರು ಮಾಡುವುದಕ್ಕೆ ಬದಲಾಗಿ, ಸರಿ ಪಡಿಸುವುದರಲ್ಲಿ ವ್ಯಸ್ತರಾಗಿಬಿಡುವಿರಿ. ಹಾಗಾಗಿ ತಂದೆಯ ನೆನಪಿನ ಸಂಬಂಧವನ್ನು ಸಡಿಲ ಮಾಡಿಕೊಂಡು ಬಿಡುತ್ತೀರಿ. ಈ ಕಾರಣದಿಂದ ಮನೋರಂಜನೆಗೆ ಬದಲಾಗಿ ಮನಸ್ಸನ್ನು ಬಾಡಿಸಿಕೊಂಡು ಬಿಡುವಿರಿ. ವಾಹ್ ದೃಶ್ಯ. 'ವಾಹ್. ವಾಹ್, ಬದಲಾಗಿ, 'ಏಕೆ'? ಎನ್ನುವುದು ಹೆಚ್ಚಾಗುತ್ತದೆ. ಏಕೆ ಎಂದರೆ ಆಶ್ಚರ್ಯಜನಕ. ಇದರಿಂದ ನಡೆಯುತ್ತಾ ನಡೆಯುತ್ತಾ ನಿಂತು ಬಿಡುವಿರಿ. ಸುಸ್ತಾಗುವ ಕಾರಣ, ಆಗಾಗ ತಂದೆಯ ಜೊತೆಯಲ್ಲಿ ಮಧುರ ಮಧರವಾದ ದೂರುಗಳನ್ನು ಕೊಡುತ್ತಾ, ರಾಯಲ್ ರೂಪದಿಂದ ತಂದೆಯ ಜೊತೆಯಲ್ಲೂ ಅಸಂತುಷ್ಟರಾಗುತ್ತೀರಿ. ಸಹಜ ಮಾರ್ಗವೆಂದಿರಿ, ಸಹನೆಯ ಮಾರ್ಗವೆಂದು ಹೇಳಲಿಲ್ಲ ಎಂದು ಈ ಮಾತನ್ನು ಮೊದಲೇ ಏಕೆ ಹೇಳಲಿಲ್ಲ ಎಂದು ಕೆಲವು ಮಕ್ಕಳು ಹೇಳುತ್ತಾರೆ. ಸಹಜ ಮಾರ್ಗಕ್ಕೆ ಬದಲಾಗಿ ಸಹನೆ ಮಾಡಿಕೊಳ್ಳುವ ಮಾರ್ಗವೆಂದು ಅನುಭವ ಮಾಡುತ್ತೀರಿ. ಆದರೆ ಸಹನೆ ಮಾಡಿಕೊಳ್ಳುವುದೇ ಮುಂದುವರೆಯುವುದಾಗಿದೆ. ವಾಸ್ತವವಾಗಿ ಸಹನೆ ಮಾಡಿಕೊಳ್ಳುವಂತಹದ್ದೇನೂ ಇಲ್ಲ, ಆದರೆ ತಮ್ಮ ಬಲಹೀನತೆಯ ಕಾರಣ ಸಹನೆ ಮಾಡಿಕೊಳ್ಳುತ್ತಿರುವಂತೆ ಅನುಭವವಾಗುತ್ತದೆ. ಹೇಗೆ ಸುಡುವುದು ಬೆಂಕಿಯ ಗುಣವಾಗಿದೆ. ಆದರೆ, ಅದರ ಗುಣದ ಜ್ಞಾನ ಇಲ್ಲದ ಕಾರಣ ಅದರಿಂದ ಲಾಭವನ್ನು ಪಡೆಯುವುದಕ್ಕೆ ಬದಲಾಗಿ ನಷ್ಟ ಮಾಡಿಕೊಂಡರೆ, ಸುಖಕ್ಕೆ ಬದಲಾಗಿ ಸಹನೆ ಮಾಡಿಕೊಳ್ಳಬೇಕಾಗುತ್ತದೆ. ಏಕೆಂದರೆ ವಸ್ತುವಿಗೆ ಬದಲಾಗಿ ಸ್ವಯಂ ತಮ್ಮನ್ನೇ ಸುಟ್ಟುಕೊಳ್ಳುವಿರಿ.

ಗುಣದ ಜ್ಞಾನವಿಲ್ಲದ ಕಾರಣ, ಸುಖಕ್ಕೆ ಬದಲಾಗಿ ಸಹನೆ ಮಾಡಿಕೊಳ್ಳಬೇಕಾಗುತ್ತದೆ. ಅದೇ ರೀತಿಯಲ್ಲಿ ಸಮಸ್ಯೆಗಳು ಅಥವಾ ಪರಿಸ್ಥಿತಿಗಳು ಬರುವುದಕ್ಕೆ ಕಾರಣ ಅದರ ಜ್ಞಾನ ಇಲ್ಲದ ಕಾರಣ ಮುಂದು ವರೆಯುವ ಸುಖದ ಅನುಭವಕ್ಕೆ ಬದಲಾಗಿ ಸಹನೆ ಮಾಡಿಕೊಳ್ಳುವ ಅನುಭವ ಮಾಡುತ್ತೀರಿ. **(29–11–1978)**

ತಮ್ಮ ಮೊದಲ ವಚನ ಯಾವುದಾಗಿದೆ? 'ಒಬ್ಬ ತಂದೆಯ ಹೊರತು ಬೇರೆ ಯಾರೂ ಇಲ್ಲ ಅಂದರೆ ಸಾಯುವುದು' ಎಂಬುದಾಗಿದೆ. ಹೆಸರಿಗೆ ಸಾಯುವುದಾಗಿದೆ, ಆದರೆ ಎಲ್ಲವನ್ನೂ ಪ್ರಾಪ್ತಿ ಮಾಡಿಕೊಳ್ಳುವುದು. ನಿಭಾಯಿಸುವುದು ಕಷ್ಟವೆನಿಸುತ್ತಿದೆಯೇ? ಬಹಳ ಸಹಜವಾಗಿದೆ, ಆದರೆ ಪರಿವರ್ತನೆ ಮಾಡಿಕೊಳ್ಳಲು ಬರುವುದಿಲ್ಲ. ಭಾವ ಮತ್ತು ಭಾವನೆಯನ್ನು ಪರಿವರ್ತನೆ ಮಾಡಿಕೊಳ್ಳಲು ಬರುತ್ತಿಲ್ಲ. ವಾಹ್ ಡ್ರಾಮಾ ವಾಹ್! ಯಾವಾಗ ಇವೆಲ್ಲ ಏನಾಯಿತು ಎಂದು ಹೇಳುತ್ತೀರಿ, ಪ್ರತಿಯೊಂದು ಮಾತು ವಾಹ್ ವಾಹ್ ಆಯಿತಲ್ಲವೇ! ಹಾಯ್ ಹಾಯ್ ಎನ್ನುವುದನ್ನು ಸಮಾಪ್ತಿ ಮಾಡಿಕೊಂಡು ಬಿಟ್ಟಾಗ ವಾಹ್ ವಾಹ್ ಬರುತ್ತದೆ. ವಾಹ್ ಬಾಬಾ, ವಾಹ್ ಡ್ರಾಮಾ, ವಾಹ್ ನನ್ನ ಪಾತ್ರ. ಈ ಸ್ಮೃತಿಯಲ್ಲಿ ಇದ್ದಾಗ ವಿಶ್ವವು ವಾಹ್ ವಾಹ್ ಎಂದು ಹೇಳುತ್ತದೆ. **(03–12–1978)**

ಸದಾ ತಮ್ಮ ಭಾಗ್ಯದ ಸ್ಮರಣೆಯನ್ನು ಮಾಡುತ್ತಾ ಖುಷಿಯಲ್ಲಿರುತ್ತೀರಾ? 'ವಾಹ್ ನನ್ನ ಭಾಗ್ಯ' ಎಂಬ ಈ ಗೀತೆಯನ್ನು ಸದಾ ಮನಸ್ಸಿನಲ್ಲಿ ಹಾಡುತ್ತಿರುತ್ತೀರಾ? ವಾಹ್ ಬಾಬಾ, ವಾಹ್ ಡ್ರಾಮಾ ಮತ್ತು ವಾಹ್ ನನ್ನ ಪಾತ್ರ. ಸದಾ ಇದೇ ಸ್ಮೃತಿಯಲ್ಲಿದ್ದು, ಪ್ರತಿ ಕಾರ್ಯವನ್ನು ಮಾಡುತ್ತಾ, ಕರ್ಮವನ್ನು ಮಾಡುತ್ತಿದ್ದರೂ, ಕರ್ಮ ಬಂಧನದಿಂದ ಮುಕ್ತ, ಸದಾ ಜೀವನ್ಮುಕ್ತನಾಗಿದ್ದೇನೆ ಎಂಬ ಅನುಭವವಾಗುತ್ತಿದೆಯೇ? ಸತ್ಯಯುಗದ ಜೀವನ್ಮುಕ್ತಿಯ ಆಸ್ತಿಯಂತೂ ಪ್ರಾಪ್ತಿ ಆಗಿಯೇ ಆಗುತ್ತದೆ. ಆದರೆ ಈಗಿನ ಜೀವನ ಬಂಧನದಿಂದ ಜೀವನ್ಮುಕ್ತಿಯ ಸ್ಥಿತಿಯ ಅನುಭವ ಸತ್ಯಯುಗಕ್ಕಿಂತಲೂ ಹೆಚ್ಚಿನದು. ಅಂದಾಗ ಈಗಲೂ ತಮ್ಮ ಜ್ಞಾನ ಮತ್ತು ಯೋಗದ ಶಕ್ತಿಯಿಂದ ಜೀವನ್ಮುಕ್ತ ಸ್ಥಿತಿಯ ಅನುಭವ ಮಾಡುತ್ತೀರಾ ಅಥವಾ ಇನ್ನೂ ಬಂಧನವಿದೆಯೇ? ಎಲ್ಲಾ ಬಂಧನಗಳು ಸಮಾಪ್ತಿಯಾಯಿತೇ, ಈಗ ಜೀವನ್ಮುಕ್ತರಾಗಿಬಿಟ್ಟಿರೇ? ಏನೇ ಆಗಲಿ, ಆದರೆ ಜೀವನ್ಮುಕ್ತರಾಗಿರುವ ಕಾರಣ, ಆಟವಾಡುತ್ತಿರವಂತೆ ಅನುಭವವಾಗುತ್ತದೆ. ಪರೀಕ್ಷೆಯಲ್ಲ ಆದರೆ ಆಟವಾಗಿದೆ. ತನುವಿನ ರೋಗವಿರಲಿ, ಮಾಯೆಯ ಅನೇಕ ಪ್ರಕಾರದ ಯುದ್ಧವೇ ಬರಲಿ ಆದರೆ ಆಟದ ಅನುಭವವಾಗಬೇಕು. ಆಟದಲ್ಲಿ ದುಃಖವಿರುವುದಿಲ್ಲ. ಆಟವಾಡುವುದೇ ಮನೋರಂಜನೆಗಾಗಿ, ದುಃಖಕ್ಕಾಗಿ ಅಲ್ಲ. ಹಾಗಾಗಿ ಆಟವೆಂದು ತಿಳಿದುಕೊಳ್ಳುವುದರಿಂದ ಜೀವನ್ಮುಕ್ತ ಸ್ಥಿತಿಯ ಅನುಭವ ಮಾಡುವಿರಿ. ಜೀವನ್ಮುಕ್ತರಾಗಿದ್ದೀರಾ ಅಥವಾ ಜೀವನ ಬಂಧನದಲ್ಲಿದ್ದೀರಾ? ಶರೀರದ, ಸಂಬಂಧದ ಯಾವುದೇ ಪ್ರಕಾರದ ಬಂಧನವಿರ ಬಾರದು. ಇದಂತೂ ಆಟ ಆಡುತ್ತಾ ಕರ್ತವ್ಯವನ್ನು ನಿಭಾಯಿಸುತ್ತಿದ್ದೀರಿ. ಕರ್ತವ್ಯವನ್ನು ನಿರ್ವಹಿಸುವಂತಹ ಆಟವಾಡುತ್ತಿದ್ದೀರಿ. ನಿರ್ಬಂಧನ ಆತ್ಮಗಳೇ ಶ್ರೇಷ್ಠ ಸ್ಥಿತಿಯ ಅನುಭವ ಮಾಡಬಹುದಾಗಿದೆ. ಬಂಧನದಲ್ಲಿರುವವರು ಕೆಳಗಡೆಯೇ ಬಂಧಿಸಲ್ಪಟ್ಟಿರುತ್ತಾರೆ. ನಿರ್ಬಂಧನದವರು ಮೇಲೆ ಹಾರುತ್ತಾರೆ. ಸ್ಥಾಪನೆಯ ಕಾರ್ಯದಲ್ಲಿ ಆದಿಯಿಂದ ಯಾವ ಆತ್ಮಗಳು ಸಹಯೋಗಿಗಳು ಆಗಿರುತ್ತಾರೋ ಅವರಿಗೆ ಡ್ರಾಮಾ ಅನುಸಾರ ವಿಶೇಷವಾದ ಸಹಯೋಗವು ಒಂದಲ್ಲ ಒಂದು ರೂಪದಿಂದ ಅವಶ್ಯವಾಗಿ ಪ್ರಾಪ್ತಿಯಾಗುತ್ತದೆ. ಇದು ಗ್ಯಾರಂಟಿಯಾಗಿದೆ. ಬಾಪ್‌ದಾದಾರವರು, ಇಲ್ಲಿಯದಕ್ಕೆ ಇಲ್ಲಿಯೇ ಪ್ರತಿಫಲವನ್ನು ಕೊಡುತ್ತಾರೆ ಮತ್ತು ಭವಿಷ್ಯಕ್ಕಾಗಿಯೂ ಜಮಾ ಆಗುತ್ತದೆ. **(05–12–1978)**

ಶಿಕ್ಷಕರಿಗೆ ವಿಶೇಷವಾದ ಲಿಫ್ಟ್ ಸಿಕ್ಕಿದೆ. ಏಕೆಂದರೆ ಸರ್ವ ಆತ್ಮಗಳಿಗೂ ಮಾರ್ಗದರ್ಶನ ಮಾಡುವುದೇ ಟೀಚರ್‌ಗಳ ಕರ್ತವ್ಯವಾಗಿದೆ. ಅಂದಾಗ, ಹಗಲು ರಾತ್ರಿ ಒಂದೇ ಲಗನ್‌ನಲ್ಲಿ ಇರಬೇಕು. ಒಬ್ಬರದೇ ನೆನಪು ಮತ್ತು ಒಂದೇ ಕಾರ್ಯ. ಇದರಿಂದ ಏಕರಸ ಸ್ಥಿತಿಯು ಸಹಜವಾಗಿಯೇ ಆಗುತ್ತದೆ. ಒಬ್ಬರ ಲಗನ್‌ನಲ್ಲಿ ಇರುವುದರಿಂದ, ಗುರಿಯು ಸಹಜವಾಗಿದೆ ಎನ್ನುವಂತಹ ಅನುಭವವಾಗುತ್ತದೆ. ಒಂದೇ ಒಂದು ಇದೆ ಎಂದಾಗ ಸಹಜ ಮಾರ್ಗ ವಾಯಿತಲ್ಲವೇ? ಒಂದು ಸೆಕೆಂಡಿನಲ್ಲಿ ಸ್ವಿಚ್ ಆನ್ ಮಾಡಿದಿರಿ ಮತ್ತು ಗುರಿಯನ್ನು ತಲುಪಿದಿರಿ. ಯೋಚಿಸಿದಿರಿ ಮತ್ತು ಸ್ವರೂಪರಾದಿರಿ. ಇದಾಗಿದೆ ಲಿಫ್ಟ್. ಟೀಚರ್ಸ್‌ಗಳು ತಮ್ಮ ಭಾಗ್ಯವನ್ನು ನೋಡಿ ಸದಾ ತಂದೆಯ ಗುಣಗಾನ ಮಾಡಬೇಕು. 'ವಾಹ್ ಬಾಬಾ ಮತ್ತು ವಾಹ್ ಡ್ರಾಮಾ' ಎಂಬ ಇದೇ ಹಾಡು ಸದಾ ಹಾಡುತ್ತಿರಬೇಕು. ಈ ಖುಷಿಯಲ್ಲಿದ್ದಾಗ ತನುವಿನ ಬಂಧನವಿರಬಹುದು ಮತ್ತು ಮನದ ಬಂಧನವಿರಬಹುದು, ಆದರೆ ಏನೂ ಅನ್ನಿಸುವುದಿಲ್ಲ. ಸದಾ ವ್ಯಸ್ತವಾಗಿರುದರಿಂದ ಯಾವುದೇ ಪ್ರಕಾರದ ಮಾಯೆಯ ಯುದ್ಧ, ಯುದ್ಧ ಮಾಡಲು ಸಾಧ್ಯವಿಲ್ಲ. ಮಾಯೆಯ ಸೋಲಾಗುತ್ತದೆ, ಯುದ್ಧವಾಗುವುದಿಲ್ಲ. **(07–12–1978)**

ಮಧುಬನದ ಶಕ್ತಿಸೇನೆ ಎಂದರೆ ವಿಶೇಷ ಆತ್ಮಗಳ ಸೈನ್ಯವಾಗಿದೆ. ಪ್ರತಿಯೊಬ್ಬರೂ ತಮ್ಮ ವಿಶೇಷತೆಗಳನ್ನು ಚೆನ್ನಾಗಿ ತಿಳಿದಿರುವಿರಿ. ವಿಶೇಷತೆಯ ಕಾರಣದಿಂದಲೇ ವಿಶೇಷ ಭೂಮಿಯ ನಿವಾಸಿಗಳಾಗಿದ್ದೇವೆ ಎನ್ನುವ ಖುಷಿಯಿದೆಯೇ? ಹಿಂದಿನ ಖಾತೆಯಂತೂ ಪ್ರತಿಯೊಬ್ಬರದೂ ಅವರವರದ್ದೇ ಇದೆ. ಅದು ಚುಕ್ತಾ ಸಹ ಆಗುತ್ತಿರುತ್ತದೆ. ಆದರೆ ಜೊತೆ-ಜೊತೆಗೆ ಡ್ರಾಮಾ ಅನುಸಾರ ಒಂದಲ್ಲ ಒಂದು ವಿಶೇಷತೆಯೂ ಇದೆ. ಈ ಕಾರಣದಿಂದಲೇ ವಿಶೇಷ ಪಾತ್ರವು ಸಿಕ್ಕಿದೆ. ಸದಾ ಪುಣ್ಯ ಭೂಮಿ ಮತ್ತು ಶ್ರೇಷ್ಠ ಆತ್ಮಗಳ ಸಂಗದ ವಿಶೇಷ ಪಾತ್ರವು ಕಡಿಮೆ ಭಾಗ್ಯವೇನಲ್ಲ. ಜಡ ಚಿತ್ರದ ಮಂದಿರದ ಪೂಜಾರಿಯೂ ಸಹ ತಮ್ಮನ್ನು ತಾವು ಎಷ್ಟೊಂದು ಮಹಾನ್ ಎಂದು ತಿಳಿಯುತ್ತಾರೆ. ಪೂಜಾರಿ ಆಗಿದ್ದಾರೆ ಆದರೂ ಎಷ್ಟೊಂದು ನಶೆಯಿರುತ್ತದೆ. ಏಕೆಂದರೆ ಮೂರ್ತಿಯ ಸಮೀಪ ಸಂಬಂಧದಲ್ಲಿ ಇದ್ದೇವೆ ಎಂದು ತಿಳಿದುಕೊಳ್ಳು ತ್ತಾರೆ. ಎಂದಾಗ ಜಡ ಚಿತ್ರದ ಪೂಜಾರಿಯು ಸಹ ಇಷ್ಟೊಂದು ನಶೆಯಲ್ಲಿರುತ್ತಾರೆ. ಆದರೆ ಇಲ್ಲಿ ಪೂಜಾರಿಯ ಮಾತಲ್ಲ. ಇಲ್ಲಂತೂ ಸಂಪರ್ಕದಲ್ಲಿರುವವರು, ಸಂಗದಲ್ಲಿರುವವರು, ಜೊತೆಯಲ್ಲಿರುವ ಜೊತೆಗಾರರಿಗೆ ಎಷ್ಟೊಂದು ನಶೆ ಮತ್ತು ಖುಷಿಯಿರಬೇಕಾಗಿದೆ. ಈಶ್ವರೀಯ ಪರಿವಾರದಲ್ಲಿ ಬಂದಿರುವಂತಹ ಆತ್ಮಗಳಲ್ಲಿ ಯಾವುದೇ ವಿಶೇಷತೆ ಇಲ್ಲದಿರುವುದು ಸಾಧ್ಯವೇ ಇಲ್ಲ. ಆದ್ದರಿಂದ ತಮ್ಮ ವಿಶೇಷತೆಗಳನ್ನು ತಿಳಿದು, ಅದನ್ನು ಕರ್ಮದಲ್ಲಿ ತೊಡಗಿಸಿ. ಯಾವುದೇ ಗುಣ ಮತ್ತು ವಿಶೇಷತೆ ಇರಬಹುದು, ಕರ್ಮದ ಗುಣವಿರಬಹುದು, ಮಧುರತೆಯ ಗುಣವಿರಬಹುದು, ಸ್ನೇಹದ ಗುಣವಿರಬಹುದು, ಅದನ್ನು ಕಾರ್ಯದಲ್ಲಿ ತೊಡಗಿಸಿ. ಹೇಗೆ ಕಬ್ಬಿಣವೂ ಸ್ಪರ್ಶಮಣಿಗೆ ತಗುಲಿದಾಗ ವಜ್ರವಾಗುತ್ತದೋ ಹಾಗೆಯೇ ಒಂದು ಗುಣ ಅಥವಾ ವಿಶೇಷತೆಯನ್ನು ಸೇವೆಯಲ್ಲಿ ತೊಡಗಿಸಿದಾಗ ಸೇವೆಯ ಫಲವಾಗಿ ಒಂದಕ್ಕೆ ಲಕ್ಷ ಪಟ್ಟು ಸಿಗುವುದರಿಂದ, ಆ ಒಂದು ವಿಶೇಷತೆಯು ಅನೇಕ ಸಮಯದ ಫಲವನ್ನು ಕೊಡುವುದಕ್ಕೆ ಯೋಗ್ಯವಾಗುತ್ತದೆ. ಹೇಗೆ ಒಂದು ಬೀಜವನ್ನು ಹಾಕಿದಾಗ ಎಷ್ಟೊಂದು ಫಲಗಳು ಬಿಡುತ್ತವೆ. ಹಾಗೆಯೇ ಒಂದು ವಿಶೇಷತೆಯನ್ನಾದರೂ ಕರ್ಮದಲ್ಲಿ ತೊಡಗಿಸುವುದೆಂದರೆ ಭೂಮಿಯಲ್ಲಿ ಬೀಜವನ್ನು ಹಾಕುವುದಾಗಿದೆ. ಆದ್ದರಿಂದ ತಾವು ಎಷ್ಟೊಂದು ಅದೃಷ್ಟವಂತರೆಂದು ತಿಳಿದುಕೊಂಡಿರಾ? ಬ್ರಾಹ್ಮಣ ಪರಿವಾರದಲ್ಲಿ ಜನ್ಮವಾಗಿದೆ ಎಂದ ಮೇಲೆ, ಜನ್ಮದ ಜೊತೆಯಲ್ಲಿ ಒಂದಲ್ಲ ಒಂದು ವಿಶೇಷತೆಯ ಅದೃಷ್ಟವನ್ನು ಜೊತೆಯಲ್ಲೇ ತೆಗೆದುಕೊಂಡು ಬಂದಿರುವಿರಿ. ಅವುಗಳನ್ನು ಕಾರ್ಯದಲ್ಲಿ ಎಲ್ಲಿಯವರೆಗೆ ತೊಡಗಿಸುತ್ತೀರಿ ಎನ್ನುವುದರಲ್ಲಿ ವ್ಯತ್ಯಾಸವಾಗುತ್ತದೆ. ಜನ್ಮದ ಭಾಗ್ಯವಿದೆ, ಆದರೆ ಭಾಗ್ಯವನ್ನು ಕರ್ಮದಲ್ಲಿ ಅಥವಾ ಸೇವೆಯಲ್ಲಿ ತೊಡಗಿಸಿದಾಗ ಬಹಳ ಸಮಯದವರೆಗೆ ಭಾಗ್ಯದ ಫಲವನ್ನು ಬೆಳೆಯುವ, ಬೀಜ ಬಿತ್ತುವ ಇಂತಹ ವಿಧಿ ಬರಬೇಕಾಗಿದೆ. ಫಲವಂತೂ ಖಂಡಿತ ಬಿಡುತ್ತದೆ. ಬೀಜವನ್ನು ಬಿತ್ತುವುದು ಎಂದರೆ ವಿಶೇಷತಾ ರೂಪಿ ಬೀಜವನ್ನು ಸೇವೆಯಲ್ಲಿ ತೊಗಿಸುವುದಾಗಿದೆ. ಇಲ್ಲಿ ಎಲ್ಲರೂ ಸದಾ ಭಾಗ್ಯದ ಸಿಂಹಾಸನಧಾರಿಗಳಾಗಿದ್ದಾರೆ. ಈ ಭಾಗ್ಯಕ್ಕಾಗಿ ಕಲ್ಪದ ಹಿಂದಿನ ಸ್ಮರಣಾರ್ಥದಲ್ಲಿಯೂ ಇಂದಿನವರೆಗೂ ಒಂದು ಘಳಿಗೆಯ ಸಾಮೀಪ್ಯವನ್ನೂ ಸಹ ಮಹಾನ್ ಎಂದು ತಿಳಿದುಕೊಳ್ಳುತ್ತಾರೆ. ಅಂದಾಗ ಯಾರು ಪ್ರಾಕ್ಟಿಕಲ್ ಆಗಿ ಇದ್ದಾರೋ ಅವರ ಖುಷಿ, ಅವರ ಭಾಗ್ಯ ಎಷ್ಟೊಂದು ಶ್ರೇಷ್ಠವಾಗಿದೆ. ಶ್ರೇಷ್ಠತೆಯನ್ನು ಎದುರಿನಲ್ಲಿ ಇಟ್ಟುಕೊಂಡಾಗ ವ್ಯರ್ಥ ಮಾತುಗಳು ಸಮಾಪ್ತಿಯಾಗುತ್ತವೆ.

ಪಾಂಡವರು ಎಂದರೆ ಸದಾ ಕಾಲದ ವಿಜಯಿಗಳು. ಪಾಂಡವರ ಹೆಸರು ವಿಜಯದ ಕಾರಣದಿಂದಲೇ ಪ್ರಸಿದ್ಧವಾಗಿದೆ. ಪಾಂಡವ ಸೇನೆಯೂ ಸಹ ವಿಶೇಷವಾಗಿ ಸಾಗರದ ದಡದಲ್ಲಿ ಶ್ರೇಷ್ಠ ಸಂಗದಲ್ಲಿರುವವರು. ಇಂತಹ ಪಾಂಡವ ಸೈನ್ಯದವರು ಸದಾ ವಿಜಯಿಗಳಾಗಿದ್ದೀರಾ? ವಿಜಯದ ಆಟ ಸದಾ ನಡೆಯುತ್ತದೆಯೇ ಅಥವಾ ಸೋಲು-ಗೆಲುವಿನ ಆಟವೇ? ಈಗಿನ ಸಮಯ ಮತ್ತು ಸಹಯೋಗದ ಅನುಸಾರ, ಡ್ರಾಮಾನುಸಾರ ಯಾವ ಭಾಗ್ಯದ ಪ್ರಾಪ್ತಿಯಾಗಿದೆಯೋ, ಅದರ ಅನುಸಾರ ಸದಾ ವಿಜಯದ ಆಟ ನಡೆಯ ಬೇಕಾಗಿದೆ.

ಡ್ರಾಮಾನುಸಾರ ಯಾವ ವಿಶೇಷತೆ ಪ್ರಾಪ್ತಿ ಆಗಿದೆ ಅದನ್ನು ಸದಾ ಕಾರ್ಯದಲ್ಲಿ ತೊಡಗಿಸಿ. ಆಗ ಅನ್ಯರಿಗೂ ಸಹ ವಿಶೇಷತೆಗಳು ಕಾಣಿಸುತ್ತದೆ. ವಿಶೇಷತೆಗಳನ್ನು ನೋಡದೆ ಕೇವಲ ಮಾತುಗಳನ್ನು ನೋಡುವುದರಿಂದ ಸೋಲಾಗುತ್ತದೆ. ಪ್ರತಿಯೊಬ್ಬರ ವಿಶೇಷತೆಗಳನ್ನು ಸ್ಮೃತಿಯಲ್ಲಿಟ್ಟುಕೊಳ್ಳಿ, ಒಬ್ಬರು ಇನ್ನೊಬ್ಬರಲ್ಲಿ ಪೂರ್ಣ ನಂಬಿಕೆ ಇಟ್ಟುಕೊಂಡಾಗ ಅವರ ಮಾತಿನ ಭಾವವು ಪರಿವರ್ತನೆಯಾಗಿ ಬಿಡುತ್ತದೆ. ಒಂದುವೇಳೆ ಇಬ್ಬರು ಪರಸ್ಪರ ಮಿತ್ರರು ಇರುತ್ತಾರೆ ಮತ್ತು ಅವರ ಮಧ್ಯದಲ್ಲಿ ಮೂರನೆಯವರು ಅವರ ನಿಂದನೆ ಏನಾದರೂ ಮಾಡಲು ಬಂದಾಗ ಅವರ ಭಾವವನ್ನು ಪರಿವರ್ತನೆ ಮಾಡಿಬಿಡುತ್ತಾರೆ. ಒಂದುವೇಳೆ ಯಾರಾದರೂ ನಿಮಗೆ ಬ್ರಹ್ಮಾಬಾಬಾರವರ ಬಗ್ಗೆ, ಇದೇನು, ಇವರು ನಿಂದನೆಯ ಮಾತನ್ನು ಹೇಳುತ್ತಿದ್ದಾರೆ ಎಂದು ಹೇಳಿದಾಗ, ನೀವು ಅವರಿಗೆ ನಿಶ್ಚಯದಿಂದ ಇದು ನಿಂದನೆಯಲ್ಲ, ಬದಲಿಗೆ ನಿಮ್ಮ ಒಳ್ಳೆಯದಕ್ಕಾಗಿ ಹೇಳುತ್ತಾರೆ ಎಂದು ತಿಳಿಸುತ್ತೀರಿ. ಎಲ್ಲಿ ನಿಶ್ಚಯವಿರುತ್ತದೋ ಅಲ್ಲಿ

ಶಬ್ದದ ಭಾವವು ಬದಲಾಗಿ ಸಾಧಾರಣ ಮಾತಾಗಿಬಿಡುತ್ತದೆ. ಪ್ರತಿಯೊಬ್ಬರ ವಿಶೇಷತೆಯನ್ನು ನೋಡಿರಿ. ಆಗ ಅನೇಕತೆ ಇದ್ದರೂ, ಏಕತೆಯು ಕಂಡುಬರುತ್ತದೆ. ಏಕಮತದ ಸಂಘಟನೆಯು ತಯಾರಾಗಿಬಿಡುತ್ತದೆ. ಯಾರೇ ಯಾರದೇ ನಿಂದನೆಯ ಮಾತುಗಳನ್ನು ಹೇಳಿದರೂ, ಅದಕ್ಕೆ ಬೆಂಬಲ ಕೊಡುವ ಬದಲಾಗಿ ಹೇಳುವಂತಹ ವರ ರೂಪವನ್ನು ಪರಿವರ್ತನೆ ಮಾಡಿಬಿಡಿ. ಅಂದರೆ ಅವರ ಭಾವನೆಯನ್ನು ಪರಿವರ್ತನೆ ಮಾಡಿಬಿಡಿ. ಈ ಅಭ್ಯಾಸದ ಅವಶ್ಯಕತೆ ಇದೆ. ಇಲ್ಲದಿದ್ದರೆ ಒಬ್ಬರ ವಿಚಾರವನ್ನು ಇನ್ನೊಬ್ಬರಿಂದ ಕೇಳಿದೆವು, ಎರಡನೆಯವರ ವಿಚಾರವನ್ನು ಮೂರನೆಯವರಿಂದ ಕೇಳಿದೆವು ಮತ್ತು ಅದೇ ವ್ಯರ್ಥ ಮಾತುಗಳು ವಾತಾವರಣದಲ್ಲಿ ಹರಡುತ್ತಾ ಹೋಗುತ್ತವೆ. ಆ ಕಾರಣದಿಂದ ಶಕ್ತಿಶಾಲಿ ವಾತಾವರಣವು ತಯಾರಾಗಲು ಸಾಧ್ಯವಾಗುವುದಿಲ್ಲ, ಸಾಕ್ಷಾತ್ಕಾರ ಮೂರ್ತಿಗಳು ಸಹ ಆಗುವುದಿಲ್ಲ. ಹಾಗಾಗಿ ಸದಾ ಎಲ್ಲರ ಬಗ್ಗೆ ಶುಭ ಭಾವನೆ, ಕಲ್ಯಾಣದ ಭಾವನೆ ಇರಲಿ. ಅವರಿವರ ನಿಂದನೆಯ ಮಾತುಗಳನ್ನು ಕೇಳುವುದು ಎಂದರೆ ಸಮಯವನ್ನು ವ್ಯರ್ಥ ಮಾಡುವುದಾಗಿದೆ. ಸಂಪಾದನೆಯಿಂದ ವಂಚಿತರಾಗುವುದಾಗಿದೆ. **(10–12–1978)**

ಮತ್ತೇನು ಮಾಡುತ್ತೀರಿ? ತಮ್ಮದೇ ವ್ಯರ್ಥ ಸಂಕಲ್ಪಗಳ ಬಿರುಗಾಳಿ ಯನ್ನು ತಾವೇ ರಚನೆ ಮಾಡಿಕೊಳ್ಳುತ್ತೀರಿ ಮತ್ತು ಅದೇ ಬಿರುಗಾಳಿಯಲ್ಲಿ ಸ್ವಯಂ ನೀವೇ ಅಲುಗಾಡುತ್ತೀರಿ. ತಮ್ಮ ನಿಶ್ಚಯದ ಫೌಂಡೇಷನ್ ಅಥವಾ ಅನೇಕ ಪ್ರಕಾರದ ಪ್ರಾಪ್ತಿಗಳ ಆಧಾರದಲ್ಲಿ ಸ್ವಯಂ ತಾವೇ ಅಲುಗಾಡುತ್ತೀರಿ. ವಿನಾಶವಾಗುತ್ತದೆಯೋ ಇಲ್ಲವೋ ಗೊತ್ತಿಲ್ಲ, ಭಗವಾನುವಾಚ ಸರಿಯಾಗಿದೆಯೋ ಇಲ್ಲವೋ, ಪ್ರಪಂಚದ ಮುಂದೆ ನಿಶ್ಚಯದಿಂದ ಹೇಳಲೇ ಅಥವಾ ಬೇಡವೇ, ಗುಪ್ತವಾಗಿರಲೇ ಅಥವಾ ಪ್ರತ್ಯಕ್ಷವಾಗಲೇ, ಜಮಾ ಮಾಡುವುದೇ ಅಥವಾ ಸೇವೆಯಲ್ಲಿ ತೊಡಗಿಸಲೇ, ಪ್ರವೃತ್ತಿಯನ್ನು ಸಂಭಾಲನೆ ಮಾಡಲೇ ಅಥವಾ ಸೇವೆಯಲ್ಲಿ ತೊಡಗಲೇ? ಕೊನೆಗೂ ಏನಾಗಬೇಕಾಗಿದೆ? ತಂದೆಯವರಂತೂ ನಿರಾಕಾರ ಮತ್ತು ಆಕಾರಿಯಾಗಿ ಬಿಟ್ಟಿದ್ದಾರೆ, ಸಾಕಾರದಲ್ಲಿ ಎದುರಿಸುವಂತಹವರು ನಾವಾಗಿದ್ದೇವೆ. ಈ ರೀತಿಯ ವ್ಯರ್ಥ ಸಂಕಲ್ಪಗಳ ಬಿರುಗಾಳಿಯನ್ನು ರಚನೆ ಮಾಡಿ ಸ್ವಯಂ ತಮಗೆ ತಾವೇ ಏರುಪೇರಾಗಿ ಮಾಡಿಕೊಳ್ಳುವಿರಿ. ತಮ್ಮ ನಿಶ್ಚಯದ ಫೌಂಡೇಷನ್ ಅನ್ನು ಅಲುಗಾಡಿಸಿಕೊಳ್ಳುವಿರಿ. ಹೇಗೆ ಬಿರುಗಾಳಿಯು ಎಲ್ಲಿಗೋ ತಲುಪಿಸಿ ಬಿಡುತ್ತದೆಯೋ ಅದೇ ರೀತಿಯಲ್ಲಿ ಈ ವ್ಯರ್ಥ ಸಂಕಲ್ಪಗಳ ಬಿರುಗಾಳಿಯೂ ತೀವ್ರ ಪುರುಷಾರ್ಥದಿಂದ ಸಾಧಾರಣ ಪುರುಷಾರ್ಥದ ಕಡೆಗೆ ತಂದು ಬಿಡುತ್ತದೆ. ಇಂತಹ ಬಿರುಗಾಳಿಗಳಲ್ಲಿ ಬರಬೇಡಿ. ಬಾಪ್‌ದಾದಾರವರು ಇಂತಹ ಮಕ್ಕಳನ್ನು 'ನೀವು ಇಲ್ಲಿಯವರೆಗೂ ಟ್ರಸ್ಟಿಗಳಾಗಿದ್ದೀರಾ ಅಥವಾ ಗೃಹಸ್ಥಿಗಳಾಗಿದ್ದೀರಾ? ಎಂದು ಕೇಳುತ್ತಾರೆ. ಯಾವಾಗ ನೀವು ಟ್ರಸ್ಟಿ (ನಿಮಿತ್ತರು) ಆಗಿರುವಿರಿ ಎಂದಾಗ ಜವಾಬ್ದಾರರು ಯಾರು? ನೀವೇ ಅಥವಾ ತಂದೆಯೇ? ತಂದೆಯು ಜವಾಬ್ದಾರರು ಆಗಿದ್ದಾರೆ ಎಂದಾಗ ಆಗುತ್ತದೆಯೋ ಇಲ್ಲವೋ, ಏನಾಗುವುದೋ. ಇದು ತಂದೆಯ ಜವಾಬ್ದಾರಿಯೇ ಅಥವಾ ನಿಮ್ಮ ಜವಾಬ್ದಾರಿಯೇ? ನಿಶ್ಚಯ ಬುದ್ಧಿಯುಳ್ಳವರ ಮೊದಲ ಲಕ್ಷಣವೇನು? ನಿಶ್ಚಯ ಬುದ್ಧಿಯುಳ್ಳವರೆಂದರೆ ಸದಾ ನಿಶ್ಚಿಂತರಾಗಿರುವವರು. ಯಾವಾಗ ತಂದೆಯು ನಿಮ್ಮ ಎಲ್ಲಾ ಚಿಂತೆಗಳನ್ನು ಸ್ವಯಂ ತಮ್ಮ ಮೇಲೆ ತೆಗೆದುಕೊಂಡಿದ್ದಾರೆ ಎಂದಾಗ ತಾವೇಕೆ ಚಿಂತೆ ಮಾಡುತ್ತೀರಿ? ವಿನಾಶ ಆಗುತ್ತದೆಯೋ, ಇಲ್ಲವೋ, ಅಥವಾ ಯಾವಾಗ ಆಗುತ್ತದೆ ಎನ್ನುವ ಚಿಂತೆಗಳು ಬ್ರಾಹ್ಮಣರ ಜೀವನದಲ್ಲಿ ಏಕೆ ಬರುತ್ತದೆ? ಬ್ರಾಹ್ಮಣ ಜೀವನವೆಂದರೆ ವಜ್ರ ಸಮಾನವಾದ ಜೀವನ, ಬಾಬಾರವರ ಜೊತೆಯಲ್ಲಿ ಮಿಲನವನ್ನು ಆಚರಿಸುವ ಜೀವನ, ಏರುವ ಕಲೆಯ ಜೀವನ, ಸರ್ವ ಖಜಾನೆಗಳಿಂದ ಸಂಪನ್ನರಾಗುವಂತಹ ಜೀವನ, ಸರ್ವ ಅನುಭವಗಳಿಂದ ಸಂಪನ್ನವಾಗಿರುವ ಜೀವನ ಇಷ್ಟವಾಗುತ್ತಿಲ್ಲವೇ? ಬೇಗ ಸಮಾಪ್ತಿ ಮಾಡಲು ಬಯಸುವಿರಾ? ಕಷ್ಟ ಅಥವಾ ತೊಂದರೆಯಿದೆಯೇನು? ಭಕ್ತಿ ಮಾರ್ಗದಲ್ಲಿ 'ಈ ಅತೀಂದ್ರಿಯ ಸುಖದ ಜೀವನದ ದಿನಗಳು ಒಂದರಿಂದ ನಾಲ್ಕುಪಟ್ಟು ಆಗಲಿ' ಎಂದು ಬೇಡಿಕೊಂಡಿದ್ದೀರಿ. ಆದರೆ ಈಗ ಸುಸ್ತಾಗಿದ್ದೀರಿ. ಇಂತಹ ಸಂಕಲ್ಪ ಮಾಡುವವರ ಬಗ್ಗೆ ಬಾಪ್‌ದಾದಾರವರಿಗೆ ನಗು ಬರುತ್ತದೆ. ಇಂತಹ ಸಂಕಲ್ಪ ಮಾಡುವಂತಹ ಅಪ್ರಾಪ್ತಿ ಏನಿದೆ? ಕಲ್ಯಾಣಕಾರಿ ತಂದೆ ಎಂದು ಹೇಳುತ್ತೀರಿ, ಕಲ್ಯಾಣಕಾರಿ ಜೀವನವೆಂದು ಹೇಳುತ್ತೀರಿ. ಭಗವಂತನ ಮಹಾ ವಾಕ್ಯಗಳು ಏನಿವೆಯೋ ಅದರಲ್ಲಿ ಅನೇಕ ಪ್ರಕಾರದ ಕಲ್ಯಾಣ ಸಮಾವೇಶವಾಗಿದೆ. ಏಕೆ ಮತ್ತು ಹೇಗೆ ಎಂಬ ಸಂಕಲ್ಪಗಳಿಂದ ನಿಶ್ಚಯ ಬುದ್ಧಿಯ ಫೌಂಡೇಷನನ್ನು (ಅಡಿಪಾಯವನ್ನು) ಏಕೆ ಅಲುಗಾಡಿಸುತ್ತೀರಿ? ಒಂದುವೇಳೆ ಇಂತಹ ಚಿಕ್ಕ ಪುಟ್ಟ ಬಿರುಗಾಳಿಗೆ ತಳಪಾಯವು ಅಲುಗಾಡುತ್ತಿದ್ದರೆ, ಮಹಾವಿನಾಶದ ಮಹಾನ್ ಬಿರುಗಾಳಿಯಲ್ಲಿ ಹೇಗೆ ಸ್ಥಿರವಾಗಿ ನಿಲ್ಲುತ್ತೀರಿ? ಈಗಂತೂ ಕೇವಲ ಒಂದೇ ಒಂದು ತಮ್ಮದೇ ವ್ಯರ್ಥ ಸಂಕಲ್ಪಗಳ ಒಂದು ಬಿರುಗಾಳಿ ಇದೆ. ಆದರೆ ಮಹಾ ವಿನಾಶದಲ್ಲಿ ನಾಲ್ಕೂ ಕಡೆಯಿಂದ ಅನೇಕ ಪ್ರಕಾರದ ಬಿರುಗಾಳಿಗಳು ಬರುತ್ತವೆ. ಆಗ ಏನು ಮಾಡುತ್ತೀರಿ? ಇನ್ನೂ ಮುಂದುವರೆಯಲು ಸಮಯ ಸಿಕ್ಕಿರುವಾಗ,

ಭಗವಂತನ ಜೊತೆ ಸಿಕ್ಕಿರುವಾಗ, ಅನೇಕ ಪ್ರಕಾರದ ಖಜಾನೆಗಳು ಸಿಗುತ್ತಿರುವಾಗ, ಪ್ರಾಪ್ತಿಗಳು ಆಗುತ್ತಿರುವಾಗಲೂ, ಇಷ್ಟು ಚಿಕ್ಕ ಮಾತಿಗೇ ಸಮಾಪ್ತಿ ಆಗಲಿ ಎನ್ನುವ ಉತ್ಕಂಟತೆ ಏಕೆ ಮಾಡುತ್ತೀರಿ? ಸುಖದ ದಿನಗಳಲ್ಲಿ ಧೈರ್ಯವನ್ನು ಇಡಿ. ಯಾವಾಗ ಮತ್ತು ಹೇಗೆ ಎನ್ನುವ ಅಧೈರ್ಯದಲ್ಲಿ ಬರಬೇಡಿ. ತಮ್ಮದೇ ವ್ಯರ್ಥ ಸಂಕಲ್ಪಗಳ ಬಿರುಗಾಳಿಯನ್ನು ಸಮಾಪ್ತಿ ಮಾಡಿ. ಸಂಪದ್ಭರಿತವಾಗಿರಿ, ಸಮರ್ಥರಾಗಿರಿ. ಸದಾ ನಿಶ್ಚಯ ಬುದ್ಧಿಯುಳ್ಳವರಾಗಿರಿ. ಕಲ್ಯಾಣಕಾರಿ ತಂದೆ ಮತ್ತು ಕಲ್ಯಾಣಕಾರಿ ಸಮಯದ ಪ್ರತಿ ಘಳಿಗೆಯ ಲಾಭವನ್ನು ಪಡೆಯಿರಿ. ಇಡೀ ಕಲ್ಪದಲ್ಲಿ ಇಂತಹ ಸಂಪದ್ಭರಿತವಾದ, ಭಾಗ್ಯದ ದಿನಗಳು, ಭಾಗ್ಯವಿಧಾತನ ಸಂಗದ ದಿನಗಳು ಮತ್ತೆ ಬರುವುದಿಲ್ಲ. ವಿನಾಶದ ಸಮಯದಲ್ಲೂ ಈ ಪ್ರಾಪ್ತಿಯ ಸಮಯವನ್ನು ನೆನಪು ಮಾಡಿಕೊಳ್ಳುತ್ತೀರಿ. ಹಾಗಾಗಿ ಡ್ರಾಮಾನುಸಾರ ಕಲ್ಯಾಣಾರ್ಥವಾಗಿ, ಡ್ರಾಮಾದ ಯಾವ ದೃಶ್ಯ ನಡೆಯುತ್ತಿದೆಯೋ ಅದನ್ನು ತ್ರಿಕಾಲದರ್ಶಿಗಳಾಗಿ, ಧೈರ್ಯ ಮತ್ತು ಉಲ್ಲಾಸ ತುಂಬಿರುವ ಸಮರ್ಥ ಆತ್ಮಗಳಾಗಿ, ಸ್ವಯಂ ತಾವೂ ಸಮರ್ಥರಾಗಿರಿ ಹಾಗೂ ವಿಶ್ವವನ್ನು ಸಮರ್ಥಗೊಳಿಸಿ. ಕಲ್ಲನ್ನು ಒಡೆಯುವುದರಲ್ಲಿ ಸುಸ್ತಾಗಬೇಡಿ, ತಮ್ಮದೇ ಆದ ಬಿರುಗಾಳಿಯಲ್ಲಿ ಅಲುಗಾಡಬೇಡಿ. ಅಚಲರಾಗಿರಿ. ತಿಳಿಯಿತೆ. **(14–12–1978)**

**'ವಾಹ್ ಡ್ರಾಮಾ' ಎಂಬ ಸ್ಮೃತಿಯಿಂದ ಅನೇಕರ ಸೇವೆ –** ಎಲ್ಲರೂ 'ವಾಹ್ ಡ್ರಾಮಾ ವಾಹ್' ಎಂಬ ಸ್ಮೃತಿಯಿಂದ ಡ್ರಾಮಾದ ಪ್ರತಿಯೊಂದು ದೃಶ್ಯವನ್ನು ನೋಡುತ್ತಾ ನಡೆಯುತ್ತೀರಾ? ಯಾವುದೇ ದೃಶ್ಯವನ್ನು ನೋಡಿ ಭಯಪಡುವುದಿಲ್ಲ ತಾನೇ? ಯಾವಾಗ ಡ್ರಾಮಾದ ಜ್ಞಾನವು ಸಿಕ್ಕಿಬಿಟ್ಟಿತ್ತೋ, ಆಗ 'ವರ್ತಮಾನ ಸಮಯವು ಕಲ್ಯಾಣಕಾರಿ ಯುಗವಾಗಿದೆ, ಯಾವುದೆಲ್ಲಾ ದೃಶ್ಯವು ಕಣ್ಣಿನ ಮುಂದೆ ಬರುತ್ತದೋ ಇದರಲ್ಲಿ ಕಲ್ಯಾಣವು ತುಂಬಿದೆ' ಎಂದು ತಿಳಿಯಿತು. ವರ್ತಮಾನದಲ್ಲಿ ಅರಿವಾಗದಿದ್ದರೂ ಭವಿಷ್ಯದಲ್ಲಿ ಅಡಗಿರುವ ಕಲ್ಯಾಣವು ಪ್ರತ್ಯಕ್ಷವಾಗಿ ಬಿಡುತ್ತದೆ. 'ವಾಹ್ ಡ್ರಾಮಾ ವಾಹ್' ಎಂಬುದು ನೆನಪಿದ್ದರೆ ಸದಾ ಖುಷಿಯಲ್ಲಿ ಇರುತ್ತೀರಿ, ಪುರುಷಾರ್ಥದಲ್ಲಿ ಎಂದಿಗೂ ಉದಾಸೀನತೆ ಬರುವುದಿಲ್ಲ, ಸ್ವತ:ವಾಗಿ ತಮ್ಮಿಂದ ಅನೇಕರ ಸೇವೆಯಾಗಿ ಬಿಡುತ್ತದೆ. **(01–01–1979)**

ಸದಾ ಕಲ್ಪದ ಹಿಂದಿನಂತೆ ತಮ್ಮನ್ನು ಅಂಗದನ ಸಮಾನ ಅಚಲರು ಎಂದು ತಿಳಿದುಕೊಳ್ಳುತ್ತೀರಾ? ಅಂಗದನ ಸಮಾನ ಅಚಲರು ಎಂದರೆ ನಿಶ್ಚಯ ಬುದ್ಧಿ ವಿಜಯಿಗಳು. ಸ್ವಲ್ಪವಾದರೂ ಏರುಪೇರಿನಲ್ಲಿ ಬಂದರೂ ವಿಜಯಿ ಗಳಾಗುವುದಕ್ಕೆ ಆಗುವುದಿಲ್ಲ. ಡ್ರಾಮಾದಲ್ಲಿ ಮಾಯೆಯ ವಿಘ್ನಗಳು ಮಹಾವೀರರನ್ನಾಗಿ ಮಾಡಲು ಪೇಪರ್ ರೂಪದಲ್ಲಿ ಬರುತ್ತವೆ. ಪರೀಕ್ಷೆಯ ಪೇಪರ್ ಇಲ್ಲದೆ ಮುಂದಿನ ತರಗತಿಗೆ ಹೋಗಲು ಸಾಧ್ಯವಿಲ್ಲ. ಪೇಪರ್ ಬರುವುದು ಎಂದರೆ ಮುಂದಿನ ತರಗತಿಗೆ ಹೋಗುವುದಾಗಿದೆ. ಹಾಗಾಗಿ ಪೇಪರ್ ಬಂದರೆ ಖುಷಿಯಾಗಬೇಕೇ ವಿನಹ ಏರುಪೇರಿನಲ್ಲಿ ಬರಬಾರದು. ಮಾಯೆಯಿಂದಲೂ ಪಾಠವನ್ನು ಕಲಿಯಿರಿ ಏಕೆಂದರೆ ಅದು ಎಂದಿಗೂ ಏರುಪೇರಿನಲ್ಲಿ ಬರುವುದಿಲ್ಲ, ಅಚಲವಾಗಿರುತ್ತದೆ. ಇದೇ ಪಾಠವನ್ನು ಮಾಯೆಯಿಂದ ಕಲಿತು ಮಾಯಾಜೀತರಾಗಿಬಿಡಿ. **(18–01–1979)**

ಎರಡನೇ ಮಾತು ಸುಮಂಗಲಿತನದೊಂದಿಗೆ ಭಾಗ್ಯವನ್ನು ನೋಡಿದರು. ಲೌಕಿಕದ ರೀತಿಯಲ್ಲಿ ಭಾಗ್ಯದ ಆಧಾರ – ಶರೀರದ ಆರೋಗ್ಯ, ಮನಸ್ಸಿನ ಖುಷಿ, ಧನದ ಸಮೃದ್ಧಿ, ಸಂಬಂಧದಲ್ಲಿ ಸದಾ ಸಂತುಷ್ಟತೆ ಮತ್ತು ಸಂಪರ್ಕದಲ್ಲಿ ಸದಾ ಸಫಲತಾಮೂರ್ತಿ ಆಗಿರುವುದಾಗಿದೆ. ಈ ಎಲ್ಲಾ ಮಾತುಗಳ ಆಧಾರದಿಂದ ಭಾಗ್ಯವನ್ನು ನೋಡುತ್ತಾರೆ. ಎಂದಾಗ ಈಗ ಸಂಗಮ ಯುಗದ ಶ್ರೇಷ್ಠ ಭಾಗ್ಯವನ್ನು ಅನುಭವ ಮಾಡುತ್ತಿರುವಿರಲ್ಲವೇ? ಸಂಗಮ ಯುಗದ ಅಲೌಕಿಕ ಜೀವನದ ವಿಶೇಷತೆಗಳನ್ನು ತಿಳಿದುಕೊಂಡಿದ್ದೀರಲ್ಲವೇ? ಸದಾ ಸ್ವಸ್ಥ (ಆರೋಗ್ಯವಂತರು) ಎಂದರೆ ಸದಾ ಸ್ವ–ದಲ್ಲಿ (ಆತ್ಮ ಸ್ಥಿತಿಯಲ್ಲಿ) ಸ್ಥಿತರಾಗುವುದರಿಂದ ಶರೀರದ ಕರ್ಮಭೋಗವೂ ಸಹ ಕರ್ಮ ಯೋಗದಿಂದ ಶೂಲದಿಂದ ಮುಳ್ಳಿನ ಸಮಾನ ಆಗಿಬಿಡುತ್ತದೆ. ಕರ್ಮಭೋಗವನ್ನೂ ಸಹ ಬೇಹದ್ದಿನ ಡ್ರಾಮಾದಲ್ಲಿ ಆಟವೆಂದು ತಿಳಿದು ಆಡುವಿರಿ. ಆಗ ಶರೀರದ ರೋಗವು ಯೋಗದಲ್ಲಿ ಪರಿವರ್ತನೆ ಆಗಿಬಿಡುತ್ತದೆ. ಹಾಗಾಗಿ ಸದಾ ಆರೋಗ್ಯವಂತರಾಗಿರುವಿರಿ. ರೋಗವನ್ನು ರೋಗವೆಂದು ತಿಳಿಯುವುದಿಲ್ಲ ಆದರೆ ಅನೇಕ ಜನ್ಮಗಳ ಹೊರೆಯು ಹಗುರವಾಗುತ್ತಿದೆ, ಲೆಕ್ಕಾಚಾರಗಳು ಚುಕ್ತವಾಗುತ್ತಿದೆ ಎಂದು ತಿಳಿದುಕೊಳ್ಳುವುದ ರಿಂದ ಸದಾ ಆರೋಗ್ಯವಾಗಿದ್ದೇನೆ ಎಂದು ಭಾವಿಸುತ್ತೀರಿ. ಜೊತೆ ಜೊತೆ ಮನಸ್ಸಿನ ಖುಷಿಯಂತೂ ಸದಾ ಪ್ರಾಪ್ತಿಯಾಗಿಯೇ ಇದೆ. ಮನ್ಮನಾಭವ ಆಗುವುದು ಎಂದರೆ ಖುಷಿಯ ಖಜಾನೆಗಳಿಂದ ಸಂಪನ್ನರಾಗುವುದಾಗಿದೆ. **(23–01–1979)**

ಮೂರನೇ ಮಾತು, ಸ್ವಯಂನ ಬಗ್ಗೆ ಗೌರವ. ಇದರಲ್ಲಿಯೂ ತಂದೆಯಿಂದ ಈ ಅಲೌಕಿಕ ಶ್ರೇಷ್ಠ ಜೀವನ ಅಥವಾ ಬ್ರಾಹ್ಮಣ ಜೀವನದ ಯಾವುದೆಲ್ಲಾ ಟೈಟಲ್ (ಬಿರುದು) ಗಳಿವೆಯೋ

ಅಥವಾ ಅನೇಕ ಗುಣ ಮತ್ತು ಕರ್ತವ್ಯಗಳ ಆಧಾರದ ಮೇಲೆ ಯಾವ ಸ್ವರೂಪ ಮತ್ತು ಸ್ಥಿತಿಯ ಗಾಯನವಿದೆಯೋ ಅಂದರೆ 'ಸ್ವದರ್ಶನ ಚಕ್ರಧಾರಿ, ಜ್ಞಾನ ಸ್ವರೂಪ, ಪ್ರೇಮ ಸ್ವರೂಪ, ಫರಿಶ್ತಾತನದ ಸ್ಥಿತಿ' ಎಂಬ ಗಾಯನವಿದೆಯೋ, ಯಾವುದನ್ನು ತಂದೆಯು ಜ್ಞಾನದ ಆಧಾರದ ಮೇಲೆ ಕೊಟ್ಟಿದ್ದಾರೋ, ಅದೇ ರೀತಿಯಲ್ಲಿ ತಮ್ಮನ್ನು ತಾವು ಅನುಭವ ಮಾಡಬೇಕು ಮತ್ತು ಅದೇ ಸ್ಥಿತಿಯಲ್ಲಿ ಸ್ಥಿತರಾಗಬೇಕು. ಏನಾಗಿದ್ದೇನೆಯೋ ಹಾಗೆಯೇ ತಿಳಿದುಕೊಂಡು ನಡೆಯುವುದು ಅಂದರೆ 'ಶ್ರೇಷ್ಠ ಆತ್ಮನಾಗಿದ್ದೇನೆ, ಡೈರೆಕ್ಟ್ ತಂದೆಯ ಸಂತಾನನಾಗಿದ್ದೇನೆ, ಬೇಹದ್ದಿನ ಆಸ್ತಿಗೆ ಅಧಿಕಾರಿಯಾಗಿದ್ದೇನೆ. ಮಾಸ್ಟರ್ ಸರ್ವ ಶಕ್ತಿವಂತನಾಗಿದ್ದೇನೆ ಎಂದು ನಡೆಯುವುದು. ಈ ರೀತಿಯಾಗಿ ಏನಾಗಿದ್ದೇನೋ ಅದೇ ರೀತಿಯಲ್ಲಿ ತಮ್ಮನ್ನು ತಾವು ತಿಳಿದುಕೊಂಡು ನಡೆಯುವುದು. ಇದನ್ನೇ ಸ್ವಯಂ ತಮಗೆ ತಾವು ಗೌರವ ಕೊಟ್ಟುಕೊಳ್ಳುವುದಾಗಿದೆ. ನಾನಂತೂ ಬಲಹೀನನಾಗಿದ್ದೇನೆ, ನನ್ನಲ್ಲಿ ಧೈರ್ಯವಿಲ್ಲ, ಬಾಬಾ ಹೇಳುತ್ತಾರೆ ಆದರೆ ನಾನು ಆಗಲು ಸಾಧ್ಯವಿಲ್ಲ, ಡ್ರಾಮಾದಲ್ಲಿ ನನ್ನ ಪಾತ್ರವೇ ಹೀಗೆ ಇರುವುದಾಗಿದೆ, ಎಷ್ಟಿದೆಯೋ ಅಷ್ಟೇ ಒಳ್ಳೆಯದು' ಈ ರೀತಿಯಾಗಿ ತಮ್ಮೊಂದಿಗೆ ತಾವೇ ಮನಸ್ಸನ್ನು ದುರ್ಬಲ ಮಾಡಿಕೊಳ್ಳುವುದು ಸಹ ತಮ್ಮ ಬಗ್ಗೆ ತಾವೇ ಅಗೌರವ ತೋರಿಸಿಕೊಳ್ಳುವುದಾಗಿದೆ. ಸ್ವಯಂ ತಮ್ಮ ಬಗೆಗಿನ ಗೌರವದ ರೆಕಾರ್ಡ್ ಏನಾಗಿದೆ ಎಂದು ಪರಿಶೀಲನೆ ಮಾಡಿಕೊಳ್ಳಿ. **(25–01–1979)**

ಪ್ರತಿಯೊಂದು ಕರ್ಮವನ್ನು ತ್ರಿಕಾಲದರ್ಶಿ ಆಗಿ ಮಾಡುವುದರಿಂದ ಯಾವುದೇ ಕರ್ಮವು ವಿಕರ್ಮವಾಗಲು ಸಾಧ್ಯವಿಲ್ಲ. ಸದಾ ಸುಕರ್ಮವಾಗುತ್ತದೆ. ಅದೇ ರೀತಿ ಸಾಕ್ಷಿ ಸ್ಥಿತಿಯಲ್ಲಿ ಸ್ಥಿತರಾಗಿ ಕರ್ಮವನ್ನು ಮಾಡುವುದರಿಂದ ಯಾವುದೇ ಕರ್ಮದ ಬಂಧನದಲ್ಲಿ ಕರ್ಮ ಬಂಧನಯುಕ್ತ ಆತ್ಮ ಆಗುವುದಿಲ್ಲ. **(30–01–1979)**

ಡ್ರಾಮಾನುಸಾರವಾಗಿ ಕಲಿಯುಗೀ ಪ್ರಪಂಚದ ಸುಖ ಮತ್ತು ಅಶಾಂತಿಯ ದೃಶ್ಯಗಳನ್ನು ನೋಡಿ ಬೇಹದ್ದಿನ ವೈರಾಗಿಗಳು ಆಗುತ್ತಾ ಹೋಗುವಿರಿ. ಏನೇ ಆಗಲೀ ತಮ್ಮದು ಸದಾ ಏರುವ ಕಲೆಯಾಗಬೇಕು. ಪ್ರಪಂಚದವರೆಗೆ ಹಾಹಾಕಾರವಾಗಿರುತ್ತದೆ ಮತ್ತು ತಮಗಾಗಿ ಜಯ ಜಯಕಾರವಾಗುತ್ತದೆ. ಈ ಪ್ರಪಂಚದಲ್ಲಿ ಹಾಹಾಕಾರವು ಉಂಟಾಗಲಿದೆ ಎಂದು ತಮಗೆ ತಿಳಿದಿದೆ. ಹಾಹಾಕಾರ ಆಗುವುದು ಎಂದರೆ ವಾಪಸ್ಸು ಹೋಗುವುದು. ಎಂತಹದೇ ಪರಿಸ್ಥಿತಿಯಲ್ಲಿ ಭಯಪಡಬಾರದು. ನಮಗಾಗಿ ತಯಾರಿ ಆಗುತ್ತಿದೆ. ಸಾಕ್ಷಿಯಾಗಿ ಪ್ರತಿಯೊಂದು ಪ್ರಕಾರದ ಆಟವನ್ನು ನೋಡಿರಿ. ಕೆಲವರು ಅಳುತ್ತಾರೆ, ಕೆಲವರು ಕಿರುಚುತ್ತಾರೆ, ಸಾಕ್ಷಿಯಾಗಿ ನೋಡುವುದರಿಂದ ಮಜಾ ಆಗುತ್ತದೆ. ಏನಾಗುತ್ತದೆ ಎಂಬ ಪ್ರಶ್ನೆಯೂ ಸಹ ಉದ್ಭವಿಸುವುದಿಲ್ಲ. ಇದು ಆಗಲೇ ಬೇಕಾಗಿದೆ. ಈ ರೀತಿಯಾಗಿ ಅಟಲರಾಗಿದ್ದೀರಲ್ಲವೇ? 'ಏನಾಗುವುದು' ಎಂಬ ಪ್ರಶ್ನೆ ಏಳುವುದಿಲ್ಲತಾನೆ?. ಅನೇಕ ಬಾರಿ ಈ ಎಲ್ಲಾ ಏರು ಪೇರುಗಳನ್ನು ನೋಡಿದ್ದೀರಿ ಮತ್ತು ಈಗಲೂ ನೋಡುತ್ತಿರುವಿರಿ. ಪ್ರಪಂಚದಲ್ಲಿ ಏನೇ ಆಗಲಿ, ಆದರೆ ನೆನಪಿನ ಭಟ್ಟಿಯಲ್ಲಿ ಇರುವಂತಹವರು ಸದಾ ಸುರಕ್ಷಿತವಾಗಿರುತ್ತಾರೆ. **(07–12–1979)**

ಮಾಯೆಯು ತೊಂದರೆ ಕೊಡುತ್ತದೆಯೇ? ಈಗ ನಮಸ್ಕಾರ ಮಾಡುವ ಸಮಯವಾಗಿದೆಯೇ ವಿನಹ ಯುದ್ಧ ಮಾಡುವ ಸಮಯವಲ್ಲ. ಇಲ್ಲಿಯವರೆಗೂ ಮಾಯೆಯ ಯುದ್ಧವು ನಡೆಯುತ್ತಿದೆಯೇನು? ಸಮಯ ಪ್ರತಿ ಸಮಯ, ಹೇಗೆ ನಿಮ್ಮ ಸ್ಥಿತಿಯು ಮುಂದುವರೆಯುತ್ತಾ ಹೋಗುತ್ತಿದೆಯೋ, ಈಗ ಮಾಯೆಯ ಯುದ್ಧವು ಆಗಬಾರದು. ಒಂದುವೇಳೆ ಮಾಯೆ ಬಂದರೂ ಅದನ್ನು ಆಟವೆಂದು ತಿಳಿದು ನೋಡಿರಿ. ಹೇಗೆ ಸಾಕ್ಷಿಯಾಗಿ ಹದ್ದಿನ ಡ್ರಾಮಾವನ್ನು ನೋಡುವಂತೆ ಅನುಭವವಾಗಬೇಕು. ಈ ರೀತಿಯಾಗಿ ಮಾಯೆಯ ಈ ಆಟದ ಡ್ರಾಮಾವನ್ನು ನೋಡಿದಾಗ ಬಹಳ ಮಜಾ ಬರುತ್ತದೆ ಮತ್ತು ಹೆದರಿಕೆಯಾಗುವುದಿಲ್ಲ. ಆದ್ದರಿಂದ ಈಗ ಇಂತಹ ಸ್ಥಿತಿ ತಯಾರಾಗಬೇಕಾಗಿದೆ. ಮಾಯೆಯು ಎಂತಹ ವಿಕರಾಳ ರೂಪದಲ್ಲಿ ಬರಲಿ, ಆದರೆ ತಾವು ಅದನ್ನು ಗೊಂಬೆಯೆಂದು ತಿಳಿದಾಗ ಅದು ಆಟವಾಗಿ ಬಿಡುತ್ತದೆ. ಯಾವ ರೀತಿ ಬೇಟೆಗಾರನು, ಬೇಟೆಯಾಡುತ್ತಾನೆ, ಅದರಲ್ಲೂ ಯುದ್ಧವಿರುತ್ತದೆ. ಆದರೆ ಶಿಕಾರಿಯು ಬೇಟೆ ಎಂದು ತಿಳಿಯುವ ಕಾರಣದಿಂದ ಭಯಪಡುವುದಿಲ್ಲ. ಖುಷಿಪಡುತ್ತಾನೆ. ತಾವೆಲ್ಲರೂ ಮಾಯೆಯ ಬೇಟೆಗಾರರಾಗಿರುವಿರಿ. ಬೇಟೆಗಾರನು ಎಂದಿಗೂ ಗಾಬರಿ ಪಡುವುದಿಲ್ಲ, ಭಯಪಡುವುದಿಲ್ಲ, ಖುಷಿಯಾಗುತ್ತಾನೆ. ನಾವು ಸದಾ ಆಟಗಾರ ಆಗಿ ಆಟವನ್ನು ನೋಡುತ್ತೇವೆ ಎನ್ನುವ ದೃಢ ಸಂಕಲ್ಪವನ್ನು ಮಾಡಿಕೊಂಡು ಮಧುಬನದಿಂದ ಹೋಗಿರಿ. ಇದರಿಂದಾಗಿ ವಿದೇಶದಲ್ಲಿ ಮಾಯೆಯು ಯುದ್ಧ ಮಾಡುವುದಕ್ಕೆ ಬದಲಾಗಿ ನಮಸ್ಕಾರ ಮಾಡಲು ಪ್ರಾರಂಭಿಸುತ್ತದೆ. ಈ ರೀತಿ ವಿದೇಶೀಯರು ಸಂಕಲ್ಪವನ್ನು ಮಾಡುತ್ತೀರಾ? ಈಗ ಎಲ್ಲಾ ಕಡೆಯಿಂದ ಮಾಯೆಯ ಯುದ್ಧವು ಸಮಾಪ್ತಿಯಾಗುತ್ತದೆ. **(12–11–1979)**

ಡ್ರಾಮಾದ ಯಾವುದೇ ದೃಶ್ಯವನ್ನು ನೋಡಿದರೂ, ಅದು ಏರುಪೇರಿನ ದೃಶ್ಯವೇ ಇರಬಹುದು ಅಥವಾ ಅಚಲದ ದೃಶ್ಯವೇ ಇರಬಹುದು. ಆದರೆ ಎರಡರಲ್ಲೂ ನಿಶ್ಚಯವಿರಬೇಕು. ಏರುಪೇರಿನ ದೃಶ್ಯದಲ್ಲಿಯೂ ಕಲ್ಯಾಣದ ಅನುಭವವಾಗಬೇಕು. ಇಂತಹ ನಿಶ್ಚಯಬುದ್ಧಿ ಇರಬೇಕು. ವಾತಾವರಣವು ಅಲುಗಾಡಿಸುವಂತಹದ್ದು ಆಗಿರಲಿ, ಸಮಸ್ಯೆಯು ವಿಕರಾಳ ರೂಪದ್ದಾಗಿರಲಿ, ಆದರೆ ಸದಾ ನಿಶ್ಚಯ ಬುದ್ಧಿ ಇರಬೇಕು. ಇದನ್ನೇ ವಿಜಯವೆಂದು ಹೇಳಲಾಗುತ್ತದೆ. ಆದ್ದರಿಂದ ನಿಶ್ಚಯದ ಆಧಾರದಿಂದ ವಿಕರಾಳ ಸಮಸ್ಯೆಯೂ ಸಹ ಶೀತಲವಾಗಿ ಬಿಡುತ್ತದೆ.

ಡ್ರಾಮಾದ ಜ್ಞಾನದಿಂದ ಏಕೆ, ಏನು ಎನ್ನುವ ಪ್ರಶ್ನೆಗಳನ್ನು ಸಮಾಪ್ತಿ ಮಾಡುವವರೇ ಪ್ರಕೃತಿಜೀತ್ ಮತ್ತು ಮಾಯಾಜೀತ್ ಆಗುತ್ತಾರೆ. ಎಲ್ಲರೂ ಪ್ರಕೃತಿಜೀತ್ ಮತ್ತು ಮಾಯಾಜೀತರು ಆಗಿರುವಿರಾ? ಈ ಐದು ತತ್ವಗಳೂ ಸಹ ತಮ್ಮ ಕಡೆ ಸೆಳೆಯಬಾರದು ಮತ್ತು ಐದು ವಿಕಾರಗಳೂ ಸಹ ಯುದ್ಧವನ್ನು ಮಾಡಬಾರದು. ಈ ರೀತಿಯಾಗಿ ಮಾಯಾಜೀತ್ ಮತ್ತು ಪ್ರಕೃತಿಜೀತ್ ಎರಡೂ ಪೇಪರ್‌ನಲ್ಲಿ ಪಾಸಾಗಿದ್ದೀರಾ? ಒಂದುವೇಳೆ ಪ್ರಕೃತಿಯಿಂದ ಯಾವುದೇ ಪೇಪರ್ ಬಂದರೆ, ಪಾಸಾಗುವಂತಹ ಶಕ್ತಿಯು ಧಾರಣೆಯಾಗಿದೆಯೇ? ಏರುಪೇರಿನಲ್ಲಿ ಬರುವುದಿಲ್ಲ ತಾನೇ? ಸ್ವಲ್ಪವಾದರೂ ಏರುಪೇರಿನಲ್ಲಿ ಬರುವುದು ಎಂದರೆ ಫೇಲ್ (ಅನುತ್ತೀರ್ಣ) ಆಗುವುದು ಎಂದು ಅರ್ಥ. ಇದು ಏನು, ಇದು ಏಕೆ, ಈ ರೀತಿಯ ಪ್ರಶ್ನೆಗಳು ಉತ್ಪನ್ನವಾದರೂ ಪರಿಣಾಮ ಏನಾಗುತ್ತದೆ? ಒಂದುವೇಳೆ ಸ್ವಲ್ಪವಾದರೂ ಪ್ರಕೃತಿಯ ಯಾವುದೇ ಸಮಸ್ಯೆಗಳು ಯುದ್ಧ ಮಾಡುವಂತಾಯಿತು ಎಂದರೆ ಫೇಲ್ ಆಗಿ ಬಿಡುತ್ತೀರಿ. ಏನೇ ಆಗಲಿ, ಆದರೆ ಆಂತರ್ಯದಿಂದ ಸದಾ 'ವಾಹ್ ಮಧುರ ಡ್ರಾಮಾ' ಎನ್ನುವಂತಹ ಧ್ವನಿ ಬರಬೇಕಾಗಿದೆ. ಡ್ರಾಮಾದ ಜ್ಞಾನವನ್ನು ಇಷ್ಟೊಂದು ಪಕ್ಕಾ ಮಾಡಿಕೊಂಡಿದ್ದೀರಾ? ಅಥವಾ ಒಳ್ಳೆಯ ಮಾತಿನಲ್ಲಿ ಡ್ರಾಮಾ ಎಂದು ಹೇಳಿ, ಏರುಪೇರಿನ ಮಾತಿನಲ್ಲಿ ಹಾಯ್ ಹಾಯ್ ಎನ್ನುತ್ತೀರಾ? ಹಾಯ್ ಏನಾಯಿತು ಎಂದು ಸಂಕಲ್ಪದಲ್ಲೂ ಬರಬಾರದು, ಈ ರೀತಿಯಾಗಿ ಶಕ್ತಿಶಾಲಿಗಳಾಗಿದ್ದೀರಾ? ಏಕೆಂದರೆ ಮುಂದೆ ಹೋಗುತ್ತಾ ಇಂತಹ ಸಮಸ್ಯೆಗಳು ಪ್ರಕೃತಿಯ ಮೂಲಕವೂ ಬರುವುದಿದೆ. ಪ್ರಾಕೃತಿಕ ಆಪತ್ತುಗಳು ದಿನ ಪ್ರತಿ ದಿನ ಹೆಚ್ಚುವಂತಹದ್ದಾಗಿದೆ. ಯಾವುದೇ ಸಂಕಲ್ಪದಲ್ಲಿಯೂ ಏರುಪೇರು ಆಗಬಾರದಂತಹ ಸ್ಥಿತಿ ಇರಬೇಕಾಗಿದೆ. ಈ ರೀತಿಯಾಗಿ ಅಚಲ ಅಡೋಲರು ಆಗಿದ್ದೀರಾ? ಒಂದುವೇಳೆ ಬಹಳ ಸಮಯದಿಂದ ಮಾಯಾಜೀತರು ಪ್ರಕೃತಿಜೀತರು ಆಗುವ ಅಭ್ಯಾಸವಿಲ್ಲದಿದ್ದರೆ ರಿಸಲ್ಟ್ (ಫಲಿತಾಂಶ) ಏನಾಗುತ್ತದೆ? ಒಂದು ಸೆಕೆಂಡಿನ ಪೇಪರ್ ಬರುತ್ತದೆ. ಆ ಸಮಯದಲ್ಲಿ ತಯಾರಿ ಮಾಡಿಕೊಳ್ಳುವುದರಲ್ಲಿ ತೊಡಗಿದರೆ, ಫಲಿತಾಂಶವು ಹೊರ ಬಂದು ಬಿಡುತ್ತದೆ. ಒಂದು ಸೆಕೆಂಡಿನಲ್ಲಿ ಪಾಸಾಗುವ ಅಭ್ಯಾಸವಿರಬೇಕಾಗಿದೆ. ಒಂದುವೇಳೆ ಯೋಗವನ್ನಿಡಬೇಕು, ನೆನಪಿನಲ್ಲಿ ಕುಳಿತುಕೊಳ್ಳಬೇಕು ಎಂದು ಯೋಚಿಸುತ್ತಿದ್ದರೂ ಕೂಡ, ಆ ಘಳಿಗೆ ಮುಗಿದು ಹೋಗುತ್ತದೆ. ಯುದ್ಧದಲ್ಲಿಯೇ ಶರೀರವನ್ನು ಬಿಟ್ಟು ಬಿಡುವಿರಿ. ಪುರುಷಾರ್ಥಿ ಜೀವನದಲ್ಲಿ ಯುದ್ಧವನ್ನು ಮಾಡುತ್ತಾ ಮಾಡುತ್ತಾ ಶರೀರವನ್ನು ಬಿಟ್ಟು ಬಿಟ್ಟರೆ ಫಲಿತಾಂಶವೇನಾಗುತ್ತದೆ? ಚಂದ್ರವಂಶಿಗಳಾಗಿ ಬಿಡುತ್ತೀರಿ. ಆದ್ದರಿಂದ ಪ್ರತಿಯೊಬ್ಬರೂ ಸದಾ 108 ಮಣಿಗಳ ಮಾಲೆಯಲ್ಲಿ ಬರುವಂತಹ ಲಕ್ಷ್ಯವನ್ನು ಇಟ್ಟುಕೊಳ್ಳಿರಿ. ಲಕ್ಷ್ಯವು ಶ್ರೇಷ್ಠವಾಗಿದ್ದಾಗ, ಲಕ್ಷಣವು ಸ್ವತಃವಾಗಿ ಬಂದು ಬಿಡುತ್ತದೆ. 16 ಸಾವಿರದ ಲಕ್ಷ್ಯವನ್ನು ಎಂದಿಗೂ ಇಟ್ಟುಕೊಳ್ಳಬೇಡಿ. ಮೊದಲಿನ ನಂಬರ್‌ನಲ್ಲಿ ಬರುವಂತಹ ಪುರುಷಾರ್ಥ ಮತ್ತು ಲಕ್ಷ್ಯವನ್ನು ಇಟ್ಟುಕೊಳ್ಳಿರಿ. **(05–12–1979)**

**'ಎಲೆ ಎಲೆಯನ್ನು ಭಗವಂತ ಅಲ್ಲಾಡಿಸುತ್ತಾನೆ' ಎಂಬ ಗಾಯನದ ರಹಸ್ಯ.** ಒಂದುವೇಳೆ ಎಲೆ ಅಲುಗಾಡುತ್ತಿದ್ದರೂ ಅದನ್ನು ಅಲುಗಾಡಿಸುವವರು ತಂದೆ ಆಗಿದ್ದಾರೆ ಎನ್ನುವಂತಹ ಹೇಳಿಕೆ ಮತ್ತು ನಂಬಿಕೆಯ ಮಾತು ತಿಳುವಳಿಕೆ ಇಲ್ಲದಿದ್ದರೂ ಭಕ್ತಿಮಾರ್ಗದಲ್ಲಿದೆ. ಆದರೆ ಈ ಎಲೆಗಳನ್ನು ಬಾಬಾ ಅಲುಗಾಡಿಸುತ್ತಿಲ್ಲ, ಆದರೆ ಡ್ರಾಮಾನುಸಾರವಾಗಿ ಎಲ್ಲವೂ ನಡೆಯುತ್ತಿದೆ ಎನ್ನುವ ರಹಸ್ಯವನ್ನು ತಾವು ತಿಳಿದುಕೊಂಡಿರುವಿರಿ. ಈ ಗಾಯನವು ಸ್ಥೂಲ ಎಲೆಗಳಿಗೆ ಅನ್ವಯವಾಗುವುದಿಲ್ಲ. ಆದರೆ ತಾವೆಲ್ಲರೂ ಕಲ್ಪವೃಕ್ಷದ ಮೊದಲನೇ ಎಲೆಗಳಾಗಿರುವಿರಿ. ಸಂಗಮಯುಗೀ ಗೋಲ್ಡನ್ ಏಜ್‌ಡ್ ಎಲೆಗಳಾದ ನೀವು ತಂದೆಯ ಮೂಲಕ ಕಬ್ಬಿಣದಿಂದ ವಜ್ರವಾಗಿ ಬಿಟ್ಟಿದ್ದೀರಿ. ಈ ಚೈತನ್ಯ ಎಲೆಗಳನ್ನು ಈ ಸಮಯದಲ್ಲಿ ಡೈರೆಕ್ಟ್ ತಂದೆಯು ನಡೆಸುತ್ತಿದ್ದಾರೆ. **(19–05–1979)**

ಮೂರು ಸ್ಮೃತಿಗಳಿವೆ – **ಒಂದು ಸ್ವಯಂನ ಸ್ಮೃತಿ, ಎರಡನೆಯದು ತಂದೆಯ ಸ್ಮೃತಿ ಮತ್ತು ಮೂರನೆಯದು ಡ್ರಾಮಾದ ಜ್ಞಾನದ ಸ್ಮೃತಿ.** ವಿಶೇಷವಾದ ಈ ಮೂರು ಸ್ಮೃತಿಗಳಲ್ಲೇ ಇಡೀ ಜ್ಞಾನದ ವಿಸ್ತಾರವು ಸಮಾವೇಶವಾಗಿದೆ. ಜ್ಞಾನವೆಂಬ ವೃಕ್ಷದ ಈ ಮೂರು ಸ್ಮೃತಿಗಳಾಗಿವೆ. ಹೇಗೆ ವೃಕ್ಷಕ್ಕೆ

ಮೊದಲು ಬೀಜವಿರುತ್ತದೆ, ಆ ಬೀಜದ ಮೂಲಕ ಮೊದಲು ಎರಡು ಎಲೆಗಳು ಹೊರ ಬರುತ್ತದೆ, ನಂತರ ವೃಕ್ಷದ ವಿಸ್ತಾರವು ಆಗುತ್ತಾ ಹೋಗುತ್ತದೆಯೋ, ಅದೇ ರೀತಿಯಲ್ಲಿ ಮುಖ್ಯವಾಗಿರುವುದು ಬೀಜ ತಂದೆಯ ಸ್ಮೃತಿಯಾಗಿದೆ. ನಂತರ ಎರಡು ಎಲೆಗಳು ಅಂದರೆ ವಿಶೇಷ ಸ್ಮೃತಿಗಳು – ಆತ್ಮದ ಸಂಪೂರ್ಣ ಜ್ಞಾನ ಮತ್ತು ಡ್ರಾಮಾದ ಸ್ಪಷ್ಟ ಜ್ಞಾನ. ಈ ಮೂರೂ ಸ್ಮೃತಿಗಳ ಧಾರಣೆ ಮಾಡುವವರೇ 'ಸ್ಮೃತಿಭವ' ಎಂಬ ವರದಾನಿಗಳು ಆಗಿ ಬಿಡುತ್ತಾರೆ. ಈ ಮೂರು ಸ್ಮೃತಿಗಳ ಆಧಾರದಿಂದ ಮಾಯಾಜೀತರು, ಜಗತ್‌ಜೀತರು ಆಗಿಬಿಡುತ್ತಾರೆ. ಸಂಗಮ ಯುಗದಲ್ಲಿ ಈ ಮೂರು ಸ್ಮೃತಿಗಳದ್ದೇ ವಿಶೇಷತೆಯಿದೆ. ಆದ್ದರಿಂದ ರಾಜಯೋಗಿ ತಿಲಕ ಮೂರು ಸ್ಮೃತಿಗಳ ಅಂದರೆ ಮೂರು ಬಿಂದುಗಳ ರೂಪದಲ್ಲಿ ಪ್ರತಿಯೊಬ್ಬರ ಮಸ್ತಕದಲ್ಲಿ ಹೊಳೆಯುತ್ತದೆ. ಹೇಗೆ ಒಂದು ವೇಳೆ ತ್ರಿಶೂಲದಲ್ಲಿ ಒಂದು ಭಾಗ ಮುರಿದು ಹೋದರೆ ಅದನ್ನು ಯಥಾರ್ಥವಾದ ಶಸ್ತ್ರವೆಂದು ಹೇಳಲಾಗುವುದಿಲ್ಲ. **(26–12–1979)**

ಸೂಕ್ಷ್ಮವತನದಲ್ಲಿ ಚೆಕ್ಕಿಂಗ್ ಮಾಡಿಕೊಳ್ಳುವುದಕ್ಕಾಗಿ ಪರಿಶ್ರಮ ಪಡುವ ಅವಶ್ಯಕತೆಯಿಲ್ಲ ಎಂದು ಹೇಳಲಾಗಿದೆ. ಸಂಕಲ್ಪದ ಸ್ವಿಚ್ ಆನ್ ಮಾಡಿದ ತಕ್ಷಣ ಪ್ರತಿಯೊಬ್ಬರ ಎಲ್ಲಾ ಪ್ರಕಾರದ ಒಟ್ಟು ಸ್ವರೂಪಗಳು ಪ್ರಕಟವಾಗುತ್ತದೆ. ಸಾಕಾರ ಪ್ರಪಂಚದ ರೀತಿಯಲ್ಲಿ ಪರಿಶ್ರಮ ಪಡುವ ಅವಶ್ಯಕತೆ ಇರುವುದಿಲ್ಲ. ಯಾವ ವೈಜ್ಞಾನಿಕ ಸಾಧನಗಳು ಈಗ ಹೊರ ಬರುತ್ತಿದೆಯೋ ಅವುಗಳ ಪರಿಶುದ್ಧ ರೂಪ ವತನದಲ್ಲಿ ಮೊದಲಿನಿಂದಲೇ ಇದೆ. ಈ ಟಿ.ವಿ.ಯಂತೂ ಈಗ ಹೊರಬಂದಿದೆ. ಆದರೆ ಮಕ್ಕಳಾದ ತಮಗೆ ಸೂಕ್ಷ್ಮವತನದ ದೃಶ್ಯಗಳನ್ನು ಸ್ಥಾಪನೆಯ ಆದಿಯಲ್ಲೇ ತೋರಿಸಿ ಅನುಭವ ಮಾಡಿಸಲಾಗಿದೆ. ವಿಜ್ಞಾನಿಗಳು ಕಷ್ಟ ಪಡುವ ಮಕ್ಕಳು ಈಗ ನಕ್ಷತ್ರಗಳ ಕಡೆ ಹೋಗುವ ಪರಿಶ್ರಮ ಪಡುತ್ತಿದ್ದಾರೆ. ಚಂದ್ರನಲ್ಲಿ ಏನು ಸಿಗಲಿಲ್ಲ ಅಂದ ಮೇಲೆ ನಕ್ಷತ್ರಗಳಲ್ಲಿ ಹುಡುಕುತ್ತಿದ್ದಾರೆ. ಆದರೆ ಮಕ್ಕಳಾದ ತಾವು ಶಾಂತಿಯ ಶಕ್ತಿಯಿಂದ, ನಕ್ಷತ್ರಗಳಿಗಿಂತಲೂ ದೂರ, ಪರಂಧಾಮದ ಅನುಭವವನ್ನು ಆದಿಯಿಂದಲೇ ಮಾಡುತ್ತಿರುವಿರಿ. ಆದರೂ ಸಹ ಪ್ರತಿಯೊಂದು ಮಗುವಿಗೂ ಪರಿಶ್ರಮದ ಫಲ ಅವಶ್ಯವಾಗಿ ದೊರೆಯುತ್ತದೆ. ಅವರಿಗೂ ಸಹ ವಿಶ್ವದಲ್ಲಿ ಹೆಸರು, ಕೀರ್ತಿ, ಗೌರವ ಮತ್ತು ಸಫಲತೆಯ ಅಲ್ಪಕಾಲದ ಖುಷಿಯು ಪ್ರಾಪ್ತಿಯಾಗುತ್ತದೆ. ವಿಜ್ಞಾನಿಗಳೂ ಸಹ ಡ್ರಾಮಾದಲ್ಲಿ ಪರವಶರಾಗಿದ್ದಾರೆ ಅಂದರೆ ಪಾತ್ರಕ್ಕೆ ವಶರಾಗಿದ್ದಾರೆ. ದೇವತೆಗಳ ಸಮ್ಮುಖದಲ್ಲಿ ಪ್ರಕೃತಿಯು ವಜ್ರ ವೈಡೂರ್ಯಗಳನ್ನು ತಟ್ಟೆಗಳಲ್ಲಿ ತುಂಬಿಕೊಂಡು ಬಂದಿತು ಎನ್ನುವ ಗಾಯನವಿದೆ. ಭೂಮಿ ಮತ್ತು ಸಾಗರಗಳು ತಮಗಾಗಿ ನಾಲ್ಕಾರು ಕಡೆ ಹರಡಿ ಹೋಗಿರುವ ಚಿನ್ನ, ಮುತ್ತು, ವಜ್ರ ಮುಂತಾದವುಗಳನ್ನು ಒಂದು ಸ್ಥಾನದಲ್ಲಿ ಒಟ್ಟುಗೂಡಿಸಲು ನಿಮಿತ್ತವಾಗುತ್ತದೆ. ಇದಕ್ಕೇ ತಟ್ಟೆಯಲ್ಲಿ ತುಂಬಿಸಿಕೊಂಡು ಬಂದವು ಎಂದು ಹೇಳಲಾಗುತ್ತದೆ. ಹರಡಿಹೋದ ವಸ್ತುಗಳು ತಟ್ಟೆಯಲ್ಲಿ ಒಟ್ಟುಗೂಡುತ್ತದೆ ಅಲ್ಲವೇ? ಅಂದಾಗ ಈ ಭಾರತ ಮತ್ತು ಸುತ್ತ ಮುತ್ತಲಿನ ಸ್ಥಾನಗಳು ತಟ್ಟೆಯಾಗಿ ಬಿಡುತ್ತದೆ. ಸೇವಕರಾಗಿ, ವಿಶ್ವದ ಮಾಲಿಕರಿಗಾಗಿ ತಯಾರು ಮಾಡಿ ತಮ್ಮ ಮುಂದೆ ಇಡುತ್ತದೆ. ಅದೇ ರೀತಿಯಲ್ಲಿ ದೇವತೆಗಳಿಗೆ ಎಲ್ಲಾ ರಿದ್ಧಿ ಸಿದ್ಧಿಗಳು ಸಹ ಸೇವಾಧಾರಿಗಳು ಆಗುತ್ತದೆ. ಯಾವುದೆಲ್ಲಾ ಈ ಭಿನ್ನ ಭಿನ್ನ ಪ್ರಕಾರದ ಸಾಧನಗಳ ಮೂಲಕ ಸಫಲತೆ ಅಂದರೆ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಾರೋ, ಈ ಎಲ್ಲಾ ಸಿದ್ಧಿಗಳು ಎಂದರೆ ವಿಜ್ಞಾನದ ಪರಿಶುದ್ಧ ರೂಪ, ಸಫಲತೆಯ ರೂಪ, ಸಿದ್ಧಿಯ ರೂಪದಲ್ಲಿ ತಮ್ಮ ಸೇವಾಧಾರಿಗಳು ಆಗುತ್ತವೆ. ಈಗಂತೂ ಅಪಘಾತಗಳೂ ಇವೆ ಹಾಗು ಪ್ರಾಪ್ತಿಯೂ ಇದೆ. ಆದರೆ ಪರಿಶುದ್ಧ ಸಿದ್ಧಿ ರೂಪದಲ್ಲಿ ದುಃಖದ ಕಾರಣ ಸಮಾಪ್ತಿಯಾಗಿ, ಸದಾ ಸುಖ ಮತ್ತು ಸಫಲತಾ ರೂಪ ಆಗಿಬಿಡುತ್ತದೆ. ಯಾರೆಲ್ಲಾ ಭಿನ್ನ ಭಿನ್ನ ವಿಭಾಗದವರು ಇದ್ದಾರೋ ಅವರು ತಮ್ಮ ತಮ್ಮ ಜ್ಞಾನದ ಸಿದ್ಧಿಯನ್ನು, ಅನ್ವೇಷಣೆಯ ಸಿದ್ಧಿಯನ್ನು ತಮ್ಮ ಸೇವೆಗೆ ಬಳಸುತ್ತಾರೆ. ಇದಕ್ಕೇ ಪ್ರಕೃತಿಯೂ ದಾಸಿಯಾಗುತ್ತದೆ ಮತ್ತು ಎಲ್ಲಾ ರಿದ್ಧಿ ಸಿದ್ಧಿಗಳ ಪ್ರಾಪ್ತಿಯಾಗುತ್ತದೆ ಎಂದು ಹೇಳಲಾಗಿತ್ತದೆ. ಆಜ್ಞೆ ಮಾಡಿದಿರಿ ಮತ್ತು ಕಾರ್ಯವು ಆಯಿತು. ಇದಕ್ಕೆ ಹೇಳಲಾಗುತ್ತದೆ ಸಿದ್ಧಿ ಸ್ವರೂಪರು ಎಂದು. **(04–02–1980)**

**ಸೇವಾಧಾರಿ ಸಹೋದರ–ಸಹೋದರಿಯರ ಜೊತೆ:** ಸೇವಾಧಾರಿಗಳು ಎಂದರೆ ತಂದೆಯ ಸಮಾನರಾಗುವುದು ಎಂಬುದಾಗಿದೆ. ತಂದೆಯೂ ಸಹ ಸೇವಾಧಾರಿಯಾಗಿ ಬರುತ್ತಾರೆ. ಸೇವಾಧಾರಿಗಳಾಗುವುದು ಎಂದರೆ ತಂದೆಯ ಸಮಾನರಾಗುವುದಾಗಿದೆ. ಸೇವೆಯಲ್ಲಿ ಛಾನ್ಸ್ (ಅವಕಾಶ) ಸಿಕ್ಕಿತು ಅಂದರೆ ಡ್ರಾಮಾದಲ್ಲಿ ಲಾಟರಿಯಲ್ಲಿ ಹೆಸರು ಬರುವುದೆಂದು ತಿಳಿಯಬೇಕು. ಸದಾ ಸೇವೆಯ ಅವಕಾಶವನ್ನು ತೆಗೆದುಕೊಳ್ಳುತ್ತಿರಬೇಕು. ಎಲ್ಲರ ಫಲಿತಾಂಶವು ಚೆನ್ನಾಗಿದೆ. ಅಭಿನಂದನೆಗಳು. **(07–02–1980)**

**ದಾದೀಜಿಯವರೊಂದಿಗೆ:** ಸಮಯ ಸಮೀಪ ಬರುತ್ತಿದೆಯೇ ಅಥವಾ ನೀವು ಸಮಯದ ಸಮೀಪಕ್ಕೆ ಬರುತ್ತಿದ್ದೀರಾ? ತಾವೇ ಬರುತ್ತಿರುವಿರಾ ಅಥವಾ ಸಮಯವೇ ನಿಮ್ಮನ್ನು ಎಳೆಯುತ್ತಿದೆಯೇ? ಡ್ರಾಮಾ ತಮ್ಮನ್ನು ನಡೆಸುತ್ತಿದೆಯೇ ಅಥವಾ ತಾವು ಡ್ರಾಮಾವನ್ನು ನಡೆಸುತ್ತಿರುವಿರಾ? ಮಾಸ್ಟರ್ ತಾವಾಗಿದ್ದೀರೋ ಅಥವಾ ಡ್ರಾಮಾ ಆಗಿದೆಯೋ? ರಚಯಿತ ನೀವಾಗಿದ್ದೀರಾ ಅಥವಾ ಡ್ರಾಮಾ ಆಗಿದೆಯೇ?

ಈಗ ಅನೇಕ ಸಲ ಡ್ರಾಮಾದಲ್ಲಿ ಏನಿದೆಯೋ ಅದೇ ಆಗುತ್ತದೆ ಎನ್ನುವ ಮಾತು ಬರುತ್ತದೆ. ಆದರೆ ಮುಂದೆ ಹೋಗುತ್ತಾ ಡ್ರಾಮಾದಲ್ಲಿ ಏನು ಆಗಲಿದೆ ಎನ್ನುವುದು ಎಷ್ಟು ಸ್ಪಷ್ಟವಾಗಿ ಅರಿವು ಆಗುತ್ತದೆ ಎಂದರೆ ಮತ್ತೆ ನೀವು ಎಂದಿಗೂ ಸಹ ಏನಾಗಬೇಕೋ ಅದೇ ಆಗುತ್ತದೆ ಎಂದು ಹೇಳುವುದಿಲ್ಲ. ಡ್ರಾಮಾದಲ್ಲಿ ಇದೇ ಆಗುತ್ತದೆ ಎಂದು ಅಧಿಕಾರಿಯುತವಾಗಿ ಹೇಳುತ್ತಿರಿ ಮತ್ತು ಅದೇ ಆಗುತ್ತದೆ. ಹೇಗೆ ಭವಿಷ್ಯದ ಪ್ರಾಲಬ್ಧ ಸ್ಪಷ್ಟವಿದೆಯೋ ಅದೇ ರೀತಿ ಡ್ರಾಮಾದಲ್ಲಿ ಏನಾಗುತ್ತದೆಯೋ ಅದೂ ಸಹ ಸ್ಪಷ್ಟವಾಗುತ್ತದೆ. ಆಗುತ್ತದೆಯೋ, ಇಲ್ಲವೋ ಯಾರಿಗೆ ಗೊತ್ತು ಎಂದು ಯಾರು ಎಷ್ಟೇ ಹೇಳಿದರೂ ಒಪ್ಪುತ್ತೀರಾ? ಇಲ್ಲವಲ್ಲವೆ? ಹೀಗೆ ಈ ಮಾತಿನಲ್ಲಿ ಜ್ಞಾನಪೂರ್ಣತೆಯ ಆಧಾರದಿಂದ ಮಾಸ್ಟರ್ ಆಗಿ ಬಿಟ್ಟಿದ್ದೀರಿ. ಅಧಿಕಾರಿಯಾಗಿದ್ದೀರಿ. ಯಾವುದು ನಾಳೆ ಆಗುವುದಿದೆಯೋ ಅಥವಾ ಒಂದು ಸೆಕೆಂಡಿನ ನಂತರ ಆಗುವುದಿದೆಯೋ ಇದನ್ನೂ ಸಹ ಇಷ್ಟೇ ಅಧಿಕಾರದಿಂದ ಜ್ಞಾನಪೂರ್ಣತೆಯ ಶಕ್ತಿಯಿಂದ, ಸ್ಪಷ್ಟತೆಯ ಶಕ್ತಿಯಿಂದ 'ಇದು ಆಗಿಯೇ ಆಗುತ್ತದೆ' ಎಂದು ಹೇಳುತ್ತೀರಿ. ಏನಾಗುತ್ತದೆಯೋ ನೋಡೋಣ ಎಂದಲ್ಲ. ನೋಡಿ ಆಗಿದೆ ಮತ್ತು ಅದೇ ಆಗುತ್ತದೆ. ಇಷ್ಟೊಂದು ಅಧಿಕಾರಯುತರು ಆಗುತ್ತಾ ಹೋಗುತ್ತೀರಿ. ಇದೂ ಸಹ ಒಂದು ಶಕ್ತಿಯಲ್ಲವೇ? ಆಗಲೇಬೇಕಾಗಿದೆ, ರಾಜ್ಯವು ನಮ್ಮದಾಗಲೇ ಬೇಕಾಗಿದೆ, ಯಾರು ಎಷ್ಟೇ ಅಲುಗಾಡಿಸುವ ಪ್ರಯತ್ನ ಮಾಡಲಿ, ಆದರೆ ಅದು ಎಷ್ಟು ಸ್ಪಷ್ಟವಾಗಿರುತ್ತದೆ ಎಂದರೆ ಈ ವಿಚಾರಕ್ಕೆ ಅಧಿಕಾರಿಗಳಾಗಿ ಬಿಡುತ್ತೀರಿ. ಯಾವಾಗ ಸ್ವಲ್ಪವಾದರೂ ಏಕಾಂತ ವಾಸಿಗಳಾಗುತ್ತೀರೋ ಆಗ ಇದು ಸಾಧ್ಯವಾಗುತ್ತದೆ. ಎಷ್ಟು ಏಕಾಂತವಾಸಿ ಗಳಾಗುತ್ತೀರೋ ಅಷ್ಟು ಚೆನ್ನಾಗಿ ಟಚ್ಚಿಂಗ್ ಆಗುತ್ತದೆ. ಏನಾಗುತ್ತದೆ ಎನ್ನುವುದು ವರ್ತಮಾನದಷ್ಟೇ ಭವಿಷ್ಯವು ಸ್ಪಷ್ಟವಾಗಿ ಬಿಡುತ್ತದೆ. ಈಗ ಸಮಯ ಕಡಿಮೆ ಸಿಗುತ್ತದೆ. ಡ್ರಾಮಾದ ಈ ದೃಶ್ಯ ಪರದೆಯ ಹಿಂದೆ ಇದೆ. ಇದರ ಅನುಭವ ಸಹ ಆಗುವುದು. ಆದ್ದರಿಂದ ಈ ವರ್ಷ ಎಷ್ಟು ಸೇವೆಯ ಗೊಂದಲಗಳಿವೆಯೋ ಅಷ್ಟು ಸಂಪೂರ್ಣವಾಗಿ ಅಂಡರ್ ಗ್ರೌಂಡ್‌ನಲ್ಲಿ (ಅಂತರ್‌ಮುಖತೆಯಲ್ಲಿ) ಹೋಗಿ ಬಿಡಿ ಎಂದು ಬಾಬಾ ಹೇಳಿದ್ದಾರೆ. ಯಾವುದಾದರೂ ಹೊಸ ಸಂಶೋಧನೆ ಅಥವಾ ಶಕ್ತಿಶಾಲಿ ಸಂಶೋಧನೆ ಆಗುತ್ತದೆ ಎಂದರೆ, ಅಷ್ಟು ಅಂತರ್‌ಮುಖತೆಯಲ್ಲಿ ಹೋಗುತ್ತಾರೆ. ಅಂದರೆ ಏಕಾಂತವಾಸಿಗಳು ಆಗುವುದು ಎಂದರೆ ಅಂತರ್‌ಮುಖಿ ಗಳಾಗುವುದಾಗಿದೆ. ಎಷ್ಟೇ ಸಮಯ ಸಿಗಲಿ, ಒಂದು ಗಂಟೆ ಅಥವಾ ಅರ್ಧ ಗಂಟೆ ಒಟ್ಟಿಗೆ ಸಮಯ ಸಿಗದಿದ್ದರೂ, ಈಗೀಗ ಮಾತಾಡಿದಿರಿ, ಈಗೀಗ ಐದು ನಿಮಿಷ ದೊರೆತರೂ ಸಾಗರದ ಆಳದಲ್ಲಿ ಹೋಗಿಬಿಡುವ ಅಭ್ಯಾಸ ಆಗಿಬಿಡುತ್ತದೆ. ಇವರು ಇನ್ನೆಲ್ಲಿಯೋ ಇದ್ದಾರೆ, ಇಲ್ಲಿ ಇಲ್ಲ ಎಂದು ಬರುವವರೂ ಸಹ ತಿಳಿದುಕೊಳ್ಳುತ್ತಾರೆ. ಅವರ ಸಂಕಲ್ಪಗಳಿಗೂ ಸಹ ಬ್ರೇಕ್ ಸಿಕ್ಕಿಬಿಡುತ್ತದೆ. ಶಬ್ದದಲ್ಲಿ ಬರಬೇಕು ಎಂದು ಬಯಸಿದರೂ ಬರಲು ಆಗುವುದಿಲ್ಲ. ಶಾಂತಿಯ ಮೂಲಕ ಎಷ್ಟು ಸ್ಪಷ್ಟ ಉತ್ತರ ದೊರೆಯುತ್ತದೆ ಎಂದರೆ, ವಾಣಿಯ ಮೂಲಕವೂ ಅಷ್ಟು ಸ್ಪಷ್ಟ ಉತ್ತರ ದೊರೆಯುವುದಿಲ್ಲ. ಹೇಗೆ ಸಾಕಾರ ತಂದೆಯು ವ್ಯವಹಾರದಲ್ಲಿದ್ದರೂ ಮಧ್ಯ ಮಧ್ಯದಲ್ಲಿ ಅಂತರ್‌ಮುಖಿ ಸ್ಥಿತಿಯ ಅನುಭವದಲ್ಲಿ ಇದ್ದುದನ್ನು ನೋಡಿದೆವು. ಕೇಳುತ್ತಾ, ಹೇಳುತ್ತಾ, ಮಾರ್ಗದರ್ಶನವನ್ನು ನೀಡುತ್ತಾ ಅಂಡರ್ ಗ್ರೌಂಡ್‌ನಲ್ಲಿ ಹೋಗಿ ಬಿಡುತ್ತಿದ್ದರು. ಆದ್ದರಿಂದ ಈಗ ಈ ಅಭ್ಯಾಸದ ಅಲೆಯ ಅವಶ್ಯಕತೆಯಿದೆ. ನೋಡು ನೋಡುತ್ತಿದ್ದಂತೆಯೇ ಇವರು ಅದೃಶ್ಯರಾಗಿ ಬಿಟ್ಟರೇನೋ, ಈ ಜಗತ್ತಿನಲ್ಲಿಯೇ ಇಲ್ಲವೇನೋ, ಈ ಫರಿಶ್ತಾ ಈ ದೇಹದ ಪ್ರಪಂಚದಿಂದ ಮತ್ತು ದೇಹದ ಭಾವನೆಯಿಂದ ದೂರವಾಗಿದ್ದಾರೆ ಎಂದು ಎನಿಸುತಿತ್ತು. ಇದಕ್ಕೆ ಎಲ್ಲರೂ ಸಾಕ್ಷಾತ್ಕಾರವೆನ್ನುತ್ತಾರೆ. ಯಾರೇ ಸಮ್ಮುಖದಲ್ಲಿ ಬಂದರೂ, ಅವರು ಇದೇ ಸ್ಥಿತಿಯಲ್ಲಿ ಸಾಕ್ಷಾತ್ಕಾರದ ಅನುಭವ ಮಾಡುತ್ತಾರೆ. ಯಾವ ರೀತಿ ಪ್ರಾರಂಭದಲ್ಲಿ ಸಾಕ್ಷಾತ್ಕಾರದ ಅಲೆ ಇತ್ತಲ್ಲವೇ? ಅದರಿಂದಲೇ ಹೆಸರು ನಾಲ್ಕೂ ಕಡೆ ಹರಡಿತ್ತಲ್ಲವೇ? ಜಾದೂ ಎಂದಾಗಲೀ ಅಥವ ಇನ್ನೇನೋ ಎಂದಾಗಲೀ ತಿಳಿದುಕೊಂಡಿರಲಿ, ಆದರೆ ಹೆಸರಂತೂ ಇದರಿಂದಲೇ ಪ್ರಚಾರವಾಯಿತಲ್ಲವೇ. ಯಾವಾಗ ಇಂತಹ ಸ್ಥಿತಿಯಲ್ಲಿ ಅನುಭವ ಸಮಾನ ಸಾಕ್ಷಾತ್ಕಾರವಾಗುತ್ತದೋ ಆಗ ಪ್ರತ್ಯಕ್ಷತೆಯಾಗುತ್ತದೆ. ಹೆಸರು ಪ್ರಸಿದ್ಧವಾಗುತ್ತದೆ, ಸಾಕ್ಷಾತ್ಕಾರವಾಗುತ್ತದೆ. ಪ್ರತ್ಯಕ್ಷಫಲದ ಅನುಭವವಾಗುತ್ತದೆ. ಈ ಪ್ರತ್ಯಕ್ಷ ಫಲದ ಸೀಜನ್‌ನಲ್ಲಿ ಪ್ರತ್ಯಕ್ಷತೆ ಆಗುತ್ತದೆ. ಇದಕ್ಕೇ ವರದಾನಿ ರೂಪವೆಂದು ಹೇಳಲಾಗುತ್ತದೆ. ಯಾರೇ ಬಂದರೂ ಅವರು ಅನುಭವ ಮಾಡಿಕೊಂಡು ಹೋಗಲಿ. ಮಾತನಾಡುತ್ತಾ–ಆಡುತ್ತಾ, ಸ್ವಯಂ ಅಶರೀರಿಯಾಗುತ್ತಾರೆ ಮತ್ತು ಅನ್ಯರನ್ನೂ

ಅಶರೀರಿಯನ್ನಾಗಿ ಮಾಡುತ್ತಾರೆ. ಇದೂ ಆಗಬೇಕಾಗಿದೆ. ವಾಣಿಯ ಮೂಲಕ ಕಾರ್ಯವನ್ನು ಮಾಡಿರುವುದನ್ನು ನೋಡಿರುತ್ತೀರಿ. ಈ ಅನುಭವ ಮಾಡುವ ಮತ್ತು ಮಾಡಿಸುವ ಸ್ಥಿತಿ ಸಮಸ್ಯೆಗಳನ್ನು ಒಂದು ಸೆಕೆಂಡಿನಲ್ಲಿ ಹಗುರ ಮಾಡುತ್ತದೆ. ಕಡಿಮೆ ಸಮಯದಲ್ಲಿ ಹೆಚ್ಚಿನ ಸಮಸ್ಯೆಗಳನ್ನು ಸೆಕೆಂಡಿನಲ್ಲಿ ಹಗುರ ಮಾಡುತ್ತದೆ. ಕಡಿಮೆ ಸಮಯದಲ್ಲಿ ಹೆಚ್ಚಿನ ಸಫಲತೆ ಉಂಟಾಗುತ್ತದೆ. ಈಗಿನ ಸಮಯದಲ್ಲಿ ಯಾರಿಗೇ ಆಗಲಿ, ಏನನ್ನೇ ಆದರೂ ಮಾತಿನ ಮೂಲಕ ಹೇಳಿದಾಗ, ಅವರು ಏನು ಹೇಳುತ್ತಾರೆ? ಹಾಂ, ಇದೆಲ್ಲವು ನಮಗೆ ತಿಳಿದಿದೆ, ಜ್ಞಾನಪೂರ್ಣರಾಗಿದ್ದೇವೆ. ಸೆಕೆಂಡ್‌ನಲ್ಲಿ ನಮಗೆ ತಿಳಿದಿದೆ ಎಂದು ಹೇಳಿಬಿಡುತ್ತಾರೆ. ಇದೇ ಕೇಳಲು ಸಿಗುತ್ತದೆ. ಯಾವ ತಪ್ಪಿಗೆ ಏನು ಶಿಕ್ಷೆ ಸಿಗುತ್ತದೆ ಎನ್ನುವುದನ್ನೂ ಎಲ್ಲರೂ ತಿಳಿದುಕೊಂಡಿರುತ್ತಾರೆ. ಅಂದ ಮೇಲೆ ಈಗ ಹೊಸ ವಿಧಾನದ ಅವಶ್ಯಕತೆಯಿದೆ. ಆ ವಿಧಾನ ಇದೇ ಆಗಿದೆ. ಅನುಭವದ ಕೊರತೆಯಿದೆ, ಜ್ಞಾನದ ಕೊರತೆಯಿಲ್ಲ. ಯಾರಿಗೇ ಆಗಲಿ ಒಂದು ಸೆಕೆಂಡ್ ಆದರೂ ಶಾಂತಿ ರೂಪದ, ಶಕ್ತಿ ರೂಪದ ಅನುಭವವನ್ನು ಮಾಡಿಸಿ. ಆಗ ಅವರು ಸುಮ್ಮನಾಗಿ ಬಿಡುತ್ತಾರೆ. **(20–01–1981)**

ಒಂದುವೇಳೆ, **ಡ್ರಾಮಾದಲ್ಲಿ ಏನೇ ಆಗುತ್ತಿದ್ದರೂ ಅದರಲ್ಲಿ ಕಲ್ಯಾಣವೇ ತುಂಬಿದೆ ಎನ್ನುವ ಸ್ಮೃತಿ ಸದಾ ಇದ್ದಲ್ಲಿ ಸಂಪಾದನೆಯು ಜಮಾ ಆಗುತ್ತಾ ಇರುತ್ತದೆ.** ತಿಳುವಳಿಕೆ ಇರುವ ಮಕ್ಕಳು ಡ್ರಾಮಾದಲ್ಲಿ ಏನೇ ಆಗುತ್ತಿದ್ದರೂ ಅದು ಕಲ್ಯಾಣಕಾರಿಯಾಗಿದೆ ಎಂದೇ ಭಾವಿಸುತ್ತಾರೆ. ಏಕೆ, ಹೇಗೆ ಎನ್ನುವ ಪ್ರಶ್ನೆಗಳು ತಿಳುವಳಿಕೆಯುಳ್ಳವರಲ್ಲಿ ಬರಲು ಸಾಧ್ಯವಿಲ್ಲ. ಒಂದುವೇಳೆ ಈ ಸಂಗಮ ಯುಗವು ಕಲ್ಯಾಣಕಾರಿ ಯುಗವಾಗಿದೆ, ತಂದೆಯೂ ಸಹ ಕಲ್ಯಾಣಕಾರಿಯಾಗಿದ್ದಾರೆ ಎಂಬ ಸ್ಮೃತಿಯಿದ್ದರೆ ಶ್ರೇಷ್ಠ ಸ್ಥಿತಿಯು ತಯಾರಾಗುತ್ತಾ ಹೋಗುತ್ತದೆ. ಹೊರಗಿನ ರೀತಿಯಿಂದ ನಷ್ಟ ಕಂಡುಬರುತ್ತಿದ್ದರೂ, ಆ ನಷ್ಟದಲ್ಲಿಯೂ ಕಲ್ಯಾಣವೇ ಸಮಾವೇಶಗೊಂಡಿದೆ ಎನ್ನುವಂತಹ ನಿಶ್ಚಯವಿರಬೇಕು. ಯಾವಾಗ ತಂದೆಯ ಜೊತೆ ಮತ್ತು ತಂದೆಯ ಕೈ ಇರುತ್ತದೆಯೋ ಆಗ ಅಕಲ್ಯಾಣವಾಗಲು ಸಾಧ್ಯವೇ ಇಲ್ಲ. ಈಗ ಬಹಳಷ್ಟು ಪರೀಕ್ಷೆಗಳು ಬರಲಿವೆ. ಅದರಲ್ಲಿ ಏಕೆ, ಏನು ಎನ್ನುವ ಪ್ರಶ್ನೆಗಳು ಬರಬಾರದು. ಏನೇ ಆಗುತ್ತಿದ್ದರೂ ಆಗಲಿ ಬಿಡಿ. ಬಾಬಾ ನನ್ನವರು, ನಾನು ಬಾಬಾರವರ ಮಗು, ಎಂದಾಗ ಯಾರು ಏನೂ ಮಾಡಲು ಸಾಧ್ಯವಿಲ್ಲ. ಇದಕ್ಕೇ ನಿಶ್ಚಯ ಬುದ್ಧಿಯುಳ್ಳವರೆಂದು ಹೇಳಲಾಗುತ್ತದೆ. ಮಾತು ಬದಲಾಗಲಿ ಆದರೆ ತಾವು ಬದಲಾಗಬಾರದು. ಇದೇ ನಿಶ್ಚಯವಾಗಿದೆ. ಎಂದಿಗೂ ಮಾಯೆಯಿಂದ ದುಃಖಿತರಾಗುವುದಿಲ್ಲವಲ್ಲವೇ? ಕೆಲವೊಮ್ಮೆ ವಾತಾವರಣದಿಂದ, ಕೆಲವೊಮ್ಮೆ ಮನೆಯವರಿಂದ, ಕೆಲವೊಮ್ಮೆ ಬ್ರಾಹ್ಮಣರಿಂದ ದುಃಖಿತರಾಗುತ್ತೀರಾ? ಒಂದುವೇಳೆ ತಮ್ಮ ಶಾನ್‌ನಿಂದ (ಸ್ವಮಾನದಿಂದ) ದೂರವಾದರೆ ದುಃಖಿತ ರಾಗುತ್ತೀರಿ. ತಮ್ಮ ಸ್ವಮಾನದ ಸೀಟ್‌ನಲ್ಲಿ ಸ್ಥಿತರಾಗಿರಿ. ಸಾಕ್ಷೀತನದ ಸೀಟ್ ಸ್ವಮಾನದ ಸೀಟ್ ಆಗಿದೆ. ಇದರಿಂದ ದೂರವಾಗಿಲ್ಲವೆಂದರೆ ದುಃಖವು ಸಮಾಪ್ತಿಯಾಗಿ ಬಿಡುತ್ತದೆ. ಎಂದಿಗೂ ಯಾವ ಮಾತಿನಲ್ಲೂ ದುಃಖಿತ ರಾಗುವುದಿಲ್ಲ, ಯಾರಿಗೂ ದುಃಖವನ್ನು ಕೊಡುವುದಿಲ್ಲವೆಂದು ಪ್ರತಿಜ್ಞೆ ಮಾಡಿರಿ. ಯಾವಾಗ ಜ್ಞಾನಪೂರ್ಣ ತಂದೆಯ ಮಕ್ಕಳಾದಿರಿ, ತ್ರಿಕಾಲದರ್ಶಿಗಳಾದಿರಿ ಎಂದಾಗ ದುಃಖಿತರಾಗಲು ಹೇಗೆ ಸಾಧ್ಯ? ಸಂಕಲ್ಪದಲ್ಲೂ ದುಃಖವಾಗಬಾರದು. 'ಏಕೆ' ಎನ್ನುವ ಶಬ್ದವನ್ನು ಸಮಾಪ್ತಿ ಮಾಡಿರಿ. 'ಏಕೆ' ಎನ್ನುವ ಶಬ್ದದ ಹಿಂದೆ ಬಹಳ ದೊಡ್ಡ ಕ್ಯೂ (ಸಾಲು) ಇರುತ್ತದೆ.

**ಬೀಳ್ಕೊಡುವ ಸಮಯದಲ್ಲಿ ದೀದೀರವರೊಂದಿಗೆ:**

ಮೇಳವನ್ನು ನೋಡಿ ಖುಷಿಯಾಗುತ್ತಿದೆಯಲ್ಲವೇ? ಇದೂ ಸಹ ಡ್ರಾಮಾದಲ್ಲಿ ಏನೆಲ್ಲಾ ಆಗುತ್ತದೆಯೋ ಅದು ಒಳ್ಳೆಯದರಲ್ಲಿ ಒಳ್ಳೆಯದೇ ಆಗುತ್ತದೆ. ಇನ್ನೂ ಬಹಳ ಜನ ಬರುತ್ತಾರೆ, ಇದು ಏನೇನೂ ಇಲ್ಲ. ವ್ಯವಸ್ಥೆಗಳು ಹೆಚ್ಚುತ್ತಾ ಹೋಗುತ್ತವೆ, ಜನರು ಹೆಚ್ಚುತ್ತಾ ಹೋಗುತ್ತಾರೆ. ಮಧುಬನದಲ್ಲಿ ಯಾವಾಗ ಜನರ ಗುಂಪು ಸೇರುತ್ತದೋ ಆಗ ಭಕ್ತಿ ಮಾರ್ಗದಲ್ಲಿ ಸ್ಮರಣೀಯವಾಗುತ್ತದೆ. ಎಷ್ಟು ವ್ಯವಸ್ಥೆಗಳನ್ನು ಮಾಡುತ್ತಾ ಹೋಗುತ್ತೀರೋ ಅಷ್ಟು ವೃದ್ಧಿಯಾಗುತ್ತಾ ಹೋಗುವಂತಹ ವರದಾನವು ಪ್ರಾಪ್ತಿಯಾಗಿದೆ. ಇದರ ಸ್ಮರಣಾರ್ಥವಾಗಿ ಸಾಗರದವರೆಗೂ ತಲುಪಿದರು, ಆದರೂ ಚಿಕ್ಕದಾಯಿತು ಎನ್ನುವ ರೂಪದಲ್ಲಿ ಕಥೆಯನ್ನು ತೋರಿಸುತ್ತಾರೆ. ಈಗ ಅಬು ರೋಡಿನವರೆಗೂ ತಲುಪಿರಿ, ಆಗ ಗಾಯನವಾಗುತ್ತದೆ. ಅಬೂರೋಡಿನಿಂದ ಮೌಂಟ್‌ಅಬೂವಿನವರೆಗೂ ಮಕ್ಕಳು ಕುಳಿತುಕೊಳ್ಳಬೇಕು. ಆಗ ಪ್ರತ್ಯಕ್ಷತೆ ಆಗುತ್ತದೆ. ಇದೇನಾಗುತ್ತಿದೆಯೆಂದು ಯೋಚಿಸುತ್ತಾರೆ. ಬ್ರಹ್ಮಾಕುಮಾರಿಯರು ಎಲ್ಲಿಯವರೆಗೆ ತಲುಪಿಬಿಟ್ಟಿದ್ದಾರೆ ಎಂದು ಗಮನವಂತೂ ಹೋಗುತ್ತದೆಯಲ್ಲವೇ? ಈಗ ಇದು ಮಕ್ಕಳ ಮೇಳವಾಗಿದೆ, ಆದರೆ ಯಾವಾಗ ಮಕ್ಕಳು ಮತ್ತು ಭಕ್ತರು ಸೇರುತ್ತಾರೋ ಆಗ ಏನಾಗಬಹುದು? ಈಗಂತೂ ಇನ್ನೂ ಬಹಳ ತಯಾರಿ ಮಾಡಿಕೊಳ್ಳಬೇಕಾಗಿದೆ. ಯಾವಾಗ ತಂದೆ ಬರಬೇಕಾಗುತ್ತದೋ ಆಗ ಮಕ್ಕಳ

ಸಂಖ್ಯೆಯು ಹೆಚ್ಚಾಗಬೇಕಾಗುತ್ತದೆ. ವೃದ್ಧಿಯೇ ಆಗಲಿಲ್ಲವೆಂದರೆ, ಸೇವೆ ಮಾಡುವುದೇಕೆ? ಸೇವೆಯ ಅರ್ಥವೇ ಆಗಿದೆ ವೃದ್ಧಿಯಾಗುವುದು. **(07–03–1981)**

ಹೇಗೆ ಸೇವೆಯಲ್ಲಿ ಅಥವಾ ಸ್ವಯಂನ ಏರುವ ಕಲೆಯಲ್ಲಿ ಸಫಲತೆಗೆ ಮುಖ್ಯ ಆಧಾರ ಒಬ್ಬ ತಂದೆಯ ಜೊತೆಯಲ್ಲಿ ಮುರಿಯಲಾರದಂತಹ ಪ್ರೀತಿಯಾಗಿದೆಯೋ, ತಂದೆಯ ಹೊರತು ಇನ್ನೇನು ಕಾಣಬಾರದು. ಸಂಕಲ್ಪದಲ್ಲಿಯೂ ಬಾಬಾ, ಮಾತಿನಲ್ಲಿಯೂ ಬಾಬಾ ಮತ್ತು ಕರ್ಮದಲ್ಲಿಯೂ ಬಾಬಾರವರ ಜೊತೆ ಇರಬೇಕು. ಇಂತಹ ಲವಲೀನ ಆತ್ಮರು ಒಂದು ಶಬ್ದವನ್ನು ನುಡಿದರೂ, ಅವರ ಸ್ನೇಹದ ಮಾತು ಮತ್ತೊಂದು ಆತ್ಮವನ್ನೂ ಸ್ನೇಹದಲ್ಲಿ ಬಂಧಿಸಿ ಬಿಡುತ್ತದೆ. ಇಂತಹ ಲವಲೀನ ಆತ್ಮದ 'ಬಾಬಾ' ಎನ್ನುವ ಒಂದು ಶಬ್ದವೇ ಜಾದುವಿನ ಕೆಲಸ ಮಾಡುತ್ತದೆ. ಲವಲೀನ ಆತ್ಮ ಆತ್ಮೀಕ ಜಾದುಗರ್ ಆಗಿಬಿಡುತ್ತದೆ. ಒಂದಾಗಿದೆ ತಂದೆಯ ಜೊತೆ ಪ್ರೀತಿ ಎಂದರೆ ಲವಲೀನ ಆತ್ಮ ಆಗುವುದಾಗಿದೆ, ಎರಡನೆಯದು ಸಫಲತೆಗೆ ಆಧಾರ ಜ್ಞಾನದ ಪ್ರತಿಯೊಂದು ಮಾತಿನಲ್ಲಿ ಅನುಭವೀಮೂರ್ತಿಗಳಾಗುವುದು ಆಗಿದೆ. ಹೇಗೆ ಡ್ರಾಮಾದ ವಿಚಾರವನ್ನು ಹೇಳುವಾಗ, ಒಂದಾಗಿದೆ ಜ್ಞಾನದ ಆಧಾರದಿಂದ ವಿಚಾರಗಳನ್ನು ಹೇಳುವುದು, ಮತ್ತೊಂದಾಗಿದೆ ಅನುಭವೀಮೂರ್ತಿಗಳಾಗಿ ಜ್ಞಾನವನ್ನು ಕೊಡುವುದು. ಡ್ರಾಮಾದ ಮಾತಿನಲ್ಲಿ ಯಾರು ಅನುಭವಿಗಳಾಗಿರುತ್ತಾರೋ ಅವರು ಸದಾ ಸಾಕ್ಷೀತನದ ಸ್ಥಿತಿಯಲ್ಲಿ ಸ್ಥಿತರಾಗಿರುತ್ತಾರೆ. ಏಕರಸ, ಅಚಲ ಮತ್ತು ಅಡೋಲರಾಗಿರುತ್ತಾರೆ. ಇಂತಹ ಸ್ಥಿತಿಯಲ್ಲಿ ಸ್ಥಿತರಾಗುವವರಿಗೆ ಅನುಭವೀಮೂರ್ತಿಗಳೆಂದು ಹೇಳಲಾಗುತ್ತದೆ. ಫಲಿತಾಂಶದಲ್ಲಿ ಬಾಹ್ಯರೂಪದಲ್ಲಿ ಒಳ್ಳೆಯದಿರಬಹುದು ಅಥವಾ ಕೆಟ್ಟದಿರಬಹುದು, ಆದರೆ ಡ್ರಾಮಾದ ಜ್ಞಾನದಲ್ಲಿ ಯಾರು ಅನುಭವಿ ಆತ್ಮಗಳಾಗಿರುವರೋ ಅವರು ಎಂದಿಗೂ ಸಹ ಕೆಟ್ಟವರಲ್ಲಿ ಕೆಟ್ಟದನ್ನು ನೋಡದೆ, ಒಳ್ಳೆಯದನ್ನೇ ನೋಡುತ್ತಾರೆ ಅಂದರೆ ಸ್ವಯಂನ ಕಲ್ಯಾಣದ ದಾರಿ ಕಾಣುತ್ತದೆ. ಅಕಲ್ಯಾಣದ ಖಾತೆಯು ಸಮಾಪ್ತಿಯಾಗುತ್ತದೆ. ಕಲ್ಯಾಣಕಾರೀ ತಂದೆಯ ಮಕ್ಕಳಾಗಿರುವ ಕಾರಣ, ಕಲ್ಯಾಣಕಾರೀ ಯುಗವಾಗಿರುವ ಕಾರಣ, ಈಗ ಕಲ್ಯಾಣದ ಖಾತೆ ಆರಂಭವಾಗಿಬಿಟ್ಟಿದೆ. ಈ ಜ್ಞಾನ ಮತ್ತು ಅನುಭವದ ಅಥಾರಿಟಿಯಿಂದ ಸದಾ ಅಚಲರಾಗಿರುವಿರಿ. **(11–03–1981)**

**ಟೀಚರ್ಸ್ ಜೊತೆಯಲ್ಲಿ:** ಟೀಚರ್ಸ್ (ಶಿಕ್ಷಕಿಯರು) ಎಂದರೆ ಸದಾ ಸಂಪನ್ನ ಆತ್ಮರು. ಡ್ರಾಮಾನುಸಾರ ನಿಮಿತ್ತರಾಗಿರುವಿರಿ. ಒಳ್ಳೆಯ ಪರಿಶ್ರಮ ಪಡುತ್ತಿರುವಿರಿ ಮತ್ತು ಮುಂದೆಯೂ ಮಾಡುತ್ತಲೇ ಇರುತ್ತೀರಿ. ಫಲಿತಾಂಶ ಚೆನ್ನಾಗಿದೆ. ಇನ್ನೂ ಚೆನ್ನಾಗಿ ಆಗುತ್ತದೆ. ಸಮಯ ಹತ್ತಿರ ಬರುತ್ತಿರುವ ಕಾರಣ, ಸೇವೆಯ ವಿಸ್ತಾರವು ಬೇಗ-ಬೇಗ ವೃದ್ಧಿಯಾಗುತ್ತಾ ಹೋಗುತ್ತದೆ. ಏಕೆಂದರೆ ಸಂಗಮದಲ್ಲಿಯೇ ತ್ರೇತಾ ಯುಗದ ಅಂತ್ಯದವರೆಗಿನ ಪ್ರಜೆಗಳು, ರಾಯಲ್ ಫ್ಯಾಮಿಲಿಯವರು (ರಾಜ ಪರಿವಾರದವರು) ಹಾಗೂ ಜೊತೆ ಜೊತೆಯಲ್ಲಿ ಕಲಿಯುಗದ ಅಂತ್ಯದವರೆಗಿನ ತಮ್ಮ ಧರ್ಮದ ಆತ್ಮಗಳನ್ನು ತಯಾರು ಮಾಡಿಕೊಳ್ಳಬೇಕಾಗಿದೆ. ವಿದೇಶದ ಎಲ್ಲಾ ಸ್ಥಾನಗಳು ಪಿಕ್‌ನಿಕ್ ಸ್ಥಾನಗಳಾಗುತ್ತವೆ. ಆದರೆ ಬ್ರಾಹ್ಮಣ ಆತ್ಮರಂತೂ ರಾಜ ಮನೆತನದಲ್ಲಿ ಬರುತ್ತಾರೆ, ಅಲ್ಲಿ ರಾಜ್ಯ ಮಾಡುವಂತಿಲ್ಲ. ರಾಜ್ಯವನ್ನಂತೂ ಇಲ್ಲಿ ಮಾಡುತ್ತೀರಿ. ಎಲ್ಲರೂ ಚೆನ್ನಾಗಿ ಸೇವೆ ಮಾಡುತ್ತಿರುವಿರಿ. ಆದರೆ ಈಗ ಇನ್ನೂ ಹೆಚ್ಚಿನ ಸೇವೆಯಲ್ಲಿ, ಮನಸಾ ಸೇವೆಯನ್ನು ಶಕ್ತಿಶಾಲಿಯನ್ನಾಗಿ ಹೇಗೆ ಮಾಡಬೇಕು ಎನ್ನುವ ವಿಶೇಷ ಪ್ಲಾನ್ ತಯಾರು ಮಾಡಿರಿ. ವಾಣಿಯ ಜೊತೆ ಜೊತೆಯಲ್ಲಿ ಮನಸಾ ಸೇವೆಯೂ ಸಹ ಬಹಳ ದೂರದವರೆಗೂ ಕಾರ್ಯ ಮಾಡಬಲ್ಲದು ಎನ್ನುವ ಅನುಭವವಾಗುತ್ತದೆ. ಇತ್ತೀಚಿನ ದಿನಗಳಲ್ಲಿ ಹಾರುವ ತಟ್ಟೆಗಳು ಕಂಡುಬರುತ್ತದೋ, ಅದೇ ರೀತಿ ತಮ್ಮೆಲ್ಲರ ಫರಿಶ್ತಾ ಸ್ವರೂಪವು ನಾಲ್ಕೂ ಕಡೆ ಕಂಡುಬರುತ್ತದೆ ಮತ್ತು ಇವರು ಯಾರು ಸಂಚಾರ ಮಾಡಿ ಹೋದರು ಎನ್ನುವ ಧ್ವನಿ ಹೊರಡುತ್ತದೆ. ಇದರ ಮೇಲೆಯೂ ಸಂಶೋಧನೆಯನ್ನು ಮಾಡುತ್ತಾರೆ. ಆದರೆ ತಮ್ಮೆಲ್ಲರ ಸಾಕ್ಷಾತ್ಕಾರ ಮೇಲಿನಿಂದ ಕೆಳಗೆ ಬರುತ್ತಿದ್ದಂತೆಯೇ ಆಗಿಬಿಡುತ್ತದೆ. ಆಗ ಇವರು ಅದೇ ಬ್ರಹ್ಮಾಕುಮಾರ ಅಥವಾ ಕುಮಾರಿಯರು ಫರಿಶ್ತಾ ರೂಪದಿಂದ ಸಾಕ್ಷಾತ್ಕಾರ ಮಾಡಿಸುತ್ತಿದ್ದಾರೆ ಎಂದು ತಿಳಿದುಕೊಳ್ಳುತ್ತಾರೆ. ಈಗ ಇದೇ ಶಬ್ದವನ್ನು ಜೋರಾಗಿ ಹರಡಿಸಿ. ಅಂತರ್ವಾಹಕ ಶರೀರದಿಂದ ಸಂಚಾರ ಮಾಡುವ ಅಭ್ಯಾಸ ಮಾಡಿರಿ. ವಿಮಾನವು ಸಿಗದೇ ಇರುವಂತಹ ಸಮಯ ಬರುತ್ತದೆ ಅಂತಹ ನಾಜೂಕು ಸಮಯ ಬರುವುದಕ್ಕೆ ಮೊದಲೇ ತಾವು ತಲುಪಿ ಬಿಡುತ್ತೀರಿ. ಅಂತರ್ವಾಹಕ ಶರೀರದ ಮೂಲಕ ಸಂಚಾರ ಮಾಡುವ ಅಭ್ಯಾಸವು ಬಹಳ ಅವಶ್ಯಕವಾಗಿದೆ. ತಾವೇ ಸ್ವತಃ ಹೋಗಿ ಎಲ್ಲವನ್ನು ನೋಡಿ ಮಿಲನ ಮಾಡಿಕೊಂಡು ಬಂದಿದ್ದೇನೆ ಎಂದು ಅನಿಸುವಂತೆ ಅಭ್ಯಾಸ ಮಾಡಬೇಕಾಗಿದೆ. ಅನ್ಯರೂ ಸಹ ಹೌದು ನಮ್ಮ ಬಳಿಯೂ ಇವರೇ ಫರಿಶ್ತಾ ಬಂದಿದ್ದರು ಎಂದು ಅನುಭವ ಮಾಡಬೇಕು. ಆಗ ಫರಿಶ್ತೆಗಳನ್ನು ಹುಡುಕಲು ಹೊರಡುತ್ತಾರೆ. ಒಂದುವೇಳೆ ಇಷ್ಟೆಲ್ಲ ಫರಿಶ್ತೆಗಳು ಸಂಚಾರ ಮಾಡಲು

ತೊಡಗಿದರೆ ಏನಾಗಬಹುದು? ಸಹಜವಾಗಿ ಎಲ್ಲರ ಗಮನ ಫರಿಶ್ತೆಗಳ ಕಡೆ ಹೋಗುತ್ತವೆ. ಈಗ ಸಾಕಾರಿ ಸ್ಥಿತಿಯ ಸೇವೆಯ ಜೊತೆ–ಜೊತೆಗೆ ಆಕಾರಿ ಸೇವೆಯೂ ಸಹ ಅವಶ್ಯಕವಾಗಿದೆ. ಒಳ್ಳೆಯದು. ಈಗ ಅಮೃತವೇಳೆಯಾಗಿದೆ. ಶರೀರದಿಂದ ಭಿನ್ನರಾಗಿ ಸಂಚಾರ ಮಾಡಿರಿ. **(13–03–1981)**

'ಆಪ್ ಔರ್ ಬಾಪ್' (ತಾವು ಮತ್ತು ಬಾಬಾ) ಎಂಬ ಈ ಎರಡು ಶಬ್ದದಲ್ಲಿ ಜ್ಞಾನ ಮತ್ತು ಯೋಗವು ಬಂದುಬಿಡುತ್ತದೆ. ಆದ್ದರಿಂದ 'ಸಹಜ ರಾಜಯೋಗಿ' ಎಂಬ ಟೈಟಲ್ ಇದೆ. ಸಹಜವಾದರೂ ಕಷ್ಟ ಎನಿಸುವುದಕ್ಕೆ ಕಾರಣ ತಮ್ಮದೇ ಬಲಹೀನತೆಗಳಾಗಿವೆ. ಒಂದಲ್ಲ ಒಂದು ಹಳೆಯ ಸಂಸ್ಕಾರವು ಸಹಜವಾದ ಮಾರ್ಗದ ಮಧ್ಯದಲ್ಲಿ ಬಂಧನವಾಗಿ ವಿಘ್ನಗಳನ್ನು ಹಾಕುತ್ತದೆ. ಹಾಗೂ ಶಕ್ತಿಯಿಲ್ಲದ ಕಾರಣ ಬಂಡೆಯನ್ನು ಹೊಡೆಯಲು ತೊಡಗುತ್ತೀರಿ ಮತ್ತು ಒಡೆಯುತ್ತಾ–ಒಡೆಯುತ್ತಾ ಬೇಸರಗೊಳ್ಳುತ್ತೀರಿ. ಆದರೆ ಸಹಜ ವಿಧಿ ಏನಾಗಿದೆ? ಬಂಡೆಗಳನ್ನು ಒಡೆಯಬಾರದು. ಆದರೆ ಬಂಡೆಯನ್ನು ಹಾರಿ ಪಾರಾಗಬೇಕು. ಇದು ಏಕೆ ಆಯಿತು? ಇದು ಆಗಬಾರದಾಗಿತ್ತು, ಇದು ಇನ್ನೂ ಎಲ್ಲಿಯವರೆಗೂ ಆಗುತ್ತದೆ, ಇದಂತೂ ಬಹಳ ಕಷ್ಟವಾಗಿದೆ, ಈ ರೀತಿ ಏಕೆ? ಎಂಬ ಇಂತಹ ವ್ಯರ್ಥ ಸಂಕಲ್ಪಗಳನ್ನು ಮಾಡುವುದು ಬಂಡೆಯನ್ನು ಒಡೆಯುವುದಾಗಿದೆ. ಆದರೆ ಒಂದು 'ಡ್ರಾಮಾ' ಎನ್ನುವ ಶಬ್ದ ನೆನಪಿಗೆ ಬಂದರೂ, ಆ ನೆನಪಿನ ಶಬ್ದದ ಆಧಾರದಿಂದ ಹೈಜಂಪ್ ಮಾಡಿಬಿಡುವಿರಿ. ಬಂಡೆ ಒಡೆಯುವುದರಲ್ಲಿ ಕೆಲವು ದಿನಗಳು, ಕೆಲವು ತಿಂಗಳುಗಳು ಹಿಡಿಸುತ್ತದೆ. ಆದರೆ ಹೈಜಂಪ್ ಮಾಡುವುದರಲ್ಲಿ ಒಂದು ಸೆಕೆಂಡ್ ಹಿಡಿಸುತ್ತದೆ. ಅಂದ ಮೇಲೆ ಇದು ತಮ್ಮ ಜ್ಞಾನದ ಕೊರತೆಯಲ್ಲವೇ? **(17–03–1981)**

ಯಾವುದೇ ಆತ್ಮಗಳ ಮೇಲೆ ಕಠಿಣವಾದ ಕಾರ್ಯ ಬಂದಿತು ಎಂದರೆ ಯಾರ ಬಳಿ ಹೋಗುತ್ತಾರೆ? ಒಂದು ತಂದೆಯ ಬಳಿ ಹೋಗುತ್ತಾರೆ ಅಥವಾ ದೇವಾತ್ಮಗಳಾದ ತಮ್ಮ ಬಳಿ ಹೋಗುತ್ತಾರೆ. ಯಾರು ಅನ್ಯರ ಕಷ್ಟಗಳನ್ನು ಸಹಜ ಮಾಡುವಂತಹವರಾಗಿರುತ್ತಾರೋ ಅವರು ಸ್ವಯಂ ಕಷ್ಟದ ಅನುಭವ ಮಾಡಲು ಹೇಗೆ ಸಾಧ್ಯ? ಕಷ್ಟದ ಅನುಭವ ಮಾಡುವ ಸಮಯದಲ್ಲಿ ವಿಶೇಷವಾಗಿ ಯಾವ ಮಾತು ಬುದ್ಧಿಯಲ್ಲಿ ಬರುವುದರಿಂದ ಕಷ್ಟವೆನಿಸುತ್ತದೆ? ಬಹಳ ಅನುಭವಿಗಳಾಗಿದ್ದೀರಲ್ಲವೇ? ತಂದೆಯನ್ನು ನೋಡುವುದಕ್ಕೆ ಬದಲಾಗಿ ಮಾತುಗಳನ್ನು ನೋಡಲು ತೊಡಗುತ್ತೀರಿ. ಮಾತುಗಳಲ್ಲಿ ಹೋಗುವುದರಿಂದ ಇನ್ನೂ ಅನೇಕ ಪ್ರಶ್ನೆಗಳು ಉತ್ಪನ್ನವಾಗುತ್ತವೆ. ಒಂದುವೇಳೆ ತಂದೆಯನ್ನು ನೋಡಿದಿರಿ ಎಂದರೆ, ಯಾವ ರೀತಿ ತಂದೆಯು ಬಿಂದುವಾಗಿದ್ದಾರೋ ಅದೇ ರೀತಿ ಪ್ರತಿ ಮಾತಿಗೂ ಬಿಂದು ಹಾಕಿಬಿಡಿ. ಮಾತುಗಳು ವೃಕ್ಷವಾಗಿದೆ ಮತ್ತು ತಂದೆಯು ಬೀಜವಾಗಿದ್ದಾರೆ. ತಾವು ವಿಸ್ತಾರವಾಗಿರುವ ವೃಕ್ಷವನ್ನು ಕೈಯಲ್ಲಿ ಎತ್ತಿಕೊಳ್ಳಲು ಬಯಸುತ್ತೀರಿ, ಈ ಕಾರಣದಿಂದ ತಂದೆಯೂ ಕೈಗೆ ಬರುವುದಿಲ್ಲ ಮತ್ತು ವೃಕ್ಷವೂ ಕೈಗೆ ಬರುವುದಿಲ್ಲ. ತಂದೆಯನ್ನೂ ದೂರ ಮಾಡಿಕೊಳ್ಳುತ್ತೀರಿ ಹಾಗೂ ವೃಕ್ಷದ ವಿಸ್ತಾರವನ್ನು ತಮ್ಮ ಬುದ್ಧಿಯಲ್ಲಿ ಸಮಾವೇಶ ಮಾಡಿಕೊಳ್ಳಲೂ ಆಗುವುದಿಲ್ಲ. ಆಗ ಯಾವ ಇಚ್ಛೆಯನ್ನು ಇಟ್ಟುಕೊಳ್ಳುತ್ತೀರೋ ಅದು ಪೂರ್ತಿಯಾಗದ ಕಾರಣ ಬೇಸರಗೊಳ್ಳುವಿರಿ. ಬೇಸರದಲ್ಲಿರುವವರಿಗೆ ಒಂದು ಚಿಕ್ಕ ಕಾರ್ಯವೂ ಕಷ್ಟವೆನಿಸುತ್ತದೆ. ಬೇಸರಗೊಂಡವರ ಮುಖ್ಯ ಗುರುತುಗಳು ಏನೆಂದರೆ– ಅವರು ಪರಿಸ್ಥಿತಿಯ ಮೇಲೋ, ವ್ಯಕ್ತಿಯ ಮೇಲೋ, ಒಂದಲ್ಲ ಒಂದು ದೂರನ್ನು ಪದೇ–ಪದೇ ಹೇಳುತ್ತಿರುತ್ತಾರೆ ಮತ್ತು ಎಷ್ಟು ದೂರುಗಳನ್ನು ಹೇಳುತ್ತಾರೋ, ಅಷ್ಟು ತಮಗೆ ತಾವೇ ಸಿಕ್ಕಿ ಹಾಕಿಕೊಳ್ಳುತ್ತಾ ಹೋಗುತ್ತಾರೆ. ಏಕೆಂದರೆ ಈ ವಿಸ್ತಾರವು ಒಂದು ಬಲೆಯಾಗಿ ಬಿಡುತ್ತದೆ. ಅದರಿಂದ ಬಿಡಿಸಿಕೊಳ್ಳಲು ಪ್ರಯತ್ನ ಮಾಡಿದಷ್ಟೂ ಅದರಲ್ಲೇ ಸಿಕ್ಕಿ ಹಾಕಿಕೊಳ್ಳುತ್ತಾ ಹೋಗುತ್ತಾರೆ. ಒಂದು ಮಾತುಗಳಿರುತ್ತವೆ, ಇಲ್ಲವೇ ಬಾಬಾ ಇರುತ್ತಾರೆ. ಮಾತುಗಳನ್ನು ಕೇಳುವುದು ಮತ್ತು ಮಾತುಗಳನ್ನು ಹೇಳುವುದನ್ನು ಅರ್ಧ ಕಲ್ಪ ಮಾಡಿದಿರಿ. ಭಕ್ತಿಮಾರ್ಗದ ಭಾಗವತ ಅಥವ ರಾಮಾಯಣ ಏನಾಗಿದೆ? ಎಷ್ಟು ದೀರ್ಘವಾದ ಮಾತುಗಳಾಗಿವೆ. ಯಾವಾಗ ಮಾತುಗಳು ಇದ್ದವೋ ಆಗ ತಂದೆ ಇರಲಿಲ್ಲ. ಈಗಲೂ ಸಹಾ ಯಾವಾಗ ಮಾತಿನಲ್ಲಿ ಹೋಗುತ್ತೀರೋ ಆಗ ಬಾಬಾರವರನ್ನು ಕಳೆದುಕೊಂಡು ಬಿಡುತ್ತೀರಿ. ನಂತರ ಯಾವ ಆಟವನ್ನು ಆಡುತ್ತೀರಿ (ಕಣ್ಣಾಮುಚ್ಚಾಲೆ ಆಟ). ಮೂರನೇ ಕಣ್ಣಿಗೆ ಪಟ್ಟಿ ಕಟ್ಟಿಕೊಂಡು ಹುಡುಕುತ್ತಿರುತ್ತೀರಿ. ತಂದೆಯು ಕರೆಯುತ್ತಿರುತ್ತಾರೆ ಮತ್ತು ನೀವು ಅವರನ್ನು ಹುಡುಕುತ್ತಲೇ ಇರುತ್ತೀರಿ. ಕೊನೆಗೆ ಏನಾಗುತ್ತದೆ? ತಂದೆಯು ಸ್ವಯಂ ತಾವೇ ಬಂದು ತಮ್ಮ ಜೊತೆಯನ್ನು ಕೊಡಿಸಬೇಕಾಗುತ್ತದೆ. ಇಂತಹ ಆಟವನ್ನು ಏಕೆ ಆಡುತ್ತೀರಿ? ಏಕೆಂದರೆ ಮಾತುಗಳ ವಿಸ್ತಾರದಲ್ಲಿ ಬಣ್ಣ ಬಣ್ಣದ ಮಾತುಗಳಿರುತ್ತವೆ. ಅದು ತನ್ನ ಕಡೆಗೆ ಆಕರ್ಷಿತ ಮಾಡಿಬಿಡುತ್ತದೆ. ಇದರಿಂದ ದೂರವಾದರೆ ಸದಾ ಸಹಜ ಯೋಗಿಗಳು ಆಗಿಬಿಡುವಿರಿ. **(18–03–1981)**

ಭಾರತವಾಸಿ ಮಕ್ಕಳನ್ನು ನೋಡುತ್ತಾ ಬಾಪ್‌ದಾದಾರವರು ಹೇಳಿದರು – ವಿದೇಶಿಗಳ ಭಾಗ್ಯ ಅವರದೇ ಆಗಿದೆ. ಭಾರತ ವಾಸಿಗಳ ಭಾಗ್ಯ ಅವರದೇ ಆಗಿದೆ. ಭಾರತ ವಾಸಿಗಳು ಭಾಗ್ಯಶಾಲಿಗಳು ಆಗದೆ ಇದ್ದರೆ ವಿದೇಶಿಗಳು ಹೇಗೆ ಬರುತ್ತಿದ್ದರು? ವಿದೇಶಿಗಳ ಮಹಿಮೆ ಲಾಸ್ಟ್ ಸೋ ಫಾಸ್ಟ್ (ತಡವಾಗಿ ಬಂದರೂ ವೇಗವಾಗಿ ಹೋಗುವವರು) ಎನ್ನುವ ಲೆಕ್ಕದಲ್ಲಿದೆ. ಆದರೆ ಯಾರು ಆದಿಯಲ್ಲಿ ಇರುವವರಾಗಿದ್ದಾರೋ, ಅವರು ಆದಿಯಲ್ಲೇ ಇರುತ್ತಾರೆ. ಭಾರತ ವಾಸಿಗಳು ಭಗವಂತನನ್ನು ತಮ್ಮವರನ್ನಾಗಿ ಮಾಡಿಕೊಂಡರು ಹಾಗೂ ವಿದೇಶಿಯರಿಗೆ ತಯಾರು ಮಾಡಿ ಮಾಡಲ್ಪಟ್ಟ ಭಗವಂತ ಸಿಕ್ಕಿದರು. ಒಂದುವೇಳೆ ಭಾರತ ವಾಸಿಗಳು ತಂದೆಯನ್ನು ಗುರುತಿಸದೆ ಹೋಗಿದ್ದರೆ, ವಿದೇಶೀಯರಿಗೆ ಯಾರು ಪರಿಚಯ ಕೊಡುತ್ತಿದ್ದರು? ಎಷ್ಟೇ ಆದರೂ ತಂದೆಯನ್ನು ಪ್ರತ್ಯಕ್ಷ ಮಾಡಲು ಭಾರತೀಯರೇ ಮೊದಲು ನಿಮಿತ್ತರಾಗುತ್ತಾರೆ. ಗುಪ್ತವಾಗಿದ್ದ ತಂದೆಯನ್ನು ಮೊದಲು ಭಾರತದವರೇ ಪ್ರತ್ಯಕ್ಷ ಮಾಡಿದರು. ನಂತರ ವಿದೇಶೀಯರು ಒಪ್ಪಿಕೊಂಡರು. ಮೊದಲು ಅಂಗಡಿ ತೆಗೆಯುವಾಗ, ಚಿಕ್ಕ ಪೆಟ್ಟಿಗೆ ಅಂಗಡಿ ತೆರೆಯುತ್ತಾರೆ ನಂತರ ವೃದ್ಧಿ ಆಗುತ್ತಾ ಆಗುತ್ತಾ ದೊಡ್ಡ ಅಂಗಡಿಯಾಗಿ ಬಿಡುತ್ತದೆ. ಅದೇ ರೀತಿ ಭಾರತವಾಸಿಗಳು ಮೊದಲು ಬಹಳ ಪರಿಶ್ರಮ ಪಟ್ಟರು, ಅಂಗಡಿಯನ್ನು ತೆರೆದರು. ಅದರಿಂದಲೇ ತಾವುಗಳು ಬಂದಿರಲ್ಲವೇ? ಭಾರತ ವಾಸಿಗಳು ಎಷ್ಟೊಂದು ಸಹನೆ ಮಾಡಿಕೊಂಡರೋ, ಅಷ್ಟು ಸಹನೆಯನ್ನು ವಿದೇಶೀಯರು ಎಲ್ಲಿ ಮಾಡಿದರು? ಹಾಗಾಗಿ ಭಾರತವಾಸಿ ಮಕ್ಕಳು ಸಹನೆಯಲ್ಲಿ ನಂಬರ್ ಒನ್ ಆಗಿದ್ದಾರೆ. ಯಾರು ಸಹನೆ ಮಾಡುವುದರಲ್ಲಿ ನಂಬರ್ ಒನ್ ಆಗಿರುತ್ತಾರೋ ಅವರಿಗೆ ಆಸ್ತಿಯೂ ಸಹ ಅದೇ ಲೆಕ್ಕದಲ್ಲಿ ಸಿಗುತ್ತದೆ. ತಾವು ಭಾರತವಾಸಿಗಳು ಪ್ರಾಕ್ಟಿಕಲ್ ಆಗಿ ಚರಿತ್ರೆಯನ್ನು ರೂಪಿಸುವಂತಹವರಾಗಿದ್ದೀರಿ ಮತ್ತು ವಿದೇಶೀಯರು ಕೇಳುವಂತಹವರಾಗಿದ್ದಾರೆ. ತಾವು ಬ್ರಹ್ಮಾರವರಲ್ಲಿ ಶಿವಬಾಬಾರವರನ್ನು ಈ ಸ್ಥೂಲ ಕಣ್ಣುಗಳಿಂದ ನೋಡಿದ್ದೇವೆ ಎಂದು ಹೇಳುತ್ತೀರಿ. ಇದೇ ವಿಶೇಷತೆಯಾಗಿದೆ. ಹಾಗೆ ನೋಡಿದರೇ ಎಲ್ಲರೂ, ಒಬ್ಬರು ಮತ್ತೊಬ್ಬರಿಗಿಂತ ಮುಂದೆ ಇದ್ದಾರೆ. ಏಕೆಂದರೆ ಡ್ರಾಮಾ ಅನುಸಾರ ಪ್ರತಿಯೊಬ್ಬರಿಗೂ ಒಂದಲ್ಲ ಒಂದು ವಿಶೇಷತೆ ಇರುವ ವರದಾನ ಸಂಗಮಯುಗಕ್ಕೆ ಪ್ರಾಪ್ತಿಯಾಗಿದೆ. ಈಗ ಭೋಲಿ ದಾದಿ ಅವರ ವಿಶೇಷತೆ ಮತ್ತು ಭಾಷಣ ಮಾಡುವಂತಹವರ ವಿಶೇಷತೆಯನ್ನು ನೋಡಿ. ಒಂದುವೇಳೆ ಭೋಲಿ ದಾದಿ ಇಲ್ಲವೆಂದರೂ ಕೆಲಸ ನಡೆಯುವುದಿಲ್ಲ. ಒಳ್ಳೆಯದು ಇವರೂ ಸಹ ಹೋಲಿ ಆಡುತ್ತಿದ್ದಾರೆ. ಈ ದಿನವಿರುವುದೇ ಆಚರಣೆಗಾಗಿ. ಇವರೂ ಸಹ ಪಿಚಕಾರಿ ಹಾಕುತ್ತಿದ್ದಾರೆ. **(21–03–1981)**

ಮಾಯೆಯು ಸಂಬಂಧವನ್ನೇ ಸಡಿಲ ಮಾಡುತ್ತದೆ, ಇದನ್ನು ಕೇವಲ ಸಂರಕ್ಷಣೆ ಮಾಡಿಕೊಳ್ಳಿ. ಎಲ್ಲಿ ಸಂಬಂಧ ಸಡಿಲವಾಗಿದೆಯೋ ಅದರಿಂದಲೇ ನಿರ್ಬಲತೆ ಬಂದಿದೆ ಎನ್ನುವುದನ್ನು ಅರ್ಥ ಮಾಡಿಕೊಳ್ಳಿ. ಏನಾಯಿತು, ಏಕಾಯಿತು ಎಂದು ಯೋಚಿಸಬೇಡಿ. ಏಕೆ, ಏನು ಎನ್ನುವುದಕ್ಕೆ ಬದಲಾಗಿ ಸಂಬಂಧವನ್ನೇ ಸರಿಪಡಿಸಿಕೊಂಡಾಗ ಎಲ್ಲವೂ ಸಮಾಪ್ತಿಯಾಗುತ್ತದೆ. ಸಹಯೋಗಕ್ಕಾಗಿ ಸಮಯವನ್ನು ಬೇಕಾದರೆ ತೆಗೆದುಕೊಳ್ಳಿ, ಯೋಗದ ವಾಯುಮಂಡಲ ಮತ್ತು ಪ್ರಕಂಪನಗಳನ್ನು ತಯಾರು ಮಾಡುವುದಕ್ಕಾಗಿ ಸಹಯೋಗವನ್ನು ಬೇಕಾದರೆ ತೆಗೆದುಕೊಳ್ಳಿ, ಉಳಿದಂತೆ ಬೇರೆ ವ್ಯರ್ಥ ಮಾತುಗಳನ್ನಾಡುವುದು ಅಥವಾ ವಿಸ್ತಾರದಲ್ಲಿ ಹೋಗುವುದು, ಇದಕ್ಕಾಗಿ ಯಾರ ಜೊತೆಯನ್ನೂ ತೆಗೆದುಕೊಳ್ಳಬೇಡಿ. ಅದು ಶುಭ ಚಿಂತಕರಾಗುವುದಾಗಿದೆ. ವ್ಯರ್ಥ ಮತ್ತು ವಿಸ್ತಾರದಲ್ಲಿ ಹೋಗುವುದು ಪರಚಿಂತನೆಯಾಗಿದೆ. ಎಲ್ಲಾ ಸಮಸ್ಯೆಗಳಿಗೂ ಮೂಲ ಕಾರಣ ಸಂಬಂಧ ಸಡಿಲವಾಗುವುದಾಗಿದೆ. ಇರುವುದು ಇದೊಂದೇ ಮಾತಾಗಿದೆ. ಡ್ರಾಮಾದಲ್ಲಿ ನನ್ನ ಪಾತ್ರವಿಲ್ಲ, ನನಗೆ ಸಹಯೋಗ ಸಿಗಲಿಲ್ಲ, ಸ್ಥಾನ ಸಿಗಲಿಲ್ಲ ಎಂದು ಹೇಳುವುದು... ಇವೆಲ್ಲವೂ ವ್ಯರ್ಥ ಮಾತುಗಳಾಗಿವೆ. ಕೇವಲ ಸಂಬಂಧವನ್ನು ಸರಿಪಡಿಸಿಕೊಳ್ಳಿ ಆಗ ಎಲ್ಲವೂ ಸಿಕ್ಕಿಬಿಡುತ್ತದೆ, ಸರ್ವಶಕ್ತಿಗಳೂ ತಮ್ಮ ಮುಂದೆ ಸುತ್ತುತ್ತವೆ. ಎಲ್ಲಿಗೇ ಹೋಗುವುದಕ್ಕೂ ಸಮಯವೇ ಸಿಗುವುದಿಲ್ಲ. ಬಾಬಾರವರ ಸಮ್ಮುಖದಲ್ಲಿ ಹೋಗಿ ಕುಳಿತುಕೊಂಡು ಬಿಡಿ. ಆಗ ಸಂಬಂಧವನ್ನು ಜೋಡಿಸುವುದಕ್ಕೆ ಬಾಪ್‌ದಾದಾರವರು ತಮಗೆ ಸಹಯೋಗಿ ಆಗಿಬಿಡುತ್ತಾರೆ. ಒಂದುವೇಳೆ, ಒಂದೆರಡು ಘಳಿಗೆ ಅನುಭವ ಆಗದಿದ್ದರೂ ಗೊಂದಲಕ್ಕೆ ಒಳಗಾಗಬೇಡಿ. ಸ್ವಲ್ಪ ಮುರಿದು ಹೋದ ಸಂಬಂಧವನ್ನು ಜೋಡಿಸಲು ಒಂದು ಸೆಕೆಂಡು ಅಥವಾ ನಿಮಿಷ ಹಿಡಿಸುತ್ತದೆ. ಆದರೆ ಧೈರ್ಯವನ್ನು ಕಳೆದುಕೊಳ್ಳಬೇಡಿ. ನಿಶ್ಚಯದ ತಳಪಾಯವನ್ನು ಅಲುಗಾಡಿಸಬೇಡಿ. ನಿಶ್ಚಯವನ್ನು ಮತ್ತಷ್ಟು ಪರಿಪಕ್ವ ಮಾಡಿಕೊಳ್ಳಿ. 'ಬಾಬಾ ನನ್ನವರು, ನಾನು ತಂದೆಯ ಮಗು'. ಎಂಬ ಈ ಆಧಾರದಿಂದ ನಿಶ್ಚಯದ ಫೌಂಡೇಷನನ್ನು ಇನ್ನೂ ಪಕ್ಕ ಮಾಡಿಕೊಳ್ಳಿ. ತಂದೆಯನ್ನೂ ಸಹ ತಮ್ಮ ನಿಶ್ಚಯದ ಬಂಧನದಲ್ಲಿ ಬಂಧಿಸಬಹುದಾಗಿದೆ. ಬಾಬಾರವರೂ ಸಹ ತಮ್ಮನ್ನು ಬಿಟ್ಟು ಹೋಗಲು ಸಾಧ್ಯವಿಲ್ಲ. ಇಷ್ಟೊಂದು ಅಥಾರಿಟಿ (ಅಧಿಕಾರ) ಈ ಸಮಯದಲ್ಲಿ ಮಕ್ಕಳಿಗೆ ಪ್ರಾಪ್ತಿಯಾಗಿದೆ. ಅಥಾರಿಟಿಯನ್ನು, ಜ್ಞಾನವನ್ನು ಉಪಯೋಗಿಸಿಕೊಳ್ಳಿ, ಪರಿವಾರದ ಸಹಯೋಗವನ್ನು ಉಪಯೋಗಿಸಿಕೊಳ್ಳಿ. ದೂರುಗಳನ್ನು ತೆಗೆದುಕೊಂಡು ಹೋಗಬೇಡಿ, ಸಹಯೋಗದ

ಬೇಡಿಕೆಯನ್ನೂ ಇಡಬೇಡಿ. ಕಾರ್ಯಕ್ರಮಗಳನ್ನು ಸೆಟ್ ಮಾಡಿಕೊಳ್ಳಿ. ಆದರೆ ಬಲಹೀನರಾಗಿ ಹೋಗಬೇಡಿ. ಏನು ಮಾಡಲಿ, ಹೇಗೆ ಮಾಡಲಿ ಎಂದು ಹೆದರಿಕೊಂಡು ಹೋಗಬೇಡಿ. ಆದರೆ ಸಂಬಂಧದ ಆಧಾರದಿಂದ ಸಹಯೋಗದ ಆಧಾರದಿಂದ ಹೋಗಿರಿ.

**ದೀದೀಯವರ ಜೊತೆಯಲ್ಲಿ:** ವೆರೈಟಿಯನ್ನು (ವೈವಿಧ್ಯತೆಯನ್ನು) ನೋಡಿ ಖುಷಿಯಾಗುತ್ತಿದೆಯಲ್ಲವೇ? ಆದರೂ ಒಳ್ಳೆಯ ಧೈರ್ಯಶಾಲಿಗಳಾಗಿದ್ದೀರಿ. ತಮ್ಮ ಸರ್ವಸ್ವವನ್ನೂ ಪರಿವರ್ತನೆ ಮಾಡಿಕೊಳ್ಳುವುದು ಮತ್ತು ಬೇರೆಯವರನ್ನು ತಮ್ಮವರನ್ನಾಗಿ ಮಾಡಿಕೊಳ್ಳುವುದರಲ್ಲೂ ಇವರಿಗೆ ಧೈರ್ಯವಿದೆ. ನಮ್ಮದೇ ಪರಿವಾರದವರು ಎನಿಸುವಷ್ಟು ಪರಿವರ್ತನೆ ಆಗಿರುವುದು ಡ್ರಾಮಾದಲ್ಲಿ ಇವರ ವಿಶೇಷ ಪಾತ್ರವಿದೆ. ನಮ್ಮದು ಎನ್ನುವ ಭಾವನೆಯಿಂದಲೇ ಇವರು ಮುಂದುವರೆಯುತ್ತಾರೆ. ಒಬ್ಬೊಬ್ಬರನ್ನೂ ನೋಡಿ ಖುಷಿಯಾಗುತ್ತದೆ. ಮೊದಲು ಒಂದೇ ಭಾರತದ ಅನೇಕ ಕೊಂಬೆಗಳ ವೃಕ್ಷವಿತ್ತು. ಆದರೆ ಈಗ ವಿಶ್ವದ ನಾಲ್ಕೂ ಕಡೆಯಿಂದ ಅನೇಕ ಸಂಸ್ಕಾರ, ಅನೇಕ ಭಾಷೆಗಳು, ಅನೇಕ ರೀತಿಯ ಊಟೋಪಚಾರಗಳು, ಎಲ್ಲಾ ಆತ್ಮಗಳೂ ಒಂದು ವೃಕ್ಷದವರು ಆಗಿಬಿಟ್ಟಿದ್ದಾರೆ. ಇದೂ ಒಂದು ಅದ್ಭುತವಾಗಿದೆ. ಎಲ್ಲರು ಒಂದೇ ಆಗಿದ್ದರು, ಒಂದೇ ಆಗಿದ್ದಾರೆ, ಪುನಃ ಒಂದೇ ಆಗುತ್ತಾರೆ. ಇದೂ ಒಂದು ಚಮತ್ಕಾರವಾಗಿದೆ. ಇದೇ ರೀತಿ ಅನುಭವ ಮಾಡುತ್ತಾರೆ. ವಿಶೇಷವಾಗಿ ಎಲ್ಲಾ ಆತ್ಮಗಳ ಸ್ನೇಹ ಪ್ರಾಪ್ತಿ ಆಗಿಯೇ ಆಗುತ್ತದೆ. **(29–03–1981)**

ಎಲ್ಲರೂ ತಮ್ಮನ್ನು ತಾವು ಮಹಾನ್ ಭಾಗ್ಯಶಾಲಿಗಳೆಂದು ತಿಳಿದಿದ್ದೀರಾ? ವರದಾನದ ಭೂಮಿಯಲ್ಲಿ ವರದಾನಗಳಿಂದ ಜೋಳಿಗೆಯನ್ನು ತುಂಬಿಕೊಳ್ಳಲು ಬಂದಿರುವಿರಿ ಎಂದರೆ ಎಷ್ಟು ದೊಡ್ಡ ಭಾಗ್ಯವಾಗಿದೆ ಎಂಬುದನ್ನು ನೋಡಿರಿ. ವಿಶ್ವದಲ್ಲಿ ಎಷ್ಟು ಆತ್ಮಗಳಿಗೆ ಇಂತಹ  ಭಾಗ್ಯ ಸಿಗುತ್ತದೆ, ಕೋಟಿಯಲ್ಲಿ ಕೆಲವರಿಗೆ, ಕೆಲವರಲ್ಲಿ ಕೆಲವರಿಗೆ, ಆ ಕೆಲವರಲ್ಲೂ ಕೆಲವರಿಗೆ ಮಾತ್ರ ಭಾಗ್ಯ ಸಿಗುತ್ತದೆ. ಅಂದಾಗ **'ಕೋಟಿಯಲ್ಲಿ ಕೆಲವರು, ಕೆಲವರಲ್ಲಿ ಹಲವರು'** ಎಂದು ಯಾವುದನ್ನು ಕೇಳುತ್ತಿದ್ದೀರೋ, ವರ್ಣನೆ ಮಾಡುತ್ತಿದ್ದೀರೋ, ಅಂತಹ ಆತ್ಮ ನಾನೇ ಆಗಿದ್ದೇನೆ ಎನ್ನುವ ಖುಷಿಯನ್ನು ಸದಾ ಇಟ್ಟುಕೊಳ್ಳಿ. ಇಷ್ಟೊಂದು ಖುಷಿಯಿದೆಯೇ? ಸದಾ 'ವಾಹ್ ನನ್ನ ಭಾಗ್ಯ' ಎನ್ನುವ ಖುಷಿಯಲ್ಲಿ ನರ್ತಿಸುತ್ತಾ ಇರಿ. **'ವಾಹ್ ರೇ ನನ್ನ ಭಾಗ್ಯ'** ಎನ್ನುವ ಇದೇ ಗೀತೆಯನ್ನು ಸದಾ ಹಾಡುತ್ತಾ ಇರಿ ಮತ್ತು ಇದೇ ಹಾಡಿನ ಜೊತೆಯಲ್ಲಿ ಖುಷಿಯಲ್ಲಿ ನರ್ತಿಸುತ್ತಾ ಇರಿ. 'ವಾಹ್ ನನ್ನ ಭಾಗ್ಯ', 'ವಾಹ್ ನನ್ನ ಬಾಬಾ' ಎಂಬ ಈ ಗೀತೆಯನ್ನು ಹಾಡಲು ಬರುತ್ತದೆಯೇ? **'ವಾಹ್ ಡ್ರಾಮಾ ವಾಹ್'** ಈ ಗೀತೆಯನ್ನು ಹಾಡುತ್ತಾ ಇರಿ. ಬಹಳ ಅದೃಷ್ಟವಂತರಾಗಿದ್ದೀರಿ. ತಂದೆಯಂತೂ ಸದಾ ಎಲ್ಲಾ ಮಕ್ಕಳನ್ನೂ ಲವ್‌ಲೀ (ಮುದ್ದು) ಮಕ್ಕಳೆಂದು ಕರೆಯುತ್ತಾರೆ. ಅಂದಮೇಲೆ ಲವ್‌ಲೀಯೂ ಆಗಿದ್ದೀರಿ ಮತ್ತು ಲಕ್ಕಿಯೆಸ್ಟ್ ಸಹ ಆಗಿದ್ದೀರಿ (ಬಹಳ ಪ್ರಿಯರೂ  ಹಾಗೂ ಅದೃಷ್ಟವಂತರೂ ಆಗಿದ್ದೀರಿ) ಎಂದಿಗೂ ತಮ್ಮನ್ನು ಸಾಧಾರಣರೆಂದು ತಿಳಿಯಬೇಡಿ. ಬಹಳ ಶ್ರೇಷ್ಠರಾಗಿರುವಿರಿ. ಭಗವಂತನೇ ತಮ್ಮವರಾಗಿ ಬಿಟ್ಟಿದ್ದಾರೆ ಎಂದ ಮೇಲೆ ಇನ್ನೇನೂ ಬೇಕು. ಯಾವಾಗ ಬೀಜವನ್ನೇ ತಮ್ಮವರನ್ನಾಗಿ ಮಾಡಿಕೊಂಡು ಬಿಟ್ಟಿರಿ ಎಂದಾಗ ವೃಕ್ಷವು ಬಂದು ಬಿಟ್ಟಿತಲ್ಲವೇ? ಅಂದ ಮೇಲೆ ಸದಾ ಇದೇ ಖುಷಿಯಲ್ಲಿ ಇರಿ. ತಮ್ಮ ಖುಷಿಯನ್ನು ನೋಡಿ ಅನ್ಯರು ಖುಷಿಯಲ್ಲಿ ನರ್ತಿಸುತ್ತಾರೆ. **(13–04–1981)**

ಎಲ್ಲರೂ ಸದಾ ಸಾಕ್ಷೀ ಸ್ಥಿತಿಯಲ್ಲಿ ಸ್ಥಿತರಾಗಿ ಪ್ರತಿಯೊಂದು ಪಾತ್ರವನ್ನು ಮಾಡುತ್ತೀರಲ್ಲವೇ? ಸಾಕ್ಷಿತನದ ಸ್ಥಿತಿ ಸದಾ ಖಾಯಂ ಆಗಿ ಇರುತ್ತದೆಯೇ? ಒಮ್ಮೊಮ್ಮೆ ಪಾತ್ರವನ್ನು ಮಾಡುತ್ತಾ–ಮಾಡುತ್ತಾ ಸಾಕ್ಷೀತನದ ಸ್ಥಿತಿಯನ್ನು ಮರೆಯುವುದಿಲ್ಲ ತಾನೆ? ಯಾರು ಸಾಕ್ಷಿಯಾಗಿ ಇರುತ್ತಾರೋ, ಅವರು ಎಂದಿಗೂ ಯಾವುದೇ ಪಾತ್ರದಲ್ಲಿ ಏರು ಪೇರಾಗುವುದಿಲ್ಲ. ಭಿನ್ನರಾಗಿರುತ್ತಾರೆ,  ಪ್ರಿಯರಾಗಿರುತಾರೆ. ಒಳ್ಳೆಯದರ ಜೊತೆ ಒಳ್ಳೆಯವರಾಗಿ, ಕೆಟ್ಟದರ ಜೊತೆ ಕೆಟ್ಟದಾಗಿ ಇರುವುದಿಲ್ಲ. ಸಾಕ್ಷಿ ಎಂದರೆ ಸದಾ ಪ್ರತಿಯೊಂದು ಕಾರ್ಯವನ್ನು ಮಾಡುತ್ತಾ ಕಲ್ಯಾಣದ ವೃತ್ತಿಯಲ್ಲಿ ಇರುವವರು. ಏನೆಲ್ಲ ಆಗುತ್ತಿದೆಯೋ ಅದರಲ್ಲಿ ಕಲ್ಯಾಣವೇ ತುಂಬಿದೆ. ಒಂದುವೇಳೆ ಮಾಯೆಯ ವಿಘ್ನ ಬಂದರೂ ಅದರಲ್ಲಿಯೂ ಲಾಭವನ್ನು ಕಂಡುಕೊಂಡು, ಶಿಕ್ಷಣವನ್ನು ಪಡೆದು, ಮುಂದು ವರೆಯುತ್ತಾರೆಯೇ ವಿನಹ ನಿಲ್ಲುವುದಿಲ್ಲ. ಈ ರೀತಿ ಇದ್ದೀರಾ? ಸೀಟ್‌ನಲ್ಲಿ ಕುಳಿತುಕೊಂಡು ಆಟವನ್ನು ನೊಡುತ್ತಿರಿ. ಸಾಕ್ಷೀತನವೇ ಸೀಟ್ ಆಗಿದೆ. ಈ ಸೀಟ್‌ನಲ್ಲಿ ಕುಳಿತು ಡ್ರಾಮಾವನ್ನು ನೋಡಿದರೆ ಬಹಳ ಮಜಾ ಬರುತ್ತದೆ. ಸದಾ ತಮ್ಮನ್ನು ಸಾಕ್ಷಿಯ ಸೀಟಿನಲ್ಲಿ ಸ್ಥಿತ ಮಾಡಿಕೊಳ್ಳಿ, ಆಮೇಲೆ **'ವಾಹ್ ಡ್ರಾಮಾ ವಾಹ್'** ಎಂಬ ಇದೇ ಹಾಡನ್ನು ಹಾಡುತ್ತಾ ಇರುತ್ತೀರಿ. **(15–04–1981)**

**(ಪ್ರಿಯ ದಾದೀಜಿಯವರು ಅಂಬಾಲ ಮೇಳಕ್ಕೆ ಹೋಗಲು ಬಾಪ್ ದಾದಾರವರಿಂದ ಬಿಳ್ಕೊಡುಗೆ ತೆಗೆದುಕೊಳ್ಳುತ್ತಿದ್ದಾರೆ)** ಬಾಪ್ ದಾದಾರವರು ಅನೇಕ ಮಕ್ಕಳ ಖುಷಿಯನ್ನು ನೋಡಿ ಖುಷಿಯಾಗುತ್ತಿದ್ದಾರೆ. ಸೇವೆಗಾಗಿ ಎಲ್ಲಿಗಾದರೂ ಹೋಗಿ, ಅನೇಕ ಖಜಾನೆಗಳು ಅನೇಕರಿಗೆ ಸಿಕ್ಕಿಬಿಡುತ್ತದೆ. ಆದ್ದರಿಂದ ಡ್ರಾಮಾದಲ್ಲಿ ಇಲ್ಲಿಯವರೆಗೂ ಹೋಗಬೇಕಾಗಿದೆ, ಹಾಗಾಗಿ ನಡೆಯುತ್ತಿದೆ, ನಿಲ್ಲಬೇಕಾದರೆ ಒಂದು ಸೆಕೆಂಡಿನಲ್ಲಿ ನಿಂತುಬಿಡುತ್ತದೆ. ಹೇಗೆ ಸಾಕಾರದಲ್ಲಿ ತಯಾರಿಯನ್ನು ಮಾಡಿಕೊಳ್ಳಲಾಗಿತ್ತು, ಪಾತ್ರವು ಸಮಾಪ್ತಿಯಾದ ಕಾರಣ ತಯಾರಿಯಾಗಿದ್ದರೂ ಸಹ ಹೋಗಲು ಸಾಧ್ಯವಾಗಲಿಲ್ಲ ಎಂಬುದನ್ನು ನೋಡಿದಿರಿ. ಅದೇ ರೀತಿ ಇಲ್ಲಿಯೂ ಸಹ ಡ್ರಾಮಾದಲ್ಲಿ ಸಮಾಪ್ತಿಯಾದಾಗ ಸೆಕೆಂಡಿನಲ್ಲಿ ಅಚಾನಕ್ಕಾಗಿ ಆಗಿ ಬಿಡುತ್ತದೆ. **(12–10–1981)**

ಇಂದು ಭಾಗ್ಯವಿಧಾತ ತಂದೆ ತಮ್ಮ ಭಾಗ್ಯಶಾಲಿ ಮಕ್ಕಳನ್ನು ನೋಡುತ್ತಿದ್ದಾರೆ. ಭಾಗ್ಯಶಾಲಿಗಳಂತೂ ಎಲ್ಲರೂ ಆಗಿರುವಿರಿ ಆದರೆ 'ಭಾಗ್ಯಶಾಲಿ' ಶಬ್ದದ ಮುಂದೆ – ಎಲ್ಲಿ ಸೌಭಾಗ್ಯಶಾಲಿಗಳು, ಎಲ್ಲಿ ಪದ್ಮಾಪದಂ ಭಾಗ್ಯಶಾಲಿಗಳು. ಭಾಗ್ಯಶಾಲಿ ಶಬ್ದವಂತೂ ಎರಡಕ್ಕೂ ಹೇಳಲಾಗುತ್ತದೆ. ನೂರೆಲ್ಲಿ? ಪದಮವೆಲ್ಲಿ? ಎಷ್ಟೊಂದು ಅಂತರವಿದೆಯಲ್ಲವೇ? ಭಾಗ್ಯವಿಧಾತ ಒಬ್ಬರೇ ಆಗಿದ್ದಾರೆ. ವಿಧಾತನ ವಿಧಿಯೂ ಒಂದೇ ಆಗಿದೆ. ಸಮಯ ಮತ್ತು ವೇಳೆಯೂ ಸಹ ಒಂದೇ ಆಗಿದೆ. ಆದರೂ ಸಹ ನಂಬರ್‌ವಾರ್ ಆಗಿ ಬಿಟ್ಟಿದ್ದಾರೆ. ವಿಧಾತನ ವಿಧಿ ಎಷ್ಟೊಂದು ಶ್ರೇಷ್ಠ ಮತ್ತು ಸಹಜವಾಗಿದೆ. ಹೇಗೆ ಲೌಕಿಕ ರೀತಿಯಲ್ಲಿ ಇಂದಿನ ದಿನಗಳಲ್ಲಿ ಯಾರ ಮೇಲಾದರೂ ಗ್ರಹಚಾರ ಕುಳಿತರೆ ಅವರ ಅದೃಷ್ಟವೇ ಬದಲಾಗಿ ಬಿಡುತ್ತದೆ. ಆಗ ಗ್ರಹಚಾರವನ್ನು ತೊಲಗಿಸಿ ಶ್ರೇಷ್ಠ ಅದೃಷ್ಟವನ್ನು ತಯಾರು ಮಾಡಿಕೊಳ್ಳಲು ಎಷ್ಟೊಂದು ಪ್ರಕಾರದ ವಿಧಿಗಳನ್ನು ಮಾಡುತ್ತಾರೆ. ಎಷ್ಟೊಂದು ಸಮಯ, ಶಕ್ತಿ ಮತ್ತು ಸಂಪತ್ತನ್ನು ಖರ್ಚು ಮಾಡುತ್ತಾರೆ. ಆದರೂ ಸಹ ಅಲ್ಪಕಾಲದ ಅದೃಷ್ಟ ತಯಾರಾಗುತ್ತದೆ. ಒಂದು ಜನ್ಮಕ್ಕೂ ಸಹ ಗ್ಯಾರೆಂಟಿಯಾಗಿ ಇರುವುದಿಲ್ಲ. ಏಕೆಂದರೆ ಆ ವ್ಯಕ್ತಿಗಳು ವಿಧಾತನ ಮುಖಾಂತರ ಅದೃಷ್ಟವನ್ನು ಬದಲಾಯಿಸಿಕೊಳ್ಳುವುದಿಲ್ಲ. ಅಲ್ಪಜ್ಞ, ಅಲ್ಪ ಸಿದ್ಧಿಯು ಪ್ರಾಪ್ತಿಯಾದ ವ್ಯಕ್ತಿಯ ಮುಖಾಂತರ ಅಲ್ಪಕಾಲದ ಪ್ರಾಪ್ತಿಯನ್ನು ಮಾಡಿಕೊಳ್ಳುತ್ತಾರೆ. ಅವರು ಅಲ್ಪಜ್ಞ ವ್ಯಕ್ತಿಯಾಗಿದ್ದಾರೆ, ಮತ್ತು ಇಲ್ಲಿ ವಿಧಾತ ಇದ್ದಾರೆ. ವಿಧಾತನ ಮುಖಾಂತರ ಅವಿನಾಶಿ ಅದೃಷ್ಟದ ಗೆರೆಯನ್ನು ಎಳೆಸಿಕೊಳ್ಳಬಹುದು. ಏಕೆಂದರೆ ಭಾಗ್ಯವಿಧಾತ ಇಬ್ಬರೂ ತಂದೆಯರು ಈ ಸಮಯದಲ್ಲಿ ಮಕ್ಕಳಿಗಾಗಿ ಹಾಜ಼ಿರ್ ನಾಜಿರ್ ಆಗಿದ್ದಾರೆ (ಸಮ್ಮುಖದಲ್ಲಿದ್ದಾರೆ). ಭಾಗ್ಯವಿಧಾತನಿಂದ ಎಷ್ಟು ಭಾಗ್ಯವನ್ನು ಪಡೆದು ಕೊಳ್ಳಬೇಕೆಂದು ಬಯಸುವಿರೋ ಅಷ್ಟನ್ನೂ ಈಗಲೇ ಪಡೆದುಕೊಳ್ಳಬಹುದು. ಈ ಸಮಯದಲ್ಲೇ ಭಾಗ್ಯ–ದಾತನು ಭಾಗ್ಯವನ್ನು ಹಂಚಲು ಬಂದಿದ್ದಾರೆ. ಡ್ರಾಮಾನುಸಾರವಾಗಿ ಈ ಸಮಯಕ್ಕೆ ವರದಾನವಿದೆ. ಭಾಗ್ಯದ ಭಂಡಾರ ಸಮೃದ್ಧವಾಗಿ ತೆರೆಯಲ್ಪಟ್ಟಿದೆ. ತನುವಿನ ಭಂಡಾರ, ಮನದ, ಧನದ, ರಾಜ್ಯದ, ಪ್ರಕೃತಿಯು ದಾಸಿಯಾಗುವಂತಹ, ಭಕ್ತರನ್ನಾಗಿ ಮಾಡಿಕೊಳ್ಳುವಂತಹ, ಎಲ್ಲಾ ಭಾಗ್ಯಗಳ ಭಂಡಾರ ತೆರೆದಿದೆ. ವಿಧಾತನಿಂದ ಯಾರಿಗೂ ಸಹ ವಿಶೇಷ ಪ್ರಾಪ್ತಿಯ ಅವಕಾಶ ಸಿಗುವುದಿಲ್ಲ. ಎಲ್ಲರಿಗೂ ಒಂದೇ ರೀತಿಯ ಅವಕಾಶವಾಗಿದೆ. ಯಾವುದೇ ಮಾತುಗಳ ಕಾರಣವೂ ಸಹ ಬಂಧನದ ರೂಪದಲ್ಲಿ ಇಲ್ಲ. ತಡವಾಗಿ ಬಂದಿರುಬಂತಹ ಕಾರಣ, ಪ್ರವೃತ್ತಿಯಲ್ಲಿ ಇರುವಂತಹ ಕಾರಣ, ತನುವಿನ ರೋಗದ ಕಾರಣ, ವಯಸ್ಸಿನ ಕಾರಣ, ಸ್ಥೂಲ ಡಿಗ್ರಿ ಅಥವಾ ವಿದ್ಯಾಭ್ಯಾಸದ ಕಾರಣ, ಈ ರೀತಿಯಾದ ಯಾವುದೇ ಬೀಗಗಳು ಭಂಡಾರಕ್ಕೆ ಹಾಕಿಲ್ಲ. ಹಗಲು–ರಾತ್ರಿ ಭಾಗ್ಯವಿಧಾತನ ಭಂಡಾರ ಸಮೃದ್ಧವಾಗಿರುತ್ತದೆ ಮತ್ತು ತೆರೆದಿರುತ್ತದೆ. ಯಾರೇ ಕಾವಲುಗಾರನನ್ನು ನೇಮಿಸಲಾಗಿದೆಯೇ? ಯಾವ ಕಾವಲುಗಾರನೂ ಇಲ್ಲ. ಆದರೂ ನೋಡಿ ತೆಗೆದುಕೊಳ್ಳುವುದರಲ್ಲಿ ನಂಬರ್‌ವಾರ್ ಆಗಿ ಬಿಡುತ್ತಾರೆ. ಭಾಗ್ಯವಿಧಾತನು ನಂಬರ್‌ನ ಅನುಸಾರವಾಗಿ ಕೊಡುವುದಿಲ್ಲ. ಇಲ್ಲಿ ಭಾಗ್ಯವನ್ನು ಪಡೆಯಲು ಕ್ಯೂನಲ್ಲೂ ಸಹ ನಿಲ್ಲಿಸುವುದಿಲ್ಲ. ಭಾಗ್ಯದ ಭಂಡಾರ ಎಷ್ಟೊಂದು ದೊಡ್ಡದಾಗಿದೆ. ಯಾವಾಗ ಬೇಕೋ, ಏನು ಬೇಕೋ ಆ ಭಾಗ್ಯಕ್ಕೆ ಅಧಿಕಾರಿ ಗಳಾಗಿರುವಿರಿ. ಹೀಗಿದ್ದೀರಲ್ಲವೇ? ಅನ್ಯ ಕಿರೀಟ ಮತ್ತು ಕ್ಯೂ ಅಂತೂ ಇಲ್ಲವಲ್ಲವೇ? ಅಮೃತವೇಳೆಯಲ್ಲಿ ನೋಡಿರಿ – ದೇಶ ವಿದೇಶದ ಎಲ್ಲಾ ಮಕ್ಕಳು ಒಂದೇ ಸಮಯದಲ್ಲಿ ಭಾಗ್ಯವಿಧಾತನನ್ನು ಮಿಲನ ಮಾಡಲು ಬರುತ್ತಾರೆ. ಅಂದ ಮೇಲೆ ತಂದೆಯ ಜೊತೆಗೆ ಭೇಟಿ ಆಗಿಯೇ ಆಗುತ್ತದೆಯಲ್ಲವೇ. ಮಿಲನ ಮಾಡುವುದೇ ಮಿಲನವಾಗಿಬಿಡುತ್ತದೆ. ಬೇಡುವುದಿಲ್ಲ, ಆದರೆ ಶ್ರೇಷ್ಠಾತೀ ಶ್ರೇಷ್ಠ ತಂದೆಯ ಜೊತೆ ಮಿಲನ ಮಾಡುವುದು ಎಂದರೆ ಭಾಗ್ಯದ ಪ್ರಾಪ್ತಿ ಆಗುವುದಾಗಿದೆ. ಒಂದಾಗಿದೆ ತಂದೆ ಮಕ್ಕಳ ಮಿಲನ, ಮತ್ತೊಂದಾಗಿದೆ ಯಾವುದೋ ಒಂದು ವಸ್ತು ದೊರೆಯುವುದು. ಅಂದ ಮೇಲೆ ತಂದೆಯ ಜೊತೆ ಮಿಲನವೂ ಆಗುತ್ತದೆ ಮತ್ತು ಭಾಗ್ಯವೂ ಸಹ ಸಿಕ್ಕಿ ಬಿಡುತ್ತದೆ. ಏಕೆಂದರೆ ದೊಡ್ಡ ವ್ಯಕ್ತಿಗಳು ಎಂದಿಗೂ ಯಾರನ್ನು ಸಹ ಖಾಲಿ ಕೈಗಳಿಂದ ಕಳಿಸುವುದಿಲ್ಲ. ತಂದೆಯಂತೂ ವಿಧಾತ, ವರಧಾತ, ಸಮೃದ್ಧ ಭಂಡಾರ ಆಗಿದ್ದಾರೆ ಎಂದ ಮೇಲೆ ಅವರು ನಮ್ಮನ್ನು

ಖಾಲಿ ಕೈಗಳಿಂದ ಹೇಗೆ ಕಳಿಸುತ್ತಾರೆ? ಆದರೂ ಸಹ ಭಾಗ್ಯಶಾಲಿಗಳು, ಸೌಭಾಗ್ಯಶಾಲಿಗಳು, ಪದಮ ಭಾಗ್ಯಶಾಲಿಗಳು, ಪದ್ಮಾಪದಂ ಭಾಗ್ಯಶಾಲಿಗಳು – ಈ ರೀತಿಯಾಗಿ ಏಕೆ ಆಗುತ್ತಾರೆ? ಕೊಡುವಂತಹವರೂ ಇದ್ದಾರೆ, ಭಾಗ್ಯದ ಖಜಾನೆಯೂ  ಸಮೃದ್ಧವಾಗಿದೆ, ಸಮಯದ ವರದಾನವೂ ಇದೆ. ಈ ಎಲ್ಲಾ ಮಾತುಗಳ ಜ್ಞಾನ ಅಂದರೆ ತಿಳುವಳಿಕೆಯೂ ಇದೆ. ತಿಳುವಳಿಕೆ ಇಲ್ಲದವರೇನೂ ಅಲ್ಲ. ಆದರೂ ಸಹ ಅಂತರವೇಕೆ? (ಡ್ರಾಮಾನುಸಾರ) ಡ್ರಾಮಾಗೂ ಸಹ ಈ ಸಮಯದಲ್ಲಿ ವರದಾನವಿದೆ. ಆದ್ದರಿಂದ ಡ್ರಾಮಾ ಎಂದು ಹೇಳಲಾಗುವುದಿಲ್ಲ. **(14–10–1981)**

ಸದಾ ತಮ್ಮನ್ನು ತಾವು ಈ ಸೃಷ್ಟಿ ನಾಟಕದಲ್ಲಿ ಹೀರೋ ಪಾತ್ರಧಾರಿಗಳೆಂದು ತಿಳಿದು ನಡೆಯುತ್ತಿದ್ದೀರಾ? ಯಾರು ಹೀರೋ ಪಾತ್ರಧಾರಿಗಳಾಗಿರುತ್ತಾರೋ ಅವರಿಗೆ ಪ್ರತಿ ಹೆಜ್ಜೆಯಲ್ಲೂ ತಮ್ಮ ಬಗ್ಗೆ ಗಮನ ಇರುತ್ತದೆ. ಅವರು ತಮ್ಮ ಪ್ರತಿ ಹೆಜ್ಜೆಯನ್ನೂ – ಎಲ್ಲರೂ ವಾಹ್–ವಾಹ್ ಎನ್ನುವಂತೆ, ಒನ್ಸ್ ಮೋರ್ (ಮತ್ತೊಂದು ಬಾರಿ) ಎನ್ನುವಂತೆ ಇಡುತ್ತಾರೆ. ಒಂದುವೇಳೆ ಹೀರೋ ಪಾತ್ರಧಾರಿಗಳ ಯಾವುದೇ  ಒಂದು ಹೆಜ್ಜೆಯೂ ಸಹ ಏರುಪೇರಾದರೆ ಅವರನ್ನು ಹೀರೋ ಪಾತ್ರಧಾರಿಗಳೆಂದು ಹೇಳಲು ಸಾಧ್ಯವಿಲ್ಲ. ಅಂದ ಮೇಲೆ ತಾವೆಲ್ಲರೂ ಡಬಲ್ ಹೀರೋಗಳಾಗಿರುವಿರಿ. ಹೀರೋ ಎಂದರೆ ವಿಶೇಷ ಪಾತ್ರಧಾರಿಯೂ ಆಗಿದ್ದೀರಿ ಮತ್ತು ಹೀರೋ ರೀತಿಯ ಜೀವನವನ್ನು ತಯಾರು ಮಾಡಿಕೊಳ್ಳು ವಂತಹವರೂ ಆಗಿದ್ದೀರಿ. ಹಾಗಾಗಿ ಈ ರೀತಿ ತಮ್ಮ ಸ್ವಮಾನವನ್ನು ಅನುಭವ ಮಾಡುತ್ತಿದ್ದಿರಾ? ಒಂದಾಗಿದೆ ತಿಳಿಯುವುದು, ಮತ್ತೊಂದಾಗಿದೆ ತಿಳಿದುಕೊಂಡು ನಡೆಯುವುದು. ಅಂದಮೇಲೆ ತಾವು ತಿಳಿದುಕೊಂಡಿರುವಿರಾ ಅಥವಾ ತಿಳಿದುಕೊಂಡು ನಡೆಯುವಿರಾ? ಆದ್ದರಿಂದ ಸದಾ ತಮ್ಮ ಹೀರೋ ಪಾತ್ರವನ್ನು ನೋಡಿ ಹರ್ಷಿತವಾಗಿ ಇರಿ, ವಾಹ್ ಡ್ರಾಮಾ ಮತ್ತು ವಾಹ್ ನನ್ನ ಪಾತ್ರ. ಒಂದುವೇಳೆ ಸ್ವಲ್ಪವಾದರೂ ಸಾಧಾರಣ ಕರ್ಮವಾಯಿತೆಂದರೆ ಅವರನ್ನು ಹೀರೋ ಎಂದು ಹೇಳಲಾಗುವುದಿಲ್ಲ. ಹೇಗೆ ತಂದೆಯು ಹೀರೋ ಪಾತ್ರಧಾರಿಯಾಗಿರುವುದ ರಿಂದ ಅವರ ಪ್ರತಿಯೊಂದು ಕರ್ಮವನ್ನೂ ಗಾಯನ – ಪೂಜೆ ಮಾಡಲಾಗು ತ್ತದೆಯೋ, ಹಾಗೆಯೇ ಯಾರು ತಂದೆಯ ಜೊತೆಗೆ ಸಹಯೋಗಿ ಆತ್ಮಗಳಾಗಿರುತಾರೋ ಅವರ ಪಾತ್ರವೂ ಹೀರೋ ಪಾತ್ರವಾಗಿರುವ ಕಾರಣ ಅವರ ಪ್ರತಿ ಕರ್ಮವೂ ಸಹ ಗಾಯನ ಮತ್ತು ಪೂಜೆಗೆ ಯೋಗ್ಯವಾಗಿ ಆಗಿ ಬಿಡುತ್ತದೆ. ಆದ್ದರಿಂದ ಇಷ್ಟೊಂದು ನಶೆಯಿದೆಯೇ ಅಥವ ಮರೆತು ಹೋಗುವಿರಾ? ಅರ್ಧಕಲ್ಪವಂತೂ ಮರೆತಿರಿ, ಈಗಲೂ ಮರೆಯಬೇಕೆ? ಈಗಂತೂ ನೆನಪಿನ ಸ್ವರೂಪರಾಗಿ ಬಿಡಿ. ಸ್ವರೂಪರಾಗಿ ಬಿಟ್ಟನಂತರ ಎಂದಿಗೂ ಮರೆಯಲಾಗುವುದಿಲ್ಲ. **(17–10–1981)**

ಬಾಪ್‌ದಾದಾರವರು ಮಕ್ಕಳ ಸ್ನೇಹದ ಶಕ್ತಿಯನ್ನು ನೋಡುತ್ತಿದ್ದಾರೆ. ಸ್ನೇಹದ ಶಕ್ತಿಯ ಆಧಾರದಿಂದ ಸೆಕೆಂಡಿನಲ್ಲಿ ಎಷ್ಟೇ ದೂರದಿಂದ ಆದರೂ ಸಮೀಪಕ್ಕೆ ತಲುಪುತ್ತಾರೆ. ಸ್ನೇಹದ ಶಕ್ತಿಯು ಎಷ್ಟು ಮಹಾನ್ ಆಗಿರುತ್ತದೋ, ಅಷ್ಟು ಸಮ್ಮುಖದಲ್ಲಿ ತಲುಪುವಂತಹ ವೇಗವೂ ಸಹ ಮಹಾನ್ ಆಗಿರುತ್ತದೆ. ಎಷ್ಟೊಂದು ಅಮೂಲ್ಯ ರತ್ನಗಳು ಸಮೀಪಕ್ಕೆ ಬರುತ್ತಿದ್ದಾರೆ. ಒಂದೊಂದು ರತ್ನದ ಮಹಿಮೆಯು ಮಹಾನ್ ಆಗಿದೆ. ಯಾವ ಯಾವ ಮಹಾರಥಿಗಳ ವರ್ಣನೆ ಮಾಡಲಿ? ದೀಪದ ಮೇಲೆ ಪತಂಗಗಳು ಬರುತ್ತಿವೆ. ಬಾಪ್‌ದಾದಾರವರು ಎಲ್ಲಾ ಮಕ್ಕಳಿಗೂ ಸದಾ "ಸಹಜಯೋಗಿ ಭವ" ದ ವರದಾನವನ್ನು ನೀಡುತ್ತಿದ್ದಾರೆ. ಕೇವಲ ಒಬ್ಬ ಬಿಂದುವನ್ನು ನೆನಪು ಮಾಡಿರಿ. ಎಲ್ಲದಕ್ಕಿಂತಲೂ ಸರಳ ಚಿಹ್ನೆ ಬಿಂದುವಾಗಿದೆ. ಆದ್ದರಿಂದ ಬಾಪ್‌ದಾದಾರವರು ಕೇವಲ ಬಿಂದುವಿನ ಲೆಕ್ಕಚಾರವನ್ನು ಮಾತ್ರ ತಿಳಿಸಿ ಕೊಡುತ್ತಾರೆ. ಸ್ವಯಂ ತಾವೂ ಸಹ ಬಿಂದುವಾಗಿ, ಬಿಂದುವಿನ ನೆನಪನ್ನೇ ಮಾಡಿರಿ ಮತ್ತು ಡ್ರಾಮಾದ ಪ್ರತಿ ದೃಶ್ಯವನ್ನು ತಿಳಿದು, ಮಾಡಿದ ನಂತರ ಬಿಂದುವಿನ ಚಿಹ್ನೆಯನ್ನು ಇಟ್ಟು ಬಿಡಿ. ಒಂದೇ ಬಿಂದುವಿನಲ್ಲಿ ತಾವು, ತಂದೆ ಮತ್ತು ರಚನೆ ಎಲ್ಲವೂ ಬಂದುಬಿಡತ್ತದೆ. ಆದ್ದರಿಂದ ತಿಳಿದುಕೊಳ್ಳುವುದೇನಿದೆ? – 'ಬಿಂದು'. ಮಾಡುವುದೇನಿದೆ? – 'ಬಿಂದುವಿನ ನೆನಪು'. ಇದೇ ಬಿಂದುವಿನ ಮಹತ್ವವನ್ನು ತಿಳಿದುಕೊಂಡರೆ ಸದಾ ಸಹಜಯೋಗಿಗಳು ಆಗಬಹುದಾಗಿದೆ. ಎಷ್ಟೇ ದೊಡ್ಡ ವಿಸ್ತಾರವಾಗಿರಬಹುದು ಆದರೆ ಎಲ್ಲವೂ ಬಿಂದುವಿನಲ್ಲೇ ಸಮಾವೇಶವಾಗಿದೆ. ಬಿಂದುವೇ ಬೀಜವಾಗಿದೆ, ಅದರಲ್ಲೇ ಇಡೀ ವೃಕ್ಷವು ಸಮಾವೇಶವಾಗಿದೆ. ಆತ್ಮವು ಬಿಂದುವಾಗಿದೆ ಅದರಲ್ಲೇ 84 ಜನ್ಮಗಳ ಸಂಸ್ಕಾರ ಸಮಾವೇಶವಾಗಿದೆ. ಐದು ಸಾವಿರ ವರ್ಷಗಳ ಡ್ರಾಮಾವನ್ನು ಈಗ ಸಂಗಮದ ಅಂತ್ಯದಲ್ಲಿ ಸಮಾಪ್ತಿ ಮಾಡುತ್ತಿರುವಿರಿ, ಈಗ ಡ್ರಾಮಾದ ಚಕ್ರ ಪೂರ್ಣವಾಯಿತು. ಅಂದರೆ ಯಾವ ಚಕ್ರ ಕಳೆದು ಹೋಯಿತೋ ಅದಕ್ಕೆ ಬಿಂದು ಇಟ್ಟು, ಬಿಂದುವಾಗಿ, ಈಗ ಮನೆಗೆ ಹೋಗಬೇಕಾಗಿದೆ. ಬಿಂದು ತಂದೆಯ ಜೊತೆಗೆ ಬಿಂದುವಾಗಿ ಮನೆಗೆ ಹೋಗಬೇಕಾಗಿದೆ. ಮನೆಯೂ ಸಹ ಎಲ್ಲಾ ಬಿಂದುಗಳ ಮನೆಯಾಗಿದೆ. ಸಂಕಲ್ಪ, ಕರ್ಮ, ಸಂಸ್ಕಾರ ಎಲ್ಲವೂ ಮರ್ಜ್

ಆಗಿದೆ ಅಂದರೆ ಬಿಂದುವಿಡಲಾಗಿದೆ. ಸಮಾಪ್ತಿಯ ಚಿಹ್ನೆ ಬಿಂದುವಾಗಿದೆ. ತಂದೆಯು ಸರ್ವಗುಣ, ಸರ್ವಜ್ಞಾನದ ಖಜಾನೆಗಳ ಸಾಗರ......... ಸಾಗರ ಆಗಿದ್ದಾರೆ ಆದರೂ ಸಹ 'ಬಿಂದುವಾಗಿದ್ದಾರೆ'. ಸಂಬಂಧ ಮತ್ತು ಸಂಪರ್ಕದಲ್ಲೂ ಸಹ ಬನ್ನಿರಿ, ಆದರೂ ಸಹ ಸರ್ವರ ಮಸ್ತಕದಲ್ಲಿ ಏನು ಹೊಳೆಯುತ್ತಿದೆ – 'ಬಿಂದು'. ಎಲ್ಲದರ ಕಾರ್ಯಕರ್ತ ಯಾವುದಾಗಿದೆ? ಬಿಂದುವೇ ಅಲ್ಲವೇ. ಧರಣಿಯಿಂದ ಚಂದ್ರನವರೆಗೂ ತಲುಪಿದರೂ ಸಹ ಬಿಂದುವೇ ತಲುಪಿತು. ಹಾಗೆಯೇ ತಾವು ಶಾಂತಿಯ ಶಕ್ತಿಯಿಂದ ಮೂರು ಲೋಕಗಳವರೆಗೂ ತಲುಪಿದರೂ ಯಾರು ತಲುಪಿದರು – 'ಬಿಂದು'. ವಿಜ್ಞಾನದ ಶಕ್ತಿ ಇರಬಹುದು ಅಥವಾ ಶಾಂತಿಯ ಶಕ್ತಿ ಇರಬಹುದು, ನಿರ್ಮಾಣ ಮಾಡುವಂತಹ ಶಕ್ತಿ ಅಥವಾ ನಿರ್ವಾಣಕ್ಕೆ ಹೋಗುವಂತಹ ಶಕ್ತಿ 'ಬಿಂದು'ವೇ ಆಗಿದೆಯಲ್ಲವೇ? ಬೀಜದಿಂದ ವೃಕ್ಷವು ಎಷ್ಟೊಂದು ದೊಡ್ಡ ವಿಸ್ತಾರವಾಗುತ್ತದೆ. ಆದರೆ ವಿಸ್ತಾರವಾದ ನಂತರ ಯಾವುದರಲ್ಲಿ ಸಮಾವೇಶವಾಗುತ್ತದೆ? ಬೀಜದಲ್ಲಿ ಅಂದರೆ ಬಿಂದುವಿನಲ್ಲೇ. ಆದ್ದರಿಂದ ಬಿಂದುವು ಅನಾದಿ ಅವಿನಾಶಿಯಾಗಿದೆ. ತಾವೂ ಸಹ ಮೂರೂ ಕಾಲಗಳ ಜ್ಞಾನ, ಮೂರೂ ಲೋಕಗಳ ಜ್ಞಾನವನ್ನು ಪ್ರಾಪ್ತಿ ಮಾಡಿಕೊಳ್ಳುತ್ತೀರಿ. ಆದರೆ ಪ್ರಾಪ್ತಿ ಮಾಡಿಕೊಳ್ಳುವಂತಹವರು ಯಾರು? 'ಬಿಂದು'. ಆದಿಯಿಂದ ಅಂತ್ಯದವರೆಗೂ ವೈರೆಟಿ ಪಾತ್ರಗಳನ್ನು ಅಭಿನಯ ಮಾಡಿದ್ದೀರಿ, ಆದರೆ ಪಾತ್ರಧಾರಿ ಯಾರು? ಯಾರು ಪಾತ್ರ ಮಾಡಿದರು? 'ಬಿಂದು'. ಆದ್ದರಿಂದ ಮಹತ್ವವೆಲ್ಲವೂ 'ಬಿಂದು'ವಿನದೇ ಆಗಿದೆ. ಮತ್ತು ಬಿಂದುವನ್ನು ತಿಳಿದರೆ ಎಲ್ಲವನ್ನೂ ತಿಳಿದುಕೊಂಡಂತೆ, ಎಲ್ಲವನ್ನೂ ಪಡೆದಂತೆ. ಬಿಂದು ರೂಪದಲ್ಲಿ ಸ್ಥಿತರಾಗಿ ಯಾವ ಸಂಕಲ್ಪ ಮಾಡುತ್ತೀರೋ, ಯಾವ ಭಾವನೆಯಿಡುತ್ತೀರೋ, ಯಾವ ಮಾತನ್ನು ಆಡುತ್ತೀರೋ, ಯಾವ ಕರ್ಮವನ್ನು ಮಾಡುತ್ತೀರೋ – ಬಿಂದುವು ಹೇಗೆ ಮಹಾನ್ ಆಗಿದೆಯೋ ಅದೇ ರೀತಿಯಲ್ಲಿ ಎಲ್ಲಾ ಮಾತುಗಳು ಸ್ವತಃ ಮಹಾನ್ ಆಗಿಬಿಡುತ್ತದೆ ಅಂದರೆ ಸ್ವತಃ ಶ್ರೇಷ್ಠವಾಗಿ ಬಿಡುತ್ತದೆ. **(11–11–1981)**

ಯಾವುದೇ ಪ್ರಕಾರದ ವಿಘ್ನ ಅಥವಾ ಸಮಸ್ಯೆಯಾಗಲಿ ಅದು ಈಗ ಆಟದ ಸಮಾನವೆಂದು ಅನುಭವವಾಗಬೇಕಿದೆ. ಯುದ್ಧವಲ್ಲ, ಆಟವಾಗಿದೆ. ಆದ್ದರಿಂದ ಆಟವೆಂದು ತಿಳಿದರೆ ಖುಷಿ–ಖುಷಿಯಾಗಿ ಪಾರು ಮಾಡುತ್ತೀರಿ ಮತ್ತು ಯುದ್ಧವೆಂದು ತಿಳಿದರೆ ಹೆದರುವಿರಿ ಜೊತೆಗೆ ಏರುಪೇರಿನಲ್ಲೂ ಬಂದು ಬಿಡುವಿರಿ. ಡ್ರಾಮಾದಲ್ಲಿ ಪಾತ್ರಧಾರಿಗಳಾಗಿರುವ ಕಾರಣ ಯಾವುದೇ ದೃಶ್ಯವು ಸಮ್ಮುಖದಲ್ಲಿ ಬಂದರೂ ಡ್ರಾಮಾದ ಲೆಕ್ಕದ ಅನುಗುಣವಾಗಿ ಎಲ್ಲವೂ ಆಟವಾಗಿದೆ ಎಂಬ ನೆನಪು ಇದ್ದಾಗ ಏಕರಸವಾಗಿರುತ್ತೀರಿ, ಏರುಪೇರಾಗುವುದಿಲ್ಲ. ಆದ್ದರಿಂದ ಈಗಿನಿಂದಲೇ ಈ ಪರಿವರ್ತನೆ ಮಾಡಿಕೊಂಡು ಹೋಗಬೇಕು. ಏರುಪೇರನ್ನು ಇಲ್ಲಿಯೇ ಸಮಾಪ್ತಿ ಮಾಡಿಕೊಂಡು ಹೋಗಬೇಕು. ಸದಾ ತಮ್ಮ ಮಸ್ತಕದಲ್ಲಿ ವಿಜಯ ತಿಲಕದ ಅನುಭವವನ್ನು ಮಾಡಿರಿ ಆಗ ಏರುಪೇರುಗಳು ಸಮಾಪ್ತಿ ಆಗಿ ಬಿಡುತ್ತದೆ. ನೋಡಿ, ಅಮೇರಿಕವು ವಿಶ್ವದಲ್ಲಿ ಉನ್ನತ ಸ್ಥಾನವಾಗಿದೆ, ಅಂದಾಗ ಬ್ರಾಹ್ಮಣರು ಇನ್ನೆಷ್ಟು ಶ್ರೇಷ್ಠರಾಗಿದ್ದಾರೆ? ಹೇಗೆ ದೇಶದ ಮಹಿಮೆ ಇದೆಯೋ, ಅದಕ್ಕಿಂತಲೂ ಹೆಚ್ಚು ಬ್ರಾಹ್ಮಣರ ಮಹಿಮೆ ಇದೆ. ಆದ್ದರಿಂದ ತಾವುಗಳು ಸೇವೆಯಲ್ಲಿ ನಂಬರ್ ಒನ್ ಪಡೆದುಕೊಳ್ಳಬೇಕು. ಒಂದುವೇಳೆ ಪ್ರತಿಯೊಬ್ಬರೂ ತಂದೆಯನ್ನು ಪ್ರತ್ಯಕ್ಷ ಮಾಡುವುದರಲ್ಲಿ ಲೈಟ್‌ಹೌಸ್ ಆಗಿಬಿಟ್ಟರೆ, 'ವೈಟ್‌ಹೌಸ್' ಮತ್ತು 'ಲೈಟ್‌ಹೌಸ್' ನ ಹೋಲಿಕೆ ಆಗಿಬಿಡುತ್ತದೆ. ಅವರು ವಿನಾಶಕಾರಿಗಳು ಮತ್ತು ಇವರು ಸ್ಥಾಪನಾಕಾರಿಗಳು ಎಂಬ ಹೋಲಿಕೆ ಆಗುತ್ತದೆ. ಈಗ ಅದ್ಭುತವನ್ನು ಮಾಡಿ ತೋರಿಸಿರಿ. ವಿಶೇಷ ಆತ್ಮಗಳನ್ನಂತೂ ನಿಮಿತ್ತರನ್ನಾಗಿ ಮಾಡಲಾಗಿದೆ. ಈಗ ಇನ್ನೂ ಹೆಚ್ಚು ಸಂಬಂಧ ಸಂಪರ್ಕದಲ್ಲಿ ತರಬೇಕಾಗಿದೆ. ಅವರ ಬಾಯಿಂದ ತಂದೆಯ ಮಹಿಮೆ ಇಡೀ ವಿಶ್ವಕ್ಕೆ ತಲುಪುವಂತೆ ಅವರನ್ನು ಸಮೀಪ ಸಂಬಂಧದಲ್ಲಿ ತನ್ನಿರಿ. ನೋಡಿ, ಹೇಗೆ ಬಾಪ್‌ದಾದಾರವರು ಬೇರೇ ಬೇರೇ ಧರ್ಮಗಳಲ್ಲಿ ಮಿಕ್ಸ್ ಆಗಿ ಬಿಟ್ಟಂತಹ ಮಕ್ಕಳನ್ನು ಹುಡುಕಿ ಹುಡುಕಿ ಹೊರ ತೆಗೆದಿದ್ದಾರೆ. ಈ ಕಾರಣದಿಂದಾಗಿ ವಿಶೇಷ ಭಾಗ್ಯವಂತರಾಗಿದ್ದೀರಲ್ಲವೇ? ತಾವು ತಂದೆಯನ್ನು ಹುಡುಕಲಿಲ್ಲ, ಆದರೆ ತಂದೆಯೇ ತಮ್ಮನ್ನು ಹುಡುಕಿದರು. ತಾವು ಹುಡುಕಿದರು ತಮಗೆ ತಂದೆಯು ಸಿಗಲಿಲ್ಲ, ಏಕೆಂದರೆ ತಂದೆಯ ಪರಿಚಯವೇ ಇರಲಿಲ್ಲ ಅಲ್ಲವೇ? ಆದ್ದರಿಂದ ಸ್ವಯಂ ತಂದೆಯೇ ತಮ್ಮನ್ನು ಹುಡುಕಿ ಮಾಡಿ ತಮ್ಮ ಹೂದೋಟದ ಪುಷ್ಪವನ್ನಾಗಿ ಮಾಡಿಬಿಟ್ಟರು. ಆದ್ದರಿಂದ ತಾವೆಲ್ಲರೂ ಅಲ್ಲಾನ ಹೂದೋಟದ ಆತ್ಮೀಕ ಗುಲಾಬಿ ಹೂವುಗಳಾಗಿರುವಿರಿ. ಇಂತಹ ಭಾಗ್ಯಶಾಲಿಗಳೆಂದು ತಮ್ಮನ್ನು ತಾವು ತಿಳಿಯುತ್ತೀರಲ್ಲವೇ? **(04–01–1982)**

ಕೇವಲ ಒಂದೇ ಮಾತಿದೆ, ಸಣ್ಣ ಮಾತನ್ನು ದೊಡ್ಡದನ್ನಾಗಿ ಮಾಡಬೇಡಿ. ದೊಡ್ಡದನ್ನು ಸಣ್ಣದನ್ನಾಗಿ ಮಾಡಿರಿ. ಇದೂ ಸಹ ಆಗುತ್ತದೆಯೇ? ಇದೇನಾಯಿತು? ಹೀಗೂ ಆಗುತ್ತದೆಯೇ? ಎಂಬ ಪ್ರಶ್ನೆಗಳು ಬೇಡ. ಇದರ ಬದಲಾಗಿ ಏನಾಗುತ್ತದೆಯೋ ಅದು ಕಲ್ಯಾಣಕಾರಿಯಾಗಿದೆ.

ಪ್ರಶ್ನೆಗಳು ಸಮಾಪ್ತಿಯಾಗಬೇಕಿದೆ. ಫುಲ್ ಸ್ಟಾಪ್. ಬುದ್ಧಿಯನ್ನು ಇದರಲ್ಲಿ ಹೆಚ್ಚು ನಡೆಸಬೇಡಿ, ಇಲ್ಲವಾದಲ್ಲಿ ಶಕ್ತಿಯು ವ್ಯರ್ಥವಾಗಿ ಹೋಗುತ್ತದೆ ಮತ್ತು ತಮ್ಮನ್ನು ತಾವು ಶಕ್ತಿಶಾಲಿಗಳೆಂದು ಅನುಭವ ಮಾಡಲು ಆಗುವುದಿಲ್ಲ. ಪ್ರಶ್ನೆಗಳ ಚಿಹ್ನೆ ಹೆಚ್ಚು ಇರುತ್ತದೆ. ಆದ್ದರಿಂದ ಈಗ ಮಧುಬನದ ವರದಾನಿ ಭೂಮಿಯಲ್ಲಿ ಪ್ರಶ್ನೆಯ ಚಿಹ್ನೆಯನ್ನು ಸಮಾಪ್ತಿ ಮಾಡಿ, ಫುಲ್‌ಸ್ಟಾಪ್ ಇಟ್ಟು ಹೋಗಿರಿ. ಪ್ರಶ್ನಾರ್ತಕ ಚಿಹ್ನೆ ಕಷ್ಟಕರ, ಪೂರ್ಣವಿರಾಮದ ಚಿಹ್ನೆ ಬಹಳ ಸಹಜ. ಹಾಗಾಗಿ ಸಹಜವನ್ನು ಬಿಟ್ಟು ಕಷ್ಟವನ್ನು ಏಕೆ ತಮ್ಮದನ್ನಾಗಿ ಮಾಡಿಕೊಳ್ಳುತ್ತೀರಿ. ಇದರಲ್ಲಿ ಶಕ್ತಿಯು ವ್ಯರ್ಥವಾಗುತ್ತದೆ. ಆದ್ದರಿಂದ ಏನು ಮಾಡಬೇಕಾಗಿದೆ? ಈಗ ವ್ಯರ್ಥ ಮಾಡಬೇಡಿ. ಪ್ರತಿ ಸಂಕಲ್ಪವೂ ಶ್ರೇಷ್ಠ, ಪ್ರತಿ ಸೆಕೆಂಡ್ ಶ್ರೇಷ್ಠ. **(08–01–1982)**

**ಸ್ಟೀವ್ ನಾರಾಯಣ (ಗಯನಾದ ಉಪರಾಷ್ಟಪತಿ) ಹಾಗೂ ಅವರ ಪರಿವಾರಕ್ಕೆ ನೆನಪು ಪ್ರೀತಿಯನ್ನು ಕೊಡುತ್ತಾ** – ಅವರಿಗೆ ಬಹಳ ಬಹಳ ನೆನಪನ್ನು ಕೊಡಿ. ತನು, ಮನ, ಧನದಿಂದ ಪೂರ್ಣ ಸಹಯೋಗಿ, ನಿಶ್ಚಯಬುದ್ಧಿ, ನಂಬರ್ ಒನ್, ಬಹಳ ಒಳ್ಳೆಯ ಮಗುವಾಗಿದ್ದಾರೆ. ಆ ಬಡ್ಜೆಟ್‌ನ ಕಾರಣದಿಂದ ಬರಲಾಗಲಿಲ್ಲ ಆದರೆ ಪಾಂಡವ ಸರ್ಕಾರದ ಬಡ್ಜೆಟ್‌ನಲ್ಲಿ ಬುದ್ಧಿಯಿಂದ ಇಲ್ಲಿ ತಲುಪಿದ್ದಾರೆ. ಬಹಳ ನಮ್ರಚಿತ್ತವಾದ ಮಗುವಾಗಿದ್ದಾರೆ. ಡ್ರಾಮಾನುಸಾರವಾಗಿ ಪರಿವಾರವೇ ಸೇವಾಯೋಗ್ಯವಾಗಿದೆ. ಧೈರ್ಯವು ಬಹಳ ಚೆನ್ನಾಗಿದೆ. ಇಡೀ ಪರಿವಾರವೇ ಬಹಳ ಸ್ನೇಹಿಯಾಗಿದೆ. ಯಾವುದೇ ಅಂಧಶ್ರದ್ಧೆ ಇಲ್ಲ, ಜ್ಞಾನದ ಆಧಾರದ ಮೇಲೆ ಸ್ನೇಹಿಯಾಗಿದ್ದಾರೆ. ಇವರ ಸಂಪರ್ಕದಿಂದಲೇ ಅಮೇರಿಕಾ ದವರೆಗೂ ತಲುಪಿದ್ದಾರೆ. ಇವರು ಬೇಹದ್ದಿನ ಸೇವೆಗೆ ನಿಮಿತ್ತ, ವಿಶೇಷ ಆತ್ಮಗಳ ಸೇವೆಗೆ ನಿಮಿತ್ತರಾಗಿರುವರು. ಇದಕ್ಕೇ– 'ಒಬ್ಬರ ಜ್ಞಾನದಿಂದ ಅನೇಕರ ಮೇಲೆ ಪ್ರಭಾವ' ಎಂದು ಹೇಳಲಾಗುತ್ತದೆ. ದೊಡ್ಡ ಮೈಕ್ ಆಗಿದ್ದಾರೆ. ಇವರನ್ನು ನೋಡಿ ಅಲ್ಲಿಯ ಸರ್ಕಾರದ ಮೇಲೂ ಜ್ಞಾನ ಹಾಗೂ ಯೋಗದ ಒಳ್ಳೆಯ ಪ್ರಭಾವ ಬಿದ್ದಿದೆ. ಒಳ್ಳೆಯ ಸೇವಾಧಾರಿಯಾಗಿದ್ದಾರೆ. **(14–01–1982)**

**ಡಬಲ್ ವಿದೇಶಿ ಮಕ್ಕಳಿಗೆ 'ನಮಗೆ ಡಬಲ್ ಸೇವೆ (ಈಶ್ವರೀಯ ಸೇವೆಯ ಜೊತೆ ನೌಕರಿ) ಯನ್ನು ಮಾಡಲು ಏಕೆ ಹೇಳಲಾಗುತ್ತದೆ' ಎಂಬ ಒಂದು ಪ್ರಶ್ನೆ ಇರುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ಕೊಡುತ್ತಾ ಬಾಪ್‌ದಾದಾರವರು ತಿಳಿಸಿದರು** – ಸಮಯ ಕಡಿಮೆ ಇದೆ ಮತ್ತು ಎಲ್ಲರಿಗಿಂತ ಹೆಚ್ಚು ಪ್ರಾಪ್ತಿಯನ್ನು ಮಾಡಿಕೊಳ್ಳಲು ಬಯಸುತ್ತೀರಿ. ಇದಕ್ಕಾಗಿ ತನು, ಮನ, ಧನವನ್ನೂ ತೊಡಗಿಸಿ ಮೂರೂ ಪ್ರಕಾರದ ಸೇವೆಯನ್ನು ಮಾಡಬೇಕಾಗುತ್ತದೆ. ಸ್ವಲ್ಪ ಸಮಯದಲ್ಲೇ ನಿಮ್ಮ ಮೂರೂ ಪ್ರಕಾರದ ಲಾಭಗಳು ಜಮಾ ಆಗುತ್ತದೆ, ಏಕೆಂದರೆ ಧನಕ್ಕೂ ಸಹ ಅಂಕಗಳಿದೆ. ಈ ಅಂಕಗಳು ಜಮಾ ಆಗುವ ಕಾರಣ ಮುಂದಿನ ನಂಬರ್ ಪಡೆದುಕೊಳ್ಳುವಿರಿ. ಆದ್ದರಿಂದ ನಿಮ್ಮ ಒಳ್ಳೆಯದಕ್ಕಾಗಿಯೇ 'ನಿಮ್ಮ ಧನವನ್ನು ಸೇವೆಯಲ್ಲಿ ತೊಡಗಿಸುವುದರಿಂದ ಧನದ ವಿಷಯದಲ್ಲಿಯೂ ಒಂದಕ್ಕೆ ಪದಮದಷ್ಟು ಪ್ರಾಪ್ತಿಯಾಗುತ್ತದೆ' ಎಂದು ಹೇಳಲಾಗುತ್ತದೆ. ಎಲ್ಲಾ ಕಡೆಯಿಂದಲೂ ಒಂದೇ ಸಮಯದಲ್ಲಿ ಲಾಭವಾಗುತ್ತದೆ ಅಂದರೆ ಏಕೆ ಮಾಡಬಾರದು? ಉಳಿದಂತೆ ಯಾವಾಗ ನಿಮಿತ್ತ ಆಗಿರುವ ಆತ್ಮಗಳು 'ಇವರಿಗೆ ಸಮಯವೇ ಇಲ್ಲ, ಊಟಕ್ಕೂ ಸಮಯ ಸಿಗುವುದಿಲ್ಲ, ಇವರು ಇಷ್ಟೊಂದು ಬ್ಯುಸಿಯಾಗಿದ್ದಾರೆ (ವ್ಯಸ್ಥರಾಗಿದ್ದಾರೆ) ಎಂಬುದನ್ನು ನೋಡಿದಾಗ ಸ್ವತಃವಾಗಿ ಅವರೇ ಬಿಡುಗಡೆ ಮಾಡಿ ಬಿಡುವರು. ಆದರೆ ಎಲ್ಲಿಯವರೆಗೆ ಇಷ್ಟು ವ್ಯಸ್ತ ಆಗುವುದಿಲ್ಲವೋ ಅಲ್ಲಿಯವರೆಗೂ ಮಾಡಲೇ ಬೇಕಾಗುತ್ತದೆ. ಇದು ವ್ಯರ್ಥವಾಗುವುದಿಲ್ಲ, ಇದರ ಅಂಕಗಳು ಸಹ ಜಮಾ ಆಗುತ್ತಿರುವುದು. ವ್ಯಸ್ಥರಾಗಿ ಬಿಟ್ಟರಿ ಎಂದಾಗ ಡ್ರಾಮಾವೇ ನಿಮಗೆ ಆ ನೌಕರಿಯನ್ನು ಮಾಡಲು ಬಿಡುವುದಿಲ್ಲ. ಯಾವುದಾದರೂ ಒಂದು ಕಾರಣ ಈ ರೀತಿಯಾಗಿ ಉದ್ಭವವಾಗುವುದು ತಾವು ನೌಕರಿ ಮಾಡಲು ಬಯಸಿದರೂ ಮಾಡಲಾಗುವುದಿಲ್ಲ. ಆದ್ದರಿಂದ ಈಗ ಹೇಗೆ ನಡೆಯುತ್ತಿರುವಿರೋ ಅದರಲ್ಲಿಯೇ ಕಲ್ಯಾಣವಿದೆ. 'ನಾವು ಸಮರ್ಪಿತರಾಗಿಲ್ಲ' ವೆಂದು ತಿಳಿಯಬೇಡಿ. ಸಮರ್ಪಣೆಯಾಗಿದ್ದೀರಿ, ಡೈರೆಕ್ಷನ್ ಅನುಸಾರ ಮಾಡುತ್ತಿದ್ದೀರಿ. ಒಂದುವೇಳೆ ತಾವು ತಮ್ಮ ಮನಸ್ಸಿನಂತೆ ನಡೆದರೆ ಸಮರ್ಪಿತರಲ್ಲ. ಇದರಲ್ಲಿ ತಮ್ಮ ಮತವನ್ನು ನಡೆಸುತ್ತೀರೋ ಅಥವಾ ಇಲ್ಲವೋ. ನಾನು ಮಾಡುವುದಿಲ್ಲ ಎಂದು ಹೇಳುವುದೂ ಸಹ ಮನ ಮತವಾಗಿದೆ. ಆದ್ದರಿಂದ ಸ್ವಯಂನ್ನು ಸದಾ ಹಗುರವಾಗಿ ಇಟ್ಟುಕೊಳ್ಳಿರಿ. ನಿಮಿತ್ತವಾಗಿರುವ ಆತ್ಮಗಳು ಹೇಳುತ್ತಾರೆಂದರೆ ಇದರಲ್ಲಿ ನಮ್ಮ ಕಲ್ಯಾಣವಿದೆ ಎಂದು ತಿಳಿಯಿರಿ. ಇದರಲ್ಲಿ ತಾವು ನಿಶ್ಚಿಂತರಾಗಿರಿ. ಇದರಲ್ಲಿ "ನನಗೆ ಪಾತ್ರವಿಲ್ಲವೇನೋ, ನನಗೆ ಏಕೆ ಹೇಳುವುದಿಲ್ಲ?" ಎಂದು ಹೆಚ್ಚು ಯೋಚಿಸುವುದೂ ಸಹ ವ್ಯರ್ಥವೇ ಆಗಿದೆ. ತಿಳಿಯಿತೇ? **(12–03–1982)**

**(ಮನಮೋಹಿನಿ ದೀದೀಜಿಯವರು ದಿಲ್ಲಿಯ ಮೇಳಾದ ಉದ್ಘಾಟನಾ ಸಮಾರಂಭಕ್ಕೆ ಹೋಗಲು ಅನುಮತಿಯನ್ನು ಪಡೆಯುತ್ತಿರುವರು)**

ಎಲ್ಲರನ್ನೂ ಹಾರಿಸುವ ಸಲುವಾಗಿ ಹೋಗುತ್ತಿರುವಿರಲ್ಲವೇ? ನೆನಪಿನಲ್ಲಿ, ಸ್ನೇಹದಲ್ಲಿ, ಸಹಯೋಗದಲ್ಲಿ, ಎಲ್ಲದರಲ್ಲೂ ಹಾರಿಸುವ ಸಲುವಾಗಿ ಹೋಗುತ್ತಿರುವಿರಿ. ಈ ದೃಶ್ಯಗಳನ್ನೂ ಸಹ ಡ್ರಾಮಾದಲ್ಲಿ ಬೈಪ್ಲಾಟ್‌ನಂತೆ (ಉಪಕಥೆಗಳಂತೆ) ಇಡಲಾಗಿದೆ. ಈಗೀಗ ಹೋಗುವುದು, ಈಗೀಗ ಬರುವುದು ಒಳ್ಳೆಯದೇ ಆಗಿದೆ. ಆತ್ಮವೇ ವಿಮಾನವಾಗಿ ಬಿಟ್ಟಿದೆ. ಹೇಗೆ ವಿಮಾನದಲ್ಲಿ ಬರುವುದು, ಹೋಗುವುದು ಕಷ್ಟಕರವಲ್ಲವೋ ಹಾಗೆಯೇ ಆತ್ಮವೂ ಸಹ ಹಾರುವ ಪಕ್ಷಿಯಾಗಿ ಬಿಟ್ಟಿದೆ. ಹಾಗಾಗಿ ಬರುವುದು, ಹೋಗುವುದು ಸಹಜವಾಗುತ್ತದೆ. ಸ್ವಲ್ಪ ಸಮಯದಲ್ಲೇ ಹೆಚ್ಚು ಅನುಭವ ಮಾಡಿಸುವುದೂ ಸಹ ಡ್ರಾಮಾದಲ್ಲಿ ಹೀರೋ ಪಾತ್ರವಾಗಿದೆ. ಆದ್ದರಿಂದ ಈ ಹೀರೋ ಪಾತ್ರವನ್ನು ಅಭಿನಯಿಸಲು ಹೋಗುತ್ತಿರುವಿರಿ. ಒಳ್ಳೆಯದು, ಎಲ್ಲರಿಗೂ ನೆನಪು ಪ್ರೀತಿಯನ್ನು ತಿಳಿಸಿ ಮತ್ತು ಸದಾ ಸಫಲತಾ ಸ್ವರೂಪದ ಶುಭ ಸಂಕಲ್ಪವನ್ನಿಡುತ್ತಾ ಮುಂದುವರೆಯುತ್ತಾ ಇರಿ. ಇದೇ ಸ್ಮೃತಿ ಸ್ವರೂಪರನ್ನಾಗಿ ತಯಾರು ಮಾಡಿ ಬನ್ನಿ. ಜೊತೆಗೆ ದೆಹಲಿಯೂ ಇದೆ. ದೆಹಲಿಯನ್ನಂತೂ ಪವಿತ್ರ ಸ್ಥಾನವನ್ನಾಗಿ ಮಾಡಲೇ ಬೇಕಾಗಿದೆ. ಶಬ್ದ ಹೊರ ಬರಬೇಕಾಗಿರುವುದೂ ದೆಹಲಿಯಿಂದಲೇ. ಎಲ್ಲರಿಗೂ ಧ್ವನಿಯು ದೆಹಲಿಯಿಂದಲೇ ತಲುಪಬೇಕಾಗಿದೆ. ಯಾವಾಗ ಸರ್ಕಾರದಿಂದ ಈ ಶಬ್ದ ಹೊರಬರುತ್ತದೆಯೋ ಆಗ ಸಮಾಪ್ತಿಯಾಗುತ್ತದೆ. ಆಗ ಭಾರತದ  ನಾಯಕರು ಜಾಗೃತರಾಗುವರು. ಅದರ ತಯಾರಿಗಾಗಿ ಹೋಗುತ್ತಿರುವಿರಲ್ಲವೇ! **(24–03–1982)**

ಇಂದು ಬಾಪ್‌ದಾದಾರವರು ಮಾಲೆಯನ್ನು ತಯಾರು ಮಾಡುತ್ತಿದ್ದರು. ಯಾವ ಮಾಲೆ? ಪ್ರತಿಯೊಂದು ಶ್ರೇಷ್ಠ ಆತ್ಮನ ಶ್ರೇಷ್ಠ ಗುಣಗಳ ಮಾಲೆಯನ್ನು ತಯಾರು ಮಾಡುತ್ತಿದ್ದರು. ಏಕೆಂದರೆ ಶ್ರೇಷ್ಠ ತಂದೆಯ ಪ್ರತಿಯೊಂದು ಶ್ರೇಷ್ಠ ಮಗುವಿಗೂ ತಮ್ಮ ತಮ್ಮದೇ ಆದ ವಿಶೇಷತೆಗಳಿವೆಯೆಂದು ಬಾಪ್‌ದಾದಾರವರಿಗೆ ತಿಳಿದಿದೆ. ತಮ್ಮ ತಮ್ಮ ಗುಣಗಳ ಆಧಾರದಿಂದ ಸಂಗಮಯುಗದಲ್ಲಿ ಶ್ರೇಷ್ಠ ಪ್ರಾಲಬ್ಧವನ್ನು ಪಡೆಯುತ್ತಿರುವಿರಿ. ಈ ದಿನ ಬಾಪ್‌ದಾದಾರವರು ವಿಶೇಷವಾಗಿ ಕಾಲಾಳು ಗುಂಪಿನವರ ಗುಣಗಳನ್ನು ನೋಡುತ್ತಿದ್ದರು. ಪುರುಷಾರ್ಥದಲ್ಲಿ ಕೊನೆಯ ಗುಂಪಿನವರಾಗಿದ್ದರೂ ಸಹ ಅವರಲ್ಲೂ ವಿಶೇಷ ಗುಣಗಳಂತೂ ಅವಶ್ಯವಾಗಿ ಇದೆ ಮತ್ತು ಆ ವಿಶೇಷ ಗುಣಗಳೇ ಆ ಆತ್ಮಗಳನ್ನು ತಂದೆಯ ಮಗುವನ್ನಾಗಿ ಮಾಡಲು ವಿಶೇಷ ಆಧಾರವಾಗಿದೆ. ಹಾಗಾಗಿ ಬಾಪ್‌ದಾದಾರವರು ಮೊದಲನೇ ನಂಬರ್‌ನಿಂದ ಕೊನೆಯ ನಂಬರ್‌ವರೆಗೂ ಹೋಗಲಿಲ್ಲ. ಬದಲಿಗೆ ಕೊನೆಯಿಂದ ಹಿಡಿದು ಮೊದಲನೆಯ ನಂಬರ್‌ನವರೆಗೂ ಗುಣವನ್ನು ನೋಡಿದರು. ಪೂರ್ತಿ ಕೊನೆಯ ನಂಬರ್‌ನವರಲ್ಲಿಯೂ ಸಹ ಗುಣವಂತರಿದ್ದರು. ಪರಮಾತ್ಮನ ಸಂತಾನರಾಗಿದ್ದೂ ಯಾವುದೇ ಗುಣವಿಲ್ಲದೇ ಇರಲು ಸಾಧ್ಯವೇ ಇಲ್ಲ. ಆ ಗುಣಗಳ ಆಧಾರದಿಂದಲೇ ಬ್ರಾಹ್ಮಣ ಜೀವನದಲ್ಲಿ ಜೀವಿಸುತ್ತಿದ್ದಾರೆ ಅಂದರೆ ಬದುಕಿದ್ದಾರೆ. ಡ್ರಾಮಾನುಸಾರವಾಗಿ ಆ ಗುಣವೇ  ಅವರನ್ನು ಶ್ರೇಷ್ಠಾತಿ ಶ್ರೇಷ್ಠ ತಂದೆಯ ಮಗುವನ್ನಾಗಿ ಮಾಡಿದೆ. ಆ ಗುಣದ ಕಾರಣದಿಂದಲೇ ಪ್ರಭುವಿಗೆ ಪ್ರಿಯರಾಗಿದ್ದಾರೆ. ಈ ಕಾರಣದಿಂದಲೇ ಗುಣಗಳ ಮಾಲೆಯನ್ನು ತಯಾರು ಮಾಡುತ್ತಿದ್ದರು. ಇದೇ ರೀತಿಯಲ್ಲಿ ಪ್ರತಿಯೊಂದು ಬ್ರಾಹ್ಮಣ ಆತ್ಮದ ಗುಣಗಳನ್ನು ನೋಡುವುದರಿಂದ ಶ್ರೇಷ್ಠ ಆತ್ಮರೆಂಬ ಭಾವನೆಯು ಸಹಜವಾಗಿ ಮತ್ತು ಸ್ವತಃವಾಗಿಯೇ ಬಂದುಬಿಡುತ್ತದೆ. ಏಕೆಂದರೆ ಶ್ರೇಷ್ಠ ಆತ್ಮಗಳಾಗಲು ಗುಣಗಳೇ ಆಧಾರವಾಗಿದೆ. ಕೆಲವು ಆತ್ಮಗಳು ಗುಣಗಳ ಬಗ್ಗೆ ತಿಳಿದಿದ್ದರೂ ಸಹ ಹೊಲಸನ್ನೇ ನೋಡುವ ಜನ್ಮ ಜನ್ಮದ ಅಭ್ಯಾಸಿಗಳಾಗಿರುವ ಕಾರಣ ಗುಣಗಳನ್ನು ನೋಡದೆ ಅವಗುಣಗಳನ್ನೇ ನೋಡುತ್ತಾರೆ. ಆದರೆ ಅವಗುಣಗಳನ್ನು ನೋಡುವುದು, ಅವಗುಣಗಳನ್ನು ಧಾರಣೆ ಮಾಡುವುದು, ಸ್ಥೂಲ ರೀತಿಯಲ್ಲಿ ಅಶುದ್ಧ ಭೋಜನವನ್ನು ಸ್ವೀಕರಿಸಿದಷ್ಟೇ ತಪ್ಪಾಗಿದೆ. ಒಂದು ವೇಳೆ ಸ್ಥೂಲ ಭೋಜನದಲ್ಲಿ ಯಾವುದೇ ಅಶುದ್ಧ ಆಹಾರವನ್ನು ಸ್ವೀಕಾರ ಮಾಡಿದಲ್ಲಿ ತಪ್ಪಿನ ಅನುಭವವಾಗುವುದಲ್ಲವೇ? ಊಟ–ತಿಂಡಿಯ ಧಾರಣೆಯಲ್ಲಿ ಬಲಹೀನನಾಗಿ ದ್ದೇನೆ ಎಂದು ಬರೆಯುವಿರಲ್ಲವೇ? ಇದನ್ನು ತಪ್ಪೆಂದು ತಿಳಿಯುವಿರಲ್ಲವೇ? ಇದೇ ರೀತಿಯಲ್ಲಿ ಒಂದುವೇಳೆ ಯಾರದೇ ಅವಗುಣವನ್ನು ಅಥವಾ ಬಲಹೀನತೆ ಯನ್ನು ಸ್ವಯಂನಲ್ಲಿ ಧಾರಣೆ ಮಾಡಿಕೊಂಡಲ್ಲಿ, ಅಶುದ್ಧ ಭೋಜನವನ್ನು ತಿನ್ನುವವರೆಂದು ತಿಳಿಯಿರಿ. ಸತ್ಯವಾದ ವೈಷ್ಣವರಲ್ಲ, ವಿಷ್ಣುವಂಶದವರಲ್ಲ. ಆದರೆ ರಾಮನ ಸೇನೆಯವರಾಗಿ ಬಿಡುವಿರಿ. ಆದ್ದರಿಂದ ಸದಾ ಗುಣಗಳನ್ನು ಗ್ರಹಿಸುವಂತಹ 'ಗುಣಮೂರ್ತಿ' ಗಳಾಗಿ. **(29–03–1982)**

(ನಿರ್ವೈರ್ ಅಣ್ಣನವರು ವಿದೇಶದ ಸೇವೆಗಾಗಿ ಹೊರಡಲು ಅನುಮತಿಯನ್ನು ಪಡೆಯುತ್ತಿದ್ದಾರೆ)

ಇವರೂ ಸಹ ಹೋಗುತ್ತಿದ್ದಾರೆ, ಎವರ್‌ರೆಡಿಯಾಗಿ ಬಿಟ್ಟಿರಲ್ಲವೆ? ಇದಕ್ಕೇ ಮಧುರವಾದ ಡ್ರಾಮಾ ಎಂದು ಹೇಳಲಾಗುತ್ತದೆ. ಮೂರು ಬಿಂದುಗಳ ತಿಲಕವು ಬಹುಮಾನವಾಗಿಬಿಟ್ಟಿದೆ. ಯಾವ ಸಮಯದಿಂದ ಸಂಕಲ್ಪ ಮಾಡಿದಿರೋ ಅಂದಿನಿಂದ ಡ್ರಾಮಾನುಸಾರವಾಗಿ ಮೂರು ಬಿಂದುಗಳ ತಿಲಕವು ಪುನಃ ಹಾಕಲ್ಪಟ್ಟಿತು. ಹಾಕಲಾಗಿದೆ ಮತ್ತು ಪುನಃ ಹಾಕಲ್ಪಟ್ಟಿದೆ. ಈ ಅವಿನಾಶಿ ತಿಲಕವು ಮಸ್ತಕದಲ್ಲಿ ಸದಾ ಇರುತ್ತದೆಯಲ್ಲವೇ? ಮೂರೂ ಬಿಂದುಗಳು ಜೊತೆ ಜೊತೆಯಲ್ಲಿಯೇ ಇವೆ. ಬಾಪ್‌ದಾದಾರವರು ಈ ತಿಲಕದಿಂದ ವತನದಲ್ಲಿ ಸ್ವಾಗತ ಮಾಡಿದರು, ಸರಿಯಲ್ಲವೇ? ವಿಶೇಷವಾಗಿ ಯಾವ ಸ್ವರೂಪದ ಮೂಲಕ ಸಂದೇಶವನ್ನು ಕೊಡಲು ಹೋಗುತ್ತಿರುವಿರಿ? ಯಾವ ವಿಶೇಷವಾದ ಪಾಠವನ್ನು ನೆನಪಿಗೆ ತರಿಸುವಿರಿ?

'ಸದಾ ಉಮ್ಮಂಗ ಉತ್ಸಾಹದಲ್ಲಿ ಹಾರುತ್ತಿರಿ' ಎಂಬ ಇದೇ ವಿಶೇಷ ಪಾಠವನ್ನು ಎಲ್ಲರಿಗೂ ಅನುಭವದ ಮುಖಾಂತರ ಓದಿಸಬೇಕು. ಅನುಭವದ ಮೂಲಕ ಪಾಠವನ್ನು ಓದುವುದರಿಂದ ಅವಿನಾಶಿ ಪಾಠವಾಗಿ ಬಿಡುತ್ತದೆ. ಆದ್ದರಿಂದ 'ಅನುಭವದಲ್ಲಿದ್ದು ಅನುಭವವನ್ನು ಮಾಡಿಸುವ' ವಿಶೇಷ ನವೀನತೆ ಇರಬೇಕಾಗಿದೆ. ಬಾಯಿಯಿಂದ ಮಾಡುವ ಪಾಠವಂತೂ ಬಹಳ ಸಮಯ ನಡೆದಿದೆ. ಈಗ ಎಲ್ಲರಿಗೂ ಈ ವಿದ್ಯಾಭ್ಯಾಸದ ಅವಶ್ಯಕತೆ ಇದೆ. ಇದೇ ವಿಧಿಯ ಮೂಲಕ ಎಲ್ಲರನ್ನೂ ಹಾರುವ ಕಲೆಯಲ್ಲಿ ತರಬೇಕಾಗಿದೆ. ಏಕೆಂದರೆ ಅನುಭವವೇ ಎಲ್ಲದಕ್ಕಿಂತ ದೊಡ್ಡ ಅಥಾರಿಟಿಯಾಗಿದೆ. ಯಾರಿಗೆ ಅನುಭವದ ಅಥಾರಿಟಿ ಇದೆಯೋ ಅವರ ಮೇಲೆ ಬೇರೆ ಯಾವ ಅಥಾರಿಟಿಯೂ ಸಹ ಯುದ್ಧ ಮಾಡಲು ಸಾಧ್ಯವಿಲ್ಲ. ಮಾಯೆಯ ಅಥಾರಿಟಿಯು ನಡೆಯಲು ಸಾಧ್ಯವಿಲ್ಲ. ಆದ್ದರಿಂದ ಈ ವಿಶೇಷ ವಿಧಿಯನ್ನು ಗಮನದಲ್ಲಿಟ್ಟುಕೊಂಡು ಸುತ್ತು ಹಾಕಿರಿ. ಅಂದಾಗ ಇದು ನವೀನತೆಯಾಗುತ್ತದೆಯಲ್ಲವೇ? ಏಕೆಂದರೆ ಯಾರೇ ಹೋದರೂ ಎಲ್ಲರೂ ನವೀನತೆ ಸಿಗಲೆಂದೇ ಬಯಸುತ್ತಾರೆ. ಹೇಳುವುದು ಮತ್ತು ಸ್ವರೂಪರಾಗಿ ಸ್ವರೂಪರನ್ನಾಗಿ ಮಾಡುವುದು, ಇದು ಜೊತೆ ಜೊತೆಯಲ್ಲಿ ಇರಲಿ. ತಮಗೂ ಸಹ ಇದೇ ಇಷ್ಟವಲ್ಲವೆ? ಡ್ರಾಮಾನುಸಾರವಾಗಿ ಈ ಸಮಯ ಏನು ನಿಗದಿಯಾಗಿದೆಯೋ ಅದೇ ಸೇವೆಗಾಗಿ ಯೋಗ್ಯವೆಂದು ತಿಳಿಯಿರಿ. ಸಂಕಲ್ಪಗಳಂತೂ ಸಮಾಪ್ತಿಯಾಗಿ ಬಿಟ್ಟಿತಲ್ಲವೇ? ಎವರ್‌ರೆಡಿಯಾಗಿ ಎಲ್ಲಾ ತಯಾರಿಗಳೂ ಒಂದು ಸೆಕೆಂಡಿನಲ್ಲಿ ಆಗಿಬಿಟ್ಟಿತಲ್ಲವೇ? ಸ್ಥೂಲ ಸಾಧನಗಳಂತೂ ಅಲ್ಲಿ ಎಲ್ಲವೂ ಇದೆ, ಮಾಡಿ ಮಾಡಲ್ಪಟ್ಟಂತಹ ಸಾಧನಗಳಿವೆ. ಏನಾದರೂ ಉಳಿದುಬಿಟ್ಟರೂ ದೊಡ್ಡ ಮಾತೇನಲ್ಲ. ಇಲ್ಲಿಂದ ಎರಡೇ ಉಡುಪುಗಳಲ್ಲೇ ಹೋದರೂ ತೊಂದರೆ ಏನೂ ಇಲ್ಲ. ಅಲ್ಲಿ ರೆಡಿಮೇಡ್ ಆಗಿ ಎಲ್ಲವೂ ದೊರೆಯುತ್ತದೆ. ಸೂಕ್ಷ್ಮ ತಯಾರಿಯಂತೂ ಆಗಿದೆಯಲ್ಲವೇ? ಸ್ಥೂಲ ತಯಾರಿಯು ದೊಡ್ಡ ಮಾತೇನಲ್ಲ. **(13–06–1982)**

ಬಿಂದು ಇಡಲು ಬರುತ್ತದೆಯೇ ಅಥವಾ ಬಿಂದುವಿನ ಮೇಲೆ ಪುನಃ ಪ್ರಶ್ನಾರ್ಥಕ ಚಿಹ್ನೆಯು ಬಂದು ಬಿಡುತ್ತದೆಯೇ? ಈ ದಿನಗಳಲ್ಲಂತೂ ಪ್ರಪಂಚದಲ್ಲಿ ಇಷ್ಟು ಚಿಕ್ಕದಾದ ಬಿಂದುವಿನಿಂದಲೂ ಸಹ ದೊಡ್ಡದಾದ ಹಾವಾಗಿ ಆಗಿಬಿಡುವಂತಹ ಪಟಾಕಿಗಳನ್ನು ಹೊಡೆಯುತ್ತಾರೆ. ಹಾಗೆಯೇ ಇಲ್ಲಿಯೂ ಸಹ ಬಿಂದು ಹಾಕಬೇಕಾಗಿದೆ. ಬಿಂದುವಿನಲ್ಲೇ ಎಲ್ಲವೂ ಸಮಾವೇಶವಾಗಿ ಬಿಡುತ್ತದೆ. ಒಂದುವೇಳೆ ಸಂಕಲ್ಪಗಳ ಬೆಂಕಿ ತಗುಲಿತು ಎಂದರೆ ಅವು ಹಾವಾಗಿ ಬಿಡುತ್ತದೆ. ಹಾಗಾಗಿ ಬೆಂಕಿಯನ್ನೂ ಹಚ್ಚಬೇಡಿ, ಹಾವಾಗಿಯೂ ಮಾಡಬೇಡಿ. ಬಾಪ್‌ದಾದಾರವರು ಮಕ್ಕಳ ಈ ಆಟವನ್ನು ನೋಡುತ್ತಿರುತ್ತಾರೆ. ಏನೇ ಆಗಲಿ, ಅದರಲ್ಲಿ ಕಲ್ಯಾಣವು ಅಡಕವಾಗಿದೆ. ಹೀಗೆ ಏಕೆ, ಏನು ಎಂಬ ಪ್ರಶ್ನೆ ಬೇಡ. ಏನೆಲ್ಲಾ ಅನುಭವವನ್ನು ಮಾಡಬೇಕಿತ್ತೋ ಅದನ್ನು ಮಾಡಿರುವಿರಿ. ಪರಿವರ್ತನೆಯನ್ನು ಮಾಡಿರುವಿರಿ ಮತ್ತು ಮುಂದುವರೆಯಿರಿ. ಇದೇ ಬಿಂದುವನ್ನು ಹಾಕುವುದಾಗಿದೆ. ಎಲ್ಲಾ ವಿದೇಶೀಯರಿಗೂ ಸಹ ಈ ಆಟವನ್ನು ತಿಳಿಸಿ. ಅವರಿಗೆ ಇಂತಹ ಮಾತುಗಳು ಬಹಳ ಇಷ್ಟವಾಗುತ್ತದೆ. **(13–06–1982)**

**ಸ್ವೀಡನ್‌ಪಾರ್ಟಿಯವರ ಜೊತೆ – 'ಸದಾ ನಿಶ್ಚಯ ಬುದ್ಧಿ ವಿಜಯೀ ರತ್ನ'** ಎಂಬ ಇದೇ ನಶೆಯಲ್ಲಿ ಇರಿ. ನಿಶ್ಚಯದ ಫೌಂಡೇಷನ್ ಪಕ್ಕಾ ಇದೆಯೇ? ತಮ್ಮ ಮೇಲೆ ತಮಗೇ ನಿಶ್ಚಯ, ತಂದೆಯ ಮೇಲೆ ನಿಶ್ಚಯ ಮತ್ತು ಡ್ರಾಮಾದ ಪ್ರತಿ ದೃಶ್ಯವನ್ನು ನೋಡುತ್ತಿದ್ದರೂ ಅದರ ಮೇಲೆ ಸಂಪೂರ್ಣ ನಿಶ್ಚಯ. ಈ ನಿಶ್ಚಯದ ಆಧಾರದಿಂದ ಮುಂದುವರೆಯುತ್ತಾ ನಡೆಯಿರಿ. ಏನೆಲ್ಲಾ ತಮ್ಮ ವಿಶೇಷತೆಗಳಿವೆಯೋ ಅವುಗಳನ್ನು ಎದುರಿನಲ್ಲಿ ಇಟ್ಟುಕೊಳ್ಳಿ, ಬಲಹೀನತೆಗಳನ್ನಲ್ಲ. ಆಗ ತಮ್ಮ ಮೇಲೆ ತಮಗೇ ನಂಬಿಕೆ ಇರುತ್ತದೆ. ಬಲಹೀನತೆಯ ಮಾತಗಳನ್ನು ಹೆಚ್ಚಾಗಿ ಯೋಚಿಸಬೇಡಿ, ಆಗ ಖುಷಿಯಲ್ಲಿ

ಮುಂದುವರೆಯುತ್ತಾ ಹೋಗುತ್ತೀರಿ. 'ತಂದೆಯ ಕೈ ಸಿಕ್ಕಿರುವಾಗ ತಂದೆಯ ಕೈಯನ್ನು ಹಿಡಿಯುವವರು ಸದಾ ಮುಂದುವರೆಯುತ್ತಾರೆ' ಎಂಬ ನಿಶ್ಚಯವನ್ನು ಇಡಿ. ಯಾವಾಗ ತಂದೆಯು ಸರ್ವ ಶಕ್ತಿವಂತರಾಗಿದ್ದಾರೆ ಎಂದ ಮೇಲೆ ಅವರ ಕೈಯನ್ನು ಹಿಡಿಯುವವರು ದಡವನ್ನು ತಲುಪೇ ತಲುಪುತ್ತಾರೆ. ಅವರು ಸ್ವಯಂ ಬಲಹೀನರಾಗಿರಬಹುದು, ಆದರೆ ಜೊತೆಗಾರನು ಶಕ್ತಿಶಾಲಿಯಾಗಿದ್ದಾರಲ್ಲವೇ? ಹಾಗಾಗಿ ದಡವನ್ನು ತಲುಪೇ ತಲುಪುತ್ತಾರೆ. ಸದಾ 'ನಿಶ್ಚಯಬುದ್ಧಿ ವಿಜಯೀ ರತ್ನ' ಎಂಬ ಸ್ಮೃತಿಯಲ್ಲಿರಿ. ಕಳೆದಿದ್ದು ಕಳೆದು ಹೋಯಿತು. ಬಿಂದುವನ್ನು ಇಟ್ಟು ಮುಂದುವರೆಯಿರಿ. **(28–12–1982)**

ಬಾಪ್‌ದಾದಾರವರು ಪ್ರತಿಯೊಂದು ಮಗುವಿನ ಭಾಗ್ಯವನ್ನು ನೋಡಿ ಹರ್ಷಿತರಾಗುತ್ತಾರೆ. ಪ್ರತಿಯೊಂದು ಮಗುವೂ ತಮ್ಮ ಭಾಗ್ಯವನ್ನು ಪಡೆಯುತ್ತಿದ್ದಾರೆ. ಸಂಗಮ ಯುಗದಲ್ಲಿ ಪ್ರತಿಯೊಂದು ಆತ್ಮದ ಭಾಗ್ಯ ತಮ್ಮ ತಮ್ಮದಾಗಿದೆ ಮತ್ತು ಪ್ರತಿಯೊಬ್ಬರ ಭಾಗ್ಯವೂ ಶ್ರೇಷ್ಠವಾಗಿದೆ. ಏಕೆ? ಏಕೆಂದರೆ ಯಾವಾಗ ಶ್ರೇಷ್ಠಾತಿ ಶ್ರೇಷ್ಠ ತಂದೆಯ ಮಕ್ಕಳಾದಿರಿ ಎಂದಾಗ ಶ್ರೇಷ್ಠ ಭಾಗ್ಯ ಆಯಿತಲ್ಲವೇ? ಇವರಿಗಿಂತಲೂ ಶ್ರೇಷ್ಠ ತಂದೆ ಯಾರೂ ಇಲ್ಲ ಮತ್ತು ಇದಕ್ಕಿಂತಲೂ ಶ್ರೇಷ್ಠ ಭಾಗ್ಯ ಯಾವುದೂ ಇಲ್ಲ. ಶ್ರೇಷ್ಠಾತಿ ಶ್ರೇಷ್ಠ ತಂದೆ. ಇದೇ ನೆನಪು ಇರುತ್ತದೆಯಲ್ಲವೇ? ಭಾಗ್ಯವಿಧಾತನು ನನ್ನ ತಂದೆಯಾಗಿದ್ದಾರೆ. ಇದಕ್ಕಿಂತಲೂ ದೊಡ್ಡ ನಶೆ ಬೇರೆ ಯಾವುದಿರಲು ಸಾಧ್ಯ? ಲೌಕಿಕ ರೀತಿಯಲ್ಲೂ ಮಕ್ಕಳಿಗೆ, ನನ್ನ ತಂದೆ ಇಂಜಿನಿಯರ್, ಡಾಕ್ಟರ್, ಜಡ್ಜ್ ಅಥವಾ ಪ್ರೈಮ್ ಮಿನಿಸ್ಟರ್ ಎಂಬ ನಶೆ ಇರುತ್ತದೆ. ಆದರೆ ತಮಗೆ 'ನಮ್ಮ ತಂದೆಯು ಭಾಗ್ಯವಿಧಾತ ಆಗಿದ್ದಾರೆ, ಶ್ರೇಷ್ಠಾತಿ ಶ್ರೇಷ್ಠ ಭಗವಂತನಾಗಿದ್ದಾರೆ' ಎಂಬ ನಶೆ ಇದೆಯೇ? ಈ ನಶೆ ಸದಾ ಇರುತ್ತದೆಯೇ? ಅಥವಾ ಕೆಲವು ಕೆಲವೊಮ್ಮೆ ಮರೆತುಬಿಡುತ್ತೀರಾ? ಭಾಗ್ಯವನ್ನು ಮರೆತರೆ ಏನಾಗುವುದು? ಆಗ ಪುನಃ ಭಾಗ್ಯವನ್ನು ಪಡೆಯುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಕಳೆದುಹೋದ ವಸ್ತುವನ್ನು ಪಡೆಯಲು ಕಷ್ಟ ಪಡಬೇಕಾಗುತ್ತದೆ. ತಂದೆಯು ಬಂದು ಕಷ್ಟದಿಂದ ಪಾರು ಮಾಡಿದರು. ಅರ್ಧಕಲ್ಪ ಶ್ರಮ ಪಟ್ಟಿದ್ದೀರಿ, ವ್ಯವಹಾರದಲ್ಲೂ ಶ್ರಮ, ಭಕ್ತಿಯಲ್ಲಿ, ಧರ್ಮದ ಕ್ಷೇತ್ರದಲ್ಲಿ ಎಲ್ಲದರಲ್ಲಿಯೂ ಪರಿಶ್ರಮವೇ ಪಟ್ಟಿದ್ದೀರಿ ಮತ್ತು ಈಗ ಎಲ್ಲಾ ಪರಿಶ್ರಮದಿಂದ ಬಿಡುಗಡೆಯಾಗಿ ಬಿಟ್ಟಿರಿ. ಈಗ ವ್ಯವಹಾರವೂ ಸಹ ಪರಮಾರ್ಥದ ಆಧಾರದ ಮೇಲೆ ಸಹಜವಾಗಿ ಬಿಡುತ್ತದೆ. ನಿಮಿತ್ತ ಮಾತ್ರ ಮಾಡುತ್ತಿರುವಿರಿ. ನಿಮಿತ್ತ ಮಾತ್ರ ಮಾಡುವವರಿಗೆ ಸದಾ ಸಹಜವೆಂದು ಅನುಭವವಾಗುತ್ತದೆ. ವ್ಯವಹಾರ ಅಲ್ಲ, ಆದರೆ ಆಟವಾಗಿದೆ. ಮಾಯೆಯ ಬಿರುಗಾಳಿ ಅಲ್ಲ, ಆದರೆ ಇದು ಡ್ರಾಮಾನುಸಾರ ಮುಂದುವರೆಸುವ ಉಡುಗೊರೆಯಾಗಿದೆ. ಆದ್ದರಿಂದ ಪರಿಶ್ರಮ ಬಿಟ್ಟುಹೋಯಿತಲ್ಲವೇ? ಉಡುಗೊರೆಯನ್ನು ಪಡೆಯಲು ಶ್ರಮ ಆಗುವುದಿಲ್ಲವಲ್ಲವೇ? ಆದ್ದರಿಂದ ಈ ರೀತಿಯ ಪರಿಶ್ರಮದಿಂದ ತಮ್ಮನ್ನು ರಕ್ಷಿಸಿಕೊಳ್ಳುವ, ಸದಾ ಭಾಗ್ಯವಿಧಾತನ ಜೊತೆ ಮಾಸ್ಟರ್ ಭಾಗ್ಯವಿಧಾತ ಆಗಿ ಇರುವವರನ್ನೇ 'ಶ್ರೇಷ್ಠ ಆತ್ಮ' ಎಂದು ಹೇಳಲಾಗುತ್ತದೆ. **(31–12–1982)**

ಮೊದಲಂತೂ ವಿದೇಶದ ಟೀಚರ್ಸ್ ವಿ.ಐ.ಪಿ. ಯರನ್ನು ಕರೆತರುವುದು ಬಹಳ ಕಷ್ಟಕರವೆಂದೂ, ಇಂತವರಂತೂ ಯಾರೂ ಕಾಣುವುದೇ ಇಲ್ಲವೆಂದೂ ಹೇಳುತ್ತಿದ್ದರು. ಈಗಂತೂ ಕಾಣಿಸಿದರಲ್ಲವೇ? ವಿಘ್ನಗಳು ಬಂದಿರಬಹುದು, ಬ್ರಾಹ್ಮಣರ ಕಾರ್ಯದಲ್ಲಿ ವಿಘ್ನ ಬರಲಿಲ್ಲವೆಂದರೆ ತಂದೆಯ ಜೊತೆಯಲ್ಲಿ ಲಗನ್ ಜೋಡಣೆಯಾಗಲು ಸಾಧ್ಯವಿಲ್ಲ. ಇಲ್ಲವೆಂದರೆ ಆಲಸಿಗಳಾಗಿ ಬಿಡುವಿರಿ. ಆದ್ದರಿಂದ ಡ್ರಾಮಾ ಅನುಸಾರ ಲಗನ್ ಬೆಳಸಲು ವಿಘ್ನ ಬರುತ್ತದೆ. ಈಗ ಒಬ್ಬೊಬ್ಬರಿಂದ ಧ್ವನಿಯನ್ನು ಕೇಳಿ ಅನೇಕರಲ್ಲಿ ಉಮ್ಮಂಗ ಬರುತ್ತದೆ.

ಮಕ್ಕಳು ಒಳ್ಳೆಯ ಚಮತ್ಕಾರ ಮಾಡಿದ್ದಾರೆ. ಸರ್ವಿಸ್‌ನಲ್ಲಿ ಒಳ್ಳೆಯ ರುಜುವಾತನ್ನು ತೋರಿಸಿದ್ದಾರೆ. ಸೇವೆಯ ಅವಕಾಶವನ್ನು ಕೊಡಿಸಲು ನಿಮಿತ್ತ ಆಗಿಬಿಟ್ಟಿರಲ್ಲವೇ? ಒಬ್ಬರ ಮೂಲಕ ಅನೇಕರವರೆಗೆ ಸಹಜವಾಗಿ ಧ್ವನಿಯಂತು ಹರಡಿತಲ್ಲವೇ? ಅಮೇರಿಕಾದವರು ಒಳ್ಳೆಯ ಪರಿಶ್ರಮ ಮಾಡಿದ್ದಾರೆ. ಒಳ್ಳೆಯ ಧೈರ್ಯ ಇಟ್ಟಿದ್ದೀರಿ. ಡ್ರಾಮಾ ಅನುಸಾರ ಅತೀ ಹೆಚ್ಚು ಧ್ವನಿಯನ್ನು ಹರಡಿಸುವುದಕ್ಕೆ ನಿಮಿತ್ತರಾದ ಆತ್ಮರನ್ನು ವಿದೇಶದವರೇ ತಂದಿದ್ದಾರೆ. ಭಾರತವಾಸಿ ಮಕ್ಕಳು ಸಹ ಒಳ್ಳೆಯ ಪರಿಶ್ರಮಪಟ್ಟಿದ್ದಾರೆ. ಈ ಪರಿಶ್ರಮದ ಫಲವಾಗಿ ಒಳ್ಳೆಯ ಸಂಖ್ಯೆಯಲ್ಲಿ ಬಂದಿದ್ದಾರೆ. ಈಗ ಭಾರತದ ವಿಶೇಷ ಆತ್ಮರುಗಳು ಸಹ ಬರುವರು. **(21–02–1983)**

ಪರತಂತ್ರದ ಬಂಧನ ತಮ್ಮದೇ ಆದ ಮನಸ್ಸಿನ ವ್ಯರ್ಥ ಮತ್ತು ಬಲಹೀನ ಸಂಕಲ್ಪಗಳ ಬಲೆಯಾಗಿದೆ. ತಾವೇ ರಚಿಸಿರುವ ಬಲೆಯಲ್ಲಿ ಸ್ವಯಂ ಅನ್ನು ಬಂಧಿತರನ್ನಾಗಿ ಮಾಡಿಕೊಳ್ಳುತ್ತಿಲ್ಲವಲ್ಲವೇ? ಪ್ರಶ್ನೆಗಳ ಬಲೆ ಇದೆ. ಯಾರು ಬಲೆಯನ್ನು ರಚಿಸುವರೋ ಅವರ ಚಿತ್ರವನ್ನು ತೆಗೆದಾಗ ಪ್ರಶ್ನೆಯ

ರೂಪವೇ ಇರುತ್ತದೆ. ಯಾವ ಪ್ರಶ್ನೆಗಳು ಉದ್ಭವಿಸುತ್ತವೆ? ಅದರ ಅನುಭವಿಗಳಾಗಿರುವಿರಲ್ಲವೆ? 'ಏನಾಗುತ್ತದೆ, ಹೇಗಾಗುತ್ತದೆ, ಈ ರೀತಿಯಂತೂ ಆಗುವುದಿಲ್ಲವಲ್ಲವೇ' ಎಂದು ಹೇಳುವುದು ಬಲೆಯಾಗಿದೆ. 'ಏನು ಆಗುತ್ತದೋ ಅದು ಕಲ್ಯಾಣಕಾರಿಯಾಗುತ್ತದೆ, ಏನು ಆಗುತ್ತದೋ ಅದು ಶ್ರೇಷ್ಠವಾಗುತ್ತದೆ, ಒಳ್ಳೆಯದಕ್ಕಿಂತ ಒಳ್ಳೆಯದೇ ಆಗುತ್ತದೆ' ಎಂಬುದೇ ಸಂಗಮಯುಗೀ ಬ್ರಾಹ್ಮಣರ ಒಂದೇ ಸಮರ್ಥ ಸಂಕಲ್ಪ ಸದಾ ಇರುತ್ತದೆಯೆಂದು ಮೊದಲೂ ಸಹ ತಿಳಿಸಲಾಗಿತ್ತು. ಈ ಸಂಕಲ್ಪಗಳೇ ಬಲೆಯನ್ನು ಸಮಾಪ್ತಿ ಮಾಡುವಂತಹದ್ದಾಗಿವೆ. ಈಗ ಕೆಟ್ಟ ದಿನಗಳು, ಅಕಲ್ಯಾಣದ ದಿನಗಳು ಸಮಾಪ್ತಿಯಾಗಿ ಬಿಟ್ಟಿದೆ. ಸಂಗಮಯುಗದ ಪ್ರತಿ ದಿನ ಒಳ್ಳೆಯ ದಿನಗಳಾಗಿವೆ, ಕೆಟ್ಟ ದಿನವಲ್ಲ. ತಮ್ಮ ಪ್ರತಿ ದಿನ ಉತ್ಸವದ ದಿನವಾಗಿದೆಯಲ್ಲವೇ? ಪ್ರತಿದಿನ ಉತ್ಸವ ಆಚರಿಸುವ ದಿನವಾಗಿದೆ. ಈ ಸಮರ್ಥ ಸಂಕಲ್ಪದಿಂದ ವ್ಯರ್ಥ ಸಂಕಲ್ಪಗಳ ಬಲೆಯನ್ನು ಸಮಾಪ್ತಿ ಮಾಡಿರಿ. **(27–03–1983)**

ಸದಾ ಸಾಕ್ಷೀತನದ ಸ್ಥಿತಿಯಲ್ಲಿ ಸ್ಥಿತರಾಗಿರುತ್ತಾ ಡ್ರಾಮಾದ ಪ್ರತಿ ದೃಶ್ಯವನ್ನು ನೋಡುವಿರೇ? ಸಾಕ್ಷೀತನದ ಸ್ಥಿತಿಯು ಡ್ರಾಮಾದಲ್ಲಿ ಸದಾ ಹೀರೋ ಪಾತ್ರವನ್ನು ಅಭಿನಯಿಸುವುದರಲ್ಲಿ ಸಹಯೋಗಿಯಾಗುತ್ತದೆ. ಒಂದುವೇಳೆ ಸಾಕ್ಷೀತನ ಇಲ್ಲವೆಂದರೆ ಹೀರೋ ಪಾತ್ರವನ್ನು ಅಭಿನಯಿಸಲು ಸಾಧ್ಯವಾಗುವುದಿಲ್ಲ. ಹೀರೋ ಪಾತ್ರದಿಂದ ಸಾಧಾರಣ ಪಾತ್ರಧಾರಿಗಳು ಆಗಿಬಿಡುವಿರಿ. ಸಾಕ್ಷೀತನದ ಸ್ಥಿತಿಯು ಸದಾ ಡಬಲ್ ಹೀರೋಗಳನ್ನಾಗಿ ಮಾಡುತ್ತದೆ. ಒಂದನೆಯದು ವಜ್ರ ಸಮಾನವನ್ನಾಗಿ ಮಾಡುತ್ತದೆ ಮತ್ತು ಎರಡನೆಯದು ಹೀರೋ ಪಾತ್ರಧಾರಿಯನ್ನಾಗಿ ಮಾಡುತ್ತದೆ. ಸಾಕ್ಷೀತನ ಎಂದರೆ ದೇಹದಿಂದ ಭಿನ್ನ, ಆತ್ಮ ಮಾಲೀಕತನದ ಸ್ಥಿತಿಯಲ್ಲಿ ಸ್ಥಿತರಾಗುವುದು. ದೇಹದಿಂದಲೂ ಸಾಕ್ಷಿ, ಮಾಲೀಕ. ಈ ದೇಹದಿಂದ ಕರ್ಮವನ್ನು ಮಾಡಿಸುವವರು, ಮಾಡುವವರು ಅಲ್ಲ. ಈ ರೀತಿಯ ಸಾಕ್ಷಿ ಸ್ಥಿತಿ ಸದಾ ಇರುವುದೇ? ಸಾಕ್ಷಿ ಸ್ಥಿತಿ ಸಹಜ ಪುರುಷಾರ್ಥದ ಅನುಭವ ಮಾಡಿಸುತ್ತದೆ. ಏಕೆಂದರೆ ಸಾಕ್ಷಿ ಸ್ಥಿತಿಯಲ್ಲಿ ಯಾವುದೇ ಪ್ರಕಾರದ ವಿಘ್ನ ಅಥವಾ ಕಠಿಣತೆಯು ಬರಲು ಸಾಧ್ಯವಿಲ್ಲ. ಇದೇ ಸಾಕ್ಷಿ ಸ್ಥಿತಿಯ ಮೂಲ ಅಭ್ಯಾಸ ಮೊದಲನೇ ಹಾಗೂ ಕೊನೆಯ ಪಾಠವಾಗಿದೆ. ಏಕೆಂದರೆ ಯಾವಾಗ ಕೊನೆಯಲ್ಲಿ ನಾಲ್ಕೂ ಕಡೆಯಲ್ಲಿಯೂ ಏರುಪೇರಾಗುತ್ತದೋ, ಆಗ ಆ ಸಮಯದಲ್ಲಿ ಸಾಕ್ಷೀ ಸ್ಥಿತಿಯಿಂದಲೇ ವಿಜಯಗಳಾಗುವಿರಿ. ಹಾಗಾಗಿ ಇದೇ ಪಾಠವನ್ನು ಪಕ್ಕಾ ಮಾಡಿಕೊಳ್ಳಿ. **(14–04–1983)**

ಸದಾ ನಿಶ್ಚಯಬುದ್ಧಿಯುಳ್ಳವರು ಎಲ್ಲಾ ಮಾತುಗಳಿಂದ ನಿಶ್ಚಿಂತರಾಗಿ ರುತ್ತಾರೆ. ನಿಶ್ಚಯದ ಗುರುತೇ ನಿಶ್ಚಿಂತತೆಯಾಗಿದೆ. ಜ್ಞಾನದ ಶಕ್ತಿಯಿಂದ ಎಲ್ಲವನ್ನೂ ತಿಳಿದುಕೊಂಡು ಬಿಟ್ಟಿರುವಿರಿ. ಏನು ಆಗುವುದೋ ಅದು ಒಳ್ಳೆಯದಕ್ಕಿಂತ ಒಳ್ಳೆಯದು ಆಗುವುದೆಂಬ ಜ್ಞಾನವಿದೆ. ಹಾಗಾಗಿ ಸದಾ ಶುಭ ಚಿಂತಕರು, ಸದಾ ಚಿಂತೆಗಳಿಂದ ದೂರ, ನಿಶ್ಚಯಬುದ್ಧಿ, ನಿಶ್ಚಿಂತ ಆತ್ಮಗಳಾಗಬೇಕಿದೆ. ಇದುವೇ ಜೀವನವಾಗಿದೆ. **(19–04–1983)**

ತಮ್ಮ ಜಡ ಚಿತ್ರಗಳ ಮುಂದೆ ಭಕ್ತರು ಜಾಗರಣೆಯನ್ನು ಮಾಡುತ್ತಾರೆ. ತಾವು ಎಂದೋ ಮಾಡಿರುವ ಕಾರಣದಿಂದಲೇ ಭಕ್ತರು ಕಾಪಿ ಮಾಡಿದ್ದಾರೆ. ಈ ಜಾಗರಣೆ ಡಬಲ್ ಸಂಪಾದನೆಯನ್ನು ಮಾಡಿಸುವ ಜಾಗರಣೆಯಾಗಿದೆ. ವರ್ತಮಾನದಲ್ಲೂ ಸಂಪಾದನೆ ಆಯಿತು ಮತ್ತು ವರ್ತಮಾನದ ಆಧಾರದಿಂದ ಭವಿಷ್ಯವೂ ಶ್ರೇಷ್ಠವಾಯಿತು. ತಂದೆಯು ತಮ್ಮ ಸಮಾನರನ್ನಾಗಿ ಮಾಡಿದ್ದಾರೆ. ತಂದೆಯು ಕಲ್ಯಾಣಕಾರಿ ಆಗಿದ್ದಾರೆ ಎಂದಾಗ ಮಕ್ಕಳೂ ಸಹ ಕಲ್ಯಾಣಕಾರಿಗಳು. ತಂದೆಯು ಮಕ್ಕಳನ್ನು ತಮಗಿಂತಲೂ ಮುಂದೆ ಇಡುತ್ತಾರೆ. ಡಬಲ್ ಪೂಜೆ ನಿಮಗೆ ಆಗುತ್ತದೆ. ಡಬಲ್ ರಾಜ್ಯಭಾರವನ್ನು ತಾವು ಮಾಡುತ್ತೀರಿ. ಇಷ್ಟೊಂದು ನಶೆ ಮತ್ತು ಇಷ್ಟೊಂದು ಖುಷಿಯು ಸದಾ ಇರಬೇಕು. 'ವಾಹ್ ನಾನು ಶ್ರೇಷ್ಠ ಆತ್ಮ ವಾಹ್, ವಾಹ್ ನಾನು ಪುಣ್ಯಾತ್ಮ ವಾಹ್, ವಾಹ್ ನಾನು ಶಿವಶಕ್ತಿ ವಾಹ್', ಎಂಬ ಇದೇ ಸ್ಮೃತಿಯಲ್ಲಿ ಸದಾ ಇರಿ. **(16–05–1983)**

ಇಂದು ಅಟಲ ರಾಜ್ಯ ಅಧಿಕಾರಿ, ಅಟಲ, ಅಚಲ ಸ್ಥಿತಿಯಲ್ಲಿ ಇರುವಂತಹ ವಿಜಯಿ ಮಕ್ಕಳನ್ನು ನೋಡುತ್ತಿದ್ದೇವೆ. ಈಗಿನಿಂದಲೇ ಅಟಲರಾಗುವ ಸಂಸ್ಕಾರಗಳ ಆಧಾರದಿಂದ ಅಟಲ ರಾಜ್ಯದ ಪ್ರಾಲಬ್ಧವನ್ನು ಪಡೆಯುವ ಮೊದಲು ಪುರುಷಾರ್ಥದಲ್ಲಿ ಕಲ್ಪ ಕಲ್ಪವೂ ಅಟಲರಾಗಿರುವಿರಾ? ಡ್ರಾಮಾದ ಪ್ರತಿಯೊಂದು ದೃಶ್ಯವನ್ನು ಡ್ರಾಮಾದ ಚಕ್ರದಲ್ಲಿ ಸಂಗಮಯುಗೀ ಟಾಪ್ ಪಾಯಿಂಟ್‌ನ ಮೇಲೆ ಸ್ಥಿತರಾಗಿ ಏನೆಲ್ಲವನ್ನು ನೋಡುವಿರೋ ಆಗ ಸ್ವತಃವಾಗಿಯೇ ಅಚಲ ಅಡೋಲರಾಗುವಿರಿ. ಟಾಪ್ ಪಾಯಿಂಟ್‌ನಿಂದ ಕೆಳಗೆ ಬಂದರೆ, ಆಗ ಏರುಪೇರು ಆಗುವುದು. ಎಲ್ಲಾ ಶ್ರೇಷ್ಠ ಬ್ರಾಹ್ಮಣ ಆತ್ಮಗಳು ಸದಾ ಎಲ್ಲಿರುವಿರಿ? ಚಕ್ರದಲ್ಲಿ ಸಂಗಮಯುಗವು ಉನ್ನತವಾದ ಯುಗವಾಗಿದೆ. ಚಿತ್ರದ

ಲೆಕ್ಕದಿಂದಲೂ ಸಂಗಮಯುಗದ ಸ್ಥಾನ ಉನ್ನತವಾಗಿದೆ. ಬೇರೆ ಯುಗಗಳ ಲೆಕ್ಕದಲ್ಲಿ ಚಿಕ್ಕದಾದ ಯುಗ, ಪಾಯಿಂಟ್ ಅಂತಲೇ ಹೇಳಲಾಗುತ್ತದೆ. ಹಾಗಾಗಿ ಇದೇ ಉನ್ನತ ಪಾಯಿಂಟ್‌ನಲ್ಲಿ, ಉನ್ನತ ಸ್ಥಾನದಲ್ಲಿ, ಉನ್ನತ ಸ್ಥಿತಿಯಲ್ಲಿ, ಉನ್ನತ ಜ್ಞಾನದಲ್ಲಿ, ಉನ್ನತಕ್ಕಿಂತ ಉನ್ನತ ತಂದೆಯ ನೆನಪಿನಲ್ಲಿ, ಉನ್ನತಕ್ಕಿಂತ ಉನ್ನತ ಸೇವೆಯ ಸ್ಮೃತಿ ಸ್ವರೂಪರಾಗಿರುವಿರಿ ಎಂದರೆ ಸದಾ ಸಮರ್ಥರಾಗಿರುವಿರಿ. ಎಲ್ಲಿ ಸಮರ್ಥತೆ ಇರುತ್ತದೆಯೋ ಅಲ್ಲಿ ವ್ಯರ್ಥವು ಸದಾಕಾಲಕ್ಕಾಗಿ ಸಮಾಪ್ತಿಯಾಗುವುದು. ಪ್ರತಿಯೊಬ್ಬ ಬ್ರಾಹ್ಮಣರು ವ್ಯರ್ಥವನ್ನು ಸಮಾಪ್ತಿ ಮಾಡುವಂತಹ ಪುರುಷಾರ್ಥವನ್ನು ಮಾಡುತ್ತಿದ್ದೀರಾ? ವ್ಯರ್ಥದ ಖಾತೆ ಅಥವಾ ವ್ಯರ್ಥದ ಲೆಕ್ಕಾಚಾರ ಸಮಾಪ್ತಿಯಾಯಿತಲ್ಲವೇ? ಅಥವಾ ಇನ್ನೂ ಸ್ವಲ್ಪ ಹಳೆಯ ವ್ಯರ್ಥದ ಖಾತೆಯೇನಾದರೂ ಇದೆಯೇ? ಬ್ರಾಹ್ಮಣ ಜನ್ಮವನ್ನು ಪಡೆದಾಗಲೇ 'ತನು, ಮನ, ಧನ ಎಲ್ಲವೂ ನಿನ್ನದೇ' ಎಂದು ಪ್ರತಿಜ್ಞೆಯನ್ನು ಮಾಡಿರುವಿರಿ. ಎಂದಾಗ ವ್ಯರ್ಥ ಸಂಕಲ್ಪಗಳು ಸಮಾಪ್ತಿಯಾಯಿತು, ಏಕೆಂದರೆ ಮನಸ್ಸನ್ನು ಸಮರ್ಥ ತಂದೆಗೆ ಕೊಟ್ಟಿರುವಿರಿ.

ಅಡ್ವಾನ್ಸ್ ಪಾರ್ಟಿಯ ವಿಶೇಷ ಆತ್ಮಗಳು ಇಲ್ಲಿಯವರೆಗೂ ಏಕೆ ಗುಪ್ತವಾಗಿದ್ದಾರೆ ಎಂದು ತಾವುಗಳೇ ಯೋಚಿಸುವಿರಿ ಮತ್ತು ಪದೇ ಪದೇ ಕೇಳುವಿರಿ. ಹಾಗಾದರೆ ಪ್ರತ್ಯಕ್ಷ ಮಾಡಲು ಬಯಸುತ್ತೀರಲ್ಲವೇ? ಸಮಯದ ಅನುಸಾರ ಅಡ್ವಾನ್ಸ್ ಪಾರ್ಟಿಯ ಕೆಲವು ಆತ್ಮಗಳು ಶ್ರೇಷ್ಠ ಯೋಗಬಲದ ಶ್ರೇಷ್ಠ ವಿಧಿಯನ್ನು ಆರಂಭ ಮಾಡುವಂತಹ ಶ್ರೇಷ್ಠ ಆತ್ಮಗಳ ಆಹ್ವಾನವನ್ನು ಮಾಡುತ್ತಿದ್ದಾರೆ. ಇಂತಹ ಆದಿ ಪರಿವರ್ತನೆಯ ವಿಶೇಷ ಕಾರ್ಯಕ್ಕಾಗಿ ಆದಿಕಾಲದ ಆದಿರತ್ನ ಆತ್ಮಗಳು ಬೇಕಾಗಿದೆ. ತಮ್ಮ ಯೋಗಬಲವನ್ನು ಪ್ರಯೋಗ ಮಾಡವಂತಹ ವಿಶೇಷ ಯೋಗಿ ಆತ್ಮಗಳು ಬೇಕಾಗಿದೆ. ಭಾಗ್ಯವಿಧಾತ ತಂದೆಯ ಭಾಗೀಧಾರ ಮಕ್ಕಳು ಬೇಕು. ಭಾಗ್ಯವಿಧಾತನೆಂದು ಬ್ರಹ್ಮಾರವರಿಗೂ ಹೇಳಲಾಗುತ್ತದೆ. ಏಕೆ ಕರೆದುಕೊಂಡೆ ಎಂಬುದು ತಿಳಿಯಿತೇ? ಇಲ್ಲಿ ಏನು ಆಗುವುದೋ, ಹೇಗೆ ಆಗುವುದೋ ಎಂದು ಯೋಚಿಸುವಿರಲ್ಲವೇ? ಬ್ರಹ್ಮಾ ತಂದೆಯು ಅವ್ಯಕ್ತರಾದರೇನಾಯಿತು, ಹೇಗಾಯಿತು, ನೋಡಿದೀರಲ್ಲವೇ. ದಾದಿಯನ್ನು ಒಬ್ಬೊಂಟಿ ಎಂದು ತಿಳಿಯುವಿರೇ? ದಾದಿಯು ತಿಳಿದುಕೊಳ್ಳು ವುದಿಲ್ಲ, ತಾವು ತಿಳಿದುಕೊಳ್ಳುತ್ತೀರಿ ಅಷ್ಟೇ. ಹೀಗೆ ಅಲ್ಲವೇ? (ದಾದಿಯವರ ಕಡೆ ಸನ್ನೆಯನ್ನು ಮಾಡುತ್ತಾ) ನಿಮ್ಮದು ಡಿವೈನ್ ಯೂನಿಟಿ (ದಿವ್ಯವಾದ ಏಕತೆ) ಇಲ್ಲವೇ, ಇದೆ ಅಲ್ಲವೇ? ಎಂದಾಗ ಡಿವೈನ್ ಯೂನಿಟಿಯ ಭುಜಗಳು ಇಲ್ಲವೇನು? ಡಿವೈನ್ ಯೂನಿಟಿ ಇದೆ ಅಲ್ಲವೇ? ಯಾವ ಕಾರಣಕ್ಕಾಗಿ ಈ ಗ್ರೂಪ್‌ನ್ನು ಮಾಡಲಾಗಿದೆ? ಸದಾ ಒಬ್ಬರಿಗೊಬ್ಬರು ಸಹಯೋಗಿಗಳಾಗುವ ಸಲುವಾಗಿ ಮಾಡಲಾಗಿದೆ. ಯಾವಾಗ ಬೇಕೋ, ಯಾರಿಗೆ ಬೇಕೋ ಎಲ್ಲರೂ ಸೇವೆಗಾಗಿ ಜೀ ಹಾಜಿರ್ ಆಗಿದ್ದಾರೆ. ಈ ದಾದಿಯರಿಗೆ ಪರಸ್ಪರದಲ್ಲಿ ಬಹಳ ಆಂತರಿಕ ಪ್ರೀತಿ ಇದೆ, ಮಕ್ಕಳಾದ ತಮಗೆ ತಿಳಿಯದಿರುವುದರಿಂದ ಮುಂದೆ ಏನಾಗುತ್ತದೆಯೋ ಎಂದು ತಿಳಿಯುತ್ತೀರಿ. ಒಬ್ಬ ದೀದೀಯವರು 'ಆದಿರತ್ನಗಳಾದ ನಾವೆಲ್ಲರೂ ಒಂದೇ' ಎಂದು ರುಜುವಾತುಪಡಿಸಿ ತೋರಿಸಿದರು. ತೋರಿಸಿದರಲ್ಲವೇ? ಬ್ರಹ್ಮಾ ತಂದೆಯ ನಂತರ ಸಾಕಾರ ರೂಪದಲ್ಲಿ ಪೂಜ್ಯ ಆತ್ಮಗಳಾದ ನವರತ್ನಗಳು ಸೇವೆಯ ಸ್ಟೇಜ್‌ನ ಮೇಲೆ ಪ್ರತ್ಯಕ್ಷರಾದರು. ಹಾಗಾಗಿ ನವ ರತ್ನಗಳ ಅಥವಾ ಅಷ್ಟರತ್ನಗಳ ಮಾಲೆ ಸದಾ ಒಬ್ಬರಿಗೊಬ್ಬರು ಸಹಯೋಗಿಗಳಾಗಿದ್ದಾರೆ. ಅಷ್ಟರತ್ನಗಳ ಮಾಲೆ ಯಾರದು? ಯಾರು ಅರ್ಜುನನ ಸಮಾನ ಸೇವೆಯಲ್ಲಿ ಮುಂದಿರುತ್ತಾರೋ ಅವರೇ ಅಷ್ಟ ರತ್ನಗಳ ಮಾಲೆಯಲ್ಲಿ ಬರುತ್ತಾರೆ. ಹಾಗಾಗಿ ಸೇವೆಯ ಸ್ಟೇಜ್‌ನಲ್ಲಿ ನವರತ್ನಗಳು ಅಥವಾ ಅಷ್ಟರತ್ನಗಳು ತಮ್ಮ ಪಾತ್ರವನ್ನು ಅಭಿನಯಿಸುತ್ತಿದ್ದಾರೆ. ಮತ್ತು ಪಾತ್ರವನ್ನು ಅಭಿನಯಿಸುವುದೇ ತಮ್ಮ ಪಾತ್ರವನ್ನು ಅಥವಾ ನಂಬರ್‌ನ್ನು ಪ್ರತ್ಯಕ್ಷ ಮಾಡುವುದಾಗಿದೆ. ಬಾಪ್‌ದಾದಾರವರು ಹಾಗೆಯೇ ನಂಬರ್ ಕೊಡುವುದಿಲ್ಲ. ಆದರೆ ಪಾತ್ರವೇ ಪ್ರತ್ಯಕ್ಷ ಮಾಡುತ್ತದೆ. ಹಾಗಾಗಿ ಅಷ್ಟರತ್ನಗಳು ಪರಸ್ಪರದಲ್ಲಿ ಸದಾ ಸ್ನೇಹಿ ಮತ್ತು ಸದಾ ಸಹಯೋಗಿಗಳಾಗಿದ್ದಾರೆ. ಆದ್ದರಿಂದ ಸದಾ ಆದಿಯಿಂದ ಸೇವೆಯಲ್ಲಿ ಸಹಯೋಗಿ ಆತ್ಮಗಳು ಸದಾ ಸಹಯೋಗದ ಪಾತ್ರವನ್ನು ಮಾಡುತ್ತಲೇ ಇರುತ್ತಾರೆ. ತಿಳಿಯಿತೇ, ಮತ್ತೇನಾದರೂ ಪ್ರಶ್ನೆಗಳಿದೆಯೇ? ಏಕೆ ತಿಳಿಸಲಿಲ್ಲವೆಂಬ ಪ್ರಶ್ನೆ ಇದೆಯೇ? ಒಂದುವೇಳೆ ತಿಳಿಸಿದ್ದರೆ ದೀದೀಯ ಯೋಗಿಗಳಾಗಿ ಬಿಡುತ್ತಿದ್ದಿರಿ. ಡ್ರಾಮಾದಲ್ಲಿ ವಿಚಿತ್ರ ಪಾತ್ರವಿದೆ, ವಿಚಿತ್ರದ ಚಿತ್ರವನ್ನು ಮೊದಲೇ ತೆಗೆಯಲಾಗುವುದಿಲ್ಲ. ಏರುಪೇರಿನ ಪೇಪರ್ ಆಕಸ್ಮಿಕವಾಗಿಯೇ ಬರುತ್ತದೆ. ಈ ವಿಶೇಷ ಆತ್ಮದ ಪಾತ್ರ, ಇಲ್ಲಿಯವರೆಗೂ ಯಾರೆಲ್ಲಾ ಆತ್ಮಗಳು ಪಾತ್ರ ಮಾಡಿ ಹೋಗಿರುವರೋ ಅವರೆಲ್ಲರ ಪಾತ್ರದಿಂದ ಭಿನ್ನ ಮತ್ತು ಪ್ರಿಯವಾಗಿದೆ. ಪ್ರತಿಯೊಂದು ಕ್ಷೇತ್ರದಲ್ಲೂ ಈ ಶ್ರೇಷ್ಠ ಆತ್ಮದ ಜೊತೆಯನ್ನು, ಸಹಯೋಗವನ್ನು ಅನುಭವ ಮಾಡುತ್ತಿರುವಿರಿ. ಬ್ರಹ್ಮಾತಂದೆಯದು ತಮ್ಮದೇ ಆದ ಪಾತ್ರವಿದೆ, ಅವರಂತಹ ಪಾತ್ರವನ್ನು ಯಾರೂ ಮಾಡಲು ಸಾಧ್ಯವಿಲ್ಲ. ಆದರೆ ಈ ಆತ್ಮವು ಸೇವೆಯಲ್ಲಿ ಉಮ್ಮಂಗ ಉತ್ಸಾಹವನ್ನು ತರಿಸುವುದರಲ್ಲಿ, ಯೋಗಿ, ಸಹಯೋಗಿ ಮತ್ತು ಪ್ರಯೋಗಿಯನ್ನಾಗಿ ಮಾಡುವುದರಲ್ಲಿ ಸದಾ ವಿಶೇಷವಾಗಿದ್ದರು. ಆದ್ದರಿಂದ

ಈ ಆತ್ಮದ ಈ ವಿಶೇಷ ಸಂಸ್ಕಾರ ಸಮಯ ಪ್ರತಿ ಸಮಯ ತಮ್ಮೆಲ್ಲರಿಗೂ ಸಹ ಸಹಯೋಗಿಯಾಗಿ ಇರುವುದರ ಅನುಭವವನ್ನು ಮಾಡಿಸುತ್ತಿರುತ್ತದೆ. ಇದೂ ಸಹ ಪ್ರತಿಯೊಂದು ಆತ್ಮದ ತಮ್ಮ ತಮ್ಮ ವಿಚಿತ್ರ ಪಾತ್ರವಾಗಿದೆ.

ಈ ದಿನದ ಸಂಘಟನೆಯಲ್ಲಿ ಕಮಲ್ ಮಗು (ದೀದೀಯವರ ಲೌಕಿಕ ಅತ್ತಿಗೆ) ರವರ ನೆನಪು ಸಹ ಬಂತು. ಅವರೂ ಸಹ ನೆನಪು ಮಾಡಿಕೊಳ್ಳುತ್ತಿರುವರು. ಮತ್ತು ಯಾರೆಲ್ಲಾ ಈ ಸ್ನೇಹಿ ಶ್ರೇಷ್ಠ ಆತ್ಮದ ಬಗ್ಗೆ ತಮ್ಮ ಸಹಯೋಗವನ್ನು ಕೊಟ್ಟಿದ್ದಾರೋ ಅಂತಹ ಸುಸ್ತಾಗದಿರುವ ಮಕ್ಕಳಿಗೆ, ಸಮ್ಮುಖದಲ್ಲಿರಲಿ ಅಥವಾ ಇಲ್ಲದೇ ಇರಲಿ ಆದರೆ ಎಲ್ಲಾ ಮಕ್ಕಳು ಶುಭಭಾವನೆ, ಶುಭಕಾಮನೆ ಮತ್ತು ಒಂದೇ ಲಗನ್‌ನಿಂದ ಯಾರು ತಮ್ಮ ಸ್ನೇಹವನ್ನು ತೋರಿಸಿರುವಿರೋ ಅದು ಬಹಳ ಶ್ರೇಷ್ಠವಾಗಿಯೇ ಇದೆ. ಇದಕ್ಕಾಗಿಯೇ ವಿಶೇಷವಾಗಿ 'ತಮ್ಮ ಕಡೆಯಿಂದ ಈ ರೀತಿಯ ಸ್ನೇಹೀ ಸೇವಾಧಾರಿ ಪರಿವಾರಕ್ಕೆ ನೆನಪು ಮತ್ತು ಧನ್ಯವಾದಗಳನ್ನು ತಿಳಿಸಿ' ಎಂದು ದೀದೀಯವರು ಬಾಪ್‌ದಾದಾರವರಿಗೆ ಹೇಳಿದರು. ಹಾಗಾಗಿ ದೀದೀಯವರ ಕೆಲಸವನ್ನು ಇಂದು ಬಾಪ್‌ದಾದಾರವರು ಮಾಡುತ್ತಿದ್ದಾರೆ. ಇಂದು ಬಾಪ್‌ದಾದಾರವರು ಸಂದೇಶಿಯಾಗಿ ಸಂದೇಶವನ್ನು ಕೊಡುತ್ತಿದ್ದಾರೆ. ಏನಾಯಿತೋ ಅದು ಬಹಳ ರಹಸ್ಯಗಳಿಂದ ತುಂಬಿರುವ ಡ್ರಾಮಾ ಆಯಿತು. ತಮ್ಮೆಲ್ಲರಿಗೂ ದೀದೀ ಪ್ರಿಯರಾಗಿದ್ದಾರೆ ಮತ್ತು ದೀದೀಯವರಿಗೆ ಸೇವೆಯು ಪ್ರಿಯವಾಗಿದೆ. ಆದ್ದರಿಂದ ಸೇವೆಯು ತನ್ನ ಕಡೆಗೆ ಸೆಳೆಯಿತು. ಏನಾಯಿತೋ ಅದು ಪರಿವರ್ತನೆಯ ಪರದೆಯನ್ನು ತೆರೆಯಲು ಬಹಳ ಒಳ್ಳೆಯದಕ್ಕಿಂತ ಒಳ್ಳೆಯದಾಯಿತು. ಇದರಲ್ಲಿ ಭಗವತಿಯ (ಡಾಕ್ಟರ್) ದೋಷವೂ ಇಲ್ಲ, ಭಗವಂತನ ದೋಷವೂ ಇಲ್ಲ. ಇದು ಡ್ರಾಮಾದ ರಹಸ್ಯವಾಗಿದೆ. ಇದರಲ್ಲಿ ಭಗವತಿಯವರು ಏನೂ ಮಾಡಲು ಆಗುವುದಿಲ್ಲ, ಭಗವಂತನೂ ಏನೂ ಮಾಡಲು ಆಗುವುದಿಲ್ಲ. ಇವರು 'ಹೀಗೆ ಮಾಡಿದರು, ಹೀಗೆ ಆಪರೇಷನ್ ಮಾಡಿದರು' ಎಂದು ಯೋಚಿಸಬೇಡಿ. ಅವರ ಸ್ನೇಹ ಕೊನೆಯವರೆಗೂ ತಾಯಿಯ ರೂಪದಂತೆಯೇ ಇತ್ತು. ಆದ್ದರಿಂದ ಅವರು ತಮ್ಮ ಕಡೆಯಿಂದ ಯಾವುದೇ ಕಡಿಮೆಯನ್ನು ಮಾಡಿಲ್ಲ. ಇದಂತೂ ಡ್ರಾಮಾದ ಆಟವಾಗಿದೆ. ತಿಳಿಯಿತೆ? ಆದ್ದರಿಂದ ಯಾವುದೇ ಸಂಕಲ್ಪವನ್ನು ಮಾಡಬೇಡಿ. **(30–07–1983)**

ಈ ದಿನ ಬಾಪ್‌ದಾದಾರವರು ಅತಿ ಸ್ನೇಹಿ ಮತ್ತು ಅಗಲಿಹೋಗಿ ಮರಳಿ ಸಿಕ್ಕಿರುವ ಮಕ್ಕಳನ್ನು ನೋಡುತ್ತಿದ್ದಾರೆ. ಪ್ರತಿಯೊಂದು ಮಗುವೂ ಅತಿ ಸ್ನೇಹದಿಂದ ಮಿಲನ ಮಾಡಲು ತಮ್ಮ ಮನೆಗೆ ತಲುಪಿರುವರು. ಈ ಭೂಮಿಗೆ 'ನಮ್ಮ ಮನೆ, ದಾತನ ಮನೆ' ಎಂದು ಹೇಳಲಾಗುತ್ತದೆ. ಈ ಮಹಿಮೆಯು ಇದೇ ಮಧುರ ಮನೆಯದಾಗಿದೆ. ಸ್ವೀಟ್ ಹೋಂನಲ್ಲಿ (ಮಧುರ ಮನೆಯಲ್ಲಿ), ಸ್ವೀಟ್ (ಮಧುರ) ಮಕ್ಕಳೊಂದಿಗೆ, ಸ್ವೀಟೆಸ್ಟ್ (ಅತೀ ಮಧುರರಾದ) ತಂದೆಯು ಮಿಲನವನ್ನು ಮಾಡುತ್ತಿದ್ದಾರೆ. ಈ ದಿನ ಬಾಪ್‌ದಾದಾರವರು ಪ್ರತಿಯೊಂದು ಮಗುವಿನ ಮಸ್ತಕದಲ್ಲಿ ವಿಶೇಷವಾಗಿ ಅಧಿಕಾರದ ಮೂರು ರೇಖೆಗಳನ್ನು ನೋಡುತ್ತಿರುವರು. ಪ್ರತಿಯೊಬ್ಬರ ಮಸ್ತಕದಲ್ಲಿ ಮೂರು ರೇಖೆಗಳನ್ನಂತೂ ಹಾಕಲಾಗಿದೆ. ಏಕೆಂದರೆ ಮಕ್ಕಳಂತೂ ಎಲ್ಲರೂ ಆಗಿದ್ದಾರೆ. ಮಕ್ಕಳಾಗಿರುವ ಕಾರಣ ಅಧಿಕಾರಿಗಳಂತೂ ಎಲ್ಲರೂ ಆಗಿದ್ದಾರೆ, ಆದರೆ ನಂಬರ್‌ವಾರ್ ಆಗಿ. ಕೆಲವು ಮಕ್ಕಳ ಅದೃಷ್ಟ, ಸುಖದ ಅಧಿಕಾರದ ರೇಖೆ ಬಹಳ ಸ್ಪಷ್ಟ ಮತ್ತು ಆಳವಾಗಿದೆ. ಎಷ್ಟೇ ಪರಿಸ್ಥಿಗಳು ಬಂದರೂ, ದುಃಖದ ಅಲೆಯನ್ನು ಉತ್ಪತ್ತಿ ಮಾಡುವಂತಹ ಅಲೆಯೇ ಆಗಿರಬಹುದು. ಆದರೆ ದುಃಖ ಎಂಬ ಶಬ್ದವೇ ಏನು ಎಂದು ತಿಳಿಯದವರಾಗಿರುತ್ತಾರೆ. ದುಃಖದ ಪರಿಸ್ಥಿತಿಯನ್ನು ತಮ್ಮ ಸುಖದ ಸಾಗರನಿಂದ ಪ್ರಾಪ್ತಿಯಾದ ಅಧಿಕಾರದ ಮೂಲಕ, ದುಃಖದ ಪರಿಸ್ಥಿತಿಗಳಲ್ಲಿಯೂ 'ವಾಹ್ ಮಧುರವಾದ ಡ್ರಾಮಾ, ವಾಹ್ ಪ್ರತಿಯೊಬ್ಬ ಪಾತ್ರಧಾರಿಯ ಪಾತ್ರ' ಎಂಬ ಜ್ಞಾನದ ಬೆಳಕಿನ ಮೂಲಕ, ಅಧಿಕಾರದ ಖುಷಿಯ ಮೂಲಕ ದುಃಖವನ್ನು ಸುಖದಲ್ಲಿ ಪರಿವರ್ತನೆ ಮಾಡಿಬಿಡುತ್ತಾರೆ. ಅಧಿಕಾರದಿಂದ ದುಃಖದ ಅಂಧಕಾರವನ್ನು ಪರಿವರ್ತನೆ ಮಾಡಿ ಮಾಸ್ಟರ್ ಸುಖದಾತರಾಗಿ ಸ್ವಯಂ ಅಂತೂ ಸುಖದ ಉಯ್ಯಾಲೆಯಲ್ಲಿ ತೂಗಾಡುತ್ತಾರೆ, ಜೊತೆಗೆ ಬೇರೆಯವರಿಗೂ ಸುಖದ ವೈಬ್ರೇಷನ್ ಅನ್ನು ಕೊಡಲು ನಿಮಿತ್ತರಾಗುತ್ತಾರೆ. ಈ ರೀತಿಯಾಗಿ ಯಾರೂ ಅಳಿಸಲು ಸಾಧ್ಯವಾಗದಂತಹ ಸುಖದ ಅಧಿಕಾರದ ರೇಖೆ ಸ್ಪಷ್ಟ ಹಾಗೂ ಆಳವಾಗಿದೆಯೇ? ಅಳಿಸುವವರು ಬದಲಾಗಿ ಬಿಡುವರು ಆದರೆ ಅವರು ಬದಲಾಗುವುದಿಲ್ಲ. ಮಾಸ್ಟರ್ ಸುಖದಾತನಿಂದ ಸುಖದ ಅಂಜಲಿ ಪಡೆಯಲಿ ಎಂಬ ರೇಖೆಯುಳ್ಳವರನ್ನು ನೋಡಿದೆ. ಇವರಿಗೇ 'ನಂಬರ್ ಒನ್ ಅದೃಷ್ಟವಂತರು' ಎಂದು ಹೇಳಲಾಗುತ್ತದೆ. ಒನ್‌ನ (ಒಂದರ) ಗುರುತು ವಿನ್ (ವಿಜಯ) ಆಗಿದೆಯೆಂದು ತಿಳಿಸಲಾಗಿತ್ತು. **(01–12–1983)**

'ಸದಾ ಒಂದೇ ಬಲ ಮತ್ತು ಒಂದೇ ಭರವಸೆ' ಎಂಬ ಸ್ಥಿತಿಯಲ್ಲಿ ಇರುತ್ತೀರಾ? ಒಬ್ಬರ ಮೇಲೆ ಭರವಸೆ ಅಂದರೆ ಶಕ್ತಿಯನ್ನು ಪ್ರಾಪ್ತಿ ಮಾಡಿಕೊಳ್ಳುವುದಾಗಿದೆ. ಈ ರೀತಿಯ ಅನುಭವ ಮಾಡುವಿರೇ? ನಿಶ್ಚಯಬುದ್ಧಿ ವಿಜಯಿ. ಇದನ್ನೇ ಇನ್ನೊಂದು ಶಬ್ದದಲ್ಲಿ 'ಒಂದೇ ಬಲ, ಒಂದೇ ಭರವಸೆ' ಎಂದು ಹೇಳಲಾಗುತ್ತದೆ. ನಿಶ್ಚಯ ಬುದ್ಧಿಯುಳ್ಳವರಿಗೆ ವಿಜಯ ಆಗದಿರಲು ಸಾಧ್ಯವೇ ಇಲ್ಲ. ತಮ್ಮಲ್ಲಿ ಸಂಕಲ್ಪದಲ್ಲೂ 'ಇದು ಆಗುವುದೇ ಅಥವಾ ಇಲ್ಲವೇ' ಎಂಬ ಸಂಶಯ ಬಂದಾಗ ವಿಜಯವಾಗುವುದಿಲ್ಲ. ತಮ್ಮ ಮೇಲೆ, ತಂದೆಯ ಮೇಲೆ ಮತ್ತು ಡ್ರಾಮಾದ ಮೇಲೆ ಪೂರ್ಣವಾದ ನಿಶ್ಚಯ ಇರುವುದೆಂದರೆ ವಿಜಯ ಸಿಗುವುದಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಒಂದುವೇಳೆ ವಿಜಯ ಆಗಿಲ್ಲವೆಂದರೆ ಖಂಡಿತವಾಗಿಯೂ ಯಾವುದಾದರೊಂದು ಪಾಯಿಂಟ್‌ನಲ್ಲಿ ನಿಶ್ಚಯದ ಕಡಿಮೆ ಇದೆ ಎಂದು. ಯಾವಾಗ ತಂದೆಯ ಮೇಲೆ ನಿಶ್ಚಯವಿದೆ ಎಂದಾಗ ಸ್ವಯಂನಲ್ಲಿಯೂ ನಿಶ್ಚಯವಿದೆ. ಮಾಸ್ಟರ್ ಆಗಿದ್ದೀರಲ್ಲವೇ? ಯಾವಾಗ ಮಾಸ್ಟರ್ ಸರ್ವಶಕ್ತಿವಂತರಾಗುವಿರೋ ಆಗ ಡ್ರಾಮಾದ ಪ್ರತಿಯೊಂದು ಮಾತನ್ನೂ ನಿಶ್ಚಯಬುದ್ಧಿಯುಳ್ಳವರಾಗಿ ನೋಡುವಿರಿ. ಈ ರೀತಿಯ ನಿಶ್ಚಯಬುದ್ಧಿ ಮಕ್ಕಳ ಒಳಗೆ 'ನನ್ನ ವಿಜಯವಂತೂ ಆಗಿಯೇ ಬಿಟ್ಟಿದೆ' ಎಂಬ ಉಮ್ಮಂಗ ಸದಾ ಇರುವುದು. ಈ ರೀತಿಯ ವಿಜಯಿಗಳೇ ವಿಜಯ ಮಾಲೆಯ ಮಣಿಗಳಾಗುವರು. ವಿಜಯವು ಅವರ ಆಸ್ತಿಯಾಗಿದೆ. ಜನ್ಮಸಿದ್ಧ ಅಧಿಕಾರದಲ್ಲಿ ಈ ಆಸ್ತಿ ಪ್ರಾಪ್ತವಾಗಿ ಬಿಡುತ್ತದೆ.**(12–12–1983)**

ಹೆಜ್ಜೆಗಳಲ್ಲಿ ಪದುಮಗಳಷ್ಟು ಸೇವೆಯು ಅಡಕವಾಗಿದೆ. ಚಕ್ರವರ್ತಿಗಳಾಗಿ ಸುತ್ತು ಹಾಕುತ್ತಾ ತಮ್ಮ ಸ್ಮರಣಾರ್ಥವನ್ನು ಮಾಡಿಬಿಟ್ಟಿರುವಿರಿ. ಎಷ್ಟೊಂದು ತೀರ್ಥಸ್ಥಾನಗಳಾಯಿತು? ಮಹಾವೀರ ಮಕ್ಕಳು ಸುತ್ತು ಹಾಕುವುದು ಎಂದರೆ ಸ್ಮಾರಕವನ್ನು ತಯಾರು ಮಾಡುವುದಾಗಿದೆ. ಪ್ರತಿ ಸುತ್ತಾಡುವಿಕೆಯಲ್ಲೂ ತನ್ನ ತನ್ನದೇ ಆದ ವಿಶೇಷತೆ ಇರುತ್ತದೆ. ಈ ಸುತ್ತಾಟದಲ್ಲೂ ಅನೇಕ ಆತ್ಮಗಳ ಹೃದಯದ ಆಸೆಯನ್ನು ಪೂರ್ಣ ಮಾಡುವ ವಿಶೇಷತೆ ಇತ್ತು. ಈ ಹೃದಯದ ಆಸೆಯನ್ನು ಪೂರ್ಣ ಮಾಡುವುದು ಎಂದರೆ ವರದಾನಿ ಆಗುವುದಾಗಿದೆ. ವರದಾನಿಯೂ ಆದಿರಿ ಮತ್ತು ಮಹಾದಾನಿಯೂ ಆದಿರಿ. ಡ್ರಾಮಾ ಅನುಸಾರ ಯಾವ ಕಾರ್ಯಕ್ರಮವು ತಯಾರಾಗುವುದೋ ಅದರಲ್ಲಿ ಬಹಳ ರಹಸ್ಯಗಳು ತುಂಬಿರುತ್ತದೆ. ರಹಸ್ಯವು ಮೇಲೆ ಹಾರಿಸಿಕೊಂಡು ಕರೆದೊಯ್ಯುತ್ತದೆ. **(14–01–1984)**

ಪೂಜೆಗಳಲ್ಲಿ, ಚಿತ್ರಗಳಲ್ಲಿ ವಿಶೇಷವಾಗಿ ಎರಡು ವಿಶೇಷತೆಗಳು ಇರುತ್ತವೆ. ಒಂದಂತೂ ಬಿಂದುವಿನ ವಿಶೇಷತೆ ಮತ್ತು ಎರಡನೆಯದಾಗಿದೆ ಹನಿ ಹನಿಯ ವಿಶೇಷತೆ. ಪೂಜೆಯ ವಿಧಿಯಲ್ಲಿ ಹನಿ ಹನಿಯ ಮಹತ್ವವಿದೆ. ಈ ಸಮಯದಲ್ಲಿ ಮಕ್ಕಳಾದ ತಾವು 'ಬಿಂದು'ವಿನ ರಹಸ್ಯದಲ್ಲಿ ಸ್ಥಿತರಾಗುತ್ತೀರಿ. ವಿಶೇಷವಾಗಿ ಇಡೀ ಜ್ಞಾನದ ಸಾರ ಒಂದು 'ಬಿಂದು' ಎಂಬ ಶಬ್ದದಲ್ಲಿ ಸಮಾವೇಶವಾಗಿದೆ. ತಂದೆಯೂ ಬಿಂದು, ಆತ್ಮಗಳಾದ ತಾವೂ ಸಹ ಬಿಂದು ಮತ್ತು ಡ್ರಾಮಾದ ಜ್ಞಾನವನ್ನು ಧಾರಣೆ ಮಾಡಿಕೊಳ್ಳಲು 'ಏನು ಆಯಿತೋ ಸಮಾಪ್ತಿಯಾಯಿತು ಅಂದರೆ 'ಫುಲ್‌ಸ್ಟಾಪ್'. ಬಿಂದು ಹಾಕಿ ಬಿಡುವುದು. ಪರಮಾತ್ಮ, ಆತ್ಮ ಮತ್ತು ಈ ಪ್ರಕೃತಿಯ ಆಟ ಅಂದರೆ ಡ್ರಾಮಾ ಮೂರರ ಜ್ಞಾನ ಪ್ರತ್ಯಕ್ಷ ಜೀವನದಲ್ಲಿ 'ಬಿಂದು'ವನ್ನೇ ಅನುಭವ ಮಾಡುವಿರಲ್ಲವೇ. ಆದ್ದರಿಂದ ಭಕ್ತಿಯಲ್ಲಿಯೂ ಪ್ರತಿಭೆಯ ಮಧ್ಯೆ ಬಿಂದುವಿನ ಮಹತ್ವವಿದೆ. ಎರಡನೆಯದಾಗಿದೆ – ಹನಿಯ ಮಹತ್ವ ತಾವೆಲ್ಲರೂ ನೆನಪಿನಲ್ಲಿ ಕುಳಿತುಕೊಂಡಾಗ ಅಥವಾ ಅನ್ಯರನ್ನು ನೆನಪಿನಲ್ಲಿ ಕುಳ್ಳಿರಿಸಿದಾಗ ಯಾವ ವಿಧಿಯಿಂದ ಕುಳ್ಳಿರಿಸುವಿರಿ. ಸಂಕಲ್ಪಗಳ ಹನಿಗಳ ಮೂಲಕ 'ನಾನು ಆತ್ಮನಾಗಿದ್ದೇನೆ' ಎಂಬ ಹನಿಯನ್ನು ಹಾಕುವಿರಿ, 'ತಂದೆಯ ಮಗುವಾಗಿದ್ದೇನೆ' ಎಂಬುದು ಎರಡನೆಯ ಹನಿ. ಈ ರೀತಿಯ ಶುದ್ಧ ಸಂಕಲ್ಪಗಳ ಹನಿಗಳ ಮೂಲಕ ಮಿಲನದ ಸಿದ್ಧಿಯನ್ನು ಅನುಭವ ಮಾಡುತ್ತೀರಲ್ಲವೇ? ಅಂದಾಗ ಒಂದಾಗಿದೆ ಶುದ್ಧ ಸಂಕಲ್ಪದ ಸ್ಮೃತಿಯ ಹನಿ, ಎರಡನೆಯದಾಗಿದೆ ಯಾವಾಗ ಆತ್ಮಿಕ ವಾರ್ತಾಲಾಪ ಮಾಡುವಿರೋ, ಆಗ ತಂದೆಯ ಒಂದೊಂದು ಮಹಿಮೆ ಮತ್ತು ಪ್ರಾಪ್ತಿಯ ಶುದ್ಧ ಸಂಕಲ್ಪದ ಹನಿಯನ್ನು ಹಾಕುತ್ತೀರಲ್ಲವೆ? 'ತಾವು ಹೀಗೆ ಇದ್ದೀರಿ, ತಾವು ನಮ್ಮನ್ನು ಈ ರೀತಿ ಮಾಡಿದಿರಿ' ಈ ರೀತಿಯ ಸಿಹಿಸಿಹಿಯಾದ ಶೀತಲ ಹನಿಗಳನ್ನು ತಂದೆಯ ಮೇಲೆ ಹಾಕುತ್ತೀರಿ ಅಂದರೆ ತಂದೆಯ ಜೊತೆ ಮಧುರ ವಾರ್ತಾಲಾಪವನ್ನು ಮಾಡುವಿರಿ. ಒಂದೊಂದೇ ಮಾತು ಹೇಳಿ ಯೋಚಿಸುವಿರಲ್ಲವೇ? ಒಟ್ಟಿಗೆ ಅಲ್ಲ. ಮೂರನೆಯ ಮಾತು – ಎಲ್ಲಾ ಮಕ್ಕಳು ತಮ್ಮ ತನು–ಮನ–ಧನದಿಂದ ಸಹಯೋಗದ ಹನಿ ಹಾಕುತ್ತಾರೆ. ಆದ್ದರಿಂದ ತಾವುಗಳು ವಿಶೇಷವಾಗಿ ಪೂರ್ತಿ ಪೂರ್ತಿ ತುಂಬಿದ ಕೆರೆ ಎಂದು ಹೇಳುತ್ತೀರಿ. ಇಷ್ಟೊಂದು ದೊಡ್ಡ ವಿಶ್ವ–ಪರಿವರ್ತನೆಯ ಕಾರ್ಯ, ಸರ್ವಶಕ್ತಿವಂತನ ಬೇಹದ್ದಿನ ವಿಶಾಲ ಕಾರ್ಯ, ಇದರಲ್ಲಿ ತಾವು ಪ್ರತಿಯೊಬ್ಬರೂ ಯಾರ್ಯಾರು ಸಹಯೋಗ ನೀಡುವರೋ, ಹನಿಯ ಸಮಾನ ಸಹಯೋಗವಾಗಿದೆ. ಆದರೆ ಎಲ್ಲರ ಹನಿ

ಹನಿಯ ಸಹಯೋಗದಿಂದ, ಸಹಯೋಗದ ವಿಶಾಲ ಸಾಗರ ಆಗಿಬಿಡುವುದು. ಆದ್ದರಿಂದ ಪೂಜೆಯ ವಿಧಿಯಲ್ಲಿಯೂ ಹನಿಯ ಮಹತ್ವವನ್ನು ತೋರಿಸಲಾಗಿದೆ.**(28–02–1984)**

ಎಲ್ಲರೂ ತಮ್ಮನ್ನು ಈ ಸೃಷ್ಟಿ ನಾಟಕದ ಒಳಗೆ ವಿಶೇಷ ಪಾತ್ರದಾರಿಗಳೆಂದು ತಿಳಿದುಕೊಳ್ಳುವಿರೇ? ಕಲ್ಪದ ಹಿಂದಿನ ತಮ್ಮ ಚಿತ್ರವನ್ನು ಈಗ ನೋಡುತ್ತಿರು ವಿರಲ್ಲವೇ? ಇದೇ ಬ್ರಾಹ್ಮಣ ಜೀವನದ ವಂಡರ್ (ಅದ್ಭುತ) ಆಗಿದೆ. ಸದಾ 'ನಾವು ಏನು ಆಗಿದ್ದೆವು, ಈಗ ಏನಾದೆವು' ಎಂಬ ವಿಶೇಷತೆಯನ್ನು ನೆನಪಿಟ್ಟುಕೊಳ್ಳಿ. ಕವಡೆಯಿಂದ ವಜ್ರ ಸಮಾನ ಆಗಿಬಿಟ್ಟಿರಿ. ದು:ಖ ಸಂಸಾರದಿಂದ ಸುಖದ ಸಂಸಾರದಲ್ಲಿ ಬಂದುಬಿಟ್ಟಿರಿ. ತಾವೆಲ್ಲರೂ ಈ ಡ್ರಾಮಾದ ಹೀರೋ ಹೀರೋಹಿನ್ ಪಾತ್ರಧಾರಿಗಳಾಗಿದ್ದೀರಿ. ಒಬ್ಬೊಬ್ಬ ಬ್ರಹ್ಮಕುಮಾರ–ಕುಮಾರಿಯರೂ ತಂದೆಯ ಸಂದೇಶ ತಿಳಿಸುವಂತಹ ಸಂದೇಶಿಗಳಾಗಿದ್ದೀರಿ. ಭಗವಂತನ ಸಂದೇಶವನ್ನು ತಿಳಿಸುವಂತಹ ಸಂದೇಶಿಗಳು ಎಷ್ಟೊಂದು ಶ್ರೇಷ್ಠರಾದಿರಲ್ಲವೇ? ಅಂದಾಗ ಸದಾ ಈ ಕಾರ್ಯಕ್ಕೆ ನಿಮಿತ್ತ ಅವತರಿತರಾಗಿರುವಿರಿ. ಈ ಸಂದೇಶವನ್ನು ಕೊಡಲು ಮೇಲಿಂದ ಕೆಳಗೆ ಬಂದಿರುವಿರಿ. ಇದೇ ಸ್ಮೃತಿ ಖುಷಿ ಕೊಡುವಂತಹ ದ್ದಾಗಿದೆ. ಕೇವಲ ತಮ್ಮ ಇದೇ ಕರ್ತವ್ಯವನ್ನು ಸದಾ ನೆನಪಿನಲ್ಲಿಟ್ಟುಕೊಂಡಾಗ ಖುಷಿಯ ಖಜಾನೆಯ ಮಾಲೀಕರಾಗುವಿರಿ. ಇದೇ ನಿಮ್ಮ ಟೈಟಲ್ ಆಗಿದೆ.

ಇಂದು ಬೆಳಗ್ಗೆ (18–04–1984) ಅಮೃತವೇಳೆ ಭುವನೇಶ್ವರದ ಒಬ್ಬ ಸಹೋದರನು ಹೃದಯಾಘಾತ ಆದ ಕಾರಣ ತಮ್ಮ ಹಳೆಯ ಶರೀರವನ್ನು ಮಧುಬನದಲ್ಲಿ ಬಿಟ್ಟರು, ಆ ಸಮಯದಲ್ಲಿ ಅವ್ಯಕ್ತ ಬಾಪದಾದಾರವರು ನುಡಿಸಿರುವ ಮಹಾವಾಕ್ಯಗಳು....

ಎಲ್ಲರೂ ಡ್ರಾಮಾದ ಪ್ರತಿ ದೃಶ್ಯವನ್ನು ಸಾಕ್ಷಿಯಾಗಿ ನೋಡುವಂತಹ ಶ್ರೇಷ್ಠ ಆತ್ಮಗಳಲ್ಲವೇ? ಡ್ರಾಮಾದಲ್ಲಿ ಯಾವುದೇ ದೃಶ್ಯ ನಡೆಯುವುದೋ ಅದಕ್ಕೆ 'ಕಲ್ಯಾಣಕಾರಿ, ಹೊಸದೇನೂ ಅಲ್ಲ' ಎಂದು ಹೇಳಲಾಗುತ್ತದೆ. (ಅವರ ಲೌಕಿಕ ಅತ್ತಿಗೆಯರ ಜೊತೆ) ಏನು ಯೋಚಿಸುತ್ತಿರುವಿರಿ? ಸಾಕ್ಷಿತನದ ಆಸನದಲ್ಲಿ ಕುಳಿತು ಎಲ್ಲಾ ದೃಶ್ಯವನ್ನು ನೋಡುವುದರಿಂದ ತಮ್ಮದೂ ಕಲ್ಯಾಣವಾಗಿದೆ ಮತ್ತು ಆ ಆತ್ಮನದೂ ಕಲ್ಯಾಣವಾಗಿದೆ. ಹೀಗೆ ತಿಳಿಯುತ್ತೀರಲ್ಲವೆ? ನೆನಪಿನಲ್ಲಿ ಶಕ್ತಿರೂಪ ಆಗಿರುವಿರಲ್ಲವೇ? ಶಕ್ತಿಯುಳ್ಳವರು ಸದಾ ವಿಜಯಿಗಳಾಗಿರುತ್ತಾರೆ. ವಿಜಯವೇ ಶಕ್ತಿರೂಪವಾಗಿ ಎಲ್ಲಾ ಪಾತ್ರ ಮಾಡುವವರು. ಇದೂ ಸಹ ಪಾತ್ರವಾಗಿದೆ. ಪಾತ್ರವನ್ನು ಮಾಡುತ್ತಾ ಎಂದಿಗೂ ಬೇರೆ ಯಾವ ಸಂಕಲ್ಪವನ್ನು ಮಾಡಬೇಡಿ. ಪ್ರತಿ ಆತ್ಮದ ಪಾತ್ರವು ತನ್ನ ತನ್ನದೇ ಇರುತ್ತದೆ. ಈಗ ಆ ಆತ್ಮಕ್ಕೆ ಶಾಂತಿ ಮತ್ತು ಶಕ್ತಿಯ ಸಹಯೋಗ ಕೊಡಿ. ಇಷ್ಟೆಲ್ಲಾ ದೈವೀ ಪರಿವಾರದ ಸಹಯೋಗ ಪ್ರಾಪ್ತಿಯಾಗುತ್ತಿದೆ. ಆದ್ದರಿಂದ ಏನನ್ನೂ ಯೋಚಿಸುವ ಅವಶ್ಯಕತೆಯಿಲ್ಲ. ಮಹಾನ್ ತೀರ್ಥಸ್ಥಾನವಾಗಿದೆಯಲ್ಲವೆ? ಮಹಾನ್ ಆತ್ಮವಾಗಿದೆ, ಮಹಾನ್ ತೀರ್ಥಸ್ಥಾನವಾಗಿದೆ. ಸದಾ ಮಹಾನತೆಯನ್ನೇ ಯೋಚಿಸಿ. ಎಲ್ಲರೂ ನೆನಪಿನಲ್ಲಿ ಕುಳಿತ್ತಿರುವಿರಲ್ಲವೇ? ಒಬ್ಬ ಪ್ರಿಯ ಮಗು, ತನ್ನ ಈ ಹಳೆಯ ಶರೀರದ ಲೆಕ್ಕಾಚಾರ ಪೂರ್ಣ ಮಾಡಿ ತಮ್ಮ ಹೊಸ ಶರೀರದ ತಯಾರಿಗಾಗಿ ನಡೆದರು. ಆದ್ದರಿಂದ ಈಗ ಎಲ್ಲರೂ ಆ ಭಾಗ್ಯವಂತ ಆತ್ಮಕ್ಕೆ ಶಾಂತಿ, ಶಕ್ತಿಯ ಸಹಯೋಗ ಕೊಡಿ. ಇದೇ ವಿಶೇಷ ಸೇವೆಯಾಗಿದೆ. ಏಕೆ, ಏನು ಎಂಬುದರಲ್ಲಿ ಹೋಗಬೇಡಿ. ಬದಲಿಗೆ ಸ್ವಯಂ ಸಹ ಶಕ್ತಿ ಸ್ವರೂಪರಾಗಿ ವಿಶ್ವದಲ್ಲಿ ಶಾಂತಿಯ ಕಿರಣಗಳನ್ನು ಹರಡಿಸಿ. ಶ್ರೇಷ್ಠ ಆತ್ಮ ಆಗಿದ್ದೀರಿ, ಸಂಪಾದನೆ ಮಾಡುವಂತಹ ಆತ್ಮ ಆಗಿದ್ದೀರಿ. ಆದ್ದರಿಂದ ಏನು ಯೋಚಿಸುವ ಮಾತಿಲ್ಲ. ತಿಳಿಯಿತೇ! **(17–04–1984)**

ಸದಾ ನೆನಪಿನ ಖುಷಿಯಲ್ಲಿ ಇರುತ್ತೀರಲ್ಲವೇ? ಖುಷಿಯೇ ಎಲ್ಲದಕ್ಕಿಂದ ದೊಡ್ಡ ದುವಾ (ಆಶೀರ್ವಾದ) ಹಾಗೂ ದವಾ (ಔಷಧಿ) ಆಗಿದೆ. ಸದಾ ಈ ಖುಷಿಯ ಔಷಧಿ ಮತ್ತು ಆಶೀರ್ವಾದ ಪಡೆಯುತ್ತಿದ್ದಾಗ ಸದಾ ಖುಷಿಯಾಗಿ ಇರುವ ಕಾರಣ ಶರೀರದ ಲೆಕ್ಕಚಾರ ತನ್ನ ಕಡೆ ಸೆಳೆಯುವುದಿಲ್ಲ. ನ್ಯಾರಾ ಮತ್ತು ಪ್ಯಾರಾ ಆಗಿ (ಭಿನ್ನ ಮತ್ತು ಪ್ರಿಯರಾಗಿ) ಶರೀರದ ಲೆಕ್ಕಚಾರಗಳನ್ನು ಚುಕ್ತ ಮಾಡಿಕೊಳ್ಳುತ್ತೀರಿ. ಎಷ್ಟೇ ಕಠಿಣವಾದ ಕರ್ಮಭೋಗವಿರಬಹುದು, ಅದೂ ಸಹ ಶೂಲದಿಂದ ಮುಳ್ಳಿನ ಸಮಾನ ಆಗಿಬಿಡುತ್ತದೆ. ದೊಡ್ಡ ಮಾತೆಂದು ಅನಿಸುವುದಿಲ್ಲ. ಇದು ಲೆಕ್ಕಚಾರವೆಂದು ತಿಳುವಳಿಕೆ ಸಿಕ್ಕಿರುವ ಕಾರಣ ಖುಷಿ–ಖುಷಿಯಿಂದ ಲೆಕ್ಕಚಾರವನ್ನು ಚುಕ್ತ ಮಾಡಿಕೊಳ್ಳುವಂತಹವರಿಗೆ ಎಲ್ಲವೂ ಸಹಜವಾಗಿಬಿಡುತ್ತದೆ. ಅಜ್ಞಾನಿಗಳು 'ಅಯ್ಯೋ ಅಯ್ಯೋ' ಎಂದು ಹೇಳುತ್ತಾರೆ ಹಾಗು ಜ್ಞಾನಿಗಳು ಸದಾ 'ವಾಹ್ ಮಧುರ ಬಾಬಾ', ವಾಹ್ ಡ್ರಾಮಾ' ಎಂಬ ಸ್ಮೃತಿಯಲ್ಲಿರುತ್ತಾರೆ. ಸದಾ ಖುಷಿಯ ಹಾಡನ್ನು ಹಾಡಿರಿ. 'ಜೀವನದಲ್ಲಿ ಏನನ್ನು ಪಡೆಯಬೇಕಿತ್ತೋ ಅದನ್ನು ಪಡೆದುಬಿಟ್ಟೆ' ಎಂಬುದನ್ನೇ ನೆನಪು ಮಾಡಿಕೊಳ್ಳಿ. ಯಾವ ಪ್ರಾಪ್ತಿಯಾಗಬೇಕಿತ್ತೋ ಅವೆಲ್ಲವೂ ಆಗಿಬಿಟ್ಟಿತು. ಸರ್ವ ಪ್ರಾಪ್ತಿಗಳ ಭಂಡಾರ ಸಮೃದ್ಧವಾಗಿದೆ. ಎಲ್ಲಿ

ಭಂಡಾರ ಸದಾ ಸಮೃದ್ಧವಾಗಿರುತ್ತದೋ ಅಲ್ಲಿ ದುಃಖ, ನೋವುಗಳೆಲ್ಲವೂ ಸಮಾಪ್ತಿಯಾಗಿಬಿಡುತ್ತದೆ. ಸದಾ ತಮ್ಮ ಭಾಗ್ಯವನ್ನು ನೋಡುತ್ತಾ ಹರ್ಷಿತರಾಗಿರಿ. 'ವಾಹ್ ನನ್ನ ಶ್ರೇಷ್ಠ ಭಾಗ್ಯ' ಎಂಬ ಹಾಡನ್ನೇ ಸದಾ ಮನಸ್ಸಿನಲ್ಲಿ ಹಾಡುತ್ತಾ ಇರಿ. ತಮ್ಮದು ಎಷ್ಟೊಂದು ದೊಡ್ಡ ಭಾಗ್ಯವಾಗಿದೆ. ಜಗತ್ತಿನವರಿಗಂತೂ ಭಾಗ್ಯದಲ್ಲಿ ಸಂತಾನ, ಧನ, ಸಂಪತ್ತು ಸಿಗುತ್ತದೆ. ಆದರೆ ಇಲ್ಲಿ ತಮಗೇನು ಸಿಗುತ್ತದೆ? ಸ್ವಯಂ ಭಾಗ್ಯವಿಧಾತನೇ ತಮ್ಮ ಭಾಗ್ಯದಲ್ಲಿ ಸಿಕ್ಕಿದ್ದಾರೆ. ಭಾಗ್ಯವಿಧಾತನೇ ತಮ್ಮವರಾಗಿಬಿಟ್ಟಾಗ ಮತ್ತೇನು ಉಳಿದಿದೆ? **(26–04–1984)**

ಯಾರು ಸಂಗಮದಲ್ಲಿ ಪಟ್ಟಾಭಿಷೇಕದ ದಿನವನ್ನು ಆಚರಿಸಿದರೋ, ಅದರ ಸ್ಮರಣೆಯು ಅವಿನಾಶಿಯಾಗಿ ನಡೆಯುತ್ತಿರುತ್ತದೆ. ಸ್ವಯಂ ತಂದೆಯು ಬಂದು ವತನದಿಂದ ವಾನಪ್ರಸ್ಥರಾದರಲ್ಲವೇ? ಅವ್ಯಕ್ತ ವತನದಲ್ಲಿ ಸೇವಾಧಾರಿಯಾಗಿದ್ದಾರೆ, ಆದರೆ ಸಾಕಾರ ವತನದಿಂದಂತೂ ವಾನಪ್ರಸ್ಥ ರಾದರಲ್ಲವೇ? ಸಾಕಾರ ವತನದಿಂದ ವಾನಪ್ರಸ್ಥರಾಗಿ ಮಕ್ಕಳಿಗೆ ಕಿರೀಟ ಮತ್ತು ಸಿಂಹಾಸನವನ್ನು ಕೊಟ್ಟು ಸ್ವಯಂ ತಾವು ಅವ್ಯಕ್ತ ವತನಕ್ಕೆ ಹೋದರು. ಹಾಗಾಗಿ ಪಟ್ಟಾಭಿಷೇಕದ ದಿನವಾಯಿತಲ್ಲವೆ? ವಿಚಿತ್ರ ಡ್ರಾಮಾ ಅಲ್ಲವೆ? ಒಂದುವೇಳೆ ಹೋಗುವ ಮೊದಲೇ ಹೇಳಿದ್ದರೆ ವಂಡರ್‌ಫುಲ್ ಡ್ರಾಮಾ ಆಗುತ್ತಿರಲಿಲ್ಲ, ಯಾರ ಚಿತ್ರವನ್ನು ತೆಗೆಯಲಾಗುವುದಿಲ್ಲವೋ ಅಂತಹ ವಿಚಿತ್ರ ಡ್ರಾಮಾವಾಗಿದೆ. ವಿಚಿತ್ರ ತಂದೆಯ ವಿಚಿತ್ರ ಪಾತ್ರವಾಗಿದೆ. ಯಾರ ಚಿತ್ರವನ್ನು ಬುದ್ಧಿಯಲ್ಲಿ ಸಂಕಲ್ಪದ ಮೂಲಕವೂ ತೆಗೆಯಲು ಆಗುವುದಿಲ್ಲವೋ ಅದಕ್ಕೇ ವಿಚಿತ್ರ ಎಂದು ಹೇಳಲಾಗುತ್ತದೆ. ಆದ್ದರಿಂದ ವಿಚಿತ್ರ ಪಟ್ಟಾಭಿಷೇಕವಾಯಿತು. ಬಾಪ್‌ದಾದಾರವರು ಸದಾ ಮಹಾವೀರ ಮಕ್ಕಳನ್ನು ಪಟ್ಟಾಭಿಷೇಕ ಮಾಡಿಕೊಳ್ಳುವಂತಹ ಕಿರೀಟಧಾರಿ ಸ್ವರೂಪದಲ್ಲಿ ನೋಡುತ್ತಾರೆ. ಬಾಪ್‌ದಾದಾರವರು ಜೊತೆಯನ್ನು ಕೊಡುವುದರಲ್ಲಿ ಬಚ್ಚಿಟ್ಟುಕೊಂಡಿಲ್ಲ. ಆದರೆ ಸಾಕಾರ ಜಗತ್ತಿನಿಂದ ಬಚ್ಚಿಟ್ಟುಕೊಂಡು ಅವ್ಯಕ್ತ ಜಗತ್ತಿನಲ್ಲಿ ಉದಯರಾದರು. ಜೊತೆ ಜೊತೆಯಲ್ಲಿ ಇರುವೆವು, ಜೊತೆಯಲ್ಲಿ ನಡೆಯುವೆವು ಎಂಬ ಪ್ರತಿಜ್ಞೆ ಇದ್ದೇ ಇದೆ. ಈ ಪ್ರತಿಜ್ಞೆಯು ಎಂದಿಗೂ ತಪ್ಪಲು ಸಾಧ್ಯವಿಲ್ಲ. ಆದ್ದರಿಂದಲೇ ಬ್ರಹ್ಮಾ ತಂದೆಯು ಕಾಯುತ್ತಿರುವರು. ಇಲ್ಲದಿದ್ದರೆ ಕರ್ಮಾತೀತರಾದರೆಂದರೆ ಹೋಗಬಹುದಾಗಿತ್ತು. ಬಂಧನವಂತೂ ಇಲ್ಲವಲ್ಲವೇ? ಆದರೆ ಸ್ನೇಹದ ಬಂಧನವಿದೆ. ಸ್ನೇಹದ ಬಂಧನದ ಕಾರಣ, ಜೊತೆಯಲ್ಲಿ ಹೋಗುವೆವೆಂಬ ಪ್ರತಿಜ್ಞೆಯನ್ನು ನಿಭಾಯಿಸುವ ಕಾರಣ ತಂದೆಯು ಕಾಯಲೇ ಬೇಕಾಗಿದೆ. ಜೊತೆಯನ್ನು ನಿಭಾಯಿಸಬೇಕು ಮತ್ತು ಜೊತೆಯಲ್ಲಿ ನಡೆಯಬೇಕು. ಈ ರೀತಿಯ ಅನುಭವವಿದೆಯಲ್ಲವೇ? ಒಳ್ಳೆಯದು. ಪ್ರತಿಯೊಬ್ಬರೂ ವಿಶೇಷ ಆತ್ಮವಾಗಿದ್ದಾರೆ. ಒಬ್ಬೊಬ್ಬರ ವಿಶೇಷತೆಯನ್ನು ವರ್ಣನೆ ಮಾಡಿದರೆ ಎಷ್ಟೊಂದು ಆಗಬಹುದು? ಮಾಲೆಯಾಗಿ ಬಿಡುವುದು. ಆದ್ದರಿಂದ ಹೃದಯದಲ್ಲಿಯೇ ಇಟ್ಟುಕೊಳ್ಳುತ್ತಾರೆ. ವರ್ಣನೆ ಮಾಡುವುದಿಲ್ಲ. **(07–05–1984)**

'ಈಗ ಏನಾಗುವುದೋ' ಎಂಬ ಪ್ರಶ್ನೆ ಬಹಳಷ್ಟು ಆತ್ಮಗಳಲ್ಲಿ ಉದ್ಭವಿಸಿತು. ಆದರೆ ಪ್ರಶ್ನೆಯನ್ನು ಪೂರ್ಣವಿರಾಮದ ರೂಪದಲ್ಲಿ ಪರಿವರ್ತನೆ ಮಾಡಿಕೊಳ್ಳಿ. ಅಂದರೆ ತಮ್ಮನ್ನು ಎಲ್ಲಾ ವಿಷಯಗಳಲ್ಲಿಯೂ ಸಂಪನ್ನ ಮಾಡಿಕೊಳ್ಳಿ. ಇದೇ ಪೂರ್ಣವಿರಾಮವಾಗಿದೆ. ಇಂತಹ ಸಮಯದಲ್ಲಿ 'ಏನಾಗುವುದೋ?' ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ. ಆದರೆ ಏನು ಮಾಡಬೇಕು? ಇಂತಹ ಸಮಯದಲ್ಲಿ ನಿಮ್ಮ ಕರ್ತವ್ಯವೇನಾಗಿದೆಯೋ ಆ ಸೇವೆಯಲ್ಲಿ ತೊಡಗಿಬಿಡಿ. ಹೇಗೆ ಅಗ್ನಿಯನ್ನು ಆರಿಸುವವನು ಅಗ್ನಿಯನ್ನು ಆರಿಸುವುದರಲ್ಲಿ ತೊಡಗಿದನು. 'ಇದು ಏನಾಯಿತು' ಎಂಬ ಪ್ರಶ್ನೆ ಮಾಡಲಿಲ್ಲ. ಕೇವಲ ತನ್ನ ಸೇವೆಯಲ್ಲಿ ತೊಡಗಿದನಲ್ಲವೇ? ಅದೇ ರೀತಿಯಲ್ಲಿ ತಮ್ಮ ಆತ್ಮಿಕ ಸೇವೆಯಲ್ಲಿ ತೊಡಗಿಬಿಡುವುದೇ ಆತ್ಮೀಕ ಸೇವಾಧಾರಿಯ ಕರ್ತವ್ಯವಾಗಿದೆ. ಜಗತ್ತಿನವರಿಗೂ ಸಹ ಭಿನ್ನತ್ವವು ಅನುಭವವಾಗಲಿ. ತಿಳಿಯಿತೇ? ಆದರೂ ಸಹ ಸಮಯದ ಅನುಸಾರ ಬಂದು ತಲುಪಿಬಿಟ್ಟಿರಲ್ಲವೇ? ಪರಿಸ್ಥಿತಿ ಏನೇ ಇರಲಿ, ಆದರೂ ಡ್ರಾಮಾದಲ್ಲಿ ಪುನಃ ಮಿಲನದ ಮೇಳ ಆಚರಿಸಿದಿರಿ. ಮತ್ತಷ್ಟೂ ಅದೃಷ್ಟವಂತರಾದಿರಲ್ಲವೇ? ಬಂದು ತಲುಪಿಬಿಟ್ಟಿರಲ್ಲವೇ? 'ನಮ್ಮ ಭಾಗ್ಯವಾಗಿದೆ, ಬಂದು ತಲುಪಿಬಿಟ್ಟೆವು' ಎಂಬ ಖುಷಿಯಾಗುತ್ತಿದೆಯಲ್ಲವೆ? ಒಳ್ಳೆಯದು ಬನ್ನಿರಿ. ಮಧುಬನದ ಶೃಂಗಾರ ಮಕ್ಕಳಾದ ತಾವಾಗಿದ್ದೀರಿ. ಮಧುಬನದ ಶೃಂಗಾರ ಮಧುಬನವನ್ನು ತಲುಪಿದಿರಿ. ಕೇವಲ ತಂದೆಯು ಮಾತ್ರ ಮಧುಬನದವರಲ್ಲ, ಮಕ್ಕಳೂ ಸಹ ಮಧುಬನದವರಾಗಿದ್ದಾರೆ. **(19–11–1984)**

### ಕಾನ್ಪುರದ ಮನೆ (ಸೆಂಟರ್) ಉರಿಯಿತು – ಗಂಗೆ ದಾದಿಯವರ ಜೊತೆ ಮಿಲನ:

ಬಾಪ್‌ದಾದಾರವರು ಮಕ್ಕಳನ್ನು ಸದಾ ಸುರಕ್ಷಿತವಾಗಿ ಇಡುತ್ತಾರೆ. ಸುರಕ್ಷತೆಯ ಸಾಧನ ಸದಾ ಬಾಪ್‌ದಾದಾರವರಿಂದ ಸಿಕ್ಕಿದೆ. ಆದ್ದರಿಂದ ಸದಾ ತಂದೆಯ ಸ್ನೇಹದ ಕೈ ಮತ್ತು ಜೊತೆ (ಹಾಥ್

ಔರ್ ಸಾಥ್) ಇದೆ. 'ನಥಿಂಗ್ ನ್ಯೂ' (ಹೊಸದೇನೂ ಅಲ್ಲ) ಎಂಬುದರ ಅಭ್ಯಾಸಿಯಾಗಿ ಬಿಟ್ಟಿದ್ದೀರಿ. ಆದ್ದರಿಂದ ಯಾವುದು ಕಳೆಯಿತೋ ನಥಿಂಗ್ ನ್ಯೂ ಮತ್ತು ಯಾವುದು ಆಗುತ್ತಿದೆಯೋ ಅದೂ ನಥಿಂಗ್ ನ್ಯೂ. ಇದರ ರಿಹರ್ಸಲ್ ಆಗುತ್ತಿದೆ. ಅಂತಿಮದಲ್ಲಿ ಹಾಹಾಕಾರದ ಮಧ್ಯೆ ಜಯಜಯಕಾರ ಆಗಬೇಕಿದೆ. ಅತಿಯಾದ ನಂತರವೇ ಅಂತ್ಯವಾಗುತ್ತದೆ ಮತ್ತು ನವಯುಗದ ಆರಂಭ ಆಗುತ್ತದೆ. ಇಂತಹ ಸಮಯದಲ್ಲಿ ಬಯಸದಿದ್ದರೂ ಎಲ್ಲರ ಮನಸ್ಸಿನಿಂದ ಪ್ರತ್ಯಕ್ಷತೆಯ ನಗಾರಿಯು ಬಾರಿಸಲ್ಪಡುತ್ತದೆ. ಹಾಗಾಗಿ ರಿಹರ್ಸಲ್‌ನಿಂದ ಪಾರಾದಿರಿ. ಚಿಂತೆಯಿಲ್ಲದ ಚಕ್ರವರ್ತಿಯಾಗಿ ಪಾತ್ರವನ್ನು ಅಭಿನಯಿಸಿದಿರಿ. ಬಹಳ ಒಳ್ಳೆಯದನ್ನು ಮಾಡಿದಿರಿ. ಯೋಚಿಸುವುದರಿಂದಲೂ ಯೋಚನೆ ಇಲ್ಲದವರಾದಿರಿ. ಏನಾಯಿತೋ ವಾಹ್! ವಾಹ್! ಇದರಲ್ಲಿಯೂ ಅನೇಕರ ಕಲ್ಯಾಣವಾಗುತ್ತದೆ. ಹಾಗಾಗಿ ಸುಟ್ಟಿದ್ದರಲ್ಲಿಯೂ ಕಲ್ಯಾಣ, ಸುರಕ್ಷಿತ ಆಗಿರುವುದರಲ್ಲಿಯೂ ಕಲ್ಯಾಣವಿದೆ. ಅಯ್ಯೊ ಸುಟ್ಟು ಹೋಯಿತು ಎಂದು ಹೇಳುವುದಿಲ್ಲ. ಸುರಕ್ಷಿತರಾಗುವ ಸಮಯದಲ್ಲಿ ಹೇಗೆ ವಾಹ್! ವಾಹ್! ಹೇಳುತ್ತೀರೋ ಹಾಗೆಯೇ ಸುಡುವ ಸಮಯದಲ್ಲಿಯೂ 'ವಾಹ್' ಎಂದು ಹೇಳಬೇಕು. ಇದಕ್ಕೇ ಏಕರಸ ಸ್ಥಿತಿ ಎಂದು ಹೇಳಲಾಗುತ್ತದೆ. ಸುರಕ್ಷಿತರಾಗುವುದು ನಮ್ಮ ಕರ್ತವ್ಯ, ಆದರೆ ಸುಡುವಂತಹ ವಸ್ತುಗಳು ಸುಟ್ಟು ಹೋಗಲೇ ಬೇಕಾಗಿದೆ. ಇದರಲ್ಲಿಯೂ ಏನೋ ಲೆಕ್ಕಚಾರ ಇರುಬಹುದು. ತಾವಂತೂ ನಿಶ್ಚಿಂತ ಚಕ್ರವರ್ತಿಗಳು. 'ಏಕ್ ಗಯಾ, ಲಾಕ್ ಪಾಯಾ (ಒಂದು ಹೋಯಿತು, ಲಕ್ಷ ಪಡೆದಿರಿ)' ಎಂಬುದು ಬ್ರಾಹ್ಮಣರ ಸ್ಲೋಗನ್ ಆಗಿದೆ. ಕಳೆದುಕೊಳ್ಳಲಿಲ್ಲ, ಬದಲಿಗೆ ಪಡೆದುಕೊಂಡಿರಿ. ಈ ಕಾರಣದಿಂದಾಗಿ ನಿಶ್ಚಿಂತರಾಗಿರುವಿರಿ. ಏನೋ ಒಳ್ಳೆಯದು ಸಿಗುವುದರಲ್ಲಿದೆ. ಆದ್ದರಿಂದ ಸುಟ್ಟು ಹೋಗುವುದೂ ಆಟವಾಗಿದೆ, ಬಚಾವ್ ಆಗುವುದೂ ಆಟವಾಗಿದೆ. ಸುಟ್ಟು ಹೋಗುತ್ತಿದ್ದರೂ ಇವರು ಎಷ್ಟೊಂದು ನಿಶ್ಚಿಂತ ಚಕ್ರವರ್ತಿಯಾಗಿದ್ದಾರೆ ಎಂಬುದನ್ನು ನೋಡುತ್ತಾರೆ. ಏಕೆಂದರೆ ಛತ್ರಛಾಯೆಯ ಒಳಗೆ ಇದ್ದೀರಿ. ಅವರು 'ಏನು ಆಗುತ್ತದೆ, ಹೇಗೆ ಆಗುತ್ತದೆ, ಎಲ್ಲಿಂದ ತಿನ್ನುವುದು, ಎಲ್ಲಿಂದ ಹೋಗುವುದು' ಎನ್ನುವ ಚಿಂತೆಯಲ್ಲಿ ಬೀಳುತ್ತಾರೆ. ಆದರೆ ಮಕ್ಕಳಿಗೆ ಈ ಚಿಂತೆಗಳೇ ಇರುವುದಿಲ್ಲ. **(26–11–1984)**

ಕೆಲವು ಮಕ್ಕಳು ಬಹಳ ಚತುರರಾಗಿದ್ದಾರೆ. ಚತುರರಲ್ಲಿ ಚತುರಾದ ತಂದೆಯ ಜೊತೆಗೂ ಚತುರತೆಯನ್ನು ತೋರಿಸುತ್ತಾರೆ. ಹದ್ದಿನ ಇಚ್ಛೆ ಇರುತ್ತದೆ. ಆದರೆ ಹಾಗೆ, ಹೀಗೆ ಎಂದು ಹೇಳುತ್ತಾರೆ. ಇದು ಶುಭ ಇಚ್ಛೆಯಾಗಿದೆ. ಸೇವೆಯ ಬಗ್ಗೆ ಇಚ್ಛೆಯಾಗಿದೆ ಎಂದು ಹೇಳುತ್ತಾರೆ. ತಮ್ಮದೇ ಇಚ್ಛೆಯಾಗಿರುತ್ತದೆ, ಆದರೆ ಬಾಹ್ಯರೂಪದಲ್ಲಿ ಸೇವೆಯಂತೆ ತೋರಿಸುತ್ತಾರೆ. ಆದ್ದರಿಂದ ಬಾಪ್‌ದಾದಾ ರವರು ಮುಗುಳ್ನಗುತ್ತಾ ಇದ್ದರೂ, ತಿಳಿದುಕೊಂಡರೂ, ನೋಡುತ್ತಿದ್ದರೂ, ಚತುರತೆಯನ್ನು ಅರ್ಥ ಮಾಡಿಕೊಂಡಿದ್ದರೂ ಸಹ ಕೆಲವು ಮಕ್ಕಳಿಗೆ ಹೊರಗಿನಿಂದ ಸೂಚನೆಯನ್ನು ಕೊಡುವುದಿಲ್ಲ. ಆದರೆ ಡ್ರಾಮಾನುಸಾರ ಅವಶ್ಯವಾಗಿ ಸೂಚನೆ ಸಿಗುತ್ತದೆ. ಅದು ಹೇಗೆ? ಹದ್ದಿನ ಇಚ್ಛೆಗಳು ಪೂರ್ತಿಯಾಗುತ್ತಿದ್ದರೂ, ಪ್ರಾಪ್ತಿಯ ರೂಪ ಕಂಡರೂ ಆಂತರ್ಯದ ಒಂದು ಇಚ್ಛೆ ಇನ್ನೂ ಅನೇಕ ಇಚ್ಛೆಗಳನ್ನು ಉತ್ಪನ್ನ ಮಾಡುತ್ತಿರುತ್ತದೆ. ಆದ್ದರಿಂದ ಮನಸ್ಸಿನ ಜಂಜಾಟದ ರೂಪದಲ್ಲಿ ಸೂಚನೆಗಳು ಸಿಗುತ್ತಿರುತ್ತದೆ. ಹೊರಗಿನ ರೂಪದಲ್ಲಿ ಯಾರು ಎಷ್ಟೇ ಹದ್ದಿನ ಪ್ರಾಪ್ತಿಯಿಂದ ತಿನ್ನುತ್ತಾ, ಕುಡಿಯುತ್ತಾ, ಹಾಡುತ್ತಾ ಇದ್ದರೂ, ಮನಸ್ಸಿನ ಈ ಜಂಜಾಟವನ್ನು ಮುಚ್ಚಿಡುವ ಸಾಧನೆ ಮಾಡುತ್ತಾರೆ. ಆಂತರ್ಯದಲ್ಲಿ ಮನಸ್ಸು ತೃಪ್ತವಾಗುವುದಿಲ್ಲ. ಅಲ್ಪಕಾಲಕ್ಕಾಗಿ ತೃಪ್ತವಾಗುತ್ತದೆ ಆದರೆ ಸದಾ ಕಾಲಕ್ಕಾಗಿ ತೃಪ್ತ ಸ್ಥಿತಿ ಅಥವಾ 'ತಂದೆ ಸಿಕ್ಕಿದರು, ಪ್ರಪಂಚವೇ ಸಿಕ್ಕಿತು' ಎನ್ನುವ ಈ ಹೃದಯದ ಗೀತೆಯನ್ನು ಅವರು ಹಾಡಲಾರರು. ಅವರು ತಂದೆಗೂ ಸಹ 'ನೀವಂತೂ ಸಿಕ್ಕಿದಿರಿ, ಆದರೆ ಇದೂ ಸಹ ಅವಶ್ಯವಾಗಿಬೇಕು' ಎಂದು ಹೇಳುತ್ತೀರಿ. ಈ ಬೇಕು ಬೇಕು ಎನ್ನುವ ಬಯಕೆಯು ಎಂದಿಗೂ ತೃಪ್ತವಾಗುವುದಿಲ್ಲ. ಸಮಯದ ಅನುಸಾರ ಈಗ 'ಇಚ್ಛಾ ಮಾತ್ರಮ್ ಅವಿದ್ಯಾ' ಸ್ಥಿತಿಯ ಧ್ವನಿ ಇರಬೇಕು, ಆಗ ಅನ್ಯರ ಇಚ್ಛೆಗಳನ್ನು ಪೂರ್ಣ ಮಾಡಲು ಸಾಧ್ಯ. ಇನ್ನು ಸ್ವಲ್ಪವೇ ಸಮಯದಲ್ಲಿ ತಾವು ಒಂದೊಂದು ಶ್ರೇಷ್ಠ ಆತ್ಮವನ್ನು ವಿಶ್ವವು ಚೈತನ್ಯ ಭಂಡಾರವೆಂದು ಅನುಭವ ಮಾಡುತ್ತದೆ. ಭಿಕಾರಿಗಳಾಗಿ ಬರುತ್ತಾರೆ. 'ನೀವೇ ತುಂಬಿದ ಭಂಡಾರವಾಗಿದ್ದೀರಿ' ಎನ್ನುವ ಧ್ವನಿ ಹೊರ ಹೊಮ್ಮುತ್ತದೆ. ಇದುವರೆಗೂ ಯಾರೋ ಇದ್ದಾರೆ ಎಂದು ಹುಡುಕುತ್ತಿದ್ದಾರೆ. ಆದರೆ ಅವರು ಯಾರು, ಎಲ್ಲಿದ್ದಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಲು ಸಾಧ್ಯವಿಲ್ಲ. ಆದರೆ ಈಗ ಸಮಯದ ದಿಕ್ಸೂಚಿ ಹಾಕಲ್ಪಡುತ್ತದೆ. ಮಾರ್ಗವನ್ನು ತೋರಿಸುವ ಚಿಹ್ನೆಗಳು ಇರುತ್ತದೆಯಲ್ಲವೇ. ಬಾಣದ ಗುರುತು ಈ ಕಡೆ ಹೋಗಿ ಎಂದು ಸೂಚಿಸುವಂತೆ ಎಲ್ಲರಿಗೂ ಇಲ್ಲಿಗೆ ಹೋಗಿ ಎನ್ನುವ ಅನುಭೂತಿಯಾಗುತ್ತದೆ. ಇಂತಹ ಸಮೃದ್ಧ ಭಂಡಾರವಾಗಿದ್ದೀರಲ್ಲವೇ? ಸಮಯವೂ ತಮಗೆ ಸಹಯೋಗಿಯಾಗುತ್ತದೆ. ಶಿಕ್ಷಕ ಅಲ್ಲ, ಸಹಯೋಗಿ ಆಗುತ್ತದೆ. ಬಾಪ್‌ದಾದಾರವರು ಸಮಯಕ್ಕೆ ಮೊದಲೇ ಎಲ್ಲಾ ಮಕ್ಕಳನ್ನು ಸಂಪನ್ನ ಸ್ವರೂಪದಲ್ಲಿ, ಸಮೃದ್ಧರಾದ ಭಂಡಾರದ ರೂಪದಲ್ಲಿ, ಇಚ್ಛಾ ಮಾತ್ರಂ

ಅವಿದ್ಯಾ ರೂಪದಲ್ಲಿ, ತೃಪ್ತ ಸ್ವರೂಪದಲ್ಲಿ ನೋಡಲು ಬಯಸುತ್ತಾರೆ. ಏಕೆಂದರೆ ಈಗಲಿಂದಲೇ ಸಂಸ್ಕಾರಗಳನ್ನು ತುಂಬಿಸಿಕೊಂಡಿಲ್ಲವೆಂದರೆ ಅಂತ್ಯದಲ್ಲಿ ಸಂಸ್ಕಾರವನ್ನು ತುಂಬಿಕೊಳ್ಳುವಂತಹವರು ಬಹಳ ಕಾಲದ ಪ್ರಾಪ್ತಿಗೆ ಅಧಿಕಾರಿಗಳಾಗುವುದಿಲ್ಲ. ಆದ್ದರಿಂದ ವಿಶ್ವಕ್ಕಾಗಿ ವಿಶ್ವ ಆಧಾರ ಮೂರ್ತಿಗಳಾಗಿರುವಿರಿ, ಜಗತ್ತಿನ ಮುಂದೆ ಕಣ್ಮಣಿಗಳಾಗಿರುವಿರಿ. ಜಗತ್ತಿನ ಕುಲದೀಪಕರಾಗಿರುವಿರಿ. ಯಾವುದೆಲ್ಲಾ ಶ್ರೇಷ್ಠ ಮಹಿಮೆಗಳಿವೆಯೋ–ಸರ್ವ ಶ್ರೇಷ್ಠ ಮಹಿಮೆಗೆ ಅಧಿಕಾರಿ ಆತ್ಮಗಳೇ ಈಗ ವಿಶ್ವದ ಮುಂದೆ ತಮ್ಮ ಸಂಪನ್ನ ರೂಪದಲ್ಲಿ ಪ್ರತ್ಯಕ್ಷವಾಗಿ ತೋರಿಸಿ. ತಿಳಿಯಿತೆ? **(05–12–1984)**

ಎಲ್ಲರೂ ಪುಣ್ಯಾತ್ಮಗಳಾಗಿದ್ದೀರಾ? ಅನ್ಯರಿಗೆ ಶಕ್ತಿಯನ್ನು ಕೊಡುವುದೇ ಎಲ್ಲದಕ್ಕಿಂತ ದೊಡ್ಡ ಪುಣ್ಯವಾಗಿದೆ. ಆದ್ದರಿಂದ ಸದಾ ಸರ್ವ ಆತ್ಮಗಳ ಬಗ್ಗೆ ಪುಣ್ಯಾತ್ಮರು ಆಗಿರಿ ಅಂದರೆ ತಮಗೆ ದೊರೆತಿರುವ ಖಜಾನೆಗಳ ಮಹಾದಾನಿ ಗಳಾಗಿರಿ. ಹೀಗೆ ದಾನ ಮಾಡುವವರು, ಎಷ್ಟು ಬೇರೆಯವರಿಗೆ ದಾನ ಮಾಡುತ್ತಾರೋ ಅಷ್ಟು ಪದಮದಷ್ಟು ಹೆಚ್ಚುತ್ತದೆ. ಹಾಗಾಗಿ ಕೊಡುವುದೇ ಪಡೆದುಕೊಳ್ಳುವುದಾಗಿದೆ. ಇಂತಹ ಉಮ್ಮಂಗ ಇರುತ್ತದೆಯೆ? ಈ ಉಮ್ಮಂಗದ ಪ್ರಾಕ್ಟಿಕಲ್ ಸ್ವರೂಪವೇ ಸೇವೆಯಲ್ಲಿ ಸದಾ ಮುಂದುವರೆಯುತ್ತಾ ಇರುವುದಾಗಿದೆ. ಎಷ್ಟೆಷ್ಟು ತನು ಮನ ಧನವನ್ನು ಸೇವೆಯಲ್ಲಿ ತೊಡಗಿಸುತ್ತೀರೋ, ಅಷ್ಟಷ್ಟು ವರ್ತಮಾನದಲ್ಲಿಯೂ ಮಹಾದಾನಿ ಪುಣ್ಯಾತ್ಮಗಳಾಗುವಿರಿ ಮತ್ತು ಭವಿಷ್ಯದಲ್ಲಿಯೂ ಸಹ ಸದಾಕಾಲಕ್ಕಾಗಿ ಜಮಾ ಆಗುತ್ತದೆ. ತಮ್ಮ ಸರ್ವಸ್ವವನ್ನು ಜಮಾಮಾಡಿಕೊಳ್ಳಲು ಅವಕಾಶ ಸಿಗುವುದೂ ಡ್ರಾಮಾದಲ್ಲಿ ಭಾಗ್ಯವಾಗಿದೆ. ಈ ಸುವರ್ಣ ಅವಕಾಶವನ್ನು ತೆಗೆದುಕೊಳ್ಳುವಿರಲ್ಲವೇ! **ಯೋಚಿಸಿ ಮಾಡಿದರೆ ಬೆಳ್ಳಿಯ ಅವಕಾಶದಂತೆ. ವಿಶಾಲ ಹೃದಯಿಗಳಾಗಿ ಮಾಡಿದರೆ ಸುವರ್ಣ ಅವಕಾಶ ಪಡೆದಂತೆ.** ಆದ್ದರಿಂದ ಎಲ್ಲರೂ ಸಹ ನಂಬರ್ ಒನ್ ಚಾನ್ಸಲರ್ ಆಗಿ. **(14–01–1985)**

ಇಂದು ವಿಶೇಷವಾಗಿ ಬಾಪ್‌ದಾದಾರವರು ಏನು ಮಾಡಿದರು? ಸಂಪೂರ್ಣ ಸಂಘಟನೆಯನ್ನು ನೋಡಿ ಬಾಪ್‌ದಾದಾರವರು ಭಾಗ್ಯವಂತ ಮಕ್ಕಳ ಭಾಗ್ಯ ಮಾಡಿಕೊಳ್ಳುವ ಮಹಿಮೆಯನ್ನು ಗಾಯನ ಮಾಡುತ್ತಿದ್ದರು. ದೂರದಲ್ಲಿರುವವರು ಹತ್ತಿರದವರಾದರು ಮತ್ತು ಹತ್ತಿರ ಆಬೂವಿನಲ್ಲಿ ವಾಸ ಮಾಡುವವರು ಎಷ್ಟೊಂದು ದೂರವಾಗಿ ಹೋದರು? ಹತ್ತಿರವಿದ್ದರೂ ದೂರ ಆದರೆ ತಾವು ದೂರದಲ್ಲಿ ವಾಸ ಮಾಡುತ್ತಿದ್ದರೂ ಹತ್ತಿರದಲ್ಲಿದ್ದೀರಿ. ಅವರು ನೋಡುವವರಾಗಿದ್ದಾರೆ, ಮತ್ತು ತಾವು ಹೃದಯ ಸಿಂಹಾಸನದಲ್ಲಿ ಸದಾ ಇರುವವರಾಗಿದ್ದೀರಿ. ಎಷ್ಟೊಂದು ಸ್ನೇಹದಿಂದ ಮಧುಬನಕ್ಕೆ ಬರಲು ಸಾಧನಗಳನ್ನು ತಯಾರು ಮಾಡಿಕೊಳ್ಳುತ್ತೀರಿ. ಪ್ರತಿ ತಿಂಗಳೂ 'ತಂದೆಯೊಂದಿಗೆ ಮಿಲನ ಮಾಡಬೇಕು, ಹೋಗಬೇಕು, ಜಮಾ ಮಾಡಿಕೊಳ್ಳಬೇಕು' ಎಂಬ ಗೀತೆಯನ್ನು ಹಾಡುತ್ತೀರಿ. ಈ ಲಗನ್ ಸಹ ಮಾಯಾಜೀತ್ ಆಗುವುದಕ್ಕೆ ಸಾಧನವಾಗಿ ಬಿಡುತ್ತದೆ. ಒಂದುವೇಳೆ ಟಿಕೆಟ್ ಸಹಜವಾಗಿ ದೊರಕಿಬಿಟ್ಟರೆ ಇಷ್ಟೊಂದು ಲಗನ್‌ನಲ್ಲಿ ವಿಘ್ನಗಳು ಹೆಚ್ಚು ಬೀಳುತ್ತದೆ. ಆದರೆ ಹನಿಹನಿ ಸೇರಿಸಿ ಕೆರೆ ಮಾಡುತ್ತೀರಿ. ಹಾಗಾಗಿ ಹನಿಹನಿಯನ್ನು ಸೇರಿಸುವುದರಲ್ಲಿ ತಂದೆಯ ನೆನಪು ಸಮಾವೇಶವಾಗಿರುತ್ತದೆ. ಆದ್ದರಿಂದ ಡ್ರಾಮಾದಲ್ಲಿ ಏನಾಗುತ್ತಿದೆಯೋ ಅದೂ ಸಹ ಕಲ್ಯಾಣಕಾರಿಯಾಗಿದೆ. ಒಂದುವೇಳೆ ಹೆಚ್ಚಿನ ಹಣ ಸಿಕ್ಕಿದರೆ ಮಾಯೆ ಬಂದು ಸೇವೆ ಮರೆತು ಹೋಗುತ್ತದೆ. ಈ ಕಾರಣದಿಂದಾಗಿ ಧನವಂತರು ತಂದೆಯ ಅಧಿಕಾರಿ ಮಕ್ಕಳಾಗುವುದಿಲ್ಲ.

ಅರ್ಜೆಂಟೈನಾದ ಎಲ್ಲಾ ಆತ್ಮಗಳು ಅರ್ಜುನನ ಸಮಾನ ಬಾಯಾರಿದ ಆತ್ಮಗಳಾಗಿದ್ದಾರೆ. 'ಯಾವಾಗ ಮಧುಬನ ನಿವಾಸಿಯಾಗುವ ಘಳಿಗೆ ಬರುತ್ತದೆಯೋ' ಎಂದು ಹಗಲು ರಾತ್ರಿ ಗಡಿಯಾರವನ್ನು ನೋಡುತ್ತಿರುತ್ತಾರೆ. ಬಾಪ್‌ದಾದಾರವರು ಮಕ್ಕಳ ಈ ಲಗನ್‌ನ್ನು ನೋಡುತ್ತಿರುತ್ತಾರೆ. ಎಲ್ಲರೂ ಅರ್ಜುನನ ಸಮಾನ ಆತ್ಮರೆಂದು ತಿಳಿಯುತ್ತಾರೆ. ಅರ್ಜುನರಿಗಾಗಿಯೇ ವಿಶೇಷವಾಗಿ ತಂದೆಯು ಬಂದಿದ್ದರು ಮತ್ತು ಈಗ ಬಂದಿದ್ದಾರೆ ಎಂದು ಅವರಿಗೆ ಹೇಳಿ. ಆದ್ದರಿಂದ ದೂರದಲ್ಲಿದ್ದರೂ ಸಹ ಅಗಲಿ ಹೋಗಿ ಸಿಕ್ಕಿರುವ ಮಕ್ಕಳೇ ಆಗಿದ್ದಾರೆ. ದೂರದಲ್ಲಿರುವ ಮಕ್ಕಳಿಗೆ ಹೃದಯ ಸಿಂಹಾಸನದಲ್ಲಿ ಸದಾ ಸ್ಥಾನವಿರುತ್ತದೆ. ಎಲ್ಲಾ ಮಕ್ಕಳ ಪತ್ರಗಳು ಬಾಪ್‌ದಾದಾರವರ ಬಳಿ ಮೊದಲೇ ತಲುಪಿದೆ. ಎಲ್ಲರ ಕೂಗು ಮತ್ತು ಆಕ್ಷೇಪಣೆಗಳು ತಂದೆಯ ಹತ್ತಿರ ತಲುಪಿವೆ. ಡ್ರಾಮಾದಲ್ಲಿ ಎಂದಿಗೂ ಯಾವುದೇ ಮಗು ದೂರವಿರುವ ಕಾರಣದಿಂದಾಗಿ ವಂಚಿತರಾಗುವ ಸ್ಥಿತಿಯು ಯಾರ ಭಾಗ್ಯದಲ್ಲಿಯೂ ಇರಲು ಸಾಧ್ಯವಿಲ್ಲವೆಂದು ಬಾಪ್‌ದಾದಾ ಹೇಳುತ್ತಾರೆ. ಡ್ರಾಮಾದಲ್ಲಿ ಎಲ್ಲರಿಗೂ ಅಧಿಕಾರ ಸಿಗಲೇ ಬೇಕಾಗಿದೆ. **(27–02–1985)**

ವಿಜಯವನ್ನು ಪ್ರಾಪ್ತಿ ಮಾಡಿಕೊಳ್ಳಲು ಡ್ರಾಮಾದ ಜ್ಞಾನವು ಬಹಳ ದೊಡ್ಡ ಶಸ್ತ್ರವಾಗಿದೆ. ಯಾರು ಡ್ರಾಮಾದ ಜ್ಞಾನದ ಶಕ್ತಿಯನ್ನು ಪ್ರಾಕ್ಟಿಕಲ್ ಜೀವನದಲ್ಲಿ ಧಾರಣೆ ಮಾಡುತ್ತಾರೋ ಅವರು ಎಂದಿಗೂ ಸಹ ಗೊಂದಲದಲ್ಲಿ ಬರಲು ಸಾಧ್ಯವಿಲ್ಲ. ಸದಾ ಏಕರಸ, ಅಚಲ, ಅಡೋಲ ಆಗುವುದಕ್ಕೆ

ಮತ್ತು ಮಾಡುವುದಕ್ಕೆ ಡ್ರಾಮಾದ ಪಾಯಿಂಟ್‌ನಲ್ಲಿ ವಿಶೇಷ ಶಕ್ತಿಯಿದೆ. ಶಕ್ತಿಯ ರೂಪದಲ್ಲಿ ಧಾರಣೆ ಮಾಡಿಕೊಳ್ಳುವವರು ಎಂದಿಗೂ ಕೂಡ ಸೋಲುವುದಿಲ್ಲ. ಆದರೆ ಯಾರು ಕೇವಲ ಪಾಯಿಂಟ್‌ನ ರೂಪದಲ್ಲಿ ಧಾರಣೆ ಮಾಡುತ್ತಾರೋ, ಅವರು ಏನು ಮಾಡುತ್ತಾರೆ? ಡ್ರಾಮಾದ ಪಾಯಿಂಟ್‌ನ್ನು ವರ್ಣನೆಯನ್ನೂ ಮಾಡುತ್ತಾರೆ, ಗೊಂದಲದಲ್ಲಿಯೂ ಬರುತ್ತಿರುತ್ತಾರೆ ಹಾಗೂ ಡ್ರಾಮಾದ ಪಾಯಿಂಟನ್ನೂ ಹೇಳುತ್ತಿರುತ್ತಾರೆ. ಒಮ್ಮೊಮ್ಮೆ ಕಣ್ಣುಗಳಿಂದ ನೀರನ್ನೂ ಹರಿಸುತ್ತಿರುತ್ತಾರೆ. 'ಏನಾಯಿತೋ ಗೊತ್ತಿಲ್ಲ, ಏನಿದೆಯೋ ಗೊತ್ತಿಲ್ಲ' ಎಂದು ಹೇಳುತ್ತಿರುತ್ತಾರೆ ಮತ್ತು ಜೊತೆಗೆ ಡ್ರಾಮಾದ ಪಾಯಿಂಟ್‌ನ್ನೂ ಹೇಳುತ್ತಿರುತ್ತಾರೆ. ಹಾಂ, ವಿಜಯಿ ರತ್ನವಂತೂ ಆಗಿಯೇ ಇದ್ದೇನೆ, ಡ್ರಾಮಾ ನೆನಪಿದೆ ಆದರೆ ಏನಾಯಿತೋ ತಿಳಿಯಲಿಲ್ಲ ಎಂದು ಹೇಳುತ್ತಾರೆ. **(21–03–1985)**

**ದಾದಿಜೀಯವರ ಜೊತೆಯಲ್ಲಿ:** ಬಾಲ್ಯದಿಂದಲೇ ತಂದೆಯು ಕಿರೀಟ ಧಾರಿಯನ್ನಾಗಿ ಮಾಡಿದ್ದಾರೆ. ಬರುತ್ತಿದ್ದಂತೆಯೇ ಸೇವೆಯ ಜವಾಬ್ದಾರಿಯ ಕಿರೀಟವನ್ನು ತೊಡಿಸಿದರು ಮತ್ತು ಸಮಯಾನುಸಾರ ಬಡತನದ ಪಾತ್ರ ವಿರಬಹುದು, ಮೋಜಿನ ಪಾತ್ರವಿರಬಹುದು, ಏನೆಲ್ಲಾ ಪಾತ್ರ ನಡೆಯಿತೋ, ಎಲ್ಲಾ ಪಾತ್ರದಲ್ಲಿಯೂ ಜವಾಬ್ದಾರಿಯ ಕಿರೀಟವನ್ನು ಡ್ರಾಮಾನುಸಾರ ಧಾರಣೆ ಮಾಡುತ್ತಲೇ ಬಂದಿರುವಿರಿ. ಆದ್ದರಿಂದ ಅವ್ಯಕ್ತ ಪಾತ್ರದಲ್ಲಿಯೂ ಸಹ ನಿಮಿತ್ತ ಕಿರೀಟಧಾರಿಯಾಗಿರುವಿರಿ. ಎಂದಾಗ ಇದು ಆದಿಯಿಂದ ವಿಶೇಷವಾದ ಪಾತ್ರವಾಗಿದೆ. ಸದಾ ಜವಾಬ್ದಾರಿಯನ್ನು ನಿಭಾಯಿಸುವಂತಹವರಾಗಿದ್ದೀರಿ. ಹೇಗೆ ತಂದೆಯು ಜವಾಬ್ದಾರರಾಗಿದ್ದಾರೋ ಹಾಗೆಯೇ ಜವಾಬ್ದಾರಿಯ ಕಿರೀಟಧಾರಿ ಯಾಗುವ ವಿಶೇಷ ಪಾತ್ರವಿದೆ. ಆದ್ದರಿಂದ ಅಂತ್ಯದಲ್ಲಿಯೂ ಸಹ ದೃಷ್ಟಿಯ ಮೂಲಕ ಕಿರೀಟ, ತಿಲಕ ಎಲ್ಲವನ್ನೂ ಕೊಟ್ಟು ಹೋದರು. ಹಾಗಾಗಿ ತಮ್ಮ ಸ್ಮರಣಾರ್ಥದಲ್ಲಿ ಅವಶ್ಯವಾಗಿ ಕಿರೀಟವಿರುತ್ತದೆ. ಹೇಗೆ ಕೃಷ್ಣನಿಗೆ ಬಾಲ್ಯದಿಂದಲೇ ಕಿರೀಟವನ್ನು ತೋರಿಸುತ್ತಾರೋ, ಹಾಗೆಯೇ ಅದರ ಸ್ಮರಣಾಥವಾಗಿ ಬಾಲ್ಯದಿಂದಲೇ ಕಿರೀಟಧಾರಿಯಾಗಿ ಪೂಜಿಸುತ್ತಾರೆ. ಉಳಿದವರೆಲ್ಲರೂ ಜೊತೆಗಾರರಾಗಿರುತ್ತಾರೆ ತಾವು ಮಾತ್ರ ಕಿರೀಟಧಾರಿಗಳಾಗಿರುತ್ತೀರಿ. ಎಲ್ಲರೂ ಜೊತೆಯನ್ನು ನಿಭಾಯಿಸುತ್ತಾರೆ ಆದರೆ ಸಮಾನ ರೂಪದಿಂದ ಜೊತೆಯನ್ನು ನಿಭಾಯಿಸುವುದರಲ್ಲಿ ಅಂತರವಿದೆ. **(30–03–1985)**

ಡ್ರಾಮಾದಲ್ಲಿ ಯಾವುದೇ ಸೇವೆಯ ಪಾತ್ರ ದೊರೆತರೂ ಅದರಲ್ಲಿ ವಿಶೇಷತೆ ತುಂಬಿರುತ್ತದೆ. ಧೈರ್ಯದಿಂದ ಸಹಯೋಗದ ಅನುಭವವನ್ನು ಮಾಡಿದಿರಿ. ಒಳ್ಳೆಯದು. ಸ್ವಯಂನ ಮೂಲಕ ಬಾಬಾರವರನ್ನು ಪ್ರತ್ಯಕ್ಷ ಮಾಡುವ ಶ್ರೇಷ್ಠ ಸಂಕಲ್ಪವು ಇತ್ತು. ಏಕೆಂದರೆ ಯಾವಾಗ ಬಾಬಾರವರನ್ನು ಪ್ರತ್ಯಕ್ಷ ಮಾಡುವಿರೋ ಆಗ ಈ ಹಳೆಯ ಪ್ರಪಂಚದ ಸಮಾಪ್ತಿಯಾಗುವುದು, ತಮ್ಮ ರಾಜ್ಯವು ಬರುವುದು. ತಂದೆಯನ್ನು ಪ್ರತ್ಯಕ್ಷ ಮಾಡುವುದು ಎಂದರೆ ತಮ್ಮ ರಾಜ್ಯವನ್ನು ತರುವುದಾಗಿದೆ. ತಮ್ಮ ರಾಜ್ಯವನ್ನು ತರಬೇಕು ಎನ್ನುವ ಉಮ್ಮಂಗ ಉತ್ಸಾಹ ಸದಾ ಇರುತ್ತದೆಯಲ್ಲವೆ? ಹೇಗೆ ವಿಶೇಷ ಕಾರ್ಯಕ್ರಮಗಳಲ್ಲಿ ಉಮ್ಮಂಗ ಉತ್ಸಾಹವು ಇರುತ್ತದೋ ಹಾಗೆಯೇ ಸದಾ ಈ ಸಂಕಲ್ಪದ ಉಮ್ಮಂಗ ಉತ್ಸಾಹವಿರಲಿ. ತಿಳಿಯಿತೆ? **(13–11–1985)**

ಈಗಂತೂ ಶರೀರವನ್ನೂ ಸಂಭಾಲನೆ ಮಾಡಬೇಕಾಗಿದೆ. ಯಾವಾಗ ಶರೀರವನ್ನು ಸಾಲವಾಗಿ ತೆಗೆದುಕೊಳ್ಳಲಾಗುತ್ತದೆಯೋ, ಯಾರು ಶರೀರವನ್ನು ಮತ್ತು ಸ್ಥಾನವನ್ನು ಶಕ್ತಿಯ ಅನುಸಾರ ಕಾರ್ಯದಲ್ಲಿ ಉಪಯೋಗಿಸುತ್ತಾರೋ ಅವರೇ ಒಳ್ಳೆಯ ಮಾಲೀಕರಾಗುತ್ತಾರೆ. ಅದರೂ ಬಾಪ್–ದಾದಾ ಇಬ್ಬರ ಶಕ್ತಿಶಾಲಿ ಪಾತ್ರವನ್ನು ರಥ ನಡೆಸುವುದಕ್ಕೆ ನಿಮಿತ್ತ ಮಾಡಿದ್ದಾರೆ. ಇದೂ ಸಹ ಡ್ರಾಮಾದಲ್ಲಿ ವಿಶೇಷ ವರದಾನಕ್ಕೆ ಆಧಾರವಾಗಿದೆ. ಅನೇಕ ಮಕ್ಕಳಲ್ಲಿ ಇದೇ ರಥವು ಏಕೆ ನಿಮಿತ್ತವಾಗಿದೆ ಎನ್ನುವ ಪ್ರಶ್ನೆಯೂ ಏಳುತ್ತದೆ. ಬೇರೆಯವರಿಗೆ ಏಕೆ, ಇವರಿಗೂ (ಗುಲ್ಜಾರ್ ಸಹೋದರಿಗೂ) ಸಹ ಈ ಪ್ರಶ್ನೆ ಏಳುತ್ತದೆ. ಆದರೆ ಹೇಗೆ ಬ್ರಹ್ಮಾರವರೂ ಸಹ ತಮ್ಮ ಜನ್ಮಗಳ ಬಗ್ಗೆ ತಿಳಿದಿರಲಿಲ್ಲವೋ ಹಾಗೆಯೇ ಇವರೂ ಸಹ ತಮ್ಮ ವರದಾನವನ್ನು ಮರೆತು ಬಿಟ್ಟಿದ್ದಾರೆ. ವಿಶೇಷವಾಗಿ ಸಾಕಾರ ಬ್ರಹ್ಮಾರವರ ಆದಿ ಸಾಕ್ಷಾತ್ಕಾರದ ಪಾತ್ರದ ಸಮಯದಲ್ಲಿ ಈ ಮಗುವಿಗೂ ವರದಾನ ಸಿಕ್ಕಿದೆ. ಬ್ರಹ್ಮಾ ಬಾಬಾರವರ ಜೊತೆಯಲ್ಲಿ ಆದಿ ಸಮಯದಲ್ಲಿ ಏಕಾಂತದ ತಪಸ್ಸಿನ ಸ್ಥಾನದಲ್ಲಿ ಈ ಆತ್ಮದ ವಿಶೇಷ ಸಾಕ್ಷಾತ್ಕಾರದ ಪಾತ್ರವನ್ನು ನೋಡಿ, ಬ್ರಹ್ಮಾ ಬಾಬಾರವರು ಮಗುವಿನ ಸರಳ ಸ್ವಭಾವ, ಮುಗ್ಧ ಜೀವನದ ವಿಶೇಷತೆಯನ್ನು ನೋಡಿ 'ಹೇಗೆ ಈಗ ಈ ಪಾತ್ರದಲ್ಲಿ ಆದಿಯಲ್ಲಿ ಬ್ರಹ್ಮಾ ಬಾಬಾರವರ ಜೊತೆಯೂ ಆದರೂ, ಜೊತೆಗಾರರೂ ಆದರೋ, ಅದೇ ರೀತಿ ಮುಂದೆ ತಂದೆಯ ಜೊತೆಗಾರರಾಗುವ, ತಂದೆಯ ಸಮಾನರಾಗುವ ಕರ್ತವ್ಯವನ್ನು ನಿಭಾಯಿಸುತ್ತಾರೆ, ಬ್ರಹ್ಮಾ ಬಾಬಾರವರ ಸಮಾನ ಸೇವೆಯಲ್ಲಿ ಪಾತ್ರವನ್ನು ನಿಭಾಯಿಸುತ್ತಾರೆ' ಎನ್ನುವ

ವರದಾನವನ್ನು ಕೊಟ್ಟರು. ಹಾಗಾಗಿ ಅದೇ ವರದಾನ ಅದೃಷ್ಟದ ರೇಖೆ ಆಗಿಬಿಟ್ಟಿತು ಮತ್ತು ಬ್ರಹ್ಮಾಬಾಬಾರವರ ಸಮಾನ ರಥ ಅಗುವ ಪಾತ್ರವನ್ನು ಅಭಿನಯಿಸುವ ಪಾತ್ರವೂ ಸಹ ನಿಗದಿಯಾಯಿತು. ಆದರೂ ಸಹ ಬಾಪ್ ದಾದಾರವರು ಈ ಪಾತ್ರವನ್ನು ಮಾಡುತ್ತಿರುವುದಕ್ಕಾಗಿ ಮಗುವಿಗೆ ಅಭಿನಂದನೆಗಳನ್ನು ಹೇಳುತ್ತಾರೆ. ಇಷ್ಟೊಂದು ಸಮಯದವರೆಗೆ ಇಷ್ಟೊಂದು ಶಕ್ತಿಯನ್ನು ಸಮಾವೇಶ ಮಾಡಿಕೊಳ್ಳಬೇಕಾಗುತ್ತದೆ. ಈ ಸಮಾವೇಶ ಮಾಡಿಕೊಳ್ಳುವ ವಿಶೇಷತೆಯ ಲಿಫ್ಟ್‌ನ ಕಾರಣ ಎಕ್ಸ್‌ಟ್ರಾ ಗಿಫ್ಟ್ ದೊರಕಿದೆ. ಆದರೂ ಸಹ ಬಾಪ್ ದಾದಾರವರು ಶರೀರವನ್ನೂ ನೋಡಬೇಕಾಗುತ್ತದೆ. ವಾದ್ಯ ಹಳೆಯದಾಗಿದೆ ಮತ್ತು ನುಡಿಸುವವರು ಶಕ್ತಿಶಾಲಿಯಾಗಿದ್ದಾರೆ. ಆದರೂ ಹಾಜೀ, ಹಾಜೀಯ ಪಾಠದ ಕಾರಣ ಚೆನ್ನಾಗಿ ನಡೆಯುತ್ತಿದೆ. ಮಿಲನ ಮಾಡುವ ಪ್ರತಿಜ್ಞೆಯಂತೂ ಇದೆ. ಆದರೆ ಸಮಯಾನುಸಾರ ವಿಧಿಯ ಪರಿವರ್ತನೆಯಾಗುತ್ತಿರುತ್ತದೆ. ಉಳಿದಿದ್ದನ್ನು 18ನೇ ವರ್ಷದಲ್ಲಿ ಎಲ್ಲವನ್ನೂ ತಿಳಿಸುತ್ತೇನೆ. 17ನೇ ವರ್ಷವನ್ನಂತೂ ಪೂರ್ತಿ ಮಾಡಬೇಕಾಗಿದೆ. **(19-12-1985)**

ಪ್ರವೃತ್ತಿಯಲ್ಲಿರುತ್ತಾ ಸದಾ ಭಿನ್ನರು (ನ್ಯಾರಾ) ಮತ್ತು ತಂದೆಗೆ ಪ್ರಿಯರು (ಪ್ಯಾರಾ) ಆಗಿದ್ದೀರಲ್ಲವೇ? ಎಂದಿಗೂ ಕೂಡ ಪ್ರವೃತ್ತಿಯೊಂದಿಗೆ ಸೆಳೆತವಂತೂ ಉಂಟಾಗುವುದಿಲ್ಲ ತಾನೇ? ಒಂದುವೇಳೆ ಎಲ್ಲಿಯಾದರೂ, ಯಾರೊಂದಿಗಾದರೂ ಸೆಳೆತವಿದ್ದರೆ ಅದು ಸದಾ ಕಾಲಕ್ಕೆ ತಮ್ಮ ಜೀವನದಲ್ಲಿ ವಿಘ್ನವಾಗಿ ಬಿಡುತ್ತದೆ. ಆದ್ದರಿಂದ ಸದಾ ನಿರ್ವಿಘ್ನರು ಆಗಿ ಮುಂದುವರಿಯುತ್ತಾ ಹೋಗಿರಿ. ಕಲ್ಪದ ಹಿಂದಿನಂತೆ 'ಅಂಗದ' ನ ಸಮಾನ ಆಗಿ ಅಚಲ ಅಡೋಲರಾಗಿರಿ. ಅಂಗದನ ವಿಶೇಷತೆಯಾಗಿ ಏನನ್ನು ತೋರಿಸುತ್ತಾರೆ? ಕಾಲನ್ನು ಯಾರೂ ಅಲುಗಾಡಿಸಲು ಸಾಧ್ಯವಿಲ್ಲದಂತಹ ನಿಶ್ಚಯಬುದ್ಧಿಯುಳ್ಳವರು. ಮಾಯೆಯು ನಿಶ್ಚಯ ರೂಪೀ ಕಾಲನ್ನು ಅಲುಗಾಡಿಸಲು ಭಿನ್ನ ಭಿನ್ನ ಪ್ರಕಾರದಲ್ಲಿ ಬರುತ್ತದೆ. ಆದರೆ ಮಾಯೆಯು ಅಲುಗಾಡಬೇಕೇ ವಿನಹ ತಮ್ಮ ನಿಶ್ಚಯ ರೂಪೀ ಕಾಲು ಅಲುಗಾಡಬಾರದು. ಮಾಯೆ ಸ್ವಯಂ ಶರಣಾಗುತ್ತದೆ. ತಾವು ಮಾಯೆಗೆ ಶರಣಾಗುವುದಿಲ್ಲ ಅಲ್ಲವೇ? ಬಾಬಾರವರ ಮುಂದೆ ಶರಣಾಗಬೇಕು, ಮಾಯೆಯ ಮುಂದೆ ಅಲ್ಲ. ಇಂತಹ ನಿಶ್ಚಯಬುದ್ಧಿಯುಳವರು ಸದಾ ನಿಶ್ಚಿಂತರಾಗಿರುತ್ತಾರೆ. ಒಂದುವೇಳೆ ಸ್ವಲ್ಪವಾದರೂ ಚಿಂತೆ ಇದೆ ಎಂದರೆ, ನಿಶ್ಚಯದಲ್ಲಿ ಕೊರತೆ ಇದೆ ಎಂದು ಅರ್ಥ. ಎಂದಾದರೂ ಯಾವುದೇ ಮಾತಿನಲ್ಲಿ ಸ್ವಲ್ಪವಾದರೂ ಚಿಂತೆ ಉಂಟಾದರೆ ಅದಕ್ಕೆ ಕಾರಣವೇನಾಗುತ್ತದೆ? ಅವಶ್ಯವಾಗಿ ಒಂದಲ್ಲ ಒಂದು ಮಾತಿನ ನಿಶ್ಚಯದಲ್ಲಿ ಕೊರತೆ ಇದೆ. ಡ್ರಾಮಾದ ಮೇಲೆ ನಿಶ್ಚಯದ ಕೊರತೆ ಇರಬಹುದು, ಸ್ವಯಂ ತಮ್ಮ ಮೇಲೆ ನಿಶ್ಚಯದ ಕೊರತೆ ಇರಬಹುದು, ತಂದೆಯ ಮೇಲೆ ನಿಶ್ಚಯದ ಕೊರತೆ ಇರಬಹುದು. ಮೂರೂ ಪ್ರಕಾರದ ನಿಶ್ಚಯದಲ್ಲಿ ಸ್ವಲ್ಪವಾದರೂ ಕೊರತೆ ಇದ್ದರೆ, ನಿಶ್ಚಿಂತರಾಗಿರಲು ಸಾಧ್ಯವಿಲ್ಲ. ಎಲ್ಲದಕ್ಕಿಂತ ದೊಡ್ಡ ಖಾಯಿಲೆ 'ಚಿಂತೆ' ಯಾಗಿದೆ. ಚಿಂತೆಯ ಖಾಯಿಲೆಗೆ ವೈದರ ಬಳಿಯೂ ಔಷಧಿ ಇಲ್ಲ. ತಾತ್ಕಾಲಿಕವಾಗಿ ನಿದ್ರೆಯನ್ನು ಮಾಡಿಸುವುದಕ್ಕೆ ಔಷಧಿಯನ್ನು ಕೊಡುತ್ತಾರೆ. ಆದರೆ ಸದಾ ಕಾಲಕ್ಕಾಗಿ ಚಿಂತೆಯು ಅಳಿಸಿ ಹೋಗುವುದಿಲ್ಲ. ಚಿಂತೆಯುಳ್ಳವರು ಎಷ್ಟು ಪ್ರಾಪ್ತಿಗಳ ಹಿಂದೆ ಓಡುತ್ತಾರೋ ಅಷ್ಟೂ ಪ್ರಾಪ್ತಿಗಳೂ ಮುಂದೆ ಮುಂದೆ ಓಡುತ್ತವೆ. ಆದ್ದರಿಂದ ಸದಾ ನಿಶ್ಚಯದ ಕಾಲಗಳು ಅಚಲವಾಗಿರಲಿ. ಸದಾ 'ಒಂದೇ ಬಲ ಒಂದೇ ಭರವಸೆ' ಎಂಬುದೇ ಕಾಲು ಆಗಿದೆ. ನಿಶ್ಚಯ ಎಂದಾದರೂ ಹೇಳಿ, ಭರವಸೆ ಎಂದಾದರೂ ಹೇಳಿ ಮಾತು ಒಂದೇ ಆಗಿದೆ. ಇಂತಹ ನಿಶ್ಚಯಬುದ್ಧಿ ಮಕ್ಕಳ ವಿಜಯ ನಿಶ್ಚಿತವಾಗಿದೆ. **(13.01.1986)**

ಒಳ್ಳೆಯದು. ದೀದೀಜಿಯವರು ಏನು ಹೇಳಿದರು? ದೀದಿಯವರು ಬಹಳ ಚೆನ್ನಾಗಿ ಆತ್ಮೀಕ ವಾರ್ತಾಲಾಪ ಮಾಡುತ್ತಿದ್ದರು. 'ತಾವು ಎಲ್ಲರನ್ನೂ ಸೂಚನೆಯೇ ನೀಡದೆ ಏಕೆ ಕರೆಸಿಕೊಂಡಿರಿ' ಎಂದು ಅವರು ಹೇಳುತ್ತಾರೆ. ಒಪ್ಪಿಗೆಯನ್ನು ತೆಗೆದುಕೊಂಡು ತಯಾರಾಗುತ್ತಿದ್ದರೂ ತಾವು ಒಪ್ಪಿಗೆಯನ್ನು ಕೊಡುತ್ತಿದ್ದಿರಾ? ಬಾಪ್‌ದಾದಾರವರು ಮಕ್ಕಳ ಜೊತೆ ಆತ್ಮೀಕ ವಾರ್ತಾಲಾಪ ಮಾಡುತ್ತಿದ್ದರು – ದೇಹ ಸಹಿತ ದೇಹದ ಸಂಬಂಧ, ದೇಹದ ಸಂಸ್ಕಾರ, ಎಲ್ಲರ ಸಂಬಂಧ, ಲೌಕಿಕದ್ದು ಇಲ್ಲದಿರಬಹುದು, ಅಲೌಕಿಕ ಸಂಬಂಧವಂತೂ ಇದೆ. ಅಲೌಕಿಕ ಸಂಬಂಧದಿಂದ, ದೇಹದಿಂದ, ಸಂಸ್ಕಾರದಿಂದ 'ನಷ್ಟಮೋಹ' ರಾಗುವ ವಿಧಿ ಈ ಡ್ರಾಮಾದಲ್ಲಿ ನೊಂದಾಯಿಸಲ್ಪಟ್ಟಿದೆ. ಆದ್ದರಿಂದ ಅಂತ್ಯದಲ್ಲಿ ಎಲ್ಲರಿಂದ ನಷ್ಟಮೋಹಿಗಳಾಗಿ ತಮ್ಮ ಕರ್ತವ್ಯವನ್ನು ನಿಭಾಯಿಸಲು ಬಂದುಬಿಟ್ಟಿದ್ದೀರಿ. ವಿಶ್ವಕಿಶೋರ ಅಣ್ಣನವರಿಗೆ ದೇಹ ಬಿಡುವ ಬಗ್ಗೆ ತಿಳಿದಿತ್ತು. ಆದರೆ ಯಾವಾಗ ಹೋಗುವ ಸಮಯ ಬಂದಿತೋ, ಆ ಸಮಯದಲ್ಲಿ ಅವರೂ ಸಹ ಮರೆತುಹೋದರು. ಇದೂ ಸಹ ಡ್ರಾಮಾದಲ್ಲಿ ನಷ್ಟಮೋಹ ಅಗುವಂತಹ ಯಾವ ವಿಧಿ ನಿಗದಿಯಾಗಿತ್ತೋ, ಅದು ಪುನರಾವರ್ತನೆ ಯಾಯಿತು. ಏಕೆಂದರೆ ಸ್ವಲ್ಪ ತಮ್ಮ ಪರಿಶ್ರಮ ಮತ್ತು ಸ್ವಲ್ಪ ಡ್ರಾಮಾನುಸಾರ ಕರ್ಮಬಂಧನ ಮುಕ್ತರಾಗುವುದಕ್ಕೆ ಬಾಬಾರವರು ಸಹಯೋಗವನ್ನೂ ಕೊಡುತ್ತಾರೆ.

ಯಾರು ಬಹಳ ಕಾಲದ ಸಹಯೋಗಿ ಮಕ್ಕಳಿದ್ದಾರೋ, 'ಒಬ್ಬ ತಂದೆ ವಿನಹ ಅನ್ಯರು ಯಾರು ಇಲ್ಲ' ಎಂಬ ಈ ಮುಖ್ಯ ವಿಷಯದಲ್ಲಿ ಪಾಸಾಗಿದ್ದಾರೆ. ಹೀಗೇ 'ಒಬ್ಬ ತಂದೆ ಮಾತ್ರ ಇದ್ದಾರೆ ಎಂದು ಅನುಭವ ಮಾಡುವಂತಹವರಿಗೆ, ಅಂತಹ ಒಂದು ಸಮಯದಲ್ಲಿ ವಿಶೇಷವಾಗಿ ಬಾಬಾರವರು ಸಹಯೋಗವನ್ನು ಅವಶ್ಯವಾಗಿ ಕೊಡುತ್ತಾರೆ. ಇವರೆಲ್ಲರೂ ಕರ್ಮಾತೀತರಾಗಿಬಿಟ್ಟರೇ? ಇದೇ ಕರ್ಮಾತೀತ ಸ್ಥಿತಿಯೇ? ಎಂದು ಕೆಲವರು ಯೋಚಿಸುತ್ತಾರೆ. ಆದರೆ ಈ ರೀತಿ ಆದಿಯಿಂದ ಸಹಯೋಗಿ ಆಗಿರುವ ಮಕ್ಕಳಿಗೆ ಎಕ್ಸ್‌ಟ್ರಾ ಸಹಯೋಗ ದೊರೆಯುತ್ತದೆ. ಆದ್ದರಿಂದ ಒಂದುವೇಳೆ ತಮ್ಮ ಪರಿಶ್ರಮ ಕಡಿಮೆ ಕಂಡುಬಂದರೂ, ಅಂತ್ಯದ ಸಯಮದಲ್ಲಿ ಬಾಪ್‌ದಾದಾರವರ ಸಹಯೋಗವಾಗಿ ಹೆಚ್ಚಿನ ಮಾರ್ಕ್ಸ್‌ಗಳನ್ನು ಕೊಟ್ಟು ಪಾಸ್ ವಿಥ್ ಆನರ್ ಆಗಿ ಮಾಡಿಯೇ ಮಾಡುತ್ತಾರೆ. ಬಾಬಾರವರ ಸಹಯೋಗ ಗುಪ್ತವಾಗುತ್ತದೆ. ಆ ಕಾರಣದಿಂದ ಏಕೆ ಹೇಗಾಯಿತು? ಎನ್ನುವ ಪ್ರಶ್ನೆ ಏಳುತ್ತದೆ. ಆದರೆ ಇದು ಸಹಯೋಗದ ಪ್ರತಿಫಲವಾಗಿದೆ. ಹೇಗೆ 'ಭವಿಷ್ಯದಲ್ಲಿ ಕೆಲಸಕ್ಕೆ ಬರುತ್ತದೆ' ಎಂಬ ಹೇಳಿಕೆ ಇದೆಯಲ್ಲವೇ? ಯಾರು ಹೃದಯ ಪೂರ್ವಕವಾಗಿ ಸಹಯೋಗಿಗಳಾಗಿದ್ದರೋ ಅವರಿಗೆ ಅಂತಹ ಸಮಯದಲ್ಲಿ ಎಕ್ಸ್‌ಟ್ರಾ ಮಾರ್ಕ್ಸ್ ರಿಟರ್ನ್ (ಪ್ರತಿಫಲದ) ರೂಪದಲ್ಲಿ ಪ್ರಾಪ್ತಿಯಾಗುತ್ತದೆ. ಈ ರಹಸ್ಯವನ್ನು ತಿಳಿದುಕೊಂಡಿರಾ? ಆದ್ದರಿಂದ 'ನಷ್ಟಮೋಹದ ವಿಧಿ' ಯಿಂದ ಎಕ್ಸ್‌ಟ್ರಾ ಮಾರ್ಕ್ಸ್‌ನ ಗಿಫ್ಟ್‌ನಿಂದ (ಉಡುಗೊರೆಯಿಂದ) ಸಫಲತೆಯನ್ನು ಪ್ರಾಪ್ತಿ ಮಾಡಿಕೊಂಡರು. ಕೊನೆಗೆ ಏನಾಯಿತು ಎಂದು ಕೇಳುತ್ತಿದ್ದೀರಲ್ಲವೇ? ತಿಳಿಯಿತೇ. ಆದ್ದರಿಂದ ಈ ದಿನ ಈ ಆತ್ಮೀಕ ವಾರ್ತಾಲಾಪವನ್ನು ತಿಳಿಸುತ್ತಿದ್ದೇನೆ. ಒಳ್ಳೆಯದು – ದೀದೀಯವರು ಏನು ಹೇಳಿದರು? ಅವರ ಅನುಭವವನ್ನಂತೂ ಎಲ್ಲರೂ ತಿಳಿದೇ ಇದ್ದೀರಿ. ಅವರು 'ಸದಾ ತಂದೆ ಮತ್ತು ದಾದಾರವರ ಕೈಯನ್ನು ಹಿಡಿದುಕೊಳ್ಳಿ ಅಥವಾ ನಿಮ್ಮ ಕೈಯನ್ನು ಬಾಬಾರವರಿಗೆ ನೀಡಿ' ಎಂಬ ಇದೇ ಮಾತನ್ನು ಹೇಳುತ್ತಿದ್ದರು. ಬೇಕಾದರೆ ಮಗುವನ್ನಾಗಿ ಮಾಡಿಕೊಂಡು ಕೈಯನ್ನು ಹಿಡಿದುಕೊಳ್ಳಿ ಅಥವಾ ಬೇಕಾದರೆ ತಂದೆಯನ್ನಾಗಿ ಮಾಡಿಕೊಂಡು ಕೈಯನ್ನಾದರೂ ಕೊಡಿ. ಎರಡೂ ರೂಪದಲ್ಲಿ, ಪ್ರತಿ ಹೆಜ್ಜೆಯಲ್ಲಿ ಕೈಯನ್ನು ಹಿಡಿದುಕೊಂಡು, ಜೊತೆಯ ಅನುಭವ ಮಾಡುತ್ತಾ ನಡೆಯಬೇಕು. ಇದೇ ನನ್ನ ಸಫಲತೆಗೆ ಆಧಾರವಾಗಿದೆ ಎಂದು ಹೇಳುತ್ತಿದ್ದರು. ಇದೇ ವಿಶೇಷವಾದ ಆತ್ಮೀಕ ವಾರ್ತಾಲಾಪ ನಡೆಯಿತು. ಆದಿ ರತ್ನಗಳ ಸಂಘಟನೆಯಲ್ಲಿ ಅವರು ಹೇಗೆ ತಪ್ಪಿಸಿಕೊಳ್ಳಲು ಸಾಧ್ಯ? ಹಾಗಾಗಿ ಅವರೂ ಕೂಡ ಇಮರ್ಜ್ ಆಗಿದ್ದರು. ಒಳ್ಳೆಯದು. ಇದು ಅಡ್ವಾನ್ಸ್ ಪಾರ್ಟಿಯ ಮಾತುಗಳಾಗಿತ್ತು. ತಾವು ಏನು ಮಾಡುತ್ತೀರಿ?

ಶಕ್ತಿಯರು ಬಹಳಷ್ಟು ಇದ್ದಾರೆ. ಆದಿಯಲ್ಲಿ ಹೆಚ್ಚಾಗಿ ಶಕ್ತಿಯರೇ ನಿಮಿತ್ತರಾಗಿದ್ದರು. ಸುವರ್ಣ ಮಹೋತ್ಸವದಲ್ಲಿಯೂ ಸಹ ಶಕ್ತಿಯರೇ ಹೆಚ್ಚಾಗಿದ್ದರು. ಪಾಂಡವರು ಎಣಿಕೆ ಮಾತ್ರದಲ್ಲಿದ್ದರು. ಆದರೂ ಪಾಂಡವರೂ ಇದ್ದಾರೆ. ಒಳ್ಳೆಯದಾಯಿತು. ಆದಿಯಲ್ಲಿ ಧೈರ್ಯವನಿಟ್ಟು ಸಹನೆ ಮಾಡಿಕೊಂಡಿರುವ ರುಜುವಾತನ್ನು ತೋರಿಸಿರುವ ಆದಿರತ್ನಗಳು ಇವರೇ ಆಗಿದ್ದಾರೆ. ವಿಘ್ನ ವಿನಾಶಕರಾಗಿ, ನಿಮಿತ್ತರಾಗಿ, ಬೇರೆಯವರನ್ನು ನಿಮಿತ್ತರನ್ನಾಗಿ ಮಾಡುವಂತಹ ಕಾರ್ಯದಲ್ಲಿ ಅಮರರಾಗಿದ್ದಾರೆ. ಆದ್ದರಿಂದ ಬಾಪ್‌ದಾದಾ ರವರಿಗೂ ಅವಿನಾಶಿ ಅಮರಭವದ ವರದಾನಿ ಮಕ್ಕಳು ಸದಾ ಪ್ರಿಯರಾಗಿದ್ದಾರೆ. ಮತ್ತು ಈ ಆದಿರತ್ನಗಳು ಸ್ಥಾಪನೆಯಲ್ಲಿ ಅವಶ್ಯಕತೆಯ ಸಮಯದಲ್ಲಿ ಸಹಯೋಗಿಗಳಾಗಿದ್ದಾರೆ. ಆದ್ದರಿಂದ ಇಂತಹ ನಿಮಿತ್ತ ಆಗುವಂತಹ ಆತ್ಮಗಳಿಗೆ, ಅವಶ್ಯಕತೆಯ ಸಮಯದಲ್ಲಿ ಸಹಯೋಗಿಗಳಾಗುವ ಆತ್ಮಗಳಿಗೆ, ಅವರಿಗೆ ಯಾವಾಗಲಾದರೂ ಕಷ್ಟದ ಸಮಯ ಬಂದಲ್ಲಿ ಬಾಪ್‌ದಾದಾರವರು ಸಹ ಅವರಿಗೆ ಅದರ ಪ್ರತಿಫಲವನ್ನು ಕೊಡುತ್ತಾರೆ. ಆದ್ದರಿಂದ ತಾವು ಯಾರೆಲ್ಲಾ ಅಂತಹ ಸಮಯದಲ್ಲಿ ನಿಮಿತ್ತರಾಗಿದ್ದೀರೋ ಅವರಿಗೆ ಎಕ್ಸ್‌ಟ್ರಾ ಗಿಫ್ಟ್ ಡ್ರಾಮಾದಲ್ಲಿ ನಿಗದಿಯಾಗಿದೆ. ಹಾಗಾಗಿ ಎಕ್ಸ್‌ಟ್ರಾ ಗಿಫ್ಟ್ ಪಡೆಯಲು ಅಧಿಕಾರಿಗಳಾಗಿರುವಿರಿ. ತಿಳಿಯಿತೆ? ಮಾತೆಯರ ಚಿಕ್ಕ ಚಿಕ್ಕ ಹನಿ ಹನಿ ಸೇರಿದ ಕೆರೆಯಿಂದ ಸ್ಥಾಪನೆಯ ಕಾರ್ಯ ಆರಂಭವಾಯಿತು ಮತ್ತು ಈಗ ಸಫಲತೆಯ ಸಮೀಪ ಬಂದಿರುವಿರಿ. ಮಾತೆಯರದು ಹೃದಯ ಪೂರ್ವಕವಾದ ಸಂಪಾದನೆಯಾಗಿದೆ, ವ್ಯವಹಾರದ ಸಂಪಾದನೆಯಲ್ಲ. ಹೃದಯ ಪೂರ್ವಕವಾದ ಸಂಪಾದನೆ ಒಂದು ಸಾವಿರಕ್ಕೆ ಸಮ. ಸ್ನೇಹದ ಬೀಜವನ್ನು ಹಾಕಿದ್ದೀರಿ. ಆದ್ದರಿಂದ ಸ್ನೇಹದ ಬೀಜದ ಫಲವಾಗಿ ಫಸಲನ್ನು ಕೊಡುತ್ತಿದೆ. ಪಾಂಡವರೂ ಜೊತೆಯಲ್ಲಿ ಇದ್ದಾರೆ. ಪಾಂಡವರಿಲ್ಲದಿದ್ದರೂ ಕಾರ್ಯ ನಡೆಯುತ್ತಿರಲಿಲ್ಲ. ಆದರೆ ಹೆಚ್ಚಿನ ಸಂಖ್ಯೆ ಶಕ್ತಿಯರದಾಗಿದೆ. ಆದ್ದರಿಂದ ಪಂಚ ಪಾಂಡವರು ಎಂದು ಬರೆದಿದ್ದಾರೆ. ಆದರೂ ಪ್ರವೃತ್ತಿಯನ್ನು ನಿಭಾಯಿಸುತ್ತಾ, ಭಿನ್ನರಾಗಿ, ತಂದೆಗೆ ಪ್ರಿಯರಾಗಿ ಧೈರ್ಯ ಮತ್ತು ಉತ್ಸಾಹದ ಪ್ರತ್ಯಕ್ಷ ಪ್ರಮಾಣವನ್ನು ಕೊಟ್ಟಿದ್ದೀರಿ. ಹಾಗಾಗಿ ಪಾಂಡವರೂ ಕಡಿಮೆ ಏನಲ್ಲ. ತಂದೆಯನ್ನು ಶಕ್ತಿಯರ ಸರ್ವಶಕ್ತಿವಂತನೆಂದು ಗಾಯನ ಮಾಡಿದರೆ, ಪಾಂಡವರಿಗೆ ಪಾಂಡವ ಪತಿ ಎಂದು ಗಾಯನ

ಮಾಡಲಾಗಿದೆ. ಆದ್ದರಿಂದ ಹೇಗೆ ನಿಮಿತ್ತರಾಗಿದ್ದಿರೋ, ಅದೇ ರೀತಿಯಲ್ಲಿ ಈಗಲೂ ನಿಮಿತ್ತರಾಗಿದ್ದೇವೆ ಎಂಬುದನ್ನು ಸ್ಮೃತಿಯಲ್ಲಿಟ್ಟು ಕೊಂಡು ಮುಂದುವರೆಯುತ್ತಾ ಇರಿ. **(18.01.1986)**

ಹಾರುವ ಕಲೆಯು ಸರ್ವ ಆತ್ಮಗಳನ್ನು ಭಿಕಾರಿತನದಿಂದ ಬಿಡಿಸಿ ತಂದೆಯ ಆಸ್ತಿಗೆ ಅಧಿಕಾರಿಗಳನ್ನಾಗಿ ಮಾಡುವಂಹದ್ದಾಗಿದೆ. ನಮ್ಮೆಲ್ಲಾ ಆತ್ಮಗಳ ಇಷ್ಟ ದೇವ ಅಥವಾ ಇಷ್ಟ ದೇವಿಯರು ಅಥವಾ ನಿಮಿತ್ತರಾಗಿರುವಂತಹ ಅನೇಕ ದೇವತೆಗಳು, ಎಲ್ಲರೂ ಈ ಧರಣಿಯ ಮೇಲೆ ಅವತರಿತರಾಗಿದ್ದಾರೆ ಎಂದು ಎಲ್ಲಾ ಆತ್ಮಗಳು ಅನುಭವವನ್ನು ಮಾಡುತ್ತಾರೆ. ಸತ್ಯಯುಗದಲ್ಲಂತೂ ಎಲ್ಲರೂ ಸದ್ಗತಿಯಲ್ಲಿರುತ್ತಾರೆ ಆದರೆ ಈ ಸಮಯದಲ್ಲಿ ಯಾರೆಲ್ಲಾ ಆತ್ಮಗಳಿದ್ದೀರೋ ಎಲ್ಲರೂ ಸರ್ವರ ಸದ್ಗತಿದಾತ ಆಗಿದ್ದೀರಿ. ಹೇಗೆ ಯಾವುದೇ ಡ್ರಾಮಾವು ಸಮಾಪ್ತಿಯಾಗುತ್ತದೋ ಆಗ ಎಲ್ಲಾ ಪಾತ್ರಧಾರಿಗಳು ಸ್ಟೇಜ್‌ನ ಸಮ್ಮುಖದಲ್ಲಿ ಬರುತ್ತಾರೆ. ಹಾಗೆಯೇ ಈಗ ಕಲ್ಪದ ಡ್ರಾಮಾ ಸಮಾಪ್ತಿಯಾಗುವಂತಹ ಸಮಯವು ಬರುತ್ತಿದೆ. ಇಡೀ ವಿಶ್ವದ ಆತ್ಮಗಳಿಗೆ ಕನಸಿನ ಮೂಲಕವಿರಬಹುದು, ಒಂದು ಸೆಕೆಂಡಿನ ಹೊಳಪಿನ ಮೂಲಕವಿರಬಹುದು ಅಥವಾ ನಾಲ್ಕಾರು ಕಡೆಯ ಪ್ರತ್ಯಕ್ಷತೆಯ ಧ್ವನಿಯ ಮೂಲಕವಿರಬಹುದು 'ಡ್ರಾಮಾದ ಹೀರೋ ಪಾತ್ರಧಾರಿಗಳು ಸ್ಟೇಜಿನ ಮೇಲೆ ಪ್ರತ್ಯಕ್ಷರಾಗಿಬಿಟ್ಟರು, ಧರಣಿಯ ನಕ್ಷತ್ರಗಳು ಧರಣಿಯ ಮೇಲೆ ಪ್ರತ್ಯಕ್ಷವಾಗಿಬಿಟ್ಟಿದ್ದಾರೆ' ಎಂದು ಅವಶ್ಯವಾಗಿ ಸಾಕ್ಷಾತ್ಕಾರವಾಗಲೇ ಬೇಕಾಗಿದೆ. ಎಲ್ಲರೂ ತಮ್ಮ ತಮ್ಮ ಇಷ್ಟದೇವರನ್ನು ಪ್ರಾಪ್ತಿ ಮಾಡಿಕೊಂಡು ಬಹಳ ಖುಷಿಪಡುತ್ತಾರೆ, ಆಸರೆಯೂ ಪ್ರಾಪ್ತವಾಗುತ್ತದೆ.

**(ಎಲ್ಲರೂ ತಮ್ಮ ತಮ್ಮ ಸಂಖ್ಯೆಯನ್ನು ತಿಳಿಸಿದರು)**

ಅಂದರೆ ವೃದ್ಧಿಯನ್ನಂತೂ ಪ್ರಾಪ್ತಿ ಮಾಡಿಕೊಳ್ಳುತ್ತಿರುವಿರಿ. ಈಗ ವಿಶೇಷವಾಗಿ ಯಾವುದಾದರೂ ಸ್ಥಾನವು ಉಳಿದಿದೆಯೇ? (ಬಹಳ ಇದೆ) ಒಳ್ಳೆಯದು, ಅದಕ್ಕಾಗಿ ಪ್ಲಾನ್ ಮಾಡುತ್ತಿರುವಿರಲ್ಲವೇ? ವಿದೇಶಕ್ಕೆ ಈ ಲಿಫ್ಟ್ ಸಿಕ್ಕಿದೆ – ಬಹಳ ಸಹಜವಾಗಿ ಸೇವಾಕೇಂದ್ರವನ್ನು ತೆರೆಯುತ್ತಾರೆ. ಲೌಕಿಕ ಸೇವೆಯನ್ನು ಮಾಡಬಲ್ಲಿರಿ, ಅಲೌಕಿಕ ಸೇವೆಗೂ ನಿಮಿತ್ತರಾಗಬಲ್ಲಿರಿ. ಭಾರತದಲ್ಲಿ ವಿಶೇಷವಾಗಿ ನಿಮಂತ್ರಣ ಕೊಟ್ಟನಂತರ ಸೇವಾಕೇಂದ್ರವು ಸ್ಥಾಪನೆಯಾಗುವ ವಿಶೇಷತೆ ಇದೆ, ಆದರೆ ವಿದೇಶದಲ್ಲಿ ಸ್ವಯಂಗೆ ಸ್ವಯಂ ನಿಮಂತ್ರಣವನ್ನು ಕೊಡುತ್ತಾರೆ. ನಿಮಂತ್ರಣ ಕೊಡುವಂತಹವರೂ ಸ್ವಯಂ ಆಗಿರುತ್ತಾರೆ ಮತ್ತು ತಲುಪುವಂತಹವರೂ ಸಹ ಸ್ವಯಂ ಆಗಿರುತ್ತಾರೆ. ಇದೂ ಸೇವೆಯ ವೃದ್ಧಿಗೆ ಸಹಜವಾಗಿ ಒಂದು ಲಿಫ್ಟ್ ಸಿಕ್ಕಿದೆ. ಎಲ್ಲೇ ಹೋದರೂ ಸಹ ಇಬ್ಬರು  ಮೂವರು ಸೇರಿ ಸ್ಥಾಪನೆಗೆ ನಿಮಿತ್ತರಾಗ ಬಹುದಾಗಿದೆ ಮತ್ತು ನಿಮಿತ್ತ ಆಗುತ್ತಿರುತ್ತಾರೆ. ಇದನ್ನು ಡ್ರಾಮಾನುಸಾರವಾಗಿ ಗಿಫ್ಟ್ ಎಂದಾದರೂ ಹೇಳಬಹುದು ಅಥವಾ ಲಿಫ್ಟ್ ಎಂದಾದರೂ ಹೇಳಬಹುದು. ಏಕೆಂದರೆ ಸ್ವಲ್ಪ ಸಮಯದಲ್ಲಿ ಸೇವೆಯನ್ನು ಸಮಾಪ್ತಿ ಮಾಡಬೇಕು ಎಂದ ಮೇಲೆ ತೀವ್ರಗತಿಯಿಂದ ಮಾಡಿದಾಗ ಮಾತ್ರವೇ ಸಮಯಕ್ಕೆ ಸಮಾಪ್ತಿ ಮಾಡಲು ಸಾಧ್ಯವಾಗುತ್ತದೆ. ಭಾರತದ ವಿಧಿಗೂ ಹಾಗೂ ವಿದೇಶದ ವಿಧಿಗೂ ಅಂತರವಿದೆ. ಹಾಗಾಗಿ ವಿದೇಶದಲ್ಲಿ ಬಹಳ ಬೇಗ ವೃದ್ಧಿಯಾಗುತ್ತಿದೆ ಮತ್ತು ಆಗುತ್ತಲೇ ಇರುತ್ತದೆ. ಒಂದೇ ದಿನದಲ್ಲಿ ಬಹಳಷ್ಟು ಸೇವಾಕೇಂದ್ರಗಳನ್ನು ತೆರೆಯಬಹುದು. ನಾಲ್ಕಾರು ಕಡೆ ವಿದೇಶದಲ್ಲಿ ನಿಮಿತ್ತರಾಗಿರುವಂತಹ ವಿದೇಶಿಯರಿಗೆ ಸೇವೆಯ ಅವಕಾಶ ಬಹಳ ಸಹಜವಾಗಿ ದೊರೆತಿದೆ. ಭಾರತದವರಿಗೆ ವೀಸಾ ಸಿಗುವುದು ಸಹ ಬಹಳ ಕಷ್ಟ. ಅಂದಮೇಲೆ ಅಲ್ಲಿರುವಂತಹವರೇ ಅಲ್ಲಿನ ಸೇವೆಗೆ ನಿಮಿತ್ತರಾಗುವ ಚಾನ್ಸ್ ಸಿಕ್ಕಿದೆ. ಹೇಗೆ ಲಾಸ್ಟ್ ಸೋ ಫಾಸ್ಟ್ ಹೋಗುವ ಅವಕಾಶವಿದೆಯೋ ಹಾಗೆಯೇ ಸೇವೆಯ ಚಾನ್ಸ್‌ನಲ್ಲೂ ಫಾಸ್ಟ್ ಆಗಿ ಹೋಗುವ ಅವಕಾಶ ಸಿಕ್ಕಿದೆ. ಆದ್ದರಿಂದ 'ನಾವು ಕೊನೆಯಲ್ಲಿ ಬಂದಿದ್ದೇವೆ' ಎಂಬ ಆಕ್ಷೇಪಣೆ ಮಾಡಲು ಸಾಧ್ಯವಿಲ್ಲ. ಕೊನೆಯಲ್ಲಿ ಬರುವಂತಹವರಿಗೂ ಫಾಸ್ಟ್ ಆಗಿ ಹೋಗುವಂತಹ ಅವಕಾಶ ವಿಶೇಷವಾಗಿ ಸಿಕ್ಕಿದೆ. ಇದಕ್ಕಾಗಿ ಪ್ರತಿಯೊಬ್ಬರೂ ಸೇವಾಧಾರಿಯಾಗಿದ್ದೀರಿ. ಎಲ್ಲರೂ ಸೇವಾಧಾರಿಗಳಾಗಿರುವಿರಾ ಅಥವಾ ಸೆಂಟರ್‌ನಲ್ಲಿ ಇರುವಂತಹ ಸೇವಾಧಾರಿಗಳಾಗಿರುವಿರಾ? ಎಲ್ಲೇ ಇದ್ದರೂ ಸೇವೆಯ ವಿನಹ ಶಾಂತಿ ಸಿಗಲು ಸಾಧ್ಯವಿಲ್ಲ. ಸೇವೆಯೇ ಶಾಂತಿಯಿಂದ ನಿದ್ರೆ ಮಾಡುವ ಸಾಧನವಾಗಿದೆ. ಶಾಂತಿಯಿಂದ ನಿದ್ರಿಸುವುದೇ ಜೀವನವೆಂದು ಹೇಳುತ್ತಾರೆ. ಸೇವೆಯೇ ಶಾಂತಿಯಿಂದ ನಿದ್ರಿಸುವುದೆಂದಾರೂ ಹೇಳಿರಿ ಅಥವಾ ಚಿನ್ನವೆಂದಾದರೂ ಹೇಳಿರಿ. ಇಲ್ಲದಿದ್ದರೆ ಶಾಂತಿಯಿಂದ ನಿದ್ರೆ ಮಾಡಲು ಸಾಧ್ಯವಾಗುವುದಿಲ್ಲ. ಕೇವಲ ವಾಣಿಯಿಂದಷ್ಟೇ ಮಾಡುವ ಸೇವೆಯಲ್ಲ ಪ್ರತಿ ಸೆಕೆಂಡೂ ಸಹ ಸೇವೆಯಾಗಿದೆ ಎಂದು ತಿಳಿಸಿದೆನಲ್ಲವೇ? ಪ್ರತಿ ಸಂಕಲ್ಪದಲ್ಲಿಯೂ ಸೇವೆ ಇದೆ. ಭಾರತವಾಸಿಗಳಾಗಿರಬಹುದು, ವಿದೇಶದವರಾಗಬಹುದು ಯಾವ ಬ್ರಾಹ್ಮಣ ಮಗುವೂ ಸಹ ಸೇವೆಯ ಅವಕಾಶ ಇಲ್ಲವೆಂದು ಹೇಳಲಾಗುವುದಿಲ್ಲ. ಕಾಯಿಲೆಯಿಂದ ಇದ್ದರೂ ಮನಸಾ ಸೇವೆ, ವೈಬ್ರೇಷನ್ ಮಾಡುವಂತಹ ಸೇವೆ,

ವೈಬ್ರೇಷನ್ ಅನ್ನು ಹರಡಿಸುವಂತಹ ಸೇವೆಯನ್ನು ಮಾಡಬಹುದಾಗಿದೆ. ಯಾವುದೇ ಪ್ರಕಾರದ ಸೇವೆಯನ್ನು ಮಾಡಿ, ಆದರೆ ಸೇವೆಯಲ್ಲೇ ಇರಬೇಕಾಗಿದೆ. ಸೇವೆಯೇ ಜೀವನವಾಗಿದೆ. ಬ್ರಾಹ್ಮಣರ ಅರ್ಥವೇ ಸೇವಾಧಾರಿಗಳಾಗುವುದಾಗಿದೆ. **(20–02–1986)**

ಇಂದು ಯುರೋಪಿನ ಟರ್ನ್ ಆಗಿದೆ. ಯೂರೋಪ್ ಬಹಳ ಚೆನ್ನಾಗಿ ವಿಸ್ತಾರ ಮಾಡಿದ್ದಾರೆ. ಯೂರೋಪ್ ತನ್ನ ಅಕ್ಕ ಪಕ್ಕದ ದೇಶಗಳ ಕಲ್ಯಾಣಕ್ಕಾಗಿ ಒಳ್ಳೆಯ ಪ್ಲಾನ್ ಅನ್ನು ಮಾಡಿದೆ. ಹೇಗೆ ತಂದೆಯು ಸದಾ ಕಲ್ಯಾಣಕಾರಿ ಯಾಗಿದ್ದಾರೋ ಹಾಗೆಯೇ ಮಕ್ಕಳೂ ಸಹ ತಂದೆಯ ಸಮಾನ ಕಲ್ಯಾಣದ ಭಾವನೆಯನ್ನು ಇಡುವಂತವರಾಗಿದ್ದಾರೆ. ಈಗ ಯಾರನ್ನಾದರೂ ನೋಡಿದರೆ 'ಇವರೂ ಸಹ ತಂದೆಯ ಮಗುವಾಗಲಿ' ಎಂದು ದಯೆ ಬರುತ್ತದೆಯಲ್ಲವೇ? ನೋಡಿ ಬಾಪ್‌ದಾದಾರವರು ಸ್ಥಾಪನೆಯ ಸಮಯದಿಂದ ಹಿಡಿದು ವಿದೇಶದ ಎಲ್ಲಾ ಮಕ್ಕಳನ್ನು ಒಂದಲ್ಲಾ ಒಂದು ರೂಪದಲ್ಲಿ ನೆನಪು ಮಾಡುತ್ತಿದ್ದಾರೆ. ಮತ್ತು ಬಾಪ್‌ದಾದಾರವರ ನೆನಪಿನಿಂದ ಸಮಯ ಬಂದಾಗ ನಾಲ್ಕಾರು ಕಡೆಯ ಮಕ್ಕಳು ತಲುಪಿಬಿಟ್ಟಿದ್ದಾರೆ. ಆದರೆ ಬಾಪ್‌ದಾದಾರವರು ಬಹಳ ಸಮಯದಿಂದ ಆಹ್ವಾನವನ್ನು ಮಾಡಿದ್ದಾರೆ. ಆಹ್ವಾನದ ಕಾರಣ ಮಕ್ಕಳಾದ ತಾವೂ ಅಯಸ್ಕಾಂತದಂತೆ ಆಕರ್ಷಿತರಾಗಿ ಬಂದು ತಲುಪಿಬಿಟ್ಟಿರಿ. 'ನಾವು ಹೇಗೆ ತಂದೆಯ ಮಕ್ಕಳಾಗಿ ಬಿಟ್ಟೆವು ತಿಳಿದೇ ಇಲ್ಲ ಎಂದು ಅನಿಸುತ್ತದೆಯಲ್ಲವೆ? ಆಗಿಬಿಟ್ಟೆವು ಎಂದ ಮೇಲೆ ಚೆನ್ನಾಗಿಯೇ ಅನಿಸುತ್ತದೆ, ಆದರೆ ಏನಾಯಿತು, ಹೇಗಾಯಿತು ಇದನ್ನು ಕುಳಿತು ಯೋಚಿಸಿದರೆ ಬಹಳ ವಿಚಿತ್ರವೆಂದೂ ಅನಿಸುತ್ತದೆಯಲ್ಲವೇ? ಡ್ರಾಮಾದಲ್ಲಂತೂ ಪಾತ್ರವು ನಿಗದಿಯಾಗಿತ್ತು. ಡ್ರಾಮಾದ ನಿಗದಿಯು ಎಲ್ಲರನ್ನೂ ಮೂಲೆ ಮೂಲೆಯಿಂದ ಹೊರತೆಗೆದು ಒಂದು ಪರಿವಾರಕ್ಕೆ ತಲುಪಿಸಿಬಿಟ್ಟಿತು. ಈಗ ಇದೇ ನಮ್ಮ ಪರಿವಾರ ಎಂದು ಅನಿಸುವ ಕಾರಣ ಅತೀ ಪ್ರಿಯ ವೆನಿಸುತ್ತದೆ. ತಂದೆಯು ಪ್ರಿಯಾತಿ ಪ್ರಿಯರಂತೂ ಆಗಿದ್ದಾರೆ ಅದೇ ರೀತಿಯಲ್ಲಿ ತಾವೆಲ್ಲರೂ ಸಹ ಪ್ರಿಯರಾಗಿದ್ದೀರಿ. ತಾವೂ ಸಹ ಕಡಿಮೆ ಏನಲ್ಲ. ತಾವೆಲ್ಲರು ಬಾಪ್‌ದಾದಾರವರ ಸಂಗದ ರಂಗಿನಲ್ಲಿ ಅತಿಪ್ರಿಯರಾಗಿ ಬಿಟ್ಟಿದ್ದೀರಿ. ಯಾರನ್ನೇ ನೋಡಿದರೂ ಪ್ರತಿಯೊಬ್ಬರೂ ಮತ್ತೊಬ್ಬರಿಗಿಂತ ಪ್ರಿಯರೆನಿಸುತ್ತಾರೆ. ಪ್ರತಿಯೊಬ್ಬರ ಚೆಹರೆಯಲ್ಲಿ ಆತ್ಮೀಯತೆಯ ಪ್ರಭಾವ ಕಂಡುಬರುತ್ತದೆ. **(10–03–1986)**

ತಂದೆಯ ಜೊತೆಯಲ್ಲಿ ಹೋಲಿಯನ್ನು ಆಚರಿಸುವುದು ಎಂದರೆ ಅವಿನಾಶಿ ಆತ್ಮೀಯ ರಂಗಿನಲ್ಲಿ ತಂದೆಯ ಸಮಾನ ಆಗುವುದಾಗಿದೆ. ಆ ಜನರಂತೂ ಉದಾಸೀನರಾಗಿರುವ ಕಾರಣದಿಂದ ಖುಷಿಯನ್ನು ಆಚರಿಸು ವುದಕ್ಕಾಗಿ ಈ ದಿನವನ್ನು ಇಟ್ಟಿದ್ದಾರೆ. ಆದರೆ ಮಕ್ಕಳಾದ ತಾವು ಸದಾ ಖುಷಿಯಲ್ಲಿ ನರ್ತಿಸುತ್ತಾ, ಹಾಡುತ್ತಾ ಮೋಜನ್ನು ಆಚರಿಸುತ್ತೀರಿ. ಯಾರು 'ಏನಾಯಿತು, ಏಕಾಯಿತು, ಹೇಗಾಯಿತು' ಎಂಬ ಬಹಳ ಗೊಂದಲ್ಲಿರುತ್ತಾರೋ, ಅವರು ಮೋಜಿನಲ್ಲಿರಲು ಸಾಧ್ಯವಿಲ್ಲ. ತಾವು ತ್ರಿಕಾಲದರ್ಶಿಗಳಾಗಿ ಬಿಟ್ಟಿರುವ ಕಾರಣ 'ಏನು, ಏಕೆ, ಹೇಗೆ' ಎಂಬ ಸಂಕಲ್ಪವು ಉತ್ಪನ್ನವಾಗುವುದೇ ಇಲ್ಲ. ಏಕೆಂದರೆ ಮೂರೂ ಕಾಲಗಳನ್ನು ತಿಳಿದುಕೊಂಡಿದ್ದೀರಿ. ಪರೀಕ್ಷೆ ಬಂದಿದೆ ನಮ್ಮನ್ನು ಮುಂದುವರಿಸುವುದಕ್ಕಾಗಿ ಎಂದು ತಿಳಿದುಕೊಂಡಿದ್ದೀರಿ. ಏನು ಆಯಿತು? ನಥಿಂಗ್ ನ್ಯೂ. ಅಂದಮೇಲೆ ಏನಾಯಿತು ಎಂಬ ಪ್ರಶ್ನೆಯೇ ಇಲ್ಲ. ಹೇಗಾಯಿತು? ಮಾಯೆ ಮತ್ತಷ್ಟು ಶಕ್ತಿಶಾಲಿಗಳನ್ನಾಗಿ ಮಾಡಲು ಬಂತು ಮತ್ತು ಹೋಯಿತು. ತ್ರಿಕಾಲದರ್ಶಿ ಸ್ಥಿತಿಯಲ್ಲಿರುವವರು ಇದರಲ್ಲಿ ಗೊಂದಲದಲ್ಲಿ ಬರುವುದಿಲ್ಲ. ಪ್ರಶ್ನೆಯ ಜೊತೆ ಜೊತೆಗೆ ಉತ್ತರವೂ ಸಹ ಮೊದಲೇ ಬಂದು ಬಿಡುತ್ತದೆ. ಏಕೆಂದರೆ ತ್ರಿಕಾಲದರ್ಶಿಗಳಾಗಿರುವಿರಿ. ಹೆಸರೇ ತ್ರಿಕಾಲದರ್ಶಿ ಅಂದಮೇಲೆ ವರ್ತಮಾನವನ್ನು ತಿಳಿಯದೆ ಏಕೆ ಆಯಿತು, ಹೇಗೆ ಆಯಿತು ಎಂದು ಹೇಳಿದರೆ ಅವರಿಗೆ ತ್ರಿಕಾಲದರ್ಶಿಗಳೆಂದು ಹೇಳಲಾಗುವುದಿಲ್ಲ. ಅನೇಕ ಸಲ ವಿಜಯಿಗಳಾಗಿರುವಿರಿ ಮತ್ತು ಆಗುವವರೂ ಸಹ ಆಗಿದ್ದೀರಿ. ನಾವೇ ಬ್ರಾಹ್ಮಣರಿಂದ ಫರಿಸ್ತಾ ಮತ್ತು ಫರಿಸ್ತೆಯಿಂದ ದೇವತೆಯಾಗಿ ಆಗುವಂತವರು ಎಂದು ಭೂತಕಾಲ ಮತ್ತು ಭವಿಷ್ಯವನ್ನೂ ತಿಳಿದಿರುವಿರಿ. ಇಂದಿನ ಮತ್ತು ನಾಳೆಯ ಮಾತಾಗಿದೆ. ಪ್ರಶ್ನೆಯು ಸಮಾಪ್ತಿಯಾಗಿ ಫುಲ್ ಸ್ಟಾಪ್ ಬಂದು ಬಿಡುತ್ತದೆ. ಹೋಲಿಯ ಅರ್ಥವೇ ಆಗಿದೆ "ಹೋಲಿ" ಕಳೆದದ್ದು ಕಳೆದು ಹೋಯಿತು. ಇಂತಹ ಬಿಂದು ಹಾಕಲು ಬರುತ್ತದೆಯೆ? ಇದೇ ಹೋಲಿಯ ಅರ್ಥವಾಗಿದೆ. **(25–03–1986)**

ಬಾಪ್‌ದಾದಾರವರು ಎಲ್ಲಾ ಮಕ್ಕಳ ಹೃದಯದ ಉಮ್ಮಂಗ ಉತ್ಸಾಹವನ್ನು ನೋಡುತ್ತಿದ್ದಾರೆ. ಪ್ರತಿಯೊಬ್ಬರ ಮನಸ್ಸಿನಲ್ಲಿ ಸ್ನೇಹ ಸಾಗರನ ಅಲೆಗಳು ಬರುತ್ತಿದೆ. ಇದನ್ನು ಬಾಪ್‌ದಾದಾರವರು ನೋಡುತ್ತಲೂ ಇದ್ದಾರೆ ಮತ್ತು ತಿಳಿದೂ ಸಹ ಇದ್ದಾರೆ. ತಂದೆಯ ಜೊತೆಗಿನ ಲಗನ್ ವಿಘ್ನವಿನಾಶಕರನ್ನಾಗಿ

ಮಾಡಿ ಮಧುವನ ನಿವಾಸಿಯನ್ನಾಗಿ ಮಾಡಿದೆ. ಎಲ್ಲರ ಎಲ್ಲಾ ಮಾತುಗಳು ಸ್ನೇಹದಲ್ಲಿ ಸಮಾಪ್ತಿಯಾಗಿದೆ. ಎವರ್‌ರೆಡಿಯ ರಿಹರ್ಸಲ್‌ನ್ನು ಸಹ ನೋಡಿರುವಿರಿ. ಎವರ್‌ರೆಡಿಯಾಗಿರುವಿರೇ? ಈ ಮಧುರ ಡ್ರಾಮಾದ ಮಧುರ ಪಾತ್ರವನ್ನು ನೋಡಿ ಬಾಪ್‌ದಾದಾ ಮತ್ತು ಬ್ರಾಹ್ಮಣರ ಮಕ್ಕಳು ಹರ್ಷಿತರಾಗುತ್ತಿದ್ದಾರೆ. ಸ್ನೇಹದ ಹಿಂದೆ ಎಲ್ಲಾ ಮಾತುಗಳು ಸಹಜ ಮತ್ತು ಪ್ರಿಯವೆನಿಸುತ್ತದೆ. ಯಾವ ಡ್ರಾಮಾ ತಯಾರಾಗಿದೆಯೋ ಅದು ವಾಹ್ ಡ್ರಾಮಾ ವಾಹ್! ಎಷ್ಟೊಂದು ಸಲ ಈ ರೀತಿಯಾಗಿ ಓಡಿ ಓಡಿ ಬಂದಿದ್ದೀರಿ, ಟ್ರೈನ್‌ನಲ್ಲಿ ಬಂದಿದ್ದೀರಿ ಅಥವಾ ವಿಮಾನದಿಂದ ಹಾರಿ ಬಂದಿದ್ದೀರಿ. ಇದಕ್ಕೇ 'ಎಲ್ಲಿ ಮನಸ್ಸಿರುತ್ತದೋ ಅಲ್ಲಿ ಅಸಂಭವವೂ ಸಹ ಸಂಭವವಾಗಿ ಬಿಡುತ್ತದೆ' ಎಂದು ಹೇಳಲಾಗುವುದು. ಸ್ನೇಹದ ಸ್ವರೂಪವಂತೂ ತೋರಿಸಿದಿರಿ. ಈಗ ಮುಂದೆ ಏನು ಮಾಡಬೇಕಾಗಿದೆ. ಇಲ್ಲಿಯವರೆಗೂ ಏನೆಲ್ಲಾ ಆಯಿತು ಅದು ಶ್ರೇಷ್ಠ ಮತ್ತು ಶ್ರೇಷ್ಠವೇ ಆಗಿರುತ್ತದೆ.

ಹೇಗೆ ಓಡಿ ಓಡಿ ಬಂದು ಮಧುಬನವನ್ನು ತಲುಪಿಬಿಟ್ಟಿರೋ ಹಾಗೆಯೇ ತಪಸ್ವೀ ಸ್ಥಿತಿಯ ಗುರಿಯ ಕಡೆಗೆ ಓಡಿರಿ. ಒಳ್ಳೆಯದು, ಭಲೇ ಬನ್ನಿರಿ. ಎಲ್ಲರೂ ಈಗ ವಿನಾಶವಾಗುವಂತೆ ಓಡಿದರು. ಏನು ಮಾಡಿದಿರೋ, ಏನಾಯಿತೋ, ಹೇಗಾಯಿತೋ ಅದೂ ಬಾಪ್‌ದಾದಾರವರಿಗೆ ಪ್ರಿಯವಾಗಿದೆ. ಏಕೆಂದರೆ ಮಕ್ಕಳೆಂದರೆ ತಂದೆಗೆ ಪ್ರಿಯರು. ಪ್ರತಿಯೊಬ್ಬರೂ 'ನಾವು ಹೋಗುತ್ತಿದ್ದೇವೆ' ಎಂದು ಯೋಚಿಸುತ್ತಾರೆ. ಆದರೆ 'ಮತ್ತೊಬ್ಬರು ಬರುತ್ತಿದ್ದಾರೆ' ಎಂಬುದನ್ನು ಯೋಚಿಸಲೇ ಇಲ್ಲ. ಸತ್ಯವಾದ ಕುಂಭಮೇಳವಂತೂ ಇಲ್ಲಿ ಆಯಿತು. ಎಲ್ಲರೂ ಅಂತಿಮ ಮಿಲನ ಮಾಡಲು, ಅಂತಿಮ ಮುಳುಗನ್ನು ಹಾಕಲು ಬಂದಿದ್ದಾರೆ. ಇಷ್ಟೆಲ್ಲಾ ಜನರು ಹೋಗುತ್ತಿದ್ದಾರೆ ಎಂದ ಮೇಲೆ ಮಿಲನದ ವಿಧಿ ಹೇಗೆ ಇರುತ್ತದೆಯೋ ಎಂದು ಯೋಚಿಸುವುದು, ಈ ಪ್ರಶ್ನೆಯಿಂದಲೂ ಭಿನ್ನವಾಗಿರುವಿರಲ್ಲವೇ? ಸ್ಥಾನವನ್ನೂ ನೋಡಲಿಲ್ಲ, ರಿಸರ್ವೇಷನ್ ಅನ್ನೂ ನೋಡಲಿಲ್ಲ. ಎಂದೂ ಸಹ ರಿಸರ್ವೇಷನ್ ಸಿಗಲಿಲ್ಲವೆಂಬ ನೆಪವನ್ನೂ ಹೇಳಲಾಗುವುದಿಲ್ಲ. ಡ್ರಾಮಾದಲ್ಲಿ ಇದು ಸಹ ಒಂದು ರಿಹರ್ಸಲ್ ಆಯಿತು. ಸಂಗಮಯುಗದಲ್ಲಿ ತಮ್ಮ ರಾಜ್ಯವಿಲ್ಲ. ಸ್ವರಾಜ್ಯವಿದೆ. ಆದರೆ ಭೂಮಿಯ ಮೇಲೆ ರಾಜ್ಯವಿಲ್ಲ, ಬಾಪ್‌ದಾದಾರವರಿಗೂ ಸ್ವಯಂಗೆ ರಥವಿಲ್ಲ, ಅನ್ಯರ ಶರೀರವಾಗಿದೆ. ಅದಕ್ಕಾಗಿ ಸಮಯಾನುಸಾರ ಹೊಸ ವಿಧಿಯನ್ನು ಆರಂಭ ಮಾಡುವುದಕ್ಕಾಗಿ ಸೀಜನ್ ಆಗಿದೆ. ಇಲ್ಲಿ ನೀರಿನ ಬಗ್ಗೆಯೂ ಯೋಚಿಸಬೇಕಾಗುತ್ತದೆ. ಆದರೆ ಅಲ್ಲಿ ನೀರಿನ ಹೊಳೆಗಳಲ್ಲಿ ಸ್ನಾನವನ್ನು ಮಾಡುವಿರಿ. ಯಾರೆಲ್ಲಾ, ಎಷ್ಟೆಲ್ಲಾ ಬಂದಿರುವಿರೋ ಬಾಪ್‌ದಾದಾರವರು ಸ್ನೇಹದ ಪ್ರತ್ಯುತ್ತರವಾಗಿ ಎಲ್ಲಾ ಮಕ್ಕಳಿಗೂ ಸ್ನೇಹದಿಂದ ಸ್ವಾಗತವನ್ನು ಮಾಡುತ್ತಾರೆ. **(07–04–1986)**

ಸದಾ ತಮ್ಮನ್ನು ತಾವು ಅಚಲ – ಅಡೋಲ ಆತ್ಮಗಳೆಂದು ಅನುಭವ ಮಾಡುವಿರೇ? ಯಾವುದೇ ಪ್ರಕಾರದ ಗೊಂದಲದಲ್ಲಿಯೂ ಅಚಲರಾಗಿ ಇರುವುದೇ ಶ್ರೇಷ್ಠ ಬ್ರಾಹ್ಮಣ ಆತ್ಮಗಳ ಗುರುತಾಗಿದೆ. ಪ್ರಪಂಚದವರು ಗೊಂದಲದಲ್ಲಿದ್ದಾರೆ, ಆದರೆ ಶ್ರೇಷ್ಠ ಆತ್ಮಗಳಾದ ತಾವು ಗೊಂದಲದಲ್ಲಿ ಬರಲು ಸಾಧ್ಯವಿಲ್ಲ. ಏಕೆ? ಡ್ರಾಮಾದ ಪ್ರತಿ ದೃಶ್ಯವನ್ನೂ ತಿಳಿದಿರುವಿರಿ. ಜ್ಞಾನಪೂರ್ಣರಾಗಿರುವಿರಿ. ಯಾರು ಜ್ಞಾನಪೂರ್ಣರಾಗಿರುತ್ತಾರೋ ಅವರು ಶಕ್ತಿಶಾಲಿಗಳೂ ಸಹ ಆಗಿರುತ್ತಾರೆ. ಅಂದಮೇಲೆ ಜ್ಞಾನೀ ಆತ್ಮಗಳು, ಶಕ್ತಿಶಾಲಿ ಆತ್ಮಗಳು ಸದಾ ಸ್ವತಃವಾಗಿ ಅಚಲರಾಗಿರುತ್ತಾರೆ. ಅಂದಾಗ ಎಂದಿಗೂ ಸಹ ವಾಯುಮಂಡಲದಿಂದ ಗಾಬರಿಯಾಗುವುದಿಲ್ಲತಾನೇ? ನಿರ್ಭಯರಾಗಿರುವಿರಾ? ಶಕ್ತಿಯರು ನಿರ್ಭಯ ರಾಗಿರುವಿರಾ? ಅಥವಾ ಸ್ವಲ್ಪ ಸ್ವಲ್ಪ ಭಯವೆನಿಸುತ್ತದೆಯೇ? ಏಕೆಂದರೆ ಸ್ಥಾಪನೆಯ ಸಮಯದಲ್ಲೇ ಭಾರತದಲ್ಲಿ ಸಿವಿಲ್ ವಾರ್ (ಅಂತರ್ಯುದ್ಧ) ಆಗುತ್ತದೆ ಎಂದು ತಿಳಿದಿರುವಿರಿ. ಇದನ್ನು ಪ್ರಾರಂಭದ ತಮ್ಮ ಚಿತ್ರಗಳಲ್ಲಿ ತೋರಿಸಲಾಗಿದೆ. ಏನು ತೋರಿಸಲಾಗಿದೆಯೋ ಅದಂತೂ ಆಗಬೇಕಲ್ಲವೇ? ಭಾರತದ ಪಾತ್ರವೇ ಸಿವಿಲ್ ವಾರ್‌ನ ಜೊತೆಯಲ್ಲಿ ಇದೆ. ಹಾಗಾಗಿ ನಥಿಂಗ್ ನ್ಯೂ. ನಥಿಂಗ್ ನ್ಯೂ ಆಗಿರುವಿರಾ ಅಥವಾ ಗಾಬರಿಯಾಗುವಿರಾ? ಏಕೆ ಆಯಿತು, ಹೇಗೆ ಆಯಿತು, ಇದು ಆಯಿತು..... ಸಮಾಚಾರವನ್ನು ಕೇಳುತ್ತಿದ್ದರೂ, ನೋಡುತ್ತಿದ್ದರೂ ತಯಾರಾಗಿರುವ ಡ್ರಾಮಾದ ನಿಗಧಿಯನ್ನು ಶಕ್ತಿಶಾಲಿಯಾಗಿ ನೋಡುವ ಮತ್ತು ಎಲ್ಲರಿಗೂ ಶಕ್ತಿಯನ್ನು ಕೊಡುವ ಕೆಲಸ ತಮ್ಮದಾಗಿದೆಯಲ್ಲವೇ? ಪ್ರಪಂಚದವರು ಗಾಬರಿಯಾಗುತ್ತಾರೆ ಆದರೆ ತಾವು ಆ ಆತ್ಮಗಳಿಗೆ ಶಕ್ತಿಯನ್ನು ತುಂಬಿಸುತ್ತೀರಿ. ಯಾರೇ ನಿಮ್ಮ ಸಂಪರ್ಕದಲ್ಲಿ ಬಂದರೂ ಅವರೆಲ್ಲರಿಗೂ ಶಕ್ತಿಗಳ ದಾನವನ್ನು, ಶಾಂತಿಯ ದಾನವನ್ನು ನೀಡುತ್ತಾ ಹೋಗಿರಿ. **(09–04–1986)**

ಏನಾದರೂ ಹೊಸ ಮಾತನ್ನು ಮಾಡುತ್ತಿರುವಿರೇ? ಅನೇಕ ಸಲ ಆಗಿರುವಂತಹ ಮಾತಿಗೆ ಕೇವಲ ಗೆರೆಯ ಮೇಲೆ ಗೆರೆಯನ್ನು ಎಳೆಯುತ್ತಿರುವಿರಿ ಅಷ್ಟೇ ಅಲ್ಲವೇ? ಡ್ರಾಮಾದ ಗೆರೆ ಎಳೆಯಲ್ಪಟ್ಟಿದೆ.

ಹೊಸ ಗೆರೆಯನ್ನೇನೂ ಹಾಕುತ್ತಿಲ್ಲ. ನೇರವಾಗಿ ಬರುತ್ತದೆಯೋ ಅಥವಾ ಇಲ್ಲವೋ ಎಂದು ಯೋಚಿಸುವುದಿಲ್ಲ. ಕಲ್ಪ ಕಲ್ಪವೂ ತಯಾರಾಗಿರುವಂತಹ ಪ್ರಾಲಬ್ಧವನ್ನು ಕೇವಲ ತಯಾರು ಮಾಡುತ್ತಿರುವಿರಿ. ಏಕೆಂದರೆ ಕರ್ಮಫಲದ ಲೆಕ್ಕಾಚಾರವಿದೆ. ಉಳಿದಂತೆ ಹೊಸ ಮಾತೇನಿದೆ? 'ಇದಂತೂ ಬಹಳ ಹಳೆಯ ಮಾತಾಗಿದೆ, ಆಗಿ ಹೋಗಿದೆ ಎಂಬುದೇ ಅಟಲವಾದ ನಿಶ್ಚಯವಾಗಿದೆ. ಇದನ್ನೇ ದೃಢತೆ ಎಂದು ಹೇಳಲಾಗುತ್ತದೆ. ಇವರಿಗೇ ತಪಸ್ವೀ ಮೂರ್ತಿಗಳೆಂದು ಹೇಳಲಾಗುತ್ತದೆ. ಪ್ರತಿ ಸಂಕಲ್ಪದಲ್ಲೂ ದೃಢತೆ ಇರುವುದು' ಎನ್ನುವುದೇ ತಪಸ್ಸಾಗಿದೆ. **(11–04–1986)**

ಈ ಮೇಳಾವೂ ಸಹ ಡ್ರಾಮಾದಲ್ಲಿ ನಿಗದಿಯಾಗಿದೆ. ವಾಹ್ ಡ್ರಾಮಾ ಮಾಡುತ್ತಿರುವಿರಲ್ಲವೇ? ಅನ್ಯರು ಒಮ್ಮೊಮ್ಮೆ ಅಯ್ಯೋ ಡ್ರಾಮಾ ಎನ್ನುತ್ತಾರೆ, ಒಮ್ಮೊಮ್ಮೆ ವಾಹ್ ಡ್ರಾಮಾ ಎನ್ನುತ್ತಾರೆ. ಆದರೆ ತಾವು ಸದಾ ಏನನ್ನು ಹೇಳುವಿರಿ? ವಾಹ್ ಡ್ರಾಮಾ! ವಾಹ್! ಯಾವಾಗ ಪ್ರಾಪ್ತಿಯಾಗುತ್ತದೋ, ಪ್ರಾಪ್ತಿಯ ಮುಂದೆ ಯಾವುದೂ ಸಹ ಕಷ್ಟವೆನಿಸುವುದಿಲ್ಲ. ಅಂದಮೇಲೆ ಇಷ್ಟೊಂದು ಶ್ರೇಷ್ಠ ಪರಿವಾರದ ಜೊತೆಯಲ್ಲಿ ಮಿಲನ ಮಾಡುವ ಪ್ರಾಪ್ತಿ ಆಗುತ್ತಿರುವಾಗ ಯಾವುದೇ ಕಷ್ಟವೂ ಸಹ ಕಷ್ಟಕರವೆನಿಸುವುದಿಲ್ಲ. ಕಷ್ಟವೆನಿಸುತ್ತದೆಯೇ? ತಿನ್ನುವ ಸಮಯದಲ್ಲಿ ನಿಲ್ಲಬೇಕಾಗುತ್ತದೆಯೇ? ತಿನ್ನುವ ಸಮಯದಲ್ಲೂ ಸಹ ಪ್ರಭುವಿನ ಗುಣಗಳನ್ನು ಗಾಯನಮಾಡಿ ಮತ್ತು ಕ್ಯೂನಲ್ಲಿ ನಿಂತಾಗಲೂ ಸಹ ಪ್ರಭುವಿನ ಗುಣಗಳನ್ನು ಗಾಯನಮಾಡಿ. ಇದೇ ಕೆಲಸವನ್ನು ಮಾಡಬೇಕಲ್ಲವೇ? ಈ ರಿಹರ್ಸಲ್ ಸಹ ಆಗುತ್ತಿದೆ. ಈಗಂತೂ ಏನೂ ಇಲ್ಲ. ಮುಂದೆಯಂತೂ ಇನ್ನೂ ವೃದ್ಧಿಯಾಗು ವುದಿದೆ. ಸಮಯಕ್ಕೆ ತಕ್ಕಂತೆ ತಮ್ಮನ್ನು ತಾವು ನಡೆಸಿಕೊಳ್ಳುವ ರೀತಿಯಲ್ಲಿ ತಮ್ಮನ್ನು ತಾವು ಮೋಲ್ಡ್ ಮಾಡಿಕೊಳ್ಳುವ ಅಭ್ಯಾಸವನ್ನು ಮಾಡಿಕೊಳ್ಳಿ. ಭೂಮಿಯ ಮೇಲೆ ಮಲಗುವ ಅಭ್ಯಾಸವೂ ಆಯಿತಲ್ಲವೇ? ಹಾಸಿಗೆ ಸಿಗಲಿಲ್ಲ, ನಿದ್ದೆ ಬರಲಿಲ್ಲ ಎಂದು ಹೇಳುವುದಿಲ್ಲತಾನೇ? ಟೆಂಟ್‌ನಲ್ಲಿರುವ ಅಭ್ಯಾಸವೂ ಸಹ ಆಯಿತಲ್ಲವೇ. ಚೆನ್ನಾಗಿ ಅನಿಸಿತೆ? ಚಳಿಯಾಗಲಿಲ್ಲವೇ? ಈಗ ಇಡೀ ಅಬೂವಿನಲ್ಲಿ ಟೆಂಟ್ ಹಾಕವುದೇ? ಟೆಂಟ್‌ನಲ್ಲಿ ಮಲಗುವುದು ಚೆನ್ನಾಗಿದೆಯೇ ಅಥವಾ ಕೊಠಡಿ ಬೇಕೇ? ಮೊದಲು ಪಾಕಿಸ್ತಾನದಲ್ಲಿದ್ದಾಗ ಮಹಾರಥಿಗಳನ್ನೂ ಸಹ ನೆಲದ ಮೇಲೆ ಮಲಗಿಸಲಾಗುತ್ತಿತ್ತು ನೆನಪಿದೆಯೇ? ಯಾರು ಹೆಸರುವಾಸಿ ಮಹಾರಥಿಗಳಿದ್ದರೋ ಅವರಿಗೆ ಹಾಲ್‌ನಲ್ಲಿ ಮೂರು ಅಡಿ ಜಾಗ ಕೊಟ್ಟು ಮಲಗಿಸಲಾಗುತ್ತಿತ್ತು. ಬ್ರಾಹ್ಮಣ ಪರಿವಾರ ವೃದ್ಧಿ ಆಯಿತು ಅಂದಮೇಲೆ ಎಲ್ಲಿಂದ ಶುರುವಾಯಿತು? ಟೆಂಟ್‌ನಿಂದಲೇ ಶುರುಮಾಡಲ್ಪಟ್ಟಿತ್ತಲ್ಲವೇ? ಯಾರು ಮೊದಲು ಮೊದಲು ಬಂದರೋ ಅವರೂ ಟೆಂಟ್‌ನಲ್ಲೇ ಇದ್ದರು. ಟೆಂಟ್‌ನಲ್ಲಿ ಇದ್ದವರು ಸೆಂಟ್ (ಮಹಾತ್ಮ) ಆಗಿಬಿಟ್ಟರು. ಸಾಕಾರದಲ್ಲಿ ಬ್ರಹ್ಮಾ ಬಾಬಾರವರೂ ಟೆಂಟ್‌ನಲ್ಲಿ ಇದ್ದರು, ಅದನ್ನು ತಾವೂ ಸಹ ಅನುಭವವನ್ನು ಮಾಡುವಿರಲ್ಲವೇ? ಅಂದಮೇಲೆ ಎಲ್ಲರೂ ಎಲ್ಲಾ ರೀತಿಯಿಂದಲೂ ಖುಷಿಯಾಗಿರುವಿರೇ? ಒಳ್ಳೆಯದು. ನಂತರ ಇನ್ನೂ 10,000 ಜನರನ್ನು ಕರಿಸಿ ಟೆಂಟ್‌ಗಳನ್ನು ತರಿಸಿ, ಅನುಕೂಲ ಮಾಡಿಕೊಡುತ್ತೇವೆ. ಎಲ್ಲರೂ ಸ್ನಾನ ಮಾಡುವ ಅನುಕೂಲ ಬೇಕೆಂದು ಯೋಚಿಸುತ್ತೀರಿ, ಅದೂ ಸಹ ಆಗಿಬಿಡುವುದು. ಯಾವಾಗ ಹಾಲ್ ತಯಾರಾಯಿತೋ, ಆಗ ಎಲ್ಲರೂ 'ಇಷ್ಟೊಂದು ಸ್ನಾನದ ಮನೆಗಳನ್ನು ತಯಾರು ಮಾಡಿ ಏನು ಮಾಡುವುದು' ಎಂದು ಹೇಳಿದಿರಿ. ಅದನ್ನು ಇದೇ ಲಕ್ಷ್ಯದಿಂದ ತಯಾರು ಮಾಡಲಾಯಿತು, ಈಗ ಅದೂ ಕಡಿಮೆ ಆಯಿತಲ್ಲವೇ? ಎಷ್ಟೇ ಕಟ್ಟಿದರೂ ಕಡಿಮೆಯಂತೂ ಆಗಲೇ ಬೇಕಾಗಿದೆ ಏಕೆಂದರೆ ಅಂತಿಮದಲ್ಲಿ ಬೇಹದ್ದಿನಲ್ಲಿ ಹೋಗಬೇಕಾಗಿದೆ. **(21–01–1987)**

ಸಫಲತೆಯ ನಕ್ಷತ್ರಗಳ ವಿಶೇಷ ಗುರುತಾಗಿದೆ – ಅವರಲ್ಲಿ ಎಂದಿಗೂ ಸಹ ಸ್ವಯಂನ ಸಫಲತೆಯ ಅಭಿಮಾನ ಬರುವುದಿಲ್ಲ, ವರ್ಣನೆಯನ್ನೂ ಮಾಡುವುದಿಲ್ಲ, ತಮ್ಮ ಹಾಡನ್ನು ಹಾಡುವುದಿಲ್ಲ. ಆದರೆ ಎಷ್ಟು ಸಫಲತೆಯನ್ನು ಪಡೆದಿರುತ್ತಾರೋ ಅಷ್ಟೇ ನಮ್ರಚಿತ್ತರೂ, ನಿರ್ಮಾಣರೂ, ನಿರ್ಮಲ ಸ್ವಭಾವದವರೂ ಆಗಿರುತ್ತಾರೆ. ಅನ್ಯರು ಅವರ ಗೀತೆಯನ್ನು ಗಾಯನ ಮಾಡುತ್ತಾರೆ, ಆದರೆ ಅವರು ಸದಾ ತಂದೆಯ ಗುಣಗಳ ಗಾಯನ ಮಾಡುತ್ತಾರೆ. ಸಫಲತೆಯ ನಕ್ಷತ್ರಗಳು ಎಂದಿಗೂ ಸಹ ಪ್ರಶ್ನೆಯ ಚಿಹ್ನೆಯನ್ನು ಹಾಕುವುದಿಲ್ಲ. ಸದಾ ಬಿಂದು ರೂಪದಲ್ಲಿ ಸ್ಥಿತರಾಗಿ ಪ್ರತಿ ಕಾರ್ಯದಲ್ಲಿ ಅನ್ಯರಿಗೂ ಸಹ ಡ್ರಾಮಾದ ಬಿಂದುವಿನ ಸ್ಮೃತಿಯನ್ನು ತರಿಸುತ್ತಾ, ವಿಘ್ನವಿನಾಶಕರನ್ನಾಗಿ ಮಾಡುತ್ತಾ, ಸಮರ್ಥರನ್ನಾಗಿ ಮಾಡುತ್ತಾ ಸಫಲತೆಯ ಗುರಿಯ ಸಮೀಪಕ್ಕೆ ತರುತ್ತಾ ಇರುತ್ತಾರೆ.

ತಂದೆಯನ್ನು ಮಿಲನ ಮಾಡುವ ಹೊಸ ಮಕ್ಕಳ ಹೊಸ ಉಮ್ಮಂಗ ಉತ್ಸಾಹ ಡ್ರಾಮಾದ ನಿಗದಿಯ ಅನುಸಾರವಾಗಿ ಪೂರ್ತಿ ಆಯಿತು. ಹೋಗಬೇಕು, ಹೋಗಬೇಕು ಎಂಬ ಬಹಳ

ಉಮ್ಮಂಗವಿತ್ತಲ್ಲವೇ? ಡೈರೆಕ್ಷನ್‌ನನ್ನು ಸಹ ಕೇಳಲಿಲ್ಲ. ಮಿಲನದ ಮಸ್ತಿಯಲ್ಲಿ ಮಸ್ತರಾಗಿದ್ದಿರಲ್ಲವೇ? ಕಡಿಮೆ ಸಂಖ್ಯೆಯಲ್ಲಿ ಬನ್ನಿ, ಕಡಿಮೆ ಬನ್ನಿ ಎಂದು ಎಷ್ಟು ಹೇಳಿದರೂ ಕೇಳಿದಿರಾ? ಇಷ್ಟೆಲ್ಲಾ ಮಕ್ಕಳು ಬರಬೇಕಾಗಿತ್ತು, ಹಾಗಾಗಿ ಬಂದಿದ್ದಾರೆ ಎಂದು ಬಾಪ್‌ದಾದಾರವರು ಡ್ರಾಮಾದ ಪ್ರತಿ ದೃಶ್ಯವನ್ನು ನೋಡಿ ಬಹಳ ಹರ್ಷಿತರಾಗುತ್ತಾರೆ. ಎಲ್ಲವೂ ಸಹಜವಾಗಿ ಸಿಗುತ್ತಿದೆಯಲ್ಲವೇ? ಪರಿಶ್ರಮವಂತೂ ಇಲ್ಲ ತಾನೇ? ಇದೂ ಸಹ ಡ್ರಾಮಾನುಸಾರವಾಗಿ, ಈ ಸಮಯದಲ್ಲಿ ರಿಹರ್ಸಲ್ ಆಗುತ್ತಿದೆ. ಎಲ್ಲರೂ ಖುಷಿಯಾಗಿದ್ದೀರಲ್ಲವೇ? ಪರಿಶ್ರಮವನ್ನು ಸಹಜವನ್ನಾಗಿ ಮಾಡುವವರಲ್ಲವೇ? ಪ್ರತಿ ಕಾರ್ಯದಲ್ಲೂ ಸಹಯೋಗವನ್ನು ನೀಡುವುದು, ಯಾವ ಡೈರೆಕ್ಷನ್ಸ್ ಸಿಗುತ್ತದೋ ಅದರಲ್ಲಿ ಸಹಯೋಗಿಗಳಾಗುವುದು ಎಂದರೆ ಸಹಜವನ್ನಾಗಿ ಮಾಡುವುದಾಗಿದೆ. ಒಂದುವೇಳೆ ಸಹಯೋಗಿಗಳಾದರೆ 5000 ಜನರು ಸಹ ಸಮಾವೇಶವಾಗುತ್ತಾರೆ, ಸಹಯೋಗಿಗಳಾಗಲಿಲ್ಲವೆಂದರೆ ಅಂದರೆ ವಿಧಿಪೂರ್ವಕವಾಗಿ ನಡೆಯಲಿಲ್ಲವೆಂದರೆ 500 ಜನರು ಸಮಾವೇಶವಾಗುವುದೂ ಸಹ ಕಷ್ಟ. ಆದ್ದರಿಂದ ಎಲ್ಲರ ಮನಸ್ಸಿನಿಂದಲೂ '5000 ಜನರೂ 500 ಜನರಂತೆ ಸಮಾವೇಶವಾಗಿದ್ದಾರೆಂದು ಬರುವಂತೆ ದಾದೀಯವರಿಗೆ ಇಂತಹ ರೆಕಾರ್ಡ್‌ನ್ನು ತೋರಿಸಿ ಹೋಗಬೇಕಾಗಿದೆ. ಇದಕ್ಕೇ 'ಪರಿಶ್ರಮವನ್ನು ಸಹಜವನ್ನಾಗಿ ಮಾಡುವುದು' ಎಂದು ಹೇಳಲಾಗುತ್ತದೆ. ಅಂದಮೇಲೆ ಎಲ್ಲರೂ ತಮ್ಮ ರೆಕಾರ್ಡ್‌ನ್ನು ಬಹಳ ಚೆನ್ನಾಗಿ ತುಂಬಿಸಿರುವಿರಲ್ಲವೇ? ಸರ್ಟಿಫಿಕೇಟ್ (ಪ್ರಮಾಣಪತ್ರ) ಅಂತೂ ಬಹಳ ಚೆನ್ನಾಗಿ ಸಿಗುತ್ತಿದೆ. ಹೀಗೆಯೇ ಸದಾ ಖುಷಿಯಾಗಿರಿ ಮತ್ತು ಎಲ್ಲರನ್ನೂ ಖುಷಿಯಾಗಿ ಮಾಡಿ. ಆಗ ಎಲ್ಲರಿಂದ ಸದಾ ಕಾಲ ಚಪ್ಪಾಳೆಗಳು ಬರುತ್ತಿರುತ್ತದೆ. ಒಳ್ಳೆಯ ರೆಕಾರ್ಡ್ ಇದೆ ಹಾಗಾಗಿ ಡ್ರಾಮಾನುಸಾರವಾಗಿ ಎರಡು ಬಾರಿ ಮಿಲನದ ಅವಕಾಶ ಸಿಕ್ಕಿತು. ಹೊಸಬರ ಆರೈಕೆ ಡ್ರಾಮಾನುಸಾರವಾಗಿ ಆಯಿತು. ಒಳ್ಳೆಯದು.

ಈಗ ಏನೇ ಆದರೂ, ಕೇಳಿದರೂ, ನೋಡಿದರೂ ಸ್ವಲ್ಪವೂ ಸಹ ಗೊಂದಲದಲ್ಲಿ ಬರುವುದಿಲ್ಲವೇ? ನಥಿಂಗ್ ನ್ಯೂ ಆಗಿದ್ದಾಗ ಏರುಪೇರಿನಲ್ಲಿ ಏಕೆ ಬರಬೇಕು? ಯಾವುದೇ ಹೊಸ ಮಾತಾದಾಗ ಏರುಪೇರಾಗುತ್ತದೆ. ಈ 'ಏಕೆ, ಏನು' ಎನ್ನುವುದು ಅನೇಕ ಕಲ್ಪಗಳು ಆಗಿವೆ ಎಂದು ಹೇಳುವುದಕ್ಕೇ ಡ್ರಾಮಾದ ಮೇಲೆ ನಿಶ್ಚಯಬುದ್ಧಿಯುಳ್ಳವರು ಎಂದು ಹೇಳಲಾಗುತ್ತದೆ. ಸರ್ವಶಕ್ತಿವಂತನ ಜೊತೆಗಾರರಾಗಿದ್ದೀರಿ, ಆದ್ದರಿಂದ ನಿಶ್ಚಿಂತ ಚಕ್ರವರ್ತಿ ಗಳಾಗಿದ್ದೀರಿ. ಎಲ್ಲಾ ಚಿಂತೆಗಳನ್ನು ತಂದೆಗೆ ಕೊಟ್ಟುಬಿಟ್ಟಿರುವಾಗ ಸ್ವಯಂ ಸದಾ ನಿಶ್ಚಿಂತ ಚಕ್ರವರ್ತಿಗಳು ಆಗಿದ್ದೀರಿ. ಸದಾ ಆತ್ಮೀಯತೆಯ ಸುಗಂಧವನ್ನು ಹರಡಿಸುತ್ತಾ ಇದ್ದಾಗ ಎಲ್ಲಾ ವಿಘ್ನಗಳೂ ಸಮಾಪ್ತಿ ಆಗಿಬಿಡುತ್ತದೆ. **(23–01–1987)**

ಮೂರನೆಯ ರೇಖೆ 'ಸತ್ಯವಾದ ಸೇವಾಧಾರಿಯ ರೇಖೆ'ಯಾಗಿದೆ. ಈ ಸೇವಾಧಾರಿಯ ರೇಖೆಯು ಎಲ್ಲರ ಮಸ್ತಕದಲ್ಲಿದೆ. ಸೇವೆಯ ವಿನಹ ಇರಲೂ ಸಾಧ್ಯವಿಲ್ಲ. ಸೇವೆಯು ಬ್ರಾಹ್ಮಣ ಜೀವನವನ್ನು ಸದಾ ನಿರ್ವಿಘ್ನವನ್ನಾಗಿ ಮಾಡುವ ಸಾಧನವೂ ಆಗಿದೆ ಮತ್ತು ಸೇವೆಯಲ್ಲಿಯೇ ವಿಘ್ನಗಳ ಪರೀಕ್ಷೆಗಳೂ ಹೆಚ್ಚು ಬರುತ್ತದೆ. ನಿರ್ವಿಘ್ನ ಸೇವಾಧಾರಿಯನ್ನೇ ಸತ್ಯವಾದ ಸೇವಾಧಾರಿ ಎಂದು ಹೇಳಲಾಗುತ್ತದೆ. ವಿಘ್ನಗಳು ಬರುವುದೂ ಸಹ ಡ್ರಾಮಾದಲ್ಲಿ ನಿಗಧಿಯಾಗಿದೆ. ಬರಲೇಬೇಕು ಮತ್ತು ಬರುತ್ತಲೇ ಇರುತ್ತದೆ. ಏಕೆಂದರೆ ಈ ವಿಘ್ನಗಳು ಅಥವಾ ಪರೀಕ್ಷೆಗಳು ಅನುಭವಿಗಳನ್ನಾಗಿ ಮಾಡುತ್ತದೆ. ಇದನ್ನು ವಿಘ್ನವೆಂದು ತಿಳಿಯದೆ ಅನುಭವದ ಉನ್ನತಿಯಾಗುತ್ತಿದೆ ಎಂಬ ಭಾವನೆಯಿಂದ ನೋಡಿದಾಗ ಉನ್ನತಿಯ ಮೆಟ್ಟಿಲಿನ ಅನುಭವವಾಗುವುದು. ಇದರಿಂದ ಮತ್ತಷ್ಟು ಮುಂದುವರೆಯಬೇಕು. ಏಕೆಂದರೆ ಸೇವೆಯೆಂದರೆ ಸಂಘಟನೆಯ ಮತ್ತು ಸರ್ವ ಆತ್ಮಗಳ ಆಶೀರ್ವಾದಗಳನ್ನು ಅನುಭವ ಮಾಡುವುದಾಗಿದೆ. ಸೇವೆಯು ಸರ್ವರ ಆಶೀರ್ವಾದಗಳನ್ನು ಪ್ರಾಪ್ತಿ ಮಾಡಿಕೊಳ್ಳುವ ಸಾಧನವಾಗಿದೆ ಎಂಬ ವಿಧಿಯಿಂದ, ವೃತ್ತಿಯಿಂದ ನೋಡಿದಾಗ 'ಅನುಭವದ ಅಥಾರಿಟಿಯಿಂದ ಮತ್ತಷ್ಟು ಮುಂದುವರೆಯುತ್ತಿದ್ದೇವೆ' ಎಂಬ ಅನುಭವ ಆಗುತ್ತದೆ. ವಿಘ್ನವನ್ನು ವಿಘ್ನವೆಂದು ತಿಳಿಯಬೇಡಿ ಮತ್ತು ವಿಘ್ನ ಉಂಟು ಮಾಡುವವರನ್ನು ವಿಘ್ನಕಾರಿ ಆತ್ಮ ಎಂದು ತಿಳಿಯಬೇಡಿ, ಬದಲಿಗೆ ಅನುಭವಿಗಳನ್ನಾಗಿ ಮಾಡುವ ಶಿಕ್ಷಕರೆಂದು ತಿಳಿಯಿರಿ. 'ನಿಂದಕರು ಸಹ ಮಿತ್ರರು' ಎಂದು ಹೇಳುವಾಗ, ವಿಘ್ನಗಳನ್ನು ಪಾಸ್ ಮಾಡಿಸಿ ಅನುಭವಿಗಳನ್ನಾಗಿ ಮಾಡುವಂತಹ ಶಿಕ್ಷಕರಾದರಲ್ಲವೇ? ಪಾಠವನ್ನು ಓದಿಸಿದರಲ್ಲವೇ? ಹೇಗೆ ಇಂದಿನ ದಿನಗಳಲ್ಲಿ ಕಾಯಿಲೆಗಳನ್ನು ಹೋಗಲಾಡಿಸುವಂತಹ ವೈದ್ಯರು ವ್ಯಾಯಾಮವನ್ನು ಮಾಡಿಸುತ್ತಾರೆ ಮತ್ತು ವ್ಯಾಯಾಮದಲ್ಲಿ ಮೊದಲು ನೋವಿನ ಅನುಭವವಾಗುತ್ತದೆ, ಆದರೆ ಆ ನೋವು ಸದಾಕಾಲಕ್ಕಾಗಿ ನೋವು ರಹಿತರನ್ನಾಗಿ ಮಾಡಲು ಕಾರಣವಾಗುತ್ತದೆ. ಯಾರಿಗೆ ಈ ತಿಳುವಳಿಕೆ ಇರುವುದಿಲ್ಲವೋ ಅವರು 'ಇವರಂತೂ ಮತ್ತಷ್ಟು ನೋವನ್ನು ಉಂಟು ಮಾಡಿದರು' ಎಂದು ಕೂಗಾಡುತ್ತಾರೆ. ಆದರೆ ಇದು ನೋವಿನ ಒಳಗಡೆ ಅಡಗಿರುವಂತಹ ಔಷಧಿಯಾಗಿದೆ. ಈ ರೀತಿಯಾಗಿ ವಿಘ್ನಕಾರಿ ರೂಪವಿರಬಹುದು, ತಮಗೆ

ವಿಘ್ನಕಾರಿ ಆತ್ಮ ಎಂದು ಕಂಡುಬರಬಹುದು, ಆದರೆ ಸದಾ ಕಾಲಕ್ಕಾಗಿ ವಿಘ್ನಗಳಿಂದ ದೂರ ಮಾಡುವುದಕ್ಕೆ, ಅಚಲರನ್ನಾಗಿ ಮಾಡುವುದಕ್ಕೆ ಅವರೇ ನಿಮಿತ್ತರಾಗುತ್ತಾರೆ. ಆದ್ದರಿಂದ ಸದಾ ನಿರ್ವಿಘ್ನ ಸೇವಾಧಾರಿಗಳಿಗೇ ಸತ್ಯವಾದ ಸೇವಾಧಾರಿಗಳೆಂದು ಹೇಳಲಾಗುತ್ತದೆ. ಇಂತಹ ಶ್ರೇಷ್ಠ ರೇಖೆಯುಳ್ಳಂತವರೇ ಸತ್ಯವಾದ ಸೇವಾಧಾರಿಗಳೆಂದು ಹೇಳಲಾಗುತ್ತದೆ. **(20–02–1987)**

ಸಂತುಷ್ಟತೆಯ ಗುರುತಾಗಿದೆ – ಅವರು ಮನಸ್ಸಿನಿಂದ, ಹೃದಯದಿಂದ, ಸರ್ವರಿಂದ, ತಂದೆಯಿಂದ, ಡ್ರಾಮಾದಿಂದ ಸಂತುಷ್ಟರಾಗಿರುತ್ತಾರೆ. ಅವರ ಮನಸ್ಸು ಮತ್ತು ತನುವಿನಿಂದ ಸದಾ ಪ್ರಸನ್ನತೆಯ ಅಲೆಯು ಕಂಡುಬರುತ್ತದೆ. ಯಾವುದೇ ಪರಿಸ್ಥಿತಿ ಬೇಕಾದರೆ ಬರಲಿ, ಲೆಕ್ಕಾಚಾರಗಳನ್ನು ಚುಕ್ತ ಮಾಡಿಕೊಳ್ಳುವಂತಹ ಯಾವುದೇ ಆತ್ಮ ಎದುರಿಸಲು ಬರುತ್ತಿರಲಿ, ಶರೀರದ ಕರ್ಮಭೋಗವೇ ಎದುರಿಸಲು ಬರುತ್ತಿರಲಿ, ಆದರೆ ಹದ್ದಿನ ಕಾಮನೆಗಳಿಂದ ಮುಕ್ತರಾಗಿರುವ ಆತ್ಮ ಸಂತುಷ್ಟತೆಯ ಕಾರಣದಿಂದ ಸದಾ ಪ್ರಸನ್ನತೆಯ ಹೊಳಪಿನಲ್ಲಿ ಹೊಳೆಯುತ್ತಿರುವಂತಹ ನಕ್ಷತ್ರದಂತೆ ಕಂಡುಬರುತ್ತಾರೆ. ಪ್ರಸನ್ನಚಿತ್ತರು ಯಾವುದೇ ಮಾತಿನಲ್ಲಿ ಪ್ರಶ್ನಚಿತ್ತರಾಗಿ ಆಗುವುದಿಲ್ಲ. ಪ್ರಶ್ನೆ ಇದೆ ಎಂದಲ್ಲಿ ಪ್ರಸನ್ನತೆ ಇರುವುದಿಲ್ಲ. ಪ್ರಸನ್ನಚಿತ್ತತೆಯ ಗುರುತಾಗಿದೆ – ಅವರು ಸದಾ ನಿಸ್ವಾರ್ಥಿಗಳಾಗಿರುತ್ತಾರೆ ಮತ್ತು ಎಲ್ಲರನ್ನೂ ನಿರ್ದೋಷಿಗಳೆಂದು ಅನುಭವ ಮಾಡುತ್ತಾರೆ, ಯಾರ ಮೇಲೆಯೂ ದೋಷವನ್ನು ಹಾಕುವುದಿಲ್ಲ. 'ನನ್ನ ಭಾಗ್ಯವನ್ನು ಈ ರೀತಿ ತಯಾರು ಮಾಡಿದರೆಂದು' ಭಾಗ್ಯವಿಧಾತನ ಮೇಲೆಯಾಗಲೀ, 'ಡ್ರಾಮಾದಲ್ಲಿ ನನ್ನ ಪಾತ್ರವೇ ಹೀಗಿದೆ' ಎಂದು ಡ್ರಾಮಾದ ಮೇಲಾಗಲೀ, 'ಇವರ ಸ್ವಭಾವ ಸಂಸ್ಕಾರಗಳೆ ಹೀಗಿದೆ' ಎಂದು ವ್ಯಕ್ತಿಯ ಮೇಲಾಗಲೀ, 'ಪ್ರಕೃತಿಯ ವಾಯುಮಂಡಲವೇ ಹೀಗಿದೆ' ಎಂದು ಪ್ರಕೃತಿಯ ಮೇಲಾಗಲಿ, 'ಶರೀರದ ಲೆಕ್ಕಾಚಾರವೇ ಹೀಗಿದೆ' ಎಂದು ಶರೀರದ ಮೇಲಾಗಲೀ ದೋಷವನ್ನು ಹಾಕುವುದಿಲ್ಲ. ಪ್ರಸನ್ನಚಿತ್ತರು ಎಂದರೆ ಸದಾ ನಿಸ್ವಾರ್ಥರೂ, ಸದಾ ನಿರ್ದೋಷ ವೃತ್ತಿ, ದೃಷ್ಟಿಯನ್ನು ಹೊಂದಿರುವವರು. ಸಂಗಮಯುಗದ ವಿಶೇಷತೆ ಸಂತುಷ್ಟತೆಯಾಗಿದೆ ಮತ್ತು ಸಂತುಷ್ಟತೆಯ ಗುರುತು ಪ್ರಸನ್ನತೆಯಾಗಿದೆ. ಇದಾಗಿದೆ ಬ್ರಾಹ್ಮಣ ಜೀವನದ ವಿಶೇಷ ಪ್ರಾಪ್ತಿ. ಸಂತುಷ್ಟರಾಗಿಲ್ಲ, ಪ್ರಸನ್ನರಾಗಿಲ್ಲ ಎಂದರೆ ಬ್ರಾಹ್ಮಣರಾಗುವುದರಲ್ಲಿ ಯಾವುದೇ ಲಾಭವಿಲ್ಲ. ಬ್ರಾಹ್ಮಣ ಜೀವನದ ಸುಖವಿರುವುದೇ ಸಂತುಷ್ಟತೆ ಮತ್ತು ಪ್ರಸನ್ನತೆಯಲ್ಲಿ. ಬ್ರಾಹ್ಮಣ ಜೀವನ ಆದರೂ ಅದರ ಸುಖವನ್ನು ಪಡೆಯಲಿಲ್ಲವೆಂದರೆ ಹೆಸರಿಗೆ ಮಾತ್ರ ಬ್ರಾಹ್ಮಣರೇ ಅಥವಾ ಪ್ರಾಪ್ತಿ ಸ್ವರೂಪ ಬ್ರಾಹ್ಮಣರೇ? ಅಂದಮೇಲೆ ಬಾಪ್‌ದಾದಾರವರು ಎಲ್ಲಾ ಬ್ರಾಹ್ಮಣ ಮಕ್ಕಳಿಗೂ 'ಬ್ರಾಹ್ಮಣರಾದಿರಿ, ಅಹೋ ಭಾಗ್ಯ' ಎಂಬ ಸ್ಮೃತಿಯನ್ನು ತಂದುಕೊಡುತ್ತಿದ್ದಾರೆ. ಬ್ರಾಹ್ಮಣ ಜೀವನದ ಆಸ್ತಿಯು (ಪ್ರಾಪರ್ಟಿ) ಸಂತುಷ್ಟತೆಯಾಗಿದೆ ಮತ್ತು ಬ್ರಾಹ್ಮಣ ಜೀವನದ ವ್ಯಕ್ತಿತ್ವ (ಪರ್ಸನಾಲಿಟಿ) ಪ್ರಸನ್ನತೆಯಾಗಿದೆ. ಈ ಅನುಭವದಿಂದ ಎಂದಿಗೂ ಸಹ ವಂಚಿತರಾಗಬೇಡಿ. ಅಧಿಕಾರಿಗಳಾಗಿರುವಿರಿ. ದಾತ, ವರದಾತನು ತೆರೆದ ಹೃದಯದಿಂದ ಪ್ರಾಪ್ತಿಗಳ ಖಜಾನೆಯನ್ನು ಕೊಡುತ್ತಿದ್ದಾರೆ ಎಂದಾಗ, ಕೊಟ್ಟುಬಿಟ್ಟಿದ್ದಾರೆ ಎಂದಾಗ ತಮ್ಮ ಪ್ರಾಪರ್ಟಿ ಮತ್ತು ತಮ್ಮ ಪರ್ಸನಾಲಿಟಿಯನ್ನು ಬಹಳಷ್ಟು ಅನುಭವದಲ್ಲಿ ತನ್ನಿ ಮತ್ತು ಅನ್ಯರನ್ನೂ ಸಹ ಅನುಭವಿಗಳನ್ನಾಗಿ ಮಾಡಿರಿ. ತಿಳಿಯಿತೇ? ಪ್ರತಿಯೊಬ್ಬರೂ 'ನಾನು ಯಾವ ನಂಬರ್‌ನ ಮಾಲೆಯಾಗಿದ್ದೇನೆ, ಮಾಲೆಯಲ್ಲಂತೂ ಇದ್ದೇನೆ ಆದರೆ ಯಾವ ನಂಬರ್‌ನ ಮಾಲೆಯಲ್ಲಿ ಇದ್ದೇನೆ' ಎಂದು ತಮ್ಮೊಂದಿಗೆ ತಾವೇ ಕೇಳಿಕೊಳ್ಳಿ. **(05–10–1987)**

ಕೆಲವು ಮಕ್ಕಳು ಸಹಯೋಗಕ್ಕೆ ಪಾತ್ರರಾದರೂ ಸಹ ಸಹಯೋಗದಿಂದ ವಂಚಿತರಾಗಿ ಏಕೆ ಆಗುತ್ತಾರೆ ಎಂಬುದನ್ನು ಬಾಪ್‌ದಾದಾರವರು ನೋಡುತ್ತಿದ್ದರು. ಇದಕ್ಕೆ ಕಾರಣ – ಧೈರ್ಯದ ವಿಧಿಯನ್ನು ಮರೆಯುವ ಕಾರಣ, ಅಭಿಮಾನ ಅಂದರೆ ಹುಡುಗಾಟಿಕೆ ಮತ್ತು ಸ್ವಯಂನ ಮೇಲೆ ಗಮನವು ಕಡಿಮೆ ಇರುವ ಕಾರಣ ಎಂದು ತಿಳಿಸಿದರು. ವಿಧಿ ಇಲ್ಲವೆಂದರೆ ವರದಾನದಿಂದ ವಂಚಿತರಾಗು ತ್ತಾರೆ. ಸಾಗರನ ಮಕ್ಕಳಾಗಿದ್ದರೂ ಚಿಕ್ಕ–ಚಿಕ್ಕ ಕೆರೆಗಳಾಗಿ ಬಿಡುತ್ತಾರೆ. ಹೇಗೆ ಕೆರೆಯ ನೀರು ನಿಂತಿರುತ್ತದೆಯೋ ಹಾಗೆಯೇ ಪುರುಷಾರ್ಥದ ಮಧ್ಯದಲ್ಲಿ ನಿಂತು ಹೋಗುತ್ತಾರೆ. ಹಾಗಾಗಿ ಕೆಲವೊಮ್ಮೆ ಪರಿಶ್ರಮದಲ್ಲಿ ಮತ್ತು ಕೆಲವೊಮ್ಮೆ ಮೋಜಿನಲ್ಲಿ ಇರುತ್ತಾರೆ. ಇಂದು ನೋಡಿದರೆ ಬಹಳ ಮೋಜಿನಲ್ಲಿರುತ್ತಾರೆ ಮತ್ತು ನಾಳೆ ನೋಡಿದರೆ ಚಿಕ್ಕದಾದ ಕಲ್ಲಿನ ಕಾರಣದಿಂದ ಅದನ್ನು ದೂರ ಮಾಡುವ ಪರಿಶ್ರಮದಲ್ಲಿ ತೊಡಗಿರುತ್ತಾರೆ. ಬೆಟ್ಟವಲ್ಲ, ಚಿಕ್ಕದಾದ ಕಲ್ಲಷ್ಟೇ. ಮಹಾವೀರ ಪಾಂಡವ ಸೇನೆಯಾಗಿದ್ದಾರೆ ಆದರೂ ಸಹ ಚಿಕ್ಕದಾದ ಕಲ್ಲೂ ಸಹ ಪರ್ವತವಾಗಿ ಬಿಡುವುದು. ಅದೇ ಅದೇ ಪರಿಶ್ರಮದಲ್ಲಿ ತೊಡಗುತ್ತಾರೆ ಮತ್ತು ಬಹಳ ನಗಿಸುತ್ತಾರೆ. ಒಂದುವೇಳೆ ಯಾರಾದರೂ 'ಇದೊಂದು ಚಿಕ್ಕದಾದ ಕಲ್ಲಷ್ಟೇ' ಎಂದು ಹೇಳಿದರೆ ಯಾವ ನಗುವ ಮಾತನ್ನು ಹೇಳುತ್ತಾರೆಂದರೆ, 'ನಿಮಗೇನು ಗೊತ್ತು, ನಿಮ್ಮ ಮುಂದೆ ಬಂದಾಗ ತಿಳಿಯುತ್ತದೆ' ಎಂದು. ತಂದೆಗೂ ಸಹ 'ನೀವಂತೂ ನಿರಾಕಾರರಾಗಿರುವಿರಿ, ನಿಮಗೇನು ತಿಳಿದಿದೆ' ಎಂದು ಹೇಳುತ್ತಾರೆ.

ಬ್ರಹ್ಮಾಬಾಬಾರವರಿಗೂ ಸಹ 'ನಿಮಗಂತೂ ಶಿವತಂದೆಯ ಲಿಫ್ಟ್ ಇದೆ, ನಿಮಗೇನು ತಿಳಿದಿದೆ' ಎಂದು ಹೇಳುತ್ತಾರೆ. ಬಹಳ ಒಳ್ಳೆ ಒಳ್ಳೆಯ ಮಾತುಗಳನ್ನು ಹೇಳುತ್ತಾರೆ. ಆದರೆ ಇದಕ್ಕೆ ಕಾರಣ ಒಂದು ಚಿಕ್ಕದಾದ ತಪ್ಪು. ಧೈರ್ಯಶಾಲಿ ಮಕ್ಕಳಿಗೆ ಭಗವಂತನ ಸಹಯೋಗ ಪ್ರಾಪ್ತವಾಗುತ್ತದೆ (ಹಿಮ್ಮತೇ ಬಚ್ಚೇ ಮದದೇ ಖುದಾ) ಎಂಬ ರಹಸ್ಯವನ್ನು ಮರೆತು ಹೋಗುತ್ತಾರೆ. ಇದು ಡ್ರಾಮಾದಲ್ಲಿ ಕರ್ಮಗಳ ಗುಹ್ಯಗತಿಯಾಗಿದೆ. 'ಹಿಮ್ಮತೇ ಬಚ್ಚೇ ಮದದೇ ಖುದಾ' ಎನ್ನುವುದೇ ವಿಧಿ. ಒಂದುವೇಳೆ ವಿಧಾನ ಇರಲಿಲ್ಲವೆಂದರೆ ಎಲ್ಲರೂ ವಿಶ್ವದ ಮೊದಲಿನ ರಾಜರಾಗಿಬಿಡುತ್ತಿದ್ದರು. ಒಂದೇ ಸಮಯದಲ್ಲಿ ಎಲ್ಲರೂ ಸಿಂಹಾಸನದ ಮೇಲೆ ಕುಳಿತುಕೊಳ್ಳುವರೇ? ನಂಬರ್‌ವಾರ್ ಆಗಿ ಆಗುವ ಪದ್ಧತಿ ಈ ವಿಧಿಯ ಕಾರಣದಿಂದಲೇ ಆಗುತ್ತದೆ. ಇಲ್ಲವೆಂದರೆ ಎಲ್ಲರೂ ತಂದೆಗೆ 'ಬ್ರಹ್ಮಾರವರನ್ನೇ ಏಕೆ ಮೊದಲನೇ ನಂಬರಿನವರನ್ನಾಗಿ ಮಾಡಿದಿರಿ, ನಮ್ಮನ್ನು ಮಾಡಬಹುದಾಗಿತ್ತಲ್ಲವೇ?' ಎಂದು ನಿಂದನೆ ಮಾಡುತ್ತಿದ್ದರು. ಆದ್ದರಿಂದ ಈ ಈಶ್ವರೀಯ ವಿಧಾನವು ಡ್ರಾಮಾನುಸಾರವಾಗಿ ತಯಾರಾಗಿದೆ. 'ಧೈರ್ಯದ ಒಂದು ಹೆಜ್ಜೆಗೆ ಪದುಮಗಳಷ್ಟು ಸಹಯೋಗ' ಎಂಬ ವಿಧಾನವು ನಿಮಿತ್ತ ಮಾತ್ರವಾಗಿ ತಯಾರಾಗಿದೆ. ಸಹಯೋಗದ ಸಾಗರನು ಇದ್ದಾಗಿಯೂ ಈ ವಿಧಾನದ ವಿಧಿಯು ಡ್ರಾಮಾನುಸಾರ ನಿಗದಿಯಾಗಿದೆ. ಆದ್ದರಿಂದ ಯಾರು ಎಷ್ಟು ಬೇಕೋ ಅಷ್ಟು ಧೈರ್ಯವನ್ನಿಡಿ ಮತ್ತು ಸಹಯೋಗವನ್ನು ಪಡೆಯಿರಿ. ಇದರಲ್ಲಿ ಒಂದು ವರ್ಷದ ಮಗುವಾಗಿರಬಹುದು, 50 ವರ್ಷಗಳ ಮಗುವಾಗಿರಬಹುದು, ಸಮರ್ಪಿತರಾಗಿರಬಹುದು, ಪ್ರವೃತ್ತಿ ಮಾರ್ಗದವರಾಗಿರ ಬಹುದು, ಆದರೆ ಎಲ್ಲರಿಗೂ ಸಮಾನವಾದ ಅಧಿಕಾರವಿದೆ. ಆದರೆ ಅದು ವಿಧಿಯಿಂದಲೇ ಪ್ರಾಪ್ತಿಯಾಗುತ್ತದೆ. ಅಂದಮೇಲೆ ಈಶ್ವರೀಯ ವಿಧಾನವು ತಿಳಿಯಿತಲ್ಲವೇ?

ಸದಾ 'ವಾಹ್-ವಾಹ್' ಎಂಬ ಗೀತೆಯನ್ನು ಹಾಡುವವರಲ್ಲವೇ? 'ಅಯ್ಯೋ ಅಯ್ಯೋ' ಎಂಬ ಹಾಡು ಸಮಾಪ್ತಿಯಾಯಿತು, 'ವಾಹ್ ವಾಹ್' ಎಂಬ ಹಾಡನ್ನು ಸದಾ ಮನಸ್ಸಿನಿಂದ ಹಾಡುತ್ತಿರುತ್ತೀರಿ. ಯಾವುದೇ ಶ್ರೇಷ್ಠ ಕರ್ಮವನ್ನು ಮಾಡಿದಾಗ ಮನದಿಂದ ಏನು ಹೊರಬರುತ್ತದೆ? 'ವಾಹ್ ನನ್ನ ಶ್ರೇಷ್ಠ ಕರ್ಮ ವಾಹ್', 'ವಾಹ್ ಶ್ರೇಷ್ಠ ಕರ್ಮವನ್ನು ಕಲಿಸುವಂತಹ ತಂದೆ' ಅಥವಾ 'ವಾಹ್ ಶ್ರೇಷ್ಠ ಸಮಯ' ಮತ್ತು 'ವಾಹ್ ಶ್ರೇಷ್ಠ ಕರ್ಮವನ್ನು ಮಾಡಿಸುವಂತವನು' ಎಂಬುದಾಗಿ. ಅಂದಮೇಲೆ ಸದಾ 'ವಾಹ್-ವಾಹ್' ಎಂಬ ಗೀತೆಯನ್ನು ಹಾಡುವಂತಹ ಆತ್ಮಗಳಲ್ಲವೇ? ಎಂದಿಗೂ ಸಹ ತಪ್ಪಾಗಿಯೂ ಸಹ 'ಅಯ್ಯೋ' ಎಂಬ ಶಬ್ದವು ಹೊರ ಬರುವುದಿಲ್ಲವಲ್ಲವೇ? 'ಅಯ್ಯೋ, ಇದೇನಾಯಿತು' ಎಂದಲ್ಲ. ಯಾವುದೇ ದು:ಖದ ದೃಶ್ಯವನ್ನು ನೋಡಿದರೂ ಸಹ 'ಅಯ್ಯೋ' ಎಂಬ ಶಬ್ದವು ಹೊರ ಬರಬಾರದು. ನಿನ್ನೆ 'ಅಯ್ಯೋ ಅಯ್ಯೋ' ಎಂಬ ಹಾಡನ್ನು ಹಾಡುತ್ತಿದ್ದೀರಿ ಮತ್ತು ಇಂದು 'ವಾಹ್ ವಾಹ್'ನ ಹಾಡನ್ನು ಹಾಡುತ್ತೀರಿ. ಎಷ್ಟೊಂದು ಅಂತರವಾಯಿತಲ್ಲವೇ? ಇದು ಯಾರ ಶಕ್ತಿಯಾಗಿದೆ? ತಂದೆಯ ಶಕ್ತಿಯೇ ಅಥವಾ ಡ್ರಾಮಾದ ಶಕ್ತಿಯೇ? (ತಂದೆಯದು) ತಂದೆಯೂ ಸಹ ಡ್ರಾಮಾದ ಕಾರಣ ಬಂದರಲ್ಲವೇ? ಅಂದಮೇಲೆ ಡ್ರಾಮಾನೂ ಸಹ ಶಕ್ತಿಶಾಲಿಯಾಯಿತು. ಒಂದುವೇಳೆ ಡ್ರಾಮಾದಲ್ಲಿ ಪಾತ್ರವಿಲ್ಲವೆಂದರೆ ತಂದೆಯೂ ಏನು ಮಾಡುತ್ತಿದ್ದರು? ತಂದೆಯೂ ಶಕ್ತಿಶಾಲಿಯಾಗಿದ್ದಾರೆ ಮತ್ತು ಡ್ರಾಮಾನೂ ಶಕ್ತಿಶಾಲಿಯಾಗಿದೆ. ಹಾಗಾಗಿ ಇಬ್ಬರ ಗೀತೆಯನ್ನು ಹಾಡುತ್ತೀರಿ – 'ವಾಹ್ ಡ್ರಾಮಾ ವಾಹ್', ಯಾವುದು ಸ್ವಪ್ನದಲ್ಲಿಯೂ ಇರಲಿಲ್ಲವೋ ಅದು ಸಾಕಾರವಾಯಿತು. ಮನೆಯಲ್ಲಿ ಕುಳಿತುಕೊಂಡೇ ಎಲ್ಲವೂ ದೊರಕಿತು. ಮನೆಯಲ್ಲಿ ಕುಳಿತೇ ಇಷ್ಟೊಂದು ಭಾಗ್ಯವು ಸಿಕ್ಕಿಬಿಟ್ಟಿತು ಎಂದರೆ ಇದಕ್ಕೇ 'ಡೈಮಂಡ್ ಲಾಟರಿ' ಎಂದು ಹೇಳಲಾಗುತ್ತದೆ. **(22–11–1987)**

ಎಲ್ಲರೂ ತಮ್ಮನ್ನು ತಾವು ಈ ವಿಶಾಲ ಡ್ರಾಮಾದ ಒಳಗಡೆ ಹೀರೋ ಪಾತ್ರಧಾರಿಗಳೆಂದು ಅನುಭವ ಮಾಡುವಿರೇ? ತಮ್ಮೆಲ್ಲರದೂ 'ಹೀರೋ' ಪಾತ್ರವಾಗಿದೆ. ಹೀರೋ ಪಾತ್ರಧಾರಿಗಳು ಏಕೆ ಆದಿರಿ? ಏಕೆಂದರೆ ಯಾರು ಶ್ರೇಷ್ಠಾತಿ ಶ್ರೇಷ್ಠ ತಂದೆ 'ಜೀರೋ' ಆಗಿದ್ದಾರೋ, ಅವರ ಜೊತೆಯಲ್ಲಿ ಪಾತ್ರವನ್ನು ಅಭಿನಯಿಸುವಂತಹವರಾಗಿದ್ದೀರಿ. ತಾವೂ ಸಹ 'ಜೀರೋ' ಅಂದರೆ 'ಬಿಂದು' ವಾಗಿದ್ದೀರಿ. ಆದರೆ ತಾವು ಶರೀರಧಾರಿಗಳಾಗುವಿರಿ ಮತ್ತು ತಂದೆಯು ಸದಾ ಜೀರೋ ಆಗಿಯೇ ಇರುತ್ತಾರೆ. ಅಂದಮೇಲೆ 'ಜೀರೋವಿನ ಜೊತೆಯಲ್ಲಿ ಪಾತ್ರವನ್ನು ಅಭಿನಯಿಸುವಂತಹ ಹೀರೋ ಪಾತ್ರಧಾರಿಗಳಾಗಿದ್ದೇವೆ' ಎಂಬ ಸ್ಮೃತಿ ಇದ್ದಾಗ ಸದಾ ಯಥಾರ್ಥವಾದ ಪಾತ್ರವನ್ನು ಅಭಿನಯಿಸುತ್ತೀರಿ ಮತ್ತು ಸ್ವತಃವಾಗಿ ಗಮನವು ಹೋಗುತ್ತದೆ. ಹೇಗೆ ಹದ್ದಿನ ಪಾತ್ರದ ಒಳಗಡೆ ಹೀರೋ ಪಾತ್ರಧಾರಿಗೆ ಎಷ್ಟೊಂದು ಗಮನವಿರುತ್ತದೆ? ಎಲ್ಲದರಲ್ಲೂ ದೊಡ್ಡದಕ್ಕಿಂತ ದೊಡ್ಡ ಹೀರೋ ಪಾತ್ರವು ತಮ್ಮದಾಗಿದೆ. ಸದಾ 'ವಿಶ್ವದ ಎಲ್ಲಾ ಆತ್ಮಗಳು 'ಒನ್ಸ್ ಮೋರ್, ಒನ್ಸ್ ಮೋರ್' (ಮತ್ತೊಮ್ಮೆ ಮಾಡಿ, ಮತ್ತೊಮ್ಮೆ ಮಾಡಿ) ಎಂದು ಹೇಳುವಂತಹ ವಾಹ್, ನನ್ನ ಹೀರೋ ಪಾತ್ರ ಎಂಬ ನಶೆ ಮತ್ತು ಖುಷಿಯಲ್ಲಿರಿ.

ದ್ವಾಪರಯುಗದಿಂದ ಏನೆಲ್ಲಾ ಕೀರ್ತನೆಗಳನ್ನು ಮಾಡುತ್ತಾ ಬಂದಿದ್ದಾರೋ ಅದು ಈ ಸಮಯದ ತಮ್ಮ ಹೀರೋ ಪಾತ್ರದ ಸ್ಮರಣಾರ್ಥವೇ ಆಗಿದೆ. ಎಷ್ಟೊಂದು ಒಳ್ಳೆಯ ಸ್ಮರಣಾರ್ಥವು ತಯಾರಾಗಿದೆ. ತಾವು ಸ್ವಯಂ ಹೀರೋ ಆಗಿದ್ದ ಕಾರಣದಿಂದ ಇಲ್ಲಿಯವರೆಗೂ ತಮ್ಮ ಗಾಯನವು ನಡೆಯುತ್ತಾ ಇರುತ್ತದೆ. ಅಂತಿಮ ಜನ್ಮದಲ್ಲೂ ಸಹ ತಮ್ಮ ಗಾಯನವನ್ನು ಕೇಳುತ್ತಿರುವಿರಿ. ಗೋಪಿವಲ್ಲಭನ ಗಾಯನವಿದೆ ಎಂದಾಗ,  ಗೊಲ್ಲ ಬಾಲಕರ ಗಾಯನವೂ ಇದೆ, ಗೋಪಿಕೆಯರ ಗಾಯನವೂ ಇದೆ. ತಂದೆಯ ಗಾಯನ ಶಿವನ ರೂಪದಲ್ಲಿದ್ದರೆ ಮಕ್ಕಳ ಗಾಯನವು ಶಕ್ತಿಯರ ರೂಪದಲ್ಲಿದೆ. ಅಂದಮೇಲೆ ಸದಾ ಹೀರೋ ಪಾತ್ರವನ್ನು ಮಾಡುವಂತಹ ಶ್ರೇಷ್ಠ ಆತ್ಮಗಳೆಂಬ ಸ್ಮೃತಿಯಲ್ಲಿ ಖುಷಿಯಿಂದ ಮುಂದುವರೆ ಯುತ್ತಾ ನಡೆಯಿರಿ. **(06–12–1987)**

ಚಿಕ್ಕ ಮಾತನ್ನು ದೊಡ್ಡದನ್ನಾಗಿ ಮಾಡುವುದು, ದೊಡ್ಡ ಮಾತನ್ನು ಚಿಕ್ಕದನ್ನಾಗಿ ಮಾಡುವುದು ತಮ್ಮ ಸ್ಥಿತಿಯ ಮೇಲೆ ಆಧಾರಿತವಾಗಿದೆ. ಚಿಂತಿತರಾಗುವುದು ಅಥವಾ ತಮ್ಮ ಅಧಿಕಾರಿತನದ ಘನತೆಯಲ್ಲಿ ಇರುವುದು  ತಮ್ಮ ಮೇಲಿದೆ. ಏನಾಗಿ ಹೋಯಿತು ಎಂದು ಹೇಳುವುದು ಅಥವಾ ಏನಾಯಿತೋ ಒಳ್ಳೆಯದೇ ಆಯಿತು ಎಂದು ಹೇಳುವುದೂ ಸಹ ತಮ್ಮ ಮೇಲಿದೆ. ಈ ನಿಶ್ಚಯವು ಕೆಟ್ಟದನ್ನೂ ಸಹ ಒಳ್ಳೆಯದರಲ್ಲಿ  ಬದಲಿಸಬಲ್ಲದ್ದಾಗಿದೆ. ಏಕೆಂದರೆ ಲೆಕ್ಕಾಚಾರವು ಚುಕ್ತಾ ಆಗುವ ಕಾರಣ ಅಥವಾ ಸಮಯ ಪ್ರತಿ ಸಮಯ ಡ್ರಾಮಾನುಸಾರವಾಗಿ ಪ್ರಾಕ್ಟಿಕಲ್ ಪೇಪರ್ ಬರುವ ಕಾರಣ ಕೆಲವು ಮಾತುಗಳು ಒಳ್ಳೆಯ ರೂಪದಲ್ಲಿ ಎದುರಿಗೆ ಬರುತ್ತವೆ ಮತ್ತು ಕೆಲವು ಸಲ ಒಳ್ಳೆಯ ರೂಪವಾಗಿದ್ದರೂ ಹೊರನೋಟಕ್ಕೆ ನಷ್ಟಕರವಾಗಿರುತ್ತದೆ, ಇದಕ್ಕೆ ತಾವು 'ಈ ರೂಪದಲ್ಲಿ ಚೆನ್ನಾಗಿಲ್ಲ' ಎಂದು ಹೇಳುವಿರಿ. ಮಾತುಗಳು ಬರುತ್ತವೆ, ಇಲ್ಲಿಯವರೆಗೂ ಇಂತಹ ರೂಪದ ಮಾತುಗಳು ಬರುತ್ತಿವೆ ಮತ್ತು ಮುಂದೆಯೂ ಸಹ ಬರುತ್ತಿರುತ್ತದೆ. ಆದರೆ ನಷ್ಟಕರವಾದ ಪರದೆಯ ಒಳಗಡೆ ಲಾಭವು ಅಡಗಿರುತ್ತದೆ. ಹೊರಗಿನ ಪರದೆಯು ನಷ್ಟಕರವಾಗಿ ಕಂಡು ಬರುತ್ತದೆ, ಒಂದುವೇಳೆ ಸ್ವಲ್ಪ ಸಮಯ ಧೈರ್ಯವಂತ ಸ್ಥಿತಿಯಿಂದ, ಸಹನಶೀಲತೆಯ ಸ್ಥಿತಿಯಿಂದ ಅಂತರ್ಮುಖಿಗಳಾಗಿ ನೋಡಿದ್ದೇ ಆದಲ್ಲಿ ಹೊರಗಿನ ಪರದೆಯ ಒಳಗಡೆ ಏನು ಅಡಗಿದೆಯೋ ಅದೇ ತಮಗೆ ಕಂಡುಬರುತ್ತದೆ, ಮೇಲಿನದನ್ನು ನೋಡುತ್ತಿದ್ದರೂ ನೋಡುವುದಿಲ್ಲ. ಹೋಲಿ ಹಂಸಗಳಾಗಿದ್ದೀರಲ್ಲವೇ? ಯಾವಾಗ ಆ ಹಂಸಗಳು ರತ್ನ ಮತ್ತು ಕಲ್ಲುಗಳನ್ನು ಬೇರ್ಪಡಿಸಬಲ್ಲವು ಎಂದಾಗ, ಹೋಲಿ ಹಂಸಗಳು ಅಡಗಿರುವ ತಮ್ಮ ಲಾಭವನ್ನು ತೆಗೆದುಕೊಳ್ಳುತ್ತಾರೆ, ನಷ್ಟದ ಮಧ್ಯದಲ್ಲೂ ಲಾಭವನ್ನೇ ಹುಡುಕಿಬಿಡುತ್ತಾರೆ. ತಿಳಿಯಿತೇ? ಬಹಳ ಬೇಗನೆ ಗಾಬರಿಯಾಗುತ್ತೀರಲ್ಲವೇ? ಇದರಿಂದ ಏನಾಗುತ್ತದೆ? ಯಾವುದನ್ನು ಒಳ್ಳೆಯದನ್ನಾಗಿ ಯೋಚಿಸಬಹುದಾಗಿರುತ್ತದೋ ಅದೂ ಸಹ ಗಾಬರಿಪಡುವ ಕಾರಣ ಬದಲಾಗಿಬಿಡುತ್ತದೆ. ಆದ್ದರಿಂದ ಗಾಬರಿಯಾಗಬೇಡಿರಿ. ಕರ್ಮವನ್ನು ನೋಡಿ ಕರ್ಮಬಂಧನದಲ್ಲಿ ಸಿಕ್ಕಿ ಹಾಕಿಕೊಳ್ಳಬೇಡಿ. 'ಏನಾಯಿತು, ಹೇಗಾಯಿತು, ಈ ರೀತಿಯಂತೂ ಆಗಬಾರದಿತ್ತು, ನನ್ನಿಂದಲೇ ಏಕೆ ಆಗುತ್ತದೆ, ಬಹುಶಃ ನನ್ನ ಭಾಗ್ಯವೇ ಈ ರೀತಿಯಾಗಿರಬಹುದು' ಎಂಬ ಇಂತಹ ಹಗ್ಗಗಳನ್ನು ಬಂಧಿಸಿಕೊಳ್ಳುತ್ತಾ ಹೋಗುತ್ತೀರಿ. ಈ ಸಂಕಲ್ಪಗಳೇ ಹಗ್ಗಗಳಾಗಿವೆ. ಈ ಕಾರಣದಿಂದ ಕರ್ಮದ ಬಂಧನದಲ್ಲಿ ಬಂದು ಬಿಡುವಿರಿ. ವ್ಯರ್ಥಸಂಕಲ್ಪಗಳೇ ಕರ್ಮ ಬಂಧನದ ಸೂಕ್ಷ್ಮ ಹಗ್ಗಗಳಾಗಿವೆ. ಕರ್ಮಾತೀತ ಆತ್ಮವು 'ಏನಾಗುತ್ತದೋ ಅದು ಒಳ್ಳೆಯದೇ' ಎಂದು ಹೇಳುತ್ತದೆ. 'ನಾನೂ ಒಳ್ಳೆಯವನು, ತಂದೆಯೂ ಒಳ್ಳೆಯವರು, ಡ್ರಾಮಾವೂ ಸಹ ಒಳ್ಳೆಯದು' ಎಂದು ಹೇಳುತ್ತಾರೆ. ಇದು ಬಂಧನವನ್ನು ಕತ್ತರಿಸುವ ಕತ್ತರಿಯ ಕೆಲಸವನ್ನು ಮಾಡುತ್ತದೆ. ಬಂಧನ ಸಮಾಪ್ತಿಯಾಯಿತು ಎಂದರೆ ಕರ್ಮಾತೀತರಾದಿರಲ್ಲವೇ? ಕಲ್ಯಾಣಕಾರಿ ತಂದೆಯ ಮಕ್ಕಳಾಗಿರುವ ಕಾರಣ ಸಂಗಮಯುಗದ ಪ್ರತಿ ಸೆಕೆಂಡೂ ಕಲ್ಯಾಣಕಾರಿಯಾಗಿದೆ. ಪ್ರತಿ ಸೆಕೆಂಡಿನ ತಮ್ಮ ವ್ಯಾಪಾರವೇ ಕಲ್ಯಾಣ ಮಾಡುವುದಾಗಿದೆ. ಸೇವೆಯೇ ಕಲ್ಯಾಣ ಮಾಡುವುದಾಗಿದೆ. ಬ್ರಾಹ್ಮಣರ ಆಕ್ಯೂಪೇಷನ್ (ಕರ್ತವ್ಯವೇ) ವಿಶ್ವಪರಿವರ್ತಕರು, ವಿಶ್ವಕಲ್ಯಾಣಕಾರಿಗಳಾಗುವುದಾಗಿದೆ.  ಇಂತಹ ನಿಶ್ಚಯಬುದ್ಧಿ ಆತ್ಮಗಳಿಗೆ ಪ್ರತಿ ಘಳಿಗೆಯೂ ಕಲ್ಯಾಣಕರವಾಗಿರುವುದು ನಿಶ್ಚಿತವಾಗಿದೆ. **(18–12–1987)**

ಯಾರು ಸದಾ ತಂದೆಯ ಹೃದಯದಲ್ಲಿ ಇರುತ್ತಾರೋ ಅವರು ಯಾವ ಮಾತನ್ನು ಹಾಡುತ್ತಾರೋ, ಯಾವ ಕರ್ಮವನ್ನು ಮಾಡುತ್ತಾರೋ, ಅದು ಸ್ವತಃವಾಗಿಯೇ ತಂದೆಯ ಸಮಾನ ಇರುತ್ತದೆ. ತಂದೆಯ ಸಮಾನ ಆಗುವುದು ಕಷ್ಟವಿಲ್ಲವಲ್ಲವೇ? ಕೇವಲ 'ಡಾಟ್' ನ್ನು (ಬಿಂದುವನ್ನು) ನೆನಪಿಟ್ಟುಕೊಂಡರೆ ಕಷ್ಟವೂ ಸಹ 'ನಾಟ್' (ಇಲ್ಲವಾಗಿ) ಆಗಿಬಿಡುತ್ತದೆ. 'ಡಾಟ್'ನ್ನು ಮರೆತರೆ 'ನಾಟ್' ಆಗುವುದಿಲ್ಲ. 'ಡಾಟ್' ಆಗುವುದು ಮತ್ತು ಡಾಟ್‌ನ್ನು ಹಾಕುವುದು ಎಷ್ಟು ಸಹಜವಾಗಿದೆ. ಇಡೀ ಜ್ಞಾನವು ಒಂದೇ ಈ 'ಡಾಟ್' ಎಂಬ ಶಬ್ದದಲ್ಲಿ ಸಮಾವೇಶವಾಗಿದೆ. ತಾವೂ ಬಿಂದು, ತಂದೆಯೂ ಬಿಂದು ಮತ್ತು

ಏನು ಕಳೆದು ಹೋಯಿತೋ ಅದಕ್ಕೆ ಬಿಂದುವನ್ನು ಹಾಕಿಬಿಡಿ ಸಾಕು. ಚಿಕ್ಕ ಮಗುವೂ ಸಹ ಬರೆಯಲು ಶುರು ಮಾಡಿದಾಗ ಮೊದಲು ಪೆನ್ಸಿಲ್‌ನ್ನು ಕಾಗದದ ಮೇಲೆ ಇಟ್ಟಾಗ ಏನಾಗುತ್ತದೆ? 'ಡಾಟ್' ಆಗುತ್ತದೆಯಲ್ಲವೇ? ಇದೂ ಸಹ ಮಕ್ಕಳ ಆಟವಾಗಿದೆ. ಈ ಪೂರ್ತಿ ಜ್ಞಾನದ ವಿದ್ಯಾಭ್ಯಾಸವು ಆಟ ಆಡುವಂತೆಯೇ ಇದೆ. ಕಷ್ಟಕರವಾದ ಕೆಲಸವನ್ನು ನೀಡಿಲ್ಲ. ಆದ್ದರಿಂದ ಕೆಲಸವೂ ಸಹಜ ಆಗಿರುವುದೇ ಸಹಜ ಯೋಗಿಗಳು. **(31–12–1987)**

ಡ್ರಾಮಾದಲ್ಲಿ ಏನೆಲ್ಲಾ ದೃಶ್ಯಗಳು ನಡೆಯುತ್ತವೆಯೋ ಅವೆಲ್ಲವೂ ತಮ್ಮ ತಮ್ಮ ಸಮಯಾನುಸಾರವಾಗಿ ಬಹಳ ರಹಸ್ಯಯುಕ್ತವಾಗಿರುತ್ತದೆ. ಯಾರೆಲ್ಲಾ ಅನನ್ಯ ಆತ್ಮಗಳು ಹೋಗುವರೋ, ಪ್ರತಿಯೊಂದು ಆತ್ಮ ಹೋಗುವುದರಲ್ಲಿಯೂ ಭಿನ್ನ ಭಿನ್ನ ರಹಸ್ಯಗಳು ಅಡಗಿದೆ. ಅನನ್ಯ ಆತ್ಮಗಳು ಎಲ್ಲೇ ಹೋದರೂ ಸದಾ ಸೇವೆಯ ಸಲುವಾಗಿಯೇ ಹೋಗುತ್ತಾರೆ. ಹೇಗೆ ಸಂಗಮಯುಗದ ಬ್ರಾಹ್ಮಣ ಜೀವನದಲ್ಲಿ ಸೇವೆಯ ಸಂಘಟನೆಯಿಂದ ಸೇವೆಯು ಸಫಲತೆಯು ಆಗುತ್ತಾ ಹೋಗುತ್ತಿದೆಯೋ, ಹಾಗೆಯೇ ಹೊಸ ಪ್ರಪಂಚದ ಸ್ಥಾಪನೆಯ ರಹಸ್ಯದಲ್ಲೂ ಸಂಘಟನೆಯ ಮೂಲಕ ಕಾರ್ಯವು ವೃದ್ಧಿಯನ್ನು ಪ್ರಾಪ್ತಿ ಮಾಡಿಕೊಂಡು ಸಫಲತೆಯನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದೆ. ಹಾಗಾಗಿ ಈ ಸ್ಥಾಪನೆಯ ಪಾತ್ರದಲ್ಲೂ ಸಹ ಡ್ರಾಮಾನುಸಾರವಾಗಿ ಆತ್ಮಗಳು ಹೋಗುವುದು ಮತ್ತು ಆ ಕಾರ್ಯಕ್ಕೆ ನಿಮಿತ್ತರಾಗುವ ಈ ರಹಸ್ಯವು ಸ್ವಲ್ಪ ಸಮಯದಿಂದ ನಡೆಯುತ್ತಿದೆ ಮತ್ತು ನಡೆಯುತ್ತಲೇ ಇರುತ್ತದೆ. ಆದ್ದರಿಂದ ಅನನ್ಯ ಆತ್ಮಗಳು ಹೋಗುವುದು ಅಂದರೆ ಸೇವೆಯ ಪಾತ್ರವನ್ನು ಬದಲಿಸುವುದು ಮತ್ತು ಸೇವೆಯ ಪಾತ್ರಕ್ಕೆ ಅನುಗುಣವಾಗಿ ಶರೀರ ರೂಪೀ ವಸ್ತ್ರವನ್ನು ಬದಲಿಸುವುದಾಗಿದೆ. ಎಂತಹ ಪಾತ್ರವೋ ಅಂತಹ ವಸ್ತ್ರ, ಅಂತಹ ಸಂಬಂಧ ಮತ್ತು ಅಂತಹ ಸ್ಥಾನವು ಬೇಕಾಗುತ್ತದೆ. ಹಾಗಾಗಿ ಸೇವೆಯ ಪಾತ್ರಾನುಸಾರವಾಗಿ ಬರುವುದು ಮತ್ತು ಹೋಗುವುದು ನಡೆಯುತ್ತಲೇ ಇರುತ್ತದೆ. ಅಂದಮೇಲೆ ಈ ಆತ್ಮಕ್ಕೆ ಸೇವೆಯ ಜೊತೆಗೂ ಪಾತ್ರವಿದೆ ಮತ್ತು ಈ ಶರೀರದ ಲೆಕ್ಕಾಚಾರವು ಪೂರ್ತಿಯಾಗುವ ಸಮಯವು ಬರುತ್ತದೆ. ಇಂತಹ ಸಂಪಾದನೆ ಮಾಡಿಕೊಂಡು ಹೋಗುವ ಆತ್ಮಗಳಿಗಾಗಿ ಯಾರೂ ಸಹ ಚಿಂತೆ ಮಾಡುವ ಮಾತೇ ಇಲ್ಲ. ಸೇವೆಗಾಗಿ ಹೋಗುವುದಕ್ಕಂತೂ ಖುಷಿ ಇದೆ. ಏಕೆಂದರೆ ಹಳೆಯ ಶರೀರದಿಂದ ಇಷ್ಟೊಂದು ಸೇವೆಯಂತೂ ಮಾಡಲಾಗುವುದಿಲ್ಲ. ಅಂದಮೇಲೆ ಹೊಸ ಪಾತ್ರವನ್ನು ಅಭಿನಯಿಸುತ್ತಾರೆ. ಎಲ್ಲರೂ ಹೋಗಲೇ ಬೇಕಿದೆ ಆದರೆ ಕೇವಲ ಸಮಯದ ಮಾತಷ್ಟೇ. ಆದ್ದರಿಂದ ಹೇಗೆ ಸ್ವಯಂ ಖುಷಿಯಾಗಿದ್ದರೋ ಹಾಗೆಯೇ ಎಲ್ಲರೂ, ಲೌಕಿಕ ಸಂಬಂಧಿಗಳಾಗಿರಬಹುದು, ಅಲೌಕಿಕ ಸಂಬಂಧಿಗಳಾಗಿರಬಹುದು, ಎಲ್ಲರೂ ಅವರ ಖುಷಿಯ ವಿಶೇಷತೆಯನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಅವರು ಹೇಗೆ ಸ್ವಯಂ ಹಗುರರಾಗಿದ್ದರೋ, ಹೋಗುವುದರಲ್ಲಿಯೂ ಹಗುರವಾಗಿದ್ದರೋ, ಇರುವುದರಲ್ಲಿಯೂ ಹಗುರವಾಗಿದ್ದರು. ಈ ರೀತಿಯಾಗಿ ಎಲ್ಲರೂ ಅವರ ವಿಶೇಷತೆಗಳೊಂದಿಗೆ ಸ್ನೇಹವಿಡುವುದೇ ಆ ಆತ್ಮದ ಜೊತೆ ಸ್ನೇಹವಿಟ್ಟಂತೆ. ಬಹಳ ಚೆನ್ನಾಗಿ ಪಾತ್ರವನ್ನು ಅಭಿನಯಿಸಿ ಹೋಗಿದ್ದಾರೆ ಮತ್ತು ಮುಂದೆಯೂ ಸಹ ಬಹಳ ಒಳ್ಳೆಯ ಪಾತ್ರವನ್ನೇ ಅಭಿನಯಿಸುತ್ತಾರೆ.

ಆದ್ದರಿಂದ ಪ್ರತಿಯೊಂದು ಆತ್ಮದ ವಿಶೇಷತೆಯನ್ನು ನೆನಪಿಟ್ಟುಕೊಳ್ಳಿ ಮತ್ತು ಪ್ರತಿ ಆತ್ಮದ ವಿಶೇಷ ಪಾತ್ರವನ್ನು ನೆನಪಿಟ್ಟುಕೊಳ್ಳಿ. ಇದರಿಂದ ಸ್ವಯಂನಲ್ಲಿ ಮತ್ತು ವಾತಾವರಣದಲ್ಲಿ ಸದಾ ಶಾಂತಿ ಮತ್ತು ಶಕ್ತಿಯು ಇರುತ್ತದೆ. ಅವರು ವಿಶೇಷವಾಗಿ ಬಲಕೊಟ್ಟಾಗಲೇ ಖುಷಿ ಪಡುವಂತಹ ಆತ್ಮವೇನೂ ಅಲ್ಲ. ಅವರಂತೂ ಸದಾ ಖುಷಿಯಾಗಿಯೇ ಇರುತ್ತಾರೆ. ಬದಲಿಗೆ ತಮ್ಮ ಸ್ನೇಹದ ರೀತಿಯಿಂದ ನೆನಪಿನ ಯಾತ್ರೆಯಲ್ಲಿ ಸ್ನೇಹದ ಸಹಯೋಗವನ್ನು ಕೊಡುವುದು ಬ್ರಾಹ್ಮಣ ಜೀವನದ ರೀತಿ ಪದ್ಧತಿಯಾಗಿದೆ. ಶಕ್ತಿಶಾಲಿಯಾಗಿದ್ದಾರೆ. ತಂದೆಯ ಜೊತೆಯಲ್ಲಿ ಸಂಬಂಧವಿರುವ ಕಾರಣದಿಂದ ತಂದೆಯ ಜೊತೆಯಲ್ಲಿ ಶಕ್ತಿಸ್ವರೂಪರಾಗಿ ಅನುಭವ ಮಾಡುತ್ತಿದ್ದಾರೆ. ಹಾಗಾಗಿ ಏನು ಡ್ರಾಮಾ ನಡೆದು ಹೋಗಿದೆಯೋ ಅದು ಒಳ್ಳೆಯದಾಗಿದೆ ಎಂದು ಹೇಳಬಹುದು. ಪ್ರಪಂಚದವರು 'ಅಯ್ಯೋ, ಅವರು ಹೊರಟು ಹೋದರು' ಎಂದು ಹೇಳುತ್ತಾರೆ. ಆದರೆ ತಾವು ಏನೆಂದು ಹೇಳುವಿರಿ? 'ಸೇವೆಗಾಗಿ ಹೋದರು' ಎಂದು ಹೇಳುತ್ತೀರಿ. ಹೊರಟು ಹೋಗಲಿಲ್ಲ, ಸೇವೆಗಾಗಿ ಹೋದರು. ಯಾರಾದರೂ ಸೇವೆಗಾಗಿ ಹೋದಾಗ ಏನು ಮಾಡುತ್ತೀರಿ? ಖುಷಿಯಾಗುತ್ತೀರಾ ಅಥವಾ ಅಳುತ್ತೀರಾ? ಅಂದಮೇಲೆ ಇವರೂ ಸಹ ಸೇವೆಗಾಗಿ ಹೋದರು. ಆದ್ದರಿಂದ ಇವರು ಸದಾ ಹರ್ಷಿತರಾಗಿ ದ್ದರು, ಸದಾ ಹರ್ಷಿತರಾಗಿಯೇ ಇರುತ್ತಾರೆ. ಒಳ್ಳೆಯದು! ಪ್ರಪಂಚದ ಲೆಕ್ಕಾಚಾರದಲ್ಲೂ ತಮ್ಮ ಪಾತ್ರವೆಲ್ಲವನ್ನೂ ಪೂರ್ಣ ಮಾಡಿದರು. ಆ ಲೆಕ್ಕದಲ್ಲಿಯೂ ಯಾವುದೇ ದೊಡ್ಡ ಮಾತಿಲ್ಲ. ಬ್ರಾಹ್ಮಣರಿಗಾಗಿ ಚಿಕ್ಕ ವಯಸ್ಸಿನವರು ಹೋದರೂ ಸಹ ದೊಡ್ಡ ಮಾತೇನಲ್ಲ. ಇಲ್ಲಿ ಯಾರಾದರೂ ಯುವಕರು ಹೊರಟು ಹೋದರೂ ಅಳುತ್ತಾರೆ. ಅಲ್ಲಿ ಯಾರಾದರೂ

ವೃದ್ಧರು ಹೋದರೆಂದರೆ ಲಡ್ಡುವನ್ನು ಹಂಚುತ್ತಾರೆ ಮತ್ತು ಇಲ್ಲಿ ಯಾರಾದರೂ ಯುವಕರು ಹೋದರೂ ಹಲ್ವಾದ ಪ್ರಸಾದವನ್ನು ತಿನ್ನುತ್ತೀರಿ. ಅವರಿಗೂ ತಿನಿಸುತ್ತೀರಿ, ತಾವೂ ತಿನ್ನುತ್ತೀರಿ. ಏನು ಮಾಡುತ್ತೀರಿ? ಸಂಸ್ಕಾರವನ್ನು ಮಾಡಿ ಬಂದ ನಂತರ ಏನು ಮಾಡುತ್ತೀರಿ? ಹಲ್ವಾವನ್ನೇ ತಿನ್ನುತ್ತೀರಲ್ಲವೇ? ಏಕೆಂದರೆ ಅವರು ಜ್ಞಾನಿಯಾಗಿದ್ದರಲ್ಲವೇ? ಆದ್ದರಿಂದ ನಥಿಂಗ್ ನ್ಯೂ. ಒಳ್ಳೆಯದು. ಎಲ್ಲರಿಗೂ ಬಹಳ ಬಹಳ ನೆನಪು ಮತ್ತು ಬಾಪ್‌ದಾದಾರವರು ಎಲ್ಲರಿಗೂ ಸ್ನೇಹದ ಶಕ್ತಿಯನ್ನು ಸದಾ ಕೊಡುತ್ತಾ ಇರುತ್ತಾರೆ ಮತ್ತು ಕೊಡುತ್ತಿದ್ದಾರೆ. **(14–01–1988)**

ಬ್ರಹ್ಮಾರವರು ವಿಶೇಷವಾಗಿ ಈ ಮಾತಿನಲ್ಲಿ ಅದ್ಭುತರಾಗಿದ್ದರು. ತಮ್ಮೆಲ್ಲರ ಮುಂದೆ ಸಾಕಾರ ರೂಪದಲ್ಲಿ ಬ್ರಹ್ಮಾ ತಂದೆಯು ಮಾದರಿಯಾಗಿದ್ದರು, ಆದರೆ ಬ್ರಹ್ಮಾರವರ ಮುಂದೆ ಯಾರೂ ಸಾಕಾರದಲ್ಲಿ ಮಾದರಿಯಾಗಿ ಇರಲಿಲ್ಲ. ಕೇವಲ ಅಟಲ ನಿಶ್ಚಯ ಮತ್ತು ತಂದೆಯ ಶ್ರೀಮತವೇ ಆಧಾರವಾಗಿತ್ತು. ತಮಗಂತೂ ಬಹಳ ಸಹಜವಾಗಿದೆ. ಮತ್ತು ಯಾರು ನಂತರ ಬಂದಿರುವವರೋ ಅವರಿಗಂತೂ ಮತ್ತಷ್ಟು ಸಹಜವಾಗಿದೆ. ಏಕೆಂದರೆ ಅನೇಕ ಆತ್ಮಗಳ ಪರಿವರ್ತನೆಯ ಶ್ರೇಷ್ಠ ಜೀವನವು ತಮ್ಮ ಮುಂದೆ ಮಾದರಿಯಾಗಿದೆ. ಇದನ್ನು ಮಾಡಬೇಕು, ಈ ರೀತಿಯಾಗಿ ಆಗಬೇಕು ಎಂಬುದು ಸ್ಪಷ್ಟವಾಗಿದೆ. ಈ ಕಾರಣದಿಂದಾಗಿ ತಮಗೆ ಏಕೆ, ಏನು ಎಂಬ ಪ್ರಶ್ನೆಯು ಉದ್ಭವಿಸಲು ಅವಕಾಶವೇ ಉಳಿದಿಲ್ಲ. ಎಲ್ಲರೂ ನೋಡುತ್ತಿರುವಿರಿ. ಆದರೆ ಬ್ರಹ್ಮಾರವರ ಮುಂದೆ ಪ್ರಶ್ನೆ ಉದ್ಭವಿಸಲು ಮಾರ್ಜಿನ್ ಇತ್ತು. ಏನು ಮಾಡಬೇಕು, ಮುಂದೆ ಏನು ಆಗಬೇಕಾಗಿದೆ, ಸರಿಯಾಗಿ ಮಾಡುತ್ತಿದ್ದೇನೆಯೇ ಅಥವಾ ತಪ್ಪನ್ನು ಮಾಡುತ್ತಿದ್ದೇನೆಯೇ ಎಂಬ ಸಂಕಲ್ಪವು ಉತ್ಪನ್ನವಾಗುವ ಸಂಭವವಿತ್ತು. ಆದರೆ ಸಂಭವವನ್ನು ಅಸಂಭವವನ್ನಾಗಿ ಮಾಡಿದರು. 'ಒಂದೇ ಬಲ, ಒಂದೇ ಭರವಸೆ' ಎಂಬ ಇದೇ ಆಧಾರದಿಂದ ನಿಶ್ಚಯಬುದ್ಧಿ ನಂಬರ್ ಒನ್ ವಿಜಯಿಗಳಾಗಿಬಿಟ್ಟರು. ಈ ಸಮರ್ಪಣತೆಯ ಕಾರಣದಿಂದ ಬುದ್ಧಿಯು ಸದಾ ಹಗುರವಾಗಿತ್ತು, ಬುದ್ಧಿಯ ಮೇಲೆ ಹೊರೆ ಇರಲಿಲ್ಲ. ಮನಸ್ಸು ನಿಶ್ಚಿಂತವಾಗಿತ್ತು. ಚಹರೆಯಲ್ಲಿ ಸದಾ ನಿಶ್ಚಿಂತ ಚಕ್ರವರ್ತಿಯ ಚಿಹ್ನೆಯು ಸ್ಪಷ್ಟವಾಗಿ ಕಂಡುಬರುತ್ತಿತ್ತು. 350 ಜನ ಮಕ್ಕಳು ಮತ್ತು ತಿನ್ನುವುದಕ್ಕಾಗಿ ಹಿಟ್ಟೂ ಸಹ ಇಲ್ಲ ಮತ್ತು ಸಮಯಕ್ಕೆ ಸರಿಯಾಗಿ ಮಕ್ಕಳಿಗೆ ಊಟವನ್ನು ತಿನ್ನಿಸಬೇಕಿತ್ತು. ಅಂದಮೇಲೆ ಇಂತಹ ಪರಿಸ್ಥಿತಿಯಲ್ಲಿ ನಿಶ್ಚಿಂತರಾಗಿರಲು ಸಾಧ್ಯವೇ? ಎಂದು ಯೋಚಿಸಿ. ಒಂದು ಘಂಟೆಗೆ ಬೆಲ್‌ನ್ನು ಬಾರಿಸಬೇಕಿತ್ತು ಮತ್ತು 11 ಘಂಟೆಯವರೆಗೆ ಹಿಟ್ಟೇ ಇಲ್ಲವೆಂದರೆ ನಿಶ್ಚಿಂತರಾಗಿರಲು ಹೇಗೆ ಸಾಧ್ಯ? ಇಂತಹ ಪರಿಸ್ಥಿತಿಯಲ್ಲೂ ಸಹ ಹರ್ಷಿತರಾಗಿ ಅಚಲರಾಗಿದ್ದರು. 'ಇದು ತಂದೆಯ ಜವಬ್ದಾರಿಯಾಗಿದೆ, ನನ್ನದಲ್ಲ, ನಾನೂ ತಂದೆಗೆ ಸೇರಿದ್ದೇನೆ, ಮಕ್ಕಳೂ ಸಹ ತಂದೆಗೆ ಸೇರಿದವರಾಗಿದ್ದಾರೆ, ನಾನು ನಿಮಿತ್ತನಾಗಿದ್ದೇನೆ' ಎಂದು ಹೇಳುವಂತಹ ನಿಶ್ಚಯಬುದ್ಧಿ ಮತ್ತು ನಿಶ್ಚಿಂತರಾಗಿ ಯಾರು ಇರಲು ಸಾಧ್ಯ? ಈ ರೀತಿಯಾಗಿ ಇವರು ಮಾತ್ರವೇ ಮಾಡಲು ಸಾಧ್ಯ. ಮನಸ್ಸು ಬುದ್ಧಿಯಿಂದ ಸಮರ್ಪಿತರಾದ ಆತ್ಮವು, ಒಂದುವೇಳೆ ತಮ್ಮ ಬುದ್ಧಿಯನ್ನು ಓಡಿಸಿದ್ದೇ ಆದಲ್ಲಿ, 'ಗೊತ್ತಿಲ್ಲ, ಏನಾಗುತ್ತದೆಯೋ ಏನೋ, ಎಲ್ಲರೂ ಹಸಿವಿನಿಂದ ಇದ್ದು ಬಿಡುವರೋ ಏನೋ, ಈ ರೀತಿಯಂತೂ ಆಗುವುದಿಲ್ಲವೇ? ಆ ರೀತಿಯಂತೂ ಆಗುವುದಿಲ್ಲವೇ?' ಎಂಬ ಅನೇಕ ವ್ಯರ್ಥ ಸಂಕಲ್ಪಗಳ ಮತ್ತು ಸಂಶಯದ ಮಾರ್ಜಿನ್ ಇದ್ದರೂ ಸಹ 'ಸದಾ ತಂದೆಯು ರಕ್ಷಕರಾಗಿದ್ದಾರೆ, ಕಲ್ಯಾಣಕಾರಿಯಾಗಿದ್ದಾರೆ' ಎಂಬ ಸಮರ್ಥ ಸಂಕಲ್ಪಗಳೇ ನಡೆಯುತ್ತಿತ್ತು. ಇದು ಸಮರ್ಪಣೆಯ ವಿಶೇಷತೆಯಾಗಿದೆ. ಅಂದಮೇಲೆ ಹೇಗೆ ಬ್ರಹ್ಮಾ ತಂದೆಯು ಸಮರ್ಪಣೆಯ ಮೊದಲ ಹೆಜ್ಜೆಯಾಗಿ ಧೈರ್ಯವನ್ನು ಇಟ್ಟರೋ ಹಾಗೆಯೇ ಫಾಲೋ ಫಾದರ್ ಮಾಡಿ (ತಂದೆಯನ್ನು ಅನುಕರಣೆ ಮಾಡಿ). ನಿಶ್ಚಯದ ವಿಜಯವು ಅವಶ್ಯವಾಗಿ ಆಗುತ್ತದೆ. ಅಂದಾಗ ಸಮಯಕ್ಕೆ ಸರಿಯಾಗಿ ಹಿಟ್ಟು ಸಹ ಬಂತು, ಬೆಲ್‌ನ್ನು ಸಹ ಹೊಡೆಯಲಾಯಿತು ಮತ್ತು ಉತ್ತೀರ್ಣರೂ ಸಹ ಆದರು. ಇದನ್ನೇ 'ಪ್ರಶ್ನಾರ್ಥಕ ಚಿಹ್ನೆ ಅಥವಾ ಡೊಂಕಾದ ದಾರಿಯಲ್ಲಿ ಹೋಗುವ ಬದಲು ಸದಾ ಕಲ್ಯಾಣದ ಬಿಂದುವನ್ನು ಇಡಿ. ಫುಲ್‌ಸ್ಟಾಪ್ ಎಂದು ಹೇಳಲಾಗುತ್ತದೆ. ಈ ವಿಧಿಯಿಂದಲೇ ಸಹಜವು ಆಗುವುದು ಮತ್ತು ಸಿದ್ಧಿಯು ಪ್ರಾಪ್ತಿಯಾಗುತ್ತದೆ. ಇದೂ ಸಹ ಬ್ರಹ್ಮಾರವರ ಕಮಾಲ್ ಆಗಿದೆ. ಇಂದು ಮೊದಲನೆಯ ಹೆಜ್ಜೆಯ ಬಗ್ಗೆ ತಿಳಿಸಿದ್ದೇನೆ. ಚಿಂತೆಯ ಹೊರೆಯಿಂದಲೂ ನಿಶ್ಚಿಂತರಾಗಿಬಿಡಿ. ಇದಕ್ಕೇ ಸ್ನೇಹಕ್ಕೆ ರಿಟರ್ನ್ ಕೊಡುವುದು ಎಂದು ಹೇಳಲಾಗುವುದು. **(22–01–1988)**

ಈಗ ನಿಧಾನ ನಿಧಾನವಾಗಿ ಎಲ್ಲಾ ಧರ್ಮದವರು ತಮ್ಮ ತಮ್ಮ ಮಾತುಗಳಲ್ಲಿ ಮೋಲ್ಡ್ ಆಗುತ್ತಿದ್ದಾರೆ. ಮೊದಲು ಬಹಳ ಕಠೋರರಾಗಿದ್ದರು, ಈಗ ಮೋಲ್ಡ್ ಆಗುತ್ತಿದ್ದಾರೆ. ಕ್ರಿಶ್ಚಿಯನ್ನರಾಗಿರಲಿ, ಮುಸ್ಲಿಮರಾಗಿರಲಿ, ಆದರೆ ಭಾರತದ ಫಿಲಾಸಫಿಗೆ (ತತ್ವಜ್ಞಾನಕ್ಕೆ) ಅಂತರಂಗದಿಂದ ಗೌರವವನ್ನು

ಸಲ್ಲಿಸುತ್ತಾರೆ. ಏಕೆಂದರೆ ಭಾರತದ ಫಿಲಾಸಫಿಯಲ್ಲಿ ಎಲ್ಲಾ ಪ್ರಕಾರದ ರಮಣೀಕತೆಯು ಇದೆ. ಈ ರೀತಿಯಾಗಿ ಅನ್ಯ ಧರ್ಮಗಳಲ್ಲಿ ಇಲ್ಲ. ಕಥೆಗಳ ರೂಪದಲ್ಲಿ, ಡ್ರಾಮಾದ ರೂಪದಲ್ಲಿ ಭಾರತದ ಫಿಲಾಸಫಿಯನ್ನು ಪ್ರಸಿದ್ಧಿ ಮಾಡುತ್ತವೆ. ಈ ರೀತಿಯಾಗಿ ಅನ್ಯ ಧರ್ಮದಲ್ಲಿ ಎಲ್ಲಿಯೂ ಇಲ್ಲ. ಈ ಕಾರಣದಿಂದಾಗಿಯೇ ಅವರು ಆಂತರಿಕದಲ್ಲಿ ಬಹಳ ಕಠೋರರಾಗಿದ್ದಾರೆ ಮತ್ತು ಅವರು ಅಂತರಂಗದಲ್ಲಿ ಭಾರತದ ಫಿಲಾಸಫಿ, ಅದರಲ್ಲಿಯೂ ಆದಿ ಸನಾತನ ಧರ್ಮದ ಫಿಲಾಸಫಿಯು ಕಡಿಮೆ ಏನೂ ಇಲ್ಲ ಎಂದು ತಿಳಿದಿದ್ದಾರೆ. 'ಒಂದುವೇಳೆ ಫಿಲಾಸಫಿ ಎಂದು ಯಾವುದಾದರೂ ಇದ್ದರೆ ಅದು ಆದಿ ಸನಾತನ ಧರ್ಮದ ಫಿಲಾಸಫಿಯೇ ಆಗಿದೆ' ಎಂದು ಹೇಳುವಂತಹ ದಿನವೂ ಒಮ್ಮೆ ಬರುತ್ತದೆ. 'ಹಿಂದೂ' ಎಂಬ ಶಬ್ದದಿಂದ ರೊಚ್ಚಿಗೇಳುತ್ತಾರೆ, ಆದರೆ 'ಆದಿ ಸನಾತನ ಧರ್ಮಕ್ಕೆ' ಮಾನ್ಯತೆಯನ್ನು ಕೊಡುತ್ತಾರೆ. ಭಗವಂತ ಒಬ್ಬರೇ ಇದ್ದಾರೆ ಎಂದ ಮೇಲೆ ಧರ್ಮವೂ ಒಂದೇ ಇದೆ, ನಮ್ಮೆಲ್ಲರ ಧರ್ಮವೂ ಒಂದೇ ಆಗಿದೆ. ಅವರು ನಿಧಾನ ನಿಧಾನವಾಗಿ ಆತ್ಮದ ಧರ್ಮದ ಕಡೆಗೆ ಆಕರ್ಷಿತರಾಗುತ್ತಾರೆ. **(03–02–1988)**

ಇಂದು ಡಬಲ್ ವಿದೇಶಿಯರ ಜೊತೆಯಲ್ಲಿ ವೈಯಕ್ತಿಕವಾಗಿ ಆತ್ಮೀಕ ವಾರ್ತಾಲಾಪವನ್ನು ಮಾಡುತ್ತಿದ್ದೇವೆ. ಸೇವೆ ವೃದ್ಧಿಯಾಗುವುದು ಡ್ರಾಮಾನುಸಾರ ವಾಗಿ ಮಾಡಲ್ಪಟ್ಟಿದೆ. 'ಈಗಂತೂ ಬಹಳ ಆಗಿಬಿಟ್ಟಿದೆ' ಎಂದು ನೀವು ಎಷ್ಟೇ ಯೋಚಿಸಿದರೂ, ಅದು ಡ್ರಾಮಾದಲ್ಲಿ ಪೂರ್ವನಿಗದಿತವಾಗಿದೆ. ಆದ್ದರಿಂದ ಸೇವೆಗಾಗಿ ಪ್ಲಾನ್‌ಗಳನ್ನು ತೆಗೆಯಲೇಬೇಕಾಗಿದೆ ಮತ್ತು ತಾವೆಲ್ಲರೂ ನಿಮಿತ್ತರಾಗಿ ಮಾಡಲೇ ಬೇಕಾಗಿದೆ. ಈ ನಿಗದಿಯನ್ನು ಯಾರೂ ಬದಲಾಯಿಸಲು ಸಾಧ್ಯವಿಲ್ಲ. ತಂದೆಯು ಒಂದುವೇಳೆ ಒಂದು ವರ್ಷ ಸೇವೆಯಿಂದ ವಿಶ್ರಾಂತಿಯನ್ನು ಕೊಡಲು ಬಯಸಿದರೂ ಸಹ ಬದಲಾವಣೆ ಮಾಡಲು ಆಗುವುದಿಲ್ಲ. ಸೇವೆಯಿಂದ ಫ್ರೀ ಆಗಿ ಕುಳಿತುಕೊಳ್ಳಲು ಸಾಧ್ಯವೇ? ಹೇಗೆ 'ನೆನಪು' ಬ್ರಾಹ್ಮಣ ಜೀವನದ ಟಾನಿಕ್ ಆಗಿದೆಯೋ ಹಾಗೆ 'ಸೇವೆಯೂ' ಸಹ ಜೀವನದ ಟಾನಿಕ್ ಆಗಿದೆ. ಟಾನಿಕ್ ಇಲ್ಲದೆ ಯಾರಾದರೂ ಎಂದಾದರು ಇರಲು ಸಾಧ್ಯವೇ? ಆದರೆ ಬ್ಯಾಲನ್ಸ್ (ಸಮತೋಲನ) ಅವಶ್ಯವಾಗಿ ಬೇಕಾಗಿದೆ. ಬುದ್ಧಿಗೆ ಹೊರೆಯಾಗುವಷ್ಟು ಹೆಚ್ಚಿಗೆ ಮಾಡಬೇಡಿ ಮತ್ತು ಸೋಮಾರಿಗಳಾಗುವಷ್ಟು ಮಾಡದೆಯೂ ಇರಬೇಡಿ. ಹೊರೆಯೂ ಬೇಡ, ಸೋಮಾರಿತನವೂ ಬೇಡ. ಇದಕ್ಕೇ 'ಬ್ಯಾಲೆನ್ಸ್' ಎಂದು ಹೇಳಲಾಗುತ್ತದೆ. **(20–02–1988)**

'ಸದಾ ಪ್ರತಿಯೊಂದು ಆತ್ಮಕ್ಕೂ ಸುಖವನ್ನು ಕೊಡುವಂತಹ ಸುಖದಾತ ತಂದೆಯ ಮಗು ಆಗಿದ್ದೇನೆ' ಎಂದು ಅನುಭವ ಮಾಡುವಿರೇ? ಎಲ್ಲರಿಗೂ ಸಹ ಸುಖವನ್ನು ನೀಡುವ ವಿಶೇಷತೆ ಇದೆಯಲ್ಲವೇ? ಈ ವಿಶೇಷತೆಯೂ ಸಹ ಡ್ರಾಮಾನುಸಾರವಾಗಿ ಸಿಕ್ಕಿದೆ. ಈ ವಿಶೇಷತೆ ಎಲ್ಲರಲ್ಲೂ ಇರಲು ಸಾಧ್ಯವಿಲ್ಲ. ಯಾರು ಎಲ್ಲರಿಗೂ ಸುಖವನ್ನು ಕೊಡುತ್ತಾರೋ ಅವರಿಗೆ ಎಲ್ಲರ ಆಶೀರ್ವಾದ ಸಿಗುತ್ತದೆ. ಆದ್ದರಿಂದ ಸ್ವಯಂನಲ್ಲಿ ಸಹ ಸದಾ ಸುಖದ ಅನುಭವವನ್ನು ಮಾಡುತ್ತೀರ. ಈ ವಿಶೇಷತೆಯಿಂದ ವರ್ತಮಾನವೂ ಚೆನ್ನಾಗಿ ಆಗುತ್ತದೆ ಮತ್ತು ಭವಿಷ್ಯವೂ ಚೆನ್ನಾಗಿ ಆಗುತ್ತದೆ. ಎಲ್ಲರಿಂದ ಪ್ರೀತಿಯೂ ಸಿಗುವಂತಹ ಮತ್ತು ಆಶೀರ್ವಾದವೂ ಸಿಗುವಂತಹ ಎಷ್ಟೊಂದು ಒಳ್ಳೆಯ ಪಾತ್ರವಿದೆ. ಇದಕ್ಕೇ 'ಒಂದನ್ನು ಕೊಟ್ಟು ಸಾವಿರ ಪಡೆಯುವುದು' ಎಂದು ಹೇಳಲಾಗುವುದು. ಹಾಗಾಗಿ ಸೇವೆಯಿಂದ ಸುಖವನ್ನು ಕೊಡುತ್ತೀರಿ, ಈ ಕಾರಣದಿಂದಾಗಿ ಎಲ್ಲರ ಪ್ರೀತಿಯು ಸಿಗುತ್ತದೆ. ಈ ವಿಶೇಷತೆಯನ್ನು ಸದಾ ಖಾಯಂ ಆಗಿ ಇಟ್ಟುಕೊಳ್ಳಿ. **(27–03–1988)**

ಈ ವರ್ಷ ಬಾಪ್‌ದಾದಾರವರು ಆರು ತಿಂಗಳ ಸೇವೆಯ ರಿಜಲ್ಟನ್ನು ನೋಡಲು ಬಯಸುತ್ತಾರೆ. ಸೇವೆಗಾಗಿ ಏನೆಲ್ಲಾ ಪ್ಲಾನ್‌ಗಳನ್ನು ರೂಪಿಸಿರುವಿರೋ ಅದಕ್ಕಾಗಿ ಒಬ್ಬರು ಮತ್ತೊಬ್ಬರಿಗೆ ಸಹಯೋಗಿಗಳಾಗಿ ನಾಲ್ಕಾರು ಕಡೆ ಚೆನ್ನಾಗಿ ಸುತ್ತಾಡಿರಿ. ಚಿಕ್ಕವರು ದೊಡ್ಡವರು ಎಲ್ಲರನ್ನೂ ಉಮ್ಮಂಗ ಉತ್ಸಾಹದಲ್ಲಿ ತಂದು ಮೂರೂ ಪ್ರಕಾರದ ಸೇವೆಗಳಲ್ಲಿ ಮುಂದುವರೆಸಿರಿ. ಆದ್ದರಿಂದ ಬಾಪ್‌ದಾದಾ ರವರು ಈ ವರ್ಷದಲ್ಲಿ ಪೂರ್ತಿ ರಾತ್ರಿ ಹಗಲು ಸೇವೆ ಮಾಡಿ ಎಂದು ಕೊಟ್ಟಿದ್ದಾರೆ. ಈಗ ಮೂರೂ ಪ್ರಕಾರದ ಸೇವೆಯ ಫಲವನ್ನು ತಿನ್ನುವ ವರ್ಷ ಇದಾಗಿದೆ. ಬರುವ ಸಮಯವಲ್ಲ, ಫಲವನ್ನು ತಿನ್ನುವ ಸಮಯವಾಗಿದೆ. ಈ ವರ್ಷ ಬರುವಂತಹ ನಿಗದಿ ಇಲ್ಲ. ಅವ್ಯಕ್ತ ಬಾಪ್‌ದಾದಾರವರ ಸಕಾಶ ಮತ್ತು ತಂದೆಯ ಜೊತೆಯಂತೂ ಸದಾ ಇದೆ. ಏನು ಡ್ರಾಮಾದಲ್ಲಿ ನಿಗದಿಯಾಗಿತ್ತೋ ಅದನ್ನು ತಿಳಿಸಲಾಗಿದೆ. ಡ್ರಾಮಾದ ಒಪ್ಪಿಗೆಯನ್ನು ಒಪ್ಪಲೇ ಬೇಕಾಗುತ್ತದೆ.

ಈಗ ಮಿಲನ ಮಾಡುವ ಖೋಟಾವನ್ನು ಪೂರ್ಣ ಮಾಡಬೇಕಾಗಿದೆ. ರಥವನ್ನೂ ಸಹ ಎಕ್ಸ್‌ಟ್ರಾ (ಹೆಚ್ಚುವರಿ) ಸಕಾಶವನ್ನು ಕೊಟ್ಟು ನಡೆಸಬೇಕಾಗಿದೆ ಎಂಬುದನ್ನು ತಿಳಿಸಿದ್ದೇನಲ್ಲವೇ? ಇದೇನೂ

ಸಾಧಾರಣ ಮಾತಲ್ಲ. ಎಲ್ಲವನ್ನೂ ನೋಡಬೇಕಾಗುತ್ತದೆಯಲ್ಲವೇ? ಎಲ್ಲಾ ಶಕ್ತಿಗಳು ಜಮಾ ಇರುವ ಕಾರಣ ರಥವು ಸಹ ಇಷ್ಟೊಂದು ಸಹಯೋಗವನ್ನು ಕೊಡುತ್ತಿದೆ. ಶಕ್ತಿಗಳು ಜಮಾ ಆಗಿಲ್ಲವೆಂದಿದ್ದರೆ ಇಷ್ಟೊಂದು ಸೇವೆಯು ಬಹಳ ಕಷ್ಟವಾಗಿ ಬಿಡುತ್ತಿತ್ತು. ಇದೂ ಸಹ ಡ್ರಾಮಾದಲ್ಲಿ ಪ್ರತಿ ಆತ್ಮನ ಪಾತ್ರವಾಗಿದೆ. ಶ್ರೇಷ್ಠ ಕರ್ಮದ ಯಾವ ಪುಣ್ಯವು ಜಮಾ ಆಗಿರುತ್ತದೆಯೋ ಅದು ಸಮಯದಲ್ಲಿ ಕೆಲಸಕ್ಕೆ ಬರುತ್ತದೆ. ಎಷ್ಟೊಂದು ಆತ್ಮಗಳ ಆಶೀರ್ವಾದಗಳು ಸಿಗುತ್ತದೆಯೋ ಅದೂ ಸಹ ಜಮಾ ಆಗುತ್ತದೆ. ಒಂದಲ್ಲ ಒಂದು ವಿಶೇಷ ಪುಣ್ಯದ ಖಾತೆಯು ಜಮಾ ಆಗಿರುವ ಕಾರಣ ವಿಶೇಷ ಪಾತ್ರವಿದೆ. ನಿರ್ವಿಘ್ನವಾಗಿ ರಥ ನಡೆಯುವುದೂ ಸಹ ಡ್ರಾಮಾದಲ್ಲಿ ಪಾತ್ರವಾಗಿದೆ. ಆರು ತಿಂಗಳಿನ ಸಮಯ ಕಡಿಮೆಯೇನಲ್ಲ. ಒಳ್ಳೆಯದು. ಎಲ್ಲರನ್ನೂ ರಾಜಿ ಮಾಡೋಣ. **(31–03–1988)**

ಉಳಿದಿರುವ ಎಲ್ಲ ಲೆಕ್ಕಾಚಾರಗಳನ್ನು ಸಹಜವಾಗಿ ಚುಕ್ತಾ ಮಾಡಿಕೊಳ್ಳು ತ್ತಿರುವುದು ಮತ್ತು 95% ಆತ್ಮಗಳ ಮೂಲಕ ಸದಾ ಸ್ನೇಹ ಮತ್ತು ಸಹಯೋಗದ ಅನುಭೂತಿಯನ್ನು ಮಾಡುವುದು ಭಾಗ್ಯಶಾಲಿ ಆತ್ಮದ ಗುರುತಾಗಿದೆ. ಈ ಭಾಗ್ಯಶಾಲಿ ಆತ್ಮಗಳು ಜನರ ಸಂಬಂಧ ಸಂಪರ್ಕದಲ್ಲಿ ಬರುತ್ತಿದ್ದರೂ ಸದಾ ಪ್ರಸನ್ನವಾಗಿ ಇರುತ್ತಾರೆ. ಪ್ರಶ್ನಚಿತ್ತರಲ್ಲ ಆದರೆ ಸದಾ ಪ್ರಸನ್ನಚಿತ್ತರಾಗಿರುತ್ತಾರೆ. 'ಇವರು ಹೀಗೇಕೆ ಮಾಡುತ್ತಿದ್ದಾರೆ, ಹೀಗೇಕೆ ಹೇಳುತ್ತಿದ್ದಾರೆ, ಈ ಮಾತು ಈ ರೀತಿಯಾಗಿ ಅಲ್ಲ, ಹೀಗಿರಬೇಕು' ಎಂದು ಪ್ರಸನ್ನಚಿತ್ತರು ಹೇಳುವುದಿಲ್ಲ. ಮನಸ್ಸಿನಲ್ಲಿ ಇಂತಹ ಪ್ರಶ್ನೆಗಳು ಬರುವವರಿಗೆ ಪ್ರಶ್ನಚಿತ್ತರು ಎಂದು ಹೇಳಲಾಗುವುದು ಮತ್ತು ಪ್ರಶ್ನಚಿತ್ತರು ಎಂದಿಗೂ ಪ್ರಸನ್ನಚಿತ್ತರಾಗಿರಲು ಸಾಧ್ಯವಿಲ್ಲ. ಅವರ ಮನಸ್ಸಿನಲ್ಲಿ ಸದಾ ಏಕೆ, ಏನು ಎಂಬ 'ಕ್ಯೂ' ನಿಂತಿರುತ್ತದೆ. ಹಾಗಾಗಿ ಆ ಕ್ಯೂವನ್ನು ಸಮಾಪ್ತಿ ಮಾಡುವುದರಲ್ಲೇ ಸಮಯವು ಹೊರಟು ಹೋಗುತ್ತದೆ ಮತ್ತು ಈ ಕ್ಯೂ  ನೀವು ಬಿಡಬೇಕೆಂದರೂ ಬಿಡಲಾಗದಂತಿರುತ್ತದೆ. ಸಮಯವನ್ನು ಕೊಡಲೇ ಬೇಕಾಗುತ್ತದೆ. ಏಕೆಂದರೆ ಈ ಕ್ಯೂನ ರಚಯಿತ ನೀವಾಗಿದ್ದೀರಿ. ರಚನೆಯನ್ನು ರಚಿಸಿರುವಿರಿ ಎಂದರೆ ಪಾಲನೆಯನ್ನು ಮಾಡಲೇ ಬೇಕಾಗುತ್ತದೆ, ಪಾಲನೆ ಮಾಡುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ. ತಾವು ಎಷ್ಟೇ ಬೇಡವೆಂದು ಕೊಂಡರೂ ತಮ್ಮ ಸಮಯ ಮತ್ತು ಶಕ್ತಿಯನ್ನು ನೀಡಲೇಬೇಕಾಗುತ್ತದೆ. ಆದ್ದರಿಂದ ಈ ವ್ಯರ್ಥ ರಚನೆಯನ್ನು ಕಂಟ್ರೋಲ್ ಮಾಡಿರಿ. ಈ ಬರ್ತ್ ಕಂಟ್ರೋಲ್‌ನ್ನು ಮಾಡಿ. ತಿಳಿಯಿತೇ? ಧೈರ್ಯವಿದೆಯೇ? ಮನುಷ್ಯರು 'ಇದೆಲ್ಲವನ್ನೂ ಈಶ್ವರನು ಕೊಟ್ಟಿರುವುದು, ನಮ್ಮದೇನಾದರೂ ತಪ್ಪಿದೆಯೇ' ಎಂದು ಹೇಳುತ್ತಾರಲ್ಲವೇ? ಅದೇ ರೀತಿಯಲ್ಲಿ ಬ್ರಾಹ್ಮಣರೂ ಸಹ 'ಇದು ಡ್ರಾಮಾದಲ್ಲಿ ನಿಗದಿಯಾಗಿದೆ' ಎಂದು ಹೇಳುತ್ತಾರೆ. ಆದರೆ ಡ್ರಾಮಾದ ಮಾಸ್ಟರ್ ರಚಯಿತ, ಮಾಸ್ಟರ್ ನಾಲೆಡ್ಜ್‌ಫುಲ್ ಆಗಿ ಪ್ರತಿಯೊಂದು ಕರ್ಮವನ್ನು ಶ್ರೇಷ್ಠವನ್ನಾಗಿ ಮಾಡಿಕೊಳ್ಳುತ್ತಾ ಹೋಗಿರಿ. **(19–11–1989)**

ಹೃದಯವಿರುವುದೇ ಹೃದಯರಾಮನಿಗಾಗಿ. ನಿಮಗೆ ತಂದೆಯನ್ನು ನೆನಪು ಮಾಡುವ ಒಂದೇ ಕೆಲಸವು ದೊರೆತಿದೆ. ಸಾಕು. ಯಾರ ಹೃದಯದಲ್ಲಿ ತಂದೆ ಇರುತ್ತಾರೋ ಅವರು ಸದಾ 'ವಾಹ್–ವಾಹ್' ಎಂಬ ಗೀತೆಯನ್ನು ಹಾಡುತ್ತಾರೆ. ಮತ್ತು ಯಾರ ಹೃದಯದಲ್ಲಿ ತಂದೆಯು ಇರುವುದಿಲ್ಲವೋ ಅವರು 'ಅಯ್ಯೋ–ಅಯ್ಯೋ' ಎಂಬ ಗೀತೆಯನ್ನು ಹಾಡುತ್ತಾರೆ. ಪ್ರಪಂಚದವರು 'ಅಯ್ಯೋ–ಅಯ್ಯೋ' ಎನ್ನುತ್ತಾರೆ ಮತ್ತು ತಾವು 'ವಾಹ್–ವಾಹ್' ಎನ್ನುವಿರಿ. ಸ್ವಯಂ ಸಹ ವಾಹ್–ವಾಹ್ ಆಗಿರುವಿರಿ, ತಂದೆಯೂ ವಾಹ್–ವಾಹ್ ಮತ್ತು ಡ್ರಾಮಾದಲ್ಲಿ ಏನೆಲ್ಲಾ ಆಗುತ್ತಿರುವುದೋ ಅದೂ ಸಹ ವಾಹ್–ವಾಹ್.  ಅಂದಾಗ ಸದಾ ವಾಹ್–ವಾಹ್ ಎಂಬ ಗೀತೆಯನ್ನು ಹಾಡುವವರಾಗಿದ್ದೀರಾ? ಅಥವಾ ಆಗಾಗ ಅಯ್ಯೋ–ಅಯ್ಯೋ ಎಂಬ ಗೀತೆಯನ್ನೂ ಹಾಡುವವರಾಗಿದ್ದೀರಾ? ಮನಸ್ಸಿನಲ್ಲೂ, ಕನಸಿನಲ್ಲೂ ಎಂದಿಗೂ 'ಅಯ್ಯೋ' ಎಂಬ ಶಬ್ದವು ಬರಬಾರದು. 'ಅಯ್ಯೋ ಏನಾಯಿತು' ಎಂದು ಎಂದಾದರೂ ಹೇಳುವಿರಾ?  ಏನು ಆಗಿದೆಯೋ ಅದೂ ವಾಹ್, ಏನು ಆಗುತ್ತಿದೆಯೋ ಅದೂ ವಾಹ್, ಏನು ಆಗಬೇಕಿರುವುದೋ ಅದೂ ವಾಹ್. ಮೂರೂ ಕಾಲಗಳು 'ವಾಹ್–ವಾಹ್' ಆಗಿದೆ. ಒಂದು ಕಾಲವೂ ಸಹ ಕೆಟ್ಟದಾಗಲು ಸಾಧ್ಯವಿಲ್ಲ. ಏಕೆಂದರೆ ತಂದೆಯೂ ಒಳ್ಳೆಯವರಿಗಿಂತ ಒಳ್ಳೆಯವರು, ಸಂಗಮಯುಗವೂ ಎಲ್ಲದಕ್ಕಿಂತ ಒಳ್ಳೆಯದು ಮತ್ತು ಯಾವ ಪ್ರಾಪ್ತಿಯಾಗಿದೆಯೋ ಅದೂ ಸಹ ಒಳ್ಳೆಯದಕ್ಕಿಂತ ಒಳ್ಳೆಯದಾಗಿದೆ ಮತ್ತು ಭವಿಷ್ಯದಲ್ಲಿ ಏನು ಪ್ರಾಪ್ತವಾಗಬೇಕಿದೆಯೋ ಅದೂ ಸಹ ಒಳ್ಳೆಯದಕ್ಕಿಂತ ಒಳ್ಳೆಯದೇ ಆಗಲಿದೆ. ಎಲ್ಲವೂ ಒಳ್ಳೆಯದೇ ಆಗುವುದರಿಂದ 'ವಾಹ್–ವಾಹ್' ಎಂಬ ಹಾಡನ್ನು ಹಾಡುತ್ತಾ ಇರಿ. ಎಲ್ಲಿ ಎಲ್ಲವೂ ಒಳ್ಳೆಯದಾಗಿರುತ್ತದೋ ಅಲ್ಲಿ ಯಾವುದೇ ಇಚ್ಛೆ ಇರಲು ಸಾಧ್ಯವಿಲ್ಲ. ಏಕೆಂದರೆ ಒಂದುವೇಳೆ ಇಚ್ಛೆ ಇರುತ್ತದೆ ಎಂದರೆ ಒಳ್ಳೆಯದಿರಲು ಸಾಧ್ಯವಿಲ್ಲ. ಮತ್ತು ಒಳ್ಳೆಯದಾಗುತ್ತಿದೆ ಎಂದರೆ ಅಲ್ಲಿ ಇಚ್ಛೆ ಇರಲು ಸಾಧ್ಯವಿಲ್ಲ.  ಯಾವಾಗ ಎಲ್ಲವೂ ಪ್ರಾಪ್ತಿಯಾಗುವುದೋ ಆಗಲೇ ಒಳ್ಳೆಯದೆಂದು ಹೇಳಲಾಗುವುದು. ಯಾವಾಗ ಅಪ್ರಾಪ್ತಿ ಇರುತ್ತದೋ ಆಗ ಇಚ್ಛೆ ಇರುತ್ತದೆ. ಅಂದಮೇಲೆ ಯಾವುದಾದರೂ ಅಪ್ರಾಪ್ತಿ

ಇದೆಯೇ? ಮಾತೆಯರಿಗೆ ಒಡವೆ ಬೇಕೇ? ಚಿನ್ನ ಬೇಕೇ? ಪಾಂಡವರಿಗೆ ಲಕ್ಷ ಅಥವಾ ಪದಮದಷ್ಟು ಬೇಕೇ? ಕೋಟಿ ಬೇಕೇ? ಬೇಡವೇ? ಏಕೆಂದರೆ ಈಗಿನ ಕೋಟ್ಯಾಧಿಪತಿಗಳಾಗುವುದು ಎಂದರೆ ಸದಾ ಕಾಲದ ಕೋಟಿಗಳನ್ನು ಕಳೆದುಕೊಳ್ಳುವುದಾಗಿದೆ. ಈಗ ಏನು ಮಾಡುವಿರಿ? ಈ ಸುಳ್ಳಿನ ಮಾಯೆ, ಸುಳ್ಳಿನ ಕಾಯ, ಸುಳ್ಳಿನಿಂದ ಏನು ಮಾಡುವಿರಿ? ಶರೀರ ನಿರ್ವಹಣೆಗಾಗಿ, ರೊಟ್ಟಿಗಾಗಿಯಂತೂ ಬಹಳಷ್ಟು ಸಿಗುತ್ತಿದೆ ಮತ್ತು ಸಿಗುತ್ತಲೇ ಇರುತ್ತದೆ. ಮತ್ತೇನು ಬೇಕಾಗಿದೆ? ಲಾಟರಿ ಏನಾದರೂ ಬೇಕೇ? ಕೆಲವು ಮಕ್ಕಳು ಲಾಟರಿ ಬಂದರೆ ಯಜ್ಞಕ್ಕೆ ಕೊಡೋಣವೆಂದು ತಿಳಿಯುತ್ತಾರೆ. ಆದರೆ ಅಂತಹ ಹಣವು ಯಜ್ಞದಲ್ಲಿ ಉಪಯೋಗವಾಗುವುದಿಲ್ಲ. ತಮ್ಮ ಇಚ್ಛೆಯಾಗಿರುತ್ತದೆ, ಆದರೆ 'ಲಾಟರಿ ಬಂದರೆ ಸೇವೆ ಮಾಡುತ್ತೇವೆ' ಎಂದು ಹೇಳುತ್ತಾರೆ. ಈಗಂತೂ ಸತ್ಯವಾದ ಸಂಪಾದನೆಯನ್ನು ಜಮಾ ಮಾಡಿಕೊಳ್ಳುತ್ತಿರುವಿರಿ, ಆದ್ದರಿಂದ ಇಚ್ಛಾ ಮಾತ್ರಂ ಅವಿದ್ಯಾ ಆಗಿರಿ. ಏಕೆಂದರೆ ಇಚ್ಛೆಯಲ್ಲಿ ಹೋದಿರಿ ಎಂದರೆ ಇಚ್ಛೆಯ ಹಿಂದೆ ಓಡುವುದು ಮೃಗತೃಷ್ಣದ (ಮಾಯಾ ಜಿಂಕೆಯ) ಹಿಂದೆ ಓಡಿದಂತೆ. ಅಂದಮೇಲೆ ಇಚ್ಛೆ ಸಮಾಪ್ತಿಯಾಗಿ ಒಳ್ಳೆಯವರಾದಿರಾ? ಯಾವಾಗ ರಚಯಿತನೇ ತಮ್ಮವರಾಗಿ ಬಿಟ್ಟಿದ್ದಾರೆ ಎಂದಾಗ ರಚನೆ ಏನು ಮಾಡುತ್ತದೆ? ಬೇಹದ್ದಿನ ಮುಂದೆ ಹದ್ದು ಹೇಗೆನಿಸುತ್ತದೆ? ಏನೂ ಸಹ ಇಲ್ಲದಂತೆ. ಒಂದುವೇಳೆ ಹದ್ದಿನಲ್ಲಿ ಸಿಕ್ಕಿಹಾಕಿಕೊಂಡಿರಿ ಅಂದರೆ ಬೇಹದ್ ಹೊರಟು ಹೋದಂತೆ. **(01–12–1989)**

ಕೆಲವು ಮಕ್ಕಳು ತಮ್ಮ ಜೊತೆಗೂ ಅಪ್ರಸನ್ನವಾಗಿರುವುದನ್ನು ಬಾಪ್‌ದಾದಾರವರು ನೋಡಿದ್ದಾರೆ. ಚಿಕ್ಕ ಮಾತಿಗೂ ಅಪ್ರಸನ್ನರಾಗಿರುತ್ತಾರೆ. ಮೊಟ್ಟ ಮೊದಲನೆಯ ಪಾಠ 'ನಾನು ಯಾರು' ಎಂಬುದನ್ನು ತಿಳಿದಿದ್ದರೂ ಸಹ ಮರೆತು ಹೋಗುತ್ತಾರೆ. ತಂದೆಯು ನಮ್ಮನ್ನು ಏನನ್ನಾಗಿ ಮಾಡಿದ್ದಾರೆ, ಏನನ್ನು ಕೊಟ್ಟಿದ್ದಾರೋ ಅದನ್ನು ಮರೆತುಬಿಡುತ್ತಾರೆ. ತಂದೆಯು ಪ್ರತಿಯೊಂದು ಮಗುವನ್ನು ಪೂರ್ತಿ ಆಸ್ತಿಗೆ ಅಧಿಕಾರಿಯನ್ನಾಗಿ ಮಾಡಿದ್ದಾರೆ. ಕೆಲವರಿಗೆ ಪೂರ್ತಿ, ಕೆಲವರಿಗೆ ಅರ್ಧ ಆಸ್ತಿಯನ್ನು ನೀಡಿಲ್ಲ. ಕೆಲವರಿಗೆ ಅರ್ಧ ಮತ್ತು ಕೆಲವರಿಗೆ ಕಾಲು ಈ ರೀತಿಯಾಗಿ ಸಿಕ್ಕಿದೆಯೇ? ಅರ್ಧ ಸಿಕ್ಕಿದೆಯೇ ಅಥವಾ ಅರ್ಧ ತೆಗೆದುಕೊಂಡಿರುವಿರೇ? ತಂದೆಯು ಎಲ್ಲರಿಗೂ 'ಮಾಸ್ಟರ್ ಸರ್ವಶಕ್ತಿವಂತ' ಎಂಬ ವರದಾನ ಮತ್ತು ಆಸ್ತಿಯನ್ನು ಕೊಟ್ಟಿದ್ದಾರೆ. ಮಕ್ಕಳಿಗೆ ಕೆಲವು ಶಕ್ತಿಗಳನ್ನು ಕೊಟ್ಟಿದ್ದಾರೆ, ಕೆಲವನ್ನು ಕೊಡಲಿಲ್ಲವೆಂದಲ್ಲ. ತಮಗಾಗಿ ಇಟ್ಟುಕೊಳ್ಳಲಿಲ್ಲ. ಸರ್ವಗುಣ ಸಂಪನ್ನರನ್ನಾಗಿ ಮಾಡಿದ್ದಾರೆ, ಸರ್ವಪ್ರಾಪ್ತಿ ಸ್ವರೂಪರನ್ನಾಗಿ ಮಾಡಿದ್ದಾರೆ. ಆದರೆ ತಂದೆಯಿಂದ ಏನೆಲ್ಲಾ ಪ್ರಾಪ್ತಿಗಳಾಗಿದೆಯೋ ಅದನ್ನು ಸ್ವಯಂನಲ್ಲಿ ಸಮಾವೇಶ ಮಾಡಿಕೊಳ್ಳುವುದಿಲ್ಲ. ಹೇಗೆ ಸ್ಥೂಲವಾದ ಹಣ ಅಥವಾ ಸಾಧನ ಪ್ರಾಪ್ತಿಯಾದರೂ ಸಹ ಖರ್ಚು ಮಾಡಲು ಬರಲಿಲ್ಲ ಅಥವಾ ಸಾಧನಗಳನ್ನು ಬಳಕೆ ಮಾಡಲು ಬರಲಿಲ್ಲವೆಂದರೆ ಪ್ರಾಪ್ತಿಯಾಗಿದ್ದರೂ ಸಹ ಅದರಿಂದ ವಂಚಿತರಾಗಿಬಿಡುತ್ತಾರೆ. ಇಂತಹ ಎಲ್ಲಾ ಪ್ರಾಪ್ತಿಗಳು ಮತ್ತು ಖಜಾನೆ ಎಲ್ಲವೂ ಎಲ್ಲರ ಹತ್ತಿರ ಇದೆ. ಆದರೆ ಸಮಯದಲ್ಲಿ ಉಪಯೋಗಿಸುವ ವಿಧಿ ಬರುವುದಿಲ್ಲ. ನಂತರ 'ಇದನ್ನು ಮಾಡಬೇಕು, ಇದನ್ನು ಮಾಡಬಾರದು ಎಂಬುದನ್ನು ತಿಳಿದಿದ್ದೆ ಆದರೆ ಆ ಸಮಯದಲ್ಲಿ ಮರೆತು ಹೋದೆ' ಎಂದು ನಂತರ ಹೇಳುತ್ತಾರೆ. 'ಹೀಗೆ ಮಾಡಬಾರದೆಂದು ಈಗ ತಿಳಿಯಿತು' ಎಂದು ಹೇಳುತ್ತಾರೆ. ಆ ಸಮಯದಲ್ಲಿ ಒಂದು ಸೆಕೆಂಡು ಕಳೆದು ಹೋದರೂ ಸಹ ಸಫಲತೆಯ ಗುರಿಯನ್ನು ತಲುಪುಲು ಸಾಧ್ಯವಾಗುವುದಿಲ್ಲ. ಏಕೆಂದರೆ ಸಮಯದ ಗಾಡಿಯು ಹೊರಟು ಹೋಗಿರುವುದು. ಒಂದು ಸೆಕೆಂಡು ತಡ ಮಾಡಲಿ, ಅಥವಾ ಒಂದು ಘಂಟೆ ತಡ ಮಾಡಲಿ, ಸಮಯವಂತೂ ಹೋಗಿ ಬಿಟ್ಟಿತಲ್ಲವೇ? ಯಾವಾಗ ಸಮಯದ ಗಾಡಿ ಹೊರಟುಬಿಡುವುದೋ ಆಗ ಪುನಃ ಸ್ವಯಂನೊಂದಿಗೆ ಹೃದಯವಿದೀರ್ಣರಾಗುತ್ತೀರಿ ಮತ್ತು 'ನನ್ನ ಭಾಗ್ಯವೇ ಹೀಗೆ, ಡ್ರಾಮಾದಲ್ಲಿ ನನ್ನ ಪಾತ್ರವೇ ಹೀಗಿದೆ' ಎಂದು ಅಪ್ರಸನ್ನತೆಯ ಸಂಸ್ಕಾರವು ಇಮರ್ಜ್ ಆಗಿಬಿಡುತ್ತದೆ. ಸ್ವಯಂನೊಂದಿಗೆ ಅಪ್ರಸನ್ನರಾಗಲು ಮುಖ್ಯವಾಗಿ ಎರಡು ಕಾರಣಗಳಿವೆ ಎಂದು ಮೊದಲೇ ತಿಳಿಸಿದ್ದೇನೆ. ಒಂದಾಗಿದೆ – ಸ್ವಯಂ ಹೃದಯವಿದೀರ್ಣರಾಗುವುದು, ಮತ್ತೊಂದಾಗಿದೆ – ಬೇರೆಯವರ ವಿಶೇಷತೆಯನ್ನು, ಭಾಗ್ಯವನ್ನು ಅಥವಾ ಪಾತ್ರವನ್ನು ನೋಡಿ ಈರ್ಷ್ಯೆ ಉತ್ಪನ್ನ ವಾಗುವುದು. ಧೈರ್ಯ ಕಡಿಮೆ ಆಗುತ್ತದೆ, ಈರ್ಷ್ಯೆಯು ಜಾಸ್ತಿ ಆಗುತ್ತದೆ. ಹೃದಯವಿದೀರ್ಣರು ಎಂದಿಗೂ ಪ್ರಸನ್ನವಾಗಿರಲು ಸಾಧ್ಯವಿಲ್ಲ ಮತ್ತು ಈರ್ಷ್ಯೆಯುಳ್ಳವರೂ ಸಹ ಎಂದಿಗೂ ಪ್ರಸನ್ನವಾಗಿರಲು ಸಾಧ್ಯವಿಲ್ಲ. ಏಕೆಂದರೆ ಈ ಎರಡೂ ಪ್ರಕಾರದ ಆತ್ಮಗಳ ಇಚ್ಛೆಗಳು ಎಂದಿಗೂ ಪೂರ್ಣವಾಗುವುದಿಲ್ಲ. ಮತ್ತು ಇಚ್ಛೆಗಳು ನಮ್ಮನ್ನು ಒಳ್ಳೆಯವರಾಗಲು ಬಿಡುವುದಿಲ್ಲ. ಈ ಕಾರಣದಿಂದ ಪ್ರಸನ್ನವಾಗಿರುವುದಿಲ್ಲ. ಪ್ರಸನ್ನರಾಗಿರಲು ಸದಾ ಈ ಮಾತನ್ನು ಬುದ್ಧಿಯಲ್ಲಿ ನೆನಪಿಡಬೇಕಿದೆ – 'ಸಂಗಮಯುಗದಲ್ಲಿ ಡ್ರಾಮಾದ ನಿಯಮಾನುಸಾರ ಪ್ರತಿ ಬ್ರಾಹ್ಮಣ ಆತ್ಮಕ್ಕೂ ಒಂದಲ್ಲ ಒಂದು ವಿಶೇಷತೆಯು ಸಿಕ್ಕಿದೆ. ಮಾಲೆಯಲ್ಲಿ ಕೊನೆಯ 16,000 ದ ಮಣಿಯಾಗಿದ್ದರೂ ಸಹ ಒಂದಲ್ಲ

ಒಂದು ವಿಶೇಷತೆಯು ಸಿಕ್ಕಿದೆ. ಇನ್ನೂ ಮುಂದಕ್ಕೆ ಹೋದರೂ 9 ಲಕ್ಷಗಳ ಗಾಯನವೇನಿದೆಯೋ ಅವರಲ್ಲಿಯೂ ಸಹ ಒಂದಲ್ಲ ಒಂದು ವಿಶೇಷತೆಯು ಇದೆ. ಮೊದಲು ತಮ್ಮ ವಿಶೇಷತೆಯನ್ನು ಗುರುತಿಸಿಕೊಳ್ಳಿ ಮತ್ತು ಕಾರ್ಯದಲ್ಲಿ ತೊಡಗಿಸಿರಿ. ಇನ್ನೂ 9 ಲಕ್ಷದವರೆಗೆ ತಲುಪಲೇ ಇಲ್ಲ. ಆದ್ದರಿಂದ ಬ್ರಾಹ್ಮಣ ಜನ್ಮದ ಭಾಗ್ಯದ ವಿಶೇಷತೆಯನ್ನು ಅರಿತುಕೊಳ್ಳಿ. ಅದನ್ನು ಅರಿತುಕೊಳ್ಳಿ ಮತ್ತು ಕಾರ್ಯದಲ್ಲಿ ತೊಡಗಿಸಿರಿ. ಕೇವಲ ಬೇರೆಯವರ ವಿಶೇಷತೆಯನ್ನು ನೋಡುತ್ತಾ ಹೃದಯ ವಿದೀರ್ಣತೆಯಲ್ಲಿ ಅಥವಾ ಈರ್ಷ್ಯೆಯಲ್ಲಿ ಬರಬೇಡಿರಿ. ಆದರೆ ತಮ್ಮ ವಿಶೇಷತೆಯನ್ನು ಕಾರ್ಯದಲ್ಲಿ ತೊಡಗಿಸುವುದರಿಂದ ಆ ಒಂದು ವಿಶೇಷತೆ ಇನ್ನೂ ಅನೇಕ ವಿಶೇಷತೆಗಳನ್ನು ಕರೆತರುತ್ತದೆ. ಒಂದರ ಮುಂದೆ ಬಿಂದುವನ್ನು ಹಾಕುತ್ತಾ ಹೋದರೆ ಎಷ್ಟಾಗುತ್ತದೆ? ಒಂದಕ್ಕೆ ಒಂದು ಬಿಂದುವನ್ನು ಹಾಕಿದರೆ ಹತ್ತು ಆಗುತ್ತದೆ, ಇನ್ನೊಂದು ಬಿಂದುವನ್ನು ಹಾಕಿದರೆ ನೂರಾಗುತ್ತದೆ, ಮೂರನೆಯದನ್ನು ಹಾಕಿದರೆ...... ಈ ಲೆಕ್ಕವಂತೂ ಬರುತ್ತದೆಯಲ್ಲವೇ? ಕಾರ್ಯದಲ್ಲಿ ತೊಡಗಿಸುವುದು ಅಂದರೆ ವೃದ್ಧಿ ಮಾಡಿಕೊಳ್ಳುವುದಾಗಿದೆ. ಬೇರೆಯವರನ್ನು ನೋಡಬೇಡಿರಿ. ತಮ್ಮ ವಿಶೇಷತೆಯನ್ನು ಕಾರ್ಯದಲ್ಲಿ ತೊಡಗಿಸಿ. ಬಾಪ್‌ದಾದಾರವರು ಸದಾ ಭೋಲಿ ಭಂಡಾರಿಯ (ಭೋಲಿ ದಾದಿ) ಉದಾಹರಣೆಯನ್ನು ಕೊಡುತ್ತಾರಲ್ಲವೇ. ಮಹಾರಥಿಗಳ ಹೆಸರು ಆಗಾಗ ಬರುತ್ತದೆ ಆದರೆ ಇವರ ಹೆಸರನ್ನು ಸದಾ ಹೇಳುತ್ತಿರುತ್ತಾರೆ. ಏನು ವಿಶೇಷತೆ ಇತ್ತೋ ಅದನ್ನು ಕಾರ್ಯದಲ್ಲಿ ತೊಡಗಿಸಿದರು. ಭಂಡಾರವನ್ನು ಸಂಭಾಲನೆ ಮಾಡುತ್ತಿರಬಹುದು, ಆದರೆ ವಿಶೇಷತೆಯನ್ನು ಕಾರ್ಯದಲ್ಲಿ ತೊಡಗಿಸುವುದರಿಂದ ವಿಶೇಷ ಆತ್ಮಗಳ ರೀತಿಯಲ್ಲಿ ಗಾಯನ ಮಾಡಲ್ಪಡುತ್ತಾರೆ. ಮಧುಬನವನ್ನು ವರ್ಣಿಸುವಾಗ ದಾದಿಯರ ಮಾತುಗಳನ್ನು ತಿಳಿಸುತ್ತಾರೆ ಮತ್ತು ಬೋಲೀದಾದಿ ಯವರ ಮಾತುಗಳನ್ನು ತಿಳಿಸುತ್ತಾರೆ. ಭಾಷಣವನ್ನೇನೂ ಮಾಡುವುದಿಲ್ಲ ಆದರೆ ವಿಶೇಷತೆಯನ್ನು ಕಾರ್ಯದಲ್ಲಿ ತೊಡಗಿಸಿದ್ದರಿಂದ ಸ್ವಯಂ ವಿಶೇಷರಾದರು. ಬೇರೆಯವರೂ ಸಹ ವಿಶೇಷ ದೃಷ್ಟಿಯಿಂದ ನೋಡುತ್ತಾರೆ. ಹಾಗಾದರೆ ಪ್ರಸನ್ನರಾಗಿರಲು ಏನು ಮಾಡುವಿರಿ? ವಿಶೇಷತೆಯನ್ನು ಕಾರ್ಯದಲ್ಲಿ ತೊಡಗಿಸಿರಿ. ಆಗ ವೃದ್ಧಿಯಾಗುವುದು ಮತ್ತು ಯಾವಾಗ ಎಲ್ಲರೂ ಬಂದು ಬಿಡುತ್ತಾರೋ ಆಗ ಸಂಪನ್ನರಾಗಿಬಿಡುವಿರಿ. ಮತ್ತು ಪ್ರಸನ್ನತೆಯ ಆಧಾರ 'ಸಂಪನ್ನತೆ' ಆಗಿದೆ. ಯಾರು ಸ್ವಯಂನಿಂದ ಪ್ರಸನ್ನರಾಗಿರುತ್ತಾರೋ ಅವರು ಅನ್ಯರಿಂದಲೂ ಪ್ರಸನ್ನರಾಗಿರುತ್ತಾರೆ, ಸೇವೆಯಿಂದಲೂ ಪ್ರಸನ್ನರಾಗಿರುತ್ತಾರೆ. ಯಾವುದೇ ಸೇವೆ ಸಿಕ್ಕಿದರೂ ಅದರಲ್ಲಿ ಎಲ್ಲರನ್ನೂ ಪ್ರಸನ್ನಗೊಳಿಸಿ ಸೇವೆಯಲ್ಲಿ ಹೆಚ್ಚಿನ ಅಂಕಗಳನ್ನು ಪಡೆಯುವರು. ಎಲ್ಲಕ್ಕಿಂತಲೂ ದೊಡ್ಡ ಸೇವೆ ನಿಮ್ಮ ಪ್ರಸನ್ನಮೂರ್ತಿಯೇ ಮಾಡುತ್ತದೆ. ಹಾಗಾದರೆ ಯಾವ ಚಾರ್ಟ್ ನೋಡಿದೆವೆಂದು ಕೇಳಿದಿರಲ್ಲಾ?

ಯಾರಿಗೆ ಬಾಲ್ಯದಿಂದಲೇ ಶ್ರೇಷ್ಠ ಸಂಗ ಸಿಕ್ಕಿಬಿಟ್ಟಿತೋ ಅವರು ಡ್ರಾಮಾದಲ್ಲಿ ಅದೃಷ್ಟಶಾಲಿ ಕುಮಾರಿಯರಾಗಿಬಿಟ್ಟರು. ಆದರೂ ಸಾಹಸವನ್ನಿಟ್ಟರೆ ಸಾಹಸವಂತರಿಗೆ ಫಲವು ಸಿಗುತ್ತದೆ. ಮಾತೆಯರು ಕುಮಾರಿಯರನ್ನು ನೋಡಿ ಖುಷಿಯಾಗುತ್ತಾರಲ್ಲವೇ? ಮಾತೆಯರು 'ನಾವೂ ಸಹ ಈ ವಯಸ್ಸಿಗೆ ಬಂದುಬಿಟ್ಟಿದ್ದರೆ ಚೆನ್ನಾಗಿರುತ್ತಿತ್ತು' ಎಂದು ಯೋಚಿಸುತ್ತಾರೆ. ಆದರೆ ಎಲ್ಲರದ್ದೂ ಒಂದೇ ರೀತಿಯ ಪಾತ್ರವಂತೂ ಆಗಲು ಸಾಧ್ಯವಿಲ್ಲ. ವೆರೈಟಿ ಬೇಕಾಗಿದೆ. ಸರ್ವರ ಪಿತ ಎಂದ ಮೇಲೆ ಕುಮಾರರೂ ಬೇಕು, ಕುಮಾರಿಯರು ಬೇಕು, ಅಧರ್ ಕುಮಾರ್, ಅಧರ್ ಕುಮಾರಿಯರೂ ಬೇಕು – ಎಲ್ಲ ವಿಧದ ಸ್ಯಾಂಪಲ್ ಬೇಕು. ಪಾಂಡವರು 'ಒಂದುವೇಳೆ ನಾನು ಕುಮಾರಿಯಾಗಿದ್ದರೆ ಟೀಚರ್ ಆಗುತ್ತಿದ್ದೆ, ಸೆಂಟರ್ ಸಿಗುತ್ತಿತ್ತು' ಎಂದು ಯೋಚನೆ ಮಾಡುವುದಿಲ್ಲವಲ್ಲವೇ? ಪ್ರತಿಯೊಬ್ಬರ ಪಾತ್ರದಲ್ಲಿಯೂ ತಮ್ಮ ತಮ್ಮದೇ ಆದ ವಿಶೇಷತೆ ಇದೆ. ಪ್ರತಿಯೊಬ್ಬರ ವಿಶೇಷತೆಯೂ ಭಿನ್ನ ಹಾಗೂ ಮಹಾನ್ ಆಗಿದೆ. ಒಬ್ಬರು ಮತ್ತೊಬ್ಬರ ಪಾತ್ರವನ್ನು ನೋಡಿ ಖುಷಿಯಾಗಿರಿ. ತಮ್ಮ ಪಾತ್ರವನ್ನು ಕಡಿಮೆ ಎಂದು ತಿಳಿದುಕೊಳ್ಳಬೇಡಿ. ಎಲ್ಲರ ಪಾತ್ರಗಳು ಒಳ್ಳೆಯದಕ್ಕಿಂತ ಒಳ್ಳೆಯದಿದೆ. **(05–12–1989)**

ಸದಾ ತಮ್ಮನ್ನು 'ಸಂತುಷ್ಟ ಆತ್ಮ' ಎಂದು ಅನುಭವ ಮಾಡುತ್ತೀರಾ? ಏಕೆಂದರೆ ಜ್ಞಾನಿ–ಯೋಗಿ ಆತ್ಮನ ಗುರುತು 'ಸಂತುಷ್ಟತೆ'ಯಾಗಿದೆ. ಎಲ್ಲಿ ಸಂತುಷ್ಟತೆ ಇದೆಯೋ ಅಲ್ಲಿ ಸರ್ವಗುಣಗಳು, ಸರ್ವಶಕ್ತಿಗಳು ಇರುತ್ತವೆ. ಯಾವುದೇ ಗುಣ ಅಥವಾ ಶಕ್ತಿಯ ಅಪ್ರಾಪ್ತಿ ಇದ್ದರೆ ಅಪ್ರಾಪ್ತಿಯ ಗುರುತು ಅಸಂತುಷ್ಟತೆಯಾಗಿದೆ ಮತ್ತು ಪ್ರಾಪ್ತಿಗಳ ಗುರುತು ಸಂತುಷ್ಟತೆಯಾಗಿದೆ. ಸಂತುಷ್ಟ ಆತ್ಮವು ಡ್ರಾಮಾದ ಪ್ರತಿಯೊಂದು ದೃಶ್ಯವನ್ನು ನೋಡಿ 'ವಾಹ್ ಡ್ರಾಮಾ ವಾಹ್' ಎಂದು ಹೇಳುತ್ತಾರೆ ಮತ್ತು ಯಾರು ಸದಾ ಸಂತುಷ್ಟರಾಗಿರುವುದಿಲ್ಲವೋ ಅವರು ಕೆಲವೊಮ್ಮೆ ವಾಹ್ ವಾಹ್ ಎನ್ನುವರು, ಕೆಲವೊಮ್ಮೆ ಅಯ್ಯೋ ಇದೇನಾಗಿ ಹೋಯಿತು, ಆಗಬಾರದಿತ್ತು ಆದರೆ ಆಗಿಹೋಯಿತು' ಎಂದು ಹೇಳುತ್ತಾರೆ. ಆದ್ದರಿಂದ ಸಂತುಷ್ಟತೆಯು ಒಂದು ಗಣಿಯಾಗಿದೆ. ಅದೂ ಅಖಂಡ ಗಣಿಯಾಗಿದೆ,

ಸಮಾಪ್ತಿಯಾಗುವಂತಹುದಲ್ಲ. ಎಷ್ಟೆಷ್ಟು ಕೊಡುತ್ತಾ ಹೋಗುತ್ತೀರೋ ಅಷ್ಟಷ್ಟು ಹೆಚ್ಚುತ್ತಾ ಹೋಗುತ್ತದೆ. ತಾವೆಲ್ಲರೂ ಸಂತುಷ್ಟ ಆತ್ಮಗಳಾಗಿದಿರಲ್ಲವೇ? ತಾವೆಲ್ಲರೂ ಮರುಜೀವ ಪಡೆದಿರುವುದೇ ಸಂತುಷ್ಟರಾಗಿರುವುದಕ್ಕಾಗಿ. 'ಇಚ್ಛಾಮಾತ್ರಂ ಅವಿದ್ಯಾ' ಎಂಬ ಗಾಯನ ಯಾರಾದಾಗಿದೆ? ದೇವತೆಗಳದೇ ಅಥವಾ ಬ್ರಾಹ್ಮಣರದೇ? ದೇವತೆಗಳ ಜೀವನದಲ್ಲಂತೂ ಇಚ್ಛೆಯಿರುವುದು ಅಥವಾ ಇಚ್ಛೆ ಇಲ್ಲದಿರುವ ಸವಾಲೇ ಇಲ್ಲ. ಇಲ್ಲಿ ಇಚ್ಛೆ ಎಂದರೇನು, ಅನಿಚ್ಛೆ ಎಂದರೇನು ಎಂಬ ಜ್ಞಾನವಿದೆ. 'ಇಚ್ಛಾಮಾತ್ರಂ ಅವಿದ್ಯಾ' ಎಂಬ ಜ್ಞಾನವಿರುವುದೇ ಬ್ರಾಹ್ಮಣ ಜೀವನವಾಗಿದೆ. ಯಾವುದರ ಇಚ್ಛೆಯಿದೆ? ಯಾವಾಗ ರಚಯಿತನೇ ತಮ್ಮವರಾಗಿಬಿಟ್ಟರು ಎಂದರೆ ರಚನೆಯು ಎಲ್ಲಿಗೆ ಹೋಗುವರು? ರಚಯಿತನನ್ನು ತಮ್ಮವರನ್ನಾಗಿ ಮಾಡಿಕೊಂಡಿದ್ದೀರಲ್ಲವೇ? ಸುಭದ್ರವಾಗಿ ಮಾಡಿಕೊಂಡಿದಿ ರಲ್ಲವೇ? ಸಡಿಲವಾಗಿ ಅಲ್ಲವಲ್ಲ? ಮಾತೆಯರಿಗೆ 'ಭಗವಂತನನ್ನೂ ಹಗ್ಗದಿಂದ ಕಟ್ಟಿ ಹಾಕಿದರು' ಎಂದು ಗಾಯನವಿದೆ. ಬಲವಾಗಿ ಕಟ್ಟಿದಿರಾ? ಇದಾಗಿದೆ ಸ್ನೇಹದ ಹಗ್ಗ. ಸ್ನೇಹದ ಹಗ್ಗ ಬಲಿಷ್ಠವಾಗಿದೆಯಲ್ಲವೇ? ಇದು ಎಂದಿಗೂ ತುಂಡಾಗಲು ಸಾಧ್ಯವಿಲ್ಲ. ಇದಂತೂ ನಿಮಿತ್ತ ಮಾತ್ರದ ದೃಷ್ಟಾಂತವಾಗಿದೆ. ಎಲ್ಲಿ ತಂದೆ ಇದ್ದಾರೋ ಅಲ್ಲಿ ಎಲ್ಲವೂ ಇದೆ. ಇದಕ್ಕಾಗಿಯೇ 'ತಂದೆ ಸಿಕ್ಕಿದರು ಎಂದರೆ ಎಲ್ಲವೂ ಸಿಕ್ಕಿಬಿಟ್ಟಿತು' ಎಂಬ ಗಾಯನವಿದೆ. ನಿಮಗೆ ಸಿಕ್ಕಿರುವುದು ಎಷ್ಟೆಂದರೆ ನಿಮ್ಮ ಸರ್ವ ಇಚ್ಛೆಗಳನ್ನು ಒಟ್ಟು ಮಾಡಿದರೂ ಅದಕ್ಕಿಂತಲೂ ಪದಮ ಗುಣದಷ್ಟು ಹೆಚ್ಚಾಗಿದೆ. ಇದರ ಮುಂದೆ ಇಚ್ಛೆ ಏನಾಗಿದೆ. ಸೂರ್ಯನ ಮುಂದೆ ದೀಪದಂತೆ ಅಲ್ಲವೇ? ಸರ್ವ ಪ್ರಾಪ್ತಿಗಳ ಮುಂದೆ ಎಷ್ಟೇ ಒಳ್ಳೆಯ ಇಚ್ಛೆ ಇದ್ದರೂ ಅದು ದೀಪದ ಸಮಾನವಾಗಿರುತ್ತದೆ. ಆದುದರಿಂದ ಸದಾ ಸಂತುಷ್ಟರಾಗಿರಿ. ಪ್ರಶ್ನೆಗಳೇ ಏಳಬಾರದು. ಇಚ್ಛೆಗಳು ಏಳುವಂತಹ ಮಾತು ಬಿಡಿ ಆದರೆ ಇಚ್ಛೆ ಇದೆಯೇ ಅಥವಾ ಇಲ್ಲವೇ ಎಂಬ ಪ್ರಶ್ನೆಯೇ ಉದ್ಭವ ವಾಗಬಾರದು. ಇಚ್ಛೆಯ ಅಂಶಮಾತ್ರವೂ ಇಲ್ಲದಂತೆ ಸಮಾಪ್ತಿಯಾಗಿ ಬಿಡಬೇಕು. ಒಂದು ಸ್ವಲ್ಪ ಅಂಶವಿದ್ದರೂ ಅದರಿಂದ ವಂಶ ಹುಟ್ಟಿಕೊಳ್ಳುತ್ತದೆ. ಅಂಶ ಮಾತ್ರವೂ ಇರಬಾರದು. ರಾವಣನನ್ನು ನೋಡಿ ಮೊದಲು ಸಾಯಿಸುತ್ತಾರೆ, ನಂತರ ಸುಡುತ್ತಾರೆ. ತದನಂತರ ಸಮಾಪ್ತಿ ಮಾಡುತ್ತಾರೆ. ಏಕೆ? ಅಂಶ ಮಾತ್ರವೂ ಇರಬಾರದೆಂದು. ಅಂದಮೇಲೆ ಯಾವುದೇ ಅಂಶಮಾತ್ರವಷ್ಟೂ ಇಲ್ಲವಲ್ಲವೇ? ಸ್ಥೂಲ ರೂಪದಲ್ಲಂತೂ ರಾವಣನ ಶಿರ ಸಮಾಪ್ತಿಯಾಯಿತು ಆದರೆ ಸೂಕ್ಷ್ಮ ರೂಪದಲ್ಲಿ ಇಲ್ಲವಲ್ಲವೇ? 'ಇಚ್ಛೆಯಂತೂ ಇಲ್ಲ, ಆದರೆ ಇಷ್ಟವಾಗುತ್ತದೆ' ಎಂದು ಕೆಲವರು ಹೇಳುತ್ತಾರೆ. ಸ್ಥೂಲ ರೂಪದಲ್ಲಿ 'ಇಚ್ಛೆ ಇಲ್ಲ' ಎಂದು ಹೇಳುತ್ತಾರೆ, ಆದರೆ ಸೂಕ್ಷ್ಮ ರೂಪದಲ್ಲಿ 'ಚೆನ್ನಾಗಿದೆ ಎನಿಸುತ್ತದೆ' ಎಂದು ಹೇಳುತ್ತಾರೆ. ಅಂದರೆ ಚೆನ್ನಾಗಿದೆ ಎಂದು ಅನಿಸುವುದು ಎಂದರೆ ಬುದ್ಧಿಯ ಬಾಗುವಿಕೆಯಾಗಿದೆಯಲ್ಲವೇ? ಒಳ್ಳೆಯದೆಂದು ಅನಿಸಿದರೆ – ಒಳ್ಳೆಯದೆಂದು ಹೇಳುತ್ತಾ ಹೇಳುತ್ತಾ ಇಚ್ಛೆ ಆಗಿಬಿಡುತ್ತದೆ. ಒಳ್ಳೆಯದು ಎನಿಸಿದರೆ ಎಲ್ಲವೂ ಎಲ್ಲವೂ ಒಳೆಯದಾಗಿಯೇ ಇರುತ್ತದೆ. ಯಾವುದೇ ಒಂದು ವಸ್ತು ಏಕೆ ಇಷ್ಟವಾಗುತ್ತದೆ ಅಥವಾ ಯಾವುದೇ ಒಬ್ಬ ವ್ಯಕ್ತಿಯು ಏಕೆ ಇಷ್ಟವಾಗುತ್ತಾರೆ ಅಥವಾ ಯಾವುದೋ ಒಂದು ಕೆಲಸ ಏಕೆ ಇಷ್ಟವಾಗುತ್ತದೆ? ಎಲ್ಲವೂ ಚೆನ್ನಾಗಿದೆ. ಕೆಲವರು 'ಈ ಆತ್ಮನ ಯೋಗವು ಚೆನ್ನಾಗಿರುತ್ತದೆ, ಈ ಆತ್ಮನ ಭಾಷಣ ಚೆನ್ನಾಗಿರುತ್ತದೆ' ಎಂದು ಹೇಳುತ್ತಾರೆ. ಆದರೆ ಇಲ್ಲಿ ಕೆಲವರು ಇಷ್ಟವಾಗುವುದು, ಕೆಲವರು ಇಷ್ಟವಾಗದಿರುವುದು, ಇದೂ ಸಹ ಸರಿಯಲ್ಲ. ಒಂದುವೇಳೆ ಯಾರಾದರೂ ಇಷ್ಟವಾಗುವುದಾದರೂ ಅವರು ತಂದೆಗೆ ಸೇರಿದವರು ತಾನೇ? ತಂದೆಯು ಇಷ್ಟವಾಗಬೇಕಲ್ಲವೇ? ಒಂದುವೇಳೆ ಯಾವುದೇ ವ್ಯಕ್ತಿ ಇಷ್ಟವಾದರು ಎಂದರೆ ಇಚ್ಛೆಗಳ ಕ್ಯೂ (ಸಾಲು) ಬಂದುಬಿಡುತ್ತದೆ. ಒಂದುವೇಳೆ ತಂದೆಯು ಇಷ್ಟವಾದರೆ ಅಂಶಮಾತ್ರವೂ ಮಾಯೆ ಬರಲು ಸಾಧ್ಯವಿಲ್ಲ. ಒಂದುವೇಳೆ ಯಾರಲ್ಲಾದರೂ ಒಳ್ಳೆಯ ಗುಣವಿದ್ದರೆ ಅದೂ ಸಹ ತಂದೆಯ ಕೊಡುಗೆ ಆಗಿದೆ. ಆದ್ದರಿಂದ ತಂದೆಯು ಮಾತ್ರ ಇಷ್ಟ ಆಗಬೇಕು. ಆಗ ಸದಾ ಸಂತುಷ್ಟರಾಗಿ ಇರುವಿರಿ. ಮಕ್ಕಳು ಮರಿಗಳನ್ನು ಆಂತರ್ಯದಲ್ಲಿ ಕೂರಿಸಿಕೊಳ್ಳಬೇಡಿ. ಒಂದುವೇಳೆ ಮಕ್ಕಳು ಮರಿಗಳು ಒಳಗೆ ಬಚ್ಚಿಟ್ಟುಕೊಂಡಿದ್ದರೆಂದರೆ ಸದಾ ಸಂತುಷ್ಟರಾಗಿರಲು ಸಾಧ್ಯವಿಲ್ಲ. ಬೇಹದ್ದಿನ ಸೇವೆಯ ಮಾತು ಬೇರೆ, ಆದರೆ ಸ್ವಯಂ ತಮ್ಮ ಪ್ರತಿ ಅದು ಬೇಕು, ಇದು ಬೇಕು ಎಂಬ ಇಂತಹ ಹದ್ದಿನ ಮಾತುಗಳು ಅಸಂತುಷ್ಟ ಗೊಳಿಸುತ್ತವೆ. ಬೇಹದ್ದಿನ ಪ್ರತಿಯಾಗಿ ಎಷ್ಟು ಬೇಕಾದರೂ ಯೋಚಿಸಿ. ಆದರೆ ಸ್ವಯಂ ತಮ್ಮ ಪ್ರತಿಯಾಗಿ ಹದ್ದಿನ ಮಾತುಗಳನ್ನು ಯೋಚಿಸಬೇಡಿ. ಅಂದಮೇಲೆ ಎಲ್ಲರೂ ಸಂತುಷ್ಟಮಣಿಗಳಾಗಿರುವಿರಾ? ಸಂತುಷ್ಟಮಣಿಗಳು ಎಂದರೆ ಸದಾ ಆತ್ಮೀಯತೆಯಿಂದ ಹೊಳೆಯುತ್ತಿರುವವರು. ಒಳ್ಳೆಯದು. **(13–12–1989)**

ಸದಾ ತಮ್ಮನ್ನು ತಾವು **'ನಿಶ್ಚಯಬುದ್ಧಿ ವಿಜಯಿ ಆತ್ಮ'** ಗಳೆಂದು ಅನುಭವ ಮಾಡುತ್ತೀರಾ? ನಿಶ್ಚಯದ ಗುರುತು **'ವಿಜಯ'** ಆಗಿದೆ. ಒಂದುವೇಳೆ ಸ್ವಯಂ ತಮ್ಮಲ್ಲಿ ಮತ್ತು ತಂದೆಯ ಮೇಲೆ ನಿಶ್ಚಯವಿದ್ದರೆ ನಿಶ್ಚಯದ ವಿಜಯವಾಗದೇ ಇರುವುದು ಸಾಧ್ಯವೇ ಇಲ್ಲ. ಒಂದುವೇಳೆ ವಿಜಯ ಅರ್ಥ

ಆಗುತ್ತದೆ, ಪೂರ್ಣವಾಗಿ ಆಗುವುದಿಲ್ಲ ಎಂದರೆ ಅದರ ಕಾರಣ ನಿಶ್ಚಯದ ಕೊರತೆ ಇರುವುದಾಗಿದೆ. 'ನಿಶ್ಚಯ ಮತ್ತು ವಿಜಯ' ಇವೆರಡೂ ಪರಸ್ಪರ ಪಕ್ಕಾ ಜೊತೆಗಾರರು. ಎಲ್ಲಿ ನಿಶ್ಚಯವಿರುವುದೋ ಅಲ್ಲಿ ಅವಶ್ಯವಾಗಿ ವಿಜಯ ಇದ್ದೇ ಇರುತ್ತದೆ. ಏಕೆಂದರೆ ತಂದೆಯು ಸರ್ವಶಕ್ತಿವಂತರಾಗಿದ್ದಾರೆ ಮತ್ತು ಸರ್ವಶಕ್ತಿವಂತ ತಂದೆಯ ಮೇಲಿನ ನಿಶ್ಚಯದಿಂದ ವಿಜಯಿ ಆಗದಿರಲು ಹೇಗೆ ಸಾಧ್ಯ ಎಂಬ ನಿಶ್ಚಯವಿದೆ ಮತ್ತು 'ನಾನು ಮಾಸ್ಟರ್ ಸರ್ವಶಕ್ತಿವಂತನಾಗಿದ್ದೇನೆ ಅಂದಮೇಲೆ ವಿಜಯವು ಎಲ್ಲಿಗೆ ಹೋಗುತ್ತದೆ' ಎಂಬ ನಿಶ್ಚಯವಿದೆ. ನಿಶ್ಚಯಬುದ್ಧಿಯುಳ್ಳವರಿಗೆ ಎಂದೂ ಸೋಲಾಗುವುದಿಲ್ಲ. ಅವರು ಬೇರೆಯವರನ್ನು ಸೋಲಿನಿಂದ ಪಾರು ಮಾಡುವವರಾಗಿದ್ದಾರೆ, ಅವರು ಸ್ವಯಂ ಹೇಗೆ ಸೋಲಲು ಸಾಧ್ಯ? ಅಂದಮೇಲೆ ವಿಜಯಿಯಾಗುವ ಫೌಂಡೇಷನ್ (ತಳಪಾಯ) 'ನಿಶ್ಚಯ' ವಾಗಿದೆ. ತಳಪಾಯ ಭದ್ರವಾಗಿದ್ದರೆ ಕಟ್ಟಡ ಅಲುಗಾಡುವುದಿಲ್ಲ, ನಿಶ್ಚಿಂತವಾಗಿರುತ್ತದೆ. ಒಂದುವೇಳೆ ಅಡಿಪಾಯ ಭದ್ರವಾಗಿಲ್ಲದಿದ್ದರೆ, ಕಚ್ಚಾ ಆಗಿದ್ದರೆ ಒಂದು ಸಣ್ಣ ಬಿರುಗಾಳಿ ಬಂದರೂ, ಸ್ವಲ್ಪ ಭೂಮಿ ಅಲುಗಾಡಿದರೂ ನಮ್ಮ ಕಟ್ಟಡ ಬಿದ್ದುಬಿಡಬಹುದು ಅಥವಾ ಬಿರುಕು ಬಿಡಬಹುದು ಎಂದು ಭಯವಾಗುತ್ತದೆ. ಆದರೆ ಅಡಿಪಾಯ ಭದ್ರವಾಗಿದ್ದರೆ ನಿರ್ಭಯರಾಗಿರುತ್ತೀರಿ.  ಇದೇ ರೀತಿಯಲ್ಲಿ ನಿಶ್ಚಯದ ಅಡಿಪಾಯ ಭದ್ರವಾಗಿದ್ದರೆ ಯಾವುದೇ ಬಿರುಗಾಳಿಯು ನಿಮ್ಮನ್ನು ಅಲುಗಾಡಿಸಲಾರದು. ಇಂತಹ ವಿಜಯಿಗಳಾಗಿರುವಿರಾ ಅಥವಾ ಕೆಲವೊಮ್ಮೆ ಎಂದಾದರೂ ಬಿರುಕು ಬಿಡುತ್ತದೆಯೇ? ಅಥವಾ ಯಾವಾಗಲಾದರೂ ಕಿಟಕಿ, ಬಾಗಿಲುಗಳ ಗಾಜುಗಳು ಅಲುಗಾಡುತ್ತವೆಯೇ? ಬಿರುಗಾಳಿ ಬಂದಾಗ ಅಥವಾ ಭೂಮಿಯ ಅಲುಗಾಡಿಕೆ ಯಲ್ಲಿ ಏನಾಗುತ್ತದೆ. ಏರುಪೇರಂತೂ ಆಗುವುದಿಲ್ಲ ಅಲ್ಲವೇ? ಹಲ್‌ಚಲ್ (ಏರುಪೇರು) ನಲ್ಲಿಯೂ ಅಚಲರಾಗಿರುವುದಕ್ಕೇ 'ನಿಶ್ಚಯಬುದ್ಧಿ ವಿಜಯಿ ರತ್ನ' ಎಂದು ಹೇಳಲಾಗುತ್ತದೆ. ಕೇವಲ ತಂದೆಯ ಮೇಲೆ ಮಾತ್ರ ನಿಶ್ಚಯವಲ್ಲ, ತಮಗೆ ಸ್ವಯಂ ತಮ್ಮ ಮೇಲೆಯೂ ನಿಶ್ಚಯ, ಡ್ರಾಮಾದ ಮೇಲೆಯೂ ನಿಶ್ಚಯವಿರಬೇಕು. ವಾಹ್ ಡ್ರಾಮಾ ವಾಹ್. ಡ್ರಾಮಾದ ಮೇಲೆ ನಿಶ್ಚಯ ಇದ್ದರೆ ಅಕಲ್ಯಾಣದ ಮಾತೂ ಸಹ ಕಲ್ಯಾಣದಲ್ಲಿ ಪರಿವರ್ತನೆಯಾಗಿ ಬಿಡುತ್ತದೆ. ನಿಶ್ಚಯದಲ್ಲಿ ಇಷ್ಟೊಂದು ಶಕ್ತಿ ಇದೆ. ಹೊರನೋಟಕ್ಕೆ ಅಕಲ್ಯಾಣದ ಮಾತೆಂದು ಕಂಡುಬರುತ್ತದೆ ಆದರೆ ಆಂತರ್ಯದಲ್ಲಿ ಅದರಲ್ಲೂ ಕಲ್ಯಾಣವೇ ಅಡಗಿರುತ್ತದೆ. ಮೊದಲು ತಮ್ಮನ್ನು ಅಲುಗಾಡಿಸಲು ಈ ರೂಪದಲ್ಲಿ ಬಂದರೂ ತಮ್ಮನ್ನು ಅಲುಗಾಡಿಸಲು ಸಾಧ್ಯವಿಲ್ಲ. ಈ ರೀತಿಯಾಗಿ ಪಕ್ಕಾ ಆಗಿದ್ದೀರಾ ಅಥವಾ ಆಗಾಗ ಸ್ವಲ್ಪ ಅಲುಗಾಡುತ್ತೀರಾ? ಸಂಕಲ್ಪ ಅಥವಾ ಸ್ವಪ್ನದಲ್ಲೂ ಸಹ ಅಲುಗಾಡುವುದಿಲ್ಲವಲ್ಲವೇ? ಏಕೆಂದರೆ ಒಂದುವೇಳೆ ಸಂಕಲ್ಪದಲ್ಲಾದರೂ ಅಲ್ಪಪ್ರಮಾಣದ ಬಲಹೀನತೆ ಬಂದುಬಿಟ್ಟರೂ ಸಂಕಲ್ಪದ ಪ್ರಭಾವ ವಾಣಿಯ ಮೇಲೆ ಬೀರುತ್ತದೆ, ವಾಣಿಯ ಪ್ರಭಾವ ಕರ್ಮದ ಮೇಲೆ ಬೀರುತ್ತದೆ. ಆದ್ದರಿಂದ  ಬಾಪ್‌ದಾದಾರವರು ಮೊಟ್ಟ ಮೊದಲು ಸಂಕಲ್ಪವನ್ನೇ ಬದಲಾಯಿಸಿಬಿಟ್ಟರು.  'ನಾನು ಶರೀರವಲ್ಲ, ಆತ್ಮನಾಗಿದ್ದೇನೆ' ಎಂದು ಸಂಕಲ್ಪವನ್ನು ಮಾಡುವಿರಿ,  ಇದು ಶುದ್ಧ ಸಂಕಲ್ಪವಾಗಿದೆ. ಈ ಸಂಕಲ್ಪದಿಂದ ಜೀವನವೇ ಬದಲಾಗಿ ಬಿಟ್ಟಿತು. ಒಂದುವೇಳೆ ಸಂಕಲ್ಪವೇ ಬಲಹೀನವಾಗಿದ್ದರೆ ಜೀವನವೂ ಬಲಹೀನವಾಗಿಬಿಡುತ್ತದೆ.

ತಂದೆ, ತಾವು ಮತ್ತು ಡ್ರಾಮಾ ಈ ಮೂರೂ ನಿಶ್ಚಯಗಳು ಜೊತೆ ಜೊತೆಯಲ್ಲಿರಲಿ. ಸಂಕಲ್ಪದಲ್ಲೂ ಯಾರು ಎಂದಿಗೂ ಅಲುಗಾಡಿಸಬಾರದು. 'ಅಂಗದ' ಆಗಿ ಬಿಡಿ. ಕಾಲನನ್ನೇನು, ಉಗುರನ್ನೂ ಸಹ ಮಾಯೆಯು ಅಲುಗಾಡಿಸ ಲಾಗದು. ಇಂತಹ 'ಅಂಗದ' ರು ಆಗಿ ಬಿಡಿ. **(21–12–1989)**

ಈ ಈಶ್ವರೀಯ ಪ್ರಪಂಚ ಎಷ್ಟೊಂದು ಪ್ರಿಯವಾಗಿದೆ. ಸೇವಾರ್ಥವಾಗಿ ಲೌಕಿಕ ಪ್ರಪಂಚದ ಆತ್ಮಗಳ ಜೊತೆ ಇರುತ್ತಿರಬಹುದು ಆದರೆ ಮನಸ್ಸು ಸದಾ ಅಲೌಕಿಕ ಪ್ರಪಂಚದಲ್ಲಿ ಇರುತ್ತದೆ. ಇದಕ್ಕೇ 'ಸ್ಮೃತಿ ಸ್ವರೂಪ' ಎಂದು ಹೇಳಲಾಗುತ್ತದೆ. ಯಾವುದೇ ಪರಿಸ್ಥಿತಿ ಬರಲಿ, ಆದರೆ ಸ್ಮೃತಿ ಸ್ವರೂಪ ಆತ್ಮ ಸಮರ್ಥವಾಗಿರುವ ಕಾರಣ ಪರಿಸ್ಥಿತಿಯನ್ನು ಏನೆಂದು ತಿಳಿಯುತ್ತಾರೆ? ಇದಂತೂ ಆಟವಾಗಿದೆ ಎಂದು. ಎಂದಿಗೂ ಭಯ ಪಡುವುದಿಲ್ಲ. ಎಷ್ಟೇ ದೊಡ್ಡ ಪರಿಸ್ಥಿತಿ ಇರಬಹುದು, ಆದರೆ ಸಮರ್ಥ ಆತ್ಮಗಳಿಗೆ ಗುರಿಯನ್ನು ಮುಟ್ಟುವುದಕ್ಕಾಗಿ ಇವೆಲ್ಲವೂ ದಾರಿಯಲ್ಲಿ ಸೈಡ್ ಸೀನ್ ಆಗಿವೆ ಅಂದರೆ ರಸ್ತೆಯ ದೃಶ್ಯಾವಳಿಗಳಾಗಿವೆ. ಸೈಡ್ ಸೀನ್ಸ್‌ಗಳಂತೂ ಚೆನ್ನಾಗಿರುತ್ತದಲ್ಲವೇ? ಖರ್ಚು ಮಾಡಿಕೊಂಡು ಸೈಡ್ ಸೀನ್ಸ್ ನೋಡಲು ಹೋಗುತ್ತಾರೆ. ಇಲ್ಲೂ ಸಹ ಅಬೂ ದರ್ಶನ ಮಾಡಲು ಹೋಗುತ್ತಾರಲ್ಲವೇ? ಒಂದುವೇಳೆ ರಸ್ತೆಯಲ್ಲಿ ಸೈಡ್ ಸೀನ್ಸ್‌ಗಳೇ ಇಲ್ಲದಿದ್ದರೆ ಆ ರಸ್ತೆ ಚೆನ್ನಾಗಿ ಕಾಣುವುದೇ? ಬೋರಾಗಿ ಬಿಡುತ್ತದೆ. ಅದೇ ರೀತಿ ಸ್ಮೃತಿ ಸ್ವರೂಪ, ಸಮರ್ಥ ಸ್ವರೂಪ ಆತ್ಮಗಳಿಗೆ, ಪರಿಸ್ಥಿತಿಗಳೆಂದಾದರೂ ಹೇಳಿರಿ, ಪೇಪರ್ ಎಂದಾದರೂ ಹೇಳಿರಿ, ವಿಘ್ನಗಳೆಂದಾದರೂ ಹೇಳಿರಿ, ಸಮಸ್ಯೆಗಳೆಂದಾದರೂ ಹೇಳಿರಿ, ಇವೆಲ್ಲವೂ ಸೈಡ್‌ಸೀನ್ಸ್‌ಗಳಾಗಿವೆ. 'ಗುರಿಯನ್ನು ತಲುಪುವ ಮಾರ್ಗದಲ್ಲಿನ ಈ ಸೈಡ್‌ಸೀನ್ಸ್

ಗಳನ್ನು ಲೆಕ್ಕವಿಲ್ಲದಷ್ಟು ಬಾರಿ ಪಾರು ಮಾಡಿದ್ದೇನೆ' ಎಂಬುದು ಸ್ಮೃತಿಯಲ್ಲಿದೆ. ನಥಿಂಗ್ ನ್ಯೂ (ಇದೇನು ಹೊಸದಲ್ಲ) ಈ ಸ್ಥಿತಿಯ ಫೌಂಡೇಷನ್ ಯಾವುದಾಗಿದೆ? 'ಸ್ಮೃತಿ'. ಒಂದುವೇಳೆ ಈ ಸ್ಮೃತಿಯನ್ನು ಮರೆತುಹೋದಿರಿ ಎಂದರೆ ಫೌಂಡೇಷನ್ ಅಲುಗಾಡಿತು ಎಂದು ಅಂದರೆ ಜೀವನದ ಪೂರ್ಣ ಕಟ್ಟಡ ಅಲುಗಾಡಲು ಪ್ರಾರಂಭವಾಗುತ್ತದೆ. ತಾವಂತೂ ಅಚಲರಾಗಿದ್ದೀರಲ್ಲವೇ? **(02–01–1990)**

ನಾಲ್ಕನೆಯ ಮಾತು – 'ಸಂಬಂಧದಲ್ಲಿ ಸ್ವಚ್ಛತೆ'. ಇದರ ಸಾರ ರೂಪವಾಗಿ ವಿಶೇಷವಾಗಿ 'ಸಂತುಷ್ಟತೆ ಎಂಬ ಸ್ವಚ್ಛತೆಯು ಎಷ್ಟು ಪ್ರಮಾಣದಲ್ಲಿ ಇದೆ' ಎಂದು ಚೆಕ್ ಮಾಡಿಕೊಳ್ಳಿ. ಇಡೀ ದಿನದಲ್ಲಿ ಭಿನ್ನ ಭಿನ್ನ ಪ್ರಕಾರದ ಆತ್ಮಗಳ ಜೊತೆ ಸಂಬಂಧ ಏರ್ಪಡುತ್ತದೆ. ಮೂರು ಪ್ರಕಾರದ ಸಂಬಂಧಗಳಲ್ಲಿ ಬರುತ್ತೀರಿ. ಒಂದು ಬ್ರಾಹ್ಮಣ ಪರಿವಾರ, ಎರಡನೆಯದು ಬಂದಿರುವಂತಹ ಜಿಜ್ಞಾಸು ಆತ್ಮಗಳು ಮತ್ತು ಮೂರನೆಯದು ಲೌಕಿಕ ಪರಿವಾರ. ಇಡೀ ದಿನದಲ್ಲಿ ಮೂರೂ ಪ್ರಕಾರದ ಸಂಬಂಧಗಳಲ್ಲಿ ಸ್ವಯಂನ ಸಂತುಷ್ಟತೆ ಮತ್ತು ಸಂಬಂಧದಲ್ಲಿ ಬರುವ ಅನ್ಯ ಆತ್ಮಗಳ ಸಂತಷ್ಟತೆಯ ಪ್ರಮಾಣ ಎಷ್ಟಿತ್ತು? ಸ್ವಯಂನ ಮನಸ್ಸಿನಿಂದಲೂ ಹಗುರರಾಗಿರುವುದು ಮತ್ತು ಖುಷಿಯಾಗಿರುವುದು ಹಾಗೂ ಅನ್ಯರೂ ಖುಷಿಯಾಗಿರುವುದು ಸಂತುಷ್ಟತೆಯ ಗುರುತಾಗಿದೆ. ಸ್ವಯಂನ ಮನಸ್ಸಿನಲ್ಲಿಯೂ ಭಾರವಾಗಿರುವುದು ಅಸಂತುಷ್ಟತೆಯ ಗುರುತಾಗಿದೆ. ಒಂದುವೇಳೆ ತಾವು ಸತ್ಯವಾದ ಪುರುಷಾರ್ಥಿಯಾಗಿದ್ದರೆ ತಮಗೆ ಇಷ್ಟವಿಲ್ಲದಿದ್ದರೂ, ಪದೇ ಪದೇ 'ಈ ರೀತಿ ಮಾತನಾಡಬಾರದಿತ್ತು, ಹೀಗೆ ಮಾಡದೇ ಇದ್ದಿದ್ದರೆ ಚೆನ್ನಾಗಿರುತ್ತಿತ್ತು, ಹೀಗೆ ಹೇಳಬೇಕಾಗಿತ್ತು, ಹೀಗೆ ಮಾಡಬೇಕಿತ್ತು' ಎಂಬ ಸಂಕಲ್ಪಗಳು ಬರುತ್ತಿರುತ್ತವೆ. ಹುಡುಗಾಟಿಕೆಯಲ್ಲಿರುವ ಪುರುಷಾರ್ಥಿಗಳಿಗೆ ಇಂತಹ ಸಂಕಲ್ಪಗಳೂ ಸಹ ಬರುವುದಿಲ್ಲ. ಅಂದಾಗ ಇಂತಹ ಹೊರೆಯು ಖುಷಿಯಾಗಿರಲು, ಹಗುರ ವಾಗಿರಲು ಬಿಡುವುದಿಲ್ಲ. ಸಂಬಂಧದ ಸ್ವಚ್ಛತೆ ಎಂದರೆ ಸಂತುಷ್ಟತೆ. ಇದೇ ಸಂಬಂಧದ ಸತ್ಯತೆ ಮತ್ತು ಸ್ವಚ್ಛತೆಯಾಗಿದೆ. ಇದಕ್ಕಾಗಿಯೇ 'ಸಚ್ ತೊ ಬಿಠೋ ನಚ್' ಅಂದರೆ ಸತ್ಯವಂತನು ಸದಾ ಖುಷಿಯಲ್ಲಿ ನಾಟ್ಯ ಮಾಡುತ್ತಿರುತ್ತಾನೆ' ಎಂದು ತಾವು ಹೇಳುವಿರಿ. ಅಂದಾಗ 'ಪವಿತ್ರ ಹಂಸ' ದ ಪರಿಭಾಷೆ ಏನೆಂದು ಕೇಳಿದಿರಲ್ಲವೇ? ಒಂದುವೇಳೆ ಸತ್ಯತೆಯ ಸ್ವಚ್ಛತೆ ಇಲ್ಲವೆಂದರೆ 'ಹಂಸ' ವಂತೂ ಆಗಿದ್ದೀರಿ, ಆದರೆ 'ಹೋಲಿ ಹಂಸ (ಪವಿತ್ರ ಹಂಸ)' ಆಗಿಲ್ಲ. ಆದ್ದರಿಂದ 'ಸಂಪನ್ನ ಮತ್ತು ಸಂಪೂರ್ಣತೆ'ಯ ಗಾಯನವೇನಿದೆಯೋ ಅದರಂತೆ ಎಲ್ಲಿಯವರೆಗೆ ಆಗಿದ್ದೇನೆ ಎಂಬುದನ್ನು ಚೆಕ್ ಮಾಡಿಕೊಳ್ಳಿರಿ. ಒಂದುವೇಳೆ ಡ್ರಾಮಾನುಸಾರ ಈ ಶರೀರದ ಲೆಕ್ಕಾಚಾರ ಈ ಘಳಿಗೆಯೇ ಸಮಾಪ್ತಿಯಾಯಿತು ಎಂದರೆ ಎಷ್ಟು ಶೇಕಡದಲ್ಲಿ ತೇರ್ಗಡೆಯಾಗುವಿರಿ? ಅಥವಾ ಡ್ರಾಮಾಗೆ 'ಸ್ವಲ್ಪ ಸಮಯ ನಿಲ್ಲು' ಎಂದು ಹೇಳುವಿರಾ? ಅಥವಾ ನಾವಿನ್ನೂ ಚಿಕ್ಕವರು ಈಗಲೇ ಹೋಗುವಂತವರಲ್ಲ ಎಂದುಕೊಂಡು ಕುಳಿತಿಲ್ಲ ತಾನೇ? ಎವರೆಡಿಯ ಅರ್ಥವೇನು? ಇನ್ನೂ 10–11 ವರ್ಷಗಳಿವೆಯೆಂದು ಸಮಯದ ನಿರೀಕ್ಷೆ ಮಾಡುತ್ತಿಲ್ಲತಾನೇ? ಹೆಚ್ಚೆಂದರೆ 2000 ದ ಲೆಕ್ಕ ಯೋಚಿಸುತ್ತೀರಿ ಆದರೆ ಸೃಷ್ಟಿಯ ವಿನಾಶದ ವಿಷಯ ಬೇರೆ, ತಮ್ಮನ್ನು ತಾವು ಎವರೆಡಿಯಾಗಿಟ್ಟು ಕೊಳ್ಳುವುದೇ ಬೇರೆ. ಆದ್ದರಿಂದ ಎರಡನ್ನೂ ಬೆರೆಸಬೇಡಿರಿ. ಭಿನ್ನ ಭಿನ್ನ ಆತ್ಮಗಳದು ಭಿನ್ನ ಭಿನ್ನ ಪಾತ್ರವಿದೆ. ಆದ್ದರಿಂದ 'ನನ್ನ ಪಾತ್ರವಂತೂ ಅಡ್ವಾನ್ಸ್ ಪಾರ್ಟಿಯಲ್ಲಿ ಇಲ್ಲ ಅಥವಾ ನನ್ನ ಪಾತ್ರ ವಿನಾಶದ ನಂತರವೂ ಇದೆ' ಎಂದು ಯೋಚಿಸಬೇಡಿ. ಅಂತಹ ಪಾತ್ರ ಕೆಲವು ಆತ್ಮಗಳದ್ದು ಇರಬಹುದು ಆದರೆ ನಾನು ಎವರೆಡಿಯಾಗಿರುತ್ತೇನೆ ಇಲ್ಲದಿದ್ದರೆ ಸೋಮಾರಿತನದ ಅಂಶ ಪ್ರಕಟವಾಗಿ ಬಿಡುತ್ತದೆ. ಎವರೆಡಿಯಾಗಿರಿ ನಂತರ ಬೇಕಾದರೆ ಇನ್ನೂ 20 ವರ್ಷ ಜೀವಂತವಾಗಿರಿ ಏನೂ ನಷ್ಟವಿಲ್ಲ. ಆದರೆ ಇಂತಹ ಆಧಾರದ ಮೇಲೆ ಇರಬಾರದು. ಇಂತಹ ಆತ್ಮಗಳಿಗೇ 'ಪವಿತ್ರ ಹಂಸ' ಗಳು ಎಂದು ಹೇಳಲಾಗುತ್ತದೆ. ಜ್ಞಾನಸಾಗರನ ದಡಕ್ಕೆ ಬಂದಿದ್ದೀರಲ್ಲವೇ? ಅಂದಾಗ ಈ ದಿನ ಹೋಲಿ ಹಂಸಗಳ ಸ್ವಚ್ಛತೆಯ ಬಗ್ಗೆ ತಿಳಿಸಿದ್ದೇನೆ ಮತ್ತು ಮುಂದೆ ಅವರ ವಿಶೇಷತೆಗಳನ್ನು ತಿಳಿಸುತ್ತೇನೆ. **(06–01–1990)**

ಬೃಜೇಂದ್ರ ದಾದಿಯವರು ಶರೀರ ಬಿಟ್ಟ ಸಮಯದಲ್ಲಿ ಮುಂಬೈನ ಸಯಾನ್ ಸೇವಾಕೇಂದ್ರದ ಟೀಚರ್ಸ್ ಮತ್ತು ಅಣ್ಣಂದಿರನ್ನು ನೋಡಿ ಬಾಪ್‌ದಾದಾರವರು ತಿಳಿಸಿದರು – ತಾವೆಲ್ಲರೂ ಅಂತ್ಯಕ್ರಿಯೆಯ ಕಾರ್ಯವನ್ನು ಸಮಾಪ್ತಿ ಮಾಡಿ ಬಂದಿದ್ದೀರಿ. ಪಾಸ್ ಆಗಿ ಬಂದಿರುವಿರೋ ಪಾಸ್ ವಿತ್ ಆನರ್ ಆಗಿ ಬಂದಿರುವಿರೋ? ಒಳ್ಳೆಯ ಪಾತ್ರವನ್ನು ನಿರ್ವಹಿಸಿದಿರಿ. ಇದೂ ಸಹ ಸ್ನೇಹದ ರಿಟರ್ನ್ ಆಗಿ ಆತ್ಮನಿಗೆ ಪ್ರಾಪ್ತಿಯಾಗಿಯೇ ಆಗುತ್ತದೆ. ಯಾರಿಗೆ ಸ್ನೇಹವು ಸಿಕ್ಕಿದೆಯೋ ಅವರು ಸಮಯಕ್ಕೆ ಸರಿಯಾಗಿ ಸ್ನೇಹದ ರಿಟರ್ನ್ ಅನ್ನು ಅವಶ್ಯವಾಗಿ ಕೊಡುತ್ತಾರೆ. ಕೆಲವು ಆತ್ಮಗಳದು ಈ ಸಮಯದ ಪಾತ್ರದಲ್ಲೂ ಅವಶ್ಯಕವಿದೆ ಮತ್ತು ಹೊಸ ಪ್ರಪಂಚದ ಆದಿಯಲ್ಲೂ ಅವಶ್ಯಕವಿದೆ. ಹಾಗಾದರೆ ಏನು ಮಾಡುತ್ತೀರಿ?

ಡ್ರಾಮಾ ಅಂತೂ ನಡೆಯಲೇ ಬೇಕಲ್ಲವೇ. ಆದ್ದರಿಂದ ಯಾರೆಲ್ಲಾ ಹೋಗಿದ್ದಾರೋ ಮತ್ತು ಹೋಗುತ್ತಾ ಇದ್ದಾರೋ–ವಿಶೇಷ ಆತ್ಮಗಳ ಅವಶ್ಯಕತೆ ಆದಿಯಲ್ಲೂ ಇದೆ. ಈ ಹೊಸ ಪಾತ ಶುರು ಮಾಡುತ್ತೀರಲ್ಲವೇ? ಯೋಗಬಲದಿಂದ ಜನ್ಮ ಕೊಡುವಂತಹ ಹೊಸ ಪಾತ ಶುರು ಮಾಡಲು ಎಂತಹ ಆತ್ಮಗಳು ಬೇಕು? ಯೋಗಿ ಆತ್ಮಗಳು ಬೇಕಲ್ಲವೇ? ನೆಪಮಾತ್ರಕ್ಕೆ ಯಾವುದೇ ಕಾರಣವಿರಬಹುದು, ಆದರೆ ಲೆಕ್ಕಾಚಾರವೂ ಚುಕ್ತಾ ಆಗಬೇಕಾಗಿದೆ, ಸೇವೆಯೂ ಆಗಬೇಕಾಗಿದೆ. ಕೃಷ್ಣನಿಗೆ ಯಾರು ಜನ್ಮ ಕೊಡುತ್ತಾರೆ, ರಾಧೆಗೆ ಜನ್ಮ ಕೊಡುವವರು ಯಾರು ಎಂದೆಲ್ಲಾ ಯೋಚಿಸಬೇಡಿರಿ. ವಿಸ್ತಾರದಲ್ಲಿ ಹೋಗಬೇಡಿರಿ. ಇದು ಚರ್ಚಿಸಬೇಕಾದ ವಿಷಯವೇನಲ್ಲ, ಆದ್ದರಿಂದಲೇ 'ಕರ್ಮಗಳ ಲೀಲೆ ವಾಹ್ ವಾಹ್ ಆಗಿದೆ' ಎಂದು ಹೇಳಿರುವುದು. ಉಳಿದಂತೆ ಜನ್ಮವನ್ನು ಯಾರೇ ಕೊಡಲಿ, ಆ ವಿಚಾರದಲ್ಲಿ ಹೋಗಬೇಡಿರಿ. ನಾವು ಹೋಗಬೇಕೇ, ಬೇಡವೇ ಎಂದು ಯೋಚಿಸಬೇಕೆ? ಒಳ್ಳೆಯದು. **(10–01–1990)**

'ತಂದೆಯು ಯಾರನ್ನು ನಿಮಿತ್ತರನ್ನಾಗಿ ಮಾಡಿದ್ದಾರೋ ಅಂತಹ ನಿಮಿತ್ತ ಆತ್ಮಗಳು ಯಾವ ನಿರ್ದೇಶನಗಳನ್ನು ನೀಡುವರೋ ಅದಕ್ಕೆ ಮಹತ್ವವನ್ನು ಕೊಡಬೇಕು' ಎಂದು ಬಾಪ್‌ದಾದಾರವರು ಯಾವ ಒಂದು ಶ್ರೇಷ್ಠ ಮತವನ್ನು ನೀಡಿದ್ದಾರೋ ಅದನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಆ ಸಮಯದಲ್ಲಿ ನಿಮಿತ್ತರಾಗಿರುವವರು ಬೇರೆಯವರ ಹೇಳಿಕೆಯಂತೆ ಮಾಡುತ್ತಿದ್ದಾರೆಂದು ತಿಳಿಯಬೇಡಿ. ಇದರಿಂದ ಮೋಸ ಹೋಗುತ್ತೀರಿ. ನಿಮಿತ್ತರಾಗಿರುವಂತಹ ಶ್ರೇಷ್ಠ ಆತ್ಮಗಳಿಂದ ಯಾವ ಶಿಕ್ಷಣ ಅಥವಾ ನಿರ್ದೇಶನ ಸಿಗುತ್ತದೋ, ಅದಕ್ಕೆ ಆ ಸಮಯದಲ್ಲಿ ಮಹತ್ವ ಕೊಡುವುದರಿಂದ ಒಂದುವೇಳೆ ಅದರಿಂದ ಯಾವುದೇ ದುಷ್ಪರಿಣಾಮವಾದರೂ ಅದಕ್ಕೆ ತಾವು ಜವಾಬ್ದಾರರಾಗುವುದಿಲ್ಲ. ಹೇಗೆ ಬ್ರಹ್ಮಾಬಾಬಾರವರ ಬಗ್ಗೆ 'ಒಂದುವೇಳೆ ಬ್ರಹ್ಮಾರವರಿಂದ ತಪ್ಪು ಮತ ಸಿಕ್ಕಿದರೂ ಆ ತಪ್ಪೇ ಬದಲಾಗಿ ತಮಗಾಗಿ ಸರಿಯಾಗಿ ಬಿಡುತ್ತದೆ' ಎಂದು ಹೇಳುತ್ತಾರಲ್ಲವೇ? ಆದ್ದರಿಂದ ಈ ರೀತಿ ನಿಮಿತ್ತರಾಗಿರುವ ಆತ್ಮಗಳ ಬಗ್ಗೆಯೂ ಎಂದಿಗೂ ಇಂತಹ ವ್ಯರ್ಥ ಸಂಕಲ್ಪಗಳನ್ನು ನಡೆಸಬಾರದಾಗಿದೆ. ಒಂದುವೇಳೆ ತಮಗೆ ಸರಿ ಎನಿಸದ ತೀರ್ಮಾನವನ್ನೇ ಅವರು ಕೊಟ್ಟರು ಎಂದರೂ ತಾವು ಅದಕ್ಕೆ ಜವಾಬ್ದಾರರಾಗುವುದಿಲ್ಲ. ತಮಗೆ ಪಾಪ ಉಂಟಾಗುವುದಿಲ್ಲ. ತಮ್ಮ ಕಾರ್ಯ ಸರಿಯಾಗಿ ಬಿಡುತ್ತದೆ. ಏಕೆಂದರೆ ತಂದೆಯು ಕುಳಿತಿದ್ದಾರೆ, ಪಾಪವನ್ನು ಬದಲಾಯಿಸಿ ಬಿಡುತ್ತಾರೆ. ಇದು ಗುಹ್ಯ ರಹಸ್ಯವಾಗಿದೆ. ಗುಪ್ತ ಮಿಷನರಿಯಾಗಿದೆ. ಆದ್ದರಿಂದ ನಿಮಿತ್ತರಾಗಿರುವ ಶ್ರೇಷ್ಠ ಆತ್ಮಗಳ ಶ್ರೇಷ್ಠ ನಿರ್ದೇಶನಗಳಿಗೆ ಮಹತ್ವವನ್ನು ಕೊಟ್ಟು ಅವುಗಳನ್ನು ಕಾರ್ಯದಲ್ಲಿ ತೊಡಗಿಸಿ. ಇದರಲ್ಲಿ ತಮಗೆ ಲಾಭವಿದೆ. ನಷ್ಟವೂ ಸಹ ಲಾಭದಲ್ಲಿ ಪರಿವರ್ತನೆಯಾಗಿ ಬಿಡುತ್ತದೆ. ಇದು ತಂದೆಯ ಗ್ಯಾರಂಟಿಯಾಗಿದೆ. ತಿಳಿಯಿತೇ? ಆದ್ದರಿಂದ 'ಕರ್ಮಗಳ ಲೀಲೆ ಬಹಳ ವಿಚಿತ್ರವಾಗಿದೆ' ಎಂದು ತಿಳಿಸಲಾಗಿದೆ. ತಂದೆಯು ಜವಾಬ್ದಾರರಾಗಿದ್ದಾರೆ. ಯಾರನ್ನು ನಿಮಿತ್ತರನ್ನಾಗಿ ಮಾಡಿದ್ದಾರೋ ಅವರ ಜವಾಬ್ದಾರಿಯೂ ತಂದೆಯದೇ ಆಗಿದೆ. ತಮ್ಮ ಪಾಪವನ್ನೂ ಬದಲಾಯಿಸುವ ಜವಾಬ್ದಾರಿಯೂ ತಂದೆಯದಾಗಿದೆ. ಕೇವಲ ಹಾಗೆಯೇ ಸುಮ್ಮನೆ ನಿಮಿತ್ತರನ್ನಾಗಿ ಮಾಡಲಿಲ್ಲ. ಸರಿಯಾಗಿ ಯೋಚಿಸಿ–ತಿಳಿದುಕೊಂಡು ಡ್ರಾಮಾದ ಕಾನೂನಿಗೆ ಅನುಸಾರವಾಗಿ ನಿಮಿತ್ತರನ್ನಾಗಿ ಮಾಡಿದ್ದೇನೆ. ತಿಳಿಯಿತೇ?

ಇದರಲ್ಲಿ ಲಾಭವಿದೆ. ಹೊರೆ ಹಗುರವಾಯಿತು. ಯಾವುದೇ ಮಾತು ಬಂದರೂ, ನಿಮಿತ್ತರಾಗಿರುವ ಹಿರಿಯರು ನೋಡಿಕೊಳ್ಳುತ್ತಾರೆಂದು ಹೇಳುವಿರಿ. ಹಗುರರಾದಿರಲ್ಲವೇ? ಆದರೆ ಕೇವಲ ಹೇಳುವವರೆಗೆ ಮಾತ್ರವಲ್ಲ, ತಿಳಿಯುವವರೆಗೂ, ಸ್ನೇಹದವರೆಗೂ, ಸ್ವಮಾನದವರೆಗೂ ಇರಬೇಕಾಗಿದೆ. ಈ ಗುಹ್ಯ ಮಾತುಗಳನ್ನು ತಂದೆ ಮತ್ತು ಬುದ್ಧಿವಂತ ಮಕ್ಕಳು ಯಾರಿದ್ದಾರೋ ಅವರು ಮಾತ್ರವೇ ಅರಿತುಕೊಳ್ಳುತ್ತಾರೆ. ನಿಮಿತ್ತರಾಗಿರುವ ಆತ್ಮಗಳ ಬಗ್ಗೆ ಏನೇ ಹೇಳಿದರೂ ಅದು ತಂದೆಗೆ ಹೇಳಿದಂತೆ. ತಂದೆಯು ನಿಮಿತ್ತರನ್ನಾಗಿ ಮಾಡಿದ್ದಾರಲ್ಲವೇ? ತಂದೆಗಿಂತ ಹೆಚ್ಚಾಗಿ ನಿಮ್ಮಲ್ಲಿ ಪರೀಕ್ಷಿಸುವ ಶಕ್ತಿ ಇದೆಯೇ? **(10–01–1990)**

ಈ ದಿನ ಮಾತಾಪಿತರು ಮಕ್ಕಳ ಶ್ರೇಷ್ಠ ಭಾಗ್ಯದ ಗೀತೆಯನ್ನು ಹಾಡುತ್ತಿದ್ದರು. ಏಕೆಂದರೆ ಈ ದಿನ ವಿಶೇಷವಾಗಿ ಸೂರ್ಯ ಚಂದ್ರರು ಬೆನ್ನೆಲುಬಾಗಿ ನಕ್ಷತ್ರಗಳನ್ನು ವಿಶ್ವದ ಆಕಾಶದಲ್ಲಿ ಪ್ರತ್ಯಕ್ಷ ಮಾಡುವಂತಹ ದಿನವಾಗಿದೆ. ಹೇಗೆ ಯಜ್ಞದ ಆದಿಯಲ್ಲಿ ಬ್ರಹ್ಮಾ ತಂದೆಯವರು ಮಕ್ಕಳ ಮುಂದೆ ತಮ್ಮ ಸರ್ವಸ್ವವನ್ನೂ ಸಮರ್ಪಿಸಿದರೋ ಅಂದರೆ 'ವಿಲ್' ಮಾಡಿದರೋ, ಹಾಗೆಯೇ ಈ ದಿನ ಬ್ರಹ್ಮಾಬಾಬಾರವರು ಮಕ್ಕಳಿಗೆ ಸರ್ವಶಕ್ತಿಗಳ ವಿಲ್ ಮಾಡಿದ್ದಾರೆ ಅಂದರೆ ವಿಲ್ ಪವರ್ (ಮನೋಬಲ) ಕೊಟ್ಟಿದ್ದಾರೆ. ಈ ದಿನ ನಯನಗಳ ಮೂಲಕ ಮತ್ತು ಸಂಕಲ್ಪದ ಮೂಲಕ ಮಕ್ಕಳಿಗೆ ಸನ್ ಶೋಸ್ ಫಾದರ್‌ನ (ಮಕ್ಕಳು ತಂದೆಯನ್ನು ಪ್ರತ್ಯಕ್ಷ ಮಾಡುವ) ವಿಶೇಷ ಉಡುಗೊರೆಯನ್ನು ಕೊಟ್ಟಿದ್ದಾರೆ. ಈ ದಿನ ತಂದೆಯು ಪ್ರತ್ಯಕ್ಷ ಸಾಕಾರ ರೂಪದಲ್ಲಿ ಕರಾವನ್‌ಹಾರ್‌ನ (ಮಾಡಿಸುವಂತಹ) ಪಾತ್ರವನ್ನು

ಅಭಿನಯಿಸುವಂತಹ ಪ್ರತ್ಯಕ್ಷ ರೂಪವನ್ನು ತೋರಿಸಿದರು. ಬ್ರಹ್ಮಾಬಾಬಾರವರು ಸಹ ಇಂದು ಪ್ರತ್ಯಕ್ಷ ರೂಪದಲ್ಲಿ ಕರಾವನ್‌ಹಾರ್ ತಂದೆಯ ಜೊತೆಗಾರರಾದರು, ಕರನ್‌ಹಾರ್ (ಮಾಡುವವರು) ಆಗಿ ಮಕ್ಕಳನ್ನು ನಿಮಿತ್ತರನ್ನಾಗಿ ಮಾಡಿದರು ಮತ್ತು ಕರಾವನ್‌ಹಾರ್ ಮಾತಾಪಿತರು ಜೊತೆಗಾರರಾದರು. ಈ ದಿನ ಬ್ರಹ್ಮಾಬಾಬಾರವರು ತಮ್ಮ ಸೇವೆಯ ರೀತಿ ಮತ್ತು ಗತಿಯನ್ನು ಪರಿವರ್ತನೆ ಮಾಡಿದರು. ಈ ದಿನ ವಿಶೇಷವಾಗಿ ಬ್ರಹ್ಮಾ ಬಾಬಾರವರು ದೇಹದಿಂದ ಭಿನ್ನರಾಗಿ ಸೂಕ್ಷ್ಮ ಫರಿಸ್ತಾ ಸ್ವರೂಪವನ್ನು ಧಾರಣೆ ಮಾಡಿಕೊಂಡು ಉನ್ನತ ವತನ, ಸೂಕ್ಷ್ಮವತನದ ನಿವಾಸಿಗಳಾದರು. ಏತಕ್ಕಾಗಿ? ಮಕ್ಕಳನ್ನು ತೀವ್ರಗತಿಯಿಂದ ಉನ್ನತ ಸ್ಥಾನಕ್ಕೆರಿಸಲು. ಮಕ್ಕಳನ್ನು ಫರಿಸ್ತಾ ರೂಪದಿಂದ ಮೇಲೆ ಹಾರಿಸುವುದಕ್ಕಾಗಿ. ಈ ದಿನ ಇಷ್ಟೊಂದು ಶ್ರೇಷ್ಠ ಹಾಗೂ ಮಹತ್ವಪೂರ್ಣ ದಿನವಾಗಿದೆ. ಕೇವಲ ಸ್ನೇಹದ ದಿನವಷ್ಟೇ ಅಲ್ಲ, ಅದರೆ ವಿಶ್ವದ ಆತ್ಮಗಳ, ಬ್ರಾಹ್ಮಣ ಆತ್ಮಗಳ ಮತ್ತು ಸೇವೆಯ ವೇಗದ ಪರಿವರ್ತನೆ ಡ್ರಾಮಾದಲ್ಲಿ ನಿಗದಿತವಾಗಿತ್ತು. ಇದನ್ನು ಮಕ್ಕಳೂ ನೋಡುತ್ತಿದ್ದಾರೆ. ವಿಶ್ವದ ಆತ್ಮಗಳ ಬಗ್ಗೆ ಬುದ್ಧಿವಂತರ ಬುದ್ಧಿಯಾದರು, ಬುದ್ಧಿಯ ಪರಿವರ್ತನೆ ಆಯಿತು. ಸಂಪರ್ಕದಲ್ಲಿ ಬಂದು ಸಹಯೋಗಿ ಆದರು. ಬ್ರಾಹ್ಮಣ ಆತ್ಮಗಳಲ್ಲಿ ಶ್ರೇಷ್ಠ ಸಂಕಲ್ಪದ ಮೂಲಕ ತೀವ್ರಗತಿಯಿಂದ ವೃದ್ಧಿಯಾಯಿತು. ಸೇವೆಯ ಬಗ್ಗೆ 'ಸನ್ ಶೋಸ್ ಫಾದರ್'ನ ಉಡುಗೊರೆಯಿಂದ ವಿಹಂಗ ಮಾರ್ಗದ ಸೇವೆಯನ್ನು ಆರಂಭಿಸಿದಿರಿ. ಈ ಗಿಫ್ ಸೇವೆಯ ಲಿಫ್ಟ್ ಆಗಿಬಿಟ್ಟಿತು. ಪರಿವರ್ತನೆ ಆಯಿತಲ್ಲವೇ? ಇನ್ನೂ ಮುಂದುವರಿದಂತೆ ಸೇವೆಯಲ್ಲಿ ಮತ್ತಷ್ಟು ಪರಿವರ್ತನೆ ಯನ್ನು ನೋಡುವಿರಿ.

ಇಲ್ಲಿಯವರೆಗೂ ಬ್ರಾಹ್ಮಣ ಆತ್ಮಗಳಾದ ತಾವು ತಮ್ಮ ತನು-ಮನದ ಪರಿಶ್ರಮದಿಂದ ಕಾರ್ಯಕ್ರಮಗಳನ್ನು ಆಯೋಜಿಸುತ್ತೀರಿ, ವೇದಿಕೆಯನ್ನು ತಯಾರು ಮಾಡುತ್ತೀರಿ, ನಿಮಂತ್ರಣ ಪತ್ರಿಕೆಗಳನ್ನು ಮುದ್ರಿಸುತ್ತೀರಿ, ಯಾರೋ ವಿ.ಐ.ಪಿ. ಯನ್ನು ಕರೆಸುತ್ತೀರಿ, ರೇಡಿಯೋ ದೂರದರ್ಶನದವರನ್ನು ಸಹಯೋಗಿಗಳನ್ನಾಗಿ ಮಾಡಿಕೊಳ್ಳುತ್ತೀರಿ, ಧನವನ್ನೂ ತೊಡಗಿಸುತ್ತೀರಿ. ಆದರೆ ಮುಂದೆ ಹೋಗುತ್ತಾ ತಾವು ಸ್ವಯಂ ವಿ.ಐ.ಪಿ.ಗಳಾಗಿ ಬಿಡುತ್ತೀರಿ. ತಮಗಿಂತ ದೊಡ್ಡವರು ಬೇರೆ ಯಾರೂ ಕಂಡುಬರುವುದಿಲ್ಲ. ಬೇರೆ ಜನರು ತಯಾರಾಗಿರುವ ವೇದಿಕೆಗೆ ತಮ್ಮನ್ನು ಆಮಂತ್ರಿಸುತ್ತಾರೆ. ಸ್ವಯಂ ಅವರು ತಮ್ಮ ತನು ಮನ ಧನದ ಸೇವೆಯನ್ನು ಆಫರ್ ಮಾಡುತ್ತಾರೆ. ತಮಗೆ ವಿನಂತಿಯನ್ನು ಮಾಡುತ್ತಾರೆ. ತಾವು ಪರಿಶ್ರಮ ಪಡಬೇಕಾಗಿರುವುದಿಲ್ಲ, ಅವರೇ ನಿಮ್ಮನ್ನು ತಮ್ಮ ಬಳಿಗೆ ಬನ್ನಿ ಎಂದು ವಿನಂತಿಸಿಕೊಳ್ಳುತ್ತಾರೆ. ಆಗಲೇ ಪ್ರತ್ಯಕ್ಷತೆಯ ಧ್ವನಿ ಮೊಳಗುತ್ತದೆ. ಮತ್ತು ಎಲ್ಲರ ಗಮನವು ಮಕ್ಕಳಾದ ತಮ್ಮ ಮೂಲಕ ತಂದೆಯ ಕಡೆಗೆ ಹೋಗುತ್ತದೆ. ಇದು ಇನ್ನು ಹೆಚ್ಚು ಸಮಯ ನಡೆಯುವುದಿಲ್ಲ. ಎಲ್ಲರ ಗಮನ ತಂದೆಯ ಕಡೆಗೆ ಹೋಗುವುದು ಎಂದರೆ ಪ್ರತ್ಯಕ್ಷತೆಯಾಗುವುದು ಮತ್ತು ನಾಲ್ಕೂ ಕಡೆಯು ಜಯ ಜಯಕಾರದ ಗಂಟೆ ಮೊಳಗುವುದಾಗಿದೆ. ಡ್ರಾಮಾದಲ್ಲಿ ಈ ಸೂಕ್ಷ್ಮ ರಹಸ್ಯವು ಮಾಡಲ್ಪಟ್ಟಿದೆ. ಪ್ರತ್ಯಕ್ಷತೆಯ ನಂತರ ಅನೇಕ ಆತ್ಮಗಳು ಪಶ್ಚಾತ್ತಾಪ ಪಡುತ್ತಾರೆ. ಮತ್ತು ಮಕ್ಕಳ ಪಶ್ಚಾತ್ತಾಪವನ್ನು ತಂದೆಗೆ ನೋಡಲಾಗುವುದಿಲ್ಲ. ಆದ್ದರಿಂದ ಪರಿವರ್ತನೆ ಆಗಿಬಿಡುತ್ತದೆ. ಈಗ ಬ್ರಾಹ್ಮಣ ಆತ್ಮಗಳಾದ ತಮ್ಮ ಶ್ರೇಷ್ಠ ಸ್ಥಿತಿಯು ಸದಾಕಾಲಕ್ಕಾಗಿ ತಯಾರಾಗುತ್ತಿದೆ. ತಮ್ಮ ಉನ್ನತ ಸ್ಥಿತಿಯು ಸೇವೆಯ ವೇದಿಕೆಗೆ ನಿಮಂತ್ರಣವನ್ನು ಕೊಡಿಸುತ್ತದೆ ಮತ್ತು ಬೇಹದ್ದಿನ ವಿಶ್ವದ ವೇದಿಕೆಯ ಮೇಲೆ ಜಯ ಜಯಕಾರದ ಪಾತ್ರವನ್ನು ಮಾಡುತ್ತೀರಿ. ಸೇವೆಯ ಪರಿವರ್ತನೆಯ ಬಗ್ಗೆ ಕೇಳಿದಿರಾ?

ಬ್ರಹ್ಮಾಬಾಬಾರವರು ಅವ್ಯಕ್ತರಾಗುವುದು ಡ್ರಾಮಾದಲ್ಲಿ ನಿಗದಿಯಾಗಿರುವ ಒಂದು ಗುಪ್ತ ರಹಸ್ಯವಾಗಿದೆ. ಕೆಲವು ಮಕ್ಕಳು 'ಬ್ರಹ್ಮಾಬಾಬಾರವರು ಕಡೇಪಕ್ಷ ವಿದಾಯ ಹೇಳಿ ಹೋಗಬಹುದಿತ್ತು' ಎಂದು ಯೋಚಿಸುತ್ತಾರೆ. ಏನು ತಾವು ವಿದಾಯ ಕೊಡುತ್ತಿದ್ದಿರಾ? ಕೊಡುತ್ತಿರಲಿಲ್ಲ ಅಲ್ಲವೇ? ಹಾಗಾದರೆ ಶಕ್ತಿಶಾಲಿಗಳು ಯಾರಾದರು? ಒಂದುವೇಳೆ ವಿದಾಯ ತೆಗೆದುಕೊಂಡಿದ್ದರೆ ಕರ್ಮಾತೀತರಾಗಿ ಆಗುತ್ತಿರಲಿಲ್ಲ. ಏಕೆಂದರೆ ರಕ್ತ ಸಂಬಂಧಕ್ಕಿಂತಲೂ ಪದಮಗುಣದಷ್ಟು ಹೆಚ್ಚು ಆತ್ಮಿಕ ಸಂಬಂಧ ಇರುತ್ತದೆ. ಬ್ರಹ್ಮಾರವರಿಗಂತೂ ಕರ್ಮಾತೀತರಾಗಲೇಬೇಕಿತ್ತು ಅಥವಾ ಸ್ನೇಹದ ಬಂಧನದಲ್ಲಿ ಹೋಗಬೇಕಿತ್ತಾ? ಬ್ರಹ್ಮಾ ತಂದೆಯೂ ಸಹ 'ಡ್ರಾಮಾ ನನ್ನನ್ನು ಕರ್ಮಾತೀತನಾಗುವ ಬಂಧನದಲ್ಲಿ ಬಂಧಿಸಿದೆ ಮತ್ತು ಎಷ್ಟು ಸಮಯದೊಳಗೆ ಬಂಧಿಸಿತು?' ಎಂದು ಹೇಳುತ್ತಾರೆ. ಸಮಯವಿತ್ತು ಎಂದರೆ ಬೇರೆ ಅನ್ಯ ಪಾತ್ರ ಆಗಿಬಿಡುತ್ತಿತ್ತು. ಆದ್ದರಿಂದ ಒಂದು ಕ್ಷಣದ ಆಟ ಆಗಿಬಿಟ್ಟಿತು. ಮಕ್ಕಳನ್ನೂ ಅರಿವಿಲ್ಲದವರಂತೆ ಮಾಡಿತು, ತಂದೆಗೂ ಅರಿವಿಲ್ಲದಂತೆ ಮಾಡಿಬಿಟ್ಟಿತು. ಇದಕ್ಕೇ 'ವಾಹ್ ಡ್ರಾಮಾ ವಾಹ್' ಎಂದು ಹೇಳಲಾಗುತ್ತದೆ. ಈ ರೀತಿ ಇದೆ ಅಲ್ಲವೇ? 'ವಾಹ್ ಡ್ರಾಮಾ ವಾಹ್' ಆಗಿದೆ ಎಂದಾಗ ಅನ್ಯ ಯಾವ ಸಂಕಲ್ಪವೂ ಬರಲು ಸಾಧ್ಯವಿಲ್ಲ. ಫುಲ್ ಸ್ಟಾಪ್ ಹಾಕಿ ಬಿಟ್ಟಿರಲ್ಲವೇ? ಇಲ್ಲದಿದ್ದರೆ ಕಡೇಪಕ್ಷ ಮಕ್ಕಳಾದರೂ 'ಇದೇನಾಗುತ್ತಿದೆ'

ಎಂದು ಕೇಳುತ್ತಿದ್ದರು. ಆದರೆ ತಂದೆಯೂ ಸುಮ್ಮನಾದರು, ಮಕ್ಕಳೂ ಸುಮ್ಮನಾಗಿ ಬಿಟ್ಟರು. ಇದಕ್ಕೆ 'ಡ್ರಾಮಾದ ಫುಲ್ ಸ್ಟಾಪ್' ಎಂದು ಹೇಳಲಾಗುತ್ತದೆ. ಆ ಕ್ಷಣವಂತೂ ಫುಲ್‌ಸ್ಟಾಪ್ ಇಟ್ಟರಲ್ಲವೇ? ನಂತರ ಎಷ್ಟೇ ಪ್ರಶ್ನೆಗಳು ಬಂದಿರಬಹುದು, ಆದರೆ ಆ ಕ್ಷಣದಲ್ಲಿ ಬರಲಿಲ್ಲ. ಅಂದಮೇಲೆ 'ವಾಹ್ ಡ್ರಾಮಾ ವಾಹ್' ಎಂದು ಹೇಳುತ್ತೀರಲ್ಲವೇ? ಬಾಬಾ ಬಾಬಾ ಎಂದು ಕರೆದದ್ದೂ ಆನಂತರ, ಮೊದಲು ಕರೆಯಲಿಲ್ಲ. ಡ್ರಾಮಾದಲ್ಲಿ ಈ ವಿಚಿತ್ರ ವಿದ್ಯಮಾನ ನಿಗದಿಯಾಗಿಯೇ ಇತ್ತು ಮತ್ತು ಆಗುವುದೂ ಇದೆ. ಪರಿವರ್ತನಾಶೀಲವಾದ ಡ್ರಾಮಾವು ಪಾತ್ರವನ್ನೂ ಪರಿವರ್ತನೆ ಮಾಡಿಬಿಡುತ್ತದೆ. **(18–01–1990)**

ಈ ದಿನ ತ್ರಿಮೂರ್ತಿ ಶಿವತಂದೆ ಪ್ರತಿಯೊಂದು ಮಗುವಿನ ಮಸ್ತಕದಲ್ಲಿ ಮೂರು ತಿಲಕಗಳನ್ನು ನೋಡುತ್ತಿದ್ದಾರೆ. ಎಲ್ಲಾ ಮಕ್ಕಳು ಹೃದಯದ ಉಮ್ಮಂಗ–ಉತ್ಸಾಹದಿಂದ ತ್ರಿಮೂರ್ತಿ ಶಿವಜಯಂತಿಯನ್ನು ಆಚರಿಸಲು ಬಂದಿದ್ದೀರಿ. ಅಂದಾಗ ತ್ರಿಮೂರ್ತಿ ಶಿವತಂದೆ ಅಂದರೆ ಜ್ಯೋತಿರ್ಬಿಂದು ತಂದೆಯು ಮಕ್ಕಳ ಮಸ್ತಕದಲ್ಲಿ ಮೂರು ಬಿಂದುಗಳ ತಿಲಕವನ್ನು ನೋಡಿ ಹರ್ಷಿತರಾಗುತ್ತಿದ್ದಾರೆ. ಈ ತಿಲಕ ಇಡೀ ಜ್ಞಾನದ ಸಾರವಾಗಿದೆ. ಈ ಮೂರು ಬಿಂದುಗಳಲ್ಲಿ ಜ್ಞಾನಸಾಗರನ ಸಂಪೂರ್ಣ ಜ್ಞಾನದ ಸಾರವು ತುಂಬಿದೆ. ಇಡೀ ಜ್ಞಾನದ ಸಾರವು ಮೂರು ಮಾತುಗಳಲ್ಲಿ ಅಡಗಿದೆ – ಪರಮಾತ್ಮ, ಆತ್ಮ ಮತ್ತು ಡ್ರಾಮಾ ಅಂದರೆ ರಚನೆ. ಇಂದಿನ ಸ್ಮರಣಾರ್ಥ ದಿನವೂ ಶಿವ ಅಂದರೆ ಬಿಂದುವಿನದಾಗಿದೆ. ತಂದೆಯೂ ಬಿಂದು, ತಾವೂ ಬಿಂದು ಮತ್ತು ರಚನೆ ಅಂದರೆ ಡ್ರಾಮಾವೂ ಸಹ ಬಿಂದುವಾಗಿದೆ. ಆದ್ದರಿಂದ ಬಿಂದುಗಳಾದ ತಾವೆಲ್ಲರೂ ಬಿಂದುವಿನ ಜಯಂತಿಯನ್ನು ಆಚರಿಸುತ್ತಿದ್ದೀರಿ. ಬಿಂದು ಆಗಿ ಆಚರಿಸುತ್ತಿದ್ದೀರಲ್ಲವೇ? ಇಡೀ ಪ್ರಕೃತಿಯ ಆಟವೂ ಸಹ ಎರಡು ಮಾತುಗಳಾದಾಗಿದೆ. ಒಂದು 'ಬಿಂದು' ಮತ್ತೊಂದು 'ಬೆಳಕು ಅಂದರೆ ಜ್ಯೋತಿಯದು'. ತಂದೆಯನ್ನು ಕೇವಲ 'ಬಿಂದು'ವಲ್ಲ, ಜ್ಯೋತಿರ್ಬಿಂದು' ಎಂದು ಕರೆಯುತ್ತಾರೆ. ರಚಯಿತನು ಜ್ಯೋತಿರ್ಬಿಂದುವಾಗಿದ್ದಾರೆ ಮತ್ತು ಹೀರೋ ಪಾತ್ರಧಾರಿಗಳಾದ ತಾವೂ ಜ್ಯೋತಿರ್ಬಿಂದುವಾಗಿದ್ದೀರಿ, ಕೇವಲ ಬಿಂದುವಲ್ಲ. ಮತ್ತು ಇಡೀ ಆಟವನ್ನು ನೋಡಿದಾಗ, ಯಾವುದೇ ಕಾರ್ಯವನ್ನು ಮಾಡಿದರೂ ಅದಕ್ಕೆ ಆಧಾರ ಬೆಳಕು (ವಿದ್ಯುಚ್ಛಕ್ತಿ) ಆಗಿದೆ. ಒಂದುವೇಳೆ ಇಂದು ಪ್ರಪಂಚದಲ್ಲಿ ವಿದ್ಯುಚ್ಛಕ್ತಿ ಕೈ ಕೊಟ್ಟರೆ ಒಂದು ಸೆಕೆಂಡಿನಲ್ಲಿ ಪ್ರಪಂಚವು ಪ್ರಪಂಚವಾಗಿ ಕಾಣುವುದಿಲ್ಲ. ಸುಖದ ಸಾಧನಗಳು ಯಾವುದೇ ಇರಲಿ, ಅವುಗಳಿಗೆಲ್ಲಾ ಆಧಾರ ಏನಾಗಿದೆ? ಬೆಳಕಾಗಿದೆ. ರಚಯಿತ ತಂದೆಯೂ ಸ್ವಯಂ ಪ್ರಕಾಶವಾಗಿದ್ದಾರೆ. ಆತ್ಮ ಮತ್ತು ಪರಮಾತ್ಮರ ಪ್ರಕಾಶ ಅವಿನಾಶಿಯಾಗಿದೆ. ಪ್ರಕೃತಿಯ ಆಧಾರವೂ ಪ್ರಕಾಶವಾಗಿದೆ, ಆದರೆ ಪ್ರಕೃತಿಯ ಬೆಳಕು ಅವಿನಾಶಿಯಲ್ಲ. ಆದ್ದರಿಂದ ಇಡೀ ಆಟ ಬಿಂದು ಮತ್ತು ಪ್ರಕಾಶತೆಯ ಮೇಲೆ ಆಧಾರಿತವಾಗಿದೆ. **(22–02–1990)**

ಸದಾ ತಮ್ಮ ಹೃದಯದಲ್ಲಿ ತಂದೆಯ ಗುಣಗಳ ಹಾಡನ್ನು ಹಾಡುತ್ತಿರುತ್ತೀರಲ್ಲವೇ? ಎಲ್ಲರಿಗೂ ಈ ಹಾಡನ್ನು ಹಾಡಲು ಬರುವುದೇ? ಬ್ರಾಹ್ಮಣರಾದಿರಿ ಎಂದರೆ ಈ ಹಾಡು ಅಟೋಮೆಟಿಕ್ ಆಗಿ ನುಡಿಯುತ್ತಿರುತ್ತದೆ. ಇದು ಎಷ್ಟೊಂದು ಮಧುರವಾದ ಹಾಡಾಗಿದೆ. ಖುಷಿಯ ಹಾಡಾಗಿದೆ. ದು:ಖ ಅಥವಾ ವಿಯೋಗದ ಹಾಡಲ್ಲ. ಈ ಹಾಡು ಯೋಗಯುಕ್ತರಾಗುವಂತಹದಾಗಿದೆ. ಯೋಗಿ ಆತ್ಮಗಳು ಮಾತ್ರ ಈ ಹಾಡನ್ನು ಹಾಡಲು ಸಾಧ್ಯವಾಗುತ್ತದೆ, ದು:ಖಿ ಆತ್ಮಗಳು ಹಾಡಲು ಸಾಧ್ಯವಿಲ್ಲ. ಹಾಡಾದರೂ ಯಾವುದಾಗಿದೆ – 'ವಾಹ್ ಬಾಬಾ ವಾಹ್' ಮತ್ತು 'ವಾಹ್ ನಾನು ಶ್ರೇಷ್ಠ ಆತ್ಮ ವಾಹ್', 'ವಾಹ್ ಡ್ರಾಮಾ ವಾಹ್'. ಆದ್ದರಿಂದ 'ವಾಹ್ ವಾಹ್'ನ ಹಾಡಾಗಿದೆ, ಅಯ್ಯೋ–ಅಯ್ಯೋ ಎಂದು ಹೇಳುವ ಹಾಡಲ್ಲ. ಮೊದಲು 'ಅಯ್ಯೋ ಅಯ್ಯೋ' ಎಂಬ ಹಾಡಿತ್ತು. ಈಗ ಇರುವುದು 'ವಾಹ್ ವಾಹ್' ಎಂಬ ಹಾಡು. ಏನೇ ಆದರೂ ನಿಮ್ಮ ಬಾಯಿಂದ 'ವಾಹ್ ವಾಹ್' ಎಂಬ ಶಬ್ದ ಹೊರಡುತ್ತದೆಯೇ ವಿನಃ 'ಅಯ್ಯೋ' ಎಂಬ ಶಬ್ದವಲ್ಲ. ಪ್ರಪಂಚವು ಯಾವ ಮಾತಿಗೆ ಅಯ್ಯೋ ಅಯ್ಯೋ ಎನ್ನುತ್ತದೆಯೋ, ಅದೇ ಮಾತು ತಮಗೆ ವಾಹ್ ವಾಹ್ ಆಗಿದೆ. ಎಂದಾಗ ಎಲ್ಲರೂ ಈ ಹಾಡನ್ನು ಹಾಡುತ್ತೀರಲ್ಲವೇ? ಇದು ಹೃದಯದ ಹಾಡಾಗಿದೆ, ಬಾಯಿಯ ಹಾಡಲ್ಲ. ಯಾವುದೇ ಮಾತು ಬಂದರೂ ನಥಿಂಗ್ ನ್ಯೂ (ಏನೂ ಹೊಸದಲ್ಲ), ಪ್ರತಿ ದೃಶ್ಯವನ್ನು ಅನೇಕ ಸಲ ರಿಪೀಟ್ (ಪುನರಾವರ್ತನೆ) ಮಾಡಿದ್ದೇವೆ ಎಂಬ ಜ್ಞಾನವಿದೆ. ನಥಿಂಗ್ ನ್ಯೂ ಎಂಬುದರ ಸ್ಮೃತಿಯಿಂದ ಎಂದಿಗೂ ಏರುಪೇರಿನಲ್ಲಿ ಬರುವುದಿಲ್ಲ, ಸದಾ ಅಚಲ, ಅಟಲರಾಗಿ ಇರುವಿರಿ. ಯಾವುದಾದರೂ ಹೊಸ ಮಾತಾಗಿದ್ದರೆ 'ಇದೇನು?, ಈ ರೀತಿ ಆಗುತ್ತದೆಯೇ?' ಎಂಬ ಆಶ್ಚರ್ಯಚಕಿತ ಮಾತು ಹೊರಡುತ್ತದೆ. ಆದರೆ ನಥಿಂಗ್ ನ್ಯೂ ಜ್ಞಾನವಿದ್ದರೆ 'ಏನು' ಮತ್ತು 'ಏಕೆ' ಎಂಬ ಪ್ರಶ್ನೆಗಳಿಲ್ಲ, ಬದಲಿಗೆ 'ಫುಲ್‌ಸ್ಟಾಪ್' ಬಂದು ಬಿಡುತ್ತದೆ. ಅಂದಾಗ ಫುಲ್‌ಸ್ಟಾಪ್‌ನವರಾಗಿದ್ದೀರಾ, ಪ್ರಶ್ನೆಯವರಾಗಿದ್ದೀರಾ ಅಥವಾ ಪ್ರಶ್ನಾರ್ಥಕ ಚಿಹ್ನೆಯವರಾಗಿದ್ದೀರಾ?

ಎಲ್ಲದಕ್ಕಿಂತಲೂ ಸಹಜವಾದುದ್ದು ಬಿಂದುವಾಗಿದೆ. ಮಕ್ಕಳ ಕೈಗೆ ಪೆನ್ಸಿಲ್ ಕೊಟ್ಟರೆ ಅವರೂ ಮೊದಲು ಬಿಂದುವನ್ನೇ ಹಾಕುವರು. ಆದ್ದರಿಂದ ಫುಲ್‌ಸ್ಟಾಪ್ ಆಗಿದೆ ಬಿಂದು. ಪ್ರಶ್ನಾರ್ಥಕ ಚಿಹ್ನೆ ಕಷ್ಟಕರವಾಗಿರುತ್ತದೆ. ಯಾರಿಗೆ ಫುಲ್‌ಸ್ಟಾಪ್ ಇಡಲು ತಿಳಿದಿದೆಯೋ ಅವರು ಫುಲ್‌ಪಾಸ್ ಆಗುತ್ತಾರೆ. ಆದ್ದರಿಂದ ತಾವು ಫುಲ್‌ಪಾಸ್ ಆಗುವವರಾ? ಅಥವಾ ತಳ್ಳಿಸಿಕೊಂಡು ಪಾಸ್ ಆಗುವವರಾ? ಪಾಸ್ ಆಗುವುದಾದರೆ ಫುಲ್ ಆಗಬೇಕು. ತಳ್ಳಿಸಿಕೊಂಡು ಪಾಸ್ ಆಗುವವರನ್ನು ಪಾಸ್ ಎಂದು ಹೇಳಲಾಗುವುದಿಲ್ಲ. ಒಳ್ಳೆಯದು. ತಾವು ಎಲ್ಲಿಯೇ ಇದ್ದರೂ ತಮ್ಮ ಮನಸ್ಸು ಎಲ್ಲಿರುವುದು? ಸೇವೆಯ  ಸಲುವಾಗಿ ಬೇರೆ ಬೇರೆ ಸ್ಥಾನಗಳಲ್ಲಿ ಇರಬಹುದು ಆದರೆ ಮನಸ್ಸಂತೂ ಮಧುಬನದಲ್ಲಿ ಇರುತ್ತದೆ ಅಲ್ಲವೇ? ಮಧುಬನದವರು ಎಂದರೆ ಮಧುರತೆ ಯುಳ್ಳವರು ಆಗಿರುವಿರಲ್ಲವೇ? ಅಥವಾ ಎಂದಾದರೂ ಮಕ್ಕಳ ಮೇಲೆ ಕ್ರೋಧ ಮಾಡುತ್ತೀರಾ? ಪಾಂಡವರು ಎಂದಾದರೂ ತಮ್ಮ ಕಛೇರಿಗಳಲ್ಲಿ ಕ್ರೋಧ ಮಾಡಿಕೊಳ್ಳುವಿರಾ? ಕೆಲಸ ಕಾರ್ಯಗಳಲ್ಲಿ ಕ್ರೋಧ ಮಾಡಿಕೊಳ್ಳುತ್ತಿರೋ ಅಥವಾ ಮಧುರರಾಗಿರುತ್ತೀರೋ? ಮಾತೆಯರು ಎಂದಾದರೂ ಮಕ್ಕಳ ಮೇಲಾಗಲಿ ಅಥವಾ ಪರಸ್ಪರದಲ್ಲಿಯೇ ಆಗಲಿ, ದೊಡ್ಡವರ ಮೇಲಾಗಲಿ ಕ್ರೋಧ ಮಾಡುವುದಿಲ್ಲತಾನೇ?  ಮಾತೆಯರಿಗೆ  ಕ್ರೋಧವು ಬರುತ್ತದೆಯೇ? (ಮಕ್ಕಳ ಮೇಲೆ ಆಗಾಗ ಬರುತ್ತದೆ) ಹಾಗಾದರೆ ಅವರನ್ನು ಮಕ್ಕಳು ಎಂದು ಭಾವಿಸಬೇಡಿ. ಮಕ್ಕಳು ಎಂದರೇನೆ ತಿಳುವಳಿಕೆ ಇಲ್ಲದವರು. ದೊಡ್ಡವರಂತೂ ಅಲ್ಲವಲ್ಲ, ಮಕ್ಕಳಾಗಿದ್ದಾರೆ. ಮಕ್ಕಳು ಎಂದು ಹೇಳುವುದರಿಂದ ಅವರು ಎಂದಿಗೂ ಬದಲಾಗುವುದಿಲ್ಲ, ಹೇಳುವುದರಿಂದ  ಕೇವಲ ಸುಮ್ಮನಿರುತ್ತಾರೆ, ಬದಲಾಗುವುದಿಲ್ಲ. ತಾವು ಇಂದು ಅವರಿಗೆ ಹೇಳುತ್ತೀರಿ ಎಂದರೆ, ಅವರು ನಾಳೆ ಮತ್ತೊಬ್ಬರಿಗೆ ಹೇಳುತ್ತಾರೆ. ಕಲಿಸುತ್ತೀರಷ್ಟೆ. ಪರಿವರ್ತನೆ ತರುವುದಿಲ್ಲ, ಕೇವಲ ಕಲಿಸುತ್ತೀರಷ್ಟೆ. ಎಲ್ಲಿಯವರೆಗೆ ಅಡಗಿಸಿಕೊಂಡು ಸುಮ್ಮನೆ ಇರುತ್ತಾರೆ? ಹೆಚ್ಚೆಂದರೆ ಒಂದು ಘಂಟೆ ಸುಮ್ಮನಿರಬಹುದು. ನಂತರ ಮೊದಲಿನ ಹಾಗೆಯೇ ಆಗಿಬಿಡುತ್ತಾರೆ. ಆದ್ದರಿಂದ ಎಂತಹುದೇ ಮಗುವಾಗಿರಲಿ, ತಿಳುವಳಿಕೆ ಇಲ್ಲದವರಾಗಿರಬಹುದು,  ದೊಡ್ಡವರೇ ಆಗಿರಬಹುದು, ಆದರೆ ಆ ಸಮಯದಲ್ಲಿ ಜ್ಞಾನದ ತಿಳುವಳಿಕೆ ಇಲ್ಲದವರಾಗಿದ್ದಾರಲ್ಲವೇ? ತಿಳುವಳಿಕೆ ಇಲ್ಲದವರ ಮೇಲೆ ಎಂದೂ ಕ್ರೋಧ ಮಾಡಿಕೊಳ್ಳಲಾಗುವುದಿಲ್ಲ, ದಯೆ ತೋರಿಸಲಾಗುತ್ತದೆ. ಆದ್ದರಿಂದ ಫಾಲೋ ಫಾಧರ್ ಮಾಡಿರಿ (ತಂದೆಯನ್ನು ಅನುಸರಿಸಿರಿ) ಬಾಪ್‌ದಾದಾರವರು ಎಂದಾದರೂ ಕೋಪ ಮಾಡಿಕೊಳ್ಳುವರೇ? ತಾವು ತಪ್ಪುಗಳನ್ನು ಮಾಡುತ್ತೀರಿ, ಪದೇ ಪದೇ ತಪ್ಪು ಮಾಡುತ್ತೀರಿ, ವಿಸ್ಮೃತಿಯಲ್ಲಿ ಬರುತ್ತೀರಲ್ಲವೇ? ಆದರೂ ತಂದೆಯು ಕೋಪ ಮಾಡಿಕೊಳ್ಳುವರೇನು? ಹಾಗಾದರೆ ತಾವು ಏಕೆ ಕೋಪ ಮಾಡಿಕೊಳ್ಳುವಿರಿ? ತಾವೆಲ್ಲರೂ ಎಷ್ಟೇ ದೊಡ್ಡವರಿದ್ದರೂ ತಂದೆಗೆ ಮಕ್ಕಳೇ ತಾನೆ? ತಂದೆಯು ಹೇಗೆ ದಯಾಸಾಗರರಾಗಿದ್ದಾರೋ ಹಾಗೆ ತಾವು ಮಾಸ್ಟರ್ ಆಗಿದ್ದೀರಿ. ಸದಾ ಶುಭಭಾವನೆ ಶುಭಕಾಮನೆಯಿಂದ ಪರಿವರ್ತನೆ ಮಾಡಿರಿ. ತಂದೆಯು ಪರಿವರ್ತನೆ ಮಾಡಿದರೆ? ಇವರು ಶ್ರೇಷ್ಠ ಆತ್ಮ ಆಗಿದ್ದಾರೆ, ಬ್ರಾಹ್ಮಣ ಆತ್ಮ ಆಗಿದ್ದಾರೆ ಎಂದು ಶುಭಭಾವನೆಯನ್ನಿಟ್ಟರು. ಇದರಿಂದ ಪರಿವರ್ತನೆ ಆಗಿಬಿಟ್ಟರಲ್ಲ. ಆದ್ದರಿಂದ ಫಾಲೋಫಾದರ್ ಮಾಡಿ. ಮೊದಲು ನಾನು ಎಷ್ಟು ತಪ್ಪುಗಳನ್ನು ಮಾಡಿತ್ತಿದ್ದೇನೆ ಎಂದು ತಮ್ಮನ್ನು ತಾವು ನೋಡಿಕೊಳ್ಳಿ, ಆಮೇಲೆ ತಂದೆಯು ಏನು ಮಾಡುತ್ತಾರೋ ಆ ಸ್ಥಾನದಲ್ಲಿ ನಿಂತು ನೋಡಿರಿ, ಆಗ ಎಂದಿಗೂ ಕ್ರೋಧ ಬರುವುದಿಲ್ಲ. ತಿಳಿಯಿತೆ? ಶುಭಬಾವನೆ ಶುಭಕಾಮನೆಯ ದೃಷ್ಟಿಯಿಂದ ಸ್ವಯಂ ಸಹ ಸಂತುಷ್ಟರಾಗಿ ಇರುವಿರಿ. ಇದರ ಅನುಭವ ಇದೆಯಲ್ಲವೆ? ಸಂತುಷ್ಟರಾಗಿ ಇರುವುದೇ ಸಂತುಷ್ಟರನ್ನಾಗಿ ಮಾಡುವುದಾಗಿದೆ. ಏನೇ ಆಗಲಿ, ಯಾರು ಎಷ್ಟೇ ತಮ್ಮನ್ನು ಅಲುಗಾಡಿಸುಲು ಪ್ರಯತ್ನ ಪಡಲಿ, ಆದರೆ ತಾವು ಸಂತುಷ್ಟರಾಗಿ ಇರಬೇಕು ಮತ್ತು ಅನ್ಯರನ್ನು ಸಂತುಷ್ಟರನ್ನಾಗಿ ಮಾಡಬೇಕು ಎಂಬ ಸ್ಮೃತಿ ಸದಾ ಇರಬೇಕು. ಇದೇ ಚೆನ್ನಾಗಿದೆ ಎಂದು ಅನಿಸುತ್ತದೆಯಲ್ಲವೇ? ಸಂತುಷ್ಟರಾಗಿ ಇರುವವರು ಸದಾ ಮನೋರಂಜನೆಯಲ್ಲಿ ಇರುತ್ತಾರೆ. ಆದ್ದರಿಂದ ಈ ವರದಾನವನ್ನು ಸದಾ ಜೊತೆಯಲ್ಲಿಟ್ಟುಕೊಳ್ಳಿ.  ಬ್ರಾಹ್ಮಣರು ಎಂದರೆ ಸಂತುಷ್ಟರು. ಆಸಂತುಷ್ಟತೆ ಬ್ರಾಹ್ಮಣ ಜೀವನವಲ್ಲ. ಒಳ್ಳೆಯದು. **(01–03–1990)**

ಬಾಪ್‌ದಾದಾರವರು ಈ ದಿನ ಮುಗುಳ್ನಗುತ್ತಿದ್ದರು. ಮಕ್ಕಳಲ್ಲಿ ಮೂರು ಶಬ್ದಗಳ ಕಾರಣ ಕಂಟ್ರೋಲಿಂಗ್ ಪವರ್ (ನಿಯಂತ್ರಣ ಶಕ್ತಿ) ಮತ್ತು ರೂಲಿಂಗ್ ಪವರ್ (ಆಡಳಿತ ನಡೆಸುವ ಶಕ್ತಿ) ಕಡಿಮೆ ಆಗಿಬಿಡುತ್ತದೆ. ಆ ಮೂರು ಶಬ್ದಗಳು (1) ವೈ (ಏಕೆ), (2) ವ್ವಾಟ್ (ಏನು) ಮತ್ತು (3) ವಾಂಟ್ (ಬೇಕು) ಎಂಬುದಾಗಿದೆ. ಈ ಮೂರು ಶಬ್ದಗಳನ್ನು ಸಮಾಪ್ತಿ ಮಾಡಿ ಒಂದು ಶಬ್ದವನ್ನು ಹೇಳಿರಿ. 'ವೈ' ಎಂಬ ಶಬ್ದ ಬಂದಿತು ಎಂದರೆ 'ವಾಹ್' ಎಂದು ಹೇಳಿರಿ,  'ವಾಟ್' ಎಂಬ ಶಬ್ದ ಬಂದಿತು ಎಂದರೆ 'ವಾಹ್' ಎಂದು ಹೇಳಿರಿ. 'ವಾಹ್' ಎಂಬ ಶಬ್ಧವಂತೂ ಬರುತ್ತದೆಯಲ್ಲವೆ? 'ವಾಹ್ ಬಾಬಾ', 'ವಾಹ್ ನಾನು ವಾಹ್' ಮತ್ತು 'ವಾಹ್ ಡ್ರಾಮಾ'.  ಕೇವಲ 'ವಾಹ್' ಎಂದು

ಹೇಳಿದರೆ ಈ ಮೂರು ಶಬ್ದಗಳು ಸಮಾಪ್ತಿಯಾಗಿ ಬಿಡುತ್ತದೆ. ಬಾಪ್‌ದಾದಾರವರು ಯಾವ ಆಟ ನೋಡಿದರೆಂದು ಆ ದಿನವೂ ತಿಳಿಸಿದ್ದೆನಲ್ಲವೇ? ಮಕ್ಕಳಾದ ತಮಗೆ ಒಂದು ಚಿತ್ರವನ್ನು ತೋರಿಸಲಾಗಿತ್ತು – ಅದು ಯೋಗಿಯು ಯೋಗವನ್ನು ಜೋಡಿಸುತ್ತಿದ್ದಾರೆ, ಬುದ್ಧಿಯನ್ನು ಏಕಾಗ್ರಚಿತ್ತ ಮಾಡುತ್ತಿದ್ದಾರೆ, ಬ್ಯಾಲೆನ್ಸ್ ಮಾಡುತ್ತಿದ್ದಾರೆ, ಬ್ಯಾಲೆನ್ಸ್‌ನ ತಕ್ಕಡಿಯನ್ನು ತೋರಿಸಲಾಗುತ್ತಿದೆ. ಎಷ್ಟು ಬುದ್ಧಿಯ ಬ್ಯಾಲೆನ್ಸ್ ಮಾಡುತ್ತಾರೋ ಅಷ್ಟು ಯಾವುದೋ ಕೋತಿಯು ಬಂದು ಕುಳಿತು ಬಿಡುತ್ತದೆ. ಈ ಮೂರು ಮಾತುಗಳ ಕೋತಿಯು ಬಂದು ಬಿಡುತ್ತದೆ. ಆಗ ಬ್ಯಾಲೆನ್ಸ್ ಏನಾಗುತ್ತದೆ? ಹಲ್‌ಚಲ್ (ಅಲ್ಲೋಲ ಕಲ್ಲೋಲ) ಆಗಿ ಬಿಡುತ್ತದೆ, ಬ್ಯಾಲೆನ್ಸ್ ಇರುವುದಿಲ್ಲ. ಅಂದಾಗ ಈ ಮೂರು ಶಬ್ದಗಳು ಬ್ಯಾಲೆನ್ಸ್‌ನ್ನು ಸಮಾಪ್ತಿ ಮಾಡಿಬಿಡುತ್ತವೆ. ಬುದ್ಧಿಯನ್ನು ಕುಣಿಸಲು ಪ್ರಾರಂಭಿಸುತ್ತದೆ. ಕೋತಿಯು ಆರಾಮವಾಗಿ ಕುಳಿತಿರಲು ಸಾಧ್ಯವೇ? ಬೇರೆ ಏನನ್ನೂ ಮಾಡದಿದ್ದರೂ ಬಾಲವನ್ನಾದರೂ ಅಲುಗಾಡಿಸುತ್ತಿರುತ್ತದೆ. ಅಂದಾಗ ಇದರಲ್ಲಿಯೂ ಬ್ಯಾಲೆನ್ಸ್ ಇಲ್ಲದಿರುವ ಕಾರಣ ತಂದೆಯಿಂದ ಪ್ರತಿ ಹೆಜ್ಜೆಯಲ್ಲಿ ಯಾವ ಆಶೀರ್ವಾದಗಳು ಸಿಗುತ್ತದೆಯೋ ಅಥವಾ ಆತ್ಮಿಕ ಸ್ನೇಹದ ಕಾರಣದಿಂದ ಪರಿವಾರದಿಂದ ಯಾವ ಆಶೀರ್ವಾದಗಳು ಸಿಗುತ್ತದೆಯೋ ಅದರಿಂದ ವಂಚಿತರಾಗಿ ಬಿಡುವಿರಿ. ಹೇಗೆ ತಂದೆಯ ಜೊತೆ ಸಂಬಂಧವಿಡುವುದು ಅತ್ಯವಶ್ಯಕವಾಗಿದೆಯೋ, ಹಾಗೆಯೇ ಈಶ್ವರೀಯ ಪರಿವಾರದ ಜೊತೆ ಸಂಬಂಧ ಇಡುವುದೂ ಸಹ ಅತೀ ಅವಶ್ಯಕವಾಗಿದೆ. ಇಡೀ ಕಲ್ಪದಲ್ಲಿ ನಂಬರ್ ಒನ್ ಆತ್ಮ ಆದ ಬ್ರಹ್ಮಾ ತಂದೆ ಮತ್ತು ಈಶ್ವರೀಯ ಪರಿವಾರದ ಸಂಬಂಧ ಸಂಪರ್ಕದಲ್ಲಿ ಬರಬೇಕಾಗಿದೆ. ಒಳ್ಳೆಯದು, 'ತಂದೆಯಂತೂ ನನ್ನವರಾಗಿದ್ದಾರೆ, ನಾನು ತಂದೆಯ ಮಗುವಾಗಿದ್ದೇನೆ' ಎಂದಷ್ಟೇ ತಿಳಿಯಬೇಡಿರಿ. ಇದೂ ಸಹ ಪಾಸ್ ವಿತ್ ಆನರ್ ಆಗುವವರ ಲಕ್ಷಣಗಳಲ್ಲ. ಏಕೆಂದರೆ ತಾವು ಸನ್ಯಾಸಿ ಆತ್ಮಗಳಂತೂ ಅಲ್ಲ. ಋಷಿ ಮುನಿಗಳ ಆತ್ಮಗಳಲ್ಲ. ನೀವು ಕಿನಾರ ಕರ್‌ನೇವಾಲ ನಹಿ (ದೂರ ಸರಿಯುವಂತಹ) ಆತ್ಮಗಳಲ್ಲ. ಬದಲಿಗೆ ಸಹಾರ ಬನ್‌ನೇವಾಲ (ಆಸರೆ ಆಗುವಂತಹ) ಆತ್ಮಗಳಾಗಿದ್ದೀರಿ. ವಿಶ್ವದಿಂದ ದೂರವಾಗುವವರಲ್ಲ, ಬದಲಿಗೆ ವಿಶ್ವ ಕಲ್ಯಾಣಕಾರಿಗಳಾಗಿದ್ದೀರಿ. ಬ್ರಾಹ್ಮಣ ಆತ್ಮಗಳ ಮಾತನ್ನು ಬಿಡಿ, ಆದರೆ ಪ್ರಕೃತಿಯನ್ನೂ ಪರಿವರ್ತನೆ ಮಾಡಿ ಆಸರೆ ಆಗುವಂತಹ ಆತ್ಮಗಳು ತಾವಾಗಿದ್ದೀರಿ. ಪರಿವಾರದ ಅವಿನಾಶಿ ಪ್ರೀತಿಯ ದಾರದಿಂದ ಬೇರ್ಪಟ್ಟು ಬರುವವರಲ್ಲ. ವಿಜಯಿ ರತ್ನಗಳು ಪ್ರೀತಿಯ ದಾರದ ಮಧ್ಯದಿಂದ ಬೇರ್ಪಡಲು ಸಾಧ್ಯವಿಲ್ಲ. ಆದ್ದರಿಂದ ಎಂದಿಗೂ ಯಾವುದೇ ಮಾತಿನಿಂದಾಗಲೀ, ಯಾವುದೇ ಸ್ಥಾನದಿಂದಾಗಲೀ, ಯಾವುದೇ ಸೇವೆಯಿಂದಾಗಲಿ, ಯಾರೇ ಜೊತೆಗಾರ ರಿಂದಾಗಲೀ ಬೇರೆಯಾಗಿ ನಮ್ಮ ಸ್ಥಿತಿಯನ್ನು ಚೆನ್ನಾಗಿ ಮಾಡಿ ತೋರಿಸುತ್ತೇನೆ ಎಂಬ ಈ ಸಂಕಲ್ಪವನ್ನೂ ಮಾಡಬೇಡಿ. ನಾವು ಇವರ ಜೊತೆ ನಡೆಯಲು ಸಾಧ್ಯವಿಲ್ಲ, ಅವರ ಜೊತೆಯಲ್ಲಿ ನಡೆಯುತ್ತೇವೆ, ಈ ಸ್ಥಾನದಲ್ಲಿ ಉನ್ನತಿಯಾಗುವುದಿಲ್ಲ, ಬೇರೆ ಸ್ಥಾನದಲ್ಲಿ ಆಗುತ್ತದೆ, ಈ ಸೇವೆಯಲ್ಲಿ ವಿಘ್ನವಿದೆ. ಬೇರೆ ಸೇವೆಯಲ್ಲಿ ಚೆನ್ನಾಗಿ ಆಗಬಹುದು ಎಂದು ಹೇಳುವುದು, ಇವೆಲ್ಲವೂ ದೂರ ಮಾಡುವ ಮಾತುಗಳಾಗಿವೆ. ಒಂದುವೇಳೆ ಒಂದು ಸಾರಿ ಈ ಅಭ್ಯಾಸವನ್ನು ಹಾಕಿಕೊಂಡಿರಿ ಎಂದರೆ ಇದು ತಮ್ಮನ್ನು ಎಲ್ಲಿಯೂ ನಿಲ್ಲಲು ಬಿಡುವುದಿಲ್ಲ, ಬುದ್ಧಿಯನ್ನು ಏಕಾಗ್ರವಾಗಿಟ್ಟುಕೊಳ್ಳಲು ಬಿಡುವುದಿಲ್ಲ. ಏಕೆಂದರೆ ಬುದ್ಧಿಗೆ ಬದಲಾಗುವ ಅಭ್ಯಾಸ ಬಂದುಬಿಟ್ಟಿದೆ. ಇದನ್ನೂ ಸಹ ಬಲಹೀನತೆ ಎಂದು ಪರಿಗಣಿಸಲಾಗುತ್ತದೆ ವಿನಃ ಉನ್ನತಿಯಾಗುತ್ತಿದೆಯೆಂದು ಪರಿಗಣಿಸಲಾಗುವುದಿಲ್ಲ. ಸದಾ ತಮ್ಮ ಮೇಲೆ ಶುಭ ಭರವಸೆಯನ್ನು ಇಟ್ಟುಕೊಳ್ಳಿ, ಭರವಸಾ ಹೀನರಾಗಬೇಡಿ (ಭರವಸೆ ಇಲ್ಲದವರಾಗಬೇಡಿ). ಹೇಗೆ ತಂದೆಯು ಪ್ರತಿಯೊಂದು ಮಗುವಿನಲ್ಲಿ ಶುಭ ಭರವಸೆಯನ್ನು ಇಟ್ಟಿದ್ದಾರೋ, ಮಕ್ಕಳು ಹೇಗೇ ಇರಲಿ, ಕೊನೆಯ ನಂಬರಿನ ಮಗುವಿನಿಂದಲೂ ತಂದೆಯು ಹೃದಯವಿದೀರ್ಣರಾಗಲಿಲ್ಲ, ಸದಾ ಭರವಸೆಯನ್ನಿಟ್ಟರು. ಆದ್ದರಿಂದ ತಾವೂ ಸಹ ಸ್ವಯಂ ತಮ್ಮ ಮೇಲೆಯೂ, ಅನ್ಯರ ಬಗ್ಗೆಯೂ, ಸೇವೆಯ ಬಗ್ಗೆಯೂ ಭರವಸಾಹೀನರಾಗಬೇಡಿರಿ, ಹೃದಯ ವಿದೀರ್ಣರಾಗಬೇಡಿರಿ. ದಿಲ್‌ಶಾಹ್ (ಹೃದಯ ತುಂಬಿದವರಾಗಿ) ಆಗಿರಿ. ದಿಲ್‌ಶಾಹ್ ಎಂದರೆ ವಿಶಾಲ ಹೃದಯಿಗಳು, ಸದಾ ದೊಡ್ಡ ಮನಸ್ಸುಳ್ಳವರು. ಯಾವುದೇ ಬಲಹೀನ ಸಂಸ್ಕಾರವನ್ನು ಧಾರಣೆ ಮಾಡಿಕೊಳ್ಳಬೇಡಿ. ಮಾಯೆಯು ಭಿನ್ನ ಭಿನ್ನ ರೂಪದಿಂದ ಬಲಹೀನರನ್ನಾಗಿ ಮಾಡುವ ಪ್ರಯತ್ನ ಮಾಡುತ್ತದೆ. ಆದರೆ ತಾವು ಮಾಯೆಯ ಬಗ್ಗೆಯೂ ನಾಲೆಡ್ಜ್‌ಫುಲ್ (ಜ್ಞಾನಪೂರ್ಣರು) ಆಗಿದ್ದೀರಲ್ಲವೇ? ಅಥವಾ ಅಪೂರ್ಣ ಜ್ಞಾನವಿದೆಯೇ? ಮಾಯೆಯು ಹೊಸ ಹೊಸ ರೂಪದಲ್ಲಿ ಬರುತ್ತದೆ, ಹಳೆಯ ರೂಪದಲ್ಲಿ ಅಲ್ಲ ಎನ್ನುವುದನ್ನು ನೆನಪಿನಲ್ಲಿಟ್ಟುಕೊಳ್ಳಿ. ಏಕೆಂದರೆ ಇವರು ಗುರುತಿಸಿಬಿಡುತ್ತಾರೆಂದು ಮಾಯೆಯೂ ಸಹ ತಿಳಿದುಕೊಳ್ಳುತ್ತದೆ. ವಿಷಯ ಅದೇ ಆಗಿರುತ್ತದೆ ಆದರೆ ಹೊಸ ರೂಪವನ್ನು ಧರಿಸಿಬಿಡುತ್ತದೆ. ತಿಳಿಯಿತೇ? **(07–03–1990)**

ಅಚಲ ಅಡೋಲ ಆತ್ಮನಾಗಿದ್ದೇನೆ ಎಂಬ ಅನುಭವ ಮಾಡುತ್ತೀರಾ? ಒಂದು ಕಡೆ ಹಲ್‌ಚಲ್ (ಏರುಪೇರು) ಇದೆ, ಮತ್ತೊಂದು ಕಡೆ ಬ್ರಾಹ್ಮಣರಾದ ತಾವು ಸದಾ ಅಚಲರಾಗಿದ್ದೀರಿ. ಅಲ್ಲಿ ಎಷ್ಟೆಷ್ಟು ಹಲ್‌ಚಲ್ ಆಗುತ್ತಿರುವುದೋ ಅಷ್ಟಷ್ಟೇ ತಮ್ಮ ಆಂತರ್ಯದೊಳಗೆ ಅಚಲ ಅಡೋಲ ಸ್ಥಿತಿಯ ಅನುಭವ ಹೆಚ್ಚಾಗುತ್ತಾ ಹೋಗುತ್ತಿದೆ. ಏನೇ ಆಗಿಬಿಡಲಿ, ಎಲ್ಲದಕ್ಕಿಂತ ಸಹಜ ಯುಕ್ತಿಯಾಗಿದೆ – ನಥಿಂಗ್ ನ್ಯೂ (ಹೊಸದೇನೂ ಇಲ್ಲ). ಯಾವುದೇ ಹೊಸ ಮಾತಿಲ್ಲ. ಕೆಲವೊಮ್ಮೆ 'ಇದೇನಾಗುತ್ತಿದೆ, ಏನಾಗುತ್ತದೆ' ಎಂದು ಆಶ್ಚರ್ಯವಾಗುವುದು. ಹೊಸ ಮಾತು ಎಂದು ಎನಿಸಿದಾಗ ಆಶ್ಚರ್ಯವಾಗುತ್ತದೆ. ಯಾವ ಮಾತನ್ನು ಯೋಚನೆ ಮಾಡಿರುವುದಿಲ್ಲವೋ, ಕೇಳಿರುವುದಿಲ್ಲವೋ, ತಿಳಿದುಕೊಂಡಿರು ವುದಿಲ್ಲವೋ ಮತ್ತು ಆಕಸ್ಮಿಕವಾಗಿ ಆಗುತ್ತದೋ ಆಗ ಆಶ್ಚರ್ಯವೆನಿಸುವುದು. ಎಂದಾಗ ತಮಗೆ ಆಶ್ಚರ್ಯವಲ್ಲ, ಆದರೆ ಫುಲ್‌ಸ್ಟಾಪ್ ಆಗಬೇಕು. ಪ್ರಪಂಚದವರು ತಬ್ಬಿಬ್ಬಾಗುವವರು ಮತ್ತು ತಾವು ಮೋಜಿನಲ್ಲಿ ಇರುವಂತಹವರು ಆಗಿದ್ದೀರಿ. ಪ್ರಪಂಚದರು ಚಿಕ್ಕ ಚಿಕ್ಕ ಮಾತುಗಳಿಗೂ 'ಏನು ಮಾಡುವುದು, ಹೇಗೆ ಮಾಡುವುದು' ಎಂದು ತಬ್ಬಿಬ್ಬಾಗುತ್ತಾರೆ ಮತ್ತು ತಾವು ಸದಾ ಮೋಜಿನಲ್ಲಿರುವಿರಿ, ತಬ್ಬಿಬ್ಬಾಗುವುದು ಸಮಾಪ್ತಿಯಾಗಿಬಿಟ್ಟಿತು. ಬ್ರಾಹ್ಮಣರು ಎಂದರೆ ಮೋಜಿನಲ್ಲಿ ರುವವರು, ಕ್ಷತ್ರಿಯರು ಎಂದರೆ ಕೆಲವೊಮ್ಮೆ ಮೋಜಿನಲ್ಲಿರುವವರು, ಕೆಲವೊಮ್ಮೆ ತಬ್ಬಿಬ್ಬಾಗುವವರು. ತಾವೆಲ್ಲರೂ ತಮ್ಮ ಹೆಸರನ್ನು ಬ್ರಹ್ಮಾಕುಮಾರ ಬ್ರಹ್ಮಾಕುಮಾರಿ ಎಂದು ಹೇಳುತ್ತೀರಿ, ಕ್ಷತ್ರಿಯ ಕುಮಾರ, ಕ್ಷತ್ರಿಯ ಕುಮಾರಿಯಂತೂ ಅಲ್ಲ ತಾನೇ? ಸದಾ ತಮ್ಮ ಭಾಗ್ಯದ ಖುಷಿಯಲ್ಲಿ ಇರುವವರಾಗಿದ್ದೀರಿ. ಹೃದಯದಲ್ಲಿ ಸದಾ ಮತ್ತು ಸ್ವತಃ 'ವಾಹ್ ಬಾಬಾ' ಮತ್ತು 'ವಾಹ್ ನನ್ನ ಭಾಗ್ಯವೇ' ಎಂಬ ಒಂದೇ ಹಾಡು ನುಡಿಯುತ್ತಿರುತ್ತದೆ. ಇದನ್ನು ನುಡಿಸುವ ಅವಶ್ಯಕತೆ ಇಲ್ಲ, ಇದು ಅನಾದಿಯಾಗಿ ಹಾಡುತ್ತಲೇ ಇರುತ್ತದೆ. 'ಅಯ್ಯೋ ಅಯ್ಯೋ' ಎನ್ನುವುದು ಸಮಾಪ್ತಿಯಾಯಿತು ಮತ್ತು ಈಗ ಇರುವುದು 'ವಾಹ್ ವಾಹ್'. 'ಅಯ್ಯೋ ಅಯ್ಯೋ' ಎನ್ನುವವರು ಬಹಳ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. 'ವಾಹ್ ವಾಹ್' ಎನ್ನುವವರು ಬಹಳ ಕಡಿಮೆ ಇದ್ದಾರೆ. ಅಂದಾಗ ಹೊಸ ವರ್ಷದಲ್ಲಿ ಏನನ್ನು ನೆನಪಿಟ್ಟುಕೊಳ್ಳುವಿರಿ? 'ವಾಹ್ ವಾಹ್'. ಎದುರಿನಲ್ಲಿ ಯಾವುದನ್ನು ನೋಡಿದಿರೋ, ಯಾವುದನ್ನು ಕೇಳಿದಿರೋ, ಯಾವುದನ್ನು ಮಾತನಾಡಿದಿರೋ, ಎಲ್ಲವೂ 'ವಾಹ್ ವಾಹ್', ಅಯ್ಯೋ ಅಯ್ಯೋ ಅಲ್ಲ. ಅಯ್ಯೋ ಇದೇನಾಗಿ ಹೋಯಿತು ಎಂದಲ್ಲ, 'ವಾಹ್', ಇದು ಬಹಳ ಚೆನ್ನಾಗಿ ಆಯಿತು. ಯಾರಾದರೂ ಕೆಟ್ಟದ್ದನ್ನೇ ಮಾಡಿದರೂ ತಾವು ತಮ್ಮ ಶಕ್ತಿಯಿಂದ ಕೆಟ್ಟದ್ದನ್ನೂ ಒಳ್ಳೆಯದರಲ್ಲಿ ಬದಲಾಯಿಸಿ ಬಿಡಿ. ಇದೇ ಪರಿವರ್ತನೆಯಾಗಿದೆಯಲ್ಲವೇ? ತಮ್ಮ ಬ್ರಾಹ್ಮಣ ಜೀವನದಲ್ಲಿ ಕೆಟ್ಟದ್ದು ಆಗುವುದೇ ಇಲ್ಲ. ಒಂದುವೇಳೆ ಯಾರಾದರೂ ತಮ್ಮನ್ನು ನಿಂದನೆ ಮಾಡಿದರೂ, ನಿಂದನೆ ಮಾಡುವವರಿಗೆ ಬಲಿಹಾರಿ, ಏಕೆಂದರೆ ಅವರು ತಮಗೆ ಸಹನ ಶಕ್ತಿಯ ಪಾಠವನ್ನು ಕಲಿಸಿದರು. ಯಾರು ತಮಗೆ ಮಾಸ್ಟರ್ ಆದರೋ ಅವರಿಗೆ ಬಲಿಹಾರಿ ಆದಿರಲ್ಲವೇ? ತಮ್ಮಲ್ಲಿ ಸಹನ ಶಕ್ತಿ ಎಷ್ಟಿದೆ ಎಂದು ತಿಳಿಯಿತಲ್ಲವೇ? ಅಂದಮೇಲೆ ಕೆಟ್ಟದಾಯಿತಾ ಅಥವಾ ಒಳ್ಳೆಯದಾ ಯಿತಾ? ಬ್ರಾಹ್ಮಣರ ದೃಷ್ಟಿಯಲ್ಲಿ ಕೆಟ್ಟದ್ದು ಆಗುವುದೇ ಇಲ್ಲ, ಬ್ರಾಹ್ಮಣರ ಕಿವಿಗಳಿಗೆ ಕೆಟ್ಟದ್ದು ಕೇಳುವುದೇ ಇಲ್ಲ. ಈ ಕಾರಣದಿಂದಲೇ ಬ್ರಾಹ್ಮಣ ಜೀವನವು ಮೋಜಿನ ಜೀವನವಾಗಿದೆ. ಈಗೀಗ ಕೆಟ್ಟದ್ದು, ಈಗೀಗ ಒಳ್ಳೆಯದು ಈ ರೀತಿ ಇದ್ದಾಗ ಮೋಜು ಇರಲು ಸಾಧ್ಯವಿಲ್ಲ. ಸದಾ ಮೋಜೇ ಮೋಜು ಇದೆ. ಇಡೀ ಕಲ್ಪದಲ್ಲಿ ಬ್ರಹ್ಮಾಕುಮಾರ ಕುಮಾರಿಯರು ಶ್ರೇಷ್ಠರಾಗಿದ್ದಾರೆ. ಬ್ರಾಹ್ಮಣರ ಮುಂದೆ ದೇವಾತ್ಮಾಗಳೂ ಸಹ ಏನೂ ಇಲ್ಲ. ಸದಾ ಈ ನಶೆಯಲ್ಲಿರಿ, ಸದಾ ಖುಷಿಯಲ್ಲಿರಿ ಮತ್ತು ಅನ್ಯರನ್ನೂ ಖುಷಿಯಾಗಿಡಿ. ನೀವೂ ಖುಷಿಯಾಗಿ ಇರಿ ಮತ್ತು ಅನ್ಯರನ್ನೂ ಖುಷಿಯಲ್ಲಿ ಇಡಿ. ನಾನಂತೂ ಖುಷಿಯಾಗಿರುತ್ತೇನೆ, ಇವರು ಇರುವುದಿಲ್ಲ, ನಾನಂತೂ ಎಲ್ಲರನ್ನೂ ಖುಷಿಯಾಗಿಡುತ್ತೇನೆ ಇವರೂ ಇರಲಿ. ನಾನಂತೂ ಖುಷಿಯಾಗಿರುತ್ತೇನೆ ಎಂದು ಹೇಳುವುದೂ ಸಹ ಸ್ವಾರ್ಥವಾಗಿದೆ. ಬ್ರಾಹ್ಮಣರ ಸೇವೆ ಯಾವುದಾಗಿದೆ? ಜ್ಞಾನವನ್ನು ಕೊಡುವುದೇ ಖುಷಿಗಾಗಿ. **(31–12–1990)**

ಎಲ್ಲ ಮಕ್ಕಳಿಗೂ 'ನಥಿಂಗ್ ನ್ಯೂ' ಎಂಬ ಪಾಠ ಪ್ರತಿ ಪರಿಸ್ಥಿತಿಯಲ್ಲಿಯೂ ಸದಾ ಸ್ಮೃತಿಯಲ್ಲಿರಲಿ. ಬ್ರಾಹ್ಮಣ ಜೀವನ ಎಂದರೆ ಪ್ರಶ್ನಾರ್ಥಕ ಚಿಹ್ನೆ (?) ಮತ್ತು ಆಶ್ಚರ್ಯದ (!) ರೇಖೆ ಇರಲು ಸಾಧ್ಯವಿಲ್ಲ. ಎಷ್ಟು ಸಲ ಈ ಸಮಾಚಾರವನ್ನು ಕೇಳಿರಬಹುದು, ಹೊಸ ಸಮಾಚಾರವೇ? ಇಲ್ಲ. ಬ್ರಾಹ್ಮಣ ಜೀವನ ಎಂದರೆ ಪ್ರತಿ ಸಮಾಚಾರವನ್ನು ಕೇಳುತ್ತಾ ಕಲ್ಪದ ಹಿಂದಿನ ಸ್ಮೃತಿಯಲ್ಲಿ ಸಮರ್ಥರಾಗಿರುವುದು – ಏನು ಆಗಬೇಕಿದೆಯೋ ಅದು ಆಗುತ್ತಿದೆ, ಆದ್ದರಿಂದ ಏನಾಗುತ್ತದೆ ಎಂಬ ಪ್ರಶ್ನೆ ಬರಲು ಸಾಧ್ಯವಿಲ್ಲ. ತ್ರಿಕಾಲದರ್ಶಿಗಳಾಗಿದ್ದೀರಿ, ಡ್ರಾಮಾದ ಆದಿ ಮಧ್ಯ ಅಂತ್ಯಗಳನ್ನು ತಿಳಿದವರಾಗಿದ್ದೀರಿ. ಅಂದಮೇಲೆ ವರ್ತಮಾನವನ್ನು ತಿಳಿದಿಲ್ಲವೇ? ಗಾಬರಿಯಂತೂ ಪಡುವುದಿಲ್ಲತಾನೆ? ಬ್ರಾಹ್ಮಣ ಜೀವನದಲ್ಲಿ ಪ್ರತಿ ಹೆಜ್ಜೆಯಲ್ಲಿ ಕಲ್ಯಾಣವಿದೆ. ಭಯಪಡುವಂತಹ ಮಾತೇ ಇಲ್ಲ. ತಮ್ಮ

ಶಾಂತಿಯ ಶಕ್ತಿಯಿಂದ ಅಶಾಂತ ಆತ್ಮಗಳಿಗೆ ಶಾಂತಿಯ ಕಿರಣಗಳನ್ನು ಕೊಡುವುದು ತಮ್ಮೆಲ್ಲರ ಕರ್ತವ್ಯವಾಗಿದೆ. ತಮ್ಮ ಸೋದರ ಸೋದರಿಯರೇ ಆಗಿದ್ದಾರೆ. ಆದ್ದರಿಂದ ತಮ್ಮ ಈಶ್ವರೀಯ ಪರಿವಾರದ ಸಂಬಂಧದಿಂದ ಸಹಯೋಗಿಗಳಾಗಿರಿ. ಯುದ್ಧದಲ್ಲಿ ಎಷ್ಟೇ ತೀವ್ರಗತಿಯಿದ್ದರೂ, ಯೋಗಿ ಆತ್ಮಗಳಾದ ತಮ್ಮ ಯೋಗವು ಅವರಿಗೆ ಶಾಂತಿಯ ಸಹಯೋಗವನ್ನು ಕೊಡುವುದು. ಆದ್ದರಿಂದ ವಿಶೇಷವಾಗಿ ಇನ್ನೂ ಹೆಚ್ಚಿನ ಸಮಯ ತೆಗೆದು ಶಾಂತಿಯ ಸಹಯೋಗವನ್ನು ಕೊಡಿ. ಇದು ಬ್ರಾಹ್ಮಣ ಆತ್ಮಗಳಾದ ತಮ್ಮ ಕರ್ತವ್ಯವಾಗಿದೆ. ಒಳ್ಳೆಯದು.

**ದಾದಿಯರ ಜೊತೆ:** ಆದಿ ಬ್ರಾಹ್ಮಣರ ಮಾಲೆ ಬ್ರಹ್ಮಾ ತಂದೆಯ ಜೊತೆಯಲ್ಲಿ ಆದಿ ಬ್ರಾಹ್ಮಣರೂ ನಿಮಿತ್ತರಾದರಲ್ಲವೇ? ಆದಿ ಬ್ರಾಹ್ಮಣರಿಗೆ ಬಹಳ ದೊಡ್ಡ ಮಹತ್ವವಿದೆ. ಸ್ಥಾಪನೆ, ಪಾಲನೆ ಮತ್ತು ಪರಿವರ್ತನೆ. ವಿನಾಶ ಎನ್ನುವ ಶಬ್ದ ಸ್ವಲ್ಪ ಅಫೀಶಿಯಲ್ ಎಂದು ಎನಿಸಿದರೆ, ಸ್ಥಾಪನೆ, ಪಾಲನೆ ಮತ್ತು ವಿಶ್ವ ಪರಿವರ್ತನೆ ಮಾಡುವುದರಲ್ಲಿ ಆದಿ ಬ್ರಾಹ್ಮಣರ ವಿಶೇಷ ಪಾತ್ರವಿದೆ. ಶಕ್ತಿಯರ ಪೂಜೆಯು ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ನಿರಾಕಾರ ತಂದೆ ಅಥವಾ ಬ್ರಹ್ಮಾ ತಂದೆಯ ಪೂಜೆ ಇಷ್ಟೊಂದು ವಿಜೃಂಭಣೆಯಿಂದ ನಡೆಯುವುದಿಲ್ಲ. ಬ್ರಹ್ಮಾರವರ ಮಂದಿರವೂ ಬಹಳ ಗುಪ್ತವಾಗಿಯೇ ಇದೆ. ಆದರೆ ಶಕ್ತಿಸೇನೆಯು ಭಕ್ತಿಯಲ್ಲಿಯೂ ಬಹಳ ಪ್ರಸಿದ್ಧವಾಗಿದೆ. ಆದ್ದರಿಂದಲೇ ಅಂತ್ಯದವರೆಗೂ ಸ್ಟೇಜಿನ ಮೇಲೆ ಮಕ್ಕಳ ವಿಶೇಷ ಪಾತ್ರವಿದೆ. ಬ್ರಹ್ಮಾರವರದು ಗುಪ್ತ ಪಾತ್ರವಿದೆ – ಅವ್ಯಕ್ತ ರೂಪ ಎಂದರೆ ಗುಪ್ತ. ಬ್ರಾಹ್ಮಣರನ್ನು ತಯಾರು ಮಾಡಿದರು ಮತ್ತು ಬ್ರಹ್ಮಾರವರ ಪಾತ್ರವು ಗುಪ್ತವಾಗಿ ಹೋಯಿತು. ಸರಸ್ವತಿಯನ್ನೂ ಗುಪ್ತವಾಗಿಯೇ ತೋರಿಸುತ್ತಾರೆ ಏಕೆಂದರೆ ಡ್ರಾಮಾದಲ್ಲಿ ಅವರ ಪಾತ್ರವೂ ಗುಪ್ತವಾಗಿಯೇ ನಡೆಯುತ್ತಿದೆ.

**ಎಲ್ಲಾ ಮಕ್ಕಳ ಬಗ್ಗೆ ಬಾಪ್‌ದಾದಾರವರ ಸಂದೇಶ:** ಸರ್ವ ತಪಸ್ವೀ ಮಕ್ಕಳಿಗೆ ನೆನಪು ಹಾಗೂ ಪ್ರೀತಿ. ನೋಡಿ ಮಕ್ಕಳೆ, ಸಮಯದ ಸಮಾಚಾರವನ್ನು ಕೇಳುತ್ತಾ ಶ್ರೇಷ್ಠಾತಿ ಶ್ರೇಷ್ಠ ಸಾಕ್ಷೀತನದ ಆಸನದ ಮೇಲೆ ಮತ್ತು ನಿಶ್ಚಿಂತ ಚಕ್ರವರ್ತಿಯ ಸಿಂಹಾಸನದ ಮೇಲೆ ಕುಳಿತು ಎಲ್ಲಾ ಆಟವನ್ನು ನೋಡುತ್ತಿದ್ದೀರಲ್ಲವೇ? ಈ ಬ್ರಾಹ್ಮಣ ಜೀವನದಲ್ಲಿ ಭಯಪಡುವ ಸಂಕಲ್ಪ ಸ್ವಪ್ನದಲ್ಲೂ ಬರಲು ಸಾಧ್ಯವಿಲ್ಲ. ಈ ತಪಸ್ವೀ ವರ್ಷದಲ್ಲಿ ನಿರಂತರ ಲಗನ್ನಿನ ಅಗ್ನಿಯಲ್ಲಿ ಬೇಹದ್ದಿನ ವೈರಾಗ್ಯ ವೃತ್ತಿಯನ್ನು ಪ್ರಜ್ವಲಗೊಳಿಸುವ ಬೀಸಣಿಗೆಗಳನ್ನು ಇಡಲಾಗುತ್ತಿದೆ. ತಾವು ತಂದೆಯ ಸಮಾನ ಸಂಪನ್ನರಾಗುವ ಸಂಕಲ್ಪವನ್ನು ಮಾಡಿದಿರಿ ಎಂದರೆ ವಿಜಯದ ಧ್ವಜವನ್ನು ಹಾರಿಸುವ ಪ್ಲಾನ್‌ನ್ನು ತಯಾರಿಸಿರುವಿರಿ, ಅಂದಾಗ ಮತ್ತೊಂದು ಕಡೆ ಸಮಾಪ್ತಿಯ ಹಲ್‌ಚಲ್ (ಏರುಪೇರು) ಸಹ ಜೊತೆ ಜೊತೆಯಲ್ಲೇ ನಿಗದಿಯಾಗಿದೆಯಲ್ಲವೇ? ರಿಹರ್ಸಲ್ ಡ್ರಾಮಾದ ರೀಲನ್ನು ಸಮಾಪ್ತಿ ಮಾಡುವ ಸಾಧನವಾಗಿದೆ. ಆದ್ದರಿಂದ ನಥಿಂಗ್ ನ್ಯೂ.
**(18–01–1991)**

ತಪಸ್ಸಿನ ವರ್ಷ ಎಂದರೆ ಫಾಸ್ಟ್ (ತೀವ್ರ) ಪುರುಷಾರ್ಥ ಮಾಡಿ, ಫಸ್ಟ್ (ಮೊದಲ) ಜನ್ಮದಲ್ಲಿ, ಫಸ್ಟ್ (ಮೊದಲ) ನಂಬರಿನ ಆತ್ಮಗಳ ಜೊತೆಯಲ್ಲಿ ರಾಜ್ಯದಲ್ಲಿ ಬರುವುದಾಗಿದೆ. ಮನೆಗೆ ಜೊತೆಯಲ್ಲಿ ಹೋಗಬೇಕಲ್ಲವೇ? ನಂತರ ಬ್ರಹ್ಮಾ ತಂದೆಯ ಜೊತೆಯಲ್ಲಿ ರಾಜ್ಯದಲ್ಲೂ ಬರಬೇಕಾಗಿದೆ. ತಪಸ್ಯಾ ವರ್ಷವನ್ನು ಏಕೆ ಇಟ್ಟಿರುವುದು ಎಂದು ಈಗ ತಿಳಿಯಿತೇ? ಏಕಾಗ್ರತೆಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ಈಗಲೂ ತಮಗೆ ಇಷ್ಟವಿಲ್ಲದಿದ್ದರೂ ವ್ಯರ್ಥವು ನಡೆದು ಬಿಡುತ್ತದೆ. ಕೆಲವೊಮ್ಮೆ ಶುದ್ಧ–ಶ್ರೇಷ್ಠ ಸಂಕಲ್ಪಗಳಿಗಿಂತಲೂ ವ್ಯರ್ಥ ಸಂಕಲ್ಪಗಳು ಹೆಚ್ಚಾಗಿ ಬಂದುಬಿಡುತ್ತವೆ. ತಪಸ್ಸು ಎಂದರೆ ವ್ಯರ್ಥ ಸಂಕಲ್ಪಗಳ ಸಮಾಪ್ತಿಯಾಗುವುದಾಗಿದೆ. ಏಕೆಂದರೆ ಈ ಸಮಾಪ್ತಿಯೇ ಸಂಪೂರ್ಣತೆಯನ್ನು ತರುತ್ತದೆ. ಸಮಾಪ್ತಿಯಾಗದೆ ಸಂಪೂರ್ಣತೆ ಬರುವುದಿಲ್ಲ. ಆದ್ದರಿಂದ ಈ ದಿನದಿಂದ ತಪಸ್ಯಾ ವರ್ಷವನ್ನು ಆರಂಭ ಮಾಡುತ್ತಿದ್ದೀರಿ. ಉಮಂಗ–ಉತ್ಸಾಹಕ್ಕಾಗಿ ಬಾಪ್‌ದಾದಾರವರು ಶುಭಾಶಯಗಳನ್ನು ತಿಳಿಸುತ್ತಿದ್ದಾರೆ. ನಾಲ್ಕೂ ಸಬ್ಜೆಕ್ಟ್ (ವಿಷಯ) ಗಳಲ್ಲಿ ಫುಲ್ ಪಾಸ್ ಆಗುವ ಅಂಕಗಳನ್ನು ತೆಗೆದುಕೊಳ್ಳಬೇಕು. ನನ್ನ ಮೂರು ವಿಷಯಗಳಂತೂ ಸರಿಯಾಗಿವೆ, ಕೇವಲ ಒಂದರಲ್ಲಿ ಕಡಿಮೆ ಇದ್ದೇನೆ ಎಂದು ತಿಳಿಯಬೇಡಿ. ಅಂದರೆ ಫುಲ್ ಪಾಸ್ ಆಗುವಿರಾ? ಇಲ್ಲ. ಆದರೂ ತೇರ್ಗಡೆಯಾದವರ ಪಟ್ಟಿಯಲ್ಲಿ ಬರುವಿರಿ. ಫುಲ್ ಪಾಸ್ ಎಂದರೆ ನಾಲ್ಕೂ ಸಬ್ಜೆಕ್ಟ್‌ಗಳಲ್ಲಿ ಪೂರ್ತಿ ಅಂಕಗಳಿರಬೇಕು. ಸದಾ ಪ್ರತಿಯೊಂದು ಆತ್ಮನ ಬಗ್ಗೆ ಕಲ್ಯಾಣದ ಭಾವನೆ ಇರಬೇಕು, ಅವರು ತಮ್ಮ ಸ್ಥಿತಿಯನ್ನು ಅಲುಗಾಡಿಸುವ ಪ್ರಯತ್ನ ಮಾಡಿದರೂ, ಅಕಲ್ಯಾಣ ಮಾಡುವವರ ಮೇಲೂ ಸಹ ಕಲ್ಯಾಣದ ಭಾವನೆ, ಕಲ್ಯಾಣದ ದೃಷ್ಟಿ, ಕಲ್ಯಾಣದ ವೃತ್ತಿ, ಕಲ್ಯಾಣಮಯೀ ಕೃತಿಯನ್ನು ಇಟ್ಟುಕೊಳ್ಳುವವರಿಗೇ ಕಲ್ಯಾಣಕಾರಿ ಆತ್ಮ ಎಂದು ಹೇಳಲಾಗುತ್ತದೆ. ' ಶಿವನ' ಅರ್ಥವೂ ' ಕಲ್ಯಾಣಕಾರಿ' ಎಂಬುದಾಗಿದೆ ಅಲ್ಲವೇ? ಅಂದಾಗ ಶಿವಜಯಂತಿ ಎಂದರೆ

ಕಲ್ಯಾಣಕಾರಿ ಭಾವನೆ ಇರುವುದಾಗಿದೆ. ಕಲ್ಯಾಣ ಮಾಡುವವರಿಗೆ ಕಲ್ಯಾಣ ಮಾಡುವುದು – ಇದನ್ನಂತೂ ಅಜ್ಞಾನಿಗಳೂ ಮಾಡುತ್ತಾರೆ. ಒಳ್ಳೆಯವರ ಜೊತೆ ಒಳ್ಳೆಯವರಾಗಿ ನಡೆಯುವುದನ್ನು ಎಲ್ಲರೂ ತಿಳಿದಿದ್ದಾರೆ. ಆದರೆ ಅಕಲ್ಯಾಣದ ವೃತ್ತಿಯುಳ್ಳವರನ್ನೂ ತಮ್ಮ ಕಲ್ಯಾಣದ ವೃತ್ತಿಯಿಂದ ಪರಿವರ್ತನೆ ಮಾಡಿ ಅಥವಾ ಕ್ಷಮೆ ಮಾಡಿ. ಪರಿವರ್ತನೆಯನ್ನು ಮಾಡಲು ಸಾಧ್ಯವಾಗದಿದ್ದರೂ ಕ್ಷಮೆಯನ್ನಂತೂ ಮಾಡಬಹುದಲ್ಲವೇ? ಮಾಸ್ಟರ್ ಕ್ಷಮೆಯ ಸಾಗರರಾಗಿದ್ದೀರಲ್ಲವೇ? ಅಂದಾಗ ತಮ್ಮ ಕ್ಷಮೆಯು ಆ ಆತ್ಮನಿಗೆ ಶಿಕ್ಷಣವಾಗಿ ಬಿಡುತ್ತದೆ. ಈಗಿನ ಸಮಯದಲ್ಲಿ ಶಿಕ್ಷಣವನ್ನು ಕೊಡುವುದರಿಂದ ಕೆಲವರು ತಿಳಿದುಕೊಳ್ಳುತ್ತಾರೆ, ಕೆಲವರು ತಿಳಿದುಕೊಳ್ಳುವುದಿಲ್ಲ. ಕ್ಷಮೆ ಮಾಡುವುದರಿಂದ ಶಿಕ್ಷಣವಾಗಿ ಬಿಡುತ್ತದೆ. ಕ್ಷಮೆ ಎಂದರೆ ಶುಭಭಾವನೆಯ ಆಶೀರ್ವಾದಗಳನ್ನು ಕೊಡುವುದಾಗಿದೆ, ಸಹಯೋಗವನ್ನು ಕೊಡುವುದಾಗಿದೆ. ಶಿಕ್ಷಣ ಕೊಡುವ ಸಮಯ ಈಗ ಮುಗಿದು ಹೋಯಿತು. ಈಗ ಸ್ನೇಹವನ್ನು ಕೊಡಿ, ಗೌರವವನ್ನು ಕೊಡಿ, ಕ್ಷಮೆ ಮಾಡಿ, ಶುಭಭಾವನೆ ಶುಭಕಾಮನೆಯನ್ನು ಇಡಿ. ಇದೇ ಶಿಕ್ಷಣದ ವಿಧಿಯಾಗಿದೆ. ಆ ವಿಧಿಯು ಈಗ ಹಳೆಯದಾಯಿತು. ಅಂದಾಗ ಹೊಸ ವಿಧಿ ಬರುತ್ತದೆಯಲ್ಲವೆ? ತಪಸ್ಯಾ ವರ್ಷದಲ್ಲಿ ಈ ಹೊಸ ವಿಧಿಯಿಂದ ಎಲ್ಲರನ್ನೂ ಮತ್ತಷ್ಟು ಸಮೀಪದಲ್ಲಿ ತನ್ನಿರಿ. ಕೆಲವು ಮಣಿಗಳಂತೂ ತಯಾರಾಗಿ ಬಿಟ್ಟಿದ್ದಾರೆ ಆದರೆ ಮಾಲೆಯು ಇನ್ನೂ ತಯಾರಾಗಿಲ್ಲ ಎಂದು ತಿಳಿಸಿದ್ದೇನಲ್ಲವೇ? ದಾರವೂ ಇದೆ, ಮಣಿಗಳೂ ಇವೆ, ಆದರೆ ಮಣಿಗಳು ಒಂದಕ್ಕೊಂದು ಸಮೀಪವಿಲ್ಲ. ಈ ಕಾರಣದಿಂದ ಮಾಲೆಯು ತಯಾರಾಗಿಲ್ಲ. ತಮ್ಮದೇ ಆದ ರೀತಿಯಲ್ಲಿ ಮಣಿಗಳು ತಯಾರಾಗಿವೆ, ಆದರೆ ಸಂಘಟನೆಯಲ್ಲಿ ಸಮೀಪತೆಯಲ್ಲಿ ತಯಾರಾಗಿಲ್ಲ. ಆದ್ದರಿಂದ ತಪಸ್ಯಾ ವರ್ಷದಲ್ಲಿ ತಂದೆಯ ಸಮಾನವಂತೂ ಆಗಲೇ ಬೇಕಾಗಿದೆ, ಆದರೆ ಮಣಿಗಳೂ ಪರಸ್ಪರ ಸಮೀಪವೂ ಬರಬೇಕಾಗಿದೆ. ತಿಳಿಯಿತೇ ? ಉಳಿದಂತೆ ಯೋಗಿಯಾಗಿದ್ದಿರಿ, ಯೋಗಿಯಾಗಿರುವಿರಿ, ಸದಾ ಯೋಗಿ ಜೀವನದಲ್ಲಿಯೇ ಇರಬೇಕಾಗಿದೆ. ಡ್ರಾಮಾದ ಪ್ರತಿಯೊಂದು ದೃಶ್ಯವನ್ನು ಪ್ಯಾರಾ (ಪ್ರಿಯ) ಆಗಿ ನೋಡುತ್ತಾ ಹೋಗಿರಿ. ಪ್ರತಿಯೊಂದು ದೃಶ್ಯವೂ ಪ್ರಿಯವಾಗಿದೆ. ಪ್ರಪಂಚದವರಿಗೆ ಯಾವ ದೃಶ್ಯ ಅಪ್ರಿಯವಾಗಿದೆಯೋ ಅದು ತಮಗೆ ಪ್ರಿಯವಾಗಿದೆ. ಏನೇ ಆಗುತ್ತದೆಯೋ ಅದರಲ್ಲಿ ಯಾವುದಾದರೂ ರಹಸ್ಯವು ಅಡಗಿಯೇ ಇರುತ್ತದೆ. ರಹಸ್ಯವನ್ನು ತಿಳಿದಿರುವುದರಿಂದ ಎಂದಿಗೂ, ಯಾವ ಮಾತಿನ ಬಗ್ಗೆಗೂ ಮುನಿಸಿಕೊಳ್ಳುವುದಿಲ್ಲ. ರಹಸ್ಯವನ್ನು ತಿಳಿಯದವರು ಮುನಿಸಿಕೊಳ್ಳುತ್ತಾರೆ.
**(13–02–1991)**

ಎಲ್ಲಾ ಮಕ್ಕಳು ಮಧುರವಾದ ಆತ್ಮಿಕ ವಾರ್ತಾಲಾಪ ಮಾಡುತ್ತಾರೆ. 'ಬಾಬಾ ನಾವು ನಿಮ್ಮವರಾಗಿಯೇ ಇದ್ದೇವೆ, ಬೇರೆ ಎಲ್ಲಿಯೂ ಹೋಗುವುದಿಲ್ಲ' ಎಂದು ಹೇಳುತ್ತಾರೆ. ಮತ್ತು ಜ್ಞಾನಿ ಯೋಗಿ ಜೀವನವು ಬಹಳ ಚೆನ್ನಾಗಿದೆ ಎಂದು ಅನಿಸುತ್ತದೆ. ಆದರೆ ಯಾವುದಾದರೂ ಮಾತಿನಲ್ಲಿ ಸ್ವಲ್ಪ ಸ್ವಲ್ಪ ಸಹನೆಯನ್ನೂ ಮಾಡಿಕೊಳ್ಳಬೇಕಾಗುತ್ತದೆ. ಆ ಸಮಯದಲ್ಲಿ 'ಇದು ಎಲ್ಲಿಯವರೆಗೂ ನಡೆಯುತ್ತದೆ? ಹೇಗೆ ನಡೆಯುತ್ತದೆ.......' ಎಂದು ಮನಸ್ಸು ಬುದ್ಧಿಯು ಏರುಪೇರಿನಲ್ಲಿ ಬಂದು ಬಿಡುತ್ತದೆ. ಮಧ್ಯ ಮಧ್ಯದಲ್ಲಿ ತಮ್ಮಿಂದಲಾದರೂ, ಸೇವೆಯಿಂದಲಾದರೂ, ಸಹಯೋಗಿಗಳಿಂದಾದರೂ ಆಗುವಂತಹ ಏರುಪೇರುಗಳು ನಿರಂತರದಲ್ಲಿ ಅಂತರವನ್ನು ತಂದು ಬಿಡುತ್ತವೆ. ಆಗ ಸಹನೆ ಶಕ್ತಿಯ ಶೇಕಡವಾರು ಸ್ವಲ್ಪ ಕಡಿಮೆ ಆಗಿ ಬಿಡುತ್ತದೆ. ಪಕ್ಕಾ ಆಗಿದ್ದೀರಿ ಆದರೆ ಪಕ್ಕ ಆಗಿರುವವರನ್ನೂ ಆಗಾಗ ಇಂತಹ ಮಾತುಗಳು ಅಲುಗಾಡಿಸಿ ಬಿಡುತ್ತವೆ. ಅಂದಾಗ ತಪಸ್ಯಾ ವರ್ಷ ಎಂದರೆ ಸರ್ವ ಗುಣಗಳಲ್ಲಿ, ಸರ್ವ ಶಕ್ತಿಗಳಲ್ಲಿ, ಸರ್ವ ಸಂಬಂಧಗಳಲ್ಲಿ, ಸರ್ವ ಸ್ವಭಾವ ಸಂಸ್ಕಾರಗಳಲ್ಲಿ ಶೇಕಡ ನೂರರಷ್ಟು (100%) ಪಾಸ್ ಆಗುವುದಾಗಿದೆ. ಈಗ ಪಾಸ್ ಆಗಿದ್ದೀರಿ ಆದರೆ ಫುಲ್ ಪಾಸ್ ಆಗಿಲ್ಲ. ಒಂದಾಗಿದೆ ಪಾಸ್ ಆಗುವುದು, ಎರಡನೆಯದು ಫುಲ್ ಪಾಸ್ ಆಗುವುದು, ಮೂರನೆಯದಾಗಿದೆ ಪಾಸ್ ವಿತ್ ಆನರ್ ಆಗುವುದು (ಗೌರವಯುತವಾಗಿ ತೇರ್ಗಡೆಯಾಗುವುದು). ಅಂದಾಗ ತಪಸ್ಯಾ ವರ್ಷದಲ್ಲಿ ಪಾಸ್ ವಿತ್ ಆನರ್ ಸ್ವಲ್ಪ ಜನರಾದರೂ, ಫುಲ್ ಪಾಸ್ ಅಂತೂ ಎಲ್ಲರೂ ಆಗಬಹುದಾಗಿದೆ ಮತ್ತು ಫುಲ್ ಪಾಸ್ ಆಗುವ ಸಹಜ ಸಾಧನವಾಗಿದೆ – ಯಾವುದೇ ಪೇಪರ್ ಬಂದರೂ, ಈ ತಪಸ್ಯಾ ವರ್ಷದಲ್ಲೂ ಪೇಪರ್ ಬರುತ್ತದೆ, ಬರುವುದಿಲ್ಲ ಎಂದಲ್ಲ – ಆದರೆ ಅದನ್ನು ಕೇವಲ ಪೇಪರ್ ಎಂದು ತಿಳಿದು ತೇರ್ಗಡೆಯಾಗಿರಿ. ಯಾವುದೇ ಮಾತನ್ನು ಮಾತು ಎಂದು ತಿಳಿಯಬೇಡಿ ಆದರೆ ಪೇಪರ್ ಎಂದು ತಿಳಿಯಿರಿ. ಪೇಪರಿನ ಪ್ರಶ್ನೆಗಳ ವಿಸ್ತಾರದಲ್ಲಿ ಅಂದರೆ 'ಇದು ಏಕೆ ಬಂದಿತು? ಹೇಗೆ ಬಂದಿತು? ಯಾರು ಮಾಡಿದರು?' ಎನ್ನುವುದರಲ್ಲಿ ಹೋಗುವುದು ಬೇಡ. ಪಾಸ್ ಆಗುವುದನ್ನು ಯೋಚಿಸಿ ಪೇಪರನ್ನು ಪಾರು ಮಾಡಿರಿ. ಅಂದ ಮೇಲೆ ಪೇಪರ್ ಎಂದು ತಿಳಿದು ಪಾಸ್ ಆಗಿರಿ. 'ಇದೇನಾಗಿ ಹೋಯಿತು? ಹೀಗೂ ಆಗುವುದೇ?, ತಮ್ಮ ಬಲಹೀನತೆಯಲ್ಲಿಯೂ ಇದು ಹೀಗೆಯೇ ಆಗುತ್ತದೆ ಎಂದು ಯೋಚಿಸಬೇಡಿರಿ. ತಮ್ಮ ಬಗ್ಗೆಯಂತೂ 'ಇದು ಹೀಗೆ ಆಗಿಯೇ ಆಗುತ್ತದೆ, ಇಷ್ಟಂತೂ ಆಗಲೇ ಬೇಕು' ಎಂದು

ಯೋಚಿಸುತ್ತೀರಿ. ಮತ್ತು ಬೇರೆಯವರ ಬಗ್ಗೆ 'ಇವರು ಏಕೆ ಮಾಡಿದರು? ಏನು ಮಾಡಿಬಿಟ್ಟರು?' ಎಂದು ಯೋಚಿಸುತ್ತೀರಿ. ಈ ಎಲ್ಲ ಮಾತುಗಳನ್ನು ಪೇಪರ್ ಎಂದು ತಿಳಿದು ಫುಲ್ ಪಾಸ್ ಆಗುವ ಲಕ್ಷ್ಯವನ್ನಿಟ್ಟುಕೊಂಡು ಪಾಸ್ ಆಗಿರಿ. ಪಾಸ್ ಹೋನಾ ಹೈ (ತೇರ್ಗಡೆ ಆಗಬೇಕು), ಪಾಸ್ ಕರ್‌ನಾ ಹೈ (ಪಾರು ಮಾಡಬೇಕು) ಮತ್ತು ಪಾಸ್ ರೆಹನಾ ಹೈ (ಹತ್ತಿರ ಇರಬೇಕು). ಆಗ ಫುಲ್ ಪಾಸ್ ಆಗಿಬಿಡುವಿರಿ. **(13–02–1991)**

ತಪಸ್ಸಿನ ಅರ್ಥವೇ ಆಗಿದೆ ಸಂತುಷ್ಟತೆಯ ವ್ಯಕ್ತಿತ್ವವು ನಯನಗಳಲ್ಲಿ, ಖುಷಿಯಲ್ಲಿ, ಚೆಹರೆಯಲ್ಲಿ, ಚಲನೆಯಲ್ಲಿ ಕಂಡುಬರುವುದು. ಇಂತಹ ಸಂತುಷ್ಟ ಮಣಿಗಳ ಮಾಲೆಯನ್ನು ತಯಾರಿಸಲಾಗುತ್ತಿತ್ತು. ಎಷ್ಟು ಮಾಲೆ ತಯಾರಾಗಿರ ಬಹುದು? ಸಂತುಷ್ಟಮಣಿ ಎಂದರೆ ನಿಷ್ಕಳಂಕ ಮಣಿ. ಸಂತುಷ್ಟತೆಯ ಗುರುತಾಗಿದೆ – ಸಂತುಷ್ಟ ಆತ್ಮ ಸದಾ ಸ್ವಯಂ ಅನ್ನು ಪ್ರಸನ್ನಚಿತ್ತರೆಂದು ಅನುಭವ ಮಾಡುತ್ತಾರೆ ಮತ್ತು ಬೇರೆಯವರೂ ಪ್ರಸನ್ನರಾಗಿರುತ್ತಾರೆ. ಪ್ರಸನ್ನಚಿತ್ತ ಸ್ಥಿತಿಯಲ್ಲಿ ಪ್ರಶ್ನಚಿತ್ತರಾಗುವುದಿಲ್ಲ. ಒಂದಾಗಿದೆ ಪ್ರಸನ್ನಚಿತ್ತ, ಮತ್ತೊಂದಾಗಿದೆ ಪ್ರಶ್ನಚಿತ್ತ. ಪ್ರಶ್ನೆ ಎಂದರೆ ಕ್ವೆಶ್ಚನ್. ಪ್ರಸನ್ನಚಿತ್ತರು ಡ್ರಾಮಾದ ಜ್ಞಾನವಿರುವ ಕಾರಣದಿಂದ ಪ್ರಸನ್ನರಾಗಿರುತ್ತಾರೆ, ಪ್ರಶ್ನೆಗಳನ್ನು ಮಾಡುವುದಿಲ್ಲ. ಸ್ವಯಂ ಬಗ್ಗೆಯಾಗಲೀ ಅನ್ಯರ ಬಗ್ಗೆಯಾಗಲೀ ಯಾವುದೇ ಪ್ರಶ್ನೆಗಳು ಉತ್ಪನ್ನವಾದರೂ, ಅದರ ಉತ್ತರ ಅವರಿಗೆ ಮೊದಲೇ ತಿಳಿಯುತ್ತದೆ. ವಾಟ್ (ಏನು), ವೈ (ಏಕೆ) ಬದಲಿಗೆ ಡಾಟ್ (ಬಿಂದು) ಎಂದು ಮೊದಲೇ ತಿಳಿಸಿದ್ದೇನೆ. ಏಕೆ, ಏನು ಎಂಬುದಿಲ್ಲ, ಆದರೆ ಫುಲ್‌ಸ್ಟಾಪ್ (ಬಿಂದು). ಒಂದು ಸೆಕೆಂಡಿನಲ್ಲಿ ವಿಸ್ತಾರ, ಒಂದು ಸೆಕೆಂಡಿನಲ್ಲಿ ಸಾರ. ಇಂತಹ ಪ್ರಸನ್ನಚಿತ್ತರು ಸದಾ ನಿಶ್ಚಿಂತರಾಗಿರುತ್ತಾರೆ. ಇಂತಹ ಗುರುತುಗಳು ಸಂತುಷ್ಟಮಣಿ ಆತ್ಮನಾದ ನನ್ನಲ್ಲಿವೆಯೇ ಎಂದು ಚೆಕ್ ಮಾಡಿಕೊಳ್ಳಿರಿ. ಬಾಪ್‌ದಾದಾರವರಂತೂ ಎಲ್ಲರಿಗೂ 'ಸಂತುಷ್ಟ ಮಣಿ' ಎಂಬ ಟೈಟಲ್‌ನ್ನು ಕೊಟ್ಟಿದ್ದಾರೆ. ಆದ್ದರಿಂದ ಬಾಪ್‌ದಾದಾರವರು ಈಗ 'ಹೇ ಸಂತುಷ್ಟ ಮಣಿಗಳೇ, ಸಂತುಷ್ಟರಾಗಿದ್ದೀರಾ?' ಎಂದು ಕೇಳುತ್ತಿದ್ದಾರೆ. ಮತ್ತು ಪ್ರಶ್ನೆ ಇದೆ – ಸ್ವಯಂನಿಂದ ಅಂದರೆ ಸ್ವಯಂನ ಪುರುಷಾರ್ಥದಿಂದ, ಸ್ವಯಂನ ಸಂಸ್ಕಾರ ಪರಿವರ್ತನೆಯ ಪುರುಷಾರ್ಥದಿಂದ, ಸ್ವಯಂನ ಪುರುಷಾರ್ಥದ ಶೇಕಡವಾರಿನಲ್ಲಿ, ಸ್ವಯಂನ ಸ್ಥಿತಿಯಲ್ಲಿ ಸದಾ ಸಂತುಷ್ಟರಾಗಿದ್ದೀರಾ? ಒಳ್ಳೆಯದು ಎರಡನೇ ಪ್ರಶ್ನೆ – ಸ್ವಯಂನ ಮನಸಾ, ವಾಚ ಮತ್ತು ಕರ್ಮಣ ಅಂದರೆ ಸಂಬಂಧ ಸಂಪರ್ಕದ ಮೂಲಕ ಸೇವೆಯಲ್ಲಿ ಸದಾ ಸಂತುಷ್ಟರಾಗಿದ್ದೀರಾ? ಮೂರೂ ಪ್ರಕಾರದ ಸೇವೆಗಳು, ಕೇವಲ ಒಂದು ಸೇವೆಯಲ್ಲ. ಮೂರೂ ಪ್ರಕಾರದ ಸೇವೆಗಳಲ್ಲಿ ಮತ್ತು ಸದಾಕಾಲ ಸಂತುಷ್ಟರಾಗಿದ್ದೀರಾ? ಎಲ್ಲಿಯವರೆಗೆ ಸಂತುಷ್ಟರಾಗಿದ್ದೇವೆಂದು ಯೋಚಿಸುತ್ತಿದ್ದೀರಾ ಮತ್ತು ತಮ್ಮನ್ನು ತಾವು ನೋಡಿಕೊಳ್ಳುತ್ತಿದ್ದೀರಾ? ಒಳ್ಳೆಯದು. ಮೂರನೆಯ ಪ್ರಶ್ನೆ – ಸರ್ವ ಆತ್ಮಗಳ ಸಂಬಂಧ ಸಂಪರ್ಕದಲ್ಲಿ, ಸ್ವಯಂನ ಮೂಲಕ ಮತ್ತು ಸರ್ವರ ಮೂಲಕ ಸದಾ ಸಂತುಷ್ಟರಾಗಿದ್ದೀರಾ? ಏಕೆಂದರೆ ತಪಸ್ಯಾ ವರ್ಷದಲ್ಲಿ ತಪಸ್ಸಿನ, ಸಫಲತೆಯ ಫಲವಾಗಿ ಇದನ್ನೇ ಪ್ರಾಪ್ತಿ ಮಾಡಿಕೊಳ್ಳಬೇಕಾಗಿದೆ. ಸ್ವಯಂನಲ್ಲಿ, ಸೇವೆಯಲ್ಲಿ ಮತ್ತು ಸರ್ವರಲ್ಲಿ ಸಂತುಷ್ಟತೆ. ನಾಲ್ಕು ಘಂಟೆಯಂತೂ ಯೋಗವನ್ನು ಮಾಡಿದಿರಿ, ಬಹಳ ಒಳ್ಳೆಯದು ಮತ್ತು ನಾಲ್ಕರಿಂದ ಎಂಟು ಘಂಟೆ ಯೋಗದವರೆಗೂ ತಲುಪಿಬಿಡುತ್ತೀರಿ. ಇದೂ ಸಹ ಬಹಳ ಒಳ್ಳೆಯದು. ಯೋಗದ ಸಿದ್ಧಿ ಸ್ವರೂಪರಾಗಿದ್ದೀರಿ. ಯೋಗವು ವಿಧಿಯಾಗಿದೆ. ಆದರೆ ಈ ವಿಧಿಯಿಂದ ಯಾವ ಸಿದ್ಧಿ ಪ್ರಾಪ್ತಿಯಾಯಿತು? ಯೋಗವನ್ನಿಡುವುದು ವಿಧಿಯಾಗಿದೆ, ಯೋಗದ ಪ್ರಾಪ್ತಿ ಈ ಸಿದ್ಧಿಯಾಗಿದೆ. ಅಂದಾಗ ಹೇಗೆ ಎಂಟು ಘಂಟೆಗಳ ಯೋಗದ ಲಕ್ಷ್ಯವನ್ನಿಟ್ಟುಕೊಂಡಿದ್ದೀರೋ ಹಾಗೆಯೇ ಕಡೇ ಪಕ್ಷ ಈ ಮೂರು ಪ್ರಕಾರದ ಸಂತುಷ್ಟತೆಯ ಸಿದ್ಧಿಯ ಸ್ಪಷ್ಟ, ಶ್ರೇಷ್ಠ ಲಕ್ಷ್ಯವನ್ನಿಟ್ಟುಕೊಳ್ಳಿರಿ. ಕೆಲವು ಮಕ್ಕಳು ಸ್ವಯಂ ಅನ್ನು ಮಿಯ್ಯಾ ಮಿಟ್ಟುಗಳ (ಎಲ್ಲವನ್ನೂ ತಿಳಿದವರಂತೆ) ರೀತಿಯಲ್ಲಿ ಸಂತುಷ್ಟರೆಂದು ತಿಳಿದುಕೊಳ್ಳುತ್ತಾರೆ. ಈ ರೀತಿಯ ಸಂತುಷ್ಟರಾಗಬೇಡಿ. ಒಂದಾಗಿದೆ ಹೃದಯವು ಒಪ್ಪುವುದು, ಮತ್ತೊಂದಾಗಿದೆ ಬುದ್ಧಿಯು ಒಪ್ಪುವುದು. ಬುದ್ಧಿಯಿಂದ ತಮ್ಮನ್ನು ತಾವು 'ನಾನು ಸಂತುಷ್ಟನಾಗಿಯೇ ಇದ್ದೇನೆ, ಏನು ಚಿಂತೆಯಿದೆ, ನಾನಂತೂ ನಿಶ್ಚಿಂತನಾಗಿದ್ದೇನೆ' ಎಂದು ತಿಳಿಯುವುದು. ಅಂದಾಗ ಬುದ್ಧಿಯಿಂದ ತಮ್ಮನ್ನು ತಾವು ಸಂತುಷ್ಟರಾಗಿದ್ದೇವೆ ಎಂದು ತಿಳಿಯುವುದು ಸಂತುಷ್ಟತೆಯಲ್ಲ. ಯಥಾರ್ಥವಾಗಿ ತಿಳಿದುಕೊಳ್ಳಬೇಕಾಗಿದೆ. ಸಂತುಷ್ಟತೆಯ ಚಿಹ್ನೆಗಳು ಸ್ವಯಂನಲ್ಲಿ ಅನುಭವವಾಗಬೇಕು. ಮನಸ್ಸು (ಚಿತ್ತವು) ಸದಾ ಪ್ರಸನ್ನವಾಗಿರಬೇಕು, ವ್ಯಕ್ತಿತ್ವವಾಗಬೇಕು. ಸ್ವಯಂ ತಮ್ಮನ್ನು ತಾವು ವ್ಯಕ್ತಿತ್ವವುಳ್ಳವರು ಎಂದು ತಿಳಿದುಕೊಳ್ಳುವುದು, ಅನ್ಯರು ಹಾಗೆ ತಿಳಿಯದಿದ್ದರೆ ಅಂತವರಿಗೆ ಮಿಯ್ಯಾ ಮಿಟ್ಟು ಎಂದು ಹೇಳಲಾಗುತ್ತದೆ. ಈ ರೀತಿಯ ಸಂತುಷ್ಟತೆ ಅಲ್ಲ. ಆದರೆ ಯಥಾರ್ಥ ಅನುಭವದಿಂದ ಸಂತುಷ್ಟ ಆತ್ಮರಾಗಿರಿ. ಸಂತುಷ್ಟತೆ ಎಂದರೆ ಹೃದಯ ಮತ್ತು ಬುದ್ಧಿ ಎರಡೂ ಸದಾ ಆರಾಮವಾಗಿರುವುದು. ಸುಖ ಹಾಗೂ ಖುಷಿಯ ಸ್ಥಿತಿಯಲ್ಲಿರುವುದು. ಖುಷಿಯನ್ನು ಕಳೆದುಕೊಂಡವರಲ್ಲ. ಸುಖ ಹಾಗೂ

ಖುಷಿ ಇರುವವರು. ಇಂತಹ ಸಂತುಷ್ಟಮಣಿಗಳು ಸದಾ ತಂದೆಯ ಮಸ್ತಕದಲ್ಲಿ ಮಸ್ತಕಮಣಿಗಳ ಸಮಾನ ಹೊಳೆಯುತ್ತಿರುತ್ತಾರೆ. ಆದ್ದರಿಂದ ಸ್ವಯಂ ತಮ್ಮನ್ನು ತಾವು ಚೆಕ್ ಮಾಡಿಕೊಳ್ಳಿ. ಸಂತುಷ್ಟತೆಯು ತಂದೆಯ ಮತ್ತು ಸರ್ವರ ಆಶೀರ್ವಾದಗಳನ್ನು ಕೊಡಿಸುತ್ತದೆ. ಸಂತುಷ್ಟ ಆತ್ಮವು ಪ್ರತಿ ಸಮಯದಲ್ಲಿ ತಮ್ಮನ್ನು ತಾವು ತಂದೆ ಮತ್ತು ಸರ್ವರ ಆಶೀರ್ವಾದಗಳ ವಿಮಾನದಲ್ಲಿ ಹಾರುತ್ತಿರುವ ಅನುಭವ ಮಾಡುತ್ತಾರೆ. ಈ ಆಶೀರ್ವಾದಗಳೇ ಅವರ ವಿಮಾನವಾಗಿದೆ. ಸದಾ ತಮ್ಮನ್ನು ತಾವು ವಿಮಾನದಲ್ಲಿ ಹಾರುತ್ತಿರುವಂತೆ ಅನುಭವ ಮಾಡುತ್ತಾರೆ. ಆಶೀರ್ವಾದಗಳನ್ನು ಬೇಡುವುದಿಲ್ಲ. ಆದರೆ ಆಶೀರ್ವಾದಗಳೇ ಸ್ವಯಂ ಸ್ವತಃವಾಗಿ ಅವರ ಮುಂದೆ ಬರುತ್ತವೆ. ಇಂತಹ ಸಂತುಷ್ಟಮಣಿಗಳು ಅಂದರೆ ಸಿದ್ಧಿ ಸ್ವರೂಪ ತಪಸ್ವಿಗಳಾಗಿದ್ದಾರೆ. ಅಲ್ಪಕಾಲದ ಸಿದ್ಧಿಗಳಲ್ಲ, ಇವು ಅವಿನಾಶಿ ಮತ್ತು ಆತ್ಮಿಕ ಸಿದ್ಧಿಗಳಾಗಿವೆ. ಇಂತಹ ಸಂತುಷ್ಟ ಮಣಿಗಳನ್ನು ನೋಡುತ್ತಿದ್ದರು. ಪ್ರತಿಯೊಬ್ಬರೂ 'ನಾನು ಯಾರು?' ಎಂಬುದಾಗಿ ತಮ್ಮನ್ನು ತಾವು ಕೇಳಿಕೊಳ್ಳಿರಿ. **(17–03–1991)**

ಎಲ್ಲರೂ ಖುಷ್‌ರಾಜಿ (ಖುಷಿಯಾಗಿ) ಯಾಗಿದ್ದೀರಾ, ಸಂತುಷ್ಟರಾಗಿ ದ್ದೀರಾ? ಹೊರಗಡೆ ಇರುವುದರಲ್ಲಿಯೂ ಸಂತುಷ್ಟರಾಗಿದ್ದೀರಾ? ಈ ಪಾತ್ರವೂ ಸಹ ಡ್ರಾಮಾದಲ್ಲಿದೆ. ಪೂರ್ತಿ ಅಬು ಪರ್ವತವೆಲ್ಲವೂ ನಮ್ಮದಾಗುತ್ತದೆ ಎಂದು ಹೇಳುತ್ತೀರಲ್ಲವೇ? ಅದನ್ನು ಹೇಗೆ ಹೇಳುವಿರಿ? ಮೊದಲು ತಮ್ಮ ಪಾದಗಳನ್ನಂತೂ ಇಡಿ. ನಂತರ ಈಗ ಯಾವುದು ಧರ್ಮಶಾಲೆ ಎಂಬ ಹೆಸರಿದೆಯೋ ಅದೂ ಸಹ ನಿಮ್ಮದಾಗಿ ಬಿಡುತ್ತದೆ. ಈಗ ವಿದೇಶಗಳಲ್ಲಿ ಈ ರೀತಿಯಾಗಿ ಆಗಲು ಪ್ರಾರಂಭವಾಗಿದೆ ನೋಡಿ. ಚರ್ಚ್‌ಗಳು ಅಷ್ಟೊಂದು ನಡೆಯದೇ ಇರುವ ಕಾರಣ ಬ್ರಹ್ಮಾಕುಮಾರಿಯರಿಗೆ ಕೊಟ್ಟುಬಿಟ್ಟಿದ್ದಾರೆ. ಅದೇ ರೀತಿಯಲ್ಲಿ ದೊಡ್ಡ–ದೊಡ್ಡ ಸ್ಥಾನಗಳಿದ್ದು, ಅದು ನಡೆಯದಿದ್ದಾಗ ಆಫರ್ ಮಾಡುತ್ತಾರಲ್ಲವೇ? ಅಂದಮೇಲೆ ಬ್ರಾಹ್ಮಣರ ಕಾಲುಗಳು ಅಲ್ಲಲ್ಲಿ ಬೀಳುತ್ತಿರು ವುದರಲ್ಲೂ ರಹಸ್ಯವು ಅಡಕವಾಗಿದೆ. ಬ್ರಾಹ್ಮಣರು ಅಲ್ಲಿ ಇರುವುದೂ ಸಹ ಡ್ರಾಮಾದಲ್ಲಿ ಪಾತ್ರವಿದೆ. ಯಾವಾಗ ಎಲ್ಲವೂ ನಿಮ್ಮದಾಗಿ ಬಿಡುವುದೋ ಆಗ ಏನು ಮಾಡುವಿರಿ? ಅವರೇ ಸಂಭಾಲನೆ ಮಾಡಿ ಎಂದು ಆಫರ್ ಮಾಡುತ್ತಾರೆ. ನಮ್ಮನ್ನೂ ಸಂಭಾಲನೆ ಮಾಡಿ, ಆಶ್ರಮವನ್ನೂ ಸಂಭಾಲನೆ ಮಾಡಿ ಎಂದು. ಯಾವ ಸಮಯದಲ್ಲಿ ಯಾವ ಪಾತ್ರವು ಸಿಗುತ್ತದೆಯೋ ಅದರಲ್ಲಿ ರಾಜಿಯಾಗಿದ್ದು ಪಾತ್ರವನ್ನು ಅಭಿನಯಿಸಿರಿ.

**ದಾದಿಯರೊಂದಿಗೆ**: ಸದಾ ಯಾವುದಾದರೊಂದು ಹೊಸ ದೃಶ್ಯವು ಇರಬೇಕಲ್ಲವೇ? ಇದೂ ಸಹ ಡ್ರಾಮಾದಲ್ಲಿ ಒಂದು ಹೊಸ ದೃಶ್ಯವು ನಿಗದಿಯಾಗಿತ್ತು, ಅದು ಈಗ ಪುನರಾವರ್ತನೆ ಆಗಿದೆ. ಈ ಹಾಲ್ ಸಹ ಚಿಕ್ಕದಾಗಿಬಿಡುವುದೆಂದು ಎಂದಾದರೂ ಯೋಚಿಸಿದ್ದಿರಾ? ಸದಾ ಒಂದೇ ದೃಶ್ಯವು ಚೆನ್ನಾಗಿದೆ ಎಂದು ಅನಿಸುವುದಿಲ್ಲ. ಆಗಾಗ ನಡೆಯುವ ದೃಶ್ಯಗಳು ಚೆನ್ನಾಗಿದೆ ಎಂದು ಅನಿಸುತ್ತದೆ. ಇದು ಒಂದು ಆತ್ಮಿಕ ಹೊಳಪಾಗಿದೆ. ಈ ಎಲ್ಲ ಆತ್ಮಗಳ ಸಂಕಲ್ಪಗಳು ಪೂರ್ಣವಾಗಬೇಕಿತ್ತು, ಆದ್ದರಿಂದ ಈ ದೃಶ್ಯ ನಡೆಯಿತು. ಇಲ್ಲಿಂದ ಎಲ್ಲರೂ ಬನ್ನಿ ಎಂದು ಅನುಮತಿ ಕೊಟ್ಟುಬಿಟ್ಟಿರಿ. ಅಂದಮೇಲೆ ಏನು ಮಾಡುವಿರಿ? ಈಗಂತೂ ಹೊಸಬರು ಮತ್ತಷ್ಟು ವೃದ್ಧಿಯಾಗಬೇಕಿದೆ ಮತ್ತು ಹಳಬರಂತೂ ಹಳಬರಾಗಿ ಬಿಟ್ಟಿದ್ದಾರೆ. ಎಷ್ಟು ಉತ್ಸಾಹದಿಂದ ಬಂದಿರುವರೋ ಹಾಗೆಯೇ ತಮ್ಮನ್ನು ತಾವು ಸೆಟ್ ಮಾಡಿಕೊಂಡಿದ್ದಾರೆ, ಇದನ್ನು ಚೆನ್ನಾಗಿ ಮಾಡಿದ್ದಾರೆ. ವಿಶಾಲವಂತೂ ಆಗಲೇ ಬೇಕಿದೆ. ಕಡಿಮೆಯಂತೂ ಆಗಲೇ ಬಾರದಿದೆ. ವಿಶ್ವಕಲ್ಯಾಣಕಾರಿ ಎಂಬ ಟೈಟಲ್ ಇದೆ ಎಂದ ಮೇಲೆ ವಿಶ್ವದ ಮುಂದೆ ಇದೇನೂ ಇಲ್ಲವೇ ಇಲ್ಲ. ವೃದ್ಧಿಯೂ ಆಗಬೇಕಿದೆ ಮತ್ತು ವಿಧಿಯೂ ಸಹ ಹೊಸದಕ್ಕಿಂತ ಹೊಸದಾಗಬೇಕಿದೆ. ಯಾವುದಾದರೊಂದು ವಿಧಿಯು ಆಗುತ್ತಲೇ ಇರುತ್ತದೆ. ಈಗ ವೃತ್ತಿಯು ಶಕ್ತಿಶಾಲಿಯಾಗಿ ಆಗುತ್ತದೆ. ತಪಸ್ಸಿನ ಮೂಲಕ ವೃತ್ತಿಯು ಶಕ್ತಿಶಾಲಿಯಾಗಿಬಿಟ್ಟಾಗ ಸ್ವತಃವಾಗಿ ವೃತ್ತಿಯ ಮೂಲಕ ಆತ್ಮಗಳ ವೃತ್ತಿಯೂ ಬದಲಾಗುತ್ತದೆ. ಒಳ್ಳೆಯದು, ಇಂದು ಎಲ್ಲರೂ ಸೇವೆ ಮಾಡಿ ಸುಸ್ತಾಗುವುದಿಲ್ಲವಲ್ಲವೇ? ಮೋಜಿನಲ್ಲಿ ಬರುತ್ತಿರುವಿರಿ. ಮೋಜೇ ಮೋಜು ಇದೆ. **(03–04–1991)**

ತಪಸ್ಸು ಎಂದರೆ ಖುಷಿಯಲ್ಲಿ ನಾಟ್ಯವಾಡುವುದು ಹಾಗೂ ತಂದೆಯ ಮತ್ತು ತಮ್ಮ ಆದಿ–ಅನಾದಿ ಸ್ವರೂಪದ ಗುಣಗಳ ಹಾಡನ್ನು ಹಾಡುವುದು. ಅಂದ ಮೇಲೆ ಈ ಹಾಡು ಎಷ್ಟೊಂದು ದೊಡ್ಡದಾಗಿ ಮತ್ತು ಸಹಜವಾಗಿದೆ. ಇದರಲ್ಲಿ ಕಂಠವು ಸರಿಯಾಗಿದೆಯೇ ಅಥವಾ ಇಲ್ಲವೇ ಎಂಬುದರ ಮಾತು ಸಹ ಇಲ್ಲ. ನಿರಂತರವಾಗಿ ಈ ಹಾಡನ್ನು ಹಾಡಬಹುದಾಗಿದೆ. ನಿರಂತರವಾಗಿ ಖುಷಿಯಲ್ಲಿ ನಾಟ್ಯವಾಡುತ್ತಾ ಇರಿ. ಅಂದಮೇಲೆ ತಪಸ್ಸಿನ ಅರ್ಥ ಏನಾಯಿತು? ನಾಟ್ಯ ಮಾಡುವುದು ಮತ್ತು ಹಾಡನ್ನು ಹಾಡುವುದು. ಎಷ್ಟೊಂದು ಸಹಜವಾಗಿದೆ. ಯಾರು ಚಿಕ್ಕ ತಪ್ಪನ್ನಾದರೂ ಮಾಡುತ್ತಾರೋ

ಅವರ ತಲೆಯು ಭಾರವಾಗುತ್ತದೆ. ಬ್ರಾಹ್ಮಣ ಜೀವನದಲ್ಲಿ ಎಂದಿಗೂ ಯಾರ ತಲೆಯೂ ಭಾರವಾಗಲು ಸಾಧ್ಯವಿಲ್ಲ. ಆಸ್ಪತ್ರೆಯನ್ನು ಕಟ್ಟುವಂತಹವರ ತಲೆ ಭಾರವಾಯಿತೇ? ಟ್ರಸ್ಟಿಗಳು ಎದುರಿಗೆ ಕುಳಿತ್ತಿದ್ದೀರಲ್ಲವೇ? ತಲೆಯು ಭಾರವಾಗಿದೆಯೇ, ಮಾಡಿ ಮಾಡಿಸುವಂತಹ (ಕರನ್ ಕರಾವನ್‌ಹಾರ್) ತಂದೆಯು ಇದ್ದಾಗ ಯಾವ ಹೊರೆ ಇದೆ? ಇದಂತೂ ಸ್ವಯಂನ್ನು ನಿಮಿತ್ತರನ್ನಾಗಿ ಮಾಡಿಕೊಂಡು ಭಾಗ್ಯವನ್ನು ರೂಪಿಸಿಕೊಳ್ಳುವ ಸಾಧನವಾಗಿದೆ. ತಮ್ಮ ಜವಾಬ್ದಾರಿ ಏನಿದೆ? ತಂದೆಯ ಬದಲಿಗೆ ತಮ್ಮ ಜವಾಬ್ದಾರಿಯೆಂದು ತಿಳಿಯುವ ಕಾರಣ ತಲೆಯು ಭಾರವಾಗುತ್ತದೆ. ಸರ್ವಶಕ್ತಿವಂತನಾದ ತಂದೆಯು ನನ್ನ ಜೊತೆಗಾರನಾಗಿ ಇರುವಾಗ ಯಾವ ಭಾರವಾಗುತ್ತದೆ? ನನ್ನ ಜವಾಬ್ದಾರಿ ಎಂದು ತಿಳಿದುಕೊಳ್ಳುವ ಸಣ್ಣ ತಪ್ಪನ್ನು ಮಾಡುವ ಕಾರಣದಿಂದ ತಲೆಯು ಭಾರವಾಗಿ ಬಿಡುವುದು. ಅಂದಮೇಲೆ ಬ್ರಾಹ್ಮಣ ಜೀವನ ಎಂದರೇನೇ ನಾಟ್ಯ ಮಾಡುವುದು, ಹಾಡುವುದು ಮತ್ತು ಮೋಜು ಮಾಡುವುದು. ವಾಚಾ ಸೇವೆಯಾಗಿರಬಹುದು ಅಥವಾ ಕರ್ಮಣಾ ಸೇವೆಯಾಗಿರಬಹುದು, ಈ ಸೇವೆಯೂ ಸಹ ಒಂದು ಆಟವಾಗಿದೆ. ಸೇವೆ ಬೇರೇನೂ ಅಲ್ಲ. ಕೆಲವು ಬುದ್ಧಿಯಿಂದ ಆಡುವ ಆಟವಾದರೆ ಕೆಲವು ಹಗುರವಾಗಿ ಆಡುವಂತಹ ಆಟವಾಗಿರುತ್ತದೆ. ಆದರೆ ಆಟವೇ ಆಗಿದೆಯಲ್ಲವೇ? ಬುದ್ಧಿಯ ಆಟದಲ್ಲಿ ಬುದ್ಧಿಯು ಭಾರವಾಗುತ್ತದೆಯೇ? ಆದ್ದರಿಂದ ಈ ಎಲ್ಲಾ ಆಟವನ್ನು ಆಡುತ್ತೀರ? ಎಷ್ಟೇ ದೊಡ್ಡ ಯೋಚಿಸುವ ಕೆಲಸವಿರಬಹುದು, ಗಮನವನ್ನು ನೀಡಬೇಕಾಗುವಂತಹ ಕೆಲಸವಿರಬಹುದು, ಆದರೆ ಮಾಸ್ಟರ್ ಸರ್ವಶಕ್ತಿವಂತ ಆತ್ಮಗಳಿಗೆ ಇವೆಲ್ಲವೂ ಆಟವೇ ಆಗಿದೆ. **(26–10–1991)**

ಈ ತಪಸ್ಯಾ ವರ್ಷದಲ್ಲಿ ಏನೆಲ್ಲಾ ನಡೆಯುತ್ತಿದೆಯೋ ಇದಕ್ಕೆ ಕಾರಣವೇನು? ದೊಡ್ಡ ದೊಡ್ಡ ಪ್ರಾಜೆಕ್ಟ್ (ಯೋಜನೆ) ಗಳನ್ನು ಮಾಡುತ್ತಿರುವಿರಿ ಇದಕ್ಕೆ ಕಾರಣವೇನು? ಇದೇ ತಪಸ್ಸಿನ ಫಲವೆಂದು ಕೆಲವರು ತಿಳಿಯುತ್ತಾರೆ. ಈ ತಪಸ್ಸಿನ ವರ್ಷದಲ್ಲಿ ಇದೆಲ್ಲವು ಏಕೆ ಎಂದು ಇನ್ನೂ ಕೆಲವರು ತಿಳಿಯುತ್ತಾರೆ? ಎರಡೂ ವೈಬ್ರೇಷನ್ಸ್‌ಗಳು (ಪ್ರಕಂಪನಗಳು) ಬರುತ್ತವೆ. ಆದರೆ ಸಮಯದ ತೀವ್ರಗತಿ ಮತ್ತು ತಪಸ್ಸಿನ ವೈಬ್ರೇಷನ್ಸ್‌ನಿಂದ ಅವಶ್ಯಕತೆಗಳ ಪೂರ್ಣ ಆಗುವುದೂ ಸಹ ತಪಸ್ಸಿನ ಬಲದ ಫಲವಾಗಿದೆ. ಫಲವನ್ನಂತೂ ತಿನ್ನಬೇಕಲ್ಲವೇ? ತಪಸ್ಸಿನ ಬಲವು ಸರ್ವ ಅವಶ್ಯಕತೆಗಳನ್ನು ಸಮಯಕ್ಕೆ ಸರಿಯಾಗಿ ಸಹಜವಾಗಿ ಪೂರ್ಣ ಮಾಡುತ್ತದೆ ಎಂಬುದನ್ನು ಈ ಡ್ರಾಮಾ ತೋರಿಸುತ್ತದೆ. ತಿಳಿಯಿತೇ? 'ಈ ರೀತಿಯಾಗಿ ಏಕೆ ಆಗುತ್ತಿದೆ' ಎಂಬ ಪ್ರಶ್ನೆಯು ಬರಲು ಸಾಧ್ಯವಿಲ್ಲ. ತಪಸ್ಸು ಎಂದರೆ ಸಹಜವಾಗಿ ಸಫಲತೆಯು ಅನುಭವವಾಗುವುದಾಗಿದೆ. ಮುಂದೆ ಹೋದಂತೆ ಅಸಂಭವವೂ ಹೇಗೆ ಸಂಭವವಾಗುತ್ತದೆ ಎಂಬ ಅನುಭವವನ್ನು ಬಹಳ ಹೆಚ್ಚು ಹೆಚ್ಚಾಗಿ ಮಾಡುತ್ತಾ ಇರುತ್ತೀರಿ. ವಿಘ್ನಗಳು ಬರುವುದು ಸಹ ಡ್ರಾಮಾದಲ್ಲಿ ಆದಿಯಿಂದ ಅಂತ್ಯದವರೆಗೂ ನಿಗದಿಯಾಗಿದೆ. ಈ ವಿಘ್ನಗಳೂ ಸಹ ಅಸಂಭವವನ್ನು ಸಂಭವವಾಗುವ ಅನುಭವವನ್ನು ಮಾಡಿಸುತ್ತದೆ. ಮತ್ತು ತಾವೆಲ್ಲರೂ ಸಹ ಅನುಭವಿಗಳಂತೂ ಆಗಿಯೇ ಬಿಟ್ಟಿರುವಿರಿ. ಈ ಕಾರಣದಿಂದಾಗಿ ವಿಘ್ನಗಳೂ ಸಹ ಆಟದಂತೆ ಎನಿಸುತ್ತದೆ. ಹೇಗೆ ಫುಟ್‌ಬಾಲಿನ ಆಟವನ್ನು ಆಡುತ್ತೀರಲ್ಲವೇ, ಆಗ ಏನು ಮಾಡುವಿರಿ? ಬಾಲ್ ಬಂದಾಗಲೇ ಅದನ್ನು ಒದೆಯುತ್ತೀರಿ. ಒಂದುವೇಳೆ ಬಾಲೇ ಬಾರದಿದ್ದಲ್ಲಿ ಹೇಗೆ ಒದೆಯುವಿರಿ? ಆಟವು ಹೇಗೆ ನಡೆಯುತ್ತದೆ? ಇದೂ ಸಹ ಫುಟ್‌ಬಾಲ್‌ನ ಆಟವಾಗಿದೆ. ಆಟ ಆಡುವುದರಲ್ಲಿ ಮಜಾ ಬರುತ್ತದೆಯೇ ಅಥವಾ ಗೊಂದಲಕ್ಕೊಳಗಾಗುತ್ತೀರಾ? ಬಾಲ್ ನನ್ನ ಕಾಲಿನ ಸಮೀಪದಲ್ಲಿ ಬರಲಿ, ಒದೆಯೋಣ ಎಂದು ಪ್ರಯತ್ನ ಮಾಡುತ್ತೀರಲ್ಲವೇ? ಈ ಆಟವಂತೂ ನಡೆಯತ್ತಲೇ ಇರುತ್ತದೆ. ನಥಿಂಗ್ ನ್ಯೂ. ಡ್ರಾಮಾವು ಆಟವನ್ನೂ ತೋರಿಸುತ್ತದೆ ಮತ್ತು ಸಂಪನ್ನ ಸಫಲತೆಯನ್ನೂ ತೋರಿಸುತ್ತದೆ. ಇದೇ ಬ್ರಾಹ್ಮಣ ಕುಲದ ಆಚಾರ ಪದ್ಧತಿಯಾಗಿದೆ. **(26–10–1991)**

ಈ ದಿನ ಸ್ವಲ್ಪ ಖುಷಿ ಕಡಿಮೆಯಾಯಿತು, ಸ್ವಲ್ಪ ಉದಾಸೀನವಾಯಿತು ಎಂಬ ರೀತಿಯಲ್ಲ. ಯಾರು ಉದಾಸೀನರಾಗುತ್ತಾರೆ? ಯಾರು ಮಾಯೆಯ ದಾಸರಾಗುತ್ತಾರೋ ಅವರು ಉದಾಸೀನರಾಗುತ್ತಾರೆ. ಏನು ಮಾಡಲಿ? ಹೇಗೆ ಮಾಡಲಿ? ಇಂತಹ ಪ್ರಶ್ನೆಗಳು ಬರುವುದು ಎಂದರೆ ಉದಾಸೀನರಾಗುವುದಾಗಿದೆ. ಯಾವಾಗಲೇ ಆಗಲೀ 'ಏಕೆ ಆಯಿತು? ಏಕೆ ಮಾಡಿದರು? ಎಂಬ 'ಏಕೆ' ಎನ್ನುವ ಪ್ರಶ್ನೆ ಬರುವುದೋ, ಇದರಿಂದ ಚಕ್ರದ ಪೂರ್ಣ ಜ್ಞಾನ ಇಲ್ಲವೆಂದು ಸಿದ್ಧವಾಗುತ್ತದೆ. ಒಂದುವೇಳೆ ಡ್ರಾಮಾದ ರಹಸ್ಯವನ್ನು ತಿಳಿದಿದ್ದೀರೆಂದರೆ ಏಕೆ, ಏನು ಎಂಬ ಪ್ರಶ್ನೆ ಏಳುವುದಿಲ್ಲ. ಸ್ವಯಂ ತಾವೂ ಕಲ್ಯಾಣಕಾರಿಗಳು ಮತ್ತು ಸಮಯವೂ ಕಲ್ಯಾಣಕಾರಿಯಾಗಿದ್ದಾಗ, ಈ ಏಕೆ, ಏನು ಎಂಬ ಪ್ರಶ್ನೆಗಳು ಬರಲು ಸಾಧ್ಯವೇ? ಡ್ರಾಮಾದ ಜ್ಞಾನ, ಡ್ರಾಮಾದಲ್ಲಿಯೂ ಸಮಯದ ಜ್ಞಾನ – ಇದರ ಕೊರತೆ ಇದ್ದಾಗ ಏಕೆ ಮತ್ತು ಏನು ಎಂಬ ಪ್ರಶ್ನೆ ಏಳುತ್ತದೆ. ಕೆಲವೊಮ್ಮೆ 'ಇದು ನನ್ನದೇ ಲೆಕ್ಕಾಚಾರವಾಗಿದೆಯೇ, ನನ್ನದೇ ಕಠಿಣ

ಲೆಕ್ಕಾಚಾರ ವಾಗಿದೆಯೇ, ಬೇರೆಯವರದಲ್ಲವೇ? ಎಂಬ ಪ್ರಶ್ನೆ ಬರುತ್ತದೆ. ಎಷ್ಟೇ ಕಠಿಣವಿರಲಿ, ಆದರೆ ಯೋಗದ ಅಗ್ನಿಯ ಮುಂದೆ ಎಷ್ಟೇ ಕಠಿಣ ಲೆಕ್ಕಚಾರವಿದ್ದರೂ ಯಾವುದೇ ಲೆಕ್ಕಕ್ಕೆ ಇಲ್ಲ? ಕಬ್ಬಿಣ್ಣವು ಎಷ್ಟೇ ಕಠಿಣವಾಗಿರಬಹುದು ಆದರೆ ಪ್ರಜ್ವಲಿಸುವ ಅಗ್ನಿಯಲ್ಲಿ ಮೇಣದಂತೆ ಆಗಿಬಿಡುವುದು. ಹಾಗೆಯೇ ಎಷ್ಟೇ ಕಠಿಣ ಪರೀಕ್ಷೆ ಇರಬಹುದು, ಲೆಕ್ಕಾಚಾರವಿರಬಹುದು, ಕಠಿಣ ಬಂಧನವಿರಬಹುದು, ಆದರೆ ಯೋಗ ಅಗ್ನಿಯ ಮುಂದೆ ಯಾವ ಮಾತೂ ಕೂಡ ಕಠಿಣವಾಗಿರುವುದಿಲ್ಲ, ಬದಲಿಗೆ ಎಲ್ಲವೂ ಸಹಜವಾಗಿ ಬಿಡುತ್ತದೆ. ಕೆಲವು ಆತ್ಮರು 'ನನ್ನದೇ ಶರೀರದ ಲೆಕ್ಕಾಚಾರವಾಗಿದೆಯೇ? ಬೇರೆ ಯಾರದೂ ಇಲ್ಲವೇ?, ನನಗೇ ಇಂತಹ ಪರಿವಾರ ಸಿಕ್ಕಿದೆ, ನನಗೇ ಇಂತಹ ಕೆಲಸ ಸಿಕ್ಕಿದೆ, ಇಂತಹ ಜೊತೆಗಾರರು ಸಿಕ್ಕಿದ್ದಾರೆ' ಎಂದು ಹೇಳುತ್ತಾರೆ. ಆದರೆ ಏನಾಗುತ್ತಿದೆಯೋ ಅದು ಬಹಳ ಒಳ್ಳೆಯದೇ ಆಗಿದೆ. ಈ ಕಠಿಣ ಲೆಕ್ಕಾಚಾರವು ಶಕ್ತಿಶಾಲಿಯನ್ನಾಗಿ ಮಾಡಿಬಿಡುತ್ತದೆ. ಸಹನ ಶಕ್ತಿಯನ್ನು ಹೆಚ್ಚಿಸುತ್ತದೆ. ಪ್ರಜ್ವಲಿಸುವ ಅಗ್ನಿಯಲ್ಲಿ ಯಾವುದೇ ವಸ್ತುವು ಪರಿವರ್ತನೆ ಆಗುವುದಿಲ್ಲ ಎನ್ನುವ ಮಾತೇ ಇಲ್ಲ. ಆದ್ದರಿಂದ ಎಂದಿಗೂ 'ಕಠಿಣ ಲೆಕ್ಕಾಚಾರ ಇದೆ' ಎಂದು ಹೇಳಬೇಡಿ. ನಮ್ಮ ಬಲಹೀನತೆಗಳೇ ಸಹಜವಾದುದ್ದನ್ನು ಕಷ್ಟಕರವನ್ನಾಗಿ ಮಾಡಿಬಿಡುತ್ತದೆ. ಈಶ್ವರೀಯ ಶಕ್ತಿಯ ಮಹತ್ವ ಬಹಳ ದೊಡ್ಡದಾಗಿದೆ. ಆದ್ದರಿಂದ ಸದಾ ಸ್ವಯಂ ಅನ್ನು ನೋಡಿಕೊಳ್ಳಿ, ಸ್ವದರ್ಶನ ಚಕ್ರಧಾರಿಗಳಾಗಿರಿ. ಅನ್ಯ ಮಾತುಗಳಲ್ಲಿ ಹೋಗುವುದು, ಬೇರೆಯವರನ್ನು ನೋಡುವುದು ಎಂದರೆ ಕೆಳಗೆ ಬೀಳುವುದಾಗಿದೆ. ಮತ್ತು ತಂದೆಯನ್ನು ನೋಡುವುದು, ತಂದೆಯ ಮಾತುಗಳನ್ನು ಕೇಳುವುದು ಎಂದರೆ ಹಾರುವುದಾಗಿದೆ. **(18–12–1991)**

ಏನೇ ಬರಲಿ, ಏನೇ ಆಗಲಿ, ಪರಿಸ್ಥಿತಿ ರೂಪೀ ದೊಡ್ಡದಕ್ಕಿಂತ ದೊಡ್ಡ ಬೆಟ್ಟವೇ ಬರಲಿ, ಸಂಸ್ಕಾರ ಘರ್ಷಣೆಯಾಗುವ ಮೋಡಗಳೇ ಬರಲಿ, ಪ್ರಕೃತಿಯೂ ಪೇಪರ್‌ನ್ನು ತೆಗೆದುಕೊಳ್ಳಲಿ, ಆದರೆ ಅಂಗದನ ಸಮಾನ ಮನ ಬುದ್ಧಿ ರೂಪೀ ಕಾಲನ್ನು ಅಲುಗಾಡಿಸಬೇಡಿ, ಅಚಲರಾಗಿರಿ. ಹಿಂದೆ ನಡೆದಿರುವುದರಲ್ಲಿ ಒಂದುವೇಳೆ ಏನೇ ಏರುಪೇರು ಆಗಿದ್ದರೂ ಅದನ್ನು ಸಂಕಲ್ಪದಿಂದಲೂ ಸ್ಮೃತಿಯಲ್ಲಿ ತರಬೇಡಿರಿ. ಫುಲ್‌ಸ್ಟಾಪ್ ಹಾಕಿಬಿಡಿ. ವರ್ತಮಾನವನ್ನು ತಂದೆಯ ಸಮಾನ ಶ್ರೇಷ್ಠ ಸಹಜವಾಗಿ ಮಾಡಿಕೊಳ್ಳಬೇಕು ಮತ್ತು ಭವಿಷ್ಯವನ್ನು ಸದಾ ಸಫಲತೆಯ ಅಧಿಕಾರದಿಂದ ನೋಡಿಕೊಳ್ಳಿ. ಈ ವಿಧಿಯಿಂದ ಸಿದ್ಧಿಯನ್ನು ಪ್ರಾಪ್ತಿ ಮಾಡಿಕೊಳ್ಳಿ. ನಾಳೆಯಿಂದ ಅಲ್ಲ, ಈಗಿನಿಂದಲೇ ಮಾಡಿರಿ. ಸ್ಮೃತಿ ಮಾಸದ ಉಳಿದ ಸ್ವಲ್ಪವೇ ಸಮಯವನ್ನು ಬಹಳ ಕಾಲದ ಸಂಸ್ಕಾರವನ್ನಾಗಿ ಮಾಡಿಕೊಳ್ಳಿರಿ. ಈ ವಿಶೇಷ ವರದಾನವನ್ನು ವಿಧಿ ಪೂರ್ವಕವಾಗಿ ಪ್ರಾಪ್ತಿ ಮಾಡಿಕೊಳ್ಳಿರಿ. ವರದಾನದ ಅರ್ಥ ಹುಡುಗಾಟಿಕೆಯಲ್ಲಿ ಬರುವುದಲ್ಲ. ಹುಡುಗಾಟಿಕೆಯುಳ್ಳವರಾಗಬೇಡಿರಿ, ಆದರೆ ಸಹಜ ಪುರುಷಾರ್ಥಿಗಳಾಗಿರಿ.

ದಿನ ಪ್ರತಿ ದಿನದ ಸಮಸ್ಯೆಗಳು, ಪರಿಸ್ಥಿತಿಗಳು ಮತ್ತಷ್ಟು ಬಿಗಡಾಯಿಸು ವುದು. ಅಂತಹ ಸಮಯದಲ್ಲಿ ಕರ್ಮ ಮತ್ತು ಯೋಗದ ಬ್ಯಾಲೆನ್ಸ್ ಇಲ್ಲ ಎಂದರೆ ಬುದ್ಧಿಯು ಸರಿಯಾದ ನಿರ್ಣಯ ಮಾಡಲು ಆಗುವುದಿಲ್ಲ. ಆದ್ದರಿಂದ ಯೋಗ ಮತ್ತು ಕರ್ಮದ ಬ್ಯಾಲೆನ್ಸ್‌ನ ಮೂಲಕ ತಮ್ಮ ನಿರ್ಣಯ ಶಕ್ತಿಯನ್ನು ಹೆಚ್ಚಿಸಿಕೊಳ್ಳಿ. ತಿಳಿಯಿತೇ? ನಂತರ 'ಹೀಗೂ ಆಗುವುದೆಂದು ನನಗೆ ಗೊತ್ತಿರಲೇ ಇಲ್ಲ, ಇದು ಮೊದಲೇ ತಿಳಿದಿದ್ದರೆ ನಾನು ಯೋಗವನ್ನು ಹೆಚ್ಚು ಮಾಡುತ್ತಿದ್ದೆ' ಎಂದು ಹೇಳಬೇಡಿ. ಆದರೆ ಈಗಿನಿಂದಲೇ ಈ ಅಭ್ಯಾಸವನ್ನು ಮಾಡಿರಿ. ಯಾವ ಆತ್ಮನಿಗೆ ಬ್ಯಾಲೆನ್ಸ್‌ನ ಕಾರಣದಿಂದ ಬಾಪ್‌ದಾದಾರವರಿಂದ ಬ್ಲೆಸ್ಸಿಂಗ್ಸ್ (ಆಶೀರ್ವಾದಗಳು) ಪ್ರಾಪ್ತಿ ಆಗುತ್ತದೆಯೋ ಅಂತವರ ಗುರುತು ಹೇಗಿರುತ್ತದೆ? ಯಾರು ಸದಾ ತಂದೆಯ ಆಶೀರ್ವಾದಗಳನ್ನು ಅನುಭವ ಮಾಡುತ್ತಿರುತ್ತಾರೋ ಅವರ ಸಂಕಲ್ಪದಲ್ಲೂ ಎಂದಿಗೂ 'ಇದು ಏನಾಯಿತು, ಏಕಾಯಿತು?' ಎನ್ನುವ ಆಶ್ಚರ್ಯದ ಗುರುತು ಇರುವುದಿಲ್ಲ. 'ಏನಾಗುತ್ತದೆ'? ಎಂಬ ಪ್ರಶ್ನೆಯು ಏಳುವುದಿಲ್ಲ. ಸದಾ 'ಏನಾಗುತ್ತಿದೆಯೋ ಅದರಲ್ಲಿ ಕಲ್ಯಾಣವು ಅಡಕವಾಗಿದೆ' ಎಂಬ ನಿಶ್ಚಯದಲ್ಲಿ ಪಕ್ಕಾ ಆಗಿರುತ್ತಾರೆ. ಏಕೆಂದರೆ ಕಲ್ಯಾಣಕಾರೀ ಯುಗವಾಗಿದೆ, ಕಲ್ಯಾಣಕಾರಿ ತಂದೆಯಾಗಿದ್ದಾರೆ ಮತ್ತು ತಮ್ಮೆಲ್ಲರ ಕೆಲಸವೂ ವಿಶ್ವಕಲ್ಯಾಣ ಮಾಡುವುದೇ ಆಗಿದೆ, ಕಲ್ಯಾಣವೇ ಸಮಾವೇಶವಾಗಿದೆ. ಹೊರಗಿನ ನೋಟಕ್ಕೆ ಯಾವುದೇ ಕರ್ಮವು ಎಷ್ಟೇ ಕೋಲಾಹಲದ್ದಾಗಿ ಕಂಡುಬರಲಿ, ಆದರೆ ಆ ಏರುಪೇರಿನಲ್ಲಿಯೂ ಯಾವುದೋ ಗುಪ್ತ ಕಲ್ಯಾಣವು ಸಮಾವೇಶವಾಗಿರುತ್ತದೆ ಮತ್ತು ತಂದೆಯ ಶ್ರೀಮತದ ಕಡೆಗೆ, ತಂದೆಯ ಸಂಬಂಧದ ಕಡೆಗೆ ಗಮನವನ್ನು ಸೆಳೆಯುವ ಕಲ್ಯಾಣವಿರುತ್ತದೆ. ಬ್ರಾಹ್ಮಣ ಜೀವನದಲ್ಲಿ ಏನಾಗಲು ಸಾಧ್ಯವಿಲ್ಲ? ಅಕಲ್ಯಾಣ ವಾಗಲು ಸಾಧ್ಯವಿಲ್ಲ. ಇಷ್ಟೊಂದು ನಿಶ್ಚಯವಿದೆಯೇ ಅಥವಾ ಏನಾದರೂ ಸಣ್ಣ ಪುಟ್ಟ ಪರಿಸ್ಥಿತಿಗಳು ಬಂದರೆ ಅಲುಗಾಡುತ್ತೀರಾ? **(31–12–1991)**

ತಮ್ಮ ಸತ್ಯಯುಗೀ ರಾಜ್ಯದಲ್ಲಿ ಪ್ರಕೃತಿಯ ಸ್ವರೂಪ ಎಷ್ಟೊಂದು ಶ್ರೇಷ್ಠ, ಸತೋಪ್ರಧಾನ, ಸುಂದರವಾಗಿರುತ್ತದೆ. ಅಲ್ಲಿಯ ಹೂದೋಟಕ್ಕೂ ಮತ್ತು ತಮ್ಮ ಇಲ್ಲಿಯ ಹೂದೋಟಕ್ಕೂ ಎಷ್ಟೊಂದು ಅಂತರವಿದೆ. ಅಲ್ಲಿಯ ತೋಟದ ನಿಜವಾದ ಪರಿಮಳವನ್ನು ಅನುಭವ ಮಾಡಿದ್ದೀರಲ್ಲವೆ? ಆದರೂ ಪ್ರಕೃತಿಯು ಅಂತ್ಯದವರೆಗೂ ತನ್ನ ಒಳ್ಳೆಯ ಪಾತ್ರವನ್ನು ನಿಭಾಯಿಸುತ್ತಾ ಇದೆ. ಆದರೆ ಶ್ರೇಷ್ಠ ಆತ್ಮಗಳಾದ ತಾವು ಪ್ರಕೃತಿಪತಿಯಾಗಿದ್ದೀರಿ. ಪ್ರಕೃತಿಪತಿ ಆಗಿ, ಈ ಪ್ರಕೃತಿಯ ಆಟವನ್ನು ನೋಡಿ ಹರ್ಷಿತರಾಗುತ್ತೀರಿ. ಪ್ರಕೃತಿಯು ಏರುಪೇರನ್ನು ಮಾಡಲಿ ಅಥವಾ ಪ್ರಕೃತಿಯು ಸುಂದರ ಆಟವನ್ನು ತೋರಿಸಲಿ, ಎರಡರಲ್ಲೂ ಪ್ರಕೃತಿಪತಿ ಆತ್ಮಗಳು ಸಾಕ್ಷಿಯಾಗಿ ಆಟವನ್ನು ನೋಡುತ್ತೀರಿ. ಆಟದಲ್ಲಿ ಮಜಾ ತೆಗೆದುಕೊಳ್ಳುತ್ತೀರಿ, ಗಾಬರಿಯಾಗುವುದಿಲ್ಲ. ಆದ್ದರಿಂದ ಬಾಪ್ ದಾದಾರವರು ತಪಸ್ಸಿನ ಮೂಲಕ ಸಾಕ್ಷೀತನದ ಸ್ಥಿತಿಯ ಆಸನದ ಮೇಲೆ, ಅಚಲ ಅಡೋಲರಾಗಿ ಕುಳಿತುಕೊಳ್ಳುವ ವಿಶೇಷ ಅಭ್ಯಾಸ ಮಾಡಿಸುತ್ತಿದ್ದಾರೆ. ಆದ್ದರಿಂದ ಈ ಸ್ಥಿತಿಯ ಆಸನ ಚೆನ್ನಾಗಿದೆ ಎಂದು ಅನಿಸುತ್ತದೆಯೇ ಅಥವಾ ಹಲ್‌ಚಲ್‌ನ ಆಸನ ಚೆನ್ನಾಗಿದೆ ಎಂದು ಅನಿಸುತ್ತದೆಯೇ? ಅಚಲ ಆಸನವು ಚೆನ್ನಾಗಿದೆ ಎಂದು ಅನಿಸುತ್ತದೆಯಲ್ಲವೇ? ಪ್ರಕೃತಿಯ ಅಥವಾ ವ್ಯಕ್ತಿಯ ಯಾವುದೇ ಮಾತಾಗಲಿ,  ಇವೆರಡೂ ಅಚಲ ಸ್ಥಿತಿಯ ಆಸನವನ್ನು ಸ್ವಲ್ಪವೂ ಅಲುಗಾಡಿಸಲಾರದು. ಇಷ್ಟೊಂದು ಪಕ್ಕಾ ಆಗಿದ್ದೀರಲ್ಲವೆ? ಅಥವಾ ಈಗ ಆಗಬೇಕಾಗಿದೆಯೇ?

ಭಾರತವಾಸಿಗಳಿಗೆ ಯಾವ ನಶೆ ಇರುತ್ತದೆ? ಭಾರತವಾಸಿಗಳಿಗೆ ತಮ್ಮದೇ ನಶೆ ಇದೆ. ತಂದೆಯು ಬರುವುದೇ ಭಾರತದಲ್ಲಿ, ಲಂಡನ್‌ನಲ್ಲಿ ಬರುವುದಿಲ್ಲ ಅಲ್ಲವೇ? (ಬೇಕೆಂದರೆ ಬರಬಹುದು) ಆದರೆ ಇದುವರೆಗೂ ಡ್ರಾಮಾದಲ್ಲಿ ಅಂತಹದೇನೂ ಕಂಡುಬಂದಿಲ್ಲ. ಡ್ರಾಮಾದ ನಿಯಮವನ್ನು ಎಂದಿಗೂ ಭಗವಂತನೂ ಮುರಿಯಲು ಸಾಧ್ಯವಿಲ್ಲ. ಡ್ರಾಮಾಗೆ ಅಧಿಕಾರ ಸಿಕ್ಕಿದೆ. **(16–03–1992)**

ಪ್ರತಿಯೊಂದು ಮಾತಿನಲ್ಲಿ ಒಳ್ಳೆಯದು ಒಳ್ಳೆಯದು ಎಂದು ಹೇಳುತ್ತಾ ತಾವೂ ಒಳ್ಳೆಯವರಾಗುತ್ತಾ ಹೋಗುತ್ತೀರಿ ಮತ್ತು ಪ್ರತಿಯೊಂದು ಮಾತಿನಲ್ಲಿ ಒಳ್ಳೆಯದು ಅವಶ್ಯವಾಗಿ ತುಂಬಿರುತ್ತದೆ. ಒಂದುವೇಳೆ ಎಲ್ಲಾ ಮಾತುಗಳು ಕೆಟ್ಟದಿರಬಹುದು, ಆದರೆ ಅದರಲ್ಲೂ ಒಂದೆರಡು ಒಳ್ಳೆಯದಂತೂ ಅವಶ್ಯವಾಗಿ ಇರುತ್ತದೆ. ಅದು ಒಳ್ಳೆಯ ಪಾಠವನ್ನೇ ಓದಿಸುತ್ತದೆ. ಬೇರೆಯವರ ಆವೇಶ ಇರಬಹುದು, ಅನ್ಯರು ಆವೇಶ ಮಾಡುತ್ತಿರಬಹುದು, ಆದರೆ ಇದರಿಂದ ತಾವು ಯಾವ ಶಿಕ್ಷಣವನ್ನು ಪಡೆಯುತ್ತಿದ್ದೀರಿ? ಅವರು ಎಷ್ಟೆಷ್ಟು ಆವೇಶ ಮಾಡುತ್ತಾರೋ ಅಷ್ಟಷ್ಟೇ  ತಮಗೆ ಧೈರ್ಯವನ್ನು ಕಲಿಸುತ್ತದೆ, ಸಹನಶೀಲತೆಯನ್ನು ಕಲಿಸುತ್ತದೆ.  ಆದ್ದರಿಂದ 'ಏನಾಗುತ್ತಿದೆಯೋ ಅದು ಒಳ್ಳೆಯದು, ಏನಾಗುವುದಿದೆಯೋ ಅದು ಇನ್ನೂ ಒಳ್ಳೆಯದು' ಎಂದು ಹೇಳಲಾಗುವುದು. ಒಳ್ಳೆಯದನ್ನೇ ತೆಗೆದುಕೊಳ್ಳುವ ಬುದ್ಧಿ ಇರಬೇಕು ಅಷ್ಟೇ. ಕೆಟ್ಟದನ್ನು ನೋಡದೆ ಕೇವಲ ಒಳ್ಳೆಯದನ್ನು ತೆಗೆದುಕೊಳ್ಳಿ. ಇದರಿಂದಲೇ ಅಂಕಗಳು ಸಿಗುತ್ತವೆ ಅಲ್ಲವೇ?

ನಾಲ್ಕೂ ವಿಷಯಗಳಲ್ಲಿ ಸಮಾನ ರೂಪದಲ್ಲಿ ನಿಶ್ಚಯ ಇದೆಯಲ್ಲವೇ? ಕೆಲವು ಮಕ್ಕಳು ಮತ್ತೇನು ಹೇಳುತ್ತಾರೆ ಎಂದರೆ 'ಬಾಬಾ, ನಿಮ್ಮ ಮೇಲಂತೂ ನಿಶ್ಚಯವಿದೆ, ಆದರೆ ನಮ್ಮ ಮೇಲೆ ನಮಗೆ ಇಷ್ಟೊಂದು ನಿಶ್ಚಯವಿಲ್ಲ. ಕೆಲವು ಸಲ ನಿಶ್ಚಯವಿರುತ್ತದೆ, ಕೆಲವು ಸಲ ನಿಶ್ಚಯವು ಕಡಿಮೆ ಆಗಿಬಿಡುತ್ತದೆ' ಎಂದು.  ನಂತರ ಅವರ ಭಾಷೆ ಏನಾಗುತ್ತದೆ? 'ಗೊತ್ತಿಲ್ಲ, ಗೊತ್ತಿಲ್ಲ, ಗೊತ್ತಿಲ್ಲ.....' ಎಂಬ ಒಂದೇ ಗೀತೆಯನ್ನು ಹಾಡುತ್ತಾರೆ, 'ಹೀಗೇಕೆ ಆಗುತ್ತಿದೆ ಗೊತ್ತಿಲ್ಲ, ನನ್ನ ಭಾಗ್ಯದಲ್ಲಿ ಏನಿದೆಯೋ ಗೊತ್ತಿಲ್ಲ, ತಂದೆಯ ಸಾಹಯ ಸಿಗುವುದೋ ಇಲ್ಲವೋ ಗೊತ್ತಿಲ್ಲ, ಸಫಲತೆ ಆಗುವುದೋ ಇಲ್ಲವೋ ಗೊತ್ತಿಲ್ಲ......'. ತಾವು ಮಾಸ್ಟರ್ ಸರ್ವಶಕ್ತಿವಂತ ರಾಗಿಯೂ ಈ ನಿಶ್ಚಯದಲ್ಲಿ ಕೊರತೆ ಇದ್ದಾಗ ಈ 'ಗೊತ್ತಿಲ್ಲ, ಗೊತ್ತಿಲ್ಲ....... ಎಂಬ ಹಾಡನ್ನು ಹಾಡುವಿರಿ. ಮತ್ತು ಮೂರನೆಯ ರೀತಿಯವರು ಏನು ಹೇಳುತ್ತಾರೆ? 'ಹೇ ಬಾಬಾ, ನಾವಂತೂ ನಿಮ್ಮನ್ನು ನೋಡಿ ವ್ಯಾಪಾರ ಮಾಡಿದೆವು. ನೀವು ನಮ್ಮವರು, ನಾವು ನಿಮ್ಮವರು' ಎಂದು. ಈ ಬ್ರಾಹ್ಮಣ ಪರಿವಾರದ ಜೊತೆಗೆ ನಾವು ವ್ಯಾಪಾರ ಮಾಡಲಿಲ್ಲ, ಬ್ರಾಹ್ಮಣ ಪರಿವಾರದ ಜೊತೆ ಹೊಂದಾಣಿಕೆ ಇಲ್ಲ, ತಾವು ಸರಿ ಇದ್ದೀರಿ. ಬ್ರಾಹ್ಮಣರ ಸಂಘಟನೆಯಲ್ಲಿ ನಡೆಯುವುದು ಬಹಳ ಕಷ್ಟಕರವಾಗಿದೆ, ಒಬ್ಬ ತಮ್ಮ ಜೊತೆಗೆ ನಡೆಯುವುದು ಸಹಜವಾಗಿದೆ' ಎಂದು. ಆಗ ಬಾಪ್‌ದಾದಾರವರು ಏನು ಹೇಳುತ್ತಾರೆ? ಬಾಪ್‌ದಾದಾರವರು ಮುಗುಳ್ನಗುತ್ತಾರೆ, ಇಂತಹ ಮಕ್ಕಳಿಗೆ ಬಾಪ್‌ದಾದಾರವರು ಒಂದು ಪ್ರಶ್ನೆ ಕೇಳುತ್ತಾರೆ. ಏಕೆಂದರೆ ಇಂತಹ ಆತ್ಮಗಳು ಪ್ರಸನ್ನಚಿತ್ತರಾಗಿರುವುದಿಲ್ಲ, 'ಇವರು ಹೀಗೇಕೆ ಇದ್ದಾರೆ? ಹೀಗೆ ಆಗುವುದೇ?' ಎಂಬುದಾಗಿ ಬಹಳ ಪ್ರಶ್ನೆ ಮಾಡುತ್ತಾರೆ. ಅವರು ಪ್ರಸನ್ನಚಿತ್ತ ಆತ್ಮರಲ್ಲ ಬದಲಿಗೆ ಪ್ರಶ್ನಚಿತ್ತ ಆತ್ಮರಾಗಿದ್ದಾರೆ. ಬಾಪ್‌ದಾದಾರವರು

ಅಂತವರನ್ನು 'ತಾವು ಮುಕ್ತಿಧಾಮದಲ್ಲಿರುವವರಾ ಅಥವಾ ಜೀವನ್ಮುಕ್ತಿಗೆ ಬರುವ ಆತ್ಮಗಳಾಗಿದ್ದೀರಾ?' ಎಂದು ಪ್ರಶ್ನಿಸುತ್ತಾರೆ. ಮುಕ್ತಿಯಲ್ಲಿದ್ದು ನಂತರ ಜೀವನ್ಮುಕ್ತಿಗೆ ಬರಬೇಕಲ್ಲವೇ? ಅಂದ ಮೇಲೆ ಜೀವನ್ಮುಕ್ತಿಯಲ್ಲಿ ಕೇವಲ ಬ್ರಹ್ಮಾರವರು ಮಾತ್ರ ಇರುತ್ತಾರೋ ಅಥವಾ ರಾಜಧಾನಿಯೂ ಇರುತ್ತದೋ? ಕೇವಲ ಬ್ರಹ್ಮಾ, ಸರಸ್ವತಿ ಮಾತ್ರ ರಾಜರಾಣಿಯರಾಗಿರುತ್ತಾರೆ? ಜೀವನ್ಮುಕ್ತಿಯ ಆಸ್ತಿಯನ್ನು ಪಡೆದುಕೊಳ್ಳ ಬೇಕಲ್ಲವೇ? 'ಆದಿಸನಾತನ ಧರ್ಮ ಮತ್ತು ಅನ್ಯ ಧರ್ಮಗಳಲ್ಲಿ ಬಹಳ ದೊಡ್ಡ ಅಂತರವಿದೆ' ಎಂದು ತಾವು ಚ್ಯಾಲೆಂಜ್ ಮಾಡುತ್ತೀರಿ. ಅವರು ಕೇವಲ ಧರ್ಮವನ್ನು ಸ್ಥಾಪನೆ ಮಾಡುತ್ತಾರೆ ಮತ್ತು ತಾವು ಧರ್ಮ ಹಾಗೂ ರಾಜ್ಯ ಎರಡನ್ನೂ ಸ್ಥಾಪನೆ ಮಾಡುತ್ತಿದ್ದೀರಿ. ಇದು ಪಕ್ಕಾ ಆಗಿದೆ ಅಲ್ಲವೆ? ಧರ್ಮದ ಸ್ಥಾಪನೆ ಮತ್ತು ರಾಜ್ಯದ ಸ್ಥಾಪನೆಯನ್ನೂ ಮಾಡುತ್ತಿದ್ದೀರಿ. ಅಂದಮೇಲೆ ರಾಜ್ಯದಲ್ಲಿ ಏನಿರುತ್ತದೆ? ಕೇವಲ ಒಬ್ಬ ರಾಜ ಒಬ್ಬ ರಾಣಿ ಮಾತ್ರ ಇರುವರೇ? ಕೇವಲ ಒಬ್ಬ ರಾಜ ರಾಣಿ ಮತ್ತು ಒಬ್ಬ ಮಗ ಅಥವಾ ಮಗಳು ಮಾತ್ರ ಇರುವ ಇಂತಹ ರಾಜ್ಯ ಇರುತ್ತದೆಯೇ? ಅಂದಮೇಲೆ ನಾವು ರಾಜಧಾನಿಯಲ್ಲಿ ಬರಬೇಕಾಗಿದೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ. ರಾಜಧಾನಿಯಲ್ಲಿ ಬರುವುದು ಎಂದರೆ ಬ್ರಾಹ್ಮಣ ಪರಿವಾರದಲ್ಲಿ ಸಂತುಷ್ಟರಾಗಿರುವುದು ಮತ್ತು ಸಂತುಷ್ಟರನ್ನಾಗಿ ಮಾಡುವುದು ಮತ್ತು ಶ್ರೇಷ್ಠ ಸಂಬಂಧದಲ್ಲಿ ಬರುವುದಾಗಿದೆ. **(15–04–1992)**

ನೋಡಿ, ತಾವು ಒಳ್ಳೆಯವರಾಗಿದ್ದೀರಿ ಆದ್ದರಿಂದಲೇ ಬಾಪ್‌ದಾದಾರವರು ನಿಮ್ಮನ್ನು ಇಷ್ಟಪಟ್ಟು ತಮ್ಮವರನ್ನಾಗಿ ಮಾಡಿಕೊಂಡಿದ್ದಾರೆ. ಒಳ್ಳೆಯವರಾಗಿದ್ದೀರಿ ಮತ್ತು ಸದಾ ಒಳ್ಳೆಯವರಾಗಿಯೇ ಇರುತ್ತೀರಿ. ಒಳ್ಳೆಯದು ಒಳ್ಳೆಯದು ಎಂದು ತಿಳಿದುಕೊಳ್ಳುವುದರಿಂದ ಒಳ್ಳೆಯವರಾಗಿಯೇ ಬಿಡುತ್ತೀರಿ. ಬಾಪ್‌ದಾದಾರವರು ಪ್ರತಿಯೊಂದು ಮಗುವಿನಲ್ಲೂ ವಿಶೇಷತೆಯನ್ನೇ ನೋಡುತ್ತಾರೆ. ವಿಶೇಷತೆಯನ್ನು ನೋಡುತ್ತಾ, ವರ್ಣನೆ ಮಾಡುತ್ತಾ ಮಾಡುತ್ತಾ ನೀವು ವಿಶೇಷರಾಗಿಯೇ ಬಿಡುತ್ತೀರಿ. ನಿನ್ನೆ ಆಗಿದ್ದಿರಿ, ಈ ದಿನವೂ ಆಗಿದ್ದೀರಿ, ನಾಳೆ ಮತ್ತೆ ಆಗುವಿರಿ. ಈ ದಿನ ಮತ್ತು ನಾಳೆಯಲ್ಲಿ ಇಡೀ ಡ್ರಾಮಾ ಬಂದು ಬಿಟ್ಟಿದೆ. ಎಷ್ಟೆಷ್ಟು ಸಂಪೂರ್ಣರಾಗುತ್ತಾ ಹೋದಂತೆ ಈ ಸ್ಮೃತಿ ಸ್ಪಷ್ಟವಾಗುತ್ತಾ ಹೋಗುತ್ತದೆ. ಎಷ್ಟು ಸ್ಮೃತಿ ಸ್ಪಷ್ಟವಾಗುತ್ತದೆಯೋ ಅಷ್ಟು ನ್ಯಾಚುರಲ್ ಆಗಿ (ಸ್ವಾಭಾವಿಕವಾಗಿ) ನಶೆ ಇರುತ್ತದೆ. **(24–09–1992)**

ಈ ವಿದ್ಯೆಯಲ್ಲಿ ಸಬ್ಜೆಕ್ಟ್‌ಗಳು (ವಿಷಯಗಳು) ಹೆಚ್ಚಾಗಿ ಇಲ್ಲ. ನಾಲ್ಕು ವಿಷಯಗಳನ್ನು ಧಾರಣೆ ಮಾಡುವುದರಲ್ಲಿ ಕಷ್ಟವೇನಿದೆ? ಮತ್ತು ನಾಲ್ಕೂ ವಿಷಯಗಳಲ್ಲಿ ಪರಸ್ಪರ ಸಂಬಂಧ ಇದೆ. ಒಂದುವೇಳೆ ಒಂದು ಜ್ಞಾನದ ವಿಷಯವನ್ನು ಸಂಪೂರ್ಣವಾಗಿ ವಿಧಿಪೂರ್ಣವಾಗಿ ಧಾರಣೆ ಮಾಡುವುದು ಅಂದರೆ ಜ್ಞಾನದ ಒಂದೊಂದು ಶಬ್ಧವನ್ನು ಸ್ವರೂಪದಲ್ಲಿ ತರುವುದಾಗಿದೆ. ಅಂದಾಗ ಜ್ಞಾನ ಇರುವುದೇ ಮುಖ್ಯವಾಗಿ ಎರಡು ಮಾತುಗಳಲ್ಲಿ. ಇದನ್ನು ರಚಯಿತ ಮತ್ತು ರಚನೆ ಅಥವಾ ಅಲಫ್ (ತಂದೆ) ಮತ್ತು ಬೇ (ಆಸ್ತಿ) ಎಂದು ಹೇಳಲಾಗುತ್ತದೆ. ರಚಯಿತ ತಂದೆಯ ತಿಳುವಳಿಕೆ ಬಂದುಬಿಟ್ಟಿತು ಎಂದರೆ ಪರಮಾತ್ಮನ ಪರಿಚಯ, ಸಂಬಂಧ ಸ್ಪಷ್ಟವಾಯಿತು ಮತ್ತು ರಚನೆ ಅಂದರೆ ಮೊದಲ ರಚನೆಯಾದ 'ನಾನು ಶ್ರೇಷ್ಠ ಆತ್ಮನಾಗಿದ್ದೇನೆ ಮತ್ತು ಎರಡನೆಯದಾಗಿ ಆತ್ಮನಾದ ನನಗೆ ಈ ಬೇಹದ್ದಿನ ರಚನೆ ಅಂದರೆ ಬೇಹದ್ದಿನ ಡ್ರಾಮಾದಲ್ಲಿ, ಇಡೀ ಕಲ್ಪದಲ್ಲಿ, ಏನೇನು ಪಾತ್ರವಿದೆ ಎಂಬ ಈ ಎಲ್ಲಾ ಜ್ಞಾನವು ಎಲ್ಲರಿಗೂ ಇದೆಯಲ್ಲವೇ? ಆದರೆ ಶ್ರೇಷ್ಠ ಆತ್ಮ ಸ್ವರೂಪನಾಗಿ ಪ್ರತಿ ಸಮಯ ಶ್ರೇಷ್ಠ ಪಾತ್ರವನ್ನು ಅಭಿನಯಿಸುವುದರಲ್ಲಿ ಕೆಲವೊಮ್ಮೆ ನೆನಪಿರುತ್ತದೆ, ಕೆಲವೊಮ್ಮೆ ಮರೆತುಬಿಡುತ್ತೀರಿ. ಒಂದುವೇಳೆ ಈ ಎರಡು ಶಬ್ದಗಳ ಜ್ಞಾನವಿದ್ದಲ್ಲಿ, ಯೋಗವೂ ಸಹ ಈ ಎರಡು ಶಬ್ದಗಳ ಆಧಾರದ ಮೇಲೆಯೇ ಇದೆ ಅಲ್ಲವೇ? ಜ್ಞಾನದ ಜೊತೆ ಯೋಗದ ಸಂಬಂಧ ಸ್ವತಃವಾಗಿ ಇದ್ದೇ ಇದೆ. ಯಾರು ಜ್ಞಾನೀ ಆತ್ಮಗಳಾಗಿರುತ್ತಾರೋ ಅವರು ಅವಶ್ಯವಾಗಿ ಯೋಗೀ ಆತ್ಮಗಳಾಗಿಯೇ ಇರುತ್ತಾರೆ. ಅಂದಾಗ ಜ್ಞಾನ ಮತ್ತು ಯೋಗದ ಸಂಬಂಧ ಇದೆಯಲ್ಲವೇ? ಮತ್ತು ಯಾರು ಜ್ಞಾನಿ ಮತ್ತು ಯೋಗಿಯಾಗಿರುತ್ತಾರೋ ಅಂತಹವರ ಧಾರಣೆ ಶ್ರೇಷ್ಠವಾಗಿರು ವುದೋ ಅಥವಾ ಬಲಹೀನವಾಗಿರುವುದೋ? ಸ್ವತಃವಾಗಿ, ಸಹಜವಾಗಿ ಶ್ರೇಷ್ಠ ವಾಗಿರುತ್ತದೆ ಅಲ್ಲವೇ? ಅಥವಾ ಧಾರಣೆಯಲ್ಲಿ ಕಷ್ಟವಾಗುತ್ತದೆಯೇ? ಯಾರು ಜ್ಞಾನೀ ಆತ್ಮ, ಯೋಗೀ ಆತ್ಮರಾಗಿರುತ್ತಾರೋ, ಅವರು ಧಾರಣೆಯಲ್ಲಿ ಬಲಹೀನರಾಗಿರಲು ಸಾಧ್ಯವೇ? ಇಲ್ಲ. ಜ್ಞಾನಿ ಯೋಗಿ ಆಗಿಲ್ಲದಿದ್ದರೆ ಬಲಹೀನರಾಗಿರುತ್ತಾರೆ. ಹಾಗಾದರೆ ಜ್ಞಾನ – ಯೋಗ ಇಲ್ಲವೇ? ಜ್ಞಾನವಂತೂ ಇದೆ ಆದರೆ ಜ್ಞಾನೀ ತೂ ಆತ್ಮನ ಸ್ಥಿತಿ ಇಲ್ಲ. ಯೋಗವನ್ನು ಜೋಡಿಸುವವರಾಗಿ ದ್ದೀರಿ ಆದರೆ ಯೋಗಿ ಜೀವನದವರಾಗಿಲ್ಲ. ಜೀವನವು ಸದಾ ಇರುತ್ತದೆ ಹಾಗೂ ಜೀವನವು ನ್ಯಾಚುರಲ್ (ಸ್ವಾಭಾವಿಕವಾಗಿ) ಇರುತ್ತದೆ. ಯೋಗಿ ಜೀವನ ಎಂದರೆ ಓರಿಜಿನಲ್ ನೇಚರ್ (ಮೂಲ ಗುಣ) ಯೋಗಿಯದಾಗಿರುತ್ತದೆ.

'ಅವರೇ ಕಲ್ಪದ ಹಿಂದಿನ ತಂದೆಯು ಪುನ: ಬಂದು ಮಿಲನ ಮಾಡುತ್ತಿದ್ದಾರೆ' ಎಂದು ತಂದೆಯ ಮೇಲೆ ನಿಶ್ಚಯವಿದೆ. ಇದೇ ರೀತಿ ತಮ್ಮ ಮೇಲೆ ತಮಗೂ 'ನಾವು ಸಹ ಅದೇ ಕಲ್ಪದ ಹಿಂದಿನ, ತಂದೆಯ ಜೊತೆಯಲ್ಲಿ ಪಾತ್ರವನ್ನು ಅಭಿನಯಿಸುವ ವಿಶೇಷ ಆತ್ಮಗಳಾಗಿದ್ದೇವೆ' ಎನ್ನುವ ನಿಶ್ಚಯವಿದೆಯೇ? ಅಥವಾ ತಂದೆಯ ಮೇಲೆ ನಿಶ್ಚಯ ಜಾಸ್ತಿ ಇದೆ, ಸ್ವಯಂ ತಮ್ಮ ಮೇಲೆ ಕಡಿಮೆ ಇದೆಯೇ? ಒಳ್ಳೆಯದು, ಡ್ರಾಮಾದಲ್ಲಿ ಏನೇ ಆದರೂ ಅದರಲ್ಲೂ ಪಕ್ಕಾ ನಿಶ್ಚಯವಿದೆಯೇ? ಡ್ರಾಮಾದಲ್ಲಿ ಏನಾಗುವುದೋ ಕಲ್ಯಾಣಕಾರಿ ಯುಗದ ಕಾರಣದಿಂದ ಎಲ್ಲವೂ ಕಲ್ಯಾಣಕಾರಿಯಾಗಿಯೇ ಆಗುತ್ತದೆ ಅಥವಾ ಸ್ವಲ್ಪ ಅಕಲ್ಯಾಣವಾಗಿಯೂ ಆಗುವುದೇ? ಯಾರಾದರೂ ಸತ್ತರೆ ಅದರಲ್ಲಿ ಕಲ್ಯಾಣಕಾರಿಯಾಗಿಯೇ ಇರುತ್ತದೆ. ಅಥವಾ ಸ್ವಲ್ಪ ಅಕಲ್ಯಾಣವಾಗಿಯೂ ಅಗುವುದೇ? ಯಾರಾದರೂ ಸತ್ತರೆ ಅದರಲ್ಲಿ ಕಲ್ಯಾಣ ಇದೆಯೇ? ಅವರು ಸಾಯುತ್ತಿದ್ದಾರೆ ಮತ್ತು ತಾವು ಕಲ್ಯಾಣವೆನ್ನುತ್ತೀರಿ, ಕಲ್ಯಾಣವಿದೆಯೇ? ವ್ಯಾಪಾರದಲ್ಲಿ ನಷ್ಟವಾಗಿದೆ ಎಂದರೆ ಇದು ಕಲ್ಯಾಣವೇ? ನಷ್ಟವೂ ಕಲ್ಯಾಣಕಾರಿಯಾಗಿದೆ. ಜ್ಞಾನಕ್ಕೆ ಬರುವ ಮೊದಲು ತಮ್ಮ ಮುಂದೆ ಬರದಿದ್ದ ವಿಷಯಗಳು ಜ್ಞಾನಕ್ಕೆ ಬಂದ ನಂತರ ಆಯಿತು ಎಂದಾಗ ಇದರಲ್ಲಿ ಕಲ್ಯಾಣವಿದೆಯೇ? ಮಾಯೆಯು ಮೇಲೆ ಕೆಳಗೆ ಮಾಡುತ್ತಿದೆ, ಇದರಲ್ಲಿ ಕಲ್ಯಾಣವಿದೆಯೇ? ಇದರಲ್ಲಿ ಯಾವ ಕಲ್ಯಾಣವಿದೆ? ಮಾಯೆಯು ತಮ್ಮನ್ನು ಅನುಭವಿಗಳನ್ನಾಗಿ ಮಾಡುತ್ತದೆ. ಒಳ್ಳೆಯದು. ಅಂದಮೇಲೆ ಡ್ರಾಮಾದ ಮೇಲೆಯೂ ಸಹ ಇಂತಹ ಅಟಲ ನಿಶ್ಚಯವಿದೆಯೇ? ನೋಡುವುದಕ್ಕೆ ಒಳ್ಳೆಯ ಮಾತಾಗಿ ಕಂಡು ಬರದಿದ್ದರೂ, ಅದರಲ್ಲಿ ಯಾವ ಒಳ್ಳೆಯ ಮಾತು ಅಡಕವಾಗಿದೆ ಎಂಬುದನ್ನು ತಾವು ಗುರುತಿಸಬೇಕಾಗಿದೆ. ಹೇಗೆ ಕೆಲವು ವಸ್ತುಗಳ ಹೊರಗಿನ ಕವರ್ ಚೆನ್ನಾಗಿರುವುದಿಲ್ಲ, ಆದರೆ ಒಳಗೆ ಬಹಳ ಚೆನ್ನಾಗಿರುವ ವಸ್ತು ಇರುತ್ತದೆ. ಹೊರನೋಟಕ್ಕೆ ಇದರೊಳಗೆ ಏನಿದೆಯೋ ಗೊತ್ತಿಲ್ಲ ಎನ್ನುವಂತಿರುತ್ತದೆ. ಆದರೆ ತೆರೆದು ಒಳಗೆ ನೋಡಿದಾಗ ಬಹಳ ಚೆನ್ನಾಗಿರುವ ವಸ್ತು ಕಂಡುಬರುತ್ತದೆ. ಹಾಗೆಯೇ ಡ್ರಾಮಾದ ಪ್ರತಿಯೊಂದು ಮಾತನ್ನು ಗುರುತಿಸುವ ಬುದ್ಧಿಯು ಬೇಕಾಗಿದೆ. ನಿಶ್ಚಯದ ಪರಿಚಯ ಇಂತಹ ಸಮಯದಲ್ಲಿ ಆಗುತ್ತದೆ. ಪರಿಸ್ಥಿತಿ ಎದುರಿನಲ್ಲಿ ಬರಲಿ, ಮತ್ತು ಆ ಸಮಯದಲ್ಲಿ ನಿಶ್ಚಯದ ಸ್ಥಿತಿ ಇದೆ ಎಂದಾಗ 'ನಿಶ್ಚಯ ಬುದ್ಧಿ ವಿಜಯಿ' ಗಳೆಂದು ಹೇಳಲಾಗುತ್ತದೆ. ಅಂದಾಗ ಮೂರರ ಮೇಲೂ ಅಂದರೆ ತಂದೆಯ ಮೇಲೆ, ಸ್ವಯಂ ತಮ್ಮ ಮೇಲೆ ಮತ್ತು ಡ್ರಾಮಾದ ಮೇಲೆ ಪಕ್ಕಾ ನಿಶ್ಚಯವಿರಬೇಕು. ನೋವಿನಿಂದ ನರಳುತ್ತಿರುತ್ತೀರಿ ಮತ್ತು 'ವಾಹ್ ಡ್ರಾಮಾ ವಾಹ್' ಎಂದು ಹೇಳುವಿರಿ. ಅಥವಾ ಅಂತಹ ಸಮಯದಲ್ಲಿ ಚೀರಾಡುವಿರಾ ಅಥವಾ ವಾಹ್ ವಾಹ್ ಎಂದು ಹೇಳುವಿರಾ? ಅಯ್ಯೋ ಬಾಬಾ ಕಾಪಾಡಿ ಎಂದು ಹೇಳುವುದಿಲ್ಲ ತಾನೇ? ನಿಶ್ಚಯವಿದೆ ಎಂದರೆ, ನಿಶ್ಚಯದ ಅರ್ಥವೇ ಆಗಿದೆ – ಸಂಶಯದ ಹೆಸರು ಗುರುತೂ ಇರಬಾರದು. ಏನೇ ಆಗಲೀ ತಮ್ಮ ಅಟಲ–ಅಚಲ ನಿಶ್ಚಯ ಬುದ್ಧಿಯನ್ನು ಯಾವುದೇ ಪರಿಸ್ಥಿತಿಯೂ ಹಲ್‌ಚಲ್‌ನಲ್ಲಿ (ಏರುಪೇರಿನಲ್ಲಿ) ತರುವುದಿಲ್ಲ. ಏಕೆಂದರೆ ಏರುಪೇರಿನಲ್ಲಿ ಬರುವುದು ಎಂದರೆ ಬಲಹೀನರಾಗುವುದು. **(13–10–1992)**

ನಿಶ್ಚಿಂತ ಚಕ್ರವರ್ತಿಗಳ ವಿಶೇಷತೆ – ಅವರು ಸದಾ ಪ್ರಶ್ನಚಿತ್ತರ ಬದಲಿಗೆ ಪ್ರಸನ್ನಚಿತ್ತರಾಗಿರುತ್ತಾರೆ. ಅವರು ಪ್ರತಿ ಕರ್ಮದಲ್ಲಿ – ಸ್ವಯಂನ ಸಂಬಂಧದಲ್ಲಿ, ಸರ್ವರ ಸಂಬಂಧದಲ್ಲಿ ಅಥವಾ ಪ್ರಕೃತಿಯ ಸಂಬಂಧದಲ್ಲಿ, ಯಾವುದೇ ಸಮಯದಲ್ಲಿ, ಯಾವುದೇ ಮಾತಿನಲ್ಲಿ, ಸಂಕಲ್ಪ ಮಾತ್ರದಲ್ಲೂ 'ಇದು ಹೀಗೇಕೆ?' ಅಥವಾ 'ಇದೇನಾಗುತ್ತಿದೆ'? 'ಹೀಗೂ ಅಗುವುದುಂಟೆ'? ಎನ್ನುವ ಪ್ರಶ್ನಾರ್ಥಕ ಚಿನ್ಹೆ ಇರುವುದಿಲ್ಲ. ಪ್ರಸನ್ನಚಿತ್ತ ಆತ್ಮಗಳ ಸಂಕಲ್ಪದಲ್ಲಿ ಪ್ರತಿಯೊಂದು ಕರ್ಮವನ್ನು ಮಾಡುತ್ತಾ, ನೋಡುತ್ತಾ, ಕೇಳುತ್ತಾ, ಯೋಚಿಸುತ್ತಾ ಇದ್ದಾಗಲೂ 'ಏನಾಗುತ್ತಿದೆಯೋ ಅದು ನನಗಾಗಿ ಒಳ್ಳೆಯದಾಗುತ್ತಿದೆ ಮತ್ತು ಒಳ್ಳೆಯದೇ ಆಗುತ್ತದೆ. ಪ್ರಶ್ನಚಿತ್ತ ಆತ್ಮಗಳು 'ಏನು', 'ಏಕೆ', ಹೀಗೆ', 'ಹಾಗೆ' – ಎನ್ನುವ ಸಂದಿಗ್ಧಗಳಲ್ಲಿ ಸ್ವಯಂ ತಮ್ಮನ್ನು ತಾವು ನಿಶ್ಚಿಂತೆಯಿಂದ ಚಿಂತೆಯಲ್ಲಿ ತಂದುಕೊಂಡು ಬಿಡುತ್ತಾರೆ. ಮತ್ತು ನಿಶ್ಚಿಂತ ಆತ್ಮ ಕೆಟ್ಟದನ್ನು ಸಹ ಒಳ್ಳೆಯದರಲ್ಲಿ ಪರಿವರ್ತನೆ ಮಾಡಿಕೊಂಡು ಬಿಡುತ್ತಾರೆ. ಈ ಕಾರಣದಿಂದಾಗಿ ಅವರು ಸದಾ ಪ್ರಸನ್ನರಾಗಿರುತ್ತಾರೆ.

ಇಂದಿನ ವಿಜ್ಞಾನದ ಸಾಧನಗಳಿಂದ ಯಾವುದು ನಿರುಪಯೋಗಿ –ಕೆಟ್ಟು ಹೋಗಿರುವ ವಸ್ತುಗಳಿರುತ್ತವೆಯೋ ಅವುಗಳನ್ನು ಸಹ ಒಳ್ಳೆಯ ವಸ್ತುಗಳನ್ನಾಗಿ ಪರಿವರ್ತನೆ ಮಾಡಿ ಒಳ್ಳೆಯ ವಸ್ತುಗಳನ್ನಾಗಿ ಮಾಡಿಬಿಡುತ್ತಾರೆ. ಪ್ರಸನ್ನಚಿತ್ತ ಆತ್ಮಗಳು ಶಾಂತಿಯ ಶಕ್ತಿಯಿಂದ ಕೆಟ್ಟ ಮಾತಿರಲಿ, ಕೆಟ್ಟ ಸಂಬಂಧವನ್ನು ಅನುಭವ ಮಾಡುತ್ತಿರಲಿ, ಆದರೆ ಆ ಕೆಟ್ಟದನ್ನೂ ಸಹ ಒಳ್ಳೆಯದರಲ್ಲಿ ಪರಿವರ್ತನೆ ಮಾಡಿ ಸ್ವಯಂನಲ್ಲೂ ಧಾರಣೆ ಮಾಡುತ್ತಾರೆ ಮತ್ತು ಅನ್ಯರಿಗೂ ಸಹ ತಮ್ಮ ಶುಭ ಭಾವನೆಯ ಶ್ರೇಷ್ಠ ಸಂಕಲ್ಪದಿಂದ ಕೆಟ್ಟದ್ದನ್ನು ಬದಲಾವಣೆ ಮಾಡಿ ಒಳ್ಳೆಯದನ್ನು ಧಾರಣೆ ಮಾಡಿಕೊಳ್ಳುವ ಶಕ್ತಿಯನ್ನು

ಕೊಡುತ್ತಾರೆ. ಕೆಲವು ಮಕ್ಕಳು 'ಕೆಟ್ಟ ಮಾತು ಅಥವಾ ಕೆಟ್ಟ ಸಂಗತಿ ಇದ್ದಾಗ ಕೆಟ್ಟದನ್ನು ಕೆಟ್ಟದು ಎಂದು ಹೇಳಬೇಕಲ್ಲವೆ? ಎಂದು ಯೋಚಿಸುತ್ತಾರೆ ಮತ್ತು ಹೇಳುತ್ತಾರೆ. ಆದರೆ ತಪ್ಪನ್ನು ತಪ್ಪು ಎಂದು ತಿಳಿದುಕೊಳ್ಳುವುದು, ಇದು ತಿಳಿಯುವ ಲೆಕ್ಕದಲ್ಲಿ ತಿಳಿದುಕೊಂಡಿರಾ? ಅಥವಾ ಸರಿ ಮತ್ತು ತಪ್ಪು ಎಂದು ತಿಳಿದುಕೊಳ್ಳುವುದು, ಅರ್ಥ ಮಾಡಿಕೊಳ್ಳುವುದು ಬೇರೆ ಮಾತಾಗಿದೆ, ಆದರೆ ನಾಲೆಡ್ಜ್‌ಫುಲ್ (ಜ್ಞಾನಪೂರ್ಣ) ರೂಪದಿಂದ ತಿಳಿದುಕೊಳ್ಳುವವರು, ತಿಳಿದುಕೊಂಡ ನಂತರ ತಮ್ಮ ಬುದ್ಧಿಯಲ್ಲಿ ಯಾರೇ ಆತ್ಮಗಳ ಕೆಟ್ಟದ್ದನ್ನು ಕೆಟ್ಟ ರೂಪದಲ್ಲಿ ಧಾರಣೆ ಮಾಡಿಕೊಳ್ಳುವುದಿಲ್ಲ. ತಿಳಿದುಕೊಳ್ಳುವುದು ಬೇರೆ ಮಾತಾಗಿದೆ, ತಿಳಿದುಕೊಳ್ಳುವ ವರೆಗೂ ಸರಿಯಿದೆ, ಆದರೆ ಸ್ವಯಂನಲ್ಲಿ ಅಥವಾ ತಮ್ಮ ಮನಸ್ಸಿನಲ್ಲಿ, ತಮ್ಮ ಬುದ್ಧಿಯಲ್ಲಿ, ತಮ್ಮ ವೃತ್ತಿಯಲ್ಲಿ, ತಮ್ಮ ವಾಣಿಯಲ್ಲಿ ಬೇರೆಯವರ ಕೆಟ್ಟದ್ದನ್ನು ಕೆಟ್ಟ ರೂಪದಲ್ಲಿ ಧಾರಣೆ ಮಾಡಿಕೊಳ್ಳಬಾರದಾಗಿದೆ, ತಿಳಿದುಕೊಳ್ಳಬಾರದಾಗಿದೆ. ಆದ್ದರಿಂದ ತಿಳಿದುಕೊಳ್ಳುವುದರಲ್ಲಿ ಮತ್ತು ಧಾರಣೆ ಮಾಡಿಕೊಳ್ಳುವುದರಲ್ಲಿ ಅಂತರವಿದೆ. **(21–11–1992)**

**ದಾದಿಯರೊಂದಿಗೆ ಭೇಟಿ:** ಬಾಪ್‌ದಾದಾರವರು ಒಂದು ಸೆಕೆಂಡಿನಲ್ಲಿ ಎಷ್ಟು ಮಾತನ್ನು ಮಾತನಾಡಬಹುದು? ಸಮಯ ಕಡಿಮೆ ಮತ್ತು ಮಾತು ಅಧಿಕ. ಏಕೆಂದರೆ ಫರಿಶ್ತಾಗಳು ಸನ್ನೆಯಿಂದಲೇ ತಿಳಿದುಕೊಳ್ಳುತ್ತಾರೆ. ಅಂದಾಗ ಈ ದೃಷ್ಟಿಯ ಭಾಷೆ ಫರಿಶ್ತಾತನದ ಗುರುತಾಗಿದೆ. ಬಾಪ್‌ದಾದಾರವರು ಇದನ್ನೂ ಸಹ ಕಲಿಸುತ್ತಾ ಇರುತ್ತಾರೆ. ಇಂದಿನ ಸಮಯಾನುಸಾರವಾಗಿ ಒಂದುವೇಳೆ ವಾಣಿಯ ಮೂಲಕ ಯಾರಿಗಾದರೂ ಹೇಳುವಾಗ ಸಮಯವೂ ಬೇಕಾಗುತ್ತದೆ, ಸಾಹಸವೂ ಬೇಕಾಗುತ್ತದೆ. ಒಂದುವೇಳೆ ಮಧುರ ದೃಷ್ಟಿಯಿಂದ ತಿಳಿಸಿಕೊಡುವ ಪ್ರಯತ್ನ ಮಾಡಿದಾಗ ಎಷ್ಟೊಂದು ಸಹಜವಾಗಿ ಬಿಡುತ್ತದೆ. ಸಮಯಾನುಸಾರವಾಗಿ ಈ ದೃಷ್ಟಿಯಿಂದ ಪರಿವರ್ತನೆಯಾಗುವುದು ಮತ್ತು ಪರಿವರ್ತನೆ ಮಾಡುವುದು – ಇದೇ ಕೆಲಸಕ್ಕೆ ಬರುತ್ತದೆ. ಎಲ್ಲರೂ 'ನನಗೆ ಮೊದಲೇ ತಿಳಿದಿದೆ' ಎಂದು ಹೇಳುತ್ತಾರೆ. ಆದರೆ ಒಂದು ನಿಮಿಷದ ಮಧುರ ದೃಷ್ಟಿ ಮತ್ತು ಶುಭ ವೃತ್ತಿಯು ಒಂದು ಗಂಟೆ ತಿಳಿಸಿಕೊಡುವಂತಹ ಕಾರ್ಯವನ್ನು ಮಾಡುವಂತಹದ್ದಾಗಿದೆ. ಇಂದಿನ ಸಮಯದಲ್ಲಿ ಈ ವಿಧಿಯೇ ಶ್ರೇಷ್ಠವಾಗಿದೆ ಮತ್ತು ಅಂತ್ಯ ಸಮಯದಲ್ಲೂ ಈ ವಿಧಿಯೇ ಕೆಲಸಕ್ಕೆ ಬರುತ್ತದೆ. ಫಾಲೋ ಫಾದರ್ ಮಾಡುತ್ತಾ ಹೋಗುವಿರಿ. ವಿಘ್ನಗಳನ್ನು ಸಹ ಮನೋರಂಜನೆ ಎಂದು ತಿಳಿದುಕೊಂಡು ನಡೆಯುತ್ತಾ ಇರುತ್ತೀರಿ. ವಾಹ್ ಡ್ರಾಮಾ ವಾಹ್. ಯಾವುದೇ ಪ್ರಕಾರದ ದೃಶ್ಯವಿರಲಿ, 'ವಾಹ್ ವಾಹ್' ಎಂಬುದೇ ಆಗಿರಲಿ. ಒಳ್ಳೆಯದಾಗಿದೆ, ಬಾಪ್‌ದಾದಾರವರು ಮಕ್ಕಳ ಧೈರ್ಯ, ಉಮ್ಮಂಗ–ಉತ್ಸಾಹವನ್ನು ನೋಡಿ ಖುಷಿಯಾಗುತ್ತಿದ್ದಾರೆ ಮತ್ತು ಮುಂದುವರೆಸುತ್ತಾ ಇರುತ್ತಾರೆ. ಇದೇ ನಿಮಿತ್ತರಾಗುವುದಕ್ಕೆ ಲಿಫ್ಟ್ ಸಿಗುವ ವಿಶೇಷ ಗಿಫ್ಟ್ ಆಗಿದೆ. **(30–11–1992)**

ಸ್ವಯಂ ತಮ್ಮನ್ನು ಸದಾ ವಿಘ್ನ–ವಿನಾಶಕ ಆತ್ಮ ಎಂದು ಅನುಭವ ಮಾಡುವಿರೇ? ಅಥವಾ ವಿಘ್ನ ಬಂದರೆ ಗಾಬರಿಪಡುವವರಾಗಿದ್ದೀರಾ? ವಿಘ್ನ ವಿನಾಶಕ ಆತ್ಮ ಸದಾ ಸರ್ವ ಶಕ್ತಿಗಳಿಂದ ಸಂಪನ್ನರಾಗಿರುತ್ತಾರೆ. ವಿಘ್ನಗಳಿಗೆ ವಶರಾಗುವವರಲ್ಲ, ವಿಘ್ನ–ವಿನಾಶಕರಾಗಿದ್ದೀರಿ. ಎಂದಾದರೂ ವಿಘ್ನಗಳ ಸ್ವಲ್ಪ ಪ್ರಭಾವವೇನಾದರೂ ಬೀಳುತ್ತದೆಯೇ? ಎಂದಾದರೂ ಯಾವುದೇ ಪ್ರಕಾರದ ವಿಘ್ನವು ಬಂದಲ್ಲಿ, 'ವಿಘ್ನದ ಕೆಲಸವಾಗಿದೆ ಬರುವುದು ಮತ್ತು ನಮ್ಮ ಕಾರ್ಯವಾಗಿದೆ ವಿಘ್ನ–ವಿನಾಶಕರಾಗುವುದಾಗಿದೆ' ಎಂಬುದನ್ನು ಸದಾ ಸ್ಮೃತಿಯಲ್ಲಿ ಇಟ್ಟುಕೊಳ್ಳಿರಿ. ತಮ್ಮ ಹೆಸರೇ 'ವಿಘ್ನ–ವಿನಾಶಕ' ಎಂಬುದಾಗಿದ್ದಾಗ, ವಿಘ್ನ ಬಂದರೆ ತಾನೇ ವಿನಾಶ ಮಾಡಲು ಸಾಧ್ಯ? ಆದ್ದರಿಂದ 'ನನ್ನ ಹತ್ತಿರ ವಿಘ್ನ ಏಕೆ ಬರುತ್ತದೆ' ಎಂಬುದಾಗಿ ಎಂದಿಗೂ ಯೋಚಿಸಬೇಡಿ. ವಿಘ್ನ ಬರಲೇ ಬೇಕಾಗಿದೆ ಮತ್ತು ನಾವು ವಿಜಯಿಗಳು ಆಗಲೇ ಬೇಕಾಗಿದೆ. ಅಂದಾಗ ವಿಘ್ನ ವಿನಾಶಕ ಆತ್ಮ ಎಂದಿಗೂ ವಿಘ್ನಗಳಿಗೆ ಹೆದರುವುದೂ ಇಲ್ಲ ಮತ್ತು ವಿಘ್ನಗಳಿಂದ ಎಂದಿಗೂ ಸೋಲುವುದೂ ಇಲ್ಲ. ಇಂತಹ ಧೈರ್ಯವಿದೆಯೇ? ಏಕೆಂದರೆ ಎಷ್ಟು ಧೈರ್ಯವನ್ನು ಇಡುತ್ತೀರೋ, ತಮ್ಮ ಒಂದು ಪಟ್ಟು ಧೈರ್ಯಕ್ಕೆ ಸಾವಿರ ಪಟ್ಟು ತಂದೆಯ ಸಹಾಯ ಸಿಗುತ್ತದೆ. ಇಷ್ಟೊಂದು ತಂದೆಯ ಸಹಯೋಗ ಇದೆ ಎಂದಾಗ ವಿಘ್ನ ಏನು ಕಷ್ಟವಾಗುತ್ತದೆ? ಆದ್ದರಿಂದ ಎಷ್ಟೇ ದೊಡ್ಡ ವಿಘ್ನವಾದರೂ, 'ವಿಘ್ನವಲ್ಲ, ಆದರೆ ಆಟವಾಗಿದೆ' ಎನ್ನುವಂತೆ ಅನುಭವವಾಗು ತ್ತದೆ. ಅಂದ ಮೇಲೆ ಆಟದಲ್ಲಿ ಎಂದಾದರೂ ಹೆದರುವುದುಂಟೆ? ಆಟ ಆಡುವುದರಲ್ಲಿ ಖುಷಿ ಇರುತ್ತದೆ. ಈ ರೀತಿ ಆಟ ಎಂದು ತಿಳಿದುಕೊಂಡಾಗ ಹೆದರುವುದಿಲ್ಲ, ಬದಲಿಗೆ ಖುಷಿ ಖುಷಿಯಿಂದ ವಿಜಯಿಗಳಾಗುವಿರಿ. ಸದಾ ಡ್ರಾಮಾದ ಜ್ಞಾನದ ಸ್ಮೃತಿಯಿಂದ ಪ್ರತಿ ವಿಘ್ನವನ್ನು 'ನಥಿಂಗ್ ನ್ಯೂ' (ಇದೇನು ಹೊಸದಲ್ಲ) ಎಂದು ತಿಳಿಯುವಿರಿ. ಹೊಸ ಮಾತಲ್ಲ, ಬಹಳ ಹಳೆಯದು.

ಎಷ್ಟು ಬಾರಿ ವಿಜಯಿಯಾಗಿದ್ದೀರಾ? (ಅನೇಕ ಬಾರಿ) ನೆನಪಿನಲ್ಲಿ ಇದೆಯೋ ಅಥವಾ ಹಾಗೇ ಸುಮ್ಮನೆ ಹೇಳುತ್ತೀರಾ? ಡ್ರಾಮಾ ಪುನರಾವರ್ತನೆ ಆಗುತ್ತದೆ ಎಂದು ಕೇಳಿದ್ದೀರಿ. ಆದ್ದರಿಂದ ಕೇವಲ ಹೇಳುವಿರಾ ಅಥವಾ ಅನೇಕ ಬಾರಿ ಪುನರಾವರ್ತನೆ ಆಗಿದೆ ಎಂದು ತಿಳಿದಿದ್ದೀರಾ? ಒಂದುವೇಳೆ ಡ್ರಾಮಾದ ಪಾಯಿಂಟ್‌ಗಳು 'ಯಥಾವತ್ತಾಗಿ ಪುನರಾವರ್ತನೆ ಆಗುತ್ತದೆ' ಎಂಬುದು ಬುದ್ಧಿಯಲ್ಲಿ ಸ್ಪಷ್ಟವಾಗಿದ್ದರೆ, ಆ ನಿಶ್ಚಯದ ಅನುಸಾರ, ಯಥಾವತ್ತಾಗಿ ಪುನರಾವರ್ತನೆ ಆಗುತ್ತದೆ ಮತ್ತು ಅನೇಕ ಬಾರಿ ಪುನರಾವರ್ತನೆ ಆಗಿದೆ ಮತ್ತು ಈಗ ಪುನರಾವರ್ತನೆ ಆಗುತ್ತಿದೆ. ಆದರೆ ಇದು ನಿಶ್ಚಯದ ಮಾತಾಗಿದೆ. ಮುಂದಿನ ಕಲ್ಪದಲ್ಲಿ ಬೇರೆ ಇನ್ಯಾರೋ ವಿಜಯಿಯಾಗುವರು, ಮತ್ತು ಈ ಕಲ್ಪದಲ್ಲಿ ತಾವು ವಿಜಯಿಗಳಾಗುವಿರಿ – ಈ ರೀತಿ ಆಗಲು ಸಾಧ್ಯವೇ ಇಲ್ಲ. ಏಕೆಂದರೆ ಯಾವಾಗ 'ಮಾಡಿ ಮಾಡಲ್ಪಟ್ಟಿರುವ ಡ್ರಾಮಾ' ಎಂದು ಹೇಳುತ್ತೀರೋ, ಅಂದಾಗ ಮಾಡಲ್ಪಟ್ಟಿದೆ ಮತ್ತು ಈಗ ಮಾಡುತ್ತಿದ್ದೀರಿ ಅಂದರೆ ರಿಪೀಟ್ (ಪುನರಾವರ್ತನೆ) ಮಾಡುತ್ತಿದ್ದೀರಿ. ಇಂತಹ ನಿಶ್ಚಯಬುದ್ಧಿಯುಳ್ಳವರು ಅಚಲ–ಅಡೋಲರಾಗಿರುತ್ತಾರೆ.

ಅಚಲ್‌ಘರ್ ಯಾರ ಸ್ಮರಣಾರ್ಥವಾಗಿದೆ? ಜ್ಞಾನದ ರಹಸ್ಯಗಳಲ್ಲಿ ಯಾರು ಅಚಲರಾಗಿರುತ್ತಾರೋ ಅಂತಹವರ ಸ್ಮರಣಾರ್ಥ ಅಚಲ್‌ಘರ್ ಆಗಿದೆ. ಹಾಗಾದರೆ ಪ್ರಾಕ್ಟಿಕಲ್ ಆಗಿ ನಾವು ನಮ್ಮ ಸ್ಮರಣಾರ್ಥವನ್ನು ನೋಡುತ್ತಿದ್ದೇವೆ ಎನ್ನುವ ನಶೆ ಇದೆಯಲ್ಲವೇ? ಯಾರು ಸದಾ ವಿಘ್ನ–ವಿನಾಶಕ ಸ್ಥಿತಿಯಲ್ಲಿ ಸ್ಥಿತರಾಗಿರುತ್ತಾರೋ ಅವರು ಸದಾ ಡಬಲ್ ಲೈಟ್ ಆಗಿರುತ್ತಾರೆ. ಎಲ್ಲವನ್ನೂ ನಿನ್ನದೆಂದು ಮಾಡಿಬಿಟ್ಟಿದ್ದೀರಾ? ಅಥವಾ ಅರ್ಧ ನಿನ್ನದು, ಅರ್ಧ ನನ್ನದು ಈ ರೀತಿಯಿದೆಯೇ? 75% ತಂದೆಯದು, 25% ನನ್ನದು? ಕೆಲವೊಮ್ಮೆ ನಿನ್ನದು ಎಂದು ಹೇಳುವುದು, ಮತ್ತು ಯಾವಾಗ ಬೇಕೆನಿಸುತ್ತದೋ ಆದ ನನ್ನದು ಎನ್ನುವಿರಾ? 'ನನ್ನದು ನನ್ನದು' ಎಂದು ಹೇಳುತ್ತಾ, ಏನು ಸಿಕ್ಕಿತೆಂದು ಅನುಭವ ಮಾಡಿದಿರಾ? 'ನಿನ್ನದು' ಎಂದು ಹೇಳುವುದರಿಂದ ಸಮೃದ್ಧರಾಗಿಬಿಡುತ್ತೀರಿ. 'ನನ್ನದು ನನ್ನದು' ಎಂದು ಹೇಳಿದರೆ ಖಾಲಿಯಾಗಿಬಿಡುತ್ತೀರಿ. ಸದಾ ಡಬಲ್‌ಲೈಟ್ ಅಂದರೆ ಎಲ್ಲವೂ ನಿನ್ನದೆ. ಒಂದು ಸ್ವಲ್ಪ ಮೋಹವಿದ್ದರೂ ಅದು 'ನನ್ನದು' ಎಂದಾಗುತ್ತದೆ. 'ನಿನ್ನದು' ಎಂದು ಹೇಳುವುದು ಎಂದರೆ ನಿರ್ಮೋಹಿಗಳಾಗುವು ದಾಗಿದೆ.

**ದಾದಿಯರ ಜೊತೆ ಭೇಟಿ:** ವರ್ತಮಾನ ಸಮಯದಲ್ಲಿ ಯಾವ ಬ್ಯಾಲೆನ್ಸ್ ನಡೆಯುತ್ತಿದೆ? ಒಂದು ಕಡೆ ಧಮಾಲ್ (ಹಂಗಾಮ) ಮತ್ತೊಂದು ಕಡೆ ಕಮಾಲ್ (ಚಮತ್ಕಾರ). ಏನೇ ಆಗುತ್ತಿದ್ದರೂ, ಕಮಾಲೇ ಆಗುತ್ತಿದೆ ಅಲ್ಲವೇ? ಪ್ರತಿ ಕ್ಷೇತ್ರದಲ್ಲೂ ತಾವು ಮುಂದುವರಿಯುತ್ತಲೇ ಇದ್ದೀರಲ್ಲವೆ? ಪ್ರಪಂಚದಲ್ಲಿದೆ ಧಮಾಲ್ ಮತ್ತು ತಮ್ಮ ಬಳಿಯ ಸಮಾಚಾರದಲ್ಲಿದೆ ಕಮಾಲ್. ಎಷ್ಟು ಧಮಾಲ್ ಆಗುವುದೋ ಅಷ್ಟು ತಮ್ಮ ಕಮಾಲ್ ಆಗುತ್ತದೆ ಮತ್ತು ಪ್ರತ್ಯಕ್ಷರಾಗುತ್ತಾ ಹೋಗುತ್ತೀರಿ. ಪ್ರಪಂಚದವರು ಭಯಭೀತರಾಗುತ್ತಾರೆ ಮತ್ತು ತಾವು ಮತ್ತಷ್ಟೂ ನಿರ್ಭಯರಾಗುತ್ತಾ ಹೋಗುವಿರಿ. ನಿರ್ಭಯರಾಗಿದ್ದೀರಾ ಅಥವಾ ಧಮಾಲಿಗೆ ಹೆದರುತ್ತೀರಾ? ಎಷ್ಟು ಧಮಾಲನ್ನು ನೋಡುತ್ತೀರೋ ಅಷ್ಟು 'ಇಂದು ಧಮಾಲ್ ಆಗುತ್ತಿದೆ, ನಾಳೆ ನಮ್ಮ ಕಮಾಲ್ ಆಗಿಯೇ ಬಿಟ್ಟಿದೆ' ಎಂದು ಯೋಚಿಸುತ್ತೀರಿ. ಬ್ಯಾಲೆನ್ಸ್ ಆಗುತ್ತಿದೆಯಲ್ಲವೇ? ನೋಡಿರಿ ಡಿಗ್ರಿಯೂ ಸಿಗುತ್ತಿದೆ (ದಾದಿಜಿಯವರಿಗೆ ಉದಯಪುರ ಯುನಿವರ್ಸಿಟಿಯಿಂದ ಡಾಕ್ಟರೇಟ್ ಪದವಿಯು ಸಿಗುತ್ತಿದೆ), ಮನೆಯೂ ಸಿಗುತ್ತಿದೆ. ಯಾವುದು ಅಸಂಭವದ ಮಾತಾಗಿತ್ತೋ ಅದು ಸಂಭವವಾಗುತ್ತಿದೆ. ಅಂದಮೇಲೆ ಇದು ಕಮಾಲ್ ಆಯಿತಲ್ಲವೇ? ನಿಮಂತ್ರಣವೂ ಸಿಗುತ್ತಿದೆ. ಕೆಲವು ಸಮಯದ ಹಿಂದೆ ಇದು ಇರಲಿಲ್ಲ, ಈಗ ಹೆಚ್ಚುತ್ತಿದೆ. ಅಂದರೆ ಕಮಾಲ್ ಹೆಚ್ಚುತ್ತಿದೆ ಅಲ್ಲವೇ? ಇದು ಬ್ರಹ್ಮಾ ತಂದೆಯ ಮೂಲಕ ತೀವ್ರಗತಿಯ ಸೇವೆಯ ಪ್ರಮಾಣವನ್ನು ತೋರಿಸುತ್ತಿದ್ದಾರೆ. ಯಾವುದು ಕಷ್ಟಕರವಾದ ಮಾತಾಗಿರುವುದೋ ಅದು ಸಮಯಾನುಸಾರ 'ಆಗಿಯೇ ಬಿಟ್ಟಿದೆ' ಎನ್ನುವ ರೀತಿಯಲ್ಲಿ ಸಹಜವಾಗಿ ಆಗುತ್ತಾ ಹೋಗುತ್ತದೆ. ಆದ್ದರಿಂದ ತಮಗೆ ಭಯವಿಲ್ಲ. ಧಮಾಲ್ ಯಾವಾಗ ಆಗುತ್ತದೆ ಮತ್ತು ನಮ್ಮ ಕಮಾಲ್ ಯಾವಾಗ ಆಗುತ್ತದೆ ಎಂದು ಯೋಚಿಸುತ್ತೀರಿ. ಕೆಲವರು ಕರ್ಫ್ಯೂ ಹೇರಲಾಗಿದೆ, ಸಿವಿಲ್‌ವಾರ್ ನಡೆಯುತ್ತಿದೆ, ಏನಾಗುವುದೋ ಎಂದು ಹೆದರುತ್ತಾರೆ. ತಾವು ಹೆದರುತೀರಾ? ಡ್ರಾಮಾ ಅನುಸಾರ ಇವೆಲ್ಲವೂ ತಮ್ಮ ಪುರುಷಾರ್ಥವನ್ನು ಮತ್ತಷ್ಟು ಶಕ್ತಿಶಾಲಿಯನ್ನಾಗಿ ಮಾಡಿಸುತ್ತದೆ. ಒಳ್ಳೆಯದು, ಮತ್ತೆಲ್ಲವೂ ಕುಶಲವೇ? (ದಾದೀಜಿಯವರಿಗೆ ಸ್ವಲ್ಪ ಕೆಮ್ಮು ಇದೆ) ಆರೋಗ್ಯದ ಲೆಕ್ಕಾಚಾರವನ್ನು ಚುಕ್ತ ಮಾಡುತ್ತಿದ್ದೀರಿ. ಒಂದಾಗಿದೆ, ವಯಸ್ಸಿನ ಲೆಕ್ಕದಿಂದಲೂ ಚುಕ್ತ ಆಗುತ್ತದೆ, ಮತ್ತೊಂದು ರಹಸ್ಯ – ಮಹಾರಥಿಗಳು ತಮ್ಮ ಎಲ್ಲಾ ಲೆಕ್ಕಾಚಾರಗಳನ್ನೂ ಇಲ್ಲಿಯೇ ಚುಕ್ತಾ ಮಾಡಿಕೊಳ್ಳಬೇಕಾಗಿದೆ. ಸ್ವಲ್ಪವೂ ಉಳಿದಿರಬಾರದು. ಬಾಪ್‌ದಾದಾರವರಿಗಂತೂ ಇದು ಆಟವೆನಿಸುತ್ತದೆ. ಬ್ರಹ್ಮಾ ತಂದೆಯವರು ಇದನ್ನು

ಪಾರು ಮಾಡಿದರು ಎಂದಾಗ ತಾವೆಲ್ಲರೂ ಪಾರು ಮಾಡಲೇಬೇಕಾಗಿದೆ. ಒಂದು ಯೋಗಬಲದಿಂದ ಸಹಜವಾಗಿ ಪಾರಾಗುವುದು ಅಥವಾ ಇಲ್ಲದಿದ್ದರೆ ಧರ್ಮರಾಜನ ಕ್ರಾಸ್ (ಶೂಲ) ಮೇಲೆ ಏರುವುದು. ಅಂದಾಗ ಇಲ್ಲಿ ಪಾರಾಗುತ್ತಿದ್ದೀರಿ ಅಂದಾಗ ಅಲ್ಲಿ ಶೂಲಕ್ಕೆ ಏರುವವರಲ್ಲ. **(20–12–1992)**

ಸೇವೆಯ ಸಫಲತೆ ಅಥವಾ ಪ್ರತ್ಯಕ್ಷತೆಯಂತೂ ಡ್ರಾಮಾ ಅನುಸಾರ ಹೆಚ್ಚುತ್ತಾ ಹೋಗುತ್ತದೆ. ಈಗ ಹೆಚ್ಚುತ್ತಿದೆಯಲ್ಲವೇ? ಹಿಂದೆ ತಾವು ನಿಮಂತ್ರಣ ನೀಡುತ್ತಿದಿರಿ, ಈಗ ಅವರು ತಮಗೆ ನಿಮಂತ್ರಣ ನೀಡುತ್ತಾರೆ. ಅಂದಾಗ ಸೇವೆಯ ಸಫಲತೆಯ ಪ್ರತ್ಯಕ್ಷತೆ ಆಗುತ್ತಿದೆಯಲ್ಲವೇ? ತಮಗೆ ಯಾವುದೇ ವೇದಿಕೆ ಅಥವಾ ಪದವಿಯ ಅವಶ್ಯಕತೆ ಇಲ್ಲ, ಆದರೆ ಇದು ಸೇವೆಯ ಪ್ರತ್ಯಕ್ಷತೆ ಆಗಿದೆ. ಭಗವಂತನ ಪದವಿಯ ಮುಂದೆ ಈ ಪದವಿ ಯಾವ ಲೆಕ್ಕ? (ಉದಯಪುರ ವಿಶ್ವವಿದ್ಯಾಲಯವು ದಾದೀಜಿಗೆ ಗೌರವ ಡಾಕ್ಟರೇಟ್ ಪದವಿಯನ್ನು ನೀಡಿದೆ). ಆದರೆ ಇದೂ ಸಹ ಪ್ರತ್ಯಕ್ಷತೆಯ ಸಾಧನವಾಗಿದೆ. ಸಾಧನದ ಮೂಲಕ ಸೇವೆಯ ಪ್ರತ್ಯಕ್ಷತೆ ಆಗುತ್ತಿದೆ. ತಯಾರಾಗಿರುವ ವೇದಿಕೆ ಸಿಗಲೇಬೇಕಾಗಿದೆ. ಧರ್ಮನೇತಾರರು ಸಹ ತಮ್ಮನ್ನು ಆಮಂತ್ರಿಸಿ ಮುಖ್ಯ ಅತಿಥಿಗಳಾಗಿ ಮಾಡುವಂತಹ ದಿನವೂ ಸಹ ಬರಲಿದೆ. ಈಗ ಸಧ್ಯಕ್ಕೆ ಹೊರಗಿನ ರೂಪುರೇಖೆಗಳಲ್ಲೇ ಇರಿಸಬೇಕಾಗುತ್ತದೆ ಆದರೆ ಅಂತರಂಗದಲ್ಲಿ 'ಈ ಪವಿತ್ರ ಆತ್ಮಗಳಿಗೆ ಸೀಟ್ ಸಿಗಬೇಕಾಗಿದೆ' ಎಂದು ಬಯಸುತ್ತಾರೆ. ರಾಜಕೀಯ ನಾಯಕರಂತೂ 'ನಮ್ಮನ್ನು ಮುಖ್ಯ ಅತಿಥಿಗಳನ್ನಾಗಿ ಮಾಡುವ ಬದಲು ತಾವು ಮುಖ್ಯ ಅತಿಥಿಗಳಾದರೆ ಉತ್ತಮವಾಗಿರುತ್ತದೆ ಎಂದು ಹೇಳಿಯೇ ಬಿಡುತ್ತಾರೆ. ಆದರೆ ಡ್ರಾಮಾದಲ್ಲಿ ಹೆಸರು ಅವರದು ಕೆಲಸ ತಮ್ಮದಾಗಿ ಬಿಡುತ್ತದೆ.

**ದಾದಿಯವರ ಜೊತೆ ಭೇಟಿ:** ಡ್ರಾಮಾದ ದೃಶ್ಯಗಳನ್ನು ನೋಡಿ ಹರ್ಷಿತರಾಗುತ್ತೀದ್ದಿರಲ್ಲವೇ? 'ವಾಹ್ ಡ್ರಾಮಾ ವಾಹ್', 'ವಾಹ್ ಬಾಬಾ ವಾಹ್' ಎಂಬ ಇದೇ ಹಾಡು ಅನಾದಿ, ಅವಿನಾಶಿಯಾಗಿ ನಡೆಯುತ್ತಿರುತ್ತದೆ. ಮಕ್ಕಳು ತಂದೆಯನ್ನು ಪ್ರತ್ಯಕ್ಷ ಮಾಡುತ್ತಾರೆ ಮತ್ತು ತಂದೆಯು ಶಕ್ತಿ ಸೇನೆಯನ್ನು ಪ್ರತ್ಯಕ್ಷ ಮಾಡುತ್ತಾರೆ. **(31–12–1992)**

ತಮ್ಮನ್ನು ತಾವು ತ್ರಿಕಾಲದರ್ಶಿಗಳೆಂದು ಅನುಭವ ಮಾಡುತ್ತೀರಾ? ಸಂಗಮಯುಗದಲ್ಲಿ ತಂದೆಯು ಎಲ್ಲಾ ಆತ್ಮಗಳನ್ನೂ ತ್ರಿಕಾಲದರ್ಶಿಗಳನ್ನಾಗಿ ಮಾಡುತ್ತಾರೆ. ಏಕೆಂದರೆ ಸಂಗಮಯುಗವು ಶ್ರೇಷ್ಠ ಹಾಗೂ ಉನ್ನತವಾದುದ್ದಾಗಿದೆ. ಉನ್ನತವಾದ ಸ್ಥಾನದಲ್ಲಿ ನಿಂತು ನೋಡಿದರೆ ಎಲ್ಲವೂ ಕಾಣುತ್ತದೆ. ಅಂದಾಗ ಸಂಗಮಯುಗದಲ್ಲಿ ನಿಂತು ನೋಡಿದಾಗ ಮೂರೂ ಕಾಲಗಳು ಕಾಣುತ್ತವೆ. ಒಂದುಕಡೆ ದು:ಖಧಾಮದ ಜ್ಞಾನವಿದೆ ಮತ್ತೊಂದು ಕಡೆ ಸುಖಧಾಮದ ಜ್ಞಾನವಿದೆ ಮತ್ತು ವರ್ತಮಾನ ಸಮಯ ಸಂಗಮಯುಗದ ಜ್ಞಾನವೂ ಇದೆ. ಎಂದ ಮೇಲೆ ತ್ರಿಕಾಲದರ್ಶಿಗಳಾದಿರಲ್ಲವೇ? ಮೂರೂ ಕಾಲಗಳ ಜ್ಞಾನವು ಇಮರ್ಜ್ ಆಗಿದೆಯೇ? 'ನಿನ್ನೆ ದು:ಖಧಾಮದಲ್ಲಿ ಇದ್ದೆವು, ಇಂದು ಸಂಗಮಯುಗದಲ್ಲಿ ಇದ್ದೇವೆ ಮತ್ತು ನಾಳೆ ಸುಖಧಾಮಕ್ಕೆ ಹೋಗುತ್ತಿದ್ದೇವೆ' ಎಂಬ ಮೂರು ಕಾಲಗಳನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳಿ. ಯಾವುದೇ ಕಾರ್ಯವನ್ನು ಮಾಡಿದರೂ ತ್ರಿಕಾಲದರ್ಶಿಗಳಾಗಿ ಮಾಡಿರಿ. ಆಗ ಪ್ರತಿಯೊಂದು ಕರ್ಮವು ಶ್ರೇಷ್ಠವಾಗುತ್ತದೆ, ವ್ಯರ್ಥವಾಗುವುದಿಲ್ಲ, ಸಮರ್ಥವಾಗುತ್ತದೆ. ಸಮರ್ಥ ಕರ್ಮದ ಫಲ ಸಮರ್ಥವಾಗಿರುತ್ತದೆ. ತ್ರಿಕಾಲದರ್ಶಿ ಆಗುವುದರಿಂದ 'ಇದು ಏಕಾಯಿತು, ಇದು ಏನಾಯಿತು, ಹೀಗಲ್ಲ, ಹೀಗೆ ಆಗಬೇಕಿತ್ತು' ಎಂಬ ಎಲ್ಲ ಪ್ರಶ್ನೆಗಳು ಸಮಾಪ್ತಿಯಾಗಿ ಬಿಡುತ್ತದೆ. ಇಲ್ಲದಿದ್ದರೆ ಬಹಳ ಪ್ರಶ್ನೆಗಳು ಏಳುತ್ತವೆ. 'ಯಾಕೆ?" ಎಂಬ ಪ್ರಶ್ನೆ ಏಳುವುದರಿಂದ ವ್ಯರ್ಥ ಸಂಕಲ್ಪಗಳ ಕ್ಯೂ (ಸಾಲು) ನಿಂತುಬಿಡುತ್ತದೆ. ಮತ್ತು ತ್ರಿಕಾಲದರ್ಶಿ ಆಗುವುದರಿಂದ ಫುಲ್‌ಸ್ಟಾಪ್ (ಪೂರ್ಣವಿರಾಮ) ಆಗಿಬಿಡುತ್ತದೆ. ನಥಿಂಗ್ ನ್ಯೂ (ಹೊಸದೇನಲ್ಲ) ಅಂದಮೇಲೆ ಸಂಪೂರ್ಣವಿರಾಮ ಹಾಕಲ್ಪಟ್ಟಿತಲ್ಲವೇ? ಫುಲ್‌ಸ್ಟಾಪ್ ಅಂದರೆ ಬಿಂದು ಇಡುವುದರಿಂದ ಬಿಂದು ರೂಪ ತಂದೆಯು ಸಹಜವಾಗಿ ನೆನಪಿಗೆ ಬರುತ್ತಾರೆ.

ಬಾಪ್‌ದಾದಾರವರು ಅಮೃತವೇಳೆ ಸದಾ ಮೂರು ಬಿಂದುಗಳ ತಿಲಕವನ್ನು ಇಟ್ಟುಕೊಳ್ಳಿ ಎಂದು ಸದಾ ಹೇಳುತ್ತಾರೆ. ತಾವೂ ಬಿಂದು, ತಂದೆಯೂ ಬಿಂದು ಮತ್ತು ಏನಾಯಿತೋ, ಏನಾಗುತ್ತಿದೆಯೋ ಅದು ಹೊಸದೇನೂ ಅಲ್ಲ. ಆದ್ದರಿಂದ ಫುಲ್‌ಸ್ಟಾಪ್ ಸಹ ಬಿಂದು. ಈ ಮೂರು ಬಿಂದುಗಳ ತಿಲಕ ಅಂದರೆ ಸ್ಮೃತಿಯ ತಿಲಕ. ಮಸ್ತಕವು ಸ್ಮೃತಿಯ ಸ್ಥಾನವಾಗಿದೆ, ಆದ್ದರಿಂದ ತಿಲಕವನ್ನು ಮಸ್ತಕದಲ್ಲಿಯೇ ಇಡಲಾಗುತ್ತದೆ. ಮೂರು ಬಿಂದುಗಳ ತಿಲಕವಿಟ್ಟುಕೊಳ್ಳುವುದು ಎಂದರೆ ಸ್ಮೃತಿಯಲ್ಲಿರುವುದಾಗಿದೆ. ನಂತರ ಇಡೀ ದಿನ ಅಚಲ ಅಡೋಲಾಗಿರುತ್ತೀರಿ. ಈ 'ಏಕೆ' ಮತ್ತು 'ಏನು' ಎಂಬುದರ ಹಲ್‌ಚಲ್ ಇದೆ. ಅಂದಾಗ ಅಚಲರಾಗಿರುವ ಸಾಧನ – ಅಮೃತವೇಳೆ ಮೂರು ಬಿಂದುಗಳ ತಿಲಕವನ್ನು ಇಟ್ಟುಕೊಳ್ಳುವುದಾಗಿದೆ. ಇದನ್ನು ಮರೆಯಬೇಡಿ. ಯಾವುದೇ ಸಮಯದಲ್ಲಿ ಏನೇ ಆದರೂ ಆ

ಸಮಯದಲ್ಲೇ ಫುಲ್ ಸ್ಟಾಪ್ ಹಾಕಿ ಬಿಡಿ. ನೆನಪಿತ್ತು ಆದರೆ ಆ ಸಮಯದಲ್ಲಿ ಮರೆತು ಹೋದೆವು ಎಂದು ಹೇಳುವುದಲ್ಲ. ಗಾಡಿಯಲ್ಲಿ ಹೋಗುತ್ತಿದ್ದಾಗ ಸಮಯಕ್ಕೆ ಸರಿಯಾಗಿ ಬ್ರೇಕ್ ಬೀಳಲಿಲ್ಲ ಎಂದರೆ ಲಾಭವಾಗುತ್ತದೆಯೇ ಅಥವಾ ನಷ್ಟವಾಗುತ್ತದೆಯೇ? ಆದ್ದರಿಂದ ಸಮಯಕ್ಕೆ ಸರಿಯಾಗಿ ಫುಲ್‌ಸ್ಟಾಪ್ ಇಡಿ. ನಥಿಂಗ್ ನ್ಯೂ, ಏನಾಗಬೇಕಾಗಿತ್ತೋ, ಆಗುತ್ತಿದೆ. ಮತ್ತು ಸಾಕ್ಷಿಯಾಗಿ ನೋಡುತ್ತಾ ಮುಂದುವರಿಯುತ್ತಾ ಹೋಗಿರಿ. ತ್ರಿಕಾಲದರ್ಶಿಗಳು ಎಂದರೆ ಆದಿ, ಮಧ್ಯ, ಅಂತ್ಯ – ಮೂರನ್ನೂ ತಿಳಿದು ಸಮಯಕ್ಕೆ ಅನುಗುಣವಾಗಿ ಸದಾ ತಮ್ಮನ್ನು ತಾವು ಸುರಕ್ಷಿತವಾಗಿಟ್ಟುಕೊಳ್ಳಿರಿ. 'ಸಮಸ್ಯೆ ದೊಡ್ಡದಿತ್ತಲ್ಲವೇ? ಚಿಕ್ಕದಾಗಿದ್ದಾರೆ ನಾನು ಪಾಸಾಗಿ ಬಿಡುತ್ತಿದ್ದೆ, ಆದರೆ ಸಮಸ್ಯೆ ಬಹಳ ದೊಡ್ಡದಿತ್ತು' ಎಂಬುದಾಗಿ ಹೇಳಬೇಡಿ. ಸಮಸ್ಯೆಯು ಎಷ್ಟೇ ದೊಡ್ಡದಿರಬಹುದು ಆದರೆ ತಾವು ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಲ್ಲವೇ? ಅಂದರೆ ದೊಡ್ಡವರು ಆದಿರಲ್ಲವೇ? ದೊಡ್ಡವರ ಮುಂದೆ ಸಮಸ್ಯೆ ಅಲ್ಲ, ಆದರೆ ಆಟವಾಗಿರುತ್ತದೆ. ಇದಕ್ಕೆ ಹೇಳಲಾಗುತ್ತದೆ ತ್ರಿಕಾಲದರ್ಶಿ. ತ್ರಿಕಾಲದರ್ಶಿ ಆತ್ಮ ಸದಾ ನಿಶ್ಚಿಂತರಾಗಿರುತ್ತಾರೆ ಏಕೆಂದರೆ ಅವರಿಗೆ ತಮ್ಮ ವಿಜಯ ಆಗಿಯೇ ಬಿಟ್ಟಿದೆ ಎನ್ನುವ ನಿಶ್ಚಯವಿದೆ. **(09–01–1993)**

**ಜಾನಕಿ ದಾದಿಯವರ ಜೊತೆ:** ತಮ್ಮ ಧೈರ್ಯ ಮತ್ತು ಸರ್ವರ ಸಹಯೋಗದ ಆರ್ಶೀವಾದಗಳು ತಮ್ಮ ಶರೀರವನ್ನು ನಡೆಸುತ್ತಿದೆ. ಸಮಯಕ್ಕೆ ಸರಿಯಾಗಿ ಶರೀರವೂ ಸಹಯೋಗವನ್ನು ಕೊಟ್ಟುಬಿಡುತ್ತದೆ. ಇದಕ್ಕೇ ಎಕ್ಸ್‌ಟ್ರಾ (ಹೆಚ್ಚಿನ) ಆರ್ಶಿವಾದಗಳ ಸಹಾಯ ಎಂದು ಹೇಳಲಾಗುತ್ತದೆ. ಅಂದಾಗ ವಿಶೇಷ ಆತ್ಮರಿಗೆ ಈ ಹೆಚ್ಚಿನ ಸಹಾಯವಂತೂ ಸಿಕ್ಕೇ ಸಿಗುತ್ತದೆ. ಶರೀರಕ್ಕೆ ಸ್ವಲ್ಪ ವಿಶ್ರಾಂತಿಯನ್ನೂ ಕೊಡಬೇಕಾಗುತ್ತದೆ. ಒಂದುವೇಳೆ ಕೊಡದಿದ್ದರೆ ಶರೀರವು ಕಿರಿಕಿರಿ ಮಾಡುತ್ತದೆ. ಹೇಗೆ ಬೇರೆಯವರಿಗೆ ಏನು ಬೇಕೋ ಅದನ್ನು ಕೊಟ್ಟುಬಿಡುತ್ತೀರಲ್ಲವೇ – ಯಾರಿಗೆ ಶಾಂತಿ ಬೇಕೋ, ಯಾರಿಗೆ ಸುಖಬೇಕೋ, ಯಾರಿಗೆ ಧೈರ್ಯ ಬೇಕೋ, ಅದನ್ನು ಕೊಡುತ್ತೀರಲ್ಲವೇ, ಹಾಗೆಯೇ ಶರೀರಕ್ಕೆ ಏನು ಬೇಕೋ ಅದನ್ನೂ ಕೊಡಿ. ಶರೀರಕ್ಕೂ ಏನಾದರೂ ಬೇಕಾಗುತ್ತದೆಯಲ್ಲವೇ? ಏಕೆಂದರೆ ಈ ಶರೀರವೂ ಅಮಾನತ್ (ನೋಡಿಕೊಳ್ಳುವುದಕ್ಕಾಗಿ ಕೊಟ್ಟಿರುವುದು) ಆಗಿದೆಯಲ್ಲವೇ? ಇದನ್ನೂ ಸಹ ಸಂಭಾಲನೆ ಮಾಡಬೇಕಲ್ಲವೇ? ಒಳ್ಳೆಯ ಧೈರ್ಯದಿಂದ ನಡೆಸುತ್ತಾ ಇದ್ದೀರಿ ಮತ್ತು ನಡೆಯಲೇ ಬೇಕಾಗಿದೆ. ಸಮಯಕ್ಕೆ ಸರಿಯಾಗಿ ಅವಶ್ಯಕತೆಯ ಅನುಸಾರವಾಗಿ ಹೇಗೆ ಶರೀರ ತಮಗೆ ಸಹಯೋಗ ಕೊಡುತ್ತದೆಯೋ ಹಾಗೆಯೇ ತಾವೂ ಸಹ ಸ್ವಲ್ಪ ಸಹಯೋಗವನ್ನು ಕೊಡಿ. ಜ್ಞಾನಪೂರ್ಣರಂತೂ ಆಗಿದ್ದೀರಿ. ಒಳ್ಳೆಯದು. ಏಕೆಂದರೆ ಈ ಶರೀರದ ಮೂಲಕವೇ ಅನೇಕ ಆತ್ಮಗಳ ಕಲ್ಯಾಣ ಆಗುವುದಿದೆ. ಕೇವಲ ಆತ್ಮಗಳಾದ ತಮ್ಮ ಜೊತೆಯ ಅನುಭವ ಮಾತ್ರದಿಂದಲೇ ಎಲ್ಲರೂ ಬಹಳ ದೊಡ್ಡ ಸಹಯೋಗದ ಅನುಭವವನ್ನು ಮಾಡುತ್ತಾರೆ. ಹಾಜರಾಗುವುದೂ ಸಹ ಸೇವೆಯ ಹಾಜರಿ ಆಗಿಬಿಡುತ್ತದೆ. ಸ್ಥೂಲ ಸೇವೆ ಮಾಡದಿದ್ದರೂ, ಕೇವಲ ಹಾಜರಿರುವುದರಿಂದಲೇ ಹಾಜರಿ ಬಿದ್ದುಬಿಡುತ್ತದೆ. ಒಂದು ಸೆಕೆಂಡ್ ಸಹ ಸೇವೆ ಇಲ್ಲದೆ ಇರಲಾರಿರಿ ಮತ್ತು ಇರುವುದೂ ಇಲ್ಲ. ಈ ಕಾರಣದಿಂದ ಸೇವೆಯ ಜಮಾ ಖಾತೆ ಜಮಾ ಆಗುತ್ತಲೇ ಇರುತ್ತದೆ. ಬಹಳ ಒಳ್ಳೆಯ ಪಾತ್ರವನ್ನು ಅಭಿನಯಿಸುತ್ತಿದ್ದೀರಿ ಮತ್ತು ಮುಂದೆಯೂ ಅಭಿನಯಿಸುತ್ತಾ ಇರುವಿರಿ. ಒಳ್ಳೆಯ ಪಾತ್ರ ಸಿಕ್ಕಿದೆಯಲ್ಲವೇ? ಇಷ್ಟು ಉತ್ತಮ ಪಾತ್ರವು ಡ್ರಾಮಾನುಸಾರ ಆಶೀರ್ವಾದದ ಕಾರಣದಿಂದಲೇ ಸಿಕ್ಕಿದೆ. ಈ ಬ್ರಾಹ್ಮಣ ಜನ್ಮದ ಆದಿಯ ಸಂಸ್ಕಾರ 'ದಯಾ ಹೃದಯ ಮತ್ತು ಸಹಯೋಗದ ಭಾವನೆ' ಗಳ ಫಲವಾಗಿದೆ. ಶರೀರದಿಂದಾಗಲೀ ಅಥವಾ ಮನಸ್ಸಿನಿಂದಾಗಲೀ ದಯಾ ಹೃದಯ ಮತ್ತು ಸಹಯೋಗದ ಪಾತ್ರವು ಆದಿಯಿಂದಲೂ ಸಿಕ್ಕಿದೆ. ಆದ್ದರಿಂದ ಅದರ ಫಲ ಸಹಜವಾಗಿ ಪ್ರಾಪ್ತಿಯಾಗುತ್ತಿದೆ. ಶಾರೀರಿಕ ಸಹಯೋಗದ ಸೇವೆಯನ್ನೂ ಹೃದಯದಿಂದ ಮಾಡಿರುವಿರಿ. ಆದ್ದರಿಂದ ಈ ಆಶೀರ್ವಾದಗಳಿಂದಾಗಿ ಶರೀರದ ಆಯುಸ್ಸು ಸಹ ಹೆಚ್ಚುತ್ತಿದೆ.

**(ಚಂದ್ರಮಣಿ ದಾದಿಯ ಜೊತೆ)** ಬೇಹದ್ದಿನ ಚಕ್ರವರ್ತಿಯಾಗಿದ್ದೀರಿ. ಈ ದಿನ ಇಲ್ಲಿ, ನಾಳೆ ಅಲ್ಲಿ. ಇದಕ್ಕೇ 'ವಿಶ್ವದ ಆತ್ಮಗಳ ಜೊತೆ ಸ್ವತಃ ಹಾಗೂ ಸಹಜವಾಗಿ ಸಂಬಂಧ ಜೋಡಿಸುವುದು' ಎಂದು ಹೇಳಲಾಗುತ್ತದೆ. ವಿಶ್ವದ ಮೇಲೆ ರಾಜ್ಯಭಾರ ಮಾಡಬೇಕು, ವಿಶ್ವಕಲ್ಯಾಣಕಾರಿಗಳು ಆಗಿದ್ದೀರಿ, ಎಂದಮೇಲೆ ಮೂಲೆ ಮೂಲೆಯಲ್ಲೂ ಹೆಜ್ಜೆಯನ್ನು ಇಡಬೇಕಲ್ಲವೇ? ಆದ್ದರಿಂದ ದೇಶ ವಿದೇಶಗಳಲ್ಲಿ ಅವಕಾಶ ಸಿಕ್ಕಿಬಿಡುತ್ತದೆ. ಯಾವುದೇ ಕಾರ್ಯಕ್ರಮವನ್ನು ಆಯೋಜಿಸದಿದ್ದರೂ ಡ್ರಾಮಾನುಸಾರ ಸಂಗಮದ ಈ ಸೇವೆಯು ಭವಿಷ್ಯವನ್ನು ಪ್ರತ್ಯಕ್ಷ ಮಾಡುತ್ತಿದೆ. ಆದ್ದರಿಂದ ಬೇಹದ್ದಿನ ಸೇವೆ ಮತ್ತು ಬೇಹದ್ದಿನ ಸಂಬಂಧ–ಸಂಪರ್ಕ ವೃದ್ಧಿಯಾಗುತ್ತಿದೆ ಮತ್ತು ವೃದ್ಧಿ ಆಗುತ್ತಲೇ ಇರುತ್ತದೆ. ಒಂದು ರಾಜ್ಯದ ರಾಜನಲ್ಲ, ವಿಶ್ವದ ರಾಜನಾಗಬೇಕು. ಕೇವಲ ಪಂಜಾಬಿನ ರಾಜರಾಗಬೇಡಿ. ಅದಂತೂ ನಿಮಿತ್ತವಾದ ಕರ್ತವ್ಯವಾಗಿದೆ.

ಕರ್ತವ್ಯವೆಂದು ತಿಳಿದು ನಿಭಾಯಿಸು ತ್ತೀರಿ. ಉಳಿದಂತೆ, ಮಧುಬನ ನಿವಾಸಿಗಳಾಗಬೇಕು ಎಂದು ನಿರ್ದೇಶನ ಬಂದರೆ, ಈ ಪಂಜಾಬಿನ ಸ್ಥಿತಿಗತಿ ಏನಾಗುತ್ತದೆ ಎಂದು ಯೋಚಿಸುವಿರಾ? ಇಲ್ಲ. ಎಲ್ಲಿಯವರೆಗೆ ಯಾವ ಸ್ಥಳದ, ಯಾವ ಕರ್ತವ್ಯವಿದೆಯೋ ಅದನ್ನು ಬಹಳ ಒಳ್ಳೆಯ ರೀತಿಯಲ್ಲಿ ನಿಭಾಯಿಸಲೇಬೇಕಾಗಿದೆ. **(09–01–1993)**

ಸಂಗಮದ ಪ್ರತಿ ಸೆಕೆಂಡ್ ಒಳ್ಳೆಯದಕ್ಕಿಂತಲೂ ಒಳ್ಳೆಯದಾಗಿದೆ ಎಂಬ ನಿಶ್ಚಯದಿಂದ ಸಹಜ ಯೋಗಿಗಳಾಗಿರಿ. ಎಲ್ಲಾ ಪಾಯಿಂಟ್ಸ್‌ಗಳ ಸಾರ ಏನಾಗಿದೆ? ಪಾಯಿಂಟ್ (ಬಿಂದು) ಆಗುವುದಾಗಿದೆ. ಎಲ್ಲಾ ಪಾಯಿಂಟ್ಸ್‌ಗಳ ಸಾರ 'ಬಿಂದುವಾಗುವುದು' ಎಂದಾಯಿತು. ಎಂದಾಗ ಬಿಂದುವಾಗುವುದು ಸಹಜವೋ ಕಷ್ಟವೋ? ಯಾವುದು ಸಹಜ ಮಾತಾಗಿದೆಯೋ ಅದು ಸದಾ ಇರುತ್ತದೆ ಮತ್ತು ಯಾವುದು ಕಷ್ಟಕರವೋ ಅದು ಕೆಲವೊಮ್ಮೆ ಆಗುತ್ತದೆ. ಎಲ್ಲಕ್ಕಿಂತ ಸರಳ ಯಾವುದಾಗಿದೆ? ಪಾಯಿಂಟ್ (ಬಿಂದು). ಬಿಂದುವನ್ನು ಬರೆಯುವುದು ಸಹಜವಾಗಿದೆಯಲ್ಲವೇ? ಯಾವಾಗ ಬಿಂದು ರೂಪದಲ್ಲಿ ಸ್ಥಿತರಾಗುವುದಿಲ್ಲವೋ ಆಗ ಪ್ರಶ್ನಾರ್ಥಕದ ಚಿಹ್ನೆಯ ಕ್ಯೂ (ಸಾಲು) ತಯಾರಾಗುತ್ತದೆಯಲ್ಲವೇ? ಪ್ರಶ್ನಾರ್ಥಕ ಚಿಹ್ನೆ ಕಷ್ಟಕರವಾದುದ್ದಾಗಿದೆ. ಮತ್ತು ಪ್ರಶ್ನಾರ್ಥಕ ಚಿಹ್ನೆ ಬಂದಾಗಲೆಲ್ಲಾ ಅದರ ಬದಲಿಗೆ ಸುಲಭವಾದ ಬಿಂದುವನ್ನಿಟ್ಟು ಬಿಡಿ. ಯಾವುದೇ ಮಾತನ್ನು ಸಮಾಪ್ತಿ ಮಾಡಬೇಕಾಗಿದ್ದಲ್ಲಿ 'ಇದಕ್ಕೆ ಬಿಂದುವನ್ನಿಡಿ' ಎಂದು ಹೇಳುತ್ತಾರೆ. ಫುಲ್‌ಸ್ಟಾಪ್ ಹಾಕಲು ಬರುತ್ತದೆಯಲ್ಲವೇ? ಫುಲ್‌ಸ್ಟಾಪ್ ಹಾಕುವುದಕ್ಕಾಗಿ ಸಹಜ ಸ್ಲೋಗನ್ ಆದ 'ಏನಾಯಿತೋ, ಏನಾಗುತ್ತಿದೆಯೋ, ಏನಾಗುತ್ತದೆಯೋ ಅದು ಬಹಳ ಚೆನ್ನಾಗಿ ಆಗುತ್ತದೆ' ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಿ. ಏಕೆಂದರೆ ಇಷ್ಟವಾಗದೇ ಇದ್ದಾಗ ಪ್ರಶ್ನೆಯು ಹೇಳುತ್ತದೆ. ಆದ್ದರಿಂದ ಸಂಗಮಯುಗವೇ ಶ್ರೇಷ್ಠಾತಿ ಶ್ರೇಷ್ಠವಾಗಿದೆ. ಪ್ರತಿ ಸೆಕೆಂಡ್ ಶ್ರೇಷ್ಠಾತಿ ಶ್ರೇಷ್ಠ. ಇದರಿಂದ ಸದಾ ಸಹಜಯೋಗಿ ಜೀವನದ ಅನುಭವವನ್ನು ಮಾಡುವಿರಿ. ಒಳ್ಳೆಯದು ಎಂದು ಹೇಳುವುದರಿಂದ ಒಳ್ಳೆಯದು ಆಗಿಯೇ ಬಿಡುತ್ತದೆ. ಸ್ವಯಂ ತಾವೂ ಸಹ ಒಳ್ಳೆಯವರು ಮತ್ತು ಯಾವ ಪಾತ್ರವನ್ನು ಅಭಿನಯಿಸುತ್ತೀರೋ ಅದೂ ಸಹ ಒಳ್ಳೆಯದು. ಒಳ್ಳೆಯದನ್ನು ನೋಡಿ ಇತರರು ಅವಶ್ಯವಾಗಿ ಆಕರ್ಷಿತರಾಗುತ್ತಾರೆ. ಎಲ್ಲರೂ ಒಳ್ಳೆಯದನ್ನೇ ಇಚ್ಚಿಸುತ್ತಾರೆ. ಸೇವೆಯು ಚೆನ್ನಾಗಿ ನಡೆಯುತ್ತಿದೆಯಲ್ಲವೇ? ಸಂಖ್ಯೆಯನ್ನೂ ವೃದ್ಧಿ ಮಾಡಿ ಮತ್ತು ಗುಣಮಟ್ಟವನ್ನೂ ಹೆಚ್ಚಿಸಿ. ಒಬ್ಬರ ಹೆಸರಿನಿಂದ ಅನೇಕರ ಕಲ್ಯಾಣವನ್ನು ಮಾಡುವಂತಹ ಮೈಕ್ ಅನ್ನು ತಯಾರು ಮಾಡಿರಿ. ಸ್ವಯಂ ಸದಾ ಸಂತುಷ್ಟರಾಗಿರುವಿರಾ? ತಮಗಾಗಿ ಯಾವುದೇ ಪ್ರಶ್ನೆಗಳಿಲ್ಲ ತಾನೇ? ನಿಶ್ಚಯವೇ ಫೌಂಡೇಷನ್ (ತಳಪಾಯ) ಆಗಿದೆ. ಮತ್ತು ನಿಶ್ಚಯದ ತಳಪಾಯವಿದೆ ಎಂದಾಗ ಕರ್ಮಗಳು ಆಟೋಮ್ಯಾಟಿಕ್ ಆಗಿ ಶ್ರೇಷ್ಠವಾಗಿರುತ್ತವೆ. ಮೊದಲಿಗೆ ಸ್ಮೃತಿಯು ನಿಶ್ಚಯದ್ದಾಗಿರುತ್ತದೆ. ಸಂಕಲ್ಪದಲ್ಲಿ ನಿಶ್ಚಯ ಅಂದರೆ ದೃಢತೆ ಇದ್ದಾಗ ಕರ್ಮವು ಆಟೋಮ್ಯಾಟಿಕ್ ಆಗಿ ಫಲವನ್ನು ಕೊಡುತ್ತದೆ. ಒಳ್ಳೆಯದು. ಎಲ್ಲರೂ ಖುಷಿ ಮತ್ತು ಸಂತುಷ್ಟರಾಗಿದ್ದೀರಿ. ಸದಾ ಖುಷಿಯಲ್ಲಿ ನಾಟ್ಯ ಮಾಡುವವರಾಗಿದ್ದೀರಿ. ಏರುಪೇರಿನ ಸಮಯ ಸಮಾಪ್ತಿ ಆಗಿಬಿಟ್ಟಿತು. ಕಳೆದುದ್ದನ್ನು ಕಳೆದು ಹೋಯಿತ್ತೆಂದು ತಿಳಿದಿರಿ ಮತ್ತು ಭವಿಷ್ಯವಂತೂ ಸುಂದರವಾಗಿಯೇ ಇದೆ. ಗೋಲ್ಡನ್ ಫ್ಯೂಚರ್ (ಸ್ವರ್ಣಿಮ ಭವಿಷ್ಯ) ಇದೆ.

ಒಳ್ಳೆಯದು ಇವರು ಯಾವ ಭಾಷೆಯವರಾಗಿದ್ದಾರೆ. ಸ್ಪ್ಯಾನಿಷ್, ಪೋರ್ಚುಗೀಸ್. ನೋಡಿ, ವಿಜ್ಞಾನದ ಸಾಧನಗಳು ತಮ್ಮ ಕೆಲಸಕ್ಕೆ ಬರುತ್ತಿದೆ ಅಲ್ಲವೇ? ಡ್ರಾಮಾನುಸಾರ ತಂದೆಗೆ ಅವಶ್ಯವಿರುವ ಸಮಯದಲ್ಲೇ ವಿಜ್ಞಾನಿಗಳಿಗೆ ಟಚ್ ಆಗುತ್ತದೆ. ಸಾಧನಗಳನ್ನು ಬಳಸುವುದು ಬೇರೆ ಮಾತು ಮತ್ತು ಸಾಧನಗಳಿಗೆ ವಶರಾಗುವುದು ಬೇರೆ ಮಾತು. **(18–02–1993)**

ಜ್ಞಾನದಲ್ಲಿ ಮೂರರ ಮಹತ್ವವಿದೆ. ತ್ರಿಕಾಲದರ್ಶಿಗಳೂ ಆಗುತ್ತೀರಿ – ಮೂರೂ ಕಾಲಗಳನ್ನು ತಿಳಿದುಕೊಂಡಿದ್ದೀರೋ ಅಥವಾ ಕೇವಲ ವರ್ತಮಾನ ವನ್ನು ಮಾತ್ರ ತಿಳಿದಿದ್ದೀರೋ? ಯಾವುದೇ ಕರ್ಮವನ್ನು ಮಾಡುವಾಗ ತ್ರಿಕಾಲದರ್ಶಿಗಳಾಗಿ ಕರ್ಮ ಮಾಡುತ್ತೀರೋ ಅಥವಾ ಕೇವಲ ಏಕದರ್ಶಿಗಳಾಗಿ ಕರ್ಮ ಮಾಡುತ್ತೀರೋ? ಏನಾಗಿದ್ದೀರಿ? ಏಕಕಾಲ ದರ್ಶಿಗಳೇ? ಅಥವಾ ತ್ರಿಕಾಲದರ್ಶಿಗಳೇ? ನಾಳೆ ಏನಾಗಲಿದೆ ಎಂಬುದನ್ನು ತಿಳಿದಿದ್ದೀರಾ? 'ನಾಳೆ ಏನಾಗುವುದೋ ಅದು ಬಹಳ ಒಳ್ಳೆಯದಾಗುತ್ತದೆ ಎಂದು ನಮಗೆ ತಿಳಿದಿದೆ' ಎಂದು ಹೇಳಿರಿ. ಇದನ್ನಂತೂ ತಿಳಿದಿದ್ದೀರಲ್ಲವೇ? ಅಂದಾಗ ತ್ರಿಕಾಲದರ್ಶಿಗಳಾದಿ ರಲ್ಲವೇ? ಏನಾಯಿತೋ ಅದೂ ಒಳ್ಳೆಯದು, ಏನಾಗುತ್ತಿದೆಯೋ ಅದು ಇನ್ನೂ ಒಳ್ಳೆಯದು, ಏನಾಗುವುದಿದೆಯೋ ಅದು ಇನ್ನೂ ಬಹಳ ಒಳ್ಳೆಯದಾಗಿರುತ್ತದೆ. 'ಒಳ್ಳೆಯದಕ್ಕಿಂತಲೂ ಒಳ್ಳೆಯದೇ ಆಗುತ್ತದೆ. ಕೆಟ್ಟದಾಗಲು ಸಾಧ್ಯವೇ ಇಲ್ಲ' ಎಂಬ ನಿಶ್ಚಯ ಇದೆಯಲ್ಲವೇ? ಏಕೆ? ಏಕೆಂದರೆ

ಒಳ್ಳೆಯವರಿಂಗಿತಲೂ ಒಳ್ಳೆಯ ತಂದೆ ಸಿಕ್ಕಿದರು, ತಾವೂ ಸಹ ಒಳ್ಳೆಯವರಿಗಿಂತಲೂ ಒಳ್ಳೆಯವರಾಗಿದ್ದೀರಿ, ಒಳ್ಳೆಯದಕ್ಕಿಂತಲೂ ಒಳ್ಳೆಯ ಕರ್ಮಗಳನ್ನು ಮಾಡುತ್ತಿದ್ದೀರಿ. ಅಂದಾಗ ಎಲ್ಲವೂ ಒಳ್ಳೆಯದೇ ಆಯಿತಲ್ಲವೇ? ಅಥವಾ ಸ್ವಲ್ಪ ಕೆಟ್ಟದು, ಸ್ವಲ್ಪ ಒಳ್ಳೆಯದಿದೆಯೇ? ಯಾವಾಗ 'ನಾನು ಶ್ರೇಷ್ಠ ಆತ್ಮ ಆಗಿದ್ದೇನೆ' ಎಂದು ತಿಳಿದುಬಿಟ್ಟಿತೋ, ಆಗ ಶ್ರೇಷ್ಠ ಆತ್ಮಗಳ ಸಂಕಲ್ಪ, ಮಾತು, ಕರ್ಮ ಎಲ್ಲವೂ ಶ್ರೇಷ್ಠವೇ ಆಗಿರುತ್ತದೆಯಲ್ಲವೇ? ಆದ್ದರಿಂದ ಸದಾ 'ಕಲ್ಯಾಣಕಾರಿ ತಂದೆಯು ಸಿಕ್ಕಿದರು ಎಂದಮೇಲೆ ಸದಾ ಕಲ್ಯಾಣವೇ ಕಲ್ಯಾಣವಿದೆ' ಎಂಬುದನ್ನು ಸದಾ ಸ್ಮೃತಿಯಲ್ಲಿಟ್ಟುಕೊಳ್ಳಿ. ತಂದೆಗೆ 'ವಿಶ್ವಕಲ್ಯಾಣಕಾರಿ' ಎಂದು ಹೇಳಲಾಗುತ್ತದೆ ಮತ್ತು ತಾವು 'ಮಾಸ್ಟರ್ ವಿಶ್ವಕಲ್ಯಾಣಕಾರಿ' ಆಗಿದ್ದೀರಿ. ಅಂದಮೇಲೆ ಯಾರು ವಿಶ್ವಕಲ್ಯಾಣವನ್ನು ಮಾಡುವವರಾಗಿದ್ದಾರೋ ಅವರ ಅಕಲ್ಯಾಣ ಆಗಲು ಸಾಧ್ಯವೇ ಇಲ್ಲ. ಆದ್ದರಿಂದ 'ಪ್ರತಿ ಸಮಯ, ಪ್ರತಿ ಕಾರ್ಯ, ಪ್ರತಿ ಸಂಕಲ್ಪ ಕಲ್ಯಾಣಕಾರಿಯಾಗಿದೆ' ಎಂಬ ನಿಶ್ಚಯವಿಡಿ. ಸಂಗಮಯುಗದ ಹೆಸರೂ ಸಹ 'ಕಲ್ಯಾಣಕಾರಿ ಯುಗ' ಎಂಬುದಾಗಿದೆ. ಅಂದಮೇಲೆ ಅಕಲ್ಯಾಣ ಆಗಲು ಸಾಧ್ಯವೇ ಇಲ್ಲ. ಹಾಗಾದರೆ ಯಾವ ಮಾತನ್ನು ನೆನಪಿನಲ್ಲಿ ಇಟ್ಟುಕೊಳ್ಳುವಿರಿ? ಏನಾಗುತ್ತಿದೆಯೋ ಅದು ಒಳ್ಳೆಯದು ಮತ್ತು ಏನಾಗುವುದಿದೆಯೋ ಅದು ಬಹಳ ಬಹಳ ಒಳ್ಳೆಯದು ಎಂಬ ಈ ಸ್ಮೃತಿ ಸದಾ ಮುಂದುವರೆಸುತ್ತಾ ಹೋಗುತ್ತದೆ. ಒಳ್ಳೆಯದು. ಎಲ್ಲರೂ ಮೂಲೆ ಮೂಲೆಯಲ್ಲಿ ತಂದೆಯ ಧ್ವಜವನ್ನು ಹಾರಿಸುತ್ತಿದ್ದೀರಿ. ಎಲ್ಲರೂ ಬಹಳ ಧೈರ್ಯ ಮತ್ತು ತೀವ್ರ ಪುರುಷಾರ್ಥದಿಂದ ಮುಂದುವರಿಯುತ್ತಿದ್ದೀರಿ ಮತ್ತು ಮುಂದುವರಿಯುತ್ತಾ ಇರುತ್ತೀರಿ. ಭವಿಷ್ಯವು ಕಂಡು ಬರುತ್ತಿದೆಯಲ್ಲವೆ? 'ತಮ್ಮ ಭವಿಷ್ಯ ಏನು' ಎಂದು ಯಾರಾದರೂ ಕೇಳಿದರೆ, 'ಅದು ಬಹಳ ಚೆನ್ನಾಗಿದೆ ಎಂದು ನಮಗೆ ತಿಳಿದಿದೆ' ಎಂದು ಹೇಳಿರಿ. **(26–03–1993)**

**ದಾದಿ ಜಾನಕಿಯವರ ಜೊತೆ ಭೇಟಿ**: ಒಳ್ಳೆಯ ಪಾತ್ರವನ್ನು ಅಭಿನಯಿಸಿದಿ ರಲ್ಲವೆ? ಎಲ್ಲಿಯೇ ಇದ್ದರೂ ವಿಶೇಷ ಪಾತ್ರಧಾರಿಯಾದ ತಾವು ವಿಶೇಷ ಪಾತ್ರವನ್ನು ಅಭಿನಯಿಸದೆ ಇರಲಾರಿರಿ. ಇದು ಡ್ರಾಮಾದಲ್ಲಿ ನಿಗದಿಯಾಗಿದೆ. ಒಳ್ಳೆಯದು. ಸುತ್ತುವುದು ಬಹಳ ಒಳ್ಳೆಯದಾಗಿದೆ. ಸುತ್ತಾಡಿ ಪುನಃ ಮಧುರ ಮನೆಗೆ ವಾಪಸ್ಸಾದಿರಿ. ಸೇವೆಯ ಸುತ್ತಾಟ ಅನೇಕ ಆತ್ಮಗಳ ಬಗ್ಗೆ ವಿಶೇಷ ಉಮ್ಮಂಗ–ಉತ್ಸಾಹದ ಸುತ್ತಾಟವಾಗಿದೆ. ಎಲ್ಲವೂ ಸರಿಯಾಗಿದೆಯಲ್ಲವೇ? ಒಳ್ಳೆಯದಕ್ಕಿಂತಲೂ ಒಳ್ಳೆಯದಾಗಿದೆ. ಡ್ರಾಮಾದ ನಿಗದಿಯು ಅವಶ್ಯವಾಗಿ ಸೆಳೆಯುತ್ತದೆ. ತಾವು ಇರಲು ಬಯಸಿದರೂ, ಅದು ಡ್ರಾಮಾದಲ್ಲಿ ಇಲ್ಲವೆಂದರೆ ಏನು ಮಾಡುವಿರಿ? ಹೋಗಬೇಕು ಎಂದು ಯೋಚನೆಯನ್ನೂ ಮಾಡುತ್ತೀರಿ. ಏಕೆಂದರೆ ಸೇವೆಯು ನಿಗದಿಯಾಗಿದೆ ಅದೂ ಸಹ ತನ್ನ ಕಾರ್ಯವನ್ನು ಮಾಡಿಸಿಕೊಳ್ಳುತ್ತದೆ. ಬರುವುದು – ಹೋಗುವುದು ಇದೇ ವಿಧಿಯಾಗಿದೆ. ಒಳ್ಳೆಯದು, ಸಂಘಟನೆ ಚೆನ್ನಾಗಿದೆ. **(02–12–1993)**

## ತಮ್ಮ ಶ್ರೇಷ್ಠ ಸ್ಥಿತಿಯನ್ನು ರೂಪಿಸಿಕೊಳ್ಳಲು ಅಮೃತವೇಳೆಯಲ್ಲಿ ಮೂರು ಬಿಂದುಗಳ ತಿಲಕವನ್ನು ಇಟ್ಟುಕೊಳ್ಳಿ.

ಸದಾ ಅಮೃತವೇಳೆ ಸ್ವಯಂಗೆ ಮೂರು ಬಿಂದುಗಳ ತಿಲಕವನ್ನು ಇಟ್ಟುಕೊಳ್ಳುತ್ತೀರಾ? ತಿಲಕದ ಅರ್ಥ ಏನು? ಸ್ಮೃತಿಯ ತಿಲಕ. ತಿಲಕಕ್ಕೆ ಬಹಳ ಮಹತ್ವವಿದೆ. ತಿಲಕವು ರಾಜ್ಯದ ಚಿಹ್ನೆಯೂ ಆಗಿದೆ. ರಾಜ್ಯವನ್ನು ಕೊಡುವ ಸಮಯದಲ್ಲಿ 'ರಾಜತಿಲಕ' ಎನ್ನುತ್ತಾರೆ. ಮತ್ತು ಭಕ್ತಿಯಲ್ಲೂ ತಿಲಕದ ಚಿಹ್ನೆಯನ್ನು ಅವಶ್ಯವಾಗಿ ಇಡುತ್ತಾರೆ. ಮತ್ತು ಸುಮಂಗಲಿತನ ಮತ್ತು ಭಾಗ್ಯದ ಗುರುತೂ ತಿಲಕವೇ ಆಗಿದೆ. ಅಂದಾಗ ತಿಲಕಕ್ಕೆ ಮಹತ್ವವಿದೆ. ಏಕೆಂದರೆ ತಿಲಕವು ಸ್ಮೃತಿಯ ಗುರುತಾಗಿದೆ. ಜ್ಞಾನ ಮಾರ್ಗದಲ್ಲೂ ಸ್ಮೃತಿಯದೇ ಮಹತ್ವವಿದೆಯಲ್ಲವೇ? ಎಂತಹ ಸ್ಮೃತಿಯೋ ಅಂತಹ ಸ್ಥಿತಿ ಇರುತ್ತದೆ. ಒಂದುವೇಳೆ ಸ್ಮೃತಿ ಶ್ರೇಷ್ಠವಾಗಿದ್ದರೆ ಸ್ಥಿತಿಯೂ ಶ್ರೇಷ್ಠವಾಗಿರುತ್ತದೆ. ಒಂದುವೇಳೆ ಸ್ಮೃತಿ ವ್ಯರ್ಥವಾಗಿದ್ದರೆ ಸ್ಥಿತಿಯು ಸಮರ್ಥಕ್ಕೆ ಬದಲಾಗಿ ವ್ಯರ್ಥವಾಗಿರುತ್ತದೆ. ತಂದೆಯು ಮೂರು ಬಿಂದುಗಳ ತಿಲಕವನ್ನು ಅಂದರೆ ಮೂರು ಸ್ಮೃತಿಗಳ ತಿಲಕವನ್ನು ಕೊಟ್ಟಿದ್ದಾರೆ. ಏಕೆಂದರೆ ಮೂರೂ ಸ್ಮೃತಿಗಳೂ ಅವಶ್ಯವಾಗಿದೆ ಮತ್ತು ಮೂರು ಬಿಂದುಗಳೂ ಸಹಜವಾಗಿವೆ. ಚಿಕ್ಕ ಮಕ್ಕಳಿಗೂ ಬಿಂದು ಹಾಕಲು ಹೇಳಿದರೂ ಹಾಕಿ ಬಿಡುತ್ತಾರಲ್ಲವೇ? 'ನಾನು ಆತ್ಮ ಆಗಿದ್ದೇನೆ' ಎಂಬ ಈ ಸ್ವಯಂನ ಸ್ಮೃತಿ, ನಂತರ ತಂದೆಯ ಸ್ಮೃತಿ ಮತ್ತು ಶ್ರೇಷ್ಠ ಕರ್ಮಕ್ಕಾಗಿ ಡ್ರಾಮಾದ ಸ್ಮೃತಿ. ಡ್ರಾಮಾ ನಡೆಯುತ್ತಿರುತ್ತದೆ, ನಡೆದುಹೋಗುತ್ತದೆ. ಯಾವುದು ಈಗ ವರ್ತಮಾನವೋ ಅದು ಒಂದು ಸೆಕೆಂಡಿನಲ್ಲಿ ಭೂತಕಾಲವಾಗಿಬಿಡುತ್ತದೆ ಅಂದರೆ ಕಳೆದುಹೋಗುತ್ತದೆ ಆದ್ದರಿಂದ ಕಳೆದುದು ಕಳೆದುಹೋಯಿತು, ಫುಲ್ ಸ್ಟಾಪ್. ಅಂದಾಗ ಅದು ಬಿಂದು ಆಯಿತಲ್ಲವೆ? ಆದ್ದರಿಂದ ಈ ಮೂರೂ ಸ್ಮೃತಿಗಳು ಸದಾ ಇದ್ದರೆ ಸ್ಥಿತಿಯೂ ಸಹ ಶ್ರೇಷ್ಠವಾಗಿರುತ್ತದೆ. ಕೇವಲ ಆತ್ಮದ

ಸ್ಮೃತಿ ಮಾತ್ರ ಇರುವುದಲ್ಲ. ಆತ್ಮದ ಸ್ಮೃತಿಯ ಜೊತೆ ತಂದೆಯ ಸ್ಮೃತಿಯಂತೂ ಇದ್ದೇ ಇದೆ. ಮತ್ತು ತಂದೆಯ ಜೊತೆಗೆ ಡ್ರಾಮಾದ ಸ್ಮೃತಿಯೂ ಸಹ ಅತೀ ಅವಶ್ಯಕವಾಗಿದೆ. ಒಂದುವೇಳೆ ಡ್ರಾಮಾದ ಜ್ಞಾನ ಇಲ್ಲದಿದ್ದರೂ ಕರ್ಮದಲ್ಲಿ ಮೇಲೆ-ಕೆಳಗೆ ಆಗುವಿರಿ. ಯಾವುದೇ ಭಿನ್ನ ಭಿನ್ನ ಪರಿಸ್ಥಿತಿಗಳು ಬರುತ್ತವೆಯೋ, ಅದರಲ್ಲಿ ಡ್ರಾಮಾದ ಜ್ಞಾನ ಅತೀ ಅವಶ್ಯಕವಾಗಿವೆ. ಅನುಭವಿಗಳಾಗಿದ್ದೀರಲ್ಲವೇ? ಯಾವ ಸ್ಮೃತಿ ಇರುತ್ತದೆ? ಆಗಿಯೇ ಅಗುತ್ತದೆ, ನಥಿಂಗ್ ನ್ಯೂ (ಇದೇನೂ ಹೊಸದಲ್ಲ). ಇದು ಆಗಲೇ ಬೇಕು ಎಂಬುದು ಮೊದಲೇ ತಿಳಿದಿದ್ದರೆ ವಿಚಲಿತರಾಗುವುದಿಲ್ಲ. ಆಗಲೇ ಬೇಕಾಗಿದೆ ಎನ್ನುವ ಜ್ಞಾನ ಮೊದಲೇ ಇದ್ದರೆ, ಆಟ ಎಂದು ತಿಳಿದು ನೋಡುತ್ತೀರಿ. ಬಿರುಗಾಳಿಯಲ್ಲ ಬದಲಿಗೆ ಆಟವಾಗಿದೆ. ನಾಟಕದಲ್ಲಿಯೂ ಸಹ ಬಿರುಗಾಳಿ, ಪ್ರವಾಹ ಎಲ್ಲವನ್ನೂ ನೋಡುತ್ತೀರಲ್ಲವೇ? ಆದರೆ ವಿಚಲಿತರಾಗುವಿರಾ? ಏಕೆಂದರೆ, ಅದು ಡ್ರಾಮಾ ಎಂದು ತಿಳಿದಿದ್ದೀರಿ. ಹಾಗಾದರೆ ಅಚಲರಾಗಿದ್ದೀರಾ ಅಥವಾ ಸ್ವಲ್ಪ ಸ್ವಲ್ಪ ಅಲುಗಾಡುತ್ತೀರಾ? ಯಾಕೆ? ಏನಾಗುತ್ತಿದೆ? ಏನಾಗುವುದೋ? ಹೇಗಾಗುತ್ತದೆಯೋ?.... ಎಂಬ ವಿಚಾರಗಳು ಬರುತ್ತವೆಯೇ? ಯಾವಾಗ ಡ್ರಾಮಾದ ಜ್ಞಾನ ಇರುತ್ತದೋ ಆಗ ಅಚಲ ಅಡೋಲರಾಗಿರುತ್ತೀರಿ. ಡ್ರಾಮಾದ ಜ್ಞಾನ ಇಲ್ಲವೆಂದರೆ ಏರು-ಪೇರು ಉಂಟಾಗುತ್ತದೆ.

### ಚಿಂತೆಗಳಿಂದ ಮುಕ್ತರು, ಸದಾ ನಿಶ್ಚಿಂತ ಅಥವಾ ಚಿಂತಾಮುಕ್ತ ಚಕ್ರವರ್ತಿಯಾಗಿ ಇರಲು ನಿಶ್ಚಯಬುದ್ಧಿಯುಳ್ಳವರಾಗಿರಿ.

ಸದಾ ತಮ್ಮನ್ನು ತಾವು 'ಕಲ್ಪ ಕಲ್ಪದ ಅಧಿಕಾರಿ ಆತ್ಮ ಆಗಿದ್ದೇನೆ' ಎನ್ನುವ ಅನುಭವ ಮಾಡುತ್ತೀರಾ? ಅನೇಕ ಸಲ ಈ ಅಧಿಕಾರವನ್ನು ಪ್ರಾಪ್ತಿ ಮಾಡಿಕೊಂಡಿದ್ದೀರಿ ಮತ್ತು ಮುಂದೆಯೂ ಕಲ್ಪ ಕಲ್ಪವೂ ಪ್ರಾಪ್ತಿ ಮಾಡಿಕೊಳ್ಳುತ್ತೀರಿ ಎನ್ನುವುದು ನಿಶ್ಚಿತವಾಗಿದೆ. ಈ ನಿಶ್ಚಯ ಪಕ್ಕಾ ಇದೆಯಲ್ಲವೇ? ಏಕೆಂದರೆ ನಿಶ್ಚಯವೇ ಈ ಬ್ರಾಹ್ಮಣ ಜೀವನದ ಫೌಂಡೇಷನ್ (ತಳಪಾಯ) ಆಗಿದೆ. ಒಂದುವೇಳೆ ನಿಶ್ಚಯದ ಫೌಂಡೇಷನ್ ಪಕ್ಕಾ ಆಗಿದ್ದರೆ ಎಂದಿಗೂ ಅಲುಗಾಡುವುದಿಲ್ಲ. ಎಷ್ಟೇ ಬಿರುಗಾಳಿ ಬರಲಿ, ಎಷ್ಟೇ ಭೂಕಂಪವಾಗಲೀ ಆದರೂ ಅಲುಗಾಡುವುದಿಲ್ಲ. ಏಕೆಂದರೆ ಫೌಂಡೇಷನ್ ಪಕ್ಕಾ ಆಗಿದೆ. ಈಗಲೂ ನೋಡಿರಿ ಪ್ರಕೃತಿಯ ಭೂಕಂಪ ಬಂದರೆ ಎಂತಹ ಕಟ್ಟಡಗಳು ಬೀಳುತ್ತವೆ? ಯಾವುದು ಕಚ್ಚಾ ಆಗಿರುತ್ತವೆಯೋ ಅವು. ಪಕ್ಕಾ ಫೌಂಡೇಷನ್ ಇರುವ ಕಟ್ಟಡಗಳು ಬೀಳುವುದಿಲ್ಲ. ಅಂದಾಗ ತಮ್ಮ ಫೌಂಡೇಷನ್ ಎಷ್ಟು ಭದ್ರವಾಗಿದೆ? ಅಲುಗಾಡುವಂತಹುದೇ? ಅಲುಗಾಡುವುದಿಲ್ಲ, ಆದರೆ ಸ್ವಲ್ಪ ಬಿರುಕು ಬಿಡುವಂತಹುದೇ? ಸ್ವಲ್ಪವೂ ಇರಬಾರದು. ಏಕೆಂದರೆ ಕೆಲವರು ಬಿದ್ದು ಬಿಡುತ್ತಾರೆ, ಕೆಲವರು ಬೀಳುವುದಿಲ್ಲ ಆದರೆ ಸ್ವಲ್ಪ ಬಿರುಕಿನಲ್ಲಿ ಬಂದುಬಿಡುತ್ತಾರೆ. ಅಂದಾಗ ತಾವು ಅದರಲ್ಲೂ ಪಕ್ಕಾ ಆಗಿದ್ದೀರಿ. ಅಂದಾಗ ನಿಶ್ಚಯದ ಗುರುತು - ಪ್ರತಿ ಕಾರ್ಯದಲ್ಲಿ, ಮನಸ್ಸಿನಲ್ಲಿ, ವಾಣಿ, ಕರ್ಮ, ಸಂಪರ್ಕ-ಸಂಬಂಧದಲ್ಲಿ, ಎಲ್ಲಾ ಮಾತಿನಲ್ಲಿ ಸಹಜವಾಗಿ ವಿಜಯ ಇರುವುದಾಗಿದೆ. ಪರಿಶ್ರಮ ಪಟ್ಟು ಪಡೆಯುವ ವಿಜಯ, ವಿಜಯವಲ್ಲ. ಸಹಜ ವಿಜಯಿ. ಅಂದಾಗ ಈ ಗುರುತು ಕಂಡು ಬರುವುದಾ? ಅಥವಾ ವಿಜಯವನ್ನು ಪ್ರಾಪ್ತಿ ಮಾಡಿಕೊಳ್ಳುವುದರಲ್ಲಿ ಪರಿಶ್ರಮ ಆಗುತ್ತದೆಯೇ? ಕೆಲವೊಮ್ಮೆ ಸಹಜ. ಕೆಲವೊಮ್ಮೆ ಪರಿಶ್ರಮ? ಆದರೆ ನಿಶ್ಚಯದ ಗುರುತು 'ಸಹಜ ವಿಜಯ' ವಾಗಿದೆ. ಒಂದುವೇಳೆ ಪರಿಶ್ರಮವಾಗುತ್ತಿದ್ದರೆ ಏನೋ ಮಿಕ್ಸ್ (ಕಲಬೆರಕೆ) ಆಗಿದೆ ಎಂದು ತಿಳಿಯಿರಿ. ಸಂಶಯ ಇಲ್ಲದೇ ಇರಬಹುದು, ಆದರೆ ಸ್ವಲ್ಪ ವ್ಯರ್ಥವು ಬೆರಕೆ ಆಗುತ್ತಿದೆ, ಆದುದರಿಂದ ಸಹಜವಾಗಿ ವಿಜಯ ಆಗುತ್ತಿಲ್ಲ. ಇಲ್ಲದಿದ್ದರೆ ನಿಶ್ಚಯ ಬುದ್ಧಿ ಆತ್ಮಗಳಿಗೆ ವಿಜಯವು ಸದಾ ಎವರ್‌ರೆಡಿಯಾಗಿರುತ್ತದೆ. ಅದರ ಸ್ಥಾನವೇ ಅದಾಗಿದೆ. ಎಲ್ಲಿ ನಿಶ್ಚಯವಿರುವುದೋ ಅಲ್ಲಿ ವಿಜಯವು ಇದ್ದೇ ಇರುತ್ತದೆ. ನಿಶ್ಚಯ ಇರುವವರ ಬಳಿಗೇ ವಿಜಯವು ಹೋಗುತ್ತದೆಯಲ್ಲವೇ? ಎಲ್ಲಾ ಮಾತುಗಳಲ್ಲೂ ನಿಶ್ಚಯ ಇರಬೇಕು. ಕೇವಲ ತಂದೆಯ ಮೇಲೆ ಮಾತ್ರ ನಿಶ್ಚಯವಲ್ಲ. ಆದರೆ ತಮಗೆ ತಮ್ಮ ಮೇಲೆಯೂ ನಿಶ್ಚಯ, ಬ್ರಾಹ್ಮಣ ಪರಿವಾರದ ಮೇಲೆಯೂ ನಿಶ್ಚಯ, ಡ್ರಾಮಾದ ಪ್ರತಿಯೊಂದು ದೃಶ್ಯದ ಮೇಲೆಯೂ ನಿಶ್ಚಯ ಇರಬೇಕು. ಆಗಲೇ 'ಸಂಪೂರ್ಣ ನಿಶ್ಚಯ ಬುದ್ಧಿಯುಳ್ಳವರು' ಎಂದು ಹೇಳಲಾಗುತ್ತದೆ. ಒಂದುವೇಳೆ ತಂದೆಯ ಮೇಲೆ ನಿಶ್ಚಯವಿದೆ ಆದರೆ ಸ್ವಯಂ ತಮ್ಮ ಮೇಲೆ ತಮಗೆ ನಿಶ್ಚಯವಿಲ್ಲ, ನಡೆಯುತ್ತಾ, ನಡೆಯುತ್ತಾ ತಮ್ಮೊಂದಿಗೆ ಬೇಸರಗೊಂಡರೆ ಅದರ ಅರ್ಥ ನಿಶ್ಚಯವಿಲ್ಲ ಎಂಬುದಾಗಿದೆ. ಈ ಕಾರಣದಿಂದಲೇ ಹಾಗಾಗುತ್ತೀರಿ. ಅಂದಮೇಲೆ ಅದೂ ಸಹ ಅಪೂರ್ಣ ನಿಶ್ಚಯವಾಯಿತು. ತಂದೆಯ ಮೇಲೂ ಇದೆ, ಸ್ವಯಂ ತಮ್ಮ ಮೇಲೂ ಇದೆ, ಆದರೆ ಪರಿವಾರದ ಮೇಲೆ ನಿಶ್ಚಯವಿಲ್ಲ. ಪರಿವಾರದ ಕಾರಣ ಗೊಂದಲದಲ್ಲಿ ಬರುತ್ತೀರಿ. ಆಗಲೂ ಅಪೂರ್ಣ ನಿಶ್ಚಯ ಎಂದು ಹೇಳಲಾಗುತ್ತದೆ. 'ಏನಾಯಿತೋ ಅದು ಒಳ್ಳೆಯದೇ ಆಯಿತು' ಎಂಬುದಾಗಿ ಡ್ರಾಮಾದ ಮೇಲೂ ಸಂಪೂರ್ಣ ನಿಶ್ಚಯ ಇರಬೇಕು. ಇದಕ್ಕೇ ಡ್ರಾಮಾದ

ಮೇಲೆ ನಿಶ್ಚಯವಿರುವುದು ಎಂದು ಹೇಳಲಾಗುತ್ತದೆ. ಇಂತಹ ಸಂಪೂರ್ಣ ನಿಶ್ಚಯ ಬುದ್ಧಿ ಇದೆಯೇ? ಕೆಲವೊಮ್ಮೆ ಪೂರ್ತಿ, ಕೆಲವೊಮ್ಮೆ ಅರ್ಧ? ಯಾವಾಗ ಅನೇಕ ಸಲದ ನಶೆ ಇದ್ದಾಗ ಅಂದರೆ ಅನೇಕ ಸಲ ವಿಜಯಿಗಳಾಗಿದ್ದೀರಿ, ಈಗ ಪುನರಾವರ್ತನೆ ಮಾಡುತ್ತಿದ್ದೀರಿ ಅಷ್ಟೆ. ಯಾವುದೇ ಹೊಸ ಮಾತನ್ನು ಮಾಡುತ್ತಿಲ್ಲ, ಕೇವಲ ರಿಪೀಟ್ (ಪುನರಾವರ್ತನೆ) ಮಾಡುತ್ತಿದ್ದೀರಿ. ಅಂದಾಗ ರಿಪೀಟ್ ಮಾಡುವುದು ಸಹಜವಾಗಿರುತ್ತದೆಯಲ್ಲವೇ? ಅಂದಾಗ 'ನಿಶ್ಚಯ ಬುದ್ಧಿ ವಿಜಯಿ' ಎಂಬುದು ಸದಾ ಸ್ಮೃತಿಯಲ್ಲಿರಲಿ. ನಿಶ್ಚಯವೂ ಇದೆ, ವಿಜಯವೂ ಇದೆ. 'ವಿಜಯವು ನಮ್ಮದಲ್ಲದೆ ಇನ್ಯಾರದಾಗುತ್ತದೆ?' ಎಂಬ ನಶೆ ಇರಲಿ. ವಿಜಯವು ಇದೆ ಮತ್ತು ಸದಾ ಇರುತ್ತದೆ. ಅಂದಾಗ ಅಟಲ ನಿಶ್ಚಯವಿರಬೇಕು, ಅಲುಗಾಡುವವರಲ್ಲ. ಒಂದು ಸಣ್ಣ ವಿಷಯಕ್ಕೆ ಅಲುಗಾಡುವಂತಹ ನಿಶ್ಚಯವಲ್ಲ. ಅಟಲ ನಿಶ್ಚಯವಿದ್ದರೆ ಅಟಲ ವಿಜಯ ಆಗುತ್ತದೆ. ವಿಜಯದ ನಿಶ್ಚಿತತೆಯನ್ನು ಅಲುಗಾಡಿಸಲು ಸಾಧ್ಯವಿಲ್ಲ. ಅಟಲವಾಗಿದೆ. ಅಂದಾಗ ಇಂತಹ ನಿಶ್ಚಯಬುದ್ಧಿ ಯುಳ್ಳವರು ಸದಾ ಹರ್ಷಿತರಾಗಿರುತ್ತಾರೆ, ನಿಶ್ಚಿಂತರಾಗಿರುತ್ತಾರೆ. ಏಕೆಂದರೆ ಚಿಂತೆಯು ಖುಷಿಯನ್ನು ಸಮಾಪ್ತಿ ಮಾಡುತ್ತದೆ. ಮತ್ತು ನಿಶ್ಚಿಂತರಾಗಿದ್ದರೆ ಖುಷಿಯು ಸದಾ ಇರುತ್ತದೆ. ಅಂದಾಗ ನಿಶ್ಚಯಬುದ್ಧಿಯುಳ್ಳವರ ಮತ್ತೊಂದು ಗುರುತು ನಿಶ್ಚಿಂತತೆಯಾಗಿದೆ. ಇಲ್ಲದಿದ್ದರೆ ಸಣ್ಣ ಮಾತಿಗೂ, ಇದೇನಾಯಿತು? ಇದು ಈ ರೀತಿ ಆಯಿತು ಎಂಬ ಚಿಂತೆ ಆವರಿಸುತ್ತದೆ. ಈ ಏಕೆ, ಏನು ಎಂಬುದರಿಂದಲೂ ನಿಶ್ಚಿಂತತೆ ಇರಬೇಕಾಗಿದೆ. ಏನು, ಏಕೆ, ಹೇಗೆ – ಇವೆಲ್ಲವೂ ಚಿಂತೆಯ ಅಲೆಗಳಾಗಿವೆ. ಈಗ ದೊಡ್ಡ ರೂಪದ ಚಿಂತೆಗಳಿಲ್ಲ, ಆದರೆ ಈ ರೂಪದ ಚಿಂತೆಗಳಿರುತ್ತವೆ. ಆಗಬಾರದಾಗಿತ್ತು, ಆಗಿಹೋಯಿತು, ಹೀಗೆ, ಹಾಗೆ, ಏಕೆ, ಏನು, ಹೇಗೆ..... ಈ ಶಬ್ದಗಳು ಬದಲಾಗಿ ಬಿಡುತ್ತವೆ. ಅಂದಾಗ ಆಗಾಗ ಪ್ರಶ್ನಾರ್ಥಕ ಚಿಹ್ನೆಗಳು ಆಗುವುದೇ? ಕೆಲವರು 'ನನ್ನ ಬಳಿಯೇ ಏಕೆ ಹೀಗಾಗುತ್ತದೆ, ನನಗೇ ಏಕೆ ಆಗುತ್ತದೆ, ನನ್ನ ಹಿಂದೆಯೇ ಈ ಬಂಧನ ಏಕಿದೆ, ನನ್ನ ಹಿಂದೆಯೇ ಮಾಯೆಯು ಏಕೆ ಬರುತ್ತದೆ, ನನ್ನ ಲೆಕ್ಕಾಚಾರಗಳು ಮಾತ್ರ ಏಕೆ ಕಠಿಣವಾಗಿದೆ?' ಎಂದು ಹೇಳುತ್ತಾರಲ್ಲವೇ? ಆದ್ದರಿಂದ ಈ 'ಏಕೆ' ಎಂಬುದು ಬಂದಿತು ಎಂದರೆ ಚಿಂತೆಯ ಅಲೆಯು ಇದ್ದಂತೆ. ಅಂದಾಗ ಈ ಚಿಂತೆಗಳಿಂದಲೂ ದೂರವಿರುವುದಕ್ಕೇ ಹೇಳಲಾಗುತ್ತದೆ ನಿಶ್ಚಿಂತರಾಗಿರುವವರು ಎಂದು. ಹಾಗಾದರೆ ತಾವು ಯಾರಾಗಿದ್ದೀರಿ? ನಿಶ್ಚಿಂತರಿದ್ದೀರಾ ಅಥವಾ ಸ್ವಲ್ಪ ಸ್ವಲ್ಪ ಏಕೆ, ಏನು ಎಂಬುದಿದೆಯೇ? ನಿಶ್ಚಿಂತ ಆತ್ಮನ ಸ್ಲೋಗನ್ (ಘೋಷವಾಕ್ಯ) 'ಒಳ್ಳೆಯದಾಯಿತು, ಒಳ್ಳೆಯದಾಗುತ್ತಾ ಇದೆ ಮತ್ತು ಒಳ್ಳೆಯದೇ ಆಗಲಿದೆ' ಎಂಬುದಾಗಿದೆ. ಕೆಟ್ಟದರಲ್ಲೂ ಒಳ್ಳೆಯದನ್ನೇ ಅನುಭವ ಮಾಡುತ್ತಾರೆ. ಕೆಟ್ಟದರಿಂದಲೂ ತಮ್ಮ ಪಾಠವನ್ನು ಕಲಿಯುತ್ತಾರೆ. ಕೆಟ್ಟದನ್ನು ಕೆಟ್ಟದರ ರೂಪದಲ್ಲಿ ನೋಡುವುದಿಲ್ಲ. ಇದಕ್ಕೇ 'ನಿಶ್ಚಯ ಬುದ್ಧಿ ನಿಶ್ಚಿಂತ ಆತ್ಮ' ಎಂದು ಹೇಳಲಾಗುತ್ತದೆ. 'ಚಿಂತೆ' ಎಂಬ ಶಬ್ದದಿಂದಲೂ ಅವಿದ್ಯಾ (ತಿಳಿಯದವರು) ಆಗಿರಿ. ಚಿಂತೆ ಎಂದರೇನು ಎನ್ನುವ ಅನುಭವವೂ ಇಲ್ಲದಿರುವುದು. ಇಂತಹ ಸ್ಥಿತಿಯುಳ್ಳವರಿಗೇ ನಿಶ್ಚಿಂತರು ಎಂದು ಹೇಳಲಾಗುತ್ತದೆ. ಯಾವುದೇ ಮಾತು ಬಂದರೂ 'ಏನಾಗುತ್ತದೆ?' ಎಂಬ ಮಾತು ಬರುವುದಿಲ್ಲ. ಬದಲಿಗೆ ತಕ್ಷಣ 'ಒಳ್ಳೆಯದೇ ಆಗುತ್ತದೆ', 'ಕಳೆದು ಹೋಯಿತಲ್ಲ, ಒಳ್ಳೆಯದಾಯಿತು' ಎಂಬುದೇ ಬರುತ್ತದೆ. ಎಲ್ಲಿ ಒಳ್ಳೆಯದಿರುತ್ತದೋ ಅಲ್ಲಿ ನಿಶ್ಚಿಂತ ಚಕ್ರವರ್ತಿಗಳಾಗಿರುವಿರಿ. ಅಂದಮೇಲೆ ನಿಶ್ಚಯ ಬುದ್ಧಿಯುಳ್ಳವರು ಎಂಬುದರ ಅರ್ಥವೇ ಆಗಿದೆ ನಿಶ್ಚಿಂತ ಚಕ್ರವರ್ತಿಗಳಾಗಿರುವುದು. ಅಂದಾಗ ಈ ರೀತಿ ಇದೆ ಎನ್ನುವ ಅಥವಾ ಅಲ್ಪ ಸ್ವಲ್ಪ ಚಿಂತೆ ಯಾವಾಗಲಾದರೂ ಬಂದುಬಿಡುವುದೇ? ಅಂದಾಗ ನಿಶ್ಚಿಂತ ಚಕ್ರವರ್ತಿಗಳೇ ತಂದೆಯ ಸಮಾನ ಆಗಿರುವವರು. ತಂದೆಗೆ ಚಿಂತೆ ಇದೆಯೇನು? ಇಷ್ಟೊಂದು ದೊಡ್ಡ ಪರಿವಾರವಿದ್ದರೂ ಚಿಂತೆ ಇದೆಯೇ? ಎಲ್ಲವನ್ನೂ ತಿಳಿದಿದ್ದರೂ, ನೋಡುತ್ತಿದ್ದರೂ ನಿಶ್ಚಿಂತರು. ಈ ರೀತಿಯ ನಿಶ್ಚಿಂತರಾಗಿದ್ದೀರಾ? **(09–12–1993)**

## ಎಲ್ಲವನ್ನೂ ತಂದೆಗೆ ಸಮರ್ಪಿಸುವುದು ಎಂದರೆ ಡಬಲ್ ಲೈಟ್ ಆಗುವುದಾಗಿದೆ

ಸದಾ ತಮ್ಮನ್ನು ತಾವು ಕಮಲ ಪುಷ್ಪದ ಸಮಾನ ನ್ಯಾರಾ (ಭಿನ್ನರು) ಮತ್ತು ತಂದೆಗೆ ಪ್ಯಾರಾ (ಪ್ರಿಯರು) ಎನ್ನುವ ಅನುಭವ ಮಾಡುತ್ತೀರಾ? ಏಕೆಂದರೆ ಎಷ್ಟು ಭಿನ್ನತನವಿರುತ್ತದೆಯೋ ಅಷ್ಟು ತಂದೆಗೆ ಪ್ರಿಯರಾಗುವಿರಿ. ಎಂತಹದ್ದೇ ಪರಿಸ್ಥಿತಿ ಇರಲಿ, ಸಮಸ್ಯೆಗಳಿರಲಿ, ಆದರೆ ಸಮಸ್ಯೆಗಳಿಗೆ ಅಧೀನರಲ್ಲ, ಅಧಿಕಾರಿಗಳಾಗಿ ಸಮಸ್ಯೆಗಳನ್ನು ಆಟ ಆಡುತ್ತಾ ಆಡುತ್ತಾ ಪಾರು ಮಾಡುತ್ತಿದ್ದೀರಿ ಎನ್ನುವಂತೆ ಪಾರು ಮಾಡಿರಿ. ಆಟದಲ್ಲಿ ಸದಾ ಖುಷಿ ಇರುತ್ತದೆ. ಎಂತಹದ್ದೇ ಆಟವಿರಬಹುದು, ಆದರೆ ಆಟ ಎಂದ ಮೇಲೆ, ಎಂತಹದ್ದೇ ಪಾತ್ರವನ್ನು ಅಭಿನಯಿಸುತ್ತಿದ್ದರೂ ಆಂತರ್ಯದಲ್ಲಿ ಖುಷಿಯಲ್ಲಿರುತ್ತೀರಾ? ಹೊರನೋಟಕ್ಕೆ ಅಳುವಂತಹ ಪಾತ್ರವಿರಲಿ, ಆದರೆ ಅಂತರಂಗದಲ್ಲಿ 'ಇದೆಲ್ಲವೂ ಆಟವಾಗಿದೆ' ಎನ್ನುವ ಅರಿವು ಇರಲಿ. ಅದೇ ರೀತಿಯಲ್ಲಿ ಯಾವುದೇ ಮಾತು ಎದುರಿಗೆ ಬಂದರೂ 'ಇದು ಬೇಹದ್ದಿನ

ಆಟವಾಗಿದೆ, ಇದನ್ನು ಡ್ರಾಮಾ ಎಂದು ಹೇಳಲಾಗುತ್ತದೆ ಮತ್ತು ಈ ಡ್ರಾಮಾದಲ್ಲಿ ತಾವೆಲ್ಲರೂ ಹೀರೋ ಪಾತ್ರಧಾರಿ ಗಳಾಗಿದ್ದೀರಿ, ಸಾಧಾರಣ ಪಾತ್ರಧಾರಿಗಳಂತೂ ಅಲ್ಲವಲ್ಲ? ಅಂದಾಗ ಹೀರೋ ಪಾತ್ರಧಾರಿಗಳು ಎಂದರೆ ನಿಖರವಾದ ಪಾತ್ರವನ್ನು ಅಭಿನಯಿಸುವಂತಹವರು. ಅಂತಹವರನ್ನು ಮಾತ್ರ ಹೀರೋ ಎಂದು ಹೇಳಲಾಗುತ್ತದೆ. ಅಂದಮೇಲೆ ಸದಾ 'ಇದು ಬೇಹದ್ದಿನ ಆಟವಾಗಿದೆ' ಎನ್ನುವ ಅನುಭವ ಮಾಡುತ್ತೀರಾ? ಅಥವಾ ಆಗಾಗ ಅಟ ಎನ್ನುವುದನ್ನು ಮರೆತು ಹೋಗುತ್ತೀರಾ, ಸಮಸ್ಯೆಯು ಸಮಸ್ಯೆಯಾಗಿ ಕಾಣುವುದೇ? ಎಂತಹದ್ದೇ ಕಠಿಣ ಪರಿಸ್ಥಿತಿ ಇರಲಿ, ಆದರೆ ಆಟ ಎಂದು ತಿಳಿದುಕೊಂಡಾಗ ಕಠಿಣ ಸಮಸ್ಯೆಯೂ ಸಹ ಹಗುರವಾಗಿಬಿಡುತ್ತದೆ. **(23–12–1993)**

ತಿಳುವಳಿಕೆಯುಳ್ಳದ್ದರಲ್ಲಿ ನಂಬರ್ ಒನ್ ಆಗಿಬಿಟ್ಟಿದ್ದೀರಿ, ಕೇವಲ ಒಂದು ಮಾತಿನಲ್ಲಿ ಹುಡುಗಾಟದವರಾಗಿ ಬಿಡುತ್ತೀರಿ. ಅದು – ಸ್ವಯಂ ಅನ್ನು ಒಂದು ಸೆಕೆಂಡಿನಲ್ಲಿ ವ್ಯರ್ಥವನ್ನು ಯೋಚಿಸುವುದಕ್ಕೆ, ನೋಡುವುದಕ್ಕೆ, ಮಾತನಾಡುವುದಕ್ಕೆ ಮತ್ತು ಮಾಡುವುದಕ್ಕೆ ಫುಲ್‌ಸ್ಟಾಪ್ ಹಾಕಿ ಪರಿವರ್ತನೆ ಮಾಡಿಕೊಳ್ಳುವುದಾಗಿದೆ. ಈ ಬಲಹೀನತೆಯು ಸುಖದ ಅನುಭವವನ್ನು ಮಾಡುವುದರಲ್ಲಿ ಅಂತರ ತರುತ್ತದೆ, ಶಕ್ತಿ ಸ್ವರೂಪ ಅಥವಾ ತಂದೆಯ ಸಮಾನ ಆಗುವುದರಲ್ಲಿ ವಿಘ್ನ ಸ್ವರೂಪ ಆಗುತ್ತದೆ ಎಂದು ತಿಳಿದೂ ಇದ್ದೀರಿ, ಆದರೂ ಏನಾಗುತ್ತದೆ? ಸ್ವಯಂ ಅನ್ನು ಪರಿವರ್ತನೆ ಮಾಡಿಕೊಳ್ಳಲಾಗುತ್ತಿಲ್ಲ, ಫುಲ್‌ಸ್ಟಾಪ್ ಹಾಕಲು ಸಾಧ್ಯವಾಗುತ್ತಿಲ್ಲ. ಸರಿ ಇದೆ ಎಂದು ತಿಳಿಯುತ್ತೀರಿ – ಕಾಮಾ (,) ಹಾಕಿ ಬಿಡುತ್ತೀರಿ ಅಥವಾ ಬೇರೆಯವರನ್ನು ನೋಡಿ 'ಹೀಗೂ ಆಗುತ್ತದೆಯೇ' ಎನ್ನುವ ಆಶ್ಚರ್ಯ ಚಿನ್ಹೆಯನ್ನು (!) ಹಾಕುತ್ತೀರಿ. ಅಥವಾ ಪ್ರಶ್ನಾರ್ಥಕ ಚಿಹ್ನೆಗಳ ಸಾಲನ್ನು ನಿಲ್ಲಿಸತ್ತೀರಿ, ಏಕೆ ಎಂಬುದರ ಕ್ಯೂ ಅನ್ನು ನಿಲ್ಲಿಸುತ್ತೀರಿ. ಫುಲ್‌ಸ್ಟಾಪ್ ಎಂದರೆ ಬಿಂದು (.). ಯಾವಾಗ ಬಿಂದು ಸ್ವರೂಪ ತಂದೆ ಮತ್ತು ಬಿಂದು ಸ್ವರೂಪ ಆತ್ಮ ಇವೆರಡರ ಸ್ಮೃತಿ ಇರುವುದೋ ಆಗ ಫುಲ್‌ಸ್ಟಾಪ್ ಹಾಕಲು ಸಾಧ್ಯವಾಗುತ್ತದೆ. ಈ ಸ್ಮೃತಿ ಫುಲ್‌ಸ್ಟಾಪ್‌ನ್ನು ಅಂದರೆ ಬಿಂದುವನ್ನು ಹಾಕಲು ಸಮರ್ಥರನ್ನಾಗಿ ಮಾಡುತ್ತದೆ. ಆ ಸಮಯದಲ್ಲಿ ಕೆಲವರು ಆಂತರಿಕದಲ್ಲಿ 'ನಾನು ಆತ್ಮಿಕ ಸ್ಥಿತಿಯಲ್ಲಿ ಸ್ಥಿತನಾಗಬೇಕೆಂದೂ, ಆದರೆ ಮಾಯೆಯು ತನ್ನ ಪರದೆಯ ಮುಖಾಂತರ ಆತ್ಮದ ಬದಲಿಗೆ ವ್ಯಕ್ತಿ ಅಥವಾ ಮಾತುಗಳನ್ನು ಪದೇ ಪದೇ ಎದುರಿಗೆ ನಿಲ್ಲಿಸುತ್ತದೆ. ಇದರಿಂದ ಆತ್ಮ ಮರೆಯಾಗುತ್ತದೆ ಮತ್ತು ಪದೇ ಪದೇ ವ್ಯಕ್ತಿ ಅಥವಾ ಮಾತು ಎದುರಿಗೆ ಸ್ಪಷ್ಟವಾಗಿ ಬರುತ್ತದೆ' ಎಂದು ಯೋಚಿಸುತ್ತಾರೆ. ಇದರ ಮೂಲ ಕಾರಣ – ಸ್ವಯಂ ಅನ್ನು ನಿಯಂತ್ರಿಸುವ ನಿಯಂತ್ರಣ ಶಕ್ತಿಯ ಕೊರತೆ ಇರುವುದಾಗಿದೆ. ಅನ್ಯರನ್ನು ನಿಯಂತ್ರಿಸುವುದು ಬರುತ್ತದೆ ಆದರೆ ಸ್ವಯಂನ ಮೇಲೆ ನಿಯಂತ್ರಣ ಅಂದರೆ ಪರಿವರ್ತನೆಯ ಶಕ್ತಿಯನ್ನು ಕಾರ್ಯದಲ್ಲಿ ತೊಡಗಿಸಲು ಕಡಿಮೆ ಬರುತ್ತದೆ.

ಬಾಪ್‌ದಾದಾರವರು ಕೆಲವು ಮಕ್ಕಳ ಶಬ್ದಗಳಿಗೆ ಮುಗುಳ್ನಗುತ್ತಾರೆ. ಯಾವಾಗ ಸ್ವಯಂನ ಪರಿವರ್ತನೆ ಮಾಡಿಕೊಳ್ಳುವ ಅಥವಾ ಸಹನೆ ಮಾಡಿಕೊಳ್ಳುವ ಅಥವಾ ಸಮಾವೇಶ ಮಾಡಿಕೊಳ್ಳುವ ಸಮಯ ಬರುತ್ತದೆಯೋ, ಆಗ ಏನು ಮಾಡುತ್ತೀರಿ? ಹೆಚ್ಚೆಂದರೆ ಏನು ಹೇಳುತ್ತೀರಿ? 'ನಾನೇ ಸಾಯಬೇಕು, ನಾನೇ ಬದಲಾಬೇಕು, ನಾನೇ ಸಹಿಸಿಕೊಳ್ಳಬೇಕು' ಎಂದು. ಆದರೆ ಹೇಗೆ ಜನರು 'ಸತ್ತರು ಮತ್ತು ಸ್ವರ್ಗಕ್ಕೆ ಹೋದರು' ಎಂದು ಹೇಳುತ್ತಾರಲ್ಲವೇ? ಆ ಸಾಯುವುದರಲ್ಲಿ ಯಾರೂ ಸ್ವರ್ಗಕ್ಕೆ ಹೋಗುವುದಿಲ್ಲ, ಆದರೆ ಈ ಸಾಯುವುದರಲ್ಲಿ ಸ್ವರ್ಗದಲ್ಲಿ ಶ್ರೇಷ್ಠ ಪದವಿಯು ಸಿಗುತ್ತದೆ. ಆದ್ದರಿಂದ ಇದು ಸಾಯುವುದಲ್ಲ ಬದಲಿಗೆ ಸ್ವರ್ಗದಲ್ಲಿ ಸ್ವರಾಜ್ಯ ಪಡೆಯುವುದಾಗಿದೆ. ಅಂದವೇಲೆ ಸಾಯುವುದು ಚೆನ್ನಾಗಿದೆಯಲ್ಲವೇ? ಏನು ಕಷ್ಟವೇನಿದೆ? ಆ ಸಮಯದಲ್ಲಿ ಕಷ್ಟ ಅನಿಸುತ್ತದೆ. ನನ್ನ ತಪ್ಪೇ ಇಲ್ಲ, ಅವರದೇ ತಪ್ಪಿದೆ. ಆದರೆ ತಪ್ಪನ್ನು ನಾನು ಹೇಗೆ ಸರಿಪಡಿಸಲಿ? ಎಂಬುದು ಗೊತ್ತಿಲ್ಲ. ತಪ್ಪು ಮಾಡಿರುವವರು ಬದಲಾಗಬೇಕೇ ಅಥವಾ ಸರಿ ಮಾಡಿರುವವರು ಬದಲಾಗಬೇಕೇ? ಯಾರು ಬದಲಾಗಬೇಕು? ಇಬ್ಬರೂ ಬದಲಾಗಬೇಕು. 'ಬದಲಾಗುವುದು' ಎಂಬ ಶಬ್ದವನ್ನು ಆಧ್ಯಾತ್ಮಿಕ ಭಾಷೆಯಲ್ಲಿ 'ಮುಂದುವರಿಯುವುದು' ಎಂದು ತಿಳಿಯಿರಿ. ಬದಲಾಗುವುದಲ್ಲ – ಮುಂದುವರಿಯುವುದು. ಉಲ್ಟಾ ರೂಪದಲ್ಲಿ ಬದಲಾಗುವುದಲ್ಲ, ಸರಿಯಾದ ರೂಪದಲ್ಲಿ ಬದಲಾಗುವುದು. ತಮ್ಮನ್ನು ತಾವು ಬದಲಿಸಿಕೊಳ್ಳುವ ಶಕ್ತಿ ಇದೆಯೇ? ಅಥವಾ ಯಾವಾಗಲೋ ಬದಲಾಗುವಿರಾ?

ಪವಿತ್ರತೆಯ ಅರ್ಥವೇ ಆಗಿದೆ – ಸದಾ ಸಂಕಲ್ಪ, ಮಾತು, ಕರ್ಮ, ಸಂಬಂಧ ಸಂಪರ್ಕದಲ್ಲಿ ಮೂರು ಬಿಂದುಗಳ ಮಹತ್ವವನ್ನು ಪ್ರತಿ ಸಮಯ ಧಾರಣೆ ಮಾಡಿಕೊಳ್ಳುವುದಾಗಿದೆ. ಯಾವುದೇ ಪರಿಸ್ಥಿತಿ ಎದುರಾದರೂ ಒಂದು ಸೆಕೆಂಡನಲ್ಲಿ ಫುಲ್‌ಸ್ಟಾಪ್ ಹಾಕುವುದರಲ್ಲಿ ಸ್ವಯಂ ಅನ್ನು ಸದಾ

ಮೊದಲು 'ನಾನು ಮಾಡಬೇಕು' ಎಂದು ಆಫರ್ ಮಾಡಿ (ಮುಂದೆ ಬನ್ನಿ). ಈ ರೀತಿ ಆಫರ್ ಮಾಡಿಕೊಳ್ಳುವವರಿಗೆ ಮೂರು ಪ್ರಕಾರದ ಆಶೀರ್ವಾದಗಳು ಪ್ರಾಪ್ತವಾಗುತ್ತದೆ. ಮೊದಲನೆಯದಾಗಿ ಸ್ವಯಂಗೆ ಸ್ವಯಂನ ಆಶೀರ್ವಾದಗಳು ಸಿಗುತ್ತದೆ ಅಂದರೆ ಖುಷಿಯು ಸಿಗುತ್ತದೆ. ಎರಡನೆಯದು ತಂದೆಯಿಂದ ಮತ್ತು ಮೂರನೆಯದು ಬ್ರಾಹ್ಮಣ ಪರಿವಾರದ ಯಾರೆಲ್ಲ ಶ್ರೇಷ್ಠ ಆತ್ಮಗಳಿದ್ದಾರೋ ಅವರಿಂದಲೂ ಆಶೀರ್ವಾದಗಳು ಸಿಗುತ್ತವೆ. ಹಾಗಾದರೆ ಸಾಯುವುದಾಯಿತಾ? ಪಡೆಯುವುದಾಯಿತಾ? ಏನು ಹೇಳುತ್ತೀರಿ? ಪಡೆದಿರಿ ತಾನೆ? ಫುಲ್‌ಸ್ಟಾಪ್ ಹಾಕುವಂತಹ ಪುರುಷಾರ್ಥವನ್ನು ಅಥವಾ ನಿಯಂತ್ರಣ ಶಕ್ತಿಯ ಮೂಲಕ ಪರಿವರ್ತನಾ ಶಕ್ತಿಯನ್ನು ತೀವ್ರಗತಿಯಲ್ಲಿ ವೃದ್ಧಿ ಮಾಡಿಕೊಳ್ಳಿ. ಇದಂತೂ ಆಗುತ್ತಲೇ ಇರುತ್ತದೆ, ಇದಂತೂ ನಡೆಯಲೇ ಬೇಕಾಗಿದೆ........ ಎಂಬ ಹುಡುಗಾಟಿಕೆಯನ್ನು ತಂದುಕೊಳ್ಳಬೇಡಿ. ಇದು ಹುಡುಗಾಟಿಕೆಯ ಸಂಕಲ್ಪವಾಗಿದೆ. ಹುಡುಗಾಟಿಕೆಯನ್ನು ಪರಿವರ್ತನೆ ಮಾಡಿಕೊಂಡು ಅಲರ್ಟ್ (ಜಾಗೃತ) ಆಗಿರಿ.

ಕೆಲವರು ತಂದೆಯಂತೂ ತಂದೆಯಾಗಿದ್ದಾರೆ, ನಾವು ಹೇಗೆ ಸಮಾನ ರಾಗಲು ಸಾಧ್ಯ? ಎಂದು ಯೋಚಿಸುತ್ತಾರೆ. ಆದರೆ ಯಾರು ನಿಮಿತ್ತ ಆತ್ಮಗಳಿದ್ದಾರೋ ಅವರಂತೂ ತಮ್ಮ ಜೊತೆಗಾರರಲ್ಲವೇ? ಅವರು ತಂದೆಯ ಸಮಾನರಾಗಬಹುದು ಎಂದಾದರೆ ನೀವು ಆಗಲು ಸಾಧ್ಯವಿಲ್ಲವೇ? ಅಂದಾಗ ಎಲ್ಲರ ಲಕ್ಷ್ಯವೂ ಸಂಪೂರ್ಣ ಮತ್ತು ಸಂಪನ್ನರಾಗುವುದೇ ಆಗಿದೆ. ಒಂದುವೇಳೆ 16 ಕಲೆಯವರೋ ಅಥವಾ 14 ಕಲೆಯುಳ್ಳವರು ಆಗುತ್ತೀರೆಂದು ಕೈಯನ್ನು ಎತ್ತಿಸಿದರೆ ಯಾವುದಕ್ಕೆ ಕೈ ಎತ್ತುವಿರಿ. 16 ಕಲೆಗಳ ಅರ್ಥವೇನು? ಸಂಪೂರ್ಣತ್ತಾನೆ? ಲಕ್ಷ್ಯವೇ ಆ ರೀತಿ ಇದ್ದಾಗ ಆಗಲೇ ಬೇಕಲ್ಲವೇ? ಕಷ್ಟವೇನಿಲ್ಲ, ಆಗಲೇಬೇಕಾಗಿದೆ. ಸಣ್ಣ ಪುಟ್ಟ ಮಾತುಗಳಲ್ಲಿ ಗಾಬರಿಯಾಗಬೇಡಿ. ಮೂರ್ತಿ ಆಗುತ್ತಿದ್ದೀರಿ ಎಂದಮೇಲೆ ಸ್ವಲ್ಪವಾದರೂ ಸುತ್ತಿಗೆಯ ಪೆಟ್ಟು ತಗಲುತ್ತದೆಯಲ್ಲವೆ? ಇಲ್ಲದಿದ್ದರೆ ಹಾಗೆಯೇ ಮೂರ್ತಿ ಹೇಗಾಗುವಿರಿ? ಯಾರು ಎಷ್ಟು ಮುಂದೆ ಇರುತ್ತಾರೋ ಅವರು ಬಿರುಗಾಳಿಯನ್ನೂ ಎಲ್ಲರಿಗಿಂತ ಹೆಚ್ಚು ಎದುರಿಸ ಬೇಕಾಗತ್ತದೆ, ಆದರೆ ಅವರಿಗೆ ಅದು ಬಿರುಗಾಳಿ ಎನಿಸುವುದಿಲ್ಲ, ಬದಲಿಗೆ ಉಡುಗೊರೆ ಎಂದು ಅನಿಸುತ್ತದೆ. ಅಂದಾಗ ಬಿರುಗಾಳಿಯೂ ಸಹ ಅನುಭವಿ ಆಗಲು ಉಡುಗೊರೆ ಆಗಿಬಿಡುತ್ತದೆ. ಅಂದಮೇಲೆ ಉಡುಗೊರೆಯು ಸಿಕ್ಕಿತಲ್ಲವೇ? ಹಾಗಾದರೆ ಈಗ ಹೇಳಿ ಉಡುಗೊರೆ ತೆಗೆದುಕೊಳ್ಳುವುದು ಇಷ್ಟವಾಗುವುದೋ ಅಥವಾ ಕಷ್ಟವಾಗುವುದೋ? ಆದ್ದರಿಂದ ಇದೂ ಸಹ ತೆಗೆದುಕೊಳ್ಳುವುದಾಗಿದೆ, ಕೊಡುವಂತಹದ್ದಲ್ಲ. ಕೊಡುವುದು ಕಷ್ಟ. ತೆಗೆದುಕೊಳ್ಳುವುದು ಸಹಜ.

'ನನ್ನದೇ ಪಾತ್ರ ಆಗಿದೆಯೇ? ಎಲ್ಲ ವಿಘ್ನಗಳ ಅನುಭವ ನನ್ನ ಬಳಿಯೇ ಬರಬೇಕೇ?' ಎಂದು ಯೋಚಿಸಬೇಡಿ. ಬಾ... ಬಾ... ಎಂದು ವೆಲ್‌ಕಮ್ (ಸ್ವಾಗತ) ಮಾಡಿ. ಇದು ಉಡುಗೊರೆ ಆಗಿದೆ. ಹೆಚ್ಚೆಚ್ಚು ಉಡುಗೊರೆ ಸಿಗುತ್ತದೆ, ಇದರಲ್ಲೇನಿದೆ? ಉತ್ತಮ ನಿಖರವಾದ ಮೂರ್ತಿ ಆಗುವುದು ಎಂದರೆ ಹೆಚ್ಚು ಉಳಿ ಪೆಟ್ಟು ಬೀಳುವುದಾಗಿದೆ. ಸುತ್ತಿಗೆಯಿಂದಲೇ ಅದನ್ನು ಹೊಡೆದು ಹೊಡೆದು ಸರಿ ಮಾಡುತ್ತಾರೆ. ತಾವಂತೂ ಅನುಭವಿಗಳಿದ್ದೀರಿ. ನಥಿಂಗ್ ನ್ಯೂ (ಹೊಸದೇನಲ್ಲ). ಆಟ ಅನಿಸುತ್ತದೆ. ನೋಡುತ್ತಾ ಇರುತ್ತೀರಿ ಮತ್ತು ಮುಗುಳ್ನಗುತ್ತಾ ಇರುತ್ತೀರಿ, ಆಶೀರ್ವಾದಗಳನ್ನು ಕೊಡುತ್ತಾ ಇರುತ್ತೀರಿ. ಟೀಚರ್ ಅಕ್ಕಂದಿರು ಬಹದ್ದೂರ್ ಆಗಿದ್ದೀರೋ ಅಥವಾ ಆಗಾಗ ಗಾಬರಿ ಆಗುತ್ತೀರೋ? ಹೀಗಾಗುತ್ತದೆ ಎಂದು ಯೋಚಿಸಿಯೇ ಇರಲಿಲ್ಲ, ಮೊದಲೇ ತಿಳಿದಿದ್ದರೆ ಯೋಚಿಸಬಹುದಿತ್ತು ಎಂದು ಹೇಳುತ್ತೀರಾ. ಡಬಲ್ ವಿದೇಶಿಯರು 'ಬ್ರಾಹ್ಮಣರಾದ ಮೇಲೂ ಈ ರೀತಿಯಾಗುತ್ತದೆ ಎಂದು ಯೋಚಿಸಿಯೇ ಇರಲಿಲ್ಲ' ಎಂದು ತಿಳಿಯುತ್ತಾರೆ. ಸರಿಯಾಗಿ ಯೋಚಿಸಿ, ಅರಿತುಕೊಂಡು ಇಲ್ಲಿಗೆ ಬಂದಿರುವಿರಲ್ಲವೇ? ಅಥವಾ ಈಗ ಯೋಚಿಸಬೇಕಾಗುತ್ತಿದೆಯೇ? ಒಳ್ಳೆಯದು.

ಯಾರು ಹೇಗಾದರೂ ಇರಲಿ ಆದರೆ ಬಾಪ್‌ದಾದಾರವರು ಒಳ್ಳೆಯದನ್ನೇ ನೋಡುತ್ತಾರೆ. ಆದ್ದರಿಂದ ಬಾಪ್‌ದಾದಾರವರು ಎಲ್ಲರಿಗೂ ಒಳ್ಳೆಯದನ್ನೇ ಹೇಳುತ್ತಾರೆ, ಕೆಟ್ಟದನ್ನು ಹೇಳುವುದಿಲ್ಲ. 9 ಕೆಟ್ಟ ಗುಣಗಳಿದ್ದು ಒಂದು ಒಳ್ಳೆಯ ಗುಣವಿದ್ದರೂ ತಂದೆಯು ಏನು ಹೇಳುವರು? ಇವರು ಒಳ್ಳೆಯವರಾಗಿದ್ದಾರೆ ಎಂದು ಹೇಳುತ್ತಾರಾ ಅಥವಾ ಇವರು ಬಹಳ ಕೆಟ್ಟವರು, ಬಹಳ ಬಲಹೀನರು ಎಂದು ಹೇಳುತ್ತಾರಾ? ಒಳ್ಳೆಯದು. ಇದಂತೂ ಬಹಳ ದೊಡ್ಡ ಸಂಘಟನೆಯಾಗಿ ಬಿಟ್ಟಿದೆ. (21 ದೇಶಗಳಿಂದ ಜನ ಬಂದಿದ್ದಾರೆ). ಒಳ್ಳೆಯದಾಯಿತು. ಹೌಸ್‌ಫುಲ್ ಆಗಿದ್ದರಿಂದಲೇ ಹೊಸ ಮನೆ ತಯಾರಾಯಿತು. ಒಂದುವೇಳೆ ತುಂಬದಿದ್ದರೆ ಮತ್ತೊಂದನ್ನು ಮಾಡುವ ಅವಶ್ಯಕತೆಯೇ ಇರುವುದಿಲ್ಲ. ಅವಶ್ಯಕತೆಯೇ ಸಾಧನವನ್ನು ಮುಂದೆ ತರುತ್ತದೆ. **(23–12–1993)**

ಸದಾ ವಿಜಯೀ ಆತ್ಮಗಳ ಸ್ಮರಣಾರ್ಥ ಯಾವುದಾಗಿದೆ? 'ವಿಜಯ ಮಾಲೆಯು' ವಿಜಯೀ ರತ್ನಗಳ ಸ್ಮರಣಾರ್ಥ ಆಗಿದೆ. ಅನೇಕ ಸಲ ವಿಜಯಿಗಳಾಗಿದ್ದೀರಿ, ಆದ್ದರಿಂದಲೇ ಸ್ಮರಣಾರ್ಥವು ತಯಾರಾಗಿದೆಯಲ್ಲವೇ? 'ಅನೇಕ ಸಲದ ವಿಜಯಿ ಆಗಿದ್ದೇನೆ' ಎಂಬ ಸ್ಮೃತಿಯಿಂದ ಸದಾ ಸಮರ್ಥರಾಗಿ ಇರುವಿರಿ. ಯಾವಾಗ ಅನೇಕ ಸಲ ಮಾಡಿರುವ ಕಾರ್ಯವಾಗಿದೆ ಎಂದ ಮೇಲೆ, 'ಹೇಗೆ ಮಾಡಲಿ? ಏನು ಮಾಡಲಿ?;' ಎನ್ನುವ ಪ್ರಶ್ನೆ ಬರುವುದಿಲ್ಲ. ಯಾವುದೇ ಹೊಸ ಮಾತೇನಲ್ಲ. ಯಾವುದೇ ಹೊಸ ಮಾತನ್ನು ಹೇಳಲಾಗುತ್ತದೋ ಅಥವಾ ಮಾಡಲಾಗುತ್ತದೋ, ಆಗ 'ಹೀಗೆ ಮಾಡಬಹುದೇ? ಹೇಗೆ ಮಾಡುವುದು?' ಎನ್ನುವ ಪ್ರಶ್ನೆ ಬರುತ್ತದೆ. ಆದರೆ ತಮ್ಮ ಆತ್ಮದಲ್ಲಿ ಅನೇಕ ಸಲ ಮಾಡಿರುವ ಸಂಸ್ಕಾರವು ತುಂಬಿದೆ. 'ಏನಾಗುತ್ತದೋ' ಎಂಬ ಸಂಕಲ್ಪವೇ ಇಲ್ಲ. ಬದಲಿಗೆ ಒಳ್ಳೆಯದು ಆಗಿಯೇ ಇದೆ. 'ಬಾಬಾ' ಎಂದು ಕರೆದಿರಿ ಮತ್ತು ಬಾಬಾನ ಜೊತೆಯ ಅನುಭವ ಅದೇ ಸೆಕೆಂಡ್, ಅದೇ ಸಂಕಲ್ಪದಲ್ಲಿ ಆಗಿಯೇ ಆಗುತ್ತದೆ. ಒಂದು ಸೆಕೆಂಡಿನ ಮಾತಾಗಿದೆ.

ಬ್ರಾಹ್ಮಣರ ಜನ್ಮಪತ್ರಿಕೆಯಲ್ಲಿ ಮೂರೂ ಕಾಲಗಳು ಶ್ರೇಷ್ಠಾತಿ ಶ್ರೇಷ್ಠವಾಗಿದೆ. ಏನಾಯಿತೋ ಅದೂ ಒಳ್ಳೆಯದು, ಏನಾಗುತ್ತಿದೆಯೋ ಅದು ಇನ್ನೂ ಒಳ್ಳೆಯದು ಮತ್ತು ಏನಾಗುವುದಿದೆಯೋ ಅದು ಬಹಳ ಬಹಳ ಒಳ್ಳೆಯದು. ಕೇವಲ ಹೇಳಲು ಮಾತ್ರವಲ್ಲ, ಆದರೆ ಬ್ರಾಹ್ಮಣ ಜೀವನದ ಜನ್ಮ ಪತ್ರಿಕೆಯು ಸದಾ ಒಳ್ಳೆಯದಕ್ಕಿಂತಲೂ ಒಳ್ಳೆಯದಾಗಿದೆ. ಎಲ್ಲರ ಮಸ್ತಕದಲ್ಲಿ ಶ್ರೇಷ್ಠ ಅದೃಷ್ಟದ ರೇಖೆಯು ಎಳೆಯಲ್ಪಟ್ಟಿದೆ. ತಾವು ತಮ್ಮ ಅದೃಷ್ಟದ ರೇಖೆಯನ್ನು ನೋಡಿದ್ದೀರಾ? ಚೆನ್ನಾಗಿದೆಯಲ್ಲವೇ? ಎಷ್ಟು ಜನ್ಮಗಳಿಗೆ ಗ್ಯಾರಂಟಿ ಇದೆ? **(31–12–1993)**

**ದಾದಿಯರ ಜೊತೆ ಭೇಟಿ:** ಶಕ್ತಿಸೇನೆಯು ತೀವ್ರಗತಿಯಲ್ಲಿ ಮುಂದುವರಿ ಯುತ್ತಿದೆಯಲ್ಲವೇ? ಸೇನೆಯನ್ನು ಮುನ್ನಡೆಸಲು ಬಾಪ್‌ದಾದಾರವರ ಜೊತೆ ಜೊತೆಯಲ್ಲಿ ನಿಮಿತ್ತ ಆತ್ಮಗಳಾದ ತಾವೂ ಸಹ ಮುನ್ನಡೆಸಲು ನಿಮಿತ್ತರಾಗಿರುವಿರಿ. ತಂದೆಯಂತೂ ಸದಾ ಜೊತೆಯಲ್ಲಿ ಇದ್ದಾರೆ ಮತ್ತು ಮುಂದೆಯೂ ಇದ್ದೇ ಇರುತ್ತಾರೆ. ಆದರೂ ತಾವೆಲ್ಲರೂ ಬಾಪ್‌ದಾದಾರವರ ಶ್ರೇಷ್ಠ ಭುಜಗಳಾಗಿ ದ್ದೀರಲ್ಲವೇ? ತಂದೆಯಂತೂ ಶಕ್ತಿಯನ್ನು ಕೊಡುತ್ತಾರೆ, ತಂದೆಯು ಮೈಟ್ (ಶಕ್ತಿ) ರೂಪದಲ್ಲಿ ಇದ್ದಾರೆ, ಆದರೆ ನಿಮಿತ್ತರಾಗಿ ತಿಳಿಸುವಂತಹ ಮೈಕ್ ಅಂತೂ ತಾವೇ ಆಗಿದ್ದೀರಿ. ಎಷ್ಟೊಂದು ಮೋಜಿನ ಮಾತುಗಳನ್ನು ಕೇಳುತ್ತೀರಿ. ಆಟ ಎನಿಸುತ್ತದಲ್ಲವೇ? ಆಟವಾಗಿದೆ ತಾನೇ? ಆಟ ಆಡುತ್ತಾ ಆಡುತ್ತಾ ವಿಜಯಿಗಳಾಗಿ ಎಲ್ಲರನ್ನೂ ಮಾಯಾಜೀತ ವಿಜಯಿಗಳನ್ನಾಗಿ ಮಾಡಲೇಬೇಕಾಗಿದೆ. ಇದಂತೂ ಗ್ಯಾರಂಟಿಯಾಗಿದೆ. ಆದರೆ ಮಧ್ಯೆ ಮಧ್ಯೆ ಈ ಆಟವನ್ನು ನೋಡಬೇಕಾಗುತ್ತದೆ. ದಣಿಯುವುದಿಲ್ಲ ಅಲ್ಲವೆ? ನಲಿಯುತ್ತಾ, ಆಡುತ್ತಾ ತಾವೂ ಪಾರಾಗಿ ಅನ್ಯರನ್ನೂ ಪಾರು ಮಾಡುತ್ತಾ ನಡೆಯುತ್ತೀರಿ. ಯಾವುದೇ ಅಂತಹ ಮಾತನ್ನು ಕೇಳಿದಾಗ ಹೃದಯದಿಂದ ಯಾವ ಮಾತು ಹೊರಡುತ್ತದೆ? 'ವಾಹ್ ಡ್ರಾಮಾ ವಾಹ್'. 'ಅಯ್ಯೋ ಡ್ರಾಮಾ ಅಯ್ಯೋ' ಎಂದು ಹೊರಡುವುದಿಲ್ಲ, 'ವಾಹ್ ವಾಹ್' ಎಂದು ಹೇಳುತ್ತಾ ಎಲ್ಲರನ್ನೂ 'ವಾಹ್ ವಾಹ್' ಮಾಡಲೇ ಬೇಕಾಗಿದೆ, ಇವೆಲ್ಲವನ್ನೂ ಪಾರು ಮಾಡಲೇಬೇಕಾಗಿದೆ. **(10–01–1994)**

ಸದಾ 'ಹೇಗಿದ್ದವರು ಹೇಗಾಗಿ ಬಿಟ್ಟೆವು' ಎಂಬ ಸ್ಮೃತಿ ಇರುತ್ತದೆಯೇ? ನಿನ್ನೆ ಕವಡೆಯ ಸಮಾನ ಇದ್ದಿರಿ ಮತ್ತು ಇಂದು ವಜ್ರ ಸಮಾನರಾಗಿಬಿಟ್ಟಿದ್ದೀರಿ. ಎಲ್ಲಿಯ ಕವಡೆ, ಎಲ್ಲಿಯ ವಜ್ರ? ಎಷ್ಟೊಂದು ಅಂತರವಿದೆ? ಅಂತರದ ಅರಿವಾದಾಗ ಎಷ್ಟೊಂದು ಖುಷಿ ಆಗುತ್ತದೆ. ತಂದೆಯು ಏನಾಗಿದ್ದ ನಮ್ಮನ್ನು ಏನನ್ನಾಗಿ ಮಾಡಿಬಿಟ್ಟರು? ನಿನ್ನೆ ಅಂಧಕಾರದಲ್ಲಿದ್ದೆವು, ಇಂದು ಪ್ರಕಾಶತೆಯಲ್ಲಿ ಬಂದುಬಿಟ್ಟೆವು. ಅಂಧಕಾರದಲ್ಲಿ ಸಿಕ್ಕಿದ್ದೇನು? ಕೇವಲ ಪೆಟ್ಟು ಸಿಕ್ಕಿತಲ್ಲವೇ? ಅಂಧಕಾರದಲ್ಲಿ ಪೆಟ್ಟು ತಿನ್ನುತ್ತೇವೆ ಮತ್ತು ಬೆಳಕಿನಲ್ಲಿ ಎಂಜಾಯ್ ಮಾಡುತ್ತೇವೆ (ಆನಂದಿಸುತ್ತೇವೆ). ಅಂದಾಗ ನಿನ್ನೆ ಏನು, ಇಂದು ಏನು ಎಂಬುದು ಎದುರಿನಲ್ಲಿ ಸದಾ ಸ್ಪಷ್ಟವಾಗಿರಲಿ. ಮತ್ತು ಬಾಪ್‌ದಾದಾರವರು 'ಡಬಲ್ ಹೀರೋ ಆಗಿಬಿಟ್ಟಿರಿ' ಎಂದು ಸದಾ ಹೇಳುತ್ತಾರೆ. ಒಂದಾಗಿದೆ ವಜ್ರ ಸಮಾನ ಜೀವನ, ಮತ್ತೊಂದಾಗಿದೆ ಈ ಡ್ರಾಮಾದ ಹೀರೋ ಪಾತ್ರಧಾರಿ ಆಗಿಬಿಟ್ಟಿರಿ. ಅಂದಮೇಲೆ ಡಬಲ್ ಹೀರೋ ಆಗಿಬಿಟ್ಟಿರಲ್ಲವೇ? ಒಂದುವೇಳೆ ಇಡೀ ಡ್ರಾಮಾವನ್ನು ನೋಡಿದರೆ, ಹೀರೋ ಪಾತ್ರಧಾರಿ ಯಾರೆಂದು ತಿಳಿಯಬಹುದು. 'ನಾವೇ' ಎಂದು ಹೇಳುತ್ತೀರಲ್ಲವೇ? ಅಂದಾಗ ಡಬಲ್ ಹೀರೋಗಳಾಗಿದ್ದೀರಿ. ಅಂದ ಮೇಲೆ ಡಬಲ್ ಖುಷಿ ಇದೆಯಲ್ಲವೆ? **(01–02–1994)**

(ದಾದೀಜಿಯವರು ಬ್ರಹ್ಮಾಬಾಬಾರವರ ಸ್ಟಾಂಪಿನ ಆಲ್ಬಮ್ ಅನ್ನು ಬಾಪ್‌ದಾದಾ ರವರಿಗೆ ತೋರಿಸಿದರು)

ಎಲ್ಲರ ಬುದ್ಧಿಯನ್ನು ಟಚ್ ಮಾಡಿದೆ (ಸ್ಪರ್ಶಿಸಿದೆ). ಎಲ್ಲರ ಪುರುಷಾರ್ಥ ಮತ್ತು ಎಲ್ಲರ ಶ್ರೇಷ್ಠ ಸಂಕಲ್ಪವು ವಿಜಯವನ್ನು ಪ್ರಾಪ್ತಿ ಮಾಡಿಸಿದೆ. ಸಫಲತೆಯು ಅಧಿಕಾರವಾಗಿದೆ. ಪುರುಷಾರ್ಥ ಮಾಡುವುದೂ ಡ್ರಾಮಾದಲ್ಲಿ ನಿಗದಿಯಾಗಿದೆ ಮತ್ತು ಸಫಲತೆ ಪ್ರಾಪ್ತವಾಗುವುದೂ ಸಹ ನಿಶ್ಚಿತವಾಗಿದೆ. ಕೇವಲ ನಿಶ್ಚಯವನ್ನು ಪರೀಕ್ಷಿಸಲು ಮಧ್ಯೆ ಮಧ್ಯೆ ಏರುಪೇರಾಗುತ್ತದೆ. **(09–03–1994)**

ಈ ದಿನ ಬಾಪ್‌ದಾದಾರವರು ಯಾವ ಸಭೆಗೆ ಬಂದಿದ್ದಾರೆ? ಈ ಇಡೀ ಸಭೆ ಎಂತಹ ಆತ್ಮಗಳದ್ದಾಗಿದೆ? ಬಾಪ್‌ದಾದಾರವರು, ಪ್ರತಿಯೊಬ್ಬರೂ ಹೈಯೆಸ್ಟ್ (ಉನ್ನತವಾದವರು) ಮತ್ತು ರಿಚ್ಚೆಸ್ಟ್ (ಶ್ರೀಮಂತರಾಗಿರುವವರು) ಆಗಿರುವವರನ್ನು ನೋಡುತ್ತಿದ್ದಾರೆ. ಪ್ರಪಂಚದವರು 'ರಿಚ್ಚೆಸ್ಟ್ ಇನ್ ದಿ ವರ್ಲ್ಡ್' (ಇಡೀ ವಿಶ್ವದಲ್ಲೇ ಶ್ರೀಮಂತರು) ಎಂದು ಹೇಳುತ್ತಾರೆ. ಆದರೆ ತಾವೆಲ್ಲರೂ 'ರಿಚ್ಚೆಸ್ಟ್ ಇನ್ ದಿ ಕಲ್ಪ್' (ಇಡೀ ಕಲ್ಪದಲ್ಲೇ ಶ್ರೀಮಂತರು) ಆಗಿದ್ದೀರಿ. ಈ ಸಮಯದಲ್ಲಿ ಜಮಾ ಮಾಡಿಕೊಂಡಿರುವ ಖಜಾನೆಯು ಇಡೀ ಕಲ್ಪ ಜೊತೆಯಲ್ಲಿ ಬರುತ್ತದೆ. ಇಡೀ ಕಲ್ಪದಲ್ಲಿ 'ಈ ಜನ್ಮದಲ್ಲಿ ರಿಚ್ಚೆಸ್ಟ್ (ಶ್ರೀಮಂತ) ಆಗಿದ್ದೇವೆ, ಆದರೆ ಭವಿಷ್ಯದ ಅನೇಕ ಜನ್ಮಗಳಲ್ಲೂ ಸಾಹುಕಾರರಿಗಿಂತಲೂ ಸಾಹುಕಾರ ರಾಗಿರುತ್ತೇವೆ' ಎಂದು ಯೋಚಿಸುವವರು ಅನ್ಯರು ಯಾರೂ ಸಿಗುವುದಿಲ್ಲ. ಮತ್ತು ತಾವೆಲ್ಲರೂ ನಿಶ್ಚಯ ಮತ್ತು ನಶೆಯಿಂದ 'ನಮ್ಮ ಈ ಖಜಾನೆಯು ಅನೇಕ ಜನ್ಮಗಳವರೆಗೆ ಜೊತೆಯಲ್ಲಿರುತ್ತದೆ' ಎಂದು ಹೇಳುತ್ತೀರಿ. ಗ್ಯಾರಂಟಿ ಇದೆಯಲ್ಲವೇ? ಅಂದಮೇಲೆ ಇಂತಹ ರಿಚ್ಚೆಸ್ಟ್ (ಶ್ರೀಮಂತರನ್ನು) ಆಗಿರುವವರನ್ನು ಇಡೀ ಕಲ್ಪದಲ್ಲಿ ನೋಡಿದ್ದೀರಾ? ಇಂದು ಬಾಪ್‌ದಾದಾ ತಮ್ಮ ಶಾ ಹೋಂಕಿ ಶಾಹ್ (ರಾಜರಿಗೂ ರಾಜ) ಮಕ್ಕಳನ್ನು ನೋಡುತ್ತಿದ್ದಾರೆ. ಒಂದೊಂದು ದಿನದಲ್ಲಿ ಎಷ್ಟೊಂದು ಸಂಪಾದನೆಯನ್ನು ಜಮಾ ಮಾಡಿಕೊಳ್ಳುತ್ತೀರಿ? ಜಮಾ ಖಾತೆಯು ಎಷ್ಟು ತೀವ್ರಗತಿಯಲ್ಲಿ ಹೆಚ್ಚುತ್ತಿದೆ ಎಂದು ಲೆಕ್ಕ ತೆಗೆಯಿರಿ. ಮತ್ತು ಹೆಚ್ಚಿಸುವ ಸಾಧನ ಎಷ್ಟೊಂದು ಸಹಜವಾಗಿದೆ. ಇದರಲ್ಲಿ ಪರಿಶ್ರಮವೇನಿದೆ? ತಮ್ಮ ಸಂಪಾದನೆ ಅಥವಾ ಜಮಾ ಖಾತೆಯನ್ನು ವೃದ್ಧಿ ಮಾಡಿಕೊಳ್ಳಲು ಎಲ್ಲದಕ್ಕಿಂತಲೂ ಸಹಜವಾದ ಸಾಧನವಾಗಿದೆ – 'ಬಿಂದು' ಹಾಕುತ್ತಾ ಹೋಗಿ ಮತ್ತು ಹೆಚ್ಚಿಸುತ್ತಾ ಹೋಗಿ. ತಾವೂ ಬಿಂದು, ತಂದೆಯೂ ಬಿಂದು ಮತ್ತು ಡ್ರಾಮಾದಲ್ಲಿ ಕಳೆದು ಹೋಗಿರುವು ದಕ್ಕೆ ಬಿಂದು ಇಡುವುದು. ಅಂದರೆ ಸಂಪಾದನೆಗೆ ಆಧಾರ ಬಿಂದು ಇಡುವುದಾಗಿದೆ. ಇನ್ಯಾವುದೇ ಚಿಹ್ನೆ ಇಲ್ಲ. ಏನು, ಏಕೆ, ಹೇಗೆ..... ಇಂತಹ ಪ್ರಶ್ನಾರ್ಥಕ ಚಿಹ್ನೆ, ಆಶ್ಚರ್ಯದ ಚಿಹ್ನೆ, ಯಾವುದರ ಅವಶ್ಯಕತೆಯೂ ಇಲ್ಲ. ಏಕೆಂದರೆ ತಾವು ಮಾಸ್ಟರ್ ನಾಲೆಡ್ಜ್‌ಫುಲ್ (ಜ್ಞಾನಪೂರ್ಣರು) ಆಗಿಬಿಟ್ಟಿರಿ. ಅಂದಾಗ 'ಹೇಗೆ' ಎಂಬ ಶಬ್ದವು 'ಹೀಗೆ' ಎಂಬುದರಲ್ಲಿ ಬದಲಾಗಿ ಬಿಟ್ಟಿತು. ಬದಲಾಗಿದೆಯೇ ಅಥವಾ ಈಗಲೂ 'ಹೇಗೆ' 'ಹೇಗೆ' ಎಂದು ಹೇಳುವಿರಾ? 'ಗೊತ್ತಿಲ್ಲ' ಎಂಬ ಶಬ್ದವು ಸಂಕಲ್ಪದಲ್ಲೂ ಬದಲಾಯಿತೇ? ತ್ರಿಕಾಲದರ್ಶಿಗಳು ಇದನ್ನು ಸ್ವಪ್ನದಲ್ಲೂ ಯೋಚಿಸಲಾರರು ಎಂದ ಮೇಲೆ ಬಾಯಿಂದ ಹೇಳುವ ಸವಾಲೇ ಇಲ್ಲ. ಸಂಗಮಯುಗದಲ್ಲಿ ಇಡೀ ಆಟವೇ ಮೂರು ಬಿಂದುಗಳದ್ದಾಗಿದೆ. ಎಲ್ಲಕ್ಕಿಂತ ಸಹಜವಾದುದು ಬಿಂದುವೇರೋ ಅಥವಾ ಪ್ರಶ್ನಾರ್ಥಕ ಚಿಹ್ನೆಯೇ? ಬಿಂದು ಸಹಜವಾಗಿದೆ ಅಲ್ಲವೇ? ಬಿಂದು ಹಾಕಲು ಎಷ್ಟು ಸಮಯ ಬೇಕಾಗುತ್ತದೆ? ಒಂದು ಸೆಕೆಂಡಿಗಿಂತಲೂ ಕಡಿಮೆ. ಬಿಂದು ಹಾಕಲು ಬರುತ್ತದೋ ಅಥವಾ ಲೇಖನಿಯು ಜರುಗಿಬಿಡುತ್ತದೆಯೋ? ಕೆಲವು ಸಲ ಬಿಂದು ಹಾಕುವ ಬದಲು ಲೇಖನಿಯು ಉದ್ದವಾದ ಗೆರೆಯನ್ನು ಎಳೆದು ಬಿಡುತ್ತದೆ. ಬಿಂದು ಹಾಕುವುದರಿಂದ ಒಂದು ಸೆಕೆಂಡಿನಲ್ಲಿ ತಮ್ಮ ಎಷ್ಟೊಂದು ಖಜಾನೆ ಉಳಿತಾಯವಾಗಿ ಬಿಡುತ್ತದೆ. ಖಜಾನೆಗಳ ಲಿಸ್ಟನ್ನು (ಪಟ್ಟಿಯನ್ನು) ತಿಳಿದಿದ್ದೀರಲ್ಲವೇ? ಒಂದುವೇಳೆ ಬಿಂದುವಿನ ಬದಲಿಗೆ ಅನ್ಯ ಬೇರೆ ಯಾವುದೇ ಚಿಹ್ನೆಯನ್ನು ಹಾಕಿದರೆ ಅಥವಾ ಬಂದುಬಿಟ್ಟರೆ, ಯೋಚಿಸಿ – ಜ್ಞಾನದ ಖಜಾನೆ ಹೋಯಿತು, ಶಕ್ತಿಗಳ ಖಜಾನೆ ಹೋಯಿತು, ಗುಣಗಳ ಖಜಾನೆ ಹೋಯಿತು, ಸಂಕಲ್ಪದ ಖಜಾನೆ ಹೋಯಿತು, ಶಕ್ತಿ ಹೋಯಿತು, ಶ್ವಾಸ ಸಫಲವಾಗುವುದರ ಬದಲಿಗೆ ಅಸಫಲತೆಯಲ್ಲಿ ಹೊರಟು ಹೋಯಿತು, ಸಮಯ ಹೋಯಿತು. ಎಷ್ಟೊಂದು ನಷ್ಟವಾಯಿತು? ದೊಡ್ಡ ಲಿಸ್ಟ್ ಆಯಿತಲ್ಲವೆ? ಆದ್ದರಿಂದ ಎಂದಿಗೂ 'ಕೇವಲ ಒಂದೆರಡು ಸೆಕೆಂಡ್ ತಾನೆ ಕಳೆದದ್ದು ಎಂದು ಯೋಚಿಸಬೇಡಿ. ಆದರೆ ಒಂದು ಸೆಕೆಂಡಿನಲ್ಲಿ ಕಳೆದುಕೊಂಡಿದ್ದೆಷ್ಟು? ಒಂದೇ ಒಂದು ಸೆಕೆಂಡ್ ಸಹ ಎಷ್ಟು ದುಬಾರಿಯಾಯಿ ತಲ್ಲವೇ? ಪ್ರತಿ ಸೆಕೆಂಡ್ ತಮ್ಮ ಜಮೆಯ ಖಾತೆಯನ್ನು ವೃದ್ಧಿ ಮಾಡಿಕೊಳ್ಳುತ್ತಾ ಹೋಗಿರಿ. ಸಂಪಾದಿಸಿದ್ದೇನು ಮತ್ತು ಕಳೆದುಕೊಂಡಿದ್ದೇನು? ಈ ಎಲ್ಲಾ ಖಜಾನೆಗಳಲ್ಲಿ ಎಷ್ಟು ಖಜಾನೆಗಳನ್ನು ಕಳೆದುಕೊಂಡಿರಿ? ಬಾಪ್‌ದಾದಾರವರೂ ಸಹ ಮಕ್ಕಳ ಜಮಾ ಖಾತೆಯನ್ನು ಚೆಕ್ ಮಾಡುತ್ತಿರುತ್ತಾರೆ. ಖಾತೆಯನ್ನು

ನೋಡಿದಾಗಲೆಲ್ಲ ಮುಗುಳ್ನಗುತ್ತಾರೆ. ಮುಗುಳ್ನಗುವಂತಹುದು ಏನನ್ನು ನೋಡಿರಬಹುದು? ಅಮೃತವೇಳೆ ಮಿಲನವನ್ನೂ ಮಾಡುತ್ತಾರೆ, ಆತ್ಮಿಕ ವಾರ್ತಾಲಾಪವನ್ನು ಮಾಡುತ್ತಾರೆ, ಇದನ್ನು ಮಾಡುತ್ತೇನೆ, ಅದನ್ನು ಮಾಡುತ್ತೇನೆ ಎಂದು ಅನೇಕ ಪ್ರತಿಜ್ಞೆಗಳನ್ನೂ ಮಾಡುತ್ತಾರೆ. ಬಹಳ ಒಳ್ಳೆಯ ಒಳ್ಳೆಯ ಮಾತುಗಳನ್ನು ಆಡುತ್ತಾರೆ. ಆದರೆ ನಡೆಯುತ್ತಾ ನಡೆಯುತ್ತಾ ಇಡೀ ದಿನದಲ್ಲಿ  ಒಂದಲ್ಲ ಒಂದು ಖಜಾನೆಯನ್ನು ಕಳೆದುಬಿಡುತ್ತಾರೆ ಮತ್ತು ಯಾವುದನ್ನು ಆಧಾರವನ್ನಾಗಿ ಮಾಡಿಕೊಳ್ಳುತ್ತಾರೆ? ಬಾಪ್‌ದಾದಾರವರಿಗೂ ತಮ್ಮ ಒಳ್ಳೆಯ ಒಳ್ಳೆಯ ಮಾತುಗಳನ್ನು ಹೇಳಲು ತೊಡಗುತ್ತಾರೆ. ಒಂದುವೇಳೆ ವ್ಯರ್ಥ ಸಂಕಲ್ಪ ನಡೆಯಿತು ಎಂದರೆ ಅದು ಜಮಾ ಆದಂತೆಯೇ ಅಥವಾ ಕಳೆದು ಕೊಂಡಂತೆಯೇ? **(14–12–1994)**

**ಜಾನಕಿ ದಾದಿಯವರ ಜೊತೆ:** ಒಳ್ಳೆಯದು. ಹಾರುವುದರಲ್ಲಿ ಬಹಳ ಚುರುಕುಬುದ್ಧಿಯುಳ್ಳವರಾಗಿ ಬಿಟ್ಟಿರುವಿರಿ. ಜೀವದಾನ ಸಿಕ್ಕಿದೆ. ಮತ್ತು ಎಷ್ಟು ಸೇವೆಯನ್ನು ಮಾಡುತ್ತಾ ಹೋಗುತ್ತೀರೋ ಅಷ್ಟು ಜೀವನದ ಆರೋಗ್ಯ ಹೆಚ್ಚುತ್ತಾ ಹೋಗುತ್ತದೆ. ಏಕೆಂದರೆ ಎಲ್ಲರ ಆಶೀರ್ವಾದಗಳು ಆರೋಗ್ಯವಂತರನ್ನಾಗಿ ಮಾಡಿ ಬಿಡುತ್ತದೆ. ತಂದೆಯ ಸಹಯೋಗವಂತೂ ಇದ್ದೇ ಇದೆ, ಆದರೆ ಆಶೀರ್ವಾದಗಳು ಯುವಕರನ್ನಾಗಿ ಮಾಡುತ್ತಿದೆ. ಯಾವಾಗಲಾದರೂ ಯಾರಿಗಾದರೂ ಆಶೀರ್ವಾದಗಳು ಸಿಕ್ಕಾಗ ಅಥವಾ ಯಾವುದೇ ಖುಷಿ ಅಥವಾ ಶಾಂತಿಯ ಪ್ರಾಪ್ತಿಯಾದಾಗ, ಬಾಯಿಂದ, ಹೃದಯದಿಂದ 'ನಮ್ಮ ಆಯಸ್ಸು ನಿಮಗೆ ಸೇರಲಿ' ಎಂಬ ಆಶೀರ್ವಾದದ ಮಾತು ಹೊರಡುತ್ತದೆ. ಪೋಸ್ಟ್ ಕಾರ್ಡಿನಲ್ಲಿ 'ನನ್ನ ಆಯಸ್ಸು ನಿಮಗೆ ಸಿಗಲಿ' ಎಂದು ಬರೆದೂ ಇದ್ದೀರಿ. ತಾವು ಒಂದು ಸುತ್ತಾಟದಲ್ಲಿ ಸಾವಿರಾರು ಜನರ ಸೇವೆ ಮಾಡುತ್ತೀರಿ. ಇದೇ ಸಾವಿರ ಪಟ್ಟು ಆಶೀರ್ವಾದಗಳು ಸಿಕ್ಕಿಬಿಡುತ್ತದೆ. ಒಳ್ಳೆಯದು. ಎಲ್ಲರೂ ತಮ್ಮ ತಮ್ಮ ಸೇವೆಯನ್ನು ಚೆನ್ನಾಗಿ ಮಾಡುತ್ತಿರುವಿರಿ.

ಎಲ್ಲರಿಗೂ ದಾದಿಯರ ಜೊತೆ ಶುಭ ಮೋಹ ಇದೆಯಲ್ಲವೇ? ಸಾಧಾರಣವಾದ ಮೋಹವಲ್ಲ ತಾನೇ? ದು:ಖ ಕೊಡುವಂತಹ ಮೋಹವಲ್ಲ, ಸುಖವನ್ನು ಕೊಡುವಂತಹ ಮೋಹ. ಆದರೆ ಎಷ್ಟು ಮೋಹವೋ ಅಷ್ಟೇ ನಿರ್ಮೋಹಿಗಳು. ನ್ಯಾರಾನೂ (ಭಿನ್ನರೂ) ಆಗಿದ್ದೀರಿ ಮತ್ತು ಪ್ಯಾರಾನೂ (ಪ್ರಿಯರೂ) ಆಗಿದ್ದೀರಿ. ಈ ರೀತಿ ಇದ್ದೀರಲ್ಲವೇ? ಅಥವಾ ಕೇವಲ ಪ್ರಿಯರಾಗಿದ್ದೀರಾ, ಭಿನ್ನರಾಗಿಲ್ಲವೇ? ನ್ಯಾರಾ ಮತ್ತು ಪ್ಯಾರಾ ಎರಡರ ಬ್ಯಾಲೆನ್ಸ್ (ಸಮತೋಲನವನ್ನು) ಇಟ್ಟುಕೊಳ್ಳುವವರಾಗಿದ್ದೀರಿ. ಇದೂ ಸಹ ಡ್ರಾಮಾದಲ್ಲಿ ಆದಿಯಿಂದ ವಿಶೇಷ ಆತ್ಮಗಳು ನಿಮಿತ್ತರಾಗುವಂತಹ ಪಾತ್ರವಿದೆ. ಪಾಲನೆಯನ್ನು ಬಹಳ ಪಡೆದಿದ್ದೀರಿ. ನೀವು ಎಷ್ಟು ಡೈರೆಕ್ಟ್ ತಂದೆಯಿಂದ ಪಾಲನೆಯನ್ನು ಪಡೆದಿದ್ದೀರೋ ಅಷ್ಟು ಪಾಲನೆಯನ್ನು ಇವರು ಪಡೆದಿಲ್ಲ. ಆದ್ದರಿಂದ ಎಷ್ಟು ಪಾಲನೆಯನ್ನು ಪಡೆದಿದ್ದಿರೋ ಅಷ್ಟೇ ಪಾಲನೆ ಮಾಡುವ ಪಾತ್ರವು ಸಹ ಸಿಕ್ಕಿದೆ. ಎಲ್ಲರೂ ಖುಷಿಯಾಗಿದ್ದಿರಾ? ಎಲ್ಲರ ಅಯಸ್ಸು ಸಾವಿರ ವರ್ಷ ಆಗಲಿ. ಸಾವಿರ ವರ್ಷ ಮನೆಗೆ ಹೋಗುವುದು ಬೇಡವೇ? ಹಳೆಯ ಪ್ರಪಂಚದಲ್ಲೇ ಇರಬೇಕೆ? ಒಳ್ಳೆಯದು. ಈ ಮ್ಯೂಜಿಯಂ ಸಹ ಕಮಾಲ್ (ಚಮತ್ಕಾರ) ಮಾಡುತ್ತದೆ. ಇದು ದೃಢತೆಯ ಪ್ರತ್ಯಕ್ಷ ಸ್ವರೂಪವಾಗಿದೆ. ದೃಢತೆಯು ಸಫಲತೆಯಾಗಿ ಅಸಂಭವವನ್ನೂ ಸಂಭವವನ್ನಾಗಿ ಮಾಡಿಬಿಡುತ್ತಾರೆ. ಧೈರ್ಯವಂತರಾಗಿದ್ದೀರಿ. ಯಾರೆಲ್ಲಾ ವಿಶೇಷವಾಗಿ ನಿಮಿತ್ತರಾಗಿದ್ದಾರೋ ಅವರೆಲ್ಲರಿಗೂ ವಿಶೇಷ ನೆನಪು ಮತ್ತು ಪ್ರೀತಿ ಸಿಗಲಿ. ಇದೂ ಸಹ ಸೇವೆಯ ಒಳ್ಳೆಯ ಸಾಧನವಾಗಿದೆ. ಒಬ್ಬರಲ್ಲ ಒಬ್ಬರು ನಿಮಿತ್ತರಾಗಿ ತಮ್ಮ ಭಾಗ್ಯವನ್ನು ಮಾಡಿಕೊಳ್ಳುತ್ತಾರೆ. ಕೊಡುವವರು ಮೊದಲೇ ಡ್ರಾಮಾದಲ್ಲಿ ನಿಗದಿಯಾಗಿದ್ದಾರೆ. **(23–12–1994)**

ಬಾಪ್‌ದಾದಾರವರು ನೋಡುತ್ತಿದ್ದರು – ಯಾವ ಮಕ್ಕಳು ತಮ್ಮನ್ನು ಬ್ರಾಹ್ಮಣರೆಂದು ಹೇಳಿಕೊಳ್ಳುತ್ತಾರೋ, ಅವರೆಲ್ಲರೂ ಹೆಮ್ಮೆಯಿಂದ 'ನಾವೆಲ್ಲರೂ ನಿಶ್ಚಯ ಬುದ್ಧಿಗಳು ಆಗಿದ್ದೇವೆ' ಎಂದು ಹೇಳುತ್ತಾರೆ, ಆದ್ದರಿಂದ ಬಾಪ್‌ದಾದಾ ರವರು ಎಲ್ಲಾ ನಿಶ್ಚಯ ಬುದ್ಧಿಯುಳ್ಳ ಮಕ್ಕಳನ್ನು 'ತಾವೆಲ್ಲರೂ ತಮ್ಮನ್ನು ನಿಶ್ಚಯ ಬುದ್ಧಿಯುಳ್ಳವರೆಂದು ಹೇಳಿಕೊಳ್ಳುತ್ತೀರಿ', ಆದರೆ ಕೆಲವೊಮ್ಮೆ ಗೆಲುವು ಕೆಲವೊಮ್ಮೆ ಸೋಲು ಏಕಾಗುತ್ತದೆ'? ಎಂದು ಕೇಳುತ್ತಾರೆ. ಯಾವಾಗಲಾದರೂ ಅಲ್ಲೋಲ ಕಲ್ಲೋಲವಾದಾಗ ಸದಾ ವಿಜಯಿಗಳಾಗುತ್ತೀರಾ ಅಥವಾ ಮಧ್ಯೆ ಮಧ್ಯೆ ಏರುಪೇರಾಗುತ್ತದೆಯೇ? ನಿಶ್ಚಯದ ಫೌಂಡೇಷನ್ (ತಳಹದಿ) ನಾಲ್ಕೂ ಕಡೆಯಲ್ಲಿ ಭದ್ರವಾಗಿರುತ್ತದೆಯೇ? ಅಥವಾ ನಾಲ್ಕೂ ಕಡೆಗೆ ಬದಲಾಗಿ ಆಗಾಗ ಒಂದೆರಡು ಕಡೆ ಸಡಿಲವಾಗಿಬಿಡುತ್ತದೆಯೇ? ಯಾವುದೇ ವಸ್ತುವನ್ನು ಭದ್ರಮಾಡುವಾಗ ನಾಲ್ಕು ಕಡೆಯಿಂದಲೂ ಭದ್ರ ಮಾಡಲಾಗುತ್ತದೆಯಲ್ಲವೇ? ಒಂದುವೇಳೆ ಒಂದು ಕಡೆಯಲ್ಲಾದರೂ ಸ್ವಲ್ಪವಾದರೂ ಸಡಿಲವಾದರೆ ಅಲುಗಾಡುತ್ತದೆಯಲ್ಲವೇ? ಆದ್ದರಿಂದ ನಾಲ್ಕೂ ಪ್ರಕಾರದ ನಿಶ್ಚಯ ಅಂದರೆ ತಂದೆಯಲ್ಲಿ,

ಸ್ವಯಂನಲ್ಲಿ, ಡ್ರಾಮಾದಲ್ಲಿ ಹಾಗೂ ಬ್ರಾಹ್ಮಣ ಪರಿವಾರದಲ್ಲಿ ನಿಶ್ಚಯವಿರಬೇಕು. ಈ ನಾಲ್ಕು ರೀತಿಯ ನಿಶ್ಚಯವನ್ನು ಕೇವಲ ತಿಳಿಯುವುದಷ್ಟೇ ಅಲ್ಲ, ಬದಲಿಗೆ ಅದರಂತೆ ನಿಶ್ಚಯದಿಂದ ನಡೆಯಬೇಕು.

ಪರಿವಾರದವರೊಂದಿಗೆ ಸರಿಯಾಗಿ ಹೊಂದಾಣಿಕೆ ಇಲ್ಲದಿದ್ದರೂ ಪರವಾಗಿಲ್ಲ, ತಂದೆಯೊಂದಿಗೆ ಹೊಂದಾಣಿಕೆ ಸರಿ ಇದೆ, ಡ್ರಾಮಾವನ್ನು ಮರೆತರೂ ತಂದೆಯ ನೆನಪಂತೂ ಇದ್ದೇ ಇರುತ್ತದೆ' ಎಂದು ಎಂದಿಗೂ ತಿಳಿಯಬಾರದು. ಆದರೆ ಯಾವುದೇ ದುರ್ಬಲತೆಯು ಒಂದೇ ಸಮಯದಲ್ಲಿ ಉಂಟಾಗುತ್ತದೆ. ಸ್ವಸ್ಥಿತಿ ಅಂದರೆ ಸ್ವಯಂನ ನಿಶ್ಚಯವು ಒಂದುವೇಳೆ ಬಲಹೀನವಾದರೂ, ವಿಜಯವು ನಿಶ್ಚಿತತೆಗೆ ಬದಲಾಗಿ ಹಲ್‌ಚಲ್‌ನಲ್ಲಿ ಬಂದುಬಿಡುತ್ತದೆ. ಆದ್ದರಿಂದ ಬಾಪ್‌ದಾದಾರವರು ನಿಶ್ಚಯದ ಫೌಂಡೇಷನ್‌ನ್ನು ಪರಿಶೀಲಿಸುತ್ತಿದ್ದರು. ಏನು ಮಾಡಿದರು?

ಸದಾ ನಾಲ್ಕೂ ಪ್ರಕಾರದ ನಿಶ್ಚಯವು ಒಂದೇ ಸಮಯದಲ್ಲಿ ಒಟ್ಟಿಗೆ ಇರುವುದಿಲ್ಲ. ಕೆಲವೊಮ್ಮೆ ಇರುತ್ತದೆ, ಕೆಲವೊಮ್ಮೆ ಅಲುಗಾಡುತ್ತಿರುತ್ತದೆ. ಆದ್ದರಿಂದ ಸದಾ ವಿಜಯಿಯಾಗುವ ಅನುಭವ ಮಾಡಲು ಸಾಧ್ಯವಾಗುವುದಿಲ್ಲ. ನಂತರ 'ಆಗಬೇಕಾಗಿತ್ತು, ಆದರೆ ಏಕೆ ಆಗಲಿಲ್ಲವೋ ತಿಳಿಯಲಿಲ್ಲ, ಬಹಳ ಪರಿಶ್ರಮ ಪಟ್ಟೆವು, ಬಹಳ ಚೆನ್ನಾಗಿ ಯೋಚಿಸಿದೆವು' ಎಂದು ಯೋಚಿಸುತ್ತೀರಿ. ಆದರೆ ಯೋಚಿಸುವುದರಲ್ಲಿ ಮತ್ತು ಆಗುವುದರಲ್ಲಿ ವ್ಯತ್ಯಾಸವಾಗಿಬಿಡುತ್ತದೆ. ಇದರ ಅರ್ಥವೇ ಆಗಿದೆ – ನಿಶ್ಚಯದ ನಾಲ್ಕೂ ಕಡೆಗಳು ಭದ್ರವಾಗಿಲ್ಲ ಎಂದು. ಮತ್ತು ನಗುಬರುವ ಮಾತೇನೆಂದರೆ 'ಡ್ರಾಮಾ' ಎಂದು ಹೇಳುತ್ತೀರಾ ಮತ್ತು ಡ್ರಾಮಾ ಆಗಿಯೇ ಇದೆ. ಆದರೆ ಜೊತೆಗೆ ಬಹಳ ಅಲುಗಾಡುತ್ತಲೂ ಇರುತ್ತೀರಿ. ಕೆಲವೊಮ್ಮೆ ಸಂಕಲ್ಪದಲ್ಲಿ ಅಲುಗಾಡುತ್ತೀರಿ, ಕೆಲವೊಮ್ಮೆ ಮಾತಿನಲ್ಲೂ ಅಲುಗಾಡುತ್ತೀರಿ, ಕೆಲವೊಮ್ಮೆ ಕರ್ಮದವರೆಗೂ ಬಂದು ಬಿಡುತ್ತೀರಿ. ಆ ಸಮಯದಲ್ಲಿ ಹೇಗೆನಿಸುತ್ತದೆ? ದೃಶ್ಯವನ್ನು ಎದುರಿಗೆ ತಂದುಕೊಳ್ಳಿ. ಡ್ರಾಮಾ ಡ್ರಾಮಾ ಎಂದು ಹೇಳುತ್ತಲೂ ಇರುತ್ತೀರಿ ಮತ್ತು ಅಲುಗಾಡುತ್ತಲೂ ಇರುತ್ತೀರಿ. ಆದರೆ ನಿಶ್ಚಯಬುದ್ಧಿಯುಳ್ಳವರ ಗುರುತು ನಿಶ್ಚಿತ ವಿಜಯಿ ಆಗುವುದಾಗಿದೆ. ಒಂದುವೇಳೆ ವಿಧಿಯು ಸರಿಯಾಗಿದ್ದರೆ ಸಿದ್ಧಿಯು ಪ್ರಾಪ್ತಿಯಾಗದೆ ಇರಲು ಸಾಧ್ಯವೇ ಇಲ್ಲ. ಆದ್ದರಿಂದ ಯಾವಾಗಲಾದರೂ ಯಾವುದೇ ಕಾರ್ಯದಲ್ಲಿ ವಿಜಯ ಪ್ರಾಪ್ತಿಯಾಗದಿದ್ದಾಗ ನಿಶ್ಚಯದ ಕೊರತೆ ಇದೆಯೆಂದು ತಿಳಿಯಿರಿ. ನಾಲ್ಕೂ ಕಡೆ ಪರೀಕ್ಷಿಸಿಕೊಳ್ಳಿ, ಒಂದು ಕಡೆ ಮಾತ್ರ ಅಲ್ಲ.

ಮತ್ತೊಂದು ಮಾತಾಗಿದೆ – ನಿಶ್ಚಯ ಬುದ್ಧಿಯುಳ್ಳವರ ಗುರುತು, ಹೇಗೆ 'ನಿಶ್ಚಿತ ವಿಜಯಿಗಳಾಗಿದ್ದೇವೆ' ಎಂಬುದಾಗಿಯೋ ಅದೇ ರೀತಿಯಲ್ಲಿ ನಿಶ್ಚಿಂತರೂ ಆಗಿರುತ್ತಾರೆ. ಯಾವುದೇ ವ್ಯರ್ಥ ಚಿಂತನೆ ಬರಲು ಸಾಧ್ಯವಿಲ್ಲ. ಶುಭ ಚಿಂತನೆಯ ವಿನಹ ಬೇರೆ ಯಾವ ವ್ಯರ್ಥದ ಹೆಸರೂ ಗುರುತೂ ಸಹ ಇರುವುದಿಲ್ಲ. ವ್ಯರ್ಥ ಬಂದಿತು, ಓಡಿಸಿದೆವು ಎಂಬ ರೀತಿಯಲ್ಲ. ನಿಶ್ಚಯ ಬುದ್ಧಿಯುಳ್ಳವರ ಮುಂದೆ ವ್ಯರ್ಥ ಬರಲು ಸಾಧ್ಯವೇ ಇಲ್ಲ. ಏಕೆಂದರೆ, ಏಕೆ? ಏನು? ಮತ್ತು ಹೇಗೆ? ಎಂಬುದು ವ್ಯರ್ಥವಾಗಿದೆ. ಡ್ರಾಮಾದ ರಹಸ್ಯವನ್ನು ತಿಳಿದಿದ್ದೀರಿ, ಆದಿ ಮಧ್ಯ ಅಂತ್ಯವನ್ನು ತಿಳಿದಿರುವವರಾಗಿದ್ದೀರಿ ಎಂದ ಮೇಲೆ, ಅಂತವರು ಚಿಕ್ಕಪುಟ್ಟ ಮಾತಿನ ಆದಿ ಮಧ್ಯ ಅಂತ್ಯವನ್ನು ತಿಳಿಯಲಾರಿರೇನು? ತಿಳಿಯದ ಕಾರಣಕ್ಕಾಗಿ ಏಕೆ? ಏನು? ಹೇಗೆ? ಎಂಬ ವ್ಯರ್ಥ ಸಂಕಲ್ಪಗಳು ನಡೆಯುತ್ತವೆ. ಒಂದುವೇಳೆ ಡ್ರಾಮಾದಲ್ಲಿ ದೃಢ ನಿಶ್ಚಯವಿದೆ, ನಾಲೆಡ್ಜ್‌ಫುಲ್ ಸಹ ಆಗಿದ್ದೀರಿ, ಫವರ್ ಫುಲ್ ಸಹ ಆಗಿದ್ದೀರಿ ಎಂದ ಮೇಲೆ ವ್ಯರ್ಥ ಸಂಕಲ್ಪಗಳು ನಿಮ್ಮನ್ನು ಅಲುಗಾಡಿಸುವ ಧೈರ್ಯವನ್ನೂ ಮಾಡುವುದಿಲ್ಲ. ಆದರೆ ಯಾವಾಗ ಅಲುಗಾಡುತ್ತೀರೋ ಆಗ ಏನಾಯಿತೋ ಗೊತ್ತಾಗಲಿಲ್ಲ ಎಂದು ಯೋಚಿಸುತ್ತೀರಿ. ಬಾಪ್‌ದಾದಾರವರು ನಗುತ್ತಾರೆ ಡ್ರಾಮಾದ ಆದಿ ಮಧ್ಯ ಅಂತ್ಯವನ್ನು ತಿಳಿದುಬಿಟ್ಟಿದ್ದೀರಿ, ನಿಮ್ಮ 84 ಜನ್ಮಗಳನ್ನು ತಿಳಿದುಬಿಟ್ಟಿದ್ದೀರಿ, ಆದರೆ ಒಂದು ಮಾತನ್ನು ತಿಳಿಯಲಿಲ್ಲ. ಬಹಳ ಬುದ್ಧಿವಂತರೂ ಆಗಿದ್ದೀರಿ, ಆಗಾಗ ಬುದ್ಧಿವಂತಿಕೆಯನ್ನು ತೋರಿಸುತ್ತೀರಲ್ಲವೇ? ಕಲ್ಪವೃಕ್ಷದ ಎಲ್ಲಾ ಎಲೆಗಳನ್ನು ತಿಳಿದಿದ್ದೀರಾ ಅಥವಾ ಇಲ್ಲವೇ? ಎಲ್ಲರೂ ವೃಕ್ಷದ ಬುಡದಲ್ಲಿ ಕುಳಿತಿದ್ದೀರಾ ಅಥವಾ ಏಳೆಂಟು ಜನ ಮಾತ್ರ ಕುಳಿತಿದ್ದಾರೋ? ಆದ್ದರಿಂದ ಬುಡದಲ್ಲಿ ಕುಳಿತಿರುವ ನೀವು ವೃಕ್ಷವನ್ನು ತಿಳಿದಿದ್ದೀರಲ್ಲವೇ? ಎಲೆ ಎಲೆಯನ್ನು ತಿಳಿದಿದ್ದೀರ ಎಂದ ಮೇಲೆ ಇದು ಏಕೆ ತಿಳಿಯಲಿಲ್ಲ.? ಆದ್ದರಿಂದ ನಿಶ್ಚಯದ ಗುರುತಾಗಿದೆ 'ನಿಶ್ಚಿಂತ ಸ್ಥಿತಿ'. ಇದರ ಅನುಭವವನ್ನು ಮಾಡಿ. ಆಗುತ್ತದೋ, ಆಗುವುದಿಲ್ಲವೋ, ಏನಾಗುವುದೋ, ಮಾಡುವುದಂತೂ ಮಾಡುತ್ತಾ ಇದ್ದೇವೆ, ನೋಡೋಣ ಏನಾಗುತ್ತದೆಯೋ ಎಂದು ಹೇಳುವುದನ್ನು ನಿಶ್ಚಿಂತತೆ ಎಂದು ಹೇಳಲಾಗುವುದಿಲ್ಲ. ಮತ್ತೆ ತಂದೆಯ ಮುಂದೆಯೇ 'ನೀವು ಸಹಾಯಕರಲ್ಲವೇ? ನೀವು ರಕ್ಷಕರಲ್ಲವೇ? ನೀವು ಇವರಲ್ಲವೆ? ನೀವು ಅವರಲ್ಲವೆ? ಇತ್ಯಾಧಿಯಾಗಿ ದೂರನ್ನು ಹೇಳುತ್ತೀರಿ.

ದೂರನ್ನು ಹೇಳುವುದು ಎಂದರೆ ಅಧಿಕಾರ ಕಳೆದುಕೊಳ್ಳುವುದಾಗಿದೆ. ಅಧಿಕಾರಿಗಳು 'ಇದನ್ನು ಮಾಡಿ, ಇದು ಆಗಲಿ' ಎಂಬುದಾಗಿ ದೂರನ್ನು ಹೇಳುವುದಿಲ್ಲ. ನಿಶ್ಚಯಬುದ್ಧಿಯುಳ್ಳವರು ಎಂದರೆ ನಿಶ್ಚಿಂತರಾಗಿರುವವರು. ಆದ್ದರಿಂದ ಈ ಪ್ರಾಕ್ಟಿಕಲ್ (ಪ್ರತ್ಯಕ್ಷ) ಗುರುತುಗಳನ್ನು ನೀವು ನಿಮ್ಮಲ್ಲಿ ಚೆಕ್ ಮಾಡಿಕೊಳ್ಳಿ. 'ನಾವಂತೂ ನಿಶ್ಚಯಬುದ್ಧಿವುಳ್ಳವರು ಆಗಿಯೇ ಇದ್ದೇವೆ' ಎಂಬ ಹುಡುಗಾಟಿಕೆ ಯಲ್ಲಿ ಬರಬೇಡಿರಿ. ಯಾವ ನಿಶ್ಚಯ ದುರ್ಬಲವಾಗಿದೆ ಎಂಬುದನ್ನು ಚೆಕ್ (ಪರಿಶೀಲನೆ) ಮಾಡಿಕೊಳ್ಳಿ ಮತ್ತು ಚೇಂಜ್ ಮಾಡಿಕೊಳ್ಳಿ (ಬದಲಾಯಿಸಿಕೊಳ್ಳಿ). ಕೇವಲ ಚೆಕ್ ಮಾಡಬೇಡಿ. ಕೇವಲ ಚೆಕ್ಕರ್‌ನ (ಪರಿಶೀಲನೆ ಮಾಡಿಕೊಳ್ಳುವವರು) ಜೊತೆ ಮೇಕರ್ (ನಿರ್ಮಾಣ ಮಾಡುವವರು) ಸಹಾ ಆಗಬೇಕು ಎಂದು ಬಾಪ್‌ದಾದಾರವರು ಹೇಳಿದ್ದಾರಲ್ಲವೇ? ಕೇವಲ ಚೆಕ್ಕರ್ ಅಲ್ಲ. ಚೆಕ್ ಮಾಡಿಕೊಳ್ಳುವುದರ ಅರ್ಥವೇ ಆಗಿದೆ ಒಂದು ಸೆಕೆಂಡ್‌ನಲ್ಲಿ ಚೇಂಜ್ ಆಗುವುದಾಗಿದೆ. ಆದರೆ ಕೇವಲ ಚೆಕ್ ಮಾಡಿಕೊಂಡು, ಚೇಂಜ್ ಮಾಡಿಕೊಳ್ಳದಿದ್ದರೆ ಬಹಳ ಕಾಲದವರೆಗೂ ಸ್ವಯಂನ ಬಗ್ಗೆ ದಿಲ್‌ಶಿಕಸ್ತ್ (ಹೃದಯ ಖಿನ್ನರು) ಆಗುವ ಸಂಸ್ಕಾರವು ಬಲವಾಗುತ್ತಾ ಹೋಗುತ್ತದೆ. ಮತ್ತು ಯಾವುದು ಬಹಳ ಕಾಲದ ಸಂಸ್ಕಾರವಾಗುತ್ತದೆಯೋ ಅದೇ ಅಂತ್ಯದಲ್ಲಿ ಎದುರಿಸಲು ಬರುತ್ತದೆ. ಕೆಲವರು 'ಅಂತ್ಯದಲ್ಲಿ ನಾನು ತಂದೆಯನ್ನು ಬಿಟ್ಟು ಬೇರೆ ಏನನ್ನು ಯೋಚಿಸುವುದಿಲ್ಲ' ಎಂದು ಯೋಚಿಸುತ್ತಾರೆ. ಆದರೆ ಅದು ಸಾಧ್ಯವಾಗುವುದೇ ಇಲ್ಲ. ಬಹಳ ಕಾಲದ ಅಭ್ಯಾಸವಿರಬೇಕು. ಇಲ್ಲದಿದ್ದರೆ ಒಂದು ಸೆಕೆಂಡ್ 'ಶಿವಬಾಬಾ ಶಿವಬಾಬಾ ಶಿವಬಾಬಾ' ಎಂದು ಯೋಚಿಸುತ್ತೀರಿ. ಮತ್ತು ಎರಡನೇ ಸೆಕೆಂಡ್‌ನಲ್ಲಿ 'ಇಲ್ಲ, ನಿನ್ನಲ್ಲಿ ಶಕ್ತಿ ಇಲ್ಲ, ನೀನು ಬಲಹೀನನಾಗಿದ್ದೀಯಾ' ಎಂದು ಮಾಯೆ ಹೇಳುತ್ತದೆ. ಅಂದ ಮೇಲೆ ಯುದ್ಧವು ನಡೆಯುತ್ತಾ ಇರುತ್ತದೆ. ಒಂದುವೇಳೆ ನಿಶ್ಚಿಂತರಾಗಿಲ್ಲವೆಂದರೇ ಬ್ರಾಹ್ಮಣ ಜೀವನದ ಅಂತ್ಯಕಾಲದ ಯಾವ ಲಕ್ಷ್ಯದ ವರ್ಣನೆಯನ್ನು ಮಾಡುತ್ತೀರೋ ಅದು ಹೇಗೆ ಸಹಜವಾಗುತ್ತದೆ? ಒಂದುವೇಳೆ ಅಂತ್ಯದವರೆಗೂ ಈ ವ್ಯರ್ಥ ಸಂಕಲ್ಪವಿದ್ದರೆ ಅವೇ ಭೂತಗಳು, ಯಾಮಧೂತರಂತೆ ಬರುತ್ತವೆ. ಬೇರೆ ಯಾವ ಯಮಧೂತರು ಬರುವುದಿಲ್ಲ, ಈ ವ್ಯರ್ಥ ಸಂಕಲ್ಪಗಳು, ನಿಮ್ಮ ಬಲಹೀನತೆಗಳೇ ಯಮಧೂತರ ರೂಪದಲ್ಲಿ ಬರುತ್ತಾರೆ. ಯಮಧೂತರು ಏನು ಮಾಡುತ್ತಾರೆ. ಹೆದರಿಸುತ್ತಾರೆ. ಮತ್ತು 'ವಿಮಾನದಲ್ಲಿ ಹೋಗುತ್ತೇವೆ ಅಂದರೆ ಹಾರುವ ಕಲೆಯಿಂದ ಪಾರಾಗಿ ಹೋಗುತ್ತೇವೆ' ಎಂದು ಅನ್ಯರಿಗೆ ಹೇಳುತ್ತೀರಿ. ಯಾವುದೇ ವಿಮಾನ ಇಲ್ಲ, ಆದರೆ ಹಾರುವ ಕಲೆಯ ಅನುಭವವಂತೂ ಇದೆ. ಆದ್ದರಿಂದ ಮೊದಲಿನಿಂದಲೇ ಚೆಕ್ ಮಾಡಿಕೊಂಡು ಚೇಂಜ್ ಮಾಡಿಕೊಳ್ಳಿ. ಎಲ್ಲಿಯವರೆಗೆ ಮಾಡುವಿರಿ? 'ಮಾಡುತ್ತೇವೆ' ಎಂದು ಬಾಪ್‌ದಾದಾರವರನ್ನು ಖುಷಿಯನ್ನಂತೂ ಮಾಡಿಬಿಡಿತ್ತೀರಾ, ಪ್ರತಿಜ್ಞೆಯನ್ನೂ ಬರೆದುಕೊಡುತ್ತೀರಾ. ಆದರೆ ಅದು ಕಾಗದದಲ್ಲಿ ಮಾತ್ರ ಇರುತ್ತದೆಯೇ ಅಥವಾ ಜೀವನದಲ್ಲೂ ತರುತ್ತೀರಾ? **(09–01–1995)**

ಡ್ರಾಮಾದಲ್ಲಿ ಯಾವುದೆಲ್ಲಾ ಮಾತು ಬರುತ್ತದೋ ಆ ಮಾತಿನಲ್ಲಿ ಬಹಳ ಒಳ್ಳೆಯ ಬುದ್ಧಿವಂತಿಕೆ ಇರುತ್ತದೆಯೆಂದು ಬಾಪ್‌ದಾದಾರವರು ಮೊದಲೇ ಹೇಳಿದ್ದರು. ಆದರೆ ಆಗಾಗ ಬ್ರಾಹ್ಮಣ ಮಕ್ಕಳಲ್ಲಿ ಬುದ್ಧಿಯು ಸ್ವಲ್ಪ ಕಡಿಮೆಯಾಗಿ ಬಿಡುತ್ತದೆ. ಮಾತು ಬರುತ್ತದೆ ಮತ್ತು ಹೊರಟು ಹೋಗುತ್ತದೆ. ಆದರೆ ಬ್ರಾಹ್ಮಣ ಮಕ್ಕಳು ಮಾತನ್ನು ಹಿಡಿದು ಕುಳಿತುಕೊಳ್ಳುತ್ತಾರೆ. ಮಾತು ನಿಲ್ಲುವುದಿಲ್ಲ ಹೊರಟು ಹೋಗುತ್ತದೆ. ಆದರೆ ಸ್ವಯಂ ತಾವು ಮಾತನ್ನು ಬಿಡುವುದಿಲ್ಲ. ಅಂದಮೇಲೆ ಮಾತಿನಲ್ಲಿ ಹೆಚ್ಚು ಬುದ್ಧಿವಂತಿಕೆ ಇದೆಯೇ ಅಥವಾ ಬ್ರಾಹ್ಮಣರಲ್ಲೋ? ಮಾತುಗಳು ಬುದ್ಧಿವಂತವಾದವಲ್ಲವೇ? ಕೆಲವು ಮಕ್ಕಳು 'ಎರಡು ದಿನದಿಂದ ಈ ಮಾತು ನಡೆಯುತ್ತಿದೆ, ಎರಡು ದಿನ ಈ ಮಾತು ನಡೆಯಿತು' ಎಂದು ಹೇಳುತ್ತಾರೆ. ಮತ್ತು ಎರಡು ಗಂಟೆಯಲ್ಲಿ ಎಷ್ಟು ಕಳೆದುಕೊಂಡಿರಿ? ಎರಡು ದಿನದಲ್ಲಿ ಎಷ್ಟು ಕಳೆದುಕೊಂಡಿರಿ? ಆದ್ದರಿಂದ ಬುದ್ಧಿವಂತರಾಗಿರಿ. **(19–01–1995)**

ಸಂಘಟನೆಯ ಮಜವು ಸಹ ಬಹಳ ಪ್ರಿಯವಾಗಿದೆ. ಬರುವುದೇನೋ ನಿಗದಿತ ಪ್ರಮಾಣದ ಅನುಸಾರವಾಗಿಯೇ, ಹೆಚ್ಚಾಗಿ ಬರುವುದು ಬೇಡ. ಆದರೆ ಎಲ್ಲರ ಜೊತೆ ಅಡ್ಜೆಸ್ಟ್ (ಹೊಂದಾಣಿಕೆ) ಮಾಡಿಕೊಂಡು ಹೋಗುವಂತಹ ಅಭ್ಯಾಸವಿರಬೇಕು. ಹೊಂದಿಕೊಂಡು ಹೋಗುವ ಶಕ್ತಿಯು ಸದಾ ವಿಜಯಿಗಳನ್ನಾಗಿ ಮಾಡಿ ಬಿಡುತ್ತದೆ. ಬ್ರಹ್ಮಾಬಾಬಾರವರನ್ನು ನೋಡಿ ಹೇಗೆ ಮಕ್ಕಳೊಂದಿಗೆ ಮಕ್ಕಳಾಗಿ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದರು, ದೊಡ್ಡವರೊಂದಿಗೆ ದೊಡ್ಡವರಾಗಿ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದರು. ಬಡತನದ ಜೀವನವಿರಬಹುದು, ಸಾಧನಗಳು ತುಂಬಿರುವ ಜೀವನವಿರಬಹುದು, ಎರಡರಲ್ಲೂ ಹೊಂದಾಣಿಕೆ ಮಾಡಿಕೊಂಡು ಹೋಗಬೇಕು ಮತ್ತು ಖುಷಿ ಖುಷಿಯಿಂದ ಹೊಂದಾಣಿಕೆ ಮಾಡಿಕೊಳ್ಳಬೇಕು. ಯೋಚಿಸಿ ಮಾಡಿಕೊಳ್ಳುವುದಲ್ಲ. ಇಲ್ಲಿ ದುಃಖಿಗಳಂತೂ ಆಗುವುದಿಲ್ಲ, ಆದರೆ ಖುಷಿಯ ಬದಲಿಗೆ

'ಇದೇನಾಯಿತು, ಹೇಗಾಯಿತು' ಎಂದು ಸ್ವಲ್ಪ ಯೋಚನೆ ಯಲ್ಲಿ ತೊಡಗುತ್ತೀರಾ. ಆದ್ದರಿಂದ ಯೋಚನೆ ಮಾಡುವವರಿಗೆ ಹೊಂದಾಣಿಕೆ ಮಾಡಿಕೊಳ್ಳುವುದರಲ್ಲಿನ ಆನಂದವನ್ನು ಅನುಭವಿಸಲು ಸ್ವಲ್ಪ ಸಮಯ ಹಿಡಿಯುತ್ತದೆ. ನಿಮ್ಮನ್ನು ನೀವು ಚೆಕ್ ಮಾಡಿಕೊಳ್ಳಿ ಎಂತಹದ್ದೇ ಪರಿಸ್ಥಿತಿ ಇರಲಿ, ಒಳ್ಳೆಯದಿರಲಿ ಅಥವಾ ಅಲುಗಾಡಿಸುವಂತಹದ್ದಿರಲಿ, ಪ್ರತಿ ಸಮಯ, ಪ್ರತಿ ಸನ್ನಿವೇಶದಲ್ಲೂ ತಮ್ಮನ್ನು ತಾವು ಹೊಂದಾಣಿಕೆ ಮಾಡಿಕೊಳ್ಳಬಲ್ಲಿರಾ? ಡಬಲ್ ವಿದೇಶಿಯರಿಗೆ ಒಂಟಿತನವು ಇಷ್ಟವಾಗುತ್ತದೆ ಮತ್ತು ಜೊತೆಗಾರರೂ ಬಹಳ ಇಷ್ಟವಾಗುತ್ತಾರೆ. ಆದರೆ ಜೊತೆಗಾರರೊಂದಿಗಿರಲಿ ಅಥವಾ ಒಂಟಿಯಾಗಿರಲಿ ಎರಡರಲ್ಲೂ ಹೊಂದಿಕೊಳ್ಳುವುದೇ ಬ್ರಾಹ್ಮಣ ಜೀವನವಾಗಿದೆ. 'ಸಂಘಟನೆಯಲ್ಲಿದ್ದಾಗ ತಲೆ ಭಾರವಾಗುತ್ತದೆ, ನನಗೆ ಏಕಾಂತ ಬೇಕು, ಈ ದೊಂಬಿಯಲ್ಲಿ ಬೇಡ, ನನಗೆ ಒಂಟಿತನ ಬೇಕು' ಎಂದು ಹೇಳುವುದಲ್ಲ. ಮನಸ್ಸು ಒಂಟಿಯಾಗಿರುವುದು ಎಂದರೆ ಬಹಿರ್ಮುಖತೆಯಿಂದ ಅಂತರ್ಮುಖತೆಗೆ ಹೋಗಿಬಿಡಿ ಆಗ ಒಂಟಿತನ ಇರುತ್ತದೆ. ಕೆಲವರು ನನಗೇ ಪ್ರತ್ಯೇಕ ಕೋಣೆ ಬೇಕು, ಇಬ್ಬರು ಇರುವುದು ಬೇಡ ಎಂದು ಹೇಳುತ್ತಾರೆ. ಪ್ರತ್ಯೇಕ ಕೋಣೆ ಸಿಕ್ಕಿದರೂ ಖುಷಿಯಿಂದ ಮಲಗಿ, ಹತ್ತು ಜನರ ನಡುವೆಯೂ ಮಲಗಬೇಕಾದ್ದಲ್ಲಿ ಆನಂದವಾಗಿ ಮಲಗಿರಿ. ವಿದೇಶಿಯರು ಹತ್ತು ಜನರ ನಡುವೆ ಮಲಗಬಲ್ಲಿರಾ ಅಥವಾ ಕಷ್ಟವೆನಿಸುತ್ತದೆಯೇ? ಮಲಗಬಲ್ಲಿರಾ? (ಹೌದು) ಒಳ್ಳೆಯದು, ಮುಂದಿನ ವರ್ಷ 20–20 ಜನರನ್ನು ಮಲಗಿಸುತ್ತೇವೆ. ನೋಡಿ, ಸಮಯ ಬದಲಾಗುತ್ತಿರುತ್ತದೆ ಮತ್ತು ಮುಂದೆಯೂ ಬದಲಾಗುತ್ತಾ ಇರುತ್ತದೆ. ಪ್ರಪಂಚದ ಪರಿಸ್ಥಿತಿಗಳು ಸೂಕ್ಷ್ಮವಾಗುತ್ತಾ ಇವೆ ಮತ್ತು ಇನ್ನೂ ಸೂಕ್ಷ್ಮವಾಗುತ್ತದೆ. ಆಗಲೇ ಬೇಕಾಗಿದೆ. ಈಗ ಕೇವಲ ಒಂದೊಂದು ಸ್ಥಾನದಲ್ಲಿ ಬೇರೆ ಬೇರೆಯಾಗಿ ಆಗುತ್ತದೆ, ಕೊನೆಯಲ್ಲಿ ಎಲ್ಲಾ ಕಡೆಯು ಒಟ್ಟಿಗೆ ಆಗುತ್ತದೆ. ಆದ್ದರಿಂದ ಸೂಕ್ಷ್ಮವಾದ ಸಮಯವಂತೂ ಬಂದೇ ಬರಬೇಕಾಗಿದೆ. ಸಮಯ ಸೂಕ್ಷ್ಮವಾಗಿರಲಿ ಆದರೆ ತಮ್ಮ ಸ್ವಭಾವ ಸೂಕ್ಷ್ಮವಾಗಬಾರದು. ಕೆಲವರ ಸ್ವಭಾವ ತುಂಬಾ ಸೂಕ್ಷ್ಮವಾಗಿರುತ್ತದೆ ಯಲ್ಲವೇ? ಸ್ವಲ್ಪ ಶಬ್ದವಾದರೂ ಅಥವಾ ಸ್ವಲ್ಪ ಬೇರೆನಾದರೂ ಆದರೂ ಬಹಳ ವಿಚಲಿತರಾಗಿತ್ತಾರೆ. ಇದನ್ನು 'ಸೂಕ್ಷ್ಮ ಸ್ಥಿತಿ, ಸೂಕ್ಷ್ಮ ಸ್ವಭಾವ' ಎಂದು ಹೇಳಲಾಗುತ್ತದೆ. ಆದ್ದರಿಂದ ಸೂಕ್ಷ್ಮ ಸ್ವಭಾವದವರಾಗಬೇಡಿ. ಎಂತಹ ಸಮಯವಿದೆಯೋ ಆ ರೀತಿಯಲ್ಲಿ ತಮ್ಮನ್ನು ತಾವು ಹೊಂದಾಣಿಕೆ ಮಾಡಿಕೊಳ್ಳಿ. ಈ ಅಭ್ಯಾಸವು ಮುಂದೆ ತಮಗೆ ಬಹಳ ಉಪಯುಕ್ತವಾಗುತ್ತದೆ. ಏಕೆಂದರೆ ಪರಿಸ್ಥಿತಿಗಳು ಸದಾ ಒಂದೇ ರೀತಿ ಇರುವುದಿಲ್ಲ ಮತ್ತು ತಮ್ಮ ಅಂತಿಮ ಪರೀಕ್ಷೆಯು ಸೂಕ್ಷ್ಮವಾದ ಸಮಯದಲ್ಲೇ ಆಗುತ್ತದೆ. ಆರಾಮದ ಸಮಯದಲ್ಲಿ ಪರೀಕ್ಷೆ ಆಗುವುದಿಲ್ಲ, ಸೂಕ್ಷ್ಮ ಸಮಯದಲ್ಲಿ ಆಗುತ್ತದೆ. ಆದ್ದರಿಂದ ಈಗಿನಿಂದಲೇ ನಿಮ್ಮಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಶಕ್ತಿ ಇದ್ದಾಗ ಸೂಕ್ಷ್ಮ ಸಮಯದಲ್ಲಿ ಪಾಸ್ ವಿತ್ ಆನರ್ (ಗೌರವಯುತವಾಗಿ ತೇರ್ಗಡೆ) ಆಗುತ್ತೀರಿ. ಪೇಪರ್ ಬಹಳ ಸಮಯದ್ದು ಇರುವುದಿಲ್ಲ, ಪೇಪರ್ ಬಹಳ ಸ್ವಲ್ಪ ಸಮಯದ್ದು ಇರುತ್ತದೆ ಆದರೆ ನಾಲ್ಕೂ ಕಡೆಯಲ್ಲಿ ಸೂಕ್ಷ್ಮ ಪರಿಸ್ಥಿತಿಗಳು ಬರುತ್ತವೆ, ಅವುಗಳ ಮಧ್ಯೆ ಪರೀಕ್ಷೆಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ತಮ್ಮ ಸ್ವಭಾವದಿಂದಲೂ ತಮ್ಮನ್ನು ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಿ. 'ಏನು ಮಾಡಲಿ, ನನ್ನ ಸ್ವಭಾವವೇ ಈ ರೀತಿ ಇದೆ, ನನ್ನ ಅಭ್ಯಾಸವೇ ಈ ರೀತಿ ಇದೆ' ಎಂದು ಹೇಳುವುದಲ್ಲ. ಈ ರೀತಿ ಹೇಳುವುದನ್ನು ಸೂಕ್ಷ್ಮ ಸ್ವಭಾವ ಎಂದು ಹೇಳಲಾಗುತ್ತದೆ. ನೋಡಿ, ಬಾಪ್‌ದಾದಾರವರು ಸ್ಥಾಪನೆಯ ಆದಿಯಲ್ಲಿ ಎಲ್ಲವನ್ನೂ ಅನುಭವ ಮಾಡಿಸಿದರು. ಯಾವಾಗ ಆದಿ ಪ್ರಾರಂಭವಾಯಿತೋ ರಾಜಕುಮಾರ ಮತ್ತು ರಾಜಕುಮಾರಿ ಯರಿಗಿಂತಲೂ ಹೆಚ್ಚಿನ ಪಾಲನೆಯನ್ನು, ಸಾಧನಗಳನ್ನು ಎಲ್ಲವನ್ನೂ ಅನುಭವ ಮಾಡಿಸಿದರು ಮತ್ತು ಮುಂದುವರೆಯುತ್ತಾ ಬಡತನದ ಜೀವನವನ್ನೂ ಪೂರ್ತಿಯಾಗಿ ಅನುಭವ ಮಾಡಿಸಿದರು. ಯಾರು ಎರಡನ್ನೂ ಅನುಭವ ಮಾಡಿದರೋ ಅವರಿಗೆ ಅಭ್ಯಾಸ ಆಗಿಬಿಟ್ಟಿತು. ತಮ್ಮ ಮುಂದೆಯಾದರೋ ಇಂತಹ ಸಮಯ ಬರಲಿಲ್ಲ, ಆದರೆ ಬರಬೇಕಾಗಿದೆ. ಎಲ್ಲೇ ಇದ್ದರೂ ಎಲ್ಲರೂ ಅಲುಗಾಡಬೇಕಾಗಿದೆ, ಎಲ್ಲಾ ಆಧಾರ ತುಂಡಾಗಲೇ ಬೇಕಾಗಿದೆ. ಅಂದಾಗ ಅಂತಹ ಸಮಯದಲ್ಲಿ ಏನು ಬೇಕಾಗಿದೆ? ಒಂದೇ ತಂದೆಯ ಆಧಾರ. ತಾವೆಲ್ಲರೂ ಬಹಳ ಬಹಳ ಅದೃಷ್ಟವಂತರಾಗಿದ್ದೀರಿ. ತಾವು ಬರುವಂತಹ ಸಮಯ ಸಹಜ ಸಾಧನಗಳ ಸಮಯವಾಗಿದೆ. ಸಹಜ ಸಾಧನಗಳ ಜೊತೆ ಜೊತೆಗೆ ತಮ್ಮ ಬ್ರಾಹ್ಮಣ ಜನ್ಮವಾಗಿದೆ. ಆದರೆ ಸಾಧನೆ ಮತ್ತು ಸಾಧನ, ಸಾಧನಗಳನ್ನು ನೋಡುತ್ತಾ ಸಾಧನೆಯನ್ನು ಮರೆಯಬೇಡಿರಿ. ಏಕೆಂದರೆ ಕೊನೆಯಲ್ಲಿ ನಿಮ್ಮ ಸಾಧನೆಯೇ ಕೆಲಸಕ್ಕೆ ಬರುವುದಿದೆ. ತಿಳಿಯಿತೆ?

ಉತ್ಸಾಹದಲ್ಲಿ ಇರುವವರು ಅಂದರೆ ಸದಾ ಉತ್ಸವವನ್ನು ಆಚರಿಸುವಂತಹ ಶ್ರೇಷ್ಠ ಆತ್ಮಗಳಾಗಿದ್ದೀರಿ. ಎಂದಿಗೂ ಉತ್ಸಾಹವು ಕಡಿಮೆ ಆಗಬಾರದಾಗಿದೆ. ಬ್ರಾಹ್ಮಣ ಜೀವನದ ಶ್ವಾಸವೇ ಉಮ್ಮಂಗ ಉತ್ಸಾಹವಾಗಿದೆ ಎಂದು ಮೊದಲೇ ತಿಳಿಸಿಕೊಡಲಾಗಿತ್ತು. ಒಂದುವೇಳೆ ಶ್ವಾಸವು ಹೊರಟು ಹೋದರೆ ಜೀವನವು ಒಂದು ಸೆಕೆಂಡಿನಲ್ಲಿ ಸಮಾಪ್ತಿಯಾಗಿ ಬಿಡುತ್ತದೆಯಲ್ಲವೇ? ಆದ್ದರಿಂದ ಬ್ರಾಹ್ಮಣ ಜೀವನದಲ್ಲಿ ಒಂದುವೇಳೆ

ಉಮ್ಮಂಗ ಉತ್ಸಾಹದ ಶ್ವಾಸ ಇಲ್ಲವೆಂದರೆ ಬ್ರಾಹ್ಮಣ ಜೀವನವೇ ಇಲ್ಲ. ಯಾರು ಸದಾ ಉಮ್ಮಂಗ ಉತ್ಸಾಹದಲ್ಲಿರುತ್ತಾರೋ ಅವರು ಹೆಮ್ಮೆಯಿಂದ 'ಬ್ರಾಹ್ಮಣರಾಗಿರುವುದೇ ಉಮ್ಮಂಗ ಉತ್ಸಾಹಕ್ಕಾಗಿ' ಎಂದು ಹೇಳುತ್ತಾರೆ. ಯಾರ ಉಮ್ಮಂಗ ಉತ್ಸಾಹವು ಕಡಿಮೆ ಆಗಿಬಿಡುತ್ತದೆಯೋ ಅವರ ಮಾತುಗಳೇ ಬದಲಾವಣೆ ಆಗಿಬಿಡುತ್ತದೆ. ಅವರು 'ಸರಿಯಾಗಿ ಅಂತೂ ಇದೆ, ಇರಬೇಕಾಗಿತ್ತು, ಆಗಿಬಿಡುತ್ತದೆ' ಎಂದು ಹೇಳುತ್ತಾರೆ. ಈ ಭಾಷೆಗೂ ಮತ್ತು ಆ ಭಾಷೆಗೂ ಎಷ್ಟೊಂದು ಅಂತರವಿದೆ. ಅವರ ಪ್ರತಿ ಮಾತಿನಲ್ಲಿ 'ನೋಡೋಣ, ಮಾಡೋಣ.....' ಎಂಬುದು ಅವಶ್ಯವಾಗಿ ಇರುತ್ತದೆ. ಈ ರೀತಿ ಹೇಳುವುದು ಉಮ್ಮಂಗ ಉತ್ಸಾಹದ ಒತ್ತಡ ಕಡಿಮೆ ಆಗುವುದರಿಂದಲೇ, ಇಂತಹ ಮಾತು, ಬಲಹೀನತೆಯ ಮಾತು ಹೊರಡುತ್ತದೆ. ಆದ್ದರಿಂದ ಈ ಉಮ್ಮಂಗ ಉತ್ಸಾಹವು ಎಂದಿಗೂ ಕಡಿಮೆ ಆಗಬಾರದಾಗಿದೆ. ಉಮ್ಮಂಗ ಉತ್ಸಾಹವು ಏಕೆ ಕಡಿಮೆಯಾಗುತ್ತದೆ? ಬಾಪ್‌ದಾದಾರವರು 'ಸದಾ ವಾಹ್ ವಾಹ್ ಎಂದು ಹೇಳಿ' ಎಂದು ಹೇಳುತ್ತಾರೆ. ಆದರೆ ನೀವು 'ವೈ ವೈ' (ಏಕೆ ಏಕೆ) ಎಂದು ಹೇಳುತ್ತೀರಿ. ಒಂದುವೇಳೆ ಯಾವುದೇ ಪರಿಸ್ಥಿತಿಯಲ್ಲಿ 'ವೈ' (ಏಕೆ) ಎಂಬ ಶಬ್ದ ಬಂದುಬಿಟ್ಟಿತು ಎಂದರೆ ಉಮ್ಮಂಗ ಉತ್ಸಾಹದ ಪ್ರಷರ್ (ಒತ್ತಡ) ಕಡಿಮೆ ಆಗಿಬಿಡುತ್ತದೆ. ಬಾಪ್‌ದಾದಾರವರು ಕಳೆದ ವರ್ಷವೂ ವಿಶೇಷವಾಗಿ ಡಬ್ಬಲ್ ವಿದೇಶಿಯರಿಗೆ 'ವೈ' (ಏಕೆ) ಎಂಬ ಶಬ್ದವನ್ನು ಬ್ರಾಹ್ಮಣ ಡಿಕ್ಷನರಿ (ನಿಘಂಟು) ಯಲ್ಲಿ ಪರಿವರ್ತನೆ ಮಾಡಿರಿ' ಎಂದು ಹೇಳಿದ್ದರು. ಯಾವಾಗಲಾದರೂ 'ವೈ' ಶಬ್ದ ಬಂತು ಎಂದರೆ 'ಫ್ಲೈ' (ಹಾರುವುದು) ಶಬ್ದವನ್ನು ನೆನಪಿನಲ್ಲಿಟ್ಟುಕೊಳ್ಳಿರಿ. ಆಗ 'ವೈ' ಶಬ್ದವು ಸಮಾಪ್ತಿಯಾಗಿ ಬಿಡುತ್ತದೆ. ಯಾವುದೇ ಚಿಕ್ಕ ಪರಿಸ್ಥಿತಿಯೂ ಸಹ ದೊಡ್ಡದೆಂದು ಅನಿಸುತ್ತದೋ ಆಗ ಇದು ಏನು?, ಇದು ಏಕೆ?..... ಎಂಬ 'ವೈ' ಶಬ್ದ ಬರುತ್ತದೆ. ಮತ್ತು 'ಫ್ಲೈ' ಮಾಡಿಬಿಟ್ಟಾಗ (ಹಾರಿಬಿಟ್ಟಾಗ) ಪರಿಸ್ಥಿತಿಯು ಏನಾಗಿಬಿಡುತ್ತದೆ? ಚಿಕ್ಕ ಆಟದ ಗೊಂಬೆ. ಅಂದಾಗ ಯಾವಾಗಲೇ ಆಗಲಿ 'ವೈ' ಶಬ್ದ ಮನಸ್ಸಿನಲ್ಲಿ ಬಂದಾಗ, 'ಬ್ರಾಹ್ಮಣ ಡಿಕ್ಷನರಿಯಲ್ಲಿ 'ವೈ' ಶಬ್ದವಿಲ್ಲ, 'ಫ್ಲೈ' ಎಂಬ ಶಬ್ದವಿದೆ' ಎಂದು ಹೇಳಿರಿ. ಏಕೆಂದರೆ 'ವೈ, ವೈ' 'ಹಾಯ್ ಹಾಯ್' (ಅಯ್ಯೋ ಅಯ್ಯೋ) ಎನ್ನುವಂತೆ ಮಾಡಿಬಿಡುತ್ತದೆ. ಬಾಪ್‌ದಾದಾರವರಿಗೆ ನಗುವೂ ಬರುತ್ತದೆ – ಒಂದುಕಡೆ 'ನನ್ನಂತಹ ಶ್ರೇಷ್ಠ ಭಾಗ್ಯವು ಅನ್ಯ ಯಾರದೂ ಇಲ್ಲ' ಎಂದು ಹೇಳುತ್ತೀರಿ. ಈಗಿಗ ಈ ರೀತಿ ಹೇಳುತ್ತೀರಿ ಮತ್ತು ಈಗೀಗ ಉತ್ಸಾಹವು ಕಡಿಮೆ ಆಯಿತು ಎಂದರೆ 'ತಿಳಿದಿಲ್ಲ, ನನ್ನ ಭಾಗ್ಯವೇ ಈ ರೀತಿ ಇದೆ, ನನ್ನ ಭಾಗ್ಯದಲ್ಲಿ ಇಷ್ಟು ಮಾತ್ರ ಇದೆ' ಎಂದು ಹೇಳುತ್ತೀರಿ. ಅಂದಾಗ ಅಯ್ಯೋ ಅಯ್ಯೋ ಎಂಬಂತೆ ಆಯಿತಲ್ಲವೇ? ಯಾವಾಗಲೇ ಆಗಲೀ ಅಯ್ಯೋ, ಅಯ್ಯೋ ಎನ್ನುವಂತಹ ದೃಶ್ಯ ಕಂಡು ಬಂದರೆ ವಾಹ್, ವಾಹ್ ಎಂಬುದಾಗಿ ಮಾಡಿಕೊಂಡು ಬಿಡಿ, ಆಗ ದೃಶ್ಯವೂ ಬದಲಾವಣೆಯಾಗಿಬಿಡುತ್ತದೆ ಮತ್ತು ನೀವೂ ಸಹ ಬದಲಾಗಿ ಬಿಡುವಿರಿ. **(26–02–1995)**

ಬಾಪ್‌ದಾದಾರವರು ಬಹಳ ಸಹಜವಾದ ಶಬ್ದಗಳಲ್ಲಿ ಯುಕ್ತಿಯನ್ನು ತಿಳಿಸಿಕೊಡುತ್ತಿದ್ದಾರೆ – ಯಾವಾಗಲೇ ಆಗಲೀ ಯಾವುದೇ ಪರಿಸ್ಥಿತಿ ಅಥವಾ ಪ್ರಕೃತಿಯು ಏರುಪೇರಿನ ರೂಪದಲ್ಲಿ ಬಂದಲ್ಲಿ ಎರಡು ಶಬ್ದಗಳನ್ನು ನೆನಪಿನಲ್ಲಿಟ್ಟುಕೊಳ್ಳಿ. ವಿಧಿಯಾಗಿದೆ – ನಾಟ್ (ಇಲ್ಲ) ಎಂದಾದರೂ ಮಾಡಿ ಅಥವಾ ಡಾಟ್ (ಬಿಂದು) ಆದರೂ ಇಡಿ. ನಾಟ್ ಅಥವಾ ಡಾಟ್. ಒಂದುವೇಳೆ ಯಾವುದಾದರೂ ಮಾತು ತಪ್ಪಾಗಿದ್ದರೆ 'ನಾಟ್' ಅಂದರೆ ಮಾಡಬಾರದು ಎಂಬುದಾಗಿ ಯೋಚಿಸಿ. ಯೋಚಿಸುವುದೂ ಬೇಡ, ಹೇಳುವುದೂ ಬೇಡ ಮತ್ತು ಮಾಡುವುದೂ ಬೇಡ. ಮತ್ತು ಡಾಟ್ (ಬಿಂದು) ಇಟ್ಟುಬಿಡಿ, ಆಗ ನಾಟ್ ಆಗಿಯೇ ಬಿಡುತ್ತದೆ. ಸೋಚೋ ನಾಟ್, ಲಗಾವೋ ಡಾಟ್ (ಯೋಚಿಸ ಬೇಡಿ, ಬಿಂದು ಇಡಿ). ಮುಗಿಯಿತು. ಡಾಟ್ (.) ಇಡುವುದರಲ್ಲಿ ಎಷ್ಟು ಸಮಯ ಇಡಿಯುತ್ತದೆ? ಒಂದು ಸೆಕೆಂಡಿಗಿಂತಲೂ ಕಡಿಮೆ. ಆದರೆ ಆಗುವುದೇನು? 'ಇದನ್ನು ಮಾಡಬಾರದಾಗಿತ್ತು, ಇದು ಸರಿಯಿಲ್ಲ' ಎಂದು ತಿಳಿಯುತ್ತೀರಿ. ಆದರೆ ಡಾಟ್ ಇಡುವುದು ಬರುವುದಿಲ್ಲವೇ? ನಾಲೆಡ್ಜ್‌ಫುಲ್ (ಜ್ಞಾನಪೂರ್ಣರು) ಅಂತೂ ಆಗಿಬಿಟ್ಟಿರುವಿರಿ, ಆದರೆ ಕೇವಲ ನಾಲೆಡ್ಜ್‌ಫುಲ್ ಆಗುವುದಲ್ಲ, ನಾಲೆಡ್ಜ್‌ನ (ಜ್ಞಾನದ) ಜೊತೆಗೆ ಫವರ್‌ಫುಲ್ (ಶಕ್ತಿಶಾಲಿಗಳೂ) ಸಹ ಅಗಬೇಕಾಗಿದೆ. ಫವರ್‌ಫುಲ್ ಸ್ಥಿತಿಯು ಬಲಹೀನವಾಗಿರುವ ಕಾರಣದಿಂದಲೇ ಡಾಟ್ ಇಡಲಾಗುವುದಿಲ್ಲ ಮತ್ತು ಯಾರಿಗೆ ಡಾಟ್ ಇಡಲು ಬರುತ್ತದೆಯೋ ಅವರು ತಂದೆಯನ್ನೂ ಸಹ ಮರೆಯುವುದಿಲ್ಲ, ತಂದೆಯೂ ಸಹ ಡಾಟ್ (ಬಿಂದು) ಆಗಿದ್ದಾರೆ. ಮತ್ತು ನೀವೂ ಸಹ ಡಾಟ್ (ಬಿಂದು) ಆಗಿದ್ದೀರಿ. ಅಂದಾಗ ಫುಲ್‌ಸ್ಟಾಪ್ (.), ಪ್ರಶ್ನಾರ್ಥಕ (?), ಆಶ್ಚರ್ಯದ ಚಿಹ್ನೆ (!) ಅಥವಾ ಕಾಮಾ (,) ಎಲ್ಲವೂ ನೆನಪಿಗೆ ಬಂದು ಬಿಡುತ್ತದೆ. ಆದರೆ ಇವುಗಳನ್ನು ಇಡಬೇಡಿ, ಕೇವಲ ಫುಲ್‌ಸ್ಟಾಪ್ (.) ಮಾತ್ರ ಇಡಿ. ಫುಲ್‌ಸ್ಟಾಪ್‌ನ ಚಿಹ್ನೆಯು ಬಹಳ ಸುಲಭವಾಗಿದೆಯಲ್ಲವೇ? ಮತ್ತು ಅನ್ಯ ಎಲ್ಲಾ ಚಿಹ್ನೆಗಳು ಕಷ್ಟವಾಗಿದೆ ಮತ್ತು ಎಲ್ಲದಕ್ಕಿಂತಲೂ ಹೆಚ್ಚು ಕಷ್ಟವಾಗಿರುವುದು ಪ್ರಶ್ನಾರ್ಥಕ ಚಿಹ್ನೆ (?)

ಪ್ರಶ್ನಾರ್ಥಕ ಚಿಹ್ನೆ ಹಾಕುವುದು ಬಹಳ ಬೇಗ ಬಂದುಬಿಡುತ್ತದೆ. 'ವೈ' ಶಬ್ಧ ಬಂದರೆ 'ಪ್ಲೈ' ಮೇಲೆ ಹಾರಿಬಿಡಿ ಎಂದು ಹೇಳಿದ್ದೇನಲ್ಲವೇ? ವೈ ಅಲ್ಲ ಪ್ಲೈ. ಹಾರಲು ಬರುತ್ತದೆಯೇ?

ಒಂದು ಸೆಕೆಂಡಿನಲ್ಲಿ ಡಾಟ್ (ಬಿಂದು) ಇಡಬಲ್ಲಿರಾ? ಈಗೀಗ ಕರ್ಮದಲ್ಲಿ ಬರುವುದು ಮತ್ತು ಈಗೀಗ ಕರ್ಮದಿಂದ ಭಿನ್ನರಾಗುವುದು, ಕರ್ಮದ ಸಂಬಂಧದಿಂದ ಭಿನ್ನರಾಗಬಲ್ಲಿರಾ? ಈ ವ್ಯಾಯಾಮ ಬರುತ್ತದೆಯೇ? ಯಾವುದೇ ಕರ್ಮದಲ್ಲಿ ಬಹಳ ವ್ಯಸ್ತರಾಗಿದ್ದರೂ ಮನಸ್ಸು ಬುದ್ಧಿ ಕರ್ಮದ ಸಂಬಂಧದಲ್ಲಿ ತೊಡಗಿರುತ್ತದೆಯೇ? ಬಂಧನದಲ್ಲಿ ಅಲ್ಲ. ಸಂಬಂಧದಲ್ಲಿ. ಆದರೆ ಫುಲ್‌ಸ್ಟಾಪ್ ಎಂದು ನಿರ್ದೇಶನ ಸಿಕ್ಕಿದರೆ, ಫುಲ್‌ಸ್ಟಾಪ್‌ನ್ನು ಇಡಬಲ್ಲಿರಾ ಅಥವಾ 'ಇದನ್ನು ಮಾಡಬೇಕಾಗಿದೆ, ಇದನ್ನು ಮಾಡಬಾರದಾಗಿದೆ, ಇವರು ಈ ರೀತಿ ಇದ್ದಾರೆ, ಅವರು ಆ ರೀತಿ ಇದ್ದಾರೆ.....' ಎಂಬುದಾಗಿ ಕರ್ಮದ ಸಂಕಲ್ಪಗಳು ನಡೆಯುತ್ತಾ ಇರುತ್ತವೆಯೇ? ಅಂದಾಗ ಈ ಅಭ್ಯಾಸವನ್ನು ಒಂದು ಸೆಕೆಂಡಿಗಾದರೂ ಮಾಡಿರಿ, ಆದರೆ ಅಭ್ಯಾಸವನ್ನು ಮಾಡುತ್ತಾ ಇರಿ. ಏಕೆಂದರೆ ಅಂತಿಮ ಸರ್ಟಿಫಿಕೇಟ್ ಒಂದು ಸೆಕೆಂಡ್‌ನಲ್ಲಿ ಫುಲ್‌ಸ್ಟಾಪ್ ಇಡುವುದರಿಂದಲೇ ಸಿಗುತ್ತದೆ. ಒಂದು ಸೆಕೆಂಡಿನಲ್ಲಿ ವಿಸ್ತಾರವನ್ನು ಸಮಾವೇಶ ಮಾಡಿಕೊಂಡುಬಿಡಿ, ಸಾರ ಸ್ವರೂಪರು ಆಗಿಬಿಡಿ. ಅಂದಾಗ ಈ ಅಭ್ಯಾಸವನ್ನು ಯಾವಾಗ ಅವಕಾಶ ಸಿಕ್ಕಿ ಮಾಡಲು ಸಾಧ್ಯವಾಗುತ್ತದೆಯೋ ಆಗ ಮಾಡುತ್ತಾ ಇರಿ. ಯೋಗದಲ್ಲಿ ಕುಳಿತುಕೊಂಡಾಗಲೇ ಫುಲ್‌ಸ್ಟಾಪ್ ಇಡಲು ಸಾಧ್ಯವಾಗುತ್ತದೆ ಎಂದು ಹೇಳುವುದಲ್ಲ. ಹಲ್‌ಚಲ್ (ಏರುಪೇರು) ಇದ್ದಾಗಲೂ ಫುಲ್‌ಸ್ಟಾಪ್ ಇಡುವವರಾಗಬೇಕು. ಇಷ್ಟೊಂದು ಶಕ್ತಿಶಾಲಿ ಬ್ರೇಕ್ ಇದೆಯೇ? ಅಥವಾ ಇಲ್ಲಿ ಬ್ರೇಕ್ ಹಾಕುತ್ತೀರಾ ಮತ್ತು ಮುಂದೆ ಹೋಗಿ ನಿಲ್ಲುತ್ತದೆ. ಈ ರೀತಿ ಅಲ್ಲವಲ್ಲ? ಮತ್ತು ಸಮಯದಲ್ಲಿ ಫುಲ್‌ಸ್ಟಾಪ್ ಇಡಬೇಕು. ಸಮಯ ಕಳೆದು ಹೋದ ನಂತರ ಫುಲ್‌ಸ್ಟಾಪ್ ಇಟ್ಟಲ್ಲಿ ಲಾಭವೇನೂ ಇಲ್ಲ. ಯೋಚಿಸಿದೆವು ಮತ್ತು ಆಯಿತು. 'ನಾನು ಶರೀರವಲ್ಲ, ಆತ್ಮ ಆಗಿದ್ದೇನೆ, ಆತ್ಮ ಆಗಿದ್ದೇನೆ, ನಾನು ಈ ಸಮಯದಲ್ಲೇ ಫುಲ್‌ಸ್ಟಾಪ್ ಇಡಲೇ ಬೇಕಾಗಿದೆ, ಬೇರೆ ಏನನ್ನೂ ಯೋಚಿಸಬಾರದಾಗಿದೆ.....' ಎಂಬುದಾಗಿ ಯೋಚಿಸುತ್ತಲೇ ಇರಬೇಡಿ. ಈ ರೀತಿ ಯೋಚಿಸುವುದರಲ್ಲೇ ಸಮಯವು ಹಿಡಿಯುತ್ತದೆ. ಇದು ಒಂದು ಸೆಕೆಂಡಿನ ಫುಲ್‌ಸ್ಟಾಪ್ ಆಗುವುದಿಲ್ಲ. ಈ ಅಭ್ಯಾಸವನ್ನು ಸ್ವಯಂ ನಿಮಗೆ ನೀವೇ ಮಾಡಿಕೊಳ್ಳಿ. ಅನ್ಯರು ಮಾಡಿಸುವ ಅವಶ್ಯಕತೆ ಇಲ್ಲ. ಏಕೆಂದರೆ ಹೊಸಬರಾಗಿರಲಿ ಅಥವಾ ಹಳಬರಾಗಿರಲಿ ಎಲ್ಲರೂ ಈ ವಿಧಿಯನ್ನು ತಿಳಿದಿದ್ದಾರಲ್ಲವೇ? ಆದ್ದರಿಂದ ಬಹಳ ಕಾಲದ ಅಭ್ಯಾಸವು ಬೇಕಾಗಿದೆ. ಆ ಸಮಯದಲ್ಲಿ, 'ಇಲ್ಲ, ನಾನು ಫುಲ್‌ಸ್ಟಾಪ್ ಹಾಕಿಬಿಡುತ್ತೇನೆ' ಎಂದು ತಿಳಿದುಕೊಳ್ಳಬೇಡಿ. ಹಾಕಲಾಗುವುದಿಲ್ಲ ಎಂಬುದನ್ನು ಮೊದಲೇ ತಿಳಿದುಕೊಳ್ಳಿ. 'ಆ ಸಮಯದಲ್ಲಿ ಸಮಯಾನುಸಾರ ಮಾಡಿಬಿಡುತ್ತೇವೆ' ಎಂದು ಹೇಳುವುದಲ್ಲ. ಇಲ್ಲ, ಆಗುವುದೇ ಇಲ್ಲ. ಬಹಳ ಸಮಯದ ಅಭ್ಯಾಸವೇ ಕೆಲಸಕ್ಕೆ ಬರುತ್ತದೆ. ಏಕೆಂದರೆ ಎರಡರ ಮಧ್ಯೆ ಸಂಬಂಧವಿದೆ. ಈ ಬಹಳ ಕಾಲದ ಅಭ್ಯಾಸವು ಬಹಳ ಕಾಲದ ರಾಜ್ಯಭಾಗ್ಯದ ಪ್ರಾಪ್ತಿಯನ್ನು ಮಾಡಿಸುತ್ತದೆ. ಒಂದುವೇಳೆ ಅಲ್ಪಕಾಲದ ಅಭ್ಯಾಸವಿತ್ತು ಎಂದರೆ ಪ್ರಾಪ್ತಿಯು ಸಹ ಅಲ್ಪಕಾಲಕ್ಕಾಗಿ ಮಾತ್ರ ಸಿಗುತ್ತದೆ. ಆದ್ದರಿಂದ ಈ ಅಭ್ಯಾಸವನ್ನು ಇಡೀ ದಿನದಲ್ಲಿ ಯಾವಾಗ ಅವಕಾಶ ಸಿಕ್ಕರೂ ಮಾಡುತ್ತಲೇ ಇರಿ. ಒಂದು ಸೆಕೆಂಡಿನಲ್ಲಿ ಏನೂ ಕೆಟ್ಟು ಹೋಗುವುದಿಲ್ಲ. ಆದ್ದರಿಂದ ಕೆಲಸ ಮಾಡಲು ಪ್ರಾರಂಭ ಮಾಡಿಬಿಡಿ. ಆದರೆ ಹಲ್‌ಚಲ್‌ನಲ್ಲಿ ಫುಲ್‌ಸ್ಟಾಪ್ ಬೀಳುತ್ತದೆಯೇ ಅಥವಾ ಇಲ್ಲವೇ ಎಂಬುದನ್ನು ಚೆಕ್ ಮಾಡಿಕೊಳ್ಳಿ. ಕರ್ಮದ ಸಂಬಂಧದಲ್ಲಿ ಬರುವುದು ಮತ್ತು ಕರ್ಮದ ಬಂಧನದಲ್ಲಿ ಬರುವುದು – ಇದರಲ್ಲೂ ಅಂತರವಿದೆ. ಒಂದುವೇಳೆ ಕರ್ಮದ ಬಂಧನದಲ್ಲಿ ಬರುತ್ತೀರೆಂದರೆ ಕರ್ಮವು ನಿಮ್ಮನ್ನು ಸೆಳೆಯುತ್ತದೆ. ಫುಲ್‌ಸ್ಟಾಪ್ ಇಡಲು ಬಿಡುವುದಿಲ್ಲ. ಮತ್ತು ನ್ಯಾರಾ ಪ್ಯಾರಾ ಆಗಿ ಯಾವುದೇ ಕರ್ಮದ ಸಂಬಂಧದಲ್ಲಿ ಇದ್ದಾಗ ಒಂದು ಸೆಕೆಂಡಿನಲ್ಲಿ ಫುಲ್‌ಸ್ಟಾಪ್ ಬೀಳುತ್ತದೆ. ಏಕೆಂದರೆ ಬಂಧನವಿಲ್ಲ. ಬಂಧನವೂ ಸೆಳೆಯುತ್ತದೆ ಮತ್ತು ಸಂಬಂಧವೂ ಸೆಳೆಯುತ್ತದೆ. ಆದರೆ ನ್ಯಾರಾ ಆಗಿ ಸಂಬಂಧದಲ್ಲಿ ಬರಬೇಕು ಎಂಬುದನ್ನು ಅಂಡರ್‌ಲೈನ್ ಮಾಡಿರಿ. ಈ ರೀತಿಯ ಅಭ್ಯಾಸವನ್ನು ಮಾಡುವವರೇ ಪಾಸ್ ವಿತ್ ಆನರ್ ಆಗುತ್ತಾರೆ (ಗೌರವಯುತವಾಗಿ ತೇರ್ಗಡೆಯಾಗುತ್ತಾರೆ). ಇದು ಅಂತಿಮ ಕರ್ಮಾತೀತ ಸ್ಥಿತಿಯಾಗಿದೆ. ಸಂಪೂರ್ಣ ನ್ಯಾರಾ ಆಗಿ, ಅಧಿಕಾರಿಗಳಾಗಿ ಕರ್ಮದಲ್ಲಿ ಬನ್ನಿ. ಬಂಧನಕ್ಕೆ ವಶರಾಗಬೇಡಿ. **(07–03–1995)**

ಡಬ್ಬಲ್ ವಿದೇಶಿಯರಿಗೆ ಮೇಳ ಚೆನ್ನಾಗಿದೆ ಎಂದು ಅನಿಸಿತೇ? ತಾವು ಈ ರೀತಿ ಮಲಗುತ್ತೀರಾ, ಟೆಂಟ್‌ನಲ್ಲಿ ಮಲಗುತ್ತೀರಾ? ನಿದ್ರೆ ಬರುವುದಿಲ್ಲವೇ? ಮಲಗಲು ತಯಾರಾಗಿದ್ದೀರಾ? ಇವರಂತೂ ತಯಾರಾಗಿದ್ದಾರೆ, ಆದರೆ ನೀವು ಮಲಗಿಸುವುದಿಲ್ಲ. ಬಹಳ ಧೈರ್ಯವಂತರಾಗಿದ್ದಾರೆ, ಎವರ್‌ರೆಡಿಯಾಗಿದ್ದಾರೆ. ಒಂದುವೇಳೆ ಹಾಸಿಗೆ ಸಿಕ್ಕಿದರೂ ಸರಿ, ನೆಲ ಸಿಕ್ಕಿದರೂ ಸರಿ. ಒಳ್ಳೆಯದು. ಡಬ್ಬಲ್ ವಿದೇಶಿಯರೂ ಸಹ ಈ ಸೀಜನ್‌ನಲ್ಲಿ ಒಳ್ಳೆಯ ಉಮ್ಮಂಗ ಉತ್ಸಾಹದಲ್ಲಿರುವುದನ್ನು ನೋಡಿದೆವು.

ವೃದ್ಧಿಯಾಗಿರುವುದನ್ನೂ ನೋಡಿದೆವು. ಸಂಖ್ಯೆಯಲ್ಲೂ ವೃದ್ಧಿಯಾಗಿದೆ ಮತ್ತು ಸ್ಥಿತಿಯಲ್ಲಿಯೂ ಸಹ ವೃದ್ಧಿಯಾಗಿದೆ. ಈಗ ಬಾಲ್ಯತನದ ಆಟಗಳು ಸಮಾಪ್ತಿಯಾಗಿಬಿಟ್ಟಿತು, ಈಗ ದೊಡ್ಡವರಾಗಿಬಿಟ್ಟಿದ್ದಾರೆ. ಒಳ್ಳೆಯದು. ಎಲ್ಲವೂ ಸರಿಯಾಗಿದೆಯೇ? ಮೇಳ ಇಷ್ಟವಾಯಿತೇ? ಈ ಗೊಂದಲವೇನೆಂದು ಯೋಚಿಸುವುದಿಲ್ಲವಲ್ಲವೇ? ಇಲ್ಲ. ಬಹಳ ಚೆನ್ನಾಗಿದೆ. ಡ್ರಾಮಾದಲ್ಲಿ ಏನು ಆಗುತ್ತದೋ ಅದು ಚೆನ್ನಾಗಿದೆ ಮತ್ತು ಎಲ್ಲದಕ್ಕಿಂತಲೂ ಚೆನ್ನಾಗಿರುತ್ತದೆ. **(31–03–1995)**

**(ಪ್ರಸಿದ್ಧ ಗಾಯಕರಾದ ಓಂ ವ್ಯಾಸ್ ರವರು ಹೊಸ ಹಾಡುಗಳ ಬಿಡುಗಡೆಯನ್ನು ಬಾಬಾರವರಿಂದ ಮಾಡಿಸಿದರು)**. ಒಳ್ಳೆಯದು. ಡ್ರಾಮಾವು ನಿಮಿತ್ತರನ್ನಾಗಿ ಮಾಡಿತು. ಮತ್ತು ನಿಮಿತ್ತರಾಗುವುದೂ ಸಹ ಭಾಗ್ಯದ ಗುರುತಾಗಿದೆ. ಅಂದಾಗ ಭಾಗ್ಯವನ್ನು ತಯಾರು ಮಾಡಿಕೊಳ್ಳುತ್ತಿರುವಿರಿ ಮತ್ತು ಮಾಡಿಕೊಳ್ಳುತ್ತಲೇ ಇರುತ್ತೀರಿ. **(07–11–1995)**

ಇದೂ ಸಹ ಡ್ರಾಮಾನುಸಾರ ವಿಶೇಷವಾಗಿ ವರಧಾತನಿಂದ ವರದಾನವು ಸಿಗುತ್ತದೆ. ಯಾವುದೇ ಕಲೆ ಇದ್ದಲ್ಲಿ, ಕಲೆಯನ್ನು ವರದಾನವೆಂದು ತಿಳಿದುಕೊಂಡು ಕಾರ್ಯದಲ್ಲಿ ತೊಡಗಿಸಿ. ಅದರಿಂದ ಕಾರ್ಯವು ಸಹಜವಾಗಿ ಸಫಲವಾಗಿಯೇ ಇದೆ. ಈ ರೀತಿ ಇದೆಯಲ್ಲವೇ? ಅಂದಮೇಲೆ ವಿಶೇಷವಾಗಿ ವರದಾನಿ ಆತ್ಮಗಳಾಗಿದ್ದೀರಿ. ಅದನ್ನು ಅದೇ ವಿಶೇಷತೆಯಿಂದ ಕಾರ್ಯದಲ್ಲಿ ತೊಡಗಿಸುತ್ತಾ ಇರಿ. ತಂದೆಯ ವರದಾನವಿದೆ ಎಂಬುದು ಸದಾ ಸ್ಮೃತಿಯಲ್ಲಿರಲಿ. ಆದ್ದರಿಂದ ಕೇವಲ ನಿಮ್ಮ ಕೈ ಮಾತ್ರ ಕೆಲಸ ಮಾಡುತ್ತಿಲ್ಲ, ಆದರೆ ತಂದೆಯ ಶಕ್ತಿಯು ತಮ್ಮ ಕೈ ಜೊತೆಯಲ್ಲಿ ಕೆಲಸ ಮಾಡುತ್ತದೆ. ಬಹಳ ಒಳ್ಳೆಯದು. **(16–11–1995)**

**ದಾದಿಯರೊಂದಿಗೆ:** ಯಾವಾಗ ನೀವೂ ಮತ್ತು ಇವರು (ಪ್ರಕಾಶಮಣಿ ದಾದಿ ಮತ್ತು ಜಾನಕಿ ದಾದಿ) ಪರಸ್ಪರ ಮಿಲನ ಮಾಡುತ್ತೀರೋ ಆಗ ನಿಮಗೆ ಏನು ಅನಿಸುತ್ತದೆ? (ದಾದಿಯವರು, 'ಬಾಬಾ ನಿಮಗೆ ಏನು ಅನಿಸುತ್ತದೆ?) ತಂದೆಗಂತೂ ಚೆನ್ನಾಗಿದೆ ಎಂದು ಅನಿಸುತ್ತದೆ. ನಿಮಗೆ ಹೇಗೆ ಅನಿಸುತ್ತದೆ? (ಬಾಬಾರವರು ಒಳ್ಳೆಯ ಜೋಡಿಯನ್ನು ತಯಾರು ಮಾಡಿದ್ದಾರೆ. ದೇಶ ವಿದೇಶದವರು ಬೇರೆ ಇದ್ದರೂ ಜೊತೆಯಲ್ಲಿದ್ದಾರೆ). ಡ್ರಾಮಾದಲ್ಲಿ ಈ ಪಾತ್ರವೂ ಇದೆ. ಆದರೂ ಬ್ರಾಹ್ಮಣ ಪರಿವಾರದ ಫೌಂಡೇಷನ್ ಆಗಿದ್ದೀರಲ್ಲವೇ? ಅಂದಾಗ ನಿಮಗೂ ಚೆನ್ನಾಗಿದೆ ಎಂದು ಅನಿಸುತ್ತದೆಯಲ್ಲವೇ? ಬಾಪ್‌ದಾದಾರವರು ತಮ್ಮ ನಿಮಿತ್ತರಾಗಿರುವ ಫೌಂಡೇಷನ್ ಆಗಿರುವ ಆತ್ಮಗಳನ್ನು ತಮಗಿಂತಲೂ ಸಹ ಮುಂದೆ ಇಡುತ್ತಾರೆ. ಏಕೆಂದರೆ ಈಗ ನೋಡಿರಿ, ತಂದೆಯಂತೂ ನಿರಾಕಾರ ಆಗಿದ್ದಾರೆ, ಬ್ರಹ್ಮಾಬಾಬಾರವರು ಸಹ ಆಕಾರಿ ಆಗಿಬಿಟ್ಟರು. ಈಗ ಸಾಕಾರದಲ್ಲಿ ಕೇಳಿಸಿಕೊಳ್ಳಬೇಕಾಗಿದ್ದಲ್ಲಿ, ಹೇಳಬೇಕಾಗಿದ್ದಲ್ಲಿ, ನೋಡಬೇಕಾಗಿದ್ದಲ್ಲಿ, ಕೊಡಬೇಕಾಗಿ ದ್ದಲ್ಲಿ ಇವುಗಳಿಗೆಲ್ಲಾ ಇವರು ನಿಮಿತ್ತರಾಗಿದ್ದಾರಲ್ಲವೇ? ಮತ್ತು ಸಹಜವಾಗಿ ನಡೆಯುತ್ತಿರುವುದನ್ನು ನೋಡಿ ನೀವೆಲ್ಲರೂ ಖುಷಿಯಾಗುತ್ತೀರಲ್ಲವೇ? ನೋಡಿ, ನಿಮ್ಮ (ಜಾನಕಿ ದಾದಿ) ಮೂಲಕ ಈ ವಿದೇಶದ ಸೇವೆಯು ನಿಗದಿಯಾಗಿದೆ. ಎಂದಾಗ ಡ್ರಾಮಾವನ್ನು ಯಾರೂ ಬದಲಾವಣೆ ಮಾಡಲು ಸಾಧ್ಯವಿಲ್ಲ. ನೀವು ಹೋಗಬೇಕಾಗಿ ಬಂತು ಮತ್ತು ನಿಮಿತ್ತರಾಗಬೇಕಾಗಿ ಬಂತು. ವಿದೇಶಕ್ಕಾಗಿ ಅತಿ ಅವಶ್ಯಕವಾಗಿತ್ತಲ್ಲವೇ? (ಬಾಬಾರವರ ಸಕಾಶವಿದೆ) ಬಾಪ್‌ದಾದಾರವರಂತೂ ಬೇರೆ ಆಗಲು ಸಾಧ್ಯವೇ ಇಲ್ಲ. ಈ ರೀತಿ ಅಂಟಿಕೊಂಡಿದ್ದೀರಿ. ಏಕೆಂದರೆ ನೀವೆಲ್ಲರೂ ಇಡೀ ದಿನ 'ಬಾಬಾರವರು ಇದನ್ನು ಮಾಡುತ್ತಿದ್ದಾರೆ, ಬಾಬಾ ಇದನ್ನೇ ಹೇಳುತ್ತಾರೆ....... ಎಂಬುದಾಗಿ ಹೇಳಬೇಕಾಗಿದೆ. 'ಬಾಬಾ–ಬಾಬಾ' ಎಂಬುದಾಗಿಯೇ ಹೊರಬರುತ್ತದೆಯಲ್ಲವೇ? 'ಶಿವಬಾಬಾರವರು ನೆನಪಿದ್ದಾರೆಯೇ?' ಎಂದು ನೆನಪು ಮಾಡಿಸುವುದಕ್ಕಾಗಿ ಹೇಳಬೇಕಾಗುತ್ತದೆ. ಕೆಲವರು ಅಳುತ್ತಾ ಬರುತ್ತಾರೆ ಮತ್ತು ನೀವು ಬಾಬಾ ಬಾಬಾ ಎಂದು ಹೇಳುತ್ತಾ ಅವರನ್ನು ನಗಿಸುತ್ತೀರಿ. ಸರಿಯಾಗಿದೆಯೇ? **(22–12–1995)**

**ಭಾರತ ವಾಸಿಗಳ ಜೊತೆ:** ಭಾರತ ವಾಸಿಗಳು ಚೆನ್ನಾಗಿದ್ದೀರಾ? ಭಾರತ ವಾಸಿಗಳಿಗಂತೂ 'ಒಂದುವೇಳೆ ಭಾರತದಲ್ಲಿ ತಂದೆಯು ಬಾರದಿದ್ದರೆ, ವಿದೇಶಿಯರು ಎಲ್ಲಿಂದ ಬರುತ್ತಿದ್ದರು' ಎಂಬುದಾಗಿ ನಶೆ ಇದೆ. ಏಕೆಂದರೆ ಡ್ರಾಮಾದಲ್ಲಿ ಬಾಪ್‌ದಾದಾರವರಿಗೆ 'ಬಡವರ ಬಂಧು' ಎಂದು ಹೇಳಲಾಗುತ್ತದೆ ಅಂದಾಗ ವಿದೇಶವು ಬಡದೇಶಗಳಲ್ಲ. ಭಾರತ ದೇಶವು ಬಡ ದೇಶವಾಗಿದೆ ಮತ್ತು ತಂದೆಗೆ ಬಡತನವು ಇಷ್ಟವಾಗುತ್ತದೆ. ಆದ್ದರಿಂದಲೇ ಎಲ್ಲದಕ್ಕಿಂತಲೂ ಬಡ ದೇಶವಾದ ಭಾರತದಲ್ಲೇ ಬಂದರು. ಲಂಡನ್‌ನಲ್ಲಿ ಬರಲಿಲ್ಲ, ಅಮೆರಿಕಾದಲ್ಲೂ ಬರಲಿಲ್ಲ. ಭಾರತವು ಅವಿನಾಶಿಯಾಗಿದೆ. ಪುನಃ ಭಾರತವೇ ಅವಿನಾಶಿ ಖಂಡವಾಗುತ್ತದೆ. ಈ ಅಮೆರಿಕಾವಂತೂ ಈಗ ಹೊರಬಂದಿದೆ, ಈಗಲೇ ಸಮಾಪ್ತಿಯಾಗಿ ಬಿಡುತ್ತದೆ.

ತಂದೆಯು ಅವಿನಾಶಿಯಾಗಿದ್ದಾರೆ ಎಂದಾಗ ಅವಿನಾಶಿ ಖಂಡದಲ್ಲೇ ಬರುತ್ತಾರೆ. ಭಾರತ ವಾಸಿಗಳಿಗೆ ನಶೆಯೂ ಸಹ ಬಹಳ ಇದೆ. ಭಾರತ ವಾಸಿಗಳಿಗೆ 'ನಾವು ಭಗವಂತನನ್ನೂ ನಮ್ಮ ಪ್ರೀತಿಯ ಹಗ್ಗದಿಂದ ಬಂಧಿಸಿದ್ದೇವೆ' ಎಂದು ಎಲ್ಲರಿಗಿಂತಲೂ ಹೆಚ್ಚು ನಶೆ ಇದೆ. ನೋಡಿ, ಈಗಲೂ ಭಾರತದಲ್ಲೇ ಬರುತ್ತಿದ್ದಾರಲ್ಲವೇ? ನೀವೆಲ್ಲರೂ ಭಾರತದಲ್ಲೇ ಮಿಲನ ಮಾಡಲು ಬರಬೇಕಾಗಿದೆ. ಭಾರತ ದೇಶದವರೂ ಕಡಿಮೆಯೇನಲ್ಲ ಮತ್ತು ವಿದೇಶದವರೂ ಕಡಿಮೆಯೆನಲ್ಲ? ಇಬ್ಬರೂ ಅತೀ ಪ್ರಿಯರಾಗಿದ್ದಾರೆ. **(31–12–1995)**

ಯಾವ ಮಕ್ಕಳು ಸಾಕಾರ ಬ್ರಹ್ಮಾರವರ ನಂತರ ಬಂದಿದ್ದಾರೋ ಅವರು 'ಬ್ರಹ್ಮಾ ಬಾಬಾರವರು ಇಷ್ಟು ಬೇಗ ತಮ್ಮ ಸಾಕಾರ ಪಾತ್ರವನ್ನು ಏಕೆ ಪೂರ್ತಿ ಮಾಡಿದರು?, ನಾವಂತೂ ನೋಡಬಹುದಾಗಿತ್ತಲ್ಲ, ನಾವಂತೂ ಮಿಲನ ಮಾಡಬಹುದಾಗಿತ್ತಲ್ಲ' ಎಂದು ಯೋಚಿಸುತ್ತಾರೆ. ಈ ರೀತಿ ಯೋಚಿಸು ತ್ತೀರಲ್ಲವೇ? ಆದರೆ ಕೌರವ ಸೇನೆಗೆ ನಿಮಿತ್ತರಾದ ಮಹಾವೀರರ ಕಲ್ಯಾಣವು ಯಾರ ಮುಖಾಂತರ ಆಯಿತು ಎಂಬುದಾಗಿ ಕಲ್ಪದ ಹಿಂದಿನ ಗಾಯನವಿದೆ ಯಲ್ಲವೇ? ಶಕ್ತಿಯರ ಮೂಲಕ ಆಯಿತಲ್ಲವೇ? ಆದ್ದರಿಂದ ಶಕ್ತಿಯರ ಪಾತ್ರವು ಡ್ರಾಮಾದಲ್ಲಿ ಸಾಕಾರ ರೂಪದಲ್ಲಿ ನಿಗದಿಯಾಗಿದೆ. ಮತ್ತು ಮಾತೃಶಕ್ತಿಯ ವಿನಹ ಈ ವಿಶ್ವದ ಕಲ್ಯಾಣವಾಗುವುದು ಅಸಂಭವ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಆದ್ದರಿಂದ ಬ್ರಹ್ಮಾ ಬಾಬಾರವರು ಏಕೆ ಫರಿಶ್ತಾ ಆದರು? ಸಾಕಾರ ಪಾತ್ರವು ಏಕೆ ಪರಿವರ್ತನೆಯಾಯಿತು? ಒಂದುವೇಳೆ ಬ್ರಹ್ಮಾಬಾಬಾರವರು ಫರಿಶ್ತಾ ರೂಪವನ್ನು ಧಾರಣೆ ಮಾಡಿಕೊಳ್ಳಲಿಲ್ಲವೆಂದರೆ ನೀವು ಇಷ್ಟೊಂದು ಆತ್ಮಗಳು ಇಲ್ಲಿಗೆ ತಲುಪಲಾಗುತ್ತಿರಲಿಲ್ಲ. ಏಕೆಂದರೆ ವಾಯುಮಂಡಲದ ಭ್ರಾಂತಿಗಳು ಈ ವಿಶ್ವ ಕ್ರಾಂತಿಯ ಕಾರ್ಯವನ್ನು ಸಡಿಲ ಮಾಡುತ್ತಿತ್ತು. ಅಂದಾಗ ಬ್ರಹ್ಮಾ ಬಾಬಾರವರು ಫರಿಶ್ತಾ ಆಗುವುದು ಹೆಚ್ಚು ಹೆಚ್ಚು ಮಕ್ಕಳಾದ ತಮ್ಮ ಭಾಗ್ಯವನ್ನು ತೆರೆಯಲು ಕಾರಣವಾಗಿತ್ತು. ಈಗ ಫರಿಶ್ತಾ ರೂಪದಲ್ಲಿ ಸೇವೆಯಲ್ಲಿ ಯಾವ ತೀವ್ರಗತಿಯು ಆಯಿತೋ ಅದನ್ನು ತಾವು ನೋಡುತ್ತಿದ್ದೀರಲ್ಲವೇ? ತೀವ್ರಗತಿಯಾಯಿತೇ ಅಥವಾ ಕಡಿಮೆ ಆಯಿತೇ? ತೀವ್ರಗತಿಯಾಯಿತಲ್ಲವೇ? ತೀವ್ರಗತಿಯಾದ ಕಾರಣದಿಂದಲೇ ತಾವೆಲ್ಲರೂ ಇಲ್ಲಿ ಬಂದು ತಲುಪಿರುವಿರಿ. ಇಲ್ಲದಿದ್ದರೆ ಇನ್ನೂ ಚೆನ್ನಾಗಿ ಮಲಗಿರುತ್ತಿದ್ದೀರಿ. ಈ ದಿನ ಪ್ರಪಂಚದವರು 'ಹೊರಟು ಹೋದರು, ಹೊರಟು ಹೋದರು' ಎಂದು ಯೋಚಿಸುವಂತ ದಿನವಲ್ಲ. ಆದರೆ ಫಾಲೋ ಫಾದರ್ (ತಂದೆಯನ್ನು ಅನುಕರಣೆ) ಮಾಡುವ, ನಾವೂ ಈ ರೀತಿ ಸ್ಮೃತಿ ಸ್ವರೂಪರು, ನಷ್ಟ ಮೋಹಿಗಳು ಆಗಬೇಕೆನ್ನುವ ಉಮ್ಮಂಗ ಉತ್ಸಾಹ ಬರುತ್ತದೆ. ಈ ರೀತಿ ಪ್ರಾಕ್ಟಿಕಲ್ ಪಾಠವನ್ನು ಓದಿಸುವ ದಿವಸವಾಗಿದೆ.

ಟ್ರಸ್ಟಿ ಆಗಿದ್ದೀರಿ ಎಂದರೆ ಮೊದಲೇ ಎಲ್ಲದರಿಂದಲೂ ಬಿಡುಗಡೆ ಆಗಿಬಿಟ್ಟಿರುವುದು. ಟ್ರಸ್ಟಿ ಎಂದರೆ ಎಲ್ಲವನ್ನೂ ತಂದೆಗೆ ಒಪ್ಪಿಸಿಬಿಟ್ಟಿದ್ದೀರಿ. ಏನಾಗುತ್ತದೋ, ಹೇಗಾಗುತ್ತದೋ.... ಎಂಬುದು ಬಂದಾಗ ಗೊಂದಲವಾಗುತ್ತದೆ. ಎಲ್ಲವೂ ಒಳ್ಳೆಯದಾಗಿದೆ ಮತ್ತು ಒಳ್ಳೆಯದೆ ಆಗುತ್ತದೆ, ನಿಶ್ಚಿಂತರಾಗಿದ್ದೇವೆ ಎಂದು ಹೇಳುವುದಕ್ಕೇ ಸಮರ್ಥ ಸ್ವರೂಪ ಎಂದು ಹೇಳಲಾಗುತ್ತದೆ. ಆದ್ದರಿಂದ ಈ ದಿನ ಯಾವ ದಿನವಾಗಿದೆ? ಸಮರ್ಥರಾಗುವ ದಿನ, ನಷ್ಟಮೋಹಿಗಳಾಗುವ ದಿನ. ಕೇವಲ ಬಾಬಾರವರು ಬಹಳ ನೆನಪಿಗೆ ಬಂದರು ಎಂಬ ಹಾಡನ್ನು ಹಾಡುವ ದಿನವಲ್ಲ. ಆದ್ದರಿಂದ ಬ್ರಹ್ಮಾಬಾಬಾರವರು ಫರಿಶ್ತಾ ರೂಪ ಆಗುವುದು ಡ್ರಾಮಾದಲ್ಲಿ ಪರಮಾತ್ಮ ಕಾರ್ಯವನ್ನು ಪ್ರತ್ಯಕ್ಷ ಮಾಡಲು ನಿಮಿತ್ತ ಕಾರಣವಾಯಿತು. ಬ್ರಹ್ಮಾ ಬಾಬಾರವರು ಇದ್ದಾರೆಯೇ ಅಥವಾ ಇಲ್ಲವೇ? (ಇದ್ದಾರೆ) ಕಣ್ಣಿಗಂತೂ ಕಾಣುವುದಿಲ್ಲ.

ನೋಡಿ ಕೊನೆಯಲ್ಲಿ ಬಂದಿರುವಂತಹ ನೀವು ಬಹಳ ಅದೃಷ್ಟಶಾಲಿ ಗಳಾಗಿದ್ದೀರಿ. ಏಕೆ? ಈಗ ಸೇವೆಯ ಮಾಡಿ ಮಾಡಲ್ಪಟ್ಟ ಸಾಧನಗಳ ಸಮಯದಲ್ಲಿ ನೀವು ಬಂದಿರುವಿರಿ. 60 ವರ್ಷದವರು ಬೆಣ್ಣೆಯನ್ನು ತೆಗೆದರು ಮತ್ತು ಬೆಣ್ಣೆಯನ್ನು ತಿನ್ನುವಂತಹ ಸಮಯದಲ್ಲಿ ತಾವು ಬಂದಿರುವಿರಿ. ಈ ದಿನ ಈಸ್ಟರಿ (ಚರಿತ್ರೆ) ಯನ್ನು ಕೇಳಿದಿರಲ್ಲವೇ, ನೀವು ಇಷ್ಟೊಂದು ಪರಿಶ್ರಮ ಪಟ್ಟಿದ್ದೇ ಆದರೆ ಓಡಿ ಹೋಗಿ ಬಿಡುತ್ತಿದ್ದಿರಿ. ಮತ್ತು ವರ್ತಮಾನ ಸಮಯವು ಸೇವೆ ಮಾಡುವ ವಾಯುಮಂಡಲವಾಗಿ ಮಾಡಲ್ಪಟ್ಟಿದೆ. ಈಗ ರಾಷ್ಟ್ರಪತಿ ಇರಲಿ ಅಥವಾ ಪ್ರಧಾನಮಂತ್ರಿ ಇರಲಿ, ಯಾವುದೇ ನಾಯಕರಿರಲಿ, ಮೆಜಾರಿಟಿ 'ಇವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ' ಎಂದು ಒಪ್ಪಿಕೊಳ್ಳುತ್ತಾರೆ. 'ನಾವು ಮಾಡುತ್ತೇವೋ ಅಥವಾ ಇಲ್ಲವೋ, ಆ ಮಾತು ಬೇರೆ, ಪ್ರತಿಯೊಬ್ಬರ ಪಾತ್ರವು ತಮ್ಮದೇ ಆಗಿದೆ. ಆದರೆ ಒಳ್ಳೆಯ ಕಾರ್ಯವಾಗಿದೆ ಮತ್ತು ಈ ಕಾರ್ಯವನ್ನು ಇನ್ನೂ ಮುಂದುವರೆಸಿಕೊಂಡು ಹೋಗಬೇಕು' ಎಂದು ಹೇಳುತ್ತಾರಲ್ಲವೇ? ಮೊದಲು ಏನು ಹೇಳುತ್ತಿದ್ದರು. ಬ್ರಹ್ಮಾಕುಮಾರಿಯರ ಮುಖವನ್ನೂ ಸಹ ನೋಡಬೇಡಿ

ಎಂದು ಹೇಳುತ್ತಿದ್ದರು. ಪ್ರಾರಂಭದಲ್ಲಿ ನಿಮಂತ್ರಣವನ್ನು ಕೊಡಲು ಹೋದಾಗ ಬಾಗಿಲನ್ನು ಮುಚ್ಚಿಬಿಡುತ್ತಿದ್ದರು. ಅಂದಾಗ ತಾವಂತೂ ಒಳ್ಳೆಯ ಸಮಯದಲ್ಲಿ ಬಂದಿರುವಿರಲ್ಲವೇ? ಸೇವೆಯ ಅವಕಾಶ ತುಂಬಾ ಇದೆ. ಎಷ್ಟು ಸೇವೆಯನ್ನು ಮಾಡಲು ಬಯಸುತ್ತೀರೋ ಅಷ್ಟು ಮಾಡಬಹುದಾಗಿದೆ. ಈಗ ಎಲ್ಲರೂ 'ಸಾಕಾರ ಬ್ರಹ್ಮಾರವರ ನಂತರವೂ ಬ್ರಹ್ಮಾಕುಮಾರಿಯರು ಸಿಲ್ವರ್ ಜೂಬಲಿಯನ್ನು ಆಚರಿಸಿಬಿಟ್ಟರು, ಗೋಲ್ಡನ್ ಜೂಬಲಿಯನ್ನೂ ಆಚರಿಸಿಬಿಟ್ಟರು, ಈಗ ಡೈಮಂಡ್ ಜೂಬಲಿಯವರೆಗೆ ತಲುಪಿಬಿಟ್ಟರು' ಎಂದು ತಿಳಿದುಕೊಳ್ಳುತ್ತಾರೆ. ಏಕೆಂದರೆ ಯಾರಾದರೂ ದೊಡ್ಡ ಗುರುಗಳು ಹೊರಟು ಹೋದರೆ ಏರುಪೇರಾಗಿ ಬಿಡುತ್ತದೆ. ಇಲ್ಲಿ ಏರುಪೇರು ಏನಾದರೂ ಇದೆಯೇ? ಇಲ್ಲಂತೂ ಇನ್ನೂ ಹೆಚ್ಚಿನ ವೃದ್ಧಿಯಾಯಿತು, ವೃದ್ಧಿಯಾಗುತ್ತಲೇ ಇರುತ್ತದೆ. ಇದರಿಂದ 'ಈ ಕಾರ್ಯವನ್ನು ಮಾಡಿಸುವಂತವರು ತಂದೆ ಪರಮಾತ್ಮನೇ ಆಗಿದ್ದಾರೆ, ನಿಮಿತ್ತ ಮಾಧ್ಯಮ ಬ್ರಹ್ಮಾರವರಾಗಿದ್ದಾರೆ' ಎಂಬುದು ರುಜುವಾತಾಯಿತು. ಈಗಲೂ ಮಾಧ್ಯಮವು ಬ್ರಹ್ಮಾರವರೇ ಆಗಿದ್ದಾರೆ. ಈ ಪಾತ್ರವು ಬೇರೆಯಾಗಿದೆ, ಆದರೆ ಮಾಧ್ಯಮವು ಡ್ರಾಮಾದಲ್ಲಿ ಮೊದಲು ಸಾಕಾರ ಬ್ರಹ್ಮಾರವರು ಇದ್ದರು ಮತ್ತು ಈಗ ಫರಿಶ್ತಾ ರೂಪದಲ್ಲಿ ಬ್ರಹ್ಮಾರವರು ಇದ್ದಾರೆ. ಬ್ರಹ್ಮಾರವರನ್ನು ಪಿತ ಎಂದು ಕರೆಯುತ್ತೀರಿ, ರಚಯಿತರಂತೂ ಬ್ರಹ್ಮಾರವರೇ ಆಗಿದ್ದಾರಲ್ಲವೇ? ಈ ಪಾತ್ರವಂತೂ ಮಕ್ಕಳ ಪಾಲನೆ ಮಾಡುವುದಕ್ಕಾಗಿ ಮಧ್ಯ ಮಧ್ಯದಲ್ಲಿ ನಿಮಿತ್ತವಾಗಿದೆ. ಉಳಿದಂತೆ ರಚಯಿತ ಬ್ರಹ್ಮಾರವರಾಗಿದ್ದಾರೆ ಮತ್ತು ರಚನೆಯ ಕಾರ್ಯದಲ್ಲಿ ಈಗಲೂ ಅಂತ್ಯದವರೆಗೂ ಬ್ರಹ್ಮಾರವರದೇ ಪಾತ್ರವಿದೆ. **(18–01–1996)**

(ಮಧುಬನದ ಪ್ರಫುಲ್ ಅಣ್ಣನವರು ಅಪಘಾತದಲ್ಲಿ ಶರೀರವನ್ನು ಬಿಟ್ಟರು) ಮಗುವು ಒಳ್ಳೆಯವರಾಗಿದ್ದರು ಮತ್ತು ಸೇವೆಯ ಉಮ್ಮಂಗ ಉತ್ಸಾಹದಲ್ಲಿಯೂ ಇದ್ದರು ಆದರೆ ಲೆಕ್ಕಚಾರದ ಸಮಯವಾದಾಗ ಯಾವುದಾದರೂ ಒಂದು ಕಾರಣವಾಗಿಬಿಡುತ್ತದೆ. ಉಳಿದಂತೆ ಮಗುವು ಸ್ವಯಂನಲ್ಲಿ ಚೆನ್ನಾಗಿದ್ದರು.

(ಬಾಬಾರವರು ಮಕ್ಕಳಿಗೆ ಸಹಾಯ ಮಾಡುತ್ತಾರೆಂದರೆ ಆ ಸಮಯದಲ್ಲಿ ಏಕೆ ಸಹಾಯ ಮಾಡಲಿಲ್ಲ?) ಅವರ ಲೆಕ್ಕಚಾರವು ಅದೇ ಡ್ರೈವರ್‌ನೊಂದಿಗೆ ಅದೇ ಸ್ಥಾನದೊಂದಿಗೆ ಆಗುತ್ತದೆ. ನಿಗದಿಯಾಗಿದ್ದನ್ನು ಬದಲಾಯಿಸಲಾಗುವುದಿಲ್ಲ. (ವೈದ್ಯರು ಉಳಿಸುವುದಕ್ಕಾಗಿ ಬಹಳ ಪ್ರಯತ್ನ ಪಟ್ಟರು) ಎಲ್ಲರಿಗೂ ಪ್ರಿಯರಾಗಿದ್ದರು. ಮೃತ್ಯುವಿನ ದಿನಾಂಕವನ್ನು ಬದಲಾಯಿಸಲಾಗುವುದಿಲ್ಲ. ಭಗವಂತನು ಸಹ ಬದಲಾವಣೆ ಮಾಡಲಾಗುವುದಿಲ್ಲ. **(27–02–1996)**

ತಂದೆಯು ನಿಮ್ಮನ್ನೆಲ್ಲಾ ಕರ್ಮಾತೀತರನ್ನಾಗಿ ಮಾಡಲೇಬೇಕಾಗಿದೆ. ಆಗಲೇ ಬೇಕಾಗಿದೆಯಲ್ಲವೇ ಅಥವಾ ತಂದೆಯು ಬಲವಂತವಾಗಿ ಮಾಡಬೇಕೇ? ತಂದೆಯು ಮಾಡಲೇ ಬೇಕಾಗಿದೆ ಮತ್ತು ನೀವೆಲ್ಲರೂ ಆಗಲೇ ಬೇಕಾಗಿದೆ? ಇದು ಸ್ವೀಟ್ ಡ್ರಾಮಾ ಆಗಿದೆ. ಡ್ರಾಮಾ ಚೆನ್ನಾಗಿದೆ ಎಂದು ಅನಿಸುತ್ತದೆಯಲ್ಲವೇ? ಅಥವಾ ಒಂದೊಂದು ಸಲ ಈ ರೀತಿ ಏಕಾಯಿತು ಎಂದು ತೊಂದರೆಗೆ ಒಳಗಾಗುವಿರೆ? ಇದು ಬದಲಾವಣೆಯಾಗಬೇಕು ಎಂದು ಯೋಚಿಸುತ್ತೀರಾ? 'ಇದು ಮಾಡಿ ಮಾಡಲ್ಪಟ್ಟಿರುವ ಡ್ರಾಮಾ, ಇದು ಬದಲಾಗುವುದಿಲ್ಲ, ರಿಪೀಟ್ ಆಗಬೇಕಾಗಿದೆ, ಆದರೆ ಬದಲಾಗುವುದಿಲ್ಲ' ಎಂದು ಬಾಬಾರವರು ಕೆಲವೊಮ್ಮೆ ಹೇಳುತ್ತಾರೆ. ಡ್ರಾಮಾದ ಈ ಅಂತಿಮ ಜನ್ಮದಲ್ಲಿ ನಿಮ್ಮಲ್ಲಿ ಶಕ್ತಿ ಇದೆ. ಡ್ರಾಮಾ ಆಗಿದೆ, ಆದರೆ ಡ್ರಾಮಾದಲ್ಲಿ ಈ ಶ್ರೇಷ್ಠ ಬ್ರಾಹ್ಮಣ ಜನ್ಮದಲ್ಲಿ ಬಹಳ ಶಕ್ತಿಗಳು ಸಿಕ್ಕಿವೆ. ತಂದೆಯು ವಿಲ್ ಮಾಡಿದ್ದಾರೆ ಈ ಕಾರಣದಿಂದಲೇ ವಿಲ್ ಪವರ್ ಸಿಕ್ಕಿದೆ. **(10–03–1996)**

ನಿಮಗೆಲ್ಲರಿಗೂ ನಿಮ್ಮವರನ್ನಾಗಿ ಮಾಡಿಕೊಳ್ಳುವುದು ಸಹಜವಾಗಿದೆಯೇ ಅಥವಾ ಕಷ್ಟವೇ? ಒಳ್ಳೆಯದು. ತಮ್ಮವರನ್ನಾಗಿ ಮಾಡಿಕೊಂಡು ಬಿಟ್ಟಿದ್ದೀರಾ ಅಥವಾ ಮಾಡಿಕೊಳ್ಳುತ್ತಿದ್ದೀರಾ? ಮಾಡಿಕೊಂಡು ಬಿಟ್ಟಿದ್ದೀರಾ – ಪಕ್ಕಾ? ಅಥವಾ ಆಗಾಗ ಈ ರೀತಿ (ಕತ್ತು ಹಿಂದೆ ತಿರುಗಿಸುವುದು) ಮಾಡಿ ಬಿಡುತ್ತೀರಾ? ತುಂಟಾಟ ಮಾಡುವುದಿಲ್ಲತಾನೇ? ಆಗಾಗ ಬಹಳ ಆಟವನ್ನು ತೋರಿಸುತ್ತೀರಿ. ಅಂದಾಗ ತಂದೆಯನ್ನು ನಿಮ್ಮವರನ್ನಾಗಿ ಮಾಡಿಕೊಂಡಿರುವಿರಿ. ತಂದೆಯನ್ನು ನಿಮ್ಮವರನ್ನಾಗಿ ಮಾಡಿಕೊಳ್ಳುವುದು ಎಂದರೆ ಸದಾ ತಂದೆಯ ಜೊತೆ ಹಾಗೂ ಕೈಯನ್ನು ಅನುಭವ ಮಾಡುವುದಾಗಿದೆ. ಆದ್ದರಿಂದ ಆದಿ ರತ್ನಗಳಿಗೆ ತಂದೆಯ ಜೊತೆಯನ್ನು ಅನುಭವ ಮಾಡುವುದು ಬಹಳ ಸಹಜವಾಗಿದೆ. ಏಕೆಂದರೆ ಸಾಕಾರದಲ್ಲಿ ಜೊತೆಯ ಅನುಭವವನ್ನು ಮಾಡಿದ್ದಾರೆ. ನಿಮಗಂತೂ ಇಮರ್ಜ್ ಮಾಡಿಕೊಳ್ಳಬೇಕಾಗಿದೆ ಆದರೆ ಇವರು ಪ್ರಾಕ್ಟಿಕಲ್‌ನಲ್ಲಿ ನಿನ್ನ ಜೊತೆಗೆ ಇರುವುದು, ತಿನ್ನುವುದು, ನಡೆಯುವುದು, ತಿರುಗಾಡುವುದು..... ಇದನ್ನು ಪ್ರಾಕ್ಟಿಕಲ್‌ನಲ್ಲಿ ಸಾಕಾರದಲ್ಲಿ ಅನುಭವ ಮಾಡಿದ್ದಾರೆ. ಆದ್ದರಿಂದ ಸಾಕಾರದಲ್ಲಿ ಅನುಭವ

ಮಾಡಿರುವ ವಸ್ತು ಸಹಜವಾಗಿ ನೆನಪಿನಲ್ಲಿರುತ್ತದೆ. ತಂದೆಯ ಜೊತೆಯ ಅನುಭವವನ್ನು ಯಾವಾಗ ಬೇಕೋ ಆಗ ಮಾಡುವಂತಹ ಅದೃಷ್ಟ ಇವರದಾಗಿದೆ. ಈ ರೀತಿ ಇದೆಯೇ? ಆದರೆ ಡ್ರಾಮಾದಲ್ಲಿ ನಿಮಗಾಗಿಯೇ ಒಂದು ವಿಶೇಷ ಲಿಫ್ಟ್ ಇದೆ, ಅದು ಅವ್ಯಕ್ತ ರೂಪದಲ್ಲಿ ಬಂದಿದೆ, ಸಾಕಾರ ರೂಪದಲ್ಲಿ ಡ್ರಾಮಾನುಸಾರ ಕೊನೆಯಲ್ಲಿ ಬಂದಿಗೆ, ಅವರಿಗೆ ಎಕ್ಸ್‌ಟ್ರಾ ಲಿಫ್ಟ್ ಸಿಕ್ಕಿದೆ, ಆ ಲಿಫ್ಟ್ ಯಾವುದಾಗಿದೆ? ಯಾವಾಗ ಬೇಕೋ ಆಗ ಬಾಪ್‌ದಾದಾರವರ ಎಕ್ಸ್‌ಟ್ರಾ ಸಹಯೋಗವು ಸಿಗುತ್ತದೆ. ಸಂಕಲ್ಪದ ಒಂದು ಹೆಜ್ಜೆ ನಿಮ್ಮದು ಮತ್ತು ಸಹಯೋಗದ ಬಹಳ ಹೆಜ್ಜೆ ತಂದೆಯದು. ಈ ಕಾರಣದಿಂದಲೇ ನಿಮಗೆ ಎಕ್ಸ್‌ಟ್ರಾ ಲಿಫ್ಟ್ ಸಿಕ್ಕಿದೆ. ತಿಳಿಯಿತೆ? ನೀವೂ ಕಡಿಮೆಯೇನಲ್ಲ. **(03–04–1996)**

ನೋಡಿ, ಈ ದಿನ ಎರಡು ವಿಶೇಷತೆಗಳಿವೆ. ಒಂದು ಈ ಶಾಂತಿವನಕ್ಕೆ, ಯಾರೆಲ್ಲರೂ ಉಮ್ಮಂಗ ಉತ್ಸಾಹದಿಂದ ನಿರ್ಮಾಣ ಮಾಡಿದ್ದಾರೋ ಇದನ್ನು ಬಾಪ್‌ದಾದಾರವರ ಜೊತೆ ಜೊತೆಯಲ್ಲಿ ಮಕ್ಕಳಾದ ನೀವೆಲ್ಲರೂ ಉದ್ಘಾಟನೆಯನ್ನು ಮಾಡುತ್ತಿರುವಿರಿ. ಈ ದಿನ ಡ್ರಾಮಾನುಸಾರ ಹೊಸ ವರ್ಷವೂ ಪ್ರಾರಂಭವಾಗಲಿದೆ. ಆದ್ದರಿಂದ ಬಾಪ್‌ದಾದಾರವರು ಎಲ್ಲಾ ಮಕ್ಕಳಿಗೆ ತಮ್ಮ ಎರಡೂ ಬಾಹುಗಳಲ್ಲಿ ಸಮಾವೇಶ ಮಾಡಿಕೊಳ್ಳುತ್ತಾ ಎರಡೂ ಮಾತುಗಳಿಗಾಗಿ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಮತ್ತು ಹೇಗೆ ಈಗ ಈ ಸಮಯದಲ್ಲಿ ಸಾಕಾರ ರೂಪದಲ್ಲಿ ತಂದೆಯ ಜೊತೆಯಲ್ಲಿ ಉಮ್ಮಂಗ ಉತ್ಸಾಹ ಮತ್ತು ಖುಷಿಯಲ್ಲಿ ನಾಟ್ಯ ಮಾಡುತ್ತಿದ್ದೀರೋ ಹಾಗೆಯೇ ಹೊಸ ವರ್ಷದಲ್ಲಿ ಸದಾ ಅವ್ಯಕ್ತ ರೂಪದಲ್ಲಿ ಜೊತೆಗಾರರೆಂದು ತಿಳಿದುಕೊಳ್ಳಿ ಮತ್ತು ಅನುಭವ ಮಾಡಿರಿ. ಈ ಜೊತೆಯ ಅನುಭವವು ಬಹಳ ಪ್ರಿಯವಾಗಿದೆ. ಬಾಪ್‌ದಾದಾರವರಿಗೂ ಮಕ್ಕಳ ಜೊತೆಯ ವಿನಃ ಚೆನ್ನಾಗಿ ಅನಿಸುವುದಿಲ್ಲ. (ಮೈಕ್ ನಿಂತು ಹೋಯಿತು). ಮೊದ ಮೊದಲ ಅನುಭವವಾಗಿದೆಯಲ್ಲವೇ? ಆದ್ದರಿಂದ ಇದೂ ಸಹ ಡ್ರಾಮಾದಲ್ಲಿ ಆಟ ಎಂದು ತಿಳಿದುಕೊಳ್ಳಿರಿ. ಯಾವುದೇ ಮಾತು ಏರುಪೇರಾಯಿತು ಎಂದು ತಿಳಿದುಕೊಳ್ಳಬೇಡಿರಿ. ಒಳ್ಳೆಯದಾಗಿದೆ ಮತ್ತು ಒಳ್ಳೆಯದಾಗಿಯೇ ಇರುತ್ತದೆ. ಬಹಳ ಒಳ್ಳೆಯದು, ಬಹಳ ಒಳ್ಳೆಯದನ್ನು ಮಾಡುತ್ತಾ ನೀವೂ ಸಹ ಒಳ್ಳೆಯವರಾಗಿ ಬಿಡುತ್ತೀರಿ. ಮತ್ತು ಡ್ರಾಮಾದ ಪ್ರತಿಯೊಂದು ದೃಶ್ಯವು ಒಳ್ಳೆಯದಾಗಿಬಿಡುತ್ತದೆ. ಏಕೆಂದರೆ ಒಳ್ಳೆಯವರಾಗುವ ತಮ್ಮ ವೈಬ್ರೇಷನ್ಸ್ ಎಂತಹದ್ದೇ ದೃಶ್ಯವಿರಲಿ, ನಕಾರಾತ್ಮಕವಾದುದ್ದನ್ನು ಸಕಾರಾತ್ಮಕತೆಯಲ್ಲಿ ಪರಿವರ್ತನೆ ಮಾಡಿಬಿಡುತ್ತದೆ. ಇಷ್ಟೊಂದು ಶಕ್ತಿ ಮಕ್ಕಳಾದ ತಮ್ಮಲ್ಲಿ ಇದೆ. ಕೇವಲ ಅದನ್ನು ಉಪಯೋಗಿಸಿ. ಶಕ್ತಿಗಳು ಬಹಳ ಇವೆ. ಸಮಯದಲ್ಲಿ ಉಪಯೋಗಿಸಿ ನೋಡಿ, ಆಗ ಬಹಳ ಒಳ್ಳೆಯ ಒಳ್ಳೆಯ ಅನುಭವವನ್ನು ಮಾಡುವಿರಿ. **(31–12–1996)**

(ವಿನಾಶಕ್ಕೆ ಮೊದಲು ಒಂದೊಂದು ಭೂಖಂಡದಲ್ಲಿ ಒಂದೊಂದು ಸಲ ಬಾಬಾರವರು ಬರಲಿ) ನೋಡಿ, ಡ್ರಾಮಾ. ತಂದೆಯು ಲಂಡನ್‌ನಲ್ಲೇ ಬರಲಿ, ಆದರೆ ಮಧುಬನದ ಮಹಿಮೆಯಂತೂ ಮಧುಬನದ್ದು ಇದೆ. ಮುಂದುವರೆಯುತ್ತಾ ಏನು ಆಗುತ್ತದೆಯೋ ಅದನ್ನು ಹೇಳುವುದರಿಂದ ಮಜಾ ಸಮಾಪ್ತಿಯಾಗಿಬಿಡುತ್ತದೆ. ಆದ್ದರಿಂದ ಮುಂದೆ ಏನು ಆಗುತ್ತದೆಯೋ ನೋಡುತ್ತಾ ಇರಿ. ಒಳ್ಳೆಯದು. ಉಡುಗೋರೆಯನ್ನು ಪಾರ್ಸಲ್ ಮಾಡಿಬಿಟ್ಟಿದ್ದೀರಾ? ವಾಪಸ್ಸು ತೆಗೆದುಕೊಳ್ಳಬಾರದು. ಒಳ್ಳೆಯದು. ಡಬ್ಬಲ್ ವಿದೇಶಿಯರು ಖುಷಿಯಾಗಿದ್ದೀರಾ? ಡಬ್ಬಲ್ ವಿದೇಶಿಯರು ಎಲ್ಲರೂ ಆರಾಮವಾಗಿ ಇದ್ದೀರಾ? (ಎಲ್ಲಾ ಭವನಗಳು ತುಂಬಿವೆ) ಯಾರೂ ಪಟ್ಟದರಾಣಿಯರು ಆಗಿಲ್ಲವಲ್ಲವೇ? ಈಗ ಪಟ್ಟದರಾಣಿಯರನ್ನಾಗಿ ಮಾಡುತ್ತೇವೆ. ತಮ್ಮ ಸೂಟ್‌ಕೇಸ್ ಯಾವುದಿದೆಯೋ ಅದನ್ನು ಹಾಸಿಗೆಯನ್ನಾಗಿ ಮಾಡಿಕೊಳ್ಳಿ. ಕಡೇಪಕ್ಷ ತಲೆದಿಂಬಾದರೂ ಆಗುತ್ತದೆಯಲ್ಲವೇ? ಈ ದೃಶ್ಯವೂ ಚೆನ್ನಾಗಿರುತ್ತದೆಯಲ್ಲವೇ? ಸೂಟ್‌ಕೇಸ್‌ನ ತಲೆದಿಂಬಾಗುತ್ತದೆ. ಎಲ್ಲರೂ ವಿಷ್ಣುವಿನ ಸಮಾನ ಮಲಗಿರುತ್ತೀರಿ. ಎಷ್ಟೊಂದು ಚೆನ್ನಾಗಿ ಇರುತ್ತದೆ. ಡಬ್ಬಲ್ ವಿದೇಶಿಯರನ್ನು ಪಟ್ಟದ ರಾಣಿಯರನ್ನಾಗಿ ಅವಶ್ಯವಾಗಿ ಮಾಡುತ್ತೇವೆ. ನೋಡಿ, ಪ್ರಾರಂಭದಲ್ಲಿ ಸ್ಥಾಪನೆಗೆ ಮೊದಲು ಈ ಎಲ್ಲಾ ವಿಶೇಷ ಆತ್ಮಗಳು ಮೂರು ಅಡಿ ಜಾಗದಲ್ಲಿ ಮಲಗಿದ್ದರು. ನಾಲ್ಕು ಅಡಿ ಅಲ್ಲ ಮೂರು ಅಡಿ ನೆಲದಲ್ಲಿ. ವಿಶೇಷವಾಗಿ ಮಹಾರಥಿಗಳು ನೆಲದ ಮೇಲೆ ಮಲಗುತ್ತಿದ್ದರು. ಯಾವುದು ಆದಿಯಲ್ಲಿ ಆಯಿತೋ ಅದನ್ನು ತಾವು ಅಂತ್ಯದಲ್ಲೂ ಮಾಡುತ್ತೀರಲ್ಲವೇ? ಸೊಂಟ ನೋವಾಯಿತೆಂದು ಕಾರಣವನ್ನು ಹೇಳುವುದಿಲ್ಲ ವಲ್ಲವೇ? ಯಾವಾಗ ಏನಾದರೂ ನೋವುಂಟಾದರೆ ವೈದ್ಯರೂ ಸಹ ಸೀದಾ ಸೀದಾ ನೆಲದ ಮೇಲೆ ಮಲಗಿರೆಂದು ಹೇಳುತ್ತಾರಲ್ಲವೇ? ಬೆಡ್ ಮೇಲೆ ಮಲಗಬೇಡಿ, ನೆಲದ ಮೇಲೆ ನೇರವಾಗಿ ಮಲಗಿರೆಂದು ಹೇಳುತ್ತಾರೆ. ಇದರಿಂದ ಆರೋಗ್ಯವೂ ಸರಿಯಾಗಿ ಬಿಡುತ್ತದೆ. ನೀವೆಲ್ಲರೂ ಎವರ್‌ರೆಡಿಯಾಗಿದ್ದೀರಿ. ಡಬ್ಬಲ್ ವಿದೇಶಿಯರು ಎಂದರೆ ಡಬ್ಬಲ್ ಎವರ್‌ರೆಡಿ. ಒಳ್ಳೆಯದು. ಬಹಳ ಸಂತೋಷದಿಂದ ಆಚರಿಸಿ. **(06–03–1997)**

ಈ ವರ್ಷ ವಿದಾಯಿ (ಬೀಳ್ಕೊಡುಗೆ ಕೊಡುವ) ಮತ್ತು ಬದಾಯಿ (ಶುಭಾಶಯಗಳನ್ನು ಹೇಳುವ) ವರ್ಷವಾಗಿದೆ. ಮತ್ತು ಈ ವರ್ಷದಲ್ಲಿ ವಿಶೇಷವಾಗಿ ಯಾವ ಮಕ್ಕಳು ಯಾವ ಸಂಕಲ್ಪವನ್ನು ಮಾಡಿದ್ದಾರೋ ಅದನ್ನು ಪ್ರಾಕ್ಟಿಕಲ್‌ನಲ್ಲಿ ಮಾಡುವಂತವರಿಗೆ ಬಾಪ್‌ದಾದಾರವರ ಎಕ್ಸ್‌ಟ್ರಾ ಸಹಯೋಗ ಸಿಗುತ್ತದೆ. ಕೇವಲ ದೃಢವಾಗಿರಬೇಕಷ್ಟೆ. ಮಧ್ಯ ಮಧ್ಯದಲ್ಲಿ ಡ್ರಾಮಾವು ಪರೀಕ್ಷೆಯನ್ನು ತೆಗೆದುಕೊಳ್ಳುತ್ತದೆ. ಆದರೆ ಸಂಕಲ್ಪದಲ್ಲಿ ದೃಢವಾಗಿರಬೇಕಾಗಿದೆ. ಸಂಕಲ್ಪ ರೂಪೀ ಕಾಲು ಅಲುಗಾಡಬಾರದು, ಅಚಲವಾಗಿರಬೇಕು. ಆಗ ಬಾಪ್‌ದಾದಾರವರ ಮುಖಾಂತರ ಎಕ್ಸ್‌ಟ್ರಾ ಸಹಯೋಗದ ಅನುಭವವಾಗುತ್ತದೆ. ಕೇವಲ ಪಡೆದುಕೊಳ್ಳುವ ಶಕ್ತಿ ಬೇಕಾಗಿದೆ. ಒಂದೇ ಬಲ ಒಂದೇ ಭರವಸೆ. ಏನೇ ಆಗಲಿ, ಆದರೆ ಆಗಲೇ ಬೇಕಾಗಿದೆ. ಈ ಸಂಕಲ್ಪವೆಂಬ ಕಾಲನ್ನು ಶಕ್ತಿಶಾಲಿಯಾಗಿ ಇಟ್ಟುಕೊಳ್ಳಬೇಕಾಗಿದೆ. ಅಂದಾಗ ಮಾತುಗಳು ಬರುತ್ತವೆ, ಆದರೆ ಅವುಗಳನ್ನು ಹೇಗೆ ಏರೋಪ್ಲೇನ್‌ನಲ್ಲಿ ಮೋಡಗಳು ಕೆಳಗೆ ಇರುತ್ತವೆ ಮತ್ತು ನೀವು ಸ್ವಯಂ ಮೋಡಗಳ ಮೇಲೆ ಇರುವಂತೆ ಅನುಭವ ಮಾಡುತ್ತೀರಿ. ಮೋಡಗಳು ಒಂದು ಮನೋರಂಜನೆಯ ದೃಶ್ಯವಾಗಿ ಬಿಡುತ್ತದೆ. ಈ ರೀತಿ ಎಷ್ಟೇ ಕರಿಮೋಡಗಳ ರೀತಿಯ ಮಾತುಗಳಿರಲಿ, ಅವುಗಳಲ್ಲಿ ಆ ಸಮಸ್ಯೆಗಳ ಪರಿಹಾರ ಆ ಸಮಯದಲ್ಲಿ ಕಂಡು ಬರದೇ ಇರಬಹುದು, ಆದರೆ ಈ ಮೋಡಗಳು ಹೋಗುವುದಕ್ಕಾಗಿಯೇ ಬಂದಿವೆ, ಈ ಮೋಡಗಳು ಚದುರಲೇ ಬೇಕಾಗಿದೆ, ಇರುವಂತಹದ್ದಲ್ಲ' ಎಂಬ ದೃಢ ನಿಶ್ಚಯವಿರಬೇಕಾಗಿದೆ. ಈ ರೀತಿಯ ಹಾರುವ ಕಲೆಯ ಸ್ಥಿತಿಯಲ್ಲಿ ಸ್ಥಿತರಾಗಿಬಿಡಿ. ಆಗ ಎಷ್ಟೇ ದೊಡ್ಡ ಕರಿಮೋಡವೂ ಸಹ ಚದುರಿಬಿಡುತ್ತದೆ ಮತ್ತು ನೀವು ದೃಢತೆಯ ಶಕ್ತಿಯಿಂದ ಸಫಲರಾಗಿಬಿಡುತ್ತೀರಿ. ಇದು ಹೇಗೆ ಆಗುತ್ತದೆ ಎಂದು ಗಾಭರಿಪಡಬೇಡಿರಿ. ಒಳ್ಳೆಯದೇ ಆಗುತ್ತದೆ. ಏಕೆಂದರೆ ಬಾಪ್‌ದಾದಾರವರು ತಿಳಿದುಕೊಂಡಿದ್ದಾರೆ – ಎಷ್ಟು ಸಮಯವು ಸಮೀಪ ಬರುತ್ತಿದೆಯೋ ಅಷ್ಟು ಹೊಸ ಹೊಸ ಮಾತುಗಳು, ಸಂಸ್ಕಾರಗಳು, ಲೆಕ್ಕಾಚಾರದ ಕರಿ ಮೋಡಗಳು ಬರುತ್ತವೆ. ಇವೆಲ್ಲವೂ ಇಲ್ಲಿಯೇ ಚುಕ್ತಾ ಆಗಬೇಕಾಗಿದೆ. ಕೆಲವು ಮಕ್ಕಳು 'ದಿನ ಪ್ರತಿದಿನ ಇಂತಹ ಮಾತುಗಳು ಇನ್ನೂ ಏಕೆ ಹೆಚ್ಚಾಗುತ್ತಿವೆ' ಎಂದು ಕೇಳುತ್ತಾರೆ. ಯಾವ ಮಕ್ಕಳು ಧರ್ಮರಾಜಪುರಿಯನ್ನು ಕ್ರಾಸ್ ಮಾಡಬೇಕಾಗಿಲ್ಲವೋ ಅವರ ಸಂಗಮದ ಈ ಅಂತಿಮ ಸಮಯದಲ್ಲಿ ಸ್ವಭಾವ ಸಂಸ್ಕಾರದ ಎಲ್ಲಾ ಲೆಕ್ಕಾಚಾರಗಳು ಇಲ್ಲಿಯೇ ಚುಕ್ತಾ ಆಗಬೇಕಾಗಿದೆ. ಧರ್ಮರಾಜಪುರಿಗೆ ಹೋಗಬಾರದಾಗಿದೆ. ನಿಮ್ಮ ಎದುರಿಗೆ ಯಮಧೂತರು ಬರುವುದಿಲ್ಲ. ಈ ಮಾತುಗಳೇ ಯಮಧೂತರಾಗಿದ್ದಾರೆ. ಅವು ಇಲ್ಲಿಯೇ ಸಮಾಪ್ತಿಯಾಗಬೇಕಾಗಿದೆ. ಆದ್ದರಿಂದ ರೋಗವು ಹೊರಬಂದು ಸಮಾಪ್ತಿಯಾಗುವ ಗುರುತಾಗಿದೆ. 'ಸಮಯವು ಸಮೀಪವಿದೆಯೆಂದು ಕಂಡುಬರುತ್ತಿಲ್ಲ, ಬದಲಿಗೆ ವ್ಯರ್ಥ ಸಂಕಲ್ಪವು ಹೆಚ್ಚುತ್ತಿದೆ' ಎಂದು ಯೋಚಿಸಬೇಡಿ. ಆದರೆ ಇದು ಚುಕ್ತಾ ಆಗುವುದಕ್ಕಾಗಿ ಹೊರಬರುತ್ತಿದೆ. ಬರುವುದು ಅವುಗಳ ಕೆಲಸವಾಗಿದೆ, ಮತ್ತು ಹಾರುವ ಕಲೆಯಿಂದ, ಸಕಾಶದ ಮೂಲಕ ಪರಿವರ್ತನೆಯನ್ನು ಮಾಡುವುದು ನಿಮ್ಮ ಕೆಲಸವಾಗಿದೆ. ಗಾಬರಿಪಡಬೇಡಿರಿ. ಕೆಲವು ಮಕ್ಕಳ ವಿಶೇಷತೆ ಏನಾಗಿದೆಯೆಂದರೆ, ಹೊರಗಿನ ನೋಟಕ್ಕೆ ಗಾಬರಿಯಾಗುವುದು ಕಂಡಬರುವುದಿಲ್ಲ, ಆದರೆ ಆಂತರಿಕದಲ್ಲಿ ಮನಸ್ಸು ಗಾಬರಿ ಪಡುತ್ತಾರೆ. ಹೊರನೋಟಕ್ಕೆ 'ಇಲ್ಲ, ಇಲ್ಲ, ಏನೂ ಇಲ್ಲ, ಇದಂತೂ ಆಗುತ್ತಲೇ ಇರುತ್ತದೆ' ಎಂದು ಹೇಳುತ್ತಾರೆ. ಆದರೆ ಆಂತರಿಕದಲ್ಲಿ ಬೇಯುತ್ತಿರುತ್ತಾರೆ. 'ಗಾಬರಿಪಡಿಸುವಂತಹ ಮಾತುಗಳು ಬರುತ್ತವೆ, ಆದರೆ ನೀವು ಗಾಬರಿಪಡಬೇಡಿ' ಎಂದು ಬಾಪ್‌ದಾದಾರವರು ಮೊದಲೇ ತಿಳಿಸಿಬಿಡುತ್ತಾರೆ. ನಿಮ್ಮ ಶಸ್ತ್ರವನ್ನು ಬಿಟ್ಟುಬಿಡಬೇಡಿ. ಯಾರು ಗಾಬರಿಪಡುತ್ತಾರೋ, ಅವರ ಕೈಯಲ್ಲಿ ಏನಾದರೂ ಇದ್ದರೆ ಅದು ಬಿದ್ದುಬಿಡುತ್ತದೆ ಯಲ್ಲವೇ? ಅಂದಾಗ ಯಾವಾಗ ಈ ಮನಸ್ಸಿನಲ್ಲಾದರೂ ಗಾಬರಿಪಟ್ಟಾಗ ಯಾವ ಶಸ್ತ್ರಗಳು, ಶಕ್ತಿಗಳು ಇವೆಯೋ ಅವು ಬಿದ್ದುಬಿಡುತ್ತವೆ ಅಂದರೆ ಮರ್ಜ್ ಆಗಿ (ಗುಪ್ತವಾಗಿ) ಬಿಡುತ್ತವೆ. ಆದ್ದರಿಂದ ಗಾಬರಿಪಡಬೇಡಿರಿ. ಮೊದಲೇ ತಿಳಿದಿದ್ದೀರಿ. ತ್ರಿಕಾಲದರ್ಶಿಗಳಾಗಿ, ಮಾಯೆಯಿಂದ ನಿರ್ಭಯರಾಗಿರಿ. ಸಂಬಂಧದಲ್ಲಂತೂ ಸ್ನೇಹ ಮತ್ತು ನಿರ್ಮಾಣತೆಯಿರಲಿ. ಯಾರು ಹೇಗೇ ಇರಲಿ, ತಾವು ಹೃದಯಪೂರ್ವಕವಾಗಿ ಸ್ನೇಹವನ್ನು ಕೊಡಿ, ಶುಭ ಭಾವನೆಯನ್ನು ಕೊಡಿ, ದಯೆಯನ್ನು ತೋರಿಸಿ. ನಿರ್ಮಾಣಚಿತ್ತರಾಗಿ ಅವರನ್ನು ಮುಂದೆ ಇಟ್ಟು ಮುಂದುವರೆಸಿರಿ. ಇದಕ್ಕೇ 'ಕಾರಣ ರೂಪೀ ನಕಾರಾತ್ಮಕತೆಯನ್ನು ಸಮಾಧಾನ ರೂಪೀ ಸಕಾರಾತ್ಮಕತೆಯನ್ನಾಗಿ ಮಾಡಿಬಿಡಿ' ಎಂದು ಹೇಳಲಾಗುತ್ತದೆ. ಈ ಕಾರಣದಿಂದ, ಈ ಕಾರಣದಿಂದ, ಈ ಕಾರಣದಿಂದ....... ಕಾರಣ ಅಥವಾ ಸಮಸ್ಯೆ ಇರಲಿ ಅದನ್ನು ಪಾಸಿಟೀವ್, ಸಮಾಧಾನ ಸ್ವರೂಪವನ್ನಾಗಿ ಮಾಡಿರಿ. **(14–12–1997)**

**ದಾದಿಯರೊಂದಿಗೆ:** ಸದಾ ಒಂದೇ ರೀತಿಯ ಆಟ ಇಷ್ಟವಾಗುವುದಿಲ್ಲ, ಆಗಾಗ ಬದಲಾಗುತ್ತಿರಬೇಕು. ಹಾಗಾಗಿ ಡ್ರಾಮಾದ ಆಟದಲ್ಲಿ ಬೇರೆ ಬೇರೆ ಆಟ ಕಾಣಿಸುತ್ತಿರುತ್ತದೆ. ಒಳ್ಳೆಯದು. ಎಲ್ಲಾ ಸಂಕಲ್ಪಗಳೂ ಪೂರ್ಣವಾಗುತ್ತಾ ಹೋಗುತ್ತಿದೆ ಅಲ್ಲವೇ? ಎಷ್ಟು ನ್ಯಾರಾ ಮತ್ತು ಪ್ಯಾರಾ ಆಗಿ ಸಂಕಲ್ಪ ಮಾಡುವಿರೋ,

ಆ ಎಲ್ಲಾ ಸಂಕಲ್ಪಗಳು ಪೂರ್ಣವಾಗಿ ಬಿಡುತ್ತದೆ. ಬ್ರಾಹ್ಮಣರ ಪ್ರತಿಯೊಂದು ಸಂಕಲ್ಪವೂ ಸಫಲತೆಯ ಬೀಜದಿಂದ ಸಂಪನ್ನವಾಗುತ್ತದೆ. ಯಾವಾಗ ಬೀಜವೇ ಸಫಲತೆಯಿಂದ ಕೂಡಿದೆ ಎಂದಾಗ ಫಲವೂ ಸಹ ಸಫಲತೆಯಿಂದಲೇ ಕೂಡಿರುತ್ತದೆ. **(24–02–1998)**

ಒಂದು ದಿನದಲ್ಲಿ ಎಷ್ಟೇ ದೊಡ್ಡ ದೊಡ್ಡ ಶ್ರೀಮಂತರಾಗಿರಲಿ, ಮಲ್ಟಿ ಮಿಲೆನಿಯರ್ ಆಗಿರಲಿ, ಆದರೆ ತಮ್ಮಷ್ಟು ಶ್ರೀಮಂತರು ಆಗಲು ಸಾಧ್ಯವಿಲ್ಲ. ಇಷ್ಟೊಂದು ಶ್ರೀಮಂತರಾಗುವ ಸಾಧನವೇನು? ಬಹಳ ಚಿಕ್ಕ ಸಾಧನವಾಗಿದೆ. ಜನರು ಸಾಹುಕಾರರಾಗಲು ಎಷ್ಟೊಂದು ಕಷ್ಟ ಪಡುತ್ತಾರೆ ಮತ್ತು ತಾವಾದರೋ ಎಷ್ಟು ಸಹಜವಾಗಿ ಮಾಲಾಮಾಲ್ ಆಗುತ್ತಾ ಹೋಗುವಿರಿ. ಸಾಧನವು ತಿಳಿದಿದೆಯಲ್ಲವೇ? ಕೇವಲ ಚಿಕ್ಕ ಬಿಂದುವನ್ನು ಇಡಬೇಕು ಅಷ್ಟೆ. ಬಿಂದುವನ್ನು ಇಟ್ಟಿರಿ, ಸಂಪಾದನೆ ಆಯಿತು. ಆತ್ಮವೂ ಬಿಂದು, ತಂದೆಯೂ ಬಿಂದು ಮತ್ತು ಡ್ರಾಮಾ ಎಂಬ ಫುಲ್ ಸ್ಟಾಪ್ ಇಡುವುದು, ಇದೂ ಸಹ ಬಿಂದುವೆ ಆಗಿದೆ. ಬಿಂದು ಆತ್ಮವನ್ನು ನೆನೆದ ತಕ್ಷಣ ಸಂಪಾದನೆ ಹೆಚ್ಚಾಗಿ ಬಿಟ್ಟಿತು. ಲೌಕಿಕದಲ್ಲೂ ನೋಡಿ, ಬಿಂದು (ಸೊನ್ನೆ) ವಿನಿಂದಲೇ ಸಂಖ್ಯೆ ಹೆಚ್ಚುತ್ತದೆ. ಒಂದರ ಮುಂದೆ ಸೊನ್ನೆ ಇಟ್ಟರೆ ಏನಾಗುತ್ತದೆ? 10. ಎರಡು ಬಿಂದು ಇಡಿ, ಮೂರು ಬಿಂದು ಇಡಿ, ನಾಲ್ಕು ಬಿಂದು ಇಡಿ, ಹೆಚ್ಚಾಗುತ್ತಾ ಹೋಗುತ್ತದೆ. ಅಂದಾಗ ನಿಮ್ಮ ಸಾಧನೆಯು ಎಷ್ಟೊಂದು ಸಹಜವಾದ್ದುದಾಗಿದೆ. 'ನಾನು ಆತ್ಮ' ಎಂಬ ಸ್ಮೃತಿಯ ಬಿಂದು ಇಡುವುದು ಎಂದರೆ ಖಜಾನೆ ಜಮಾ ಆಗುವುದಾಗಿದೆ. ಮತ್ತು 'ತಂದೆ' ಎಂಬ ಬಿಂದು ಇಡಿ ಮತ್ತು ಖಜಾನೆ ಜಮಾ ಮಾಡಿಕೊಳ್ಳಿ. ಕರ್ಮದಲ್ಲಿ, ಸಂಬಂಧ ಸಂಪರ್ಕದಲ್ಲಿ 'ಡ್ರಾಮಾ'ದ ಫುಲ್‌ಸ್ಟಾಪ್ ಇಡಿ, ಆಗಿ ಹೋಗಿದ್ದಕ್ಕೆ ಫುಲ್‌ಸ್ಟಾಪ್ ಇಡಿ, ಮತ್ತು ಖಜಾನೆ ಹೆಚ್ಚಾಗಿ ಬಿಡುತ್ತದೆ. ಅಂದಾಗ ಇಡೀ ದಿನದಲ್ಲಿ ಎಷ್ಟು ಸಲ ಬಿಂದು ಇಡುವಿರಿ? ಮತ್ತು ಬಿಂದು ಇಡುವುದು ಎಷ್ಟು ಸಹಜವಾಗಿದೆ ಹೇಳಿ. ಕಷ್ಟವಾಗಿದೆಯೇನು? ಬಿಂದು ಜಾರಿಹೋಗುತ್ತದೆಯೇನು?

ಎಲ್ಲದಕ್ಕಿಂತಲೂ ಸಹಜವಾದುದ್ದು ಬಿಂದು ಇಡುವುದಾಗಿದೆ. ಒಬ್ಬ ಕುರುಡನಾಗಿದ್ದರೂ ಸಹ, ಕಾಗದದ ಮೇಲೆ ಪೆನ್ಸಿಲ್ ಇಟ್ಟರೆ ಬಿಂದು ಮೂಡುತ್ತದೆ. ತಾವಾದರೋ ತ್ರಿನೇತ್ರಿಗಳಾಗಿದ್ದೀರಿ. ಆದ್ದರಿಂದ ಈ ಮೂರು ಬಿಂದುಗಳನ್ನು ಸದಾ ಉಪಯೋಗಿಸುತ್ತಿರಿ. ಪ್ರಶ್ನಾರ್ಥಕ ಚಿಹ್ನೆ ಎಷ್ಟೊಂದು ಡೊಂಕಾಗಿದೆ, ಬರೆದು ನೋಡಿ, ಡೊಂಕಾಗಿದೆಯಲ್ಲವೇ? ಮತ್ತು ಬಿಂದು ಎಷ್ಟು ಸಹಜವಾಗಿದೆ. ಆದ್ದರಿಂದ ಬಾಪ್‌ದಾದಾರವರು ಭಿನ್ನ ಭಿನ್ನ ರೂಪದಲ್ಲಿ ಮಕ್ಕಳಿಗೆ ಸಮಾನರಾಗುವ ವಿಧಿಯನ್ನು (ಪದ್ಧತಿ) ತಿಳಿಸುತ್ತಿರುತ್ತಾರೆ. ಬಿಂದು ಇಡುವುದೇ ವಿಧಿಯಾಗಿದೆ. ಅನ್ಯ ಯಾವ ವಿಧಿಯೂ ಇಲ್ಲ. ಒಂದುವೇಳೆ ವಿದೇಹೀ ಆಗುವುದಕ್ಕೂ ಸಹ ಬಿಂದುವೇ ವಿಧಿಯಾಗಿದೆ. ಅಶರೀರಿ ಆಗುವುದಕ್ಕಾಗಲೀ, ಕರ್ಮಾತೀತರಾಗು ವುದಕ್ಕಾಗಲೀ, ಎಲ್ಲದಕ್ಕೂ ಬಿಂದು ಇಡುವುದೇ ವಿಧಿಯಾಗಿದೆ. ಆದ್ದರಿಂದಲೇ ಬಾಪ್‌ದಾದಾರವರು ಮೊದಲೇ ಹೇಳಿದ್ದಾರೆ – ಅಮೃತವೇಳೆಯಲ್ಲಿ ಬಾಪ್‌ದಾದಾ ರವರೊಡನೆ ಮಿಲನ ಮಾಡುತ್ತಾ, ಆತ್ಮಿಕ ವಾರ್ತಾಲಾಪ ಮಾಡುತ್ತಾ ಕಾರ್ಯದಲ್ಲಿ ಬಂದಾಗ ಮೊದಲು ಮೂರು ಬಿಂದುಗಳ ತಿಲಕವನ್ನು ಮಸ್ತಕದಲ್ಲಿ ಇಟ್ಟುಕೊಳ್ಳಿರಿ. ಆ ಕೆಂಪು ಬಿಂದುಗಳ ತಿಲಕವನ್ನು ಇಟ್ಟುಕೊಂಡು ಪ್ರಾರಂಭಿಸಬೇಡಿರಿ, ಆದರೆ ಸ್ಮೃತಿಯ ತಿಲಕವನ್ನು ಇಟ್ಟುಕೊಳ್ಳಿ ಮತ್ತು ಯಾವುದೇ ಕಾರಣಕ್ಕೂ ಈ ಸ್ಮೃತಿಯ ತಿಲಕ ಅಳಿಸಿ ಹೋಗದಂತೆ ಚೆಕ್ ಮಾಡಿಕೊಳ್ಳಿ.

**ದಾದಿಜೀಯೊಂದಿಗೆ:–** ಡ್ರಾಮಾದಲ್ಲಿ ಏನೇ ಆಗಲಿ, ಎಲ್ಲರ ಸ್ನೇಹವು ಹೆಚ್ಚಾಗುತ್ತದೆ. ನಿಮಿತ್ತ ಆತ್ಮಗಳ ಬಗ್ಗೆ ಎಲ್ಲರಿಗೂ ಪ್ರಾಣವೇ ಅಡಗಿದೆ. ಆದ್ದರಿಂದ ಆಪರೇಶನ್ ಕೇವಲ ನಿಮಿತ್ತವಾಗಿದೆ, ಆದರೆ ಎಲ್ಲರ ಸ್ನೇಹ ಮತ್ತು ಆಶೀರ್ವಾದಗಳ ಖಜಾನೆ ಬಹಳ ಜಮಾ ಆಗಿದೆ. ನೋಡಿ, ಡ್ರಾಮಾದಲ್ಲಿ ಮುರಳಿಗಳೂ ಎಷ್ಟೊಂದು ಸಮಯಾನುಸಾರವಾಗಿ ಪುನರಾವರ್ತನೆ ಆಯಿತು, ಬಾಪ್‌ದಾದಾರವರು ಎಲ್ಲರಿಗೂ ಸಕಾಶವನ್ನು ಕೊಡುವ ಮತ್ತು ತೆಗೆದುಕೊಳ್ಳುವ ಪಾಠವನ್ನು ಓದಿಸಿದರು. ಸಮಯಾನುಸಾರ ಮುರಳಿಗಳೂ ಹಾಗೆಯೇ ನುಡಿಸಲಾಯಿತು. ಬಾಪ್‌ದಾದಾರವರ ಪ್ರೀತಿ ಇದ್ದೇ ಇದೆ, ಆದರೆ ಪ್ರತಿಯೊಂದು ಮಗುವಿಗೂ ಹೃದಯದಲ್ಲಿ ಪ್ರೀತಿ ಇದೆ. ಪರಮಾತ್ಮನ ಪ್ರೀತಿ ಮತ್ತು ಬ್ರಾಹ್ಮಣ ಆತ್ಮಗಳ ಪ್ರೀತಿ ಮೇಲಕ್ಕೆ ಹಾರಿಸುತ್ತದೆ. ಏಕೆಂದರೆ ತಮ್ಮ ಸಾಕಾರದಲ್ಲಿ ಸ್ವಲ್ಪ ಸಮಯವಾದರೂ ಮಿಲನ ಮಾಡುವುದು ಎಲ್ಲರಿಗೂ ಮಹತ್ವ ಪೂರ್ಣವಾದುದ್ದಾಗಿದೆ. ಇಷ್ಟೊಂದು ಸಮಯ ಮಿಲನ ಮಾಡುವುದಕ್ಕೆ ಬದಲಿಗೆ ಫರಿಶ್ತೆ ರೀತಿಯ ಈ ಮಿಲನ, ಇದೂ ಸಹ ಡ್ರಾಮಾದಲ್ಲಿ ಒಳ್ಳೆಯ ಪಾತ್ರವಿತ್ತು. ಈಗ ತಮ್ಮನ್ನು ಬ್ರಹ್ಮಾ ತಂದೆಯ ಸಮಾನ ಫರಿಶ್ತಾ ರೂಪದಲ್ಲಿ ಮಿಲನ ಮಾಡುವುದು, ನಡೆಯುವುದು ಮತ್ತು ಹಾರುವುದು ಇದೇ ಪಾತ್ರ ಈಗ ತಮ್ಮದು ನಡೆಯುತ್ತಿದೆ. ಹೇಗೆ ಬ್ರಹ್ಮಾಬಾಬಾರವರು ಸಂಪೂರ್ಣ ನ್ಯಾರಾ ಮತ್ತು ಕರ್ಮಾತೀತ ಸ್ಥಿತಿಯ ಅನುಭವ ಮಾಡಿದರೋ ಹಾಗೆಯೇ ಮಹಾರಥಿಗಳಾದ

ತಾವೆಲ್ಲರೂ ಈಗ ಈ ರೀತಿ ಬ್ರಹ್ಮಾರವರ ಸಮಾನ ಕರ್ಮಾತೀತ ಸ್ಥಿತಿಯ ಸಮೀಪ ಬರಲೇ ಬೇಕಾಗಿದೆ. ಫಾಲೋ ಫಾದರ್. ತಮ್ಮ ಒಂದು ಸೆಕೆಂಡಿನ ದೃಷ್ಟಿ ಅನೇಕ ಘಂಟೆಗಳ ಪ್ರಾಪ್ತಿಯ ಅನುಭವ ಮಾಡಿಸುತ್ತದೆ. ಈಗ ಮಾತಾಡುವ, ಕುಳಿತುಕೊಳ್ಳುವ ಪರಿಶ್ರಮ ಕಡಿಮೆಯಾಗುತ್ತಾ ಹೋಗುತ್ತದೆ. ಏಕ್‌ದಂ ಬ್ರಹ್ಮಾಬಾಬಾರವರೇ ಕಾಣಿಸುತ್ತಾರೆ. ಇವರು ದಾದಿಗಳಲ್ಲ, ಬ್ರಹ್ಮಾಬಾಬಾ ಆಗಿದ್ದಾರೆ. ಅವ್ಯಕ್ತ ಬ್ರಹ್ಮಾ, ಅವ್ಯಕ್ತ ರೂಪದಲ್ಲಿ ಪಾಲನೆಯನ್ನು ಕೊಡುತ್ತಿದ್ದಾರೆ ಮತ್ತು ತಮ್ಮ ಮೂಲಕ ಸಾಕಾರ ಬ್ರಹ್ಮಾಬಾಬಾರವರ ಅನುಭೂತಿ ಹೆಚ್ಚುತ್ತಾ ಹೋಗುತ್ತದೆ. ತಮ್ಮನ್ನು ದಾದಿಯಂತೆ ನೋಡುವುದಿಲ್ಲ, ಬ್ರಹ್ಮಾ ಬಾಬಾರವರೆಂದು ನೋಡುತ್ತಾರೆ. ಈ ರೀತಿ ಆಗುತ್ತದೆಯಲ್ಲವೇ? ಒಳ್ಳೆಯದು ಬೆಲೆ ಬಾಳುವ ರತ್ನಗಳನ್ನು ಕಾಪಾಡಲಾಗುತ್ತದೆ. **(30–03–1999)**

ನಾವು ಇಡೀ ದಿನದಲ್ಲಿ ಎಷ್ಟು ಜಮಾ ಮಾಡಿಕೊಳ್ಳುತ್ತೇವೆ ಅಥವಾ ಕಳೆದುಕೊಳ್ಳುತ್ತೇವೆ ಎಂದು ಪ್ರತಿಯೊಬ್ಬರೂ ಚೆಕ್ ಮಾಡಿಕೊಳ್ಳಿರಿ. ಚೆಕ್ ಮಾಡಿಕೊಳ್ಳುತ್ತೀರಾ? ಅವಶ್ಯಕವಾಗಿ ಚೆಕ್ ಮಾಡಿಕೊಳ್ಳಬೇಕು. ಏಕೆಂದರೆ ಒಂದು ಜನ್ಮಕ್ಕಾಗಿ ಅಲ್ಲ, ಆದರೆ ಅನೇಕ ಜನ್ಮಕ್ಕಾಗಿ ಜಮಾ ಆಗಬೇಕಾಗಿದೆ. ಜಮಾ ಮಾಡಿಕೊಳ್ಳುವ ವಿಧಾನ ತಿಳಿದಿದೆಯೇ? ಬಹಳ ಸಹಜವಾಗಿದೆ. ಕೇವಲ ಬಿಂದುವನ್ನು ಇಡುತ್ತಾ ಹೋಗಿ. ಬಿಂದು ನೆನಪಿದ್ದರೆ ಜಮಾ ಆಗುತ್ತದೆ. ಹೇಗೆ ಸ್ಥೂಲ ಖಜಾನೆಯಲ್ಲಿ ಒಂದರೊಡನೆ ಬಿಂದು ಇಡುತ್ತಾ ಹೋದರೆ ಹೆಚ್ಚುತ್ತಾ ಹೋಗುತ್ತದೆಯಲ್ಲವೇ? ಹೀಗೆಯೇ ಆತ್ಮವೂ ಸಹ ಬಿಂದು, ತಂದೆಯೂ ಸಹ ಬಿಂದು ಮತ್ತು ಡ್ರಾಮಾದಲ್ಲಿ ಏನು ಕಳೆದು ಹೋಯಿತೋ ಅದೂ ಸಹ ಫುಲ್‌ಸ್ಟಾಪ್ ಅಂದರೆ ಬಿಂದು. ಒಂದುವೇಳೆ ಪ್ರತಿಯೊಂದು ಖಜಾನೆಯನ್ನು ಬಿಂದುರೂಪದಲ್ಲಿ ನೆನಪು ಮಾಡಿದರೆ ಜಮಾ ಆಗುತ್ತಾ ಹೋಗುತ್ತದೆ. ಅನುಭವ ಇದೆಯಲ್ಲವೇ? ಬಿಂದು ಇಟ್ಟ ತಕ್ಷಣ ವ್ಯರ್ಥಕ್ಕೆ ಬದಲಿಗೆ ಜಮಾ ಆಗುತ್ತಾ ಹೋಗುತ್ತದೆ. ಬಿಂದು ಇಡುವುದು ಬರುತ್ತದೆಯೆ? ಅನೇಕ ಸಲ ಬಿಂದು ಇಡುವ ಪ್ರಯತ್ನ ಮಾಡುತ್ತೀರಿ, ಆದರೆ ಬಿಂದುವಿನ ಬದಲಿಗೆ ದೊಡ್ಡ ಸಾಲು ಆಗಿ ಬಿಡುತ್ತದೆ, ಬಿಂದುವಿನ ಬದಲು ಪ್ರಶ್ನಾರ್ಥಕ ಚಿಹ್ನೆ ಬಂದು ಬಿಡುತ್ತದೆ, ಆಶ್ಚರ್ಯದ ಲೈನ್ ಬಂದುಬಿಡುತ್ತದೆ. ಆದ್ದರಿಂದ ಜಮಾ ಖಾತಾ ಹೆಚ್ಚಿಸುವ ವಿಧಿಯಾಗಿದೆ 'ಬಿಂದು' ಮತ್ತು ಕಳೆದುಕೊಳ್ಳುವ ಮಾರ್ಗ ಉದ್ದವಾದ ಸಾಲನ್ನು ಎಳೆಯುವುದು, ಪ್ರಶ್ನಾರ್ಥಕ ಚಿಹ್ನೆ ಹಾಕುವುದು, ಆಶ್ಚರ್ಯದ ಚಿಹ್ನೆ ಹಾಕುವುದಾಗಿದೆ. ಸಹಜ ಯಾವುದಾಗಿದೆ? ಬಿಂದು ಆಗಿದೆಯಲ್ಲವೇ? **ಸ್ವಮಾನದಲ್ಲಿರುವುದು, ತಂದೆಯ ನೆನಪು ಮಾಡುವುದು ಹಾಗೂ ವ್ಯರ್ಥಕ್ಕೆ ಫುಲ್‌ಸ್ಟಾಪ್ ಇಡುವುದು'** ಬಹಳ ಸಹಜವಾದ ವಿಧಿಯಾಗಿದೆ.

'ಪ್ರತಿದಿನ ಅಮೃತವೇಳೆಯಲ್ಲಿ ತಮಗೆ ತಾವೇ ಮೂರು ಬಿಂದುಗಳ ಸ್ಮೃತಿಯ ತಿಲಕ ಇಟ್ಟುಕೊಳ್ಳಿ, ಆಗ ಒಂದು ಖಜಾನೆಯೂ ವ್ಯರ್ಥವಾಗುವುದಿಲ್ಲ. ಪ್ರತಿ ಸಮಯ, ಪ್ರತಿ ಖಜಾನೆಯು ಜಮಾ ಆಗುತ್ತಾ ಹೋಗುತ್ತದೆ' ಎಂದು ಬಾಪ್‌ದಾದಾರವರು ಮೊದಲೂ ಹೇಳಿದ್ದಾರೆ. ಬಾಪ್‌ದಾದಾರವರು ಎಲ್ಲಾ ಮಕ್ಕಳ ಪ್ರತಿಯೊಂದು ಖಜಾನೆಯ ಜಮಾ ಮಾಡಿಕೊಳ್ಳುವ ಚಾರ್ಟ್‌ನ್ನು ನೋಡಿದರು. ಇದರಲ್ಲಿ ಏನು ನೋಡಿದರು? ಇಲ್ಲಿಯವರೆಗೂ ಜಮಾ ಖಾತೆ ಎಷ್ಟು ಆಗಬೇಕಿತ್ತೋ ಅಷ್ಟು ಆಗಿಲ್ಲ. ಸಮಯ, ಸಂಕಲ್ಪ, ಮಾತು ವ್ಯರ್ಥವಾಗಿಯೂ ಹೋಗುತ್ತದೆ. ನಡೆಯುತ್ತಾ ನಡೆಯುತ್ತಾ ಸಮಯದ ಮಹತ್ವ ಕಡಿಮೆ ರೂಪದಲ್ಲಿ ಇಮರ್ಜ್ ಆಗುತ್ತದೆ. ಒಂದುವೇಳೆ ಸಮಯದ ಮಹತ್ವ ಸದಾ ನೆನಪಿದ್ದು, ಇಮರ್ಜ್ ಆಗಿದ್ದರೆ ಸಮಯವನ್ನು ಇನ್ನೂ ಹೆಚ್ಚು ಸಫಲ ಮಾಡಿಕೊಳ್ಳ ಬಹುದಾಗಿದೆ. ಇಡೀ ದಿನದಲ್ಲಿ ಸಾಧಾರಣ ರೂಪದಲ್ಲಿ ಸಮಯವು ಹೊರಟು ಹೋಗುತ್ತದೆ. ತಪ್ಪಾಗಿ ಅಲ್ಲ, ಆದರೆ ಸಾಧಾರಣ ರೀತಿ. ಹೀಗೆಯೇ ಸಂಕಲ್ಪವೂ ಕೆಟ್ಟದಾಗಿ ಅಲ್ಲ, ಆದರೆ ವ್ಯರ್ಥವಾಗಿ ಹೋಗಿಬಿಡುತ್ತದೆ. ಅದೃಷ್ಟದ ಚಿತ್ರವನ್ನು ನೋಡಿಕೊಳ್ಳಿ ಮತ್ತು ಸದಾ ತಮ್ಮ ಅದೃಷ್ಟದ ಚಿತ್ರವನ್ನು ನೋಡಿಕೊಂಡು 'ವಾಹ್ ವಾಹ್' ಎಂಬ ಗೀತೆಯನ್ನು ಹಾಡಿ. 'ವಾಹ್ ನನ್ನ ಅದೃಷ್ಟವೇ', 'ವಾಹ್ ನನ್ನ ಬಾಬಾ', 'ವಾಹ್ ನನ್ನ ಪರಿವಾರ'. ಪರಿವಾರವೂ ಸಹ ವಾಹ್ ವಾಹ್ ಆಗಿದೆ. ಇವರು ತುಂಬಾ ವಾಹ್ ವಾಹ್ ಆಗಿದ್ದಾರೆ, ಇವರು ಸ್ವಲ್ಪ ವಾಹ್ ವಾಹ್ ಆಗಿದ್ದಾರೆ ಎಂಬದಾಗಿ ಅಲ್ಲ. ಇಲ್ಲ. 'ವಾಹ್ ನನ್ನ ಪರಿವಾರ', 'ವಾಹ್ ನನ್ನ ಭಾಗ್ಯ' ಮತ್ತು 'ವಾಹ್ ನನ್ನ ಬಾಬಾ'. ಬ್ರಾಹ್ಮಣ ಜೀವನವೆಂದರೆ ವಾಹ್ ವಾಹ್. ಹಾಯ್ ಹಾಯ್ (ಅಯ್ಯೋ, ಅಯ್ಯೋ) ಅಲ್ಲ. ಶಾರೀರಿಕ ವ್ಯಾಧಿಯಲ್ಲೂ ಹಾಯ್ ಹಾಯ್ ಅಲ್ಲ. ವಾಹ್! ಇದೂ ಸಹ ಹೊರೆಯನ್ನು ಇಳಿಸುತ್ತದೆ. ಒಂದುವೇಳೆ ಹತ್ತು ಮಣ ಭಾರದಲ್ಲಿ ತಮ್ಮ 3–4 ಮಣ ಭಾರ ಕಡಿಮೆಯಾದರೆ ಒಳ್ಳೆಯದೋ ಅಥವಾ ಹಾಯ್ ಹಾಯ್ ಎನ್ನುವಿರೋ? ಏನು? ಆಹಾ ಭಾರ ಇಳಿಯಿತು! ಹಾಯ್ ನನ್ನ ಪಾತ್ರವೇ ಇಷ್ಟು, ಹಾಯ್ ನನ್ನ ವ್ಯಾಧಿ ಬಿಡುವುದೇ ಇಲ್ಲ. ನೀವು ಬಿಡುವಿರೋ ಅಥವಾ ವ್ಯಾಧಿ ಬಿಡುವುದೋ? ವಾಹ್ ವಾಹ್ ಎನ್ನುತ್ತಾ ಹೋಗಿರಿ. ವಾಹ್ ವಾಹ್

ಎಂದು ಮಾಡುವುದರಿಂದ ವ್ಯಾಧಿಗೂ ಖುಷಿಯಾಗಿ ಬಿಡುತ್ತದೆ. ನೋಡಿ, ಇಲ್ಲೂ ಹೀಗೆ ಆಗುತ್ತದೆಯಲ್ಲವೇ? ಯಾರದ್ದಾದರೂ ಮಹಿಮೆ ಮಾಡಿದಾಗ ವಾಹ್ ವಾಹ್ ಎನ್ನುತ್ತಾರೆ. ಹಾಗೆಯೇ ವ್ಯಾಧಿಗೂ ಸಹ ವಾಹ್ ವಾಹ್ ಎನ್ನಿ. ಅಯ್ಯೋ, ನನ್ನ ಹತ್ತಿರ ಏಕೆ ಬಂದಿತು? ನನ್ನದೇ ಲೆಕ್ಕಾಚಾರವಾಗಿದೆ ಎನ್ನಬೇಡಿ. ಪ್ರಾಪ್ತಿಯ ಮುಂದೆ ಲೆಕ್ಕಾಚಾರ ಏನೂ ಅಲ್ಲ. ಪ್ರಾಪ್ತಿಗಳನ್ನು ಮುಂದಿಟ್ಟುಕೊಳ್ಳಿ ಮತ್ತು ಲೆಕ್ಕಾಚಾರವನ್ನು ಮುಂದಿಟ್ಟುಕೊಳ್ಳಿ. ಆಗ ಏನೆನಿಸುತ್ತದೆ? ಬಹಳ ಚಿಕ್ಕದಾಗಿ ಕಾಣಿಸುತ್ತದೆ. ಎಂದರೆ ಬ್ರಾಹ್ಮಣ ಜೀವನದಲ್ಲಿ ಏನೇ ಆಗಲಿ, ಸಕಾರಾತ್ಮಕ ರೂಪದಲ್ಲಿ ನೋಡಿರಿ.

ತಾವೆಲ್ಲರೂ ಯಾರು ಬಿಜಿನೆಸ್ ಮೆನ್ ಬಂದಿದ್ದೀರೋ ನಿಮಗೆ ಚಿಂತೆಯಿದೆಯೇ? ಏನಾಗುವುದೋ? ಹೇಗಾಗುವುದೋ ಎಂಬ ಚಿಂತೆ ಇದೆಯೇ? ಚಿಂತೆ ಇಲ್ಲವೆಂದರೆ ಕೈ ಎತ್ತಿ. ನಾಳೆಯೇನಾದರೂ ಆಗಿಬಿಟ್ಟರೆ? ನಿಶ್ಚಿಂತ ಚಕ್ರವರ್ತಿಗಳಾಗಿದ್ದೀರಾ? ಬಿಜಿನೆಸ್ ಮೆನ್‌ಗಳು ನಿಶ್ಚಿಂತ ಚಕ್ರವರ್ತಿ ಗಳಾಗಿದ್ದೀರಾ? ಸ್ವಲ್ಪ ಜನ ಮಾತ್ರ ಕೈಯೆತ್ತಿದ್ದೀರ. ಯಾರಿಗೆ ಸ್ವಲ್ಪ ಸ್ವಲ್ಪ ಚಿಂತೆಯಿದೆಯೋ ಅವರು ಕೈ ಎತ್ತಬಹುದು ಅಥವಾ ನಾಚಿಕೆಯೆ? ಬಾಪ್‌ದಾದಾರವರು – **'ನಿಶ್ಚಿಂತ ಚಕ್ರವರ್ತಿಗಳು', 'ಬೇಗಂಪುರದ (ದುಃಖವಿಲ್ಲದ ಪ್ರಪಂಚದ) ಚಕ್ರವರ್ತಿಗಳು'** ಎಂದು ಟೈಟಲನ್ನೇ ನೀಡಿದ್ದಾರೆ. ಯಾವಾಗಲಾದರೂ ಏನಾದರೂ ಇಂತಹ ಮಾತುಗಳು ಬಂದರೆ, ಅವಶ್ಯವಾಗಿ ಬರುತ್ತದೆ, ಆದರೆ ತಾವು ಬೇಗಂಪುರಕ್ಕೆ ಹೋಗಿಬಿಡಿ. ಬೇಗಂಪುರದಲ್ಲಿ ಕುಳಿತುಬಿಟ್ಟರೆ ಚಕ್ರವರ್ತಿಯೂ ಆಗಿಬಿಡುವಿರಿ ಮತ್ತು ಬೇಗಂಪುರದಲ್ಲೂ ಇದ್ದು ಬಿಡುವಿರಿ. 'ಹಳೇ ಪ್ರಪಂಚ ಹೋಗಲಿ ಮತ್ತು ಹೊಸ ಪ್ರಪಂಚ ಬರಲಿ' ಎಂದು ತಾವೇ ಆಹ್ವಾನ ಮಾಡಿದ್ದೀರಿ. ಮತ್ತೆ ಹೇಗೆ ಹೋಗುತ್ತದೆ? ಕೆಳಗೆ ಮೇಲೆ ಆದಾಗ ತಾನೇ ಹೋಗುತ್ತದೆ? ಏನೇ ಆಗಲಿ ತಾವು ನಿಶ್ಚಿಂತರಾಗಲೇ ಬೇಕಾಗಿದೆ. ತಾವೇ ಹಳೆಯ ಪ್ರಪಂಚ ಸಮಾಪ್ತಿಯಾಗಲಿ ಎಂದು ಆಹ್ವಾನ ಮಾಡಿದ್ದೀರಿ. ಮತ್ತು ಹಳೆಯ ಪ್ರಪಂಚದಲ್ಲಿ, ಹಳೆಯ ಮನೆಯಲ್ಲಿ ಏನಾಗುತ್ತದೆ? ಕೆಲವೊಮ್ಮೆ ಏನಾದರೂ ಒಡೆಯುತ್ತದೆ, ಕೆಲವೊಮ್ಮೆ ಏನಾದರೂ ಬೀಳಬಹುದು, ಇದಂತೂ ಆಗಿಯೇ ಆಗುತ್ತದೆ. 'ನಥಿಂಗ್ ನ್ಯೂ'. ಬ್ರಹ್ಮಾಬಾಬಾರವರದು ಎಲ್ಲಾ ಮಾತಿನಲ್ಲೂ 'ನಥಿಂಗ್ ನ್ಯೂ' ಎಂಬ ಈ ಶಬ್ದವೇ ಇರುತ್ತಿತ್ತು. ಆಗಲೇಬೇಕಾಗಿದೆ, ಆಗುತ್ತಿದೆ ಮತ್ತು ನಾವು ನಿಶ್ಚಿಂತ ಚಕ್ರವರ್ತಿಗಳಾಗಿದ್ದೇವೆ. ಈ ರೀತಿ ನಿಶ್ಚಿಂತರಾಗಿದ್ದೀರಾ? ನಿಶ್ಚಿಂತರಾಗಿದ್ದರೆ ದಿವಾಳಿಯಾದವನೂ ಪಾರಾಗುತ್ತಾನೆ ಮತ್ತು ಚಿಂತೆಯಲ್ಲಿದ್ದರೆ ಸರಿಯಾಗಿ ನಿರ್ಣಯ ತೆಗೆದುಕೊಳ್ಳಲು ಆಗುವುದಿಲ್ಲ. ಆಗ ಒಂದು ದಿನದಲ್ಲೇ ಹೇಗೆ ಇರುವವರಿಂದ ಹೇಗಾಗಿ ಬಿಡುತ್ತೀರಿ? ಇದು ನಿಮಗೆ ತಿಳಿದೇ ಇದೆ. ನಿಶ್ಚಿಂತರಾಗಿದ್ದರೆ ನಿರ್ಣಯವು ಚೆನ್ನಾಗಿ ಆಗುತ್ತದೆ, ಆಗ ಪಾರಾಗಿಬಿಡುತ್ತೀರಿ. ಈಗ ಸಮಯಾನುಸಾರ ಏನು ಮಾಡಬಹುದು, ಏನು ಮಾಡಬಾರದು ಎಂಬ ಟಚಿಂಗ್ ಆಗುತ್ತದೆ (ಸೂಚನೆ ಸಿಗುತ್ತದೆ). **(30–11–1999)**

ಬಾಪ್‌ದಾದಾರವರು ತಮ್ಮ ಕೈಗಳಿಂದ ಧ್ವಜ ಹಾರಿಸಿದರು. 64ನೇ ವರ್ಷದ ಶಿವ ಜಯಂತಿಯ ಅಂಗವಾಗಿ 64 ಮೇಣದ ಬತ್ತಿಗಳನ್ನು ಹಚ್ಚಿದರು ಮತ್ತು ಎಲ್ಲ ಮಕ್ಕಳಿಗೂ ಶಿವ ಜಯಂತಿಯ ಶುಭಾಶಯಗಳನ್ನು ಕೊಟ್ಟರು.

ಎಲ್ಲರೂ ತಮ್ಮ ಹುಟ್ಟು ಹಬ್ಬವನ್ನು ಆಚರಿಸಿದಿರಿ, ಧ್ವಜವನ್ನು ಹಾರಿಸಿದಿರಿ. ಈಗ ಪ್ರತಿಯೊಬ್ಬ ಆತ್ಮನ ಹೃದಯದಲ್ಲಿ ಈ ಧ್ವಜವನ್ನು ಹಾರಿಸಬೇಕಾಗಿದೆ. ತಮ್ಮೆಲ್ಲರ ಹೃದಯದಲ್ಲಿ ಬಾಪ್‌ದಾದಾರವರ ಧ್ವಜ ಹಾರಾಡುತ್ತಿರುತ್ತದೆ. ಈಗ ಇಡೀ ವಿಶ್ವವೇ 'ಮೇರಾ ಬಾಬಾ' ಎಂದು ಹೇಳಲಿ. ಈ ಧ್ವನಿಯು, ಹೇಗೆ ನಗಾರಿ ಹೊಡೆದರೆ ಗಟ್ಟಿಯಾದ ಸ್ವರದಲ್ಲಿ ಕೇಳಿಸುತ್ತದೆಯೋ, ಹಾಗೆಯೇ 'ನನ್ನ ಬಾಬಾ' ಎಂಬ ನಗಾರಿ ಜೋರು ಜೋರಾಗಿ ಶಬ್ದ ಮಾಡಲಿ. ಇದೇ ಎಲ್ಲಾ ಮಕ್ಕಳ ಹೃದಯಪೂರ್ವಕವಾದ ಆಸೆಯಾಗಿದೆ. ಆಗಲೇ ಬೇಕಾಗಿದೆ, ಅನೇಕ ಸಲ ಆಗಿದೆ, ಈಗ ಪುನಃ ರಿಪೀಟ್ (ಪುನರಾವರ್ತನೆ) ಆಗಲೇ ಬೇಕಾಗಿದೆ. ಆ ದಿನ ಎಲ್ಲಾ ಮಕ್ಕಳು ಸೇರಿ ಯಾವ ಹಾಡನ್ನು ಹಾಡುವಿರಿ? 'ವಾಹ್ ಬಾಬಾ ವಾಹ್', 'ವಾಹ್ ಡ್ರಾಮಾ ವಾಹ್'. ಎಲ್ಲರ ಹೃದಯದಲ್ಲಿ ಬಾಬಾ ಬಾಬಾ ಮತ್ತು ಬಾಬಾರವರೇ ಇರುತ್ತಾರೆ. ಆ ದಿನ ಕಾಣಿಸುತ್ತಿದೆಯಲ್ಲವೇ? ಕಾಣಿಸುತ್ತಿದೆಯೇ? ಆ ದಿನ ಇನ್ನೇನು ಬಂದೇ ಬಿಟ್ಟಿತು. ಎಲ್ಲರಿಗೂ ಶುಭಾಶಯಗಳಂತೂ ಸಿಕ್ಕಿದೆ. ತಮ್ಮೆಲ್ಲರಿಗೂ ಶುಭಾಶಯವಂತೂ ಇದ್ದೇ ಇದೆ ಮತ್ತು ಎಲ್ಲರಿಗೂ ಈ ದಿನದ ಶುಭಾಶಯಗಳನ್ನು ಕೊಡಿಸಬೇಕಾಗಿದೆ. ಅವತರಣೆಯ ದಿನ, ಜನ್ಮ ದಿನ, ಪರಿವರ್ತನೆಯ ದಿನ, ಪ್ರತ್ಯಕ್ಷತೆಯ ದಿನ ಬರಲೇಬೇಕಾಗಿದೆ. ಒಳ್ಳೆಯದು. ಎಲ್ಲರಿಗೂ ಈ ದಿವಸದ ಗೋಲ್ಡನ್ ನೈಟ್ (ಚಿನ್ನದ ರಾತ್ರಿ), ಡೈಮಂಡ್ ನೈಟ್ (ವಜ್ರದ ರಾತ್ರಿ) **(03–03–2000)**

ಕೊನೆಯಲ್ಲಿ ಹೋಮ್‌ವರ್ಕ್‌ನ್ನು ಕೊಡಬೇಕಲ್ಲವೇ? ಏನಾದರೂ ಹೋಂ ವರ್ಕ್ ಸಿಗುತ್ತದೆಯಲ್ಲವೇ? ಬಾಪ್‌ದಾದಾರವರು ಮುಂದೆ ಬರುವ ಸೀಜ಼ನ್‌ನಲ್ಲಿ ಬರುತ್ತಾರೆ..... ಆದರೆ ಷರತ್ತನ್ನು ವಿಧಿಸುತ್ತಾರೆ. ನೋಡಿ, ಸಾಕಾರದ ಪಾತ್ರವೂ ನಡೆಯಿತು, ಅವ್ಯಕ್ತದ ಪಾತ್ರವೂ ನಡೆಯಿತು, ಇಷ್ಟು ಸಮಯದವರೆಗೆ ಅವ್ಯಕ್ತದ ಪಾತ್ರ ನಡೆಯುವುದೆಂದು ಸ್ವಪ್ನದಲ್ಲೂ ಅನಿಸಿರಲಿಲ್ಲ. ಅಂದಾಗ ಎರಡೂ ಪಾತ್ರಗಳೂ ಡ್ರಾಮಾನುಸಾರ ನಡೆದವು. ಈಗ ಏನಾದರೊಂದು ಷರತ್ತು ಹಾಕಬೇಕೋ, ಬೇಡವೋ? ಏನು ಅಭಿಪ್ರಾಯವಿದೆ? ಅಥವಾ ಹೀಗೆಯೇ ನಡೆಯುತ್ತಾ ಹೋಗುವುದೋ? ಏಕೆ? ಈ ದಿನ ವತನದಲ್ಲಿ ಕಾರ್ಯಕ್ರಮವನ್ನೂ ಕೇಳಿದೆವು. ಬಾಪ್‌ದಾದಾರವರ ವಾರ್ತಾಲಾಪದಲ್ಲಿ 'ಈ ಡ್ರಾಮಾದ ಪಾತ್ರ ಎಲ್ಲಿಯವರೆಗೆ? ಏನಾದರೂ ತಾರೀಖು ಇದೆಯೆ?' ಎಂಬ ಮಾತು ಬಂದಿತು. (ಡೆಹರಾಡೂನ್‌ನ ಪ್ರೇಮ್ ಬೆಹನ್‌ರವರೊಂದಿಗೆ) ಜನ್ಮ ಪತ್ರಿಕೆಯನ್ನು ತಿಳಿಸಿ, ಎಲ್ಲಿಯವರೆಗೆ? ಈಗ 'ಎಲ್ಲಿಯವರೆಗೆ' ಎಂಬ ಪ್ರಶ್ನೆಯು ಉದ್ಭವವಾಗಿದೆ. ಆದರೆ...... ಪುರುಷಾರ್ಥಕ್ಕಾಗಿ 6 ತಿಂಗಳು ಇದ್ದೇ ಇದೆಯಲ್ಲವೇ? 6 ತಿಂಗಳ ನಂತರವೇ ಇನ್ನೊಂದು ಸೀಜ಼ನ್ ಪ್ರಾರಂಭವಾಗುತ್ತದೆ. ಅಂದಾಗ ಬಾಪ್‌ದಾದಾರವರು ಫಲಿತಾಂಶವನ್ನು ನೋಡಲು ಬಯಸುತ್ತಾರೆ. ಮನಸ್ಸು ಸ್ವಚ್ಛ, ಮನಸ್ಸಿನಲ್ಲಿ ಯಾವುದೇ ಹಳೆಯ ಸಂಸ್ಕಾರದ, ಅಭಿಮಾನ-ಅಪಮಾನದ ಫೀಲಿಂಗ್ ಮಾಡಿಕೊಳ್ಳುವ ಕಲೆ ಇರಬಾರದಾಗಿದೆ. **(19-03-2000)**

ಈ ದಿನ ವಿಶೇಷವಾಗಿ ಬ್ರಹ್ಮಾಬಾಬಾರವರ ನೆನಪನ್ನು ಹೆಚ್ಚಾಗಿ ಮಾಡಿದಿರಿ ಅಲ್ಲವೇ? ಬ್ರಹ್ಮಾಬಾಬಾರವರೂ ಎಲ್ಲಾ ಮಕ್ಕಳನ್ನು ಸ್ಮೃತಿ ಮತ್ತು ಸಮರ್ಥ ಸ್ವರೂಪದಲ್ಲಿ ನೆನಪು ಮಾಡಿದರು. ಎಷ್ಟೊಂದು ಮಕ್ಕಳು ಬ್ರಹ್ಮಾಬಾಬಾರವರೊಡನೆ ವಾರ್ತಾಲಾಪ ಮಾಡುತ್ತಾ 'ನೀವು ಇಷ್ಟು ಬೇಗ ಏಕೆ ಹೊರಟು ಹೋದಿರಿ?' ಎಂಬ ಸಿಹಿಸಿಹಿಯಾದ ದೂರನ್ನೂ ಹೇಳಿದರು ಮತ್ತು 'ಮಕ್ಕಳಾದ ನಮ್ಮಿಂದ ಏಕೆ ವಿದಾಯ ತೆಗೆದುಕೊಂಡು ಹೋಗಲಿಲ್ಲ?' ಎಂದು ಎರಡನೇ ದೂರನ್ನು ಹೇಳಿದರು. ಆಗ ಬ್ರಹ್ಮಾಬಾಬಾರವರು ಹೇಳಿದರು – ನಾನೂ ಸಹ ಶಿವಬಾಬಾರವರನ್ನು 'ನನ್ನನ್ನು ಇದ್ದಕ್ಕಿದ್ದಂತೆ ಏಕೆ ಕರೆದುಕೊಂಡಿರಿ?' ಎಂದು ಕೇಳಿದೆ. ಆಗ ಶಿವಬಾಬಾ ಹೇಳಿದರು – ಒಂದುವೇಳೆ ತಮಗೆ ವಿದಾಯ ಹೇಳಿ ಬನ್ನಿ ಎಂದು ಹೇಳಿದ್ದರೆ, ತಾವು ಮಕ್ಕಳನ್ನು ಬಿಡುತ್ತಿದ್ದಿರೇ? ಅಥವಾ ಮಕ್ಕಳು ನಿಮ್ಮನ್ನು ಬಿಡುತ್ತಿದ್ದರೆ? ಅರ್ಜುನರಾದ ತಮ್ಮ ಗಾಯನ 'ಅಂತ್ಯದಲ್ಲಿ ನಷ್ಟೋ ಮೋಹ ಸ್ಮೃತಿ ಸ್ವರೂಪ' ಎಂಬುದಾಗಿಯೇ ಇದೆ. ಆಗಿಯೇ ಇದ್ದೀರಿ. ಆಗ ಬ್ರಹ್ಮಾಬಾಬಾರವರು ಮುಗುಳ್ನಕ್ಕರು ಮತ್ತು ಹೇಳಿದರು – 'ಇವರು ಹೋಗುತ್ತಿದ್ದಾರೆ ಎಂದು ಮಕ್ಕಳಿಗೂ ಅರ್ಥವಾಗಲಿಲ್ಲ ಮತ್ತು ನಾನು ಹೋಗುತ್ತಿದ್ದೇನೆ ಎಂದು ಬಾಬಾರವರಿಗೂ ತಿಳಿಯಲಿಲ್ಲ ಎಂಬುದೂ ಚಮತ್ಕಾರವಾಗಿತ್ತು. ಎದುರಿನಲ್ಲೇ ಇದ್ದರೂ ಎರಡೂ ಕಡೆಯೂ ಸುಮ್ಮನೆ ಇದ್ದರು. ಏಕೆಂದರೆ ಸಮಯಾನುಸಾರವಾಗಿ 'ಸನ್ ಶೋಸ್ ಫಾದರ್' (ಮಕ್ಕಳು ತಂದೆಯನ್ನು ಪ್ರತ್ಯಕ್ಷ ಮಾಡುತ್ತಾರೆ) ಎಂಬ ಪಾತ್ರವು ಡ್ರಾಮಾದಲ್ಲಿ ನಿಗದಿಯಾಗಿತ್ತು. ಇದಕ್ಕೇ 'ವಾಹ್ ಡ್ರಾಮಾ ವಾಹ್' ಎಂದು ಹೇಳಲಾಗುತ್ತೆ. ಸೇವೆಯಲ್ಲಿ ಪರಿವರ್ತನೆ ಅಡಗಿತ್ತು. ಬ್ರಹ್ಮಾಬಾಬಾರವರು ಮಕ್ಕಳ ಬೆನ್ನೆಲುಬು ಆಗಬೇಕಾಗಿತ್ತು. ಹಾಗಾಗಿ ಅವ್ಯಕ್ತ ರೂಪದಲ್ಲಿ ತೀವ್ರವೇಗದ ಸೇವೆಯ ಪಾತ್ರವನ್ನು ಮಾಡಲೇ ಬೇಕಾಗಿತ್ತು.

ಡಬ್ಬಲ್ ವಿದೇಶಿಯರು ಬ್ರಹ್ಮಾಬಾಬಾರವರಿಗೆ 'ಕೇವಲ ಎರಡು ಮೂರು ವರ್ಷಗಳು ತಾವು ಇಲ್ಲೇ ಇದ್ದಿದ್ದರೆ ನಾವು ನೋಡಬಹುದಾಗಿತ್ತು' ಎಂದು ಹೇಳಿದರು. ಆಗ ಬ್ರಹ್ಮಾಬಾಬಾರವರು ನಗುತ್ತಾ, 'ಡ್ರಾಮಾದೊಂದಿಗೆ ಮಾತಾಡಿ, ಡ್ರಾಮಾ ಹೀಗೇಕೆ ಮಾಡಿತು ಎಂದು ಕೇಳಿ' ಎಂದು ಹೇಳಿದರು. **(18-01-2001)**

ಬಾಪ್‌ದಾದಾರವರು ಮೊದಲೇ ಹೇಳಿದ್ದರು – ಬಾಪ್‌ದಾದಾರವರ ಹತ್ತಿರ ಪ್ರಕೃತಿಯೂ ಬರುತ್ತದೆ ಮತ್ತು 'ನಾನು ಎವರೆಡಿಯಾಗಿದ್ದೇನೆ' ಎಂದು ಹೇಳುತ್ತದೆ. ಸಮಯವೂ ಬ್ರಾಹ್ಮಣರು ತಯಾರಾಗಿದ್ದಾರೆಯೇ? ಎಂದು ಬ್ರಾಹ್ಮಣರನ್ನು ಪದೇ ಪದೇ ನೋಡುತ್ತಾ ಇರುತ್ತದೆ. ಪದೇ ಪದೇ ಬ್ರಾಹ್ಮಣರ ಸುತ್ತಲೂ ಸುತ್ತುತ್ತಲೇ ಇರುತ್ತದೆ. ಆದ್ದರಿಂದ ಬಾಪ್‌ದಾದಾರವರು ಕೇಳುತ್ತಾರೆ – ಕೈಯನ್ನಂತೂ ಬಹಳ ಚೆನ್ನಾಗಿ ಎತ್ತುತ್ತೀರಾ, ಬಾಪ್‌ದಾದಾರವರೂ ಖುಷಿಯಾಗುತ್ತಾರೆ. ಈಗ ಪ್ರತಿಯೊಂದು ಸಂಕಲ್ಪ, ಪ್ರತಿಯೊಂದು ಸೆಕೆಂಡ್, ಪ್ರತಿಯೊಂದು ಶ್ವಾಸ, ಯಾವುದು ಕಳೆದು ಹೋಯಿತೋ ಅದು 'ವಾಹ್ ವಾಹ್' ಆಗಿರುವಂತೆ ಎವರೆಡಿ ಆಗಿರಿ. 'ವೈ' (ಏಕೆ) ಅಲ್ಲ, 'ವಾಹ್ ವಾಹ್' ಆಗಲಿ. ಈಗಲಾದರೋ ಕೆಲವೊಮ್ಮೆ ವಾಹ್ ವಾಹ್ ಆಗುತ್ತದೆ, ಕೆಲವೊಮ್ಮೆ 'ವಾಹ್' ಬದಲಾಗಿ 'ವೈ' ಆಗಿಬಿಡುತ್ತದೆ. ಕೆಲವೊಮ್ಮೆ ಬಿಂದು ಇಡುತ್ತೀರಿ, ಕೆಲವೊಮ್ಮೆ ಪ್ರಶ್ನಾರ್ಥಕ ಚಿಹ್ನೆ ಮತ್ತು ಆಶ್ಚರ್ಯದ ಚಿಹ್ನೆಯಾಗಿ

ಬಿಡುತ್ತದೆ. ತಮ್ಮೆಲ್ಲರ ಮನಸ್ಸೂ 'ವಾಹ್' ಎಂದು ಹೇಳಲಿ. ಮತ್ತು ಯಾರ ಸಂಬಂಧ ಸಂಪರ್ಕದಲ್ಲಿ ಬರುತ್ತೀರೋ, ಬ್ರಾಹ್ಮಣರೇ ಆಗಲಿ ಅಥವಾ ಸೇವೆ ಮಾಡುವವರ ಸಂಪರ್ಕವಿರಲಿ, 'ವಾಹ್ ವಾಹ್' ಎಂಬ ಶಬ್ದವೇ ಹೊರಡಲಿ. **(31–01–2001)**

ಸಂಕಲ್ಪದ ಮೂಲಕ, ಮಾತಿನ ಮೂಲಕ, ಕರ್ಮದ ಮೂಲಕ, ಸಂಬಂಧ ಸಂಪರ್ಕದ ಮೂಲಕ ಆಶೀರ್ವಾದಗಳನ್ನು ಕೊಡಬೇಕು ಮತ್ತು ಆಶೀರ್ವಾದಗಳನ್ನು ತೆಗೆದುಕೊಳ್ಳಬೇಕು. ಒಂದುವೇಳೆ ಯಾವುದೇ ಆತ್ಮದ ಬಗ್ಗೆ ಯಾವುದೇ ವ್ಯರ್ಥ ಸಂಕಲ್ಪ ಅಥವಾ ನಕಾರಾತ್ಮಕ ಸಂಕಲ್ಪ ಬಂದರೂ, 'ನನ್ನ ಕರ್ತವ್ಯವೇನು?' ಎಂಬುದನ್ನು ನೆನಪಿಡಿ. ಹೇಗೆ ಎಲ್ಲಾದರೂ ಬೆಂಕಿ ಬಿದ್ದಾಗ, ಬೆಂಕಿ ಆರಿಸುವವರು, ಬೆಂಕಿಯನ್ನು ನೋಡಿದಾಗ ನೀರನ್ನು ಹಾಕುವ ತಮ್ಮ ಕರ್ತವ್ಯವನ್ನು ಮರೆಯುದಿಲ್ಲವೋ, ಅವರಿಗೆ 'ನಾವು ನೀರನ್ನು ಹಾಕುವವರು, ಬೆಂಕಿಯನ್ನು ಆರಿಸುವವರು ಎಂದು ನೆನಪಿರುತ್ತದೆ. ಇದೇ ರೀತಿಯಲ್ಲಿ ಒಂದುವೇಳೆ ಯಾರಾದರೂ, ಯಾವುದೇ ವಿಕಾರದ ಬೆಂಕಿಗೆ ವಶವಾಗಿ, ತಮಗೆ ಹಿಡಿಸದೇ ಇರುವಂತಹ ಯಾವುದಾದರೂ ಕೆಲಸವನ್ನು ಮಾಡಿದರೆ 'ನನ್ನ ಕರ್ತವ್ಯವೇನು?' ಎಂಬುದಾಗಿ ತಾವು ತಮ್ಮ ಕರ್ತವ್ಯವನ್ನು ನೆನಪಿಡಿ. ಯಾವುದೇ ಪ್ರಕಾರದ ಬೆಂಕಿ ಆರಿಸುವ, ಆಶೀರ್ವಾದಗಳನ್ನು ಕೊಡುವ ಶುಭಭಾವನೆಯ ಸಹಯೋಗವನ್ನು ನೀಡುವ ಕರ್ತವ್ಯವನ್ನು ನೆನಪಿಡಿ.

ಒಂದುವೇಳೆ ಯಾವುದೇ ಕಾರಣವು ಎದುರಾದರೂ, ಒಂದು ಸೆಕೆಂಡಿನಲ್ಲಿ ಕಾರಣಕ್ಕೆ ನಿವಾರಣೆಯನ್ನು ಯೋಚಿಸಿರಿ. 'ನಾನು ಇಡೀ ವಿಶ್ವದ ಸಮಸ್ಯೆಗಳನ್ನು ನಿವಾರಣೆ ಮಾಡುವವನಾಗಿದ್ದೇನೆ ಎಂದಾಗ, ಸ್ವಯಂನ ಸಣ್ಣ ಪುಟ್ಟ ಸಮಸ್ಯೆಗಳನ್ನು ನಿವಾರಣೆ ಮಾಡಿಕೊಳ್ಳಲು ಆಗುವುದಿಲ್ಲವೇ?' ಎಂದು ಯೋಚಿಸಿರಿ. ಈಗಂತೂ 'ಹೇ ಮುಕ್ತಿಧಾತರೇ ಮುಕ್ತಿಯನ್ನು ಕೊಡಿ' ಎಂದು ಆತ್ಮಗಳ ಕ್ಯೂ (ಸಾಲು) ತಮ್ಮ ಮುಂದೆ ಬರುತ್ತದೆ. ಏಕೆಂದರೆ ನೀವು ಮುಕ್ತಿಧಾತನ ಡೈರೆಕ್ಟ್ ಮಕ್ಕಳಾಗಿದ್ದೀರಿ, ಅಧಿಕಾರಿ ಮಕ್ಕಳಾಗಿದ್ದೀರಿ. ಮಾಸ್ಟರ್ ಮುಕ್ತಿಧಾತ ಆಗಿದ್ದೀರಲ್ಲವೇ? ಆದರೆ ಕ್ಯೂನ ಮುಂದೆ ಮಾಸ್ಟರ್ ಮುಕ್ತಿಧಾತರಾದ ತಮ್ಮ ಕಡೆಯಿಂದ ಒಂದು ಅಡಚಣೆಯ ಬಾಗಿಲು ಮುಚ್ಚಿದೆ. ಕ್ಯೂ ತಯಾರಾಗಿದೆ, ಆದರೆ ಯಾವ ಬಾಗಿಲು ಮುಚ್ಚಿದೆ? ಪುರುಷಾರ್ಥದಲ್ಲಿ ದುರ್ಬಲ ಪುರುಷಾರ್ಥದ ಒಂದು ಶಬ್ದದ ಬಾಗಿಲು 'ಏಕೆ' ಎಂಬುದಾಗಿದೆ. ಪ್ರಶ್ನಾರ್ಥಕ ಚಿಹ್ನೆ ಏಕೆ? ಈ 'ಏಕೆ' ಎಂಬ ಶಬ್ದವು ಈಗ ಕ್ಯೂನ ಮುಂದೆ ಬರಲು ಬಿಡುವುದಿಲ್ಲ. ಅಂದಾಗ ಬಾಪ್‌ದಾದಾರವರು ಈಗ ದೇಶ ವಿದೇಶದ ಎಲ್ಲ ಮಕ್ಕಳಿಗೂ ಸಮಸ್ಯೆಗಳ ಬಾಗಿಲು 'ಏಕೆ' ಎಂಬುದಾಗಿದೆ, ಈಗ ಇದನ್ನು ಸಮಾಪ್ತಿ ಮಾಡಿರಿ ಎಂಬ ಸ್ಮೃತಿಯನ್ನು ಕೊಡುತ್ತಿದ್ದಾರೆ.

ಒಂದುವೇಳೆ ಮನಸ್ಸು ಪೂರ್ವಕವಾಗಿ 'ಕಾರಣವನ್ನು ಸಮಾಪ್ತಿ ಮಾಡಿ ನಿವಾರಣೆಯ ಸ್ವರೂಪ ಆಗಲೇ ಬೇಕು, ಏನೇ ಆಗಲಿ, ಸಹನೆ ಮಾಡಬೇಕಾಗಿ ಬರಲಿ, ಮಾಯೆಯನ್ನು ಎದುರಿಸಬೇಕಾಗಿ ಬರಲಿ, ಒಬ್ಬರಿಗೊಬ್ಬರ ಪರಸ್ಪರ ಸಂಬಂಧ ಸಂಪರ್ಕದಲ್ಲಿ ಸಹನೆಯನ್ನು ಮಾಡಿಕೊಳ್ಳಬೇಕಾಗಿ ಬರಲಿ, ನಾನು ಸಮಸ್ಯೆಯ ರೂಪ ಆಗಬಾರದು' ಎಂಬ ದೃಢ ಸಂಕಲ್ಪ ಮಾಡಿರಿ.

ಹೀಗೆಯೇ ಯಾವುದಾದರೂ ಸಮಸ್ಯೆ ಬಂದರೂ ಎದುರಲ್ಲಿ ಬಾಪ್‌ದಾದಾರವರನ್ನು ನೋಡಿರಿ ಮತ್ತು ಮನಸ್ಸು ಪೂರ್ವಕವಾಗಿ 'ಬಾಬಾ' ಎಂದು ಹೇಳಿರಿ, ಆಗ ತಕ್ಷಣ ಬಾಬಾರವರು ಬಂದು ಬಿಡುತ್ತಾರೆ ಮತ್ತು ಸಮಸ್ಯೆ ಸಮಾಪ್ತಿಯಾಗಿ ಬಿಡುತ್ತದೆ. ಸಮಸ್ಯೆಯು ಎದುರಿನಿಂದ ಹೊರಟು ಹೋಗುತ್ತದೆ ಮತ್ತು ಬಾಪ್‌ದಾದಾರವರು ಎದುರಿನಲ್ಲಿ ಹಾಜರಾಗಿ ಬಿಡುತ್ತಾರೆ. **(21–11–2001)**

**ರೋಜ಼ಿ ಅಕ್ಕನವರೊಂದಿಗೆ:** ಡ್ರಾಮಾದಲ್ಲಿ ತಮಗೆ ಎಷ್ಟೊಂದು ಒಳ್ಳೆಯ ಪಾತ್ರ ಇದೆ. ಈ ಲೆಕ್ಕವೂ ಪೂರ್ತಿಯಾಯಿತು, ಯಾವ ಲೆಕ್ಕಾಚಾರ ಉಳಿದಿತ್ತೋ, ಅದು ಪೂರ್ತಿಯಾಯಿತು. ಖುಷಿ ಖುಷಿಯಾಗಿ ಪೂರ್ತಿ ಮಾಡಿದಿರಿ. ಈ ಲೆಕ್ಕಾಚಾರಗಳಂತೂ ಸೇವೆಗೋಸ್ಕರ ಆಗುತ್ತಲೇ ಇರುತ್ತದೆ. ಸೇವಾಧಾರಿಗಳು ಎಲ್ಲೇ ಹೋಗಲಿ ಸೇವೆಯಿಲ್ಲದೆ ಸುಮ್ಮನಿರಲು ಆಗುವುದಿಲ್ಲ ಮತ್ತು ಆ ಸೇವೆಯ ಫಲವಾಗಿ ಆಶೀರ್ವಾದಗಳು ಸಿಗುತ್ತವೆ. **(03–02–2002)**

ಈಗ ತಮ್ಮ ಅಂತರ್ಯದಲ್ಲಿ 'ನನ್ನ ವೃತ್ತಿಯಲ್ಲಿ ಯಾವುದೇ ಆತ್ಮದ ಬಗ್ಗೆಯೂ ಯಾವುದೇ ರೀತಿಯ ನಕಾರಾತ್ಮಕ ವೈಬ್ರೇಷನ್ಸ್ ಇಲ್ಲವಲ್ಲವೇ?' ಎಂಬುದಾಗಿ ಚೆಕ್ ಮಾಡಿಕೊಳ್ಳಿರಿ. ಒಂದುವೇಳೆ ವಿಶ್ವದ ವಾಯುಮಂಡಲವನ್ನು ಪರಿವರ್ತನೆ ಮಾಡಬೇಕೆಂದರೆ, ತಮ್ಮ ಮನಸ್ಸಿನಲ್ಲಿ ಯಾವುದೇ ಒಂದು ಆತ್ಮದ ಬಗ್ಗೆಯೂ ಒಂದುವೇಳೆ ವ್ಯರ್ಥ ವೈಬ್ರೇಷನ್ ಅಥವಾ ಸತ್ಯವಾದ ವೈಬ್ರೇಷನ್ ನಕಾರಾತ್ಮಕವಾಗಿದ್ದರೆ

ವಿಶ್ವಪರಿವರ್ತನೆಯನ್ನು ಮಾಡಲು ಸಾಧ್ಯವಾಗುವುದಿಲ್ಲ. ತೊಂದರೆಯಾಗುತ್ತಿರುತ್ತದೆ, ಸಮಯವೂ ಹಿಡಿಯುತ್ತದೆ. ವಾಯುಮಂಡಲದಲ್ಲಿ ಶಕ್ತಿ ಬರುವುದಿಲ್ಲ. ಅನೇಕ ಮಕ್ಕಳು 'ಅವರು ಇರುವುದೇ ಹೀಗೆ, ಹೀಗೆಯೇ ಇದ್ದಾರಲ್ಲವೇ? ಹಾಗಾಗಿ ಇದೇ ವೈಬ್ರೇಷನ್ ಇರುತ್ತದೆಯಲ್ಲವೇ?' ಎಂದು ಹೇಳುತ್ತಾರೆ. ತಂದೆಗೂ, 'ಬಾಬಾ ನಿಮಗೆ ಗೊತ್ತಿಲ್ಲ, ಆ ಆತ್ಮ ಇರುವುದೇ ಹೀಗೆ' ಎಂದು ಜ್ಞಾನವನ್ನು ಹೇಳುತ್ತಾರೆ. ಆದರೆ ತಂದೆಯು ಹೇಳುತ್ತಾರೆ – ಆ ಆತ್ಮ ಕೆಟ್ಟವರು, ರಾಂಗ್ ಆಗಿದ್ದಾರೆ, ಆಗಬಾರದ್ದಾಗಿತ್ತು, ಆದರೆ ಆ ಕೆಟ್ಟದ್ದನ್ನು ನಿಮ್ಮ ವೃತ್ತಿಯಲ್ಲಿ ಇಟ್ಟುಕೊಳ್ಳುವುದಕ್ಕೆ ತಂದೆಯು ಅನುಮತಿ ಕೊಟ್ಟಿದ್ದಾರೆಯೇ? ಎಂದು. ತಂದೆಯು ಅನುಮತಿಯನ್ನು ಕೊಟ್ಟಿಲ್ಲ ಎಂದು ಯಾರು ತಿಳಿಯುತ್ತೀರೋ ಅವರು ಒಂದು ಕೈಯನ್ನು ಮೇಲೆತ್ತಿ. ಟಿ.ವಿ.ಯಲ್ಲಿ ತೋರಿಸಿ. (ದಾದಿಗೆ) ನೀವು ನೋಡುತ್ತಿದ್ದೀರಲ್ಲವೆ? ಒಳ್ಳೆಯದು. ಕೈ ಎತ್ತಿದ್ದೇವೆಂದು ನೆನಪಿರಲಿ. ಡಬಲ್ ವಿದೇಶಿಗಳು ಕೈ ಎತ್ತಿದಿರಿ. ಬಾಪ್‌ದಾದಾರವರ ಟ.ವಿ.ಯಲ್ಲಂತೂ ಬರುತ್ತಿದೆ. ಎಲ್ಲಿಯವರೆಗೆ ಪ್ರತಿ ಬ್ರಾಹ್ಮಣ ಆತ್ಮದ ಬಗ್ಗೆ ಸ್ವಯಂನ ವೃತ್ತಿಯಲ್ಲಿ ಎಂತಹದ್ದೇ ಆತ್ಮದ ಬಗ್ಗೆ ನಕಾರಾತ್ಮಕ ವೈಬ್ರೇಷನ್ ಇದ್ದಲ್ಲಿ ವಿಶ್ವ ಕಲ್ಯಾಣಕ್ಕಾಗಿ ವೃತ್ತಿಯ ಮೂಲಕ ವಾಯುಮಂಡಲವನ್ನು ಹರಡಿಸಲು ಸಾಧ್ಯವಿಲ್ಲ. ಇದನ್ನು ಪಕ್ಕಾ ಆಗಿ ತಿಳಿದುಕೊಳ್ಳಿ, ಎಷ್ಟೇ ಸೇವೆ ಮಾಡಿ, ದಿನವೂ ಎಂಟೆಂಟು ಭಾಷಣ ಮಾಡಿ, ಯೋಗ ಶಿಬಿರ ಮಾಡಿಸಿ, ಅನೇಕ ಪ್ರಕಾರದ ಕೋರ್ಸ್ ಕೊಡಿಸಿ, ಆದರೆ ತಮ್ಮ ವೃತ್ತಿಯಲ್ಲಿ ಯಾರ ಬಗ್ಗೆಯೂ ಯಾವುದೇ ಹಳೆಯ ನಕಾರಾತ್ಮಕ ವೈಬ್ರೇಷನ್ ಇಟ್ಟುಕೊಳ್ಳಬೇಡಿ. ಒಳ್ಳೆಯದು. ಅವರು ಕೆಟ್ಟವರು, ಬಹಳ ತಪ್ಪು ಮಾಡುತ್ತಾರೆ, ಬಹಳ ಜನರಿಗೆ ದುಃಖ ಕೊಡುತ್ತಾರೆ, ಅಂದಾಗ ತಾವು ಅವರ ದುಃಖ ಕೊಡುವುದರಲ್ಲಿ ಜವಾಬ್ದಾರರಾಗುವ ಬದಲಿಗೆ ಅವರನ್ನು ಪರಿವರ್ತನೆ ಮಾಡಿಕೊಳ್ಳುವುದರಲ್ಲಿ ನೀವು ಸಹಯೋಗಿಗಳಾಗಲು ಸಾಧ್ಯವಿಲ್ಲವೇ? ದುಃಖ ಕೊಡುವುದರಲ್ಲಿ ಸಹಾಯಕರಾಗಬೇಡಿ, ಅವರನ್ನು ಪರಿವರ್ತನೆ ಮಾಡಿಕೊಳ್ಳುವುದರಲ್ಲಿ ಸಹಯೋಗಿಗಳಾಗಿರಿ. ಒಂದುವೇಳೆ ತಾವು ತಿಳಿದಂತೆ 'ಅವರು ಬದಲಾಗುವುದಿಲ್ಲ' ಎಂಬ ಯಾರಾದರೂ ಆತ್ಮ ಇದ್ದರೆ, ತಮ್ಮ ತೀರ್ಪಿನ ಪ್ರಕಾರ ಅವರು ಬದಲಾಗುವುದಿಲ್ಲವೆಂದು ತಿಳಿದುಕೊಳ್ಳಿ, ಆದರೆ ನಂಬರ್‌ವಾರ್ ಅಂತೂ ಆಗಿದ್ದಾರೆ ಅಲ್ಲವೇ? ಆದರೆ 'ಅವರು ಬದಲಾವಣೆ ಆಗುವುದೇ ಇಲ್ಲ' ಎಂದು ನೀವೇಕೆ ಯೋಚಿಸುತ್ತೀರಿ. ನೀವೇಕೆ ಜಡ್ಜ್‌ಮೆಂಟ್‌ನ್ನು (ತೀರ್ಪನ್ನು) ಕೊಡುತ್ತೀರಿ. ಬಾಬಾರವರು ಜಡ್ಜ್ ಆಗಿದ್ದಾರಲ್ಲವೇ? ತಾವೆಲ್ಲರೂ ಒಬ್ಬರು ಮತ್ತೊಬ್ಬರ ಜಡ್ಜ್ ಆಗಿಬಿಟ್ಟಿದ್ದೀರಿ. ಇವರು ಹೀಗಿದ್ದಾರೆ, ಇವರು ಹೀಗಿದ್ದಾರೆ ಎಂದು ತಂದೆಯೂ ನೋಡುತ್ತಿದ್ದಾರೆ. ಬ್ರಹ್ಮಾಬಾಬಾರವರನ್ನು ಪ್ರತ್ಯಕ್ಷವಾಗಿ ನೋಡಿದ್ದೀರಿ – ಪದೇ ಪದೇ ಎಂತಹದೇ ತಪ್ಪು ಮಾಡುವ ಆತ್ಮ ಆಗಿದ್ದರೂ, ಬಾಪ್‌ದಾದಾರವರು (ವಿಶೇಷವಾಗಿ ಸಾಕಾರ ರೂಪದಲ್ಲಿ ಬ್ರಹ್ಮಾಬಾಬಾರವರು) ಎಲ್ಲಾ ಮಕ್ಕಳಿಗೂ ನೆನಪು ಪ್ರೀತಿಯನ್ನು ಕೊಡುತ್ತಾ, ಎಲ್ಲಾ ಮಕ್ಕಳನ್ನೂ ಮಧುರ ಮಧುರ ಮಕ್ಕಳೆಂದು ಕರೆದರು. ನಾಲ್ಕಾರು ಮಕ್ಕಳು ಕಹಿ, ಉಳಿದವರೆಲ್ಲ ಸಿಹಿ ಎಂದು ಹೇಳಿದರೆ? ಆದರೂ ಇಂತಹ ಆತ್ಮಗಳ ಬಗ್ಗೆಯೂ ಸದಾ ದಯಾಹೃದಯಿಗಳಾಗಿದ್ದರು. ಕ್ಷಮೆಯ ಸಾಗರ ಆಗಿದ್ದರು. ಆದರೆ ತಾವು ತಮ್ಮ ವೃತ್ತಿಯಿಂದ ಯಾರ ಮೇಲಾದರೂ ಒಂದುವೇಳೆ ನಕಾರಾತ್ಮಕ ಭಾವನೆ ಇಟ್ಟುಕೊಂಡರೆ, ಇದರಿಂದ ತಮಗೇನು ಲಾಭವಿದೆ? ಒಂದುವೇಳೆ ತಮಗೆ ಇದರಲ್ಲಿ ಲಾಭವಿದ್ದರೆ ಅವಶ್ಯಕವಾಗಿ ಇಟ್ಟುಕೊಳ್ಳಿ. ಅನುಮತಿ ಇದೆ. ಒಂದುವೇಳೆ ಲಾಭವೇನು ಇಲ್ಲ, ತೊಂದರೆಯಾಗುತ್ತದೆ, ಆ ಮಾತು ಎದುರಿಗೆ ಬರುತ್ತದೆ ಎಂದಾಗ, ಬಾಪ್‌ದಾದಾ – ನೋಡುತ್ತಾರೆ. ಆ ಸಮಯದಲ್ಲಿ ಕನ್ನಡಿಯಲ್ಲಿ ತೋರಿಸಬೇಕಾಗಿದೆ. ಅಂದಾಗ ಯಾವ ಮಾತಿನಲ್ಲಿ ತಮಗೆ ಯಾವುದೇ ಲಾಭವಿಲ್ಲವೋ, ನಾಲೆಡ್ಜ್‌ಫುಲ್ ಆಗುವುದು ಬೇರೆ ಮಾತು, ಇದು ತಪ್ಪು, ಇದು ಸರಿ ಎಂಬ ನಾಲೆಡ್ಜ್ ಇದೆ. ನಾಲೆಡ್ಜ್‌ಫುಲ್ ಆಗುವುದು ತಪ್ಪಲ್ಲ, ಆದರೆ ವೃತ್ತಿಯಲ್ಲಿ ಧಾರಣೆ ಮಾಡುವುದು ತಪ್ಪಾಗಿದೆ. ಏಕೆಂದರೆ ತಮ್ಮಲ್ಲಿಯೇ ಮೂಡ್ ಆಫ್ ಆಗುವುದು, ವ್ಯರ್ಥ ಸಂಕಲ್ಪ ಮಾಡುವುದು, ಬಾಬಾರವರ ನೆನಪಿನ ಶಕ್ತಿ ಕಡಿಮೆಯಾಗುವುದು – ಇವೆಲ್ಲದರಿಂದ ನಷ್ಟವಾಗುತ್ತದೆ. ಪ್ರಕೃತಿಯನ್ನೂ ತಾವು ಪಾವನ ಮಾಡುವವರಾಗಿದ್ದೀರಿ. ಇವರಾದರೋ ಕೇವಲ ಆತ್ಮಗಳಾಗಿದ್ದಾರೆ. ವೃತ್ತಿ, ವೈಬ್ರೇಷನ್ ಮತ್ತು ವಾಯುಮಂಡಲ – ಮೂರರಲ್ಲಿಯೂ ಒಂದಕ್ಕೊಂದು ಸಂಬಂಧವಿದೆ. ವೃತ್ತಿಯಿಂದ ವೈಬ್ರೇಷನ್ ಉಂಟಾಗುತ್ತದೆ, ವೈಬ್ರೇಷನ್‌ನಿಂದ ವಾಯುಮಂಡಲ ತಯಾರಾಗುತ್ತದೆ. ಆದರೆ ವೃತ್ತಿಯು ಮೂಲವಾಗಿದೆ. ಬೇಗ ಬೇಗ ತಂದೆಯ ಪ್ರತ್ಯಕ್ಷತೆಯಾಗಬೇಕೆಂದು ತಾವು ತಿಳಿಯುವಿರಾದರೆ ಅದಕ್ಕೆ ತೀವ್ರಗತಿಯ ಪ್ರಯತ್ನವಾಗಿದೆ – ಎಲ್ಲರೂ ತಮಗಾಗಿ ಮತ್ತು ಬೇರೆಯವರಿಗಾಗಿ ಪಾಸಿಟಿವ್ ವೃತ್ತಿಯನ್ನು ಧಾರಣೆಮಾಡಿರಿ. ನಾಲೆಡ್ಜ್‌ಫುಲ್ ಬೇಕಾದರೆ ಆಗಿರಿ, ಆದರೆ ತಮ್ಮ ಮನಸ್ಸಿನಲ್ಲಿ ನಕಾರಾತ್ಮಕತೆಯನ್ನು ಧಾರಣೆ ಮಾಡಿಕೊಳ್ಳಬೇಡಿ. ನಕಾರಾತ್ಮಕತೆಯ ಅರ್ಥವಾಗಿದೆ – ಹೊಲಸು. ಈಗಿಂದೀಗಲೇ ವೃತ್ತಿಯನ್ನು ಶಕ್ತಿಶಾಲಿಯನ್ನಾಗಿ ಮಾಡಿಕೊಳ್ಳಿ. ಏಕೆಂದರೆ ವಾಣಿಯಿಂದ ಪರಿವರ್ತನೆ, ಶಿಕ್ಷಣದಿಂದ ಪರಿವರ್ತನೆ ಬಹಳ ನಿಧಾನವಾಗಿ ಆಗುತ್ತದೆ ಎಂದು ಎಲ್ಲರೂ ಅನುಭವ ಮಾಡಿದ್ದೀರಿ. ಪರಿವರ್ತನೆ ಆಗುತ್ತದೆ, ಆದರೆ ಬಹಳ

ನಿಧಾನವಾಗಿ ಆಗುತ್ತದೆ. ಒಂದುವೇಳೆ ತಾವು ತೀವ್ರವಾಗಿ ಆಗಲು ಬಯಸುವಿರಾದರೆ, ನಾಲೆಡ್ಜ್‌ಫುಲ್ ಆಗಿ, ಕ್ಷಮಾ ಸ್ವರೂಪರಾಗಿ, ಕರುಣಾಹೃದಯಿಗಳಾಗಿ, ಶುಭಭಾವನೆ ಶುಭಕಾಮನೆಯ ಮೂಲಕ ವಾಯುಮಂಡಲವನ್ನು ಪರಿವರ್ತನೆ ಮಾಡಿರಿ. ನೋಡಿ, ತಾವೆಲ್ಲರೂ ಪ್ರತ್ಯಕ್ಷವಾಗಿ ನೋಡಿದ್ದೀರಿ – ಮಧುಬನದಲ್ಲಿ ಯಾರೇ ಬಂದರೂ, ಬಹಳ ಹೆಚ್ಚಾದ ಪ್ರಭಾವ ಯಾವ ಮಾತಿನಿಂದ ಉಂಟಾಗುತ್ತದೆ? ವಾಯುಮಂಡಲದಿಂದ. ಇಲ್ಲಿ ಎಲ್ಲರೂ ನಂಬರ್‌ವಾರ್ ಆಗಿದ್ದರೂ ಸಹ ಬ್ರಹ್ಮಾಬಾಬಾರವರ ಕರ್ಮಭೂಮಿಯಾಗಿದೆ, ಬಾಪ್‌ದಾದಾರವರ ವರದಾನಿ ಭೂಮಿಯಾಗಿದೆ. ಅದು ವಾಯುಮಂಡಲವನ್ನು ಪರಿವರ್ತನೆ ಮಾಡಿಬಿಡುತ್ತದೆ. **(24–02–2002)**

ಹೀಗೆಯೇ ಡ್ರಾಮಾದಲ್ಲೂ ಪೂರ್ತಿ ನಿಶ್ಚಯವಿರಬೇಕು. ಸಫಲತೆ ಮತ್ತು ಸಮಸ್ಯೆ – ಎರಡೂ ಪ್ರಕಾರದ ಮಾತುಗಳು ಡ್ರಾಮಾದಲ್ಲಿ ಬರುತ್ತದೆ. ಆದರೆ ಸಮಸ್ಯೆಯ ಸಮಯದಲ್ಲಿ ಸಮಾಧಾನ ಸ್ವರೂಪರಾಗುವುದು ನಿಶ್ಚಯ ಬುದ್ಧಿಯ ಗುರುತಾಗಿದೆ. ಸಮಸ್ಯೆಯನ್ನು ಒಂದು ಸೆಕೆಂಡ್‌ನಲ್ಲಿ ಸಮಾಧಾನ ಸ್ವರೂಪದ ಮೂಲಕ ಪರಿವರ್ತನೆ ಮಾಡಿಬಿಡಬೇಕು. ಸಮಸ್ಯೆಯ ಕೆಲಸವಾಗಿದೆ – ಬರುವುದು. ನಿಶ್ಚಯ ಬುದ್ಧಿ ಆತ್ಮದ ಕೆಲಸವಾಗಿದೆ – ಸಮಾಧಾನ ಸ್ವರೂಪದಿಂದ ಸಮಸ್ಯೆಯನ್ನು ಪರಿವರ್ತನೆ ಮಾಡುವುದು. ಏಕೆ? ತಾವು ಪ್ರತಿಯೊಬ್ಬರೂ  ಬ್ರಾಹ್ಮಣ ಜನ್ಮ ತೆಗೆದುಕೊಳ್ಳುವಾಗ ಮಾಯೆಗೆ ಚಾಲೆಂಜ್ ಮಾಡಿದ್ದೀರಿ (ಸವಾಲು ಹಾಕಿದ್ದೀರಿ). ಮಾಡಿದ್ದೀರಲ್ಲವೇ ಅಥವಾ ಮರೆತು ಬಿಟ್ಟಿದ್ದೀರಾ? ನಾವು ಮಾಯಾಜೀತರಾಗುವವರಾಗಿದ್ದೇವೆ ಎಂಬುದು ಚಾಲೆಂಜ್ ಆಗಿದೆ. ಸಮಸ್ಯೆಯ ಸ್ವರೂಪವು ಮಾಯೆಯ ಸ್ವರೂಪವಾಗಿದೆ. ಸವಾಲು ಹಾಕಿದ್ದೀರೆಂದ ಮೇಲೆ ಮಾಯೆ ಎದುರಿಸುತ್ತದೆಯಲ್ಲವೇ? ಅದು ಭಿನ್ನ ಭಿನ್ನ ಸಮಸ್ಯೆಯ ರೂಪದಲ್ಲಿ ತಮ್ಮ ಸವಾಲನ್ನು ಪೂರ್ತಿ ಮಾಡಿಸುವುದಕ್ಕಾಗಿ ಬರುತ್ತದೆ. ತಾವು ನಿಶ್ಚಯ ಬುದ್ಧಿ ವಿಜಯೀ ಸ್ವರೂಪದಿಂದ ಪಾರಾಗಬೇಕಾಗಿದೆ. ಏಕೆ? ನಥಿಂಗ್ ನ್ಯೂ. ಎಷ್ಟು ಸಲ ವಿಜಯಿಗಳಾಗಿದ್ದೀರಿ? ಈಗ ಸಂಗಮ ಯುಗದಲ್ಲಿ ಒಂದು ಸಲ ಮಾತ್ರ ವಿಜಯಿಯಾಗಿದ್ದೀರೋ ಅಥವಾ ಅನೇಕ ಸಲ ವಿಜಯಿಗಳಾಗಿರುವುದನ್ನು ರಿಪೀಟ್ (ಪುನರಾವರ್ತನೆ) ಮಾಡುತ್ತಿದ್ದೀರೋ? ಆದ್ದರಿಂದ ಸಮಸ್ಯೆ ತಮಗೆ ಹೊಸದೇನು ಅಲ್ಲ. ನಥಿಂಗ್ ನ್ಯೂ. ಅನೇಕ ಸಲ ವಿಜಯಿಗಳಾಗಿದ್ದೀರಿ, ಆಗುತ್ತಿದ್ದೀರಿ ಮತ್ತು ಮುಂದೆಯೂ ಆಗುತ್ತಾ ಇರುತ್ತೀರಿ. ಇದೇ ಡ್ರಾಮಾದಲ್ಲಿ ನಿಶ್ಚಯ ಬುದ್ಧಿ ವಿಜಯೀ ಆಗಿದೆ. **(14–11–2002)**

ತಂದೆ ನಿಮಗಾಗಿ ಉಡುಗೊರೆ ತಂದಿದ್ದಾರೆ. ಯಾವ ಉಡುಗೊರೆಯನ್ನು ತಂದಿದ್ದಾರೆ? ಮನೋಹರವಾದ ಪ್ರಪಂಚ, ಸತೋಪ್ರಧಾನ ಪ್ರಪಂಚದ ಉಡುಗೊರೆಯನ್ನು ತಂದಿದ್ದಾರೆ. ಹಾಗಾದರೆ ನಿಶ್ಚಯವಿದೆಯೇ? ನಿಶ್ಚಯದ ಗುರುತು ಆತ್ಮಿಕ ನಶೆಯಾಗಿದೆ. ಎಷ್ಟೆಷ್ಟು ತಾವು ರಾಜ್ಯದ ಸಮೀಪ ಬರುತ್ತೀರೋ,  ಮನೆಯ ಸಮೀಪ ಬರುತ್ತೀರೋ, ತಮ್ಮ ರಾಜ್ಯದ ಸಮೀಪವೂ ಬರುತ್ತೀರೋ, ಪದೇ ಪದೇ ತಮ್ಮ ಸ್ವೀಟ್ ಹೋಮ್ (ಸಿಹಿಯಾದ ಮನೆ) ಮತ್ತು ತಮ್ಮ ಸ್ವೀಟ್ (ಸಿಹಿಯಾದ) ರಾಜ್ಯದ ಸ್ಮೃತಿ ಸ್ಪಷ್ಟವಾಗಿ ಬರಬೇಕಾಗಿದೆ. ಇದು ಸಮೀಪ ಬರುವ ಗುರುತಾಗಿದೆ. ತಮ್ಮ ಮನೆ, ತಮ್ಮ ರಾಜ್ಯ ಇವು ಸ್ಪಷ್ಟವಾಗಿ ಸ್ಮೃತಿಯಲ್ಲಿ ಬರಲಿ, ಮೂರನೇ ಕಣ್ಣಿನ ಮೂಲಕ ಸ್ಪಷ್ಟವಾಗಿ ಕಾಣಬೇಕು. ಈ ದಿನ ಇದು,  ನಾಳೆ ಇದು ಎಂದು ಅನುಭವವಾಗಬೇಕು. ಎಷ್ಟು ಸಲ ಪಾತ್ರವನ್ನು ಪೂರ್ತಿ ಮಾಡಿ ತಮ್ಮ ಮನೆ ಮತ್ತು ತಮ್ಮ ರಾಜ್ಯಕ್ಕೆ ಹೋಗಿದ್ದೀರಾ, ನೆನಪಿಗೆ ಬರುತ್ತದೆಯಲ್ಲವೇ? ಈಗ ಪುನಃ ಹೋಗಬೇಕಾಗಿದೆ. ಡಬಲ್ ವಿದೇಶಿಯರಿಗೆ ಸ್ಪಷ್ಟವಾಗಿ ನೆನಪಾಗುತ್ತದೆಯೇ ಅಥವಾ ಸೆಳೆಯಬೇಕಾಗಿದೆಯೇ? ಏನಾಗುತ್ತದೋ, ಹೇಗಾಗುತ್ತದೋ ಗೊತ್ತಿಲ್ಲ ಎಂದು ಸೆಳೆಯಬೇಕಾಗಿದೆಯೇ ಅಥವಾ ಸ್ಪಷ್ಟವಾಗಿದೆಯೇ? ಸ್ಪಷ್ಟವಾಗಿದೆಯಲ್ಲವೇ? ನೆನಪಿದೆಯೇ? ಸ್ಪಷ್ಟವಾಗಿದೆಯೇ?

ಡಬಲ್ ವಿದೇಶಿಯರಿಗೆ ಒಂದು ಸೆಕೆಂಡಿನಲ್ಲಿ ಯಾವುದೇ ವ್ಯರ್ಥ ಮಾತು, ನಕಾರಾತ್ಮಕ ಮಾತು, ಕಳೆದುಹೋದ ಮಾತು – ಇವುಗಳಿಗೆ ಮನಸ್ಸಿನಿಂದ ಬಿಂದು ಇಡಲು ಬರುತ್ತದೆಯೇ? ಡಬಲ್ ವಿದೇಶಿಗಳು ಯಾರು ತಿಳಿಯುತ್ತೀರ – ಎಂತಹುದೆ ಕಳೆದು ಹೋದ ಮಾತು, ಒಳ್ಳೆಯ ಮಾತನ್ನಂತೂ ಮರೆಯ ಬೇಕಾಗಿಲ್ಲ, ಮರೆಯಬೇಕು ಎಂದರೆ ವ್ಯರ್ಥ ಮಾತುಗಳನ್ನೇ ಮರೆಯಬೇಕು. ಯಾವುದೇ ಮಾತನ್ನು ಮರೆಯಲು ಬಯಸಿದರೆ, ಅದಕ್ಕೆ ಒಂದು ಸೆಕೆಂಡ್‌ನಲ್ಲಿ ಬಿಂದು ಇಡಲು ಸಾಧ್ಯವೇ? ಯಾವ ವಿದೇಶಿಯರು ಬಿಂದು ಇಡಬಲ್ಲಿರೋ, ಅವರು ನೇರವಾಗಿ, ಉದ್ದವಾಗಿ ಕೈ ಮೇಲೆತ್ತಿ. ಶುಭಾಶಯಗಳು. ಒಳ್ಳೆಯದು. ಯಾರು ಒಂದು ಸೆಕೆಂಡಿನಲ್ಲಿ ಅಲ್ಲ, ಒಂದು ಗಂಟೆ ಹಿಡಿಯುತ್ತದೆ, ಸೆಕೆಂಡ್ ಬಹಳ ಕಡಿಮೆ ಅವಧಿ, ಗಂಟೆಯ ನಂತರವೇ ಬಿಂದು ಇಡಲು ಸಾಧ್ಯ ಎಂದು ಭಾವಿಸುವಿರೋ ಅವರೂ ಕೈಯೆತ್ತಿ. ನೋಡಿದಿರಾ? ವಿದೇಶಿಯರು ಬಹಳ ಒಳ್ಳೆಯವರು.

ಭಾರತವಾಸಿಗಳು, ಯಾರು ಒಂದು ಗಂಟೆಯಲ್ಲ, ಅರ್ಧ ದಿನದಲ್ಲಿ ಬಿಂದು ಇಡಬಹುದು ಎಂದು ಭಾವಿಸುವವರೋ ಅವರು ಕೈಯೆತ್ತಿ. (ಯಾರೂ ಕೈ ಎತ್ತಲಿಲ್ಲ) ಇದಂತೂ ನಿಜ. ಬಾಪ್‌ದಾದಾರವರಿಗೆ ಗೊತ್ತಿದೆ. ಬಾಪ್‌ದಾದಾರವರು ನೋಡುತ್ತಿರುತ್ತಾರೆ. ಕೈ ಎತ್ತುವುದಿಲ್ಲ. ಆದರೆ ಅರ್ಧ ದಿನ ಹಿಡಿಯುತ್ತದೆ. ಆದರೆ ತಿಳಿಯಿರಿ – ಅರ್ಧ ದಿನವಾಗಲಿ, ಒಂದು ಗಂಟೆಯಾಗಲಿ, ಒಂದುವೇಳೆ ತಮಗೆ ಅಡ್ವಾನ್ಸ್ ಪಾರ್ಟಿಯಿಂದ ನಿಮಂತ್ರಣ ಬಂದು ಬಿಟ್ಟರೆ ಆಗ ಫಲಿತಾಂಶ ಏನಾಗುತ್ತದೆ? ಅಂತ್ಯ ಮತಿ ಸೋ ಗತಿ ಏನಾಗುತ್ತದೆ? ತಿಳುವಳಿಕೆಯುಳ್ಳವರು ಆಗಿದ್ದೀರಲ್ಲವೆ? **(28–02–2003)**

ಕರ್ಮದಲ್ಲಿ ಯಾವಾಗ ಬರುತ್ತೀರೋ ಆಗ ಈ ಸೃಷ್ಟಿ ರಂಗಮಂಟಪದಲ್ಲಿ ಕರ್ಮ ಮಾಡುವುದಕ್ಕಾಗಿ ಬಂದಿದ್ದೀರಿ. ಈ ಸೃಷ್ಟಿ ಮಂಟಪವು ಡ್ರಾಮಾ ಆಗಿದೆ. ಡ್ರಾಮಾದಲ್ಲಿ ಯಾವ ಕರ್ಮ ಮಾಡಿದಿರೋ, ಮುಗಿದು ಹೋಯಿತೋ, ಅದಕ್ಕೆ ಫುಲ್‌ಸ್ಟಾಪ್ (ಪೂರ್ಣ ವಿರಾಮ) ಹಾಕಿದ್ದೀರಾ? ಬಿಂದು. ಆದ್ದರಿಂದ ಮೂರು ಬಿಂದುವನ್ನು ಸದಾ ನೆನಪಿನಲ್ಲಿಡಿ. ಎಲ್ಲಾ ಚಮತ್ಕಾರವನ್ನು ನೋಡಿರಿ. ಈಗೀನ ಪ್ರಪಂಚದಲ್ಲಿ ಎಲ್ಲಕ್ಕಿಂತ ಹೆಚ್ಚಿನ ಮಹತ್ವ ಯಾವುದಕ್ಕಿದೆ? ಹಣಕ್ಕೆ. ಹಣಕ್ಕೆ ಬಹಳ ಮಹತ್ವ ಇದೆಯಲ್ಲವೇ? ತಂದೆ ತಾಯಿಗಳಿಗೂ ಏನೂ ಮಹತ್ವವಿಲ್ಲ. ಹಣವೇ ಸರ್ವಸ್ವವಾಗಿದೆ. ಅದರಲ್ಲೂ ನೋಡಿ, ಒಂದರ ಮುಂದೆ ಸೊನ್ನೆ ಹಾಕಿದರೆ ಏನಾಗಿಬಿಡುತ್ತದೆ? ಹತ್ತಾಗುತ್ತದೆ. ಎರಡನೇ ಬಿಂದು ಹಾಕಿ, ನೂರಾಗುತ್ತದೆ. ಮೂರನೇ ಸೊನ್ನೆ ಹಾಕಿ ಸಾವಿರ ಆಗಿಬಿಡುತ್ತದೆ. ಆದ್ದರಿಂದ ಬಿಂದುವಿನ ಚಮತ್ಕಾರ ಇದೆಯಲ್ಲವೇ? ಹಣದಲ್ಲೂ ಬಿಂದುವಿನ ಚಮತ್ಕಾರವಿದೆ ಮತ್ತು ಶ್ರೇಷ್ಠ ಆತ್ಮ ಆಗುವುದರಲ್ಲಿಯೂ ಬಿಂದುವಿನ ಚಮತ್ಕಾರವಿದೆ ಮತ್ತು ಮಾಡಿ ಮಾಡಿಸುವವರೂ ಬಿಂದುವಾಗಿದ್ದಾರೆ. ಹಾಗಾದರೆ ಎಲ್ಲಾ ಕಡೆಯಲ್ಲೂ ಯಾವುದಕ್ಕೆ ಮಹತ್ವವಿದೆ? ಬಿಂದುವಿನ ಮಹತ್ವವಲ್ಲವೇ? ಬಿಂದುವನ್ನು ನೆನಪಿಡಿ ಮತ್ತು ವಿಸ್ತಾರದಲ್ಲಿ ಹೋಗಬೇಡಿ. ಬಿಂದುವನ್ನು ನೆನಪು ಮಾಡಬಹುದಲ್ಲವೇ? ಬಿಂದು ಆಗಿ, ಬಿಂದುವನ್ನು ನೆನಪು ಮಾಡಿ ಮತ್ತು ಬಿಂದುವನ್ನು ಇಡಿ. ಇದೇ ಪುರುಷಾರ್ಥವಾಗಿದೆ. **(17–02–2004)**

ಬಾಪ್‌ದಾದಾರವರು ಈಗ ಸ್ವಪರಿವರ್ತನೆಯ ವೇಗದ ತೀವ್ರತೆಯನ್ನು ನೋಡಲು ಇಚ್ಛಿಸುತ್ತಾರೆ. ಬಾಪ್‌ದಾದಾರವರು ಏನು ಬಯಸುತ್ತಾರೆ ಎಂದು ಎಲ್ಲರೂ ಕೇಳುತ್ತೀರಲ್ಲವೇ? ಪರಸ್ಪರ ಆತ್ಮಿಕ ವಾರ್ತಾಲಾಪ ಮಾಡುತ್ತೀರಲ್ಲವೆ, ಆಗ ಪರಸ್ಪರ ಬಾಪ್‌ದಾದಾರವರು ಏನು ಬಯಸುತ್ತಾರೆ ಎಂದು ಕೇಳುತ್ತೀರಲ್ಲವೇ? ಒಂದು ಸೆಕೆಂಡ್‌ನಲ್ಲಿ ಬಿಂದು ಇಡಲಿ ಎಂದು ಬಾಪ್‌ದಾದಾ ರವರು ಬಯಸುತ್ತಾರೆ. ಹೇಗೆ ಕಾಗದದಲ್ಲಿ ಬಿಂದು ಇಡುತ್ತೀರಲ್ಲವೇ? ಅದಕ್ಕಿಂತ ವೇಗವಾಗಿ, ಪರಿವರ್ತನೆಯಲ್ಲಿ, ಯಾವುದು ಯಥಾರ್ಥವಲ್ಲವೋ ಅದರಲ್ಲಿ ಬಿಂದು ಇಡಿ. ಬಿಂದು ಇಡಲು ಬರುತ್ತದೆಯಲ್ಲವೇ? ಬರುತ್ತದೆಯಲ್ಲವೇ? ಆದರೆ ಆಗಾಗ ಪ್ರಶ್ನಾರ್ಥಕ ಚಿಹ್ನೆಯಾಗಿಬಿಡುತ್ತದೆ. ಬಿಂದು ಇಡುತ್ತೀರಿ ಆದರೆ ಪ್ರಶ್ನಾರ್ಥಕ ಚಿಹ್ನೆಯಾಗಿ ಬಿಡುತ್ತದೆ. ಇದೇಕೆ? ಇದೇನು? ಇದು ಏಕೆ? ಮತ್ತು ಇದು ಏನು?..... ಇದು ಬಿಂದುವನ್ನು ಪ್ರಶ್ನಾರ್ಥಕ ಚಿಹ್ನೆಯಾಗಿ ಮಾಡಿಬಿಡುತ್ತದೆ. ಬಾಪ್‌ದಾದಾರವರು ಮೊದಲೂ ಹೇಳಿದ್ದರು – ವೈ ವೈ (ಏಕೆ ಏಕೆ) ಎನ್ನಬೇಡಿ, ಏನು ಮಾಡಬೇಕು? ಫ್ಲೈ (ಹಾರುವುದು) ಅಥವಾ ವಾಹ್ ವಾಹ್ ಎನ್ನಬೇಕು. ಹಾರಬೇಕು ಅಥವಾ ವಾಹ್ ವಾಹ್ ಎನ್ನಬೇಕು. ವೈ ವೈ ಎಂದು ಹೇಳಬೇಡಿ. ವೈ ವೈ ಎನ್ನುವುದು ಬೇಗ ಬರುತ್ತದೆಯಲ್ಲವೇ? ಬರುತ್ತದೆಯೇ? ಯಾವಾಗ ವೈ ಬರುತ್ತದೆಯೋ ಆಗ ಅದನ್ನು ವಾಹ್ ವಾಹ್ ಎಂದು ಪರಿವರ್ತನೆ ಮಾಡಿಬಿಡಿ. ಯಾರು ಏನೇ ಮಾಡಿದರೂ, ಏನೇ ಹೇಳಿದರೂ ವಾಹ್ ಡ್ರಾಮಾ ವಾಹ್! ಇವರೇಕೆ ಹೀಗೆ ಮಾಡುತ್ತಾರೆ? ಹೀಗೇಕೆ ಹೇಳುತ್ತಾರೆ? ಎಂದಲ್ಲ. ಇವರು ಮಾಡಿದರೆ ನಾನೂ ಮಾಡುತ್ತೇನೆ ಎಂದಲ್ಲ. **(15–10–2004)**

ಈಗ ಎಲ್ಲರೂ ಮುಕ್ತಿಯನ್ನು ಬಯಸುತ್ತಾರೆ, ಬಿಡಿಸಿ, ಬಿಡಿಸಿ ಎಂದು ಕೂಗಿಕೊಳ್ಳುತ್ತಿದ್ದಾರೆ. ಅಂದಾಗ ಈ ನಾಲ್ಕು ಮಾತುಗಳನ್ನು ಒಳ್ಳೆಯ ಪರ್ಸೆಂಟ್ (%) ನಲ್ಲಿ ಜೀವನದಲ್ಲಿ ತರುವುದು ಎಂದರೆ ತೀವ್ರ ಪುರುಷಾರ್ಥಿ ಆಗುವುದಾಗಿದೆ. ಆಗ ಬಾಬಾರವರು 'ವಾಹ್ ಮಕ್ಕಳೇ ವಾಹ್' ಎಂದು ಹೇಳುತ್ತಾರೆ. ನೀವೂ ಸಹ 'ವಾಹ್ ಬಾಬಾ ವಾಹ್', 'ವಾಹ್ ಡ್ರಾಮಾ ವಾಹ್', 'ವಾಹ್ ಪುರುಷಾರ್ಥವೇ ವಾಹ್' ಎಂದು ಹೇಳುತ್ತೀರಿ. ಆದರೆ ಈಗ ಏನು ಮಾಡುತ್ತೀರೆಂದು ತಿಳಿದಿದೆಯೇ? ಕೆಲವೊಮ್ಮೆ 'ವಾಹ್' ಎನ್ನುತ್ತೀರಿ, ಕೆಲವೊಮ್ಮೆ 'ವೈ' ಎನ್ನುತ್ತೀರಿ. ವಾಹ್‌ಗೆ ಬದಲಿಗೆ ವೈ (ಏಕೆ) ಮತ್ತು ವಾಹ್ ಬದಲು ಹಾಯ್ (ಅಯ್ಯೋ) ಎಂಬುದಾಗಿ ಬಿಡುತ್ತದೆ. ಆದ್ದರಿಂದ 'ವೈ' (ಏಕೆ) ಅಲ್ಲ, 'ವಾಹ್'. ನಿಮಗೂ ಸಹ ಯಾವುದು ಇಷ್ಟವಾಗುತ್ತದೆ. 'ವಾಹ್' ಇಷ್ಟವಾಗುವುದೋ ಅಥವಾ 'ವೈ' ಇಷ್ಟವಾಗುವುದೋ? ಯಾವುದು ಇಷ್ಟವಾಗುತ್ತದೆ. 'ವಾಹ್!' ಎಂದಿಗೂ 'ವೈ' ಎನ್ನುವುದಿಲ್ಲತಾನೆ? ತಪ್ಪಾಗಿ ಬಂದು ಬಿಡುತ್ತದೆ. **(31–12–2004)**

ಒಂದು ಸೆಕೆಂಡ್‌ನಲ್ಲಿ ಮನಸ್ಸಿನ ಮಾಲೀಕರಾಗಿ, ಮನಸ್ಸಿಗೆ ಆರ್ಡರ್ ಮಾಡಬಲ್ಲಿರಾ? ಮಾಡಬಲ್ಲಿರಾ? ಮನಸ್ಸನ್ನು ಏಕಾಗ್ರ ಮಾಡಬಲ್ಲಿರಾ? ಫುಲ್‌ಸ್ಟಾಪ್ ಹಾಕಬಲ್ಲಿರಾ? ಫುಲ್ ಸ್ಟಾಪ್ ಹಾಕುತ್ತೀರಿ ಆದರೆ ಪ್ರಶ್ನಾರ್ಥಕ ಚಿಹ್ನೆ ಬಂದುಬಿಡುತ್ತದೆಯೇ? ಏಕೆ, ಏನು, ಹೇಗೆ, ಇದೇನು, ಅದೇನು ಎಂಬ ಆಶ್ಚರ್ಯದ ಚಿಹ್ನೆಯೂ ಬೇಡ. ಫುಲ್ ಸ್ಟಾಪ್. ಒಂದು ಸೆಕೆಂಡ್‌ನಲ್ಲಿ ಪಾಯಿಂಟ್ ಆಗಿಬಿಡಿ. ಬೇರೆ ಇನ್ನಾವ ಪರಿಶ್ರಮವೂ ಇಲ್ಲ, ಕೇವಲ ಒಂದು 'ಪಾಯಿಂಟ್' (ಬಿಂದು) ಎಂಬ ಶಬ್ದವನ್ನು ಅಭ್ಯಾಸದಲ್ಲಿ ತನ್ನಿರಿ. ಪಾಯಿಂಟ್ ಸ್ವರೂಪರಾಗಿರಿ, ವ್ಯರ್ಥಕ್ಕೆ ಪಾಯಿಂಟ್ ಇಟ್ಟುಬಿಡಿ. ಇನ್ನಾವ ಕಷ್ಟವೂ ಇಲ್ಲ. ಪಾಯಿಂಟ್ ನೆನಪಿಡಿ, ಪಾಯಿಂಟ್ ಇಡಿ, ಪಾಯಿಂಟ್ ಆಗಿಬಿಡಿ. ಈ ಅಭ್ಯಾಸವನ್ನು ಇಡೀ ದಿನದಲ್ಲಿ ಎಷ್ಟು ಬಿಜಿಯಾಗಿದ್ದರೂ ಮಧ್ಯೆ ಮಧ್ಯೆ ಇದನ್ನು ಪ್ರಯತ್ನ ಮಾಡಿ. ಒಂದು ಸೆಕೆಂಡ್‌ನಲ್ಲಿ ಪಾಯಿಂಟ್ ಆಗಬಲ್ಲಿರಾ? ಒಂದು ಸೆಕೆಂಡ್‌ನಲ್ಲಿ ಪಾಯಿಂಟ್ ಇಡಬಲ್ಲಿರಾ? ಯಾವಾಗ ಈ ಅಭ್ಯಾಸವಾಗುವುದೋ, ಪದೇ ಪದೇ ಅಭ್ಯಾಸ ಮಾಡಿದಾಗಲೇ ಮುಂಬರುವ ಅಂತಿಮ ಸಮಯದಲ್ಲಿ ಪೂರ್ತಿ ಪಾಯಿಂಟ್ಸ್ (ಅಂಕಗಳನ್ನು) ತೆಗೆದುಕೊಳ್ಳಬಹುದು. ಪಾಸ್ ವಿತ್ ಆನರ್ ಆಗಬಹುದಾಗಿದೆ. ಇದೇ ಪರಮಾತ್ಮನ ವಿದ್ಯಾಭ್ಯಾಸ, ಇದೇ ಪರಮಾತ್ಮನ ಪಾಲನೆ ಆಗಿದೆ. **(20–02–2005)**

ಯಾವುದೇ ಹೊಸ ಮಾತಲ್ಲ, ಎಷ್ಟು ಕಲ್ಪ, ಎಷ್ಟು ಸಲ ಸಂಪೂರ್ಣ ರಾಗಿದ್ದೀರಿ? ನೆನಪಿದೆಯೇ? ಯಾವುದೇ ಹೊಸ ಮಾತಲ್ಲ. ಕಲ್ಪ ಕಲ್ಪವು ಆಗಿದ್ದಿರಿ, ಮಾಡಿ ಮಾಡಲ್ಪಟ್ಟಿದೆ, ಆಗಿದೆ, ಕೇವಲ ರಿಪೀಟ್ (ಪುನರಾವರ್ತನೆ) ಮಾಡಬೇಕಾಗಿದೆ. ಆಗಿರುವುದನ್ನೇ ಮಾಡಬೇಕಾಗಿದೆ. ಆದ್ದರಿಂದಲೇ ಮಾಡಿ ಮಾಡಲ್ಪಟ್ಟ ಡ್ರಾಮಾ ಎಂದು ಹೇಳಲಾಗುತ್ತದೆ. ಮಾಡಲ್ಪಟ್ಟಿದೆ, ಈಗ ಕೇವಲ ರಿಪೀಟ್ ಮಾಡಬೇಕಾಗಿದೆ ಅಂದರೆ ಮಾಡಬೇಕಾಗಿದೆ. **(07–03–2005)**

ಸದಾ ಸಂಕಲ್ಪವನ್ನು ಮಾಡುತ್ತಾ ಈ ಸಂಕಲ್ಪವನ್ನು ಇಮರ್ಜ್ (ಹೊರಗೆ ತರುವುದು) ಮಾಡಿ, ಮರ್ಜ್ (ಅಡಗಿಸಿಕೊಳ್ಳುವುದು) ಅಲ್ಲ, ಇಮರ್ಜ್. 'ನಾನು ಮಾಡಲೇ ಬೇಕು, ಆಗಲೇ ಬೇಕು, ಆಗಿಯೇ ಆಗಬೇಕು, ಆಗಿಯೇ ಬಿಟ್ಟಿದೆ' ಎಂದು ಇಮರ್ಜ್ ಮಾಡಿಕೊಳ್ಳಿ. ಇದಕ್ಕೇ 'ನಿಶ್ಚಯ ಬುದ್ಧಿ ವಿಜಯಂತೀ' ಎಂದು ಹೇಳಲಾಗುತ್ತದೆ. ವಿಜಯದ ಡ್ರಾಮಾ ಆಗಿಯೇ ಬಿಟ್ಟಿದೆ. ಕೇವಲ ರಿಪೀಟ್ ಮಾಡಬೇಕಾಗಿದೆ. ಮಾಡಿ ಮಾಡಲ್ಪಟ್ಟಿರುವ ಡ್ರಾಮಾ ಆಗಿದೆ. ಮಾಡಲ್ಪಟ್ಟಿದೆ, ರಿಪೀಟ್ ಮಾಡಿ ಮಾಡಬೇಕಾಗಿದೆ. ಕಷ್ಟವೇ? ಒಮ್ಮೊಮ್ಮೆ ಕಷ್ಟವೆನಿಸುತ್ತದೆ. ಏಕೆ ಕಷ್ಟವಾಗುತ್ತದೆ? ನಿಮಗೆ ನೀವೇ ಸಹಜವಾದುದ್ದನ್ನು ಕಷ್ಟವನ್ನಾಗಿ ಮಾಡಿಬಿಡುತ್ತೀರಿ. ಚಿಕ್ಕ ತಪ್ಪನ್ನು ಮಾಡುತ್ತೀರಿ – ಯಾವ ತಪ್ಪು ಮಾಡುತ್ತೀರೆಂದು ತಿಳಿದಿದೆಯೇ? ಬಾಪ್‌ದಾದಾರವರಿಗೆ ಆ ಸಮಯದಲ್ಲಿ ಮಕ್ಕಳ ಮೇಲೆ ಬಹಳ ದಯೆ ಬರುತ್ತದೆ, ಪ್ರೀತಿ ಬರುತ್ತದೆ. ಯಾವ ಪ್ರೀತಿ ಬರುತ್ತದೆ? ಒಂದು ಕಡೆ 'ಬಾಬಾರವರು ನಮ್ಮ ಕಂಬೈಂಡ್ ಆಗಿದ್ದಾರೆ' ಎಂದು ಹೇಳುತ್ತೀರಿ. ಕಂಬೈಂಡ್ ಆಗಿದ್ದಾರೆಯೇ? ಕಂಬೈಂಡ್ ಆಗಿದ್ದಾರೆಯೇ? ಕೇವಲ ಜೊತೆ ಅಲ್ಲ, ಕಂಬೈಂಡ್. ಕಂಬೈಂಡ್ ಆಗಿದ್ದೀರಾ? ಡಬಲ್ ವಿದೇಶಿಯರು ಕಂಬೈಂಡ್ ಆಗಿದ್ದೀರಾ? ಹಿಂದೆ ಇರುವವರು ಕಂಬೈಂಡ್ ಆಗಿದ್ದೀರಾ? ಗ್ಯಾಲರಿಯಲ್ಲಿರುವವರು ಕಂಬೈಂಡ್ ಆಗಿದ್ದೀರಾ?

ಎಲ್ಲರೂ ಖುಷಿಯಾಗಿದ್ದೀರಾ? ತಯಾರಿ ಮಾಡಿಕೊಂಡಿದ್ದಕ್ಕಿಂತ ಹೆಚ್ಚು ಜನ ಬಂದಿದ್ದೀರಿ. (23,000 ಕ್ಕಿಂತ ಅಧಿಕ ಜನ ಬಂದಿದ್ದಾರೆ). ಪರವಾಗಿಲ್ಲ. ಹೆಚ್ಚಾಗಿ ಜನರು ಬಂದಾಗ ದಾದಿಯವರಿಗೆ ದೊಡ್ಡದಾಗಿ ಮಾಡಬೇಕೆನ್ನುವ ಸಂಕಲ್ಪ ಬರುತ್ತದೆಯಲ್ಲವೇ? ಪರವಾಗಿಲ್ಲ ಬರಲಿ. ಒಳ್ಳೆಯದು – ಹಾಲ್ ಅಂತೂ ಯಾವಾಗಲಾದರೂ ಚಿಕ್ಕದಾಗಲೇ ಬೇಕಲ್ಲವೇ? ಆಗಬೇಕಲ್ಲವೇ? ಮೊದಲನೇ ಲೈನ್‌ನವರು ಹೇಳಿ ಆಗಬೇಕಲ್ಲವೇ? ಆಗ ಮಾಡುತ್ತೀರಲ್ಲವೇ? ಡ್ರಾಮಾದಲ್ಲಿ ವೃದ್ಧಿ ಆಗಲೇಬೇಕಾಗಿದೆ. ಸೇವಾಧಾರಿಗಳು ಸುಸ್ತಾಗುವುದಿಲ್ಲವಲ್ಲವೇ? ಈಗ ಯಾರ ಸರದಿ ಆಗಿದೆ? ಗುಜರಾತಿನದು. **(25–03–2005)**

ಖಜಾನೆಗಳನ್ನು ಜಮಾ ಮಾಡಿಕೊಳ್ಳುವ ಸಹಜ ವಿಧಿಯನ್ನು ಬಾಪ್‌ದಾದಾರವರು ತಿಳಿಸಿದ್ದಾರೆ. ಯಾವೆಲ್ಲಾ ಅವಿನಾಶೀ ಖಜಾನೆಗಳಿವೆಯೋ, ಆ ಎಲ್ಲಾ ಖಜಾನೆಗಳನ್ನು ಪ್ರಾಪ್ತಿ ಮಾಡಿಕೊಳ್ಳುವ ವಿಧಿ 'ಬಿಂದು' ಆಗಿದೆ. ಹೇಗೆ ವಿನಾಶೀ ಖಜಾನೆಗಳಿಗೂ ಬಿಂದು ಇಡುತ್ತಾ ಹೋದಾಗ ಹೆಚ್ಚಾಗುತ್ತದೆ ಯಲ್ಲವೇ? ಅಂದಾಗ ಅವಿನಾಶಿ ಖಜಾನೆಗಳನ್ನು ಜಮಾ ಮಾಡಿಕೊಳ್ಳುವ ವಿಧಿ ಬಿಂದು ಇಡುವುದಾಗಿದೆ. ಮೂರು ಬಿಂದುಗಳಿವೆ. ಒಂದು – ನಾನು ಆತ್ಮ ಬಿಂದು, ತಂದೆಯೂ ಬಿಂದು ಮತ್ತು ಡ್ರಾಮಾದಲ್ಲಿ ಯಾವುದು ಕಳೆದು ಹೋಯಿತೋ ಅದು ಫುಲ್‌ಸ್ಟಾಪ್ ಅಂದರೆ ಬಿಂದು. ಹಾಗಾದರೆ ಬಿಂದು ಇಡಲು

ಬರುತ್ತದೆಯೇ? ಎಲ್ಲದಕ್ಕಿಂತ ಹೆಚ್ಚು ಸಹಜವಾದ ಚಿಹ್ನೆ ಯಾವುದು? ಬಿಂದು ಇಡುವುದು. ನಾನು ಆತ್ಮ ಬಿಂದು ಆಗಿದ್ದೇನೆ, ತಂದೆಯೂ ಬಿಂದುವಾಗಿದ್ದಾರೆ ಎಂಬ ಸ್ಮೃತಿಯಿಂದ ಖಜಾನೆಯು ಸ್ವತಃ ಜಮಾ ಆಗಿಬಿಡುತ್ತದೆ. ಬಿಂದುವನ್ನು ಒಂದು ಸೆಕೆಂಡ್‌ನಲ್ಲಿ ನೆನಪು ಮಾಡುವುದರಿಂದ ಎಷ್ಟು ಖುಷಿಯಾಗುತ್ತದೆ. ಈ ಎಲ್ಲ ಖಜಾನೆಗಳೂ ನಿಮ್ಮ ಬ್ರಾಹ್ಮಣ ಜೀವನದ ಅಧಿಕಾರವಾಗಿದೆ. ಏಕೆಂದರೆ ಮಕ್ಕಳಾಗುವುದು ಎಂದರೆ ಅಧಿಕಾರಿಗಳಾಗುವುದು.

**ದಾದಿಯರೊಂದಿಗೆ:** ಒಳ್ಳೆಯದು. ಎಲ್ಲರೂ ಆದಿ ರತ್ನಗಳಾಗಿದ್ದೀರಿ. ಆದಿ ರತ್ನಗಳಲ್ಲಿ ವಿಶೇಷತೆ ಇದೆ. ಎಲ್ಲಾ ರತ್ನಗಳನ್ನೂ ನೋಡಿ ಖುಷಿಯಾಗಿ ಬಿಡುತ್ತಾರೆ. ದಾದಿಯನ್ನು ಸಹ ಎಲ್ಲರೂ ನೆನಪು ಮಾಡಿಕೊಳ್ಳುತ್ತಿದ್ದಾರೆ. (ದಾದಿಜೀಯವರನ್ನು ವಿಶೇಷ ಚಿಕಿತ್ಸೆ ಮತ್ತು ತಪಾಸಣೆಗಾಗಿ ಬಾಂಬೆ ಹಾಸ್ಪಿಟಲ್‌ಗೆ 31ನೇ ಜನವರಿಯಂದು ಕರೆದುಕೊಂಡು ಹೋಗಿದ್ದಾರೆ ಮೋಹಿನಿ ಬೆಹನ್, ಮುನ್ನಿ ಬೆಹನ್, ನಿರ್ವೈರ್ ಬಾಯಿ, ಯೋಗಿನಿ ಬೆಹನ್ ಮುಂತಾದವರೆಲ್ಲರೂ ನೆನಪುಗಳನ್ನು ಕಳುಹಿಸಿದ್ದಾರೆ) ದೊಡ್ಡವರ ಮುಂದೆ ಏನಾದರೂ ಅನುಭವ ಬರುತ್ತದೆಯಲ್ಲವೇ? ನ್ಯಾರೇ (ಭಿನ್ನ) ಮತ್ತು ತಂದೆಯವರಿಗೆ ಪ್ಯಾರೇ (ಪ್ರಿಯ). ನ್ಯಾರೇ ಆಗಿದ್ದು ಚಿಕ್ಕ ಚಿಕ್ಕ ಮಾತುಗಳಲ್ಲಿ ಪೇಪರ್‌ನಲ್ಲಿ ಪಾಸ್ ಮಾಡಿದ ಉದಾಹರಣೆ ಆಗಿರುತ್ತಾರೆ. ಪೂರ್ತಿ 100% ಸಂಪನ್ನರಾಗಬೇಕು. ಏಕೆಂದರೆ ಮೊದಲನೇ ನಂಬರ್‌ನವರಲ್ಲಿ ಸ್ವಲ್ಪವೂ, ಅಂಶದಲ್ಲಿ ಅಂಶವೂ ಉಳಿಯಬಾರದು, ಎಲ್ಲವೂ ಇಲ್ಲಿಯೇ ಮುಗಿದು ಹೋಗಬೇಕು, ಏಕೆಂದರೆ ಇವರುಗಳ ಆಧಾರದಿಂದಲೇ ಹೊಸ ಪ್ರಪಂಚದ ರಾಜ್ಯವು ಸ್ಥಾಪನೆಯಾಗಬೇಕಾಗಿದೆ ಮತ್ತು ರಾಜ ಮನೆತನವು ಆಗಬೇಕಾಗಿದೆ. ಆದ್ದರಿಂದ ಅಂಶವನ್ನೂ ಭಸ್ಮ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಏನೇ ಆದರೂ ನ್ಯಾರಾಪನ್ (ಭಿನ್ನತನ) ಇರುತ್ತದೆ. ಸರ್ವಗುಣ ಸಂಪನ್ನ, ಸಂಪೂರ್ಣ ನಿರ್ವಿಕಾರಿ, ಮರ್ಯಾದಾ ಪುರುಷೋತ್ತಮ ಇವು ಪ್ರಾಕ್ಟಿಕಲ್ ಆಗಿ ಸಂಪನ್ನರಾಗಲು ಸ್ವಲ್ಪವಾದರೂ ಈ ಆಟವನ್ನು ಆಡಬೇಕಾಗಿದೆ. (ಬಾಬಾರವರಿಗಂತೂ ಇದು ಆಟವಾಗಿದೆ ಎಂದು ದಾದಿ ಜಾನಕಿಜೀ ಹೇಳಿದರು) ತಮಗೂ ಆಟವಾಗಿದೆ. ಈ ಪಾತ್ರವೂ ಇದೆ. ಹೇಗೆ ಅನ್ಯ ಪಾತ್ರವನ್ನು ನಿರ್ವಹಿಸುತ್ತೀರೋ, ಹಾಗೆಯೇ ಈ ಪಾತ್ರವೂ ಸಹ ನಿಗದಿಯಾಗಿದೆ. ಇದು ಸ್ವಲ್ಪವಾದರೂ ಭಸ್ಮವಾಗುತ್ತಿದೆ. ಸಂಪೂರ್ಣ ಪವಿತ್ರ, ಅಂಶಮಾತ್ರವೂ ಇರಬಾರದು. ಎಲ್ಲರಿಗೂ ಪ್ರೀತಿಯಂತೂ ಇದೆ ಮತ್ತು ಪ್ರೀತಿಯ ಆಶೀರ್ವಾದಗಳು ದಾದಿಗೂ ಸಿಗುತ್ತಿದೆ. ಒಳ್ಳೆಯದು. ತಾವೆಲ್ಲರೂ ಒಟ್ಟಿಗೆ ಸೇರಿ ನಿಮಿತ್ತರಾಗಿ ನಡೆಸುತ್ತಿದ್ದೀರಿ, ಇದೂ ಸಹ ಬಹಳ ಒಳ್ಳೆಯದು. (ಪರ್‌ದಾದಿ (ನಿರ್ಮಲಶಾಂತ ದಾದಿ) ಯವರೂ ನೆನಪುಗಳನ್ನು ಕೊಟ್ಟಿದ್ದಾರೆ). ಇದೂ ಸಹ ಆಟದಲ್ಲಿ ಒಂದು ಆಟವಾಗಿದೆ. ಎಲ್ಲರೂ ಒಟ್ಟೊಟ್ಟಿಗೆ ಪವಿತ್ರರಾಗುತ್ತಿದ್ದೀರಿ. ಇವರು (ಶಾಂತಮಣಿ ದಾದಿ) ಧೈರ್ಯವನ್ನು ತೋರಿಸಿದರು ಮತ್ತು ಮಾಡಿ ತೋರಿಸಿದರು. ಡಾಕ್ಟರ್‌ಗಳಿಗೂ ತಮ್ಮ ಧೈರ್ಯವನ್ನು ತೋರಿಸಿದರಲ್ಲವೇ? ಪ್ರತಿಯೊಬ್ಬರಲ್ಲೂ ತಮ್ಮ ತಮ್ಮದೇ ಆದ ವಿಶೇಷತೆ ಇದೆ. ಒಳ್ಳೆಯದು. ಒಟ್ಟಿಗೆ ಸೇರಿ, ಜೊತೆಗಾರರಾಗಿ, ಯಜ್ಞದ ಕಾರ್ಯವಂತೂ ನಿಲ್ಲುವುದೇ ಇಲ್ಲ. ಅಮರವಾಗಿದೆ. ನಡೆಯಬೇಕಾಗಿದೆ ಮತ್ತು ವೃದ್ಧಿ ಮಾಡಬೇಕಾಗಿದೆ. ಎಲ್ಲರೂ ಸಾಕ್ಷಿಯಾಗಿ ಆಟ ನೋಡುತ್ತಿದ್ದೀರೋ ಅಥವಾ ಪ್ರಶ್ನೆ ಏಳುತ್ತದೆಯೋ? ಏಕೆ, ಏನು ಎಂಬುದಂತೂ ಏಳುವುದಿಲ್ಲ ಅಲ್ಲವೇ? ಏನಾಗುತ್ತದೋ, ಅದರಲ್ಲಿ ಅನೇಕ ರಹಸ್ಯಗಳು ಅಡಗಿರುತ್ತವೆ. ಅದು ತಂದೆಗೆ ತಿಳಿದಿದೆ ಮತ್ತು ಡ್ರಾಮಾಗೆ ತಿಳಿದಿದೆ. ಒಳ್ಳೆಯದು. ಎಲ್ಲವೂ ಸರಿಯಾಗಿದೆಯಲ್ಲವೇ? ಒಳ್ಳೆಯದು.

**ದಾದೀಜೀಯವರ ಸೇವೆಗಾಗಿ ಬಾಂಬೆ ಆಸ್ಪತ್ರೆಗೆ ಹೋಗಿರುವ ಅಣ್ಣಂದಿರು ಮತ್ತು ಅಕ್ಕಂದಿರಿಗೆ ಬಾಪ್‌ದಾದಾರವರು ವಿಶೇಷ ನೆನಪು ನೀಡಿದರು:** ಮುಂಬೈನಲ್ಲಿ ಎಲ್ಲರ ಪ್ರೀತಿಯ, ಎಲ್ಲರ ಹೃದಯಕ್ಕೆ ಹತ್ತಿರವಾದ ದಾದಿಯವರ ಸೇವೆ ಮಾಡಲು ಯಾರು ನಿಮಿತ್ತರಾಗಿದ್ದಾರೋ ಅವರೆಲ್ಲರಿಗೂ ಬಾಪ್‌ದಾದಾರವರು ನೆನಪು ಮತ್ತು ಪ್ರೀತಿಯನ್ನು ಕೊಡುತ್ತಿದ್ದಾರೆ. ಡ್ರಾಮಾದಲ್ಲಿ ದಾದಿಯವರ ಪಾತ್ರವನ್ನು ಏನು ನೋಡುತ್ತಿದ್ದೀರೋ, ಸಾಕ್ಷಿಯಾಗಿ ನೋಡುತ್ತಾ, ಆಶೀರ್ವಾದಗಳ, ಹೃದಯದ ಸ್ನೇಹದ ಮತ್ತು ಸ್ನೇಹದ ಸಕಾಶ ನೀಡುವ ಸೇವೆಯನ್ನು ಮಾಡುತ್ತಿರುತ್ತೀರಾ? ಮಾಡುತ್ತಾ ಇರಿ. ಆಟದಲ್ಲಿ ಆಟವನ್ನು ನೋಡುತ್ತಾ ಇರಿ. ಸಾಕ್ಷಿಯಾಗಿ ನೋಡಿರಿ ಮತ್ತು ಹಾರುತ್ತಾ ಇರಿ. ಬಾಪ್‌ದಾದಾರವರು ಎಲ್ಲರಿಗೂ ಹೃದಯದಿಂದ ಆಶೀರ್ವಾದಗಳನ್ನು ಕೊಡುತ್ತಿದ್ದಾರೆ ಮತ್ತು ಎಲ್ಲರೂ ಪ್ರೀತಿಯಿಂದ ಸೇವೆ ಮಾಡುತ್ತಿದ್ದಾರೆ. ಸೇವೆಗಾಗಿಯೂ ಅಭಿನಂದನೆಗಳು. ('ವೈದ್ಯರೂ ಬಹಳ ಚೆನ್ನಾಗಿ ಸೇವೆ ಮಾಡುತ್ತಿದ್ದಾರೆ ಎಂದು ದಾದಿ ಜಾನಕಿಯವರು ಹೇಳಿದರು.) ಏನಾಗುತ್ತಿದೆಯೋ, ಅದರಲ್ಲಿ ಸೇವೆ ಮತ್ತು ಕಲ್ಯಾಣ ತುಂಬಿಯೇ ಇರುತ್ತದೆ. ಒಳ್ಳೆಯದು. **(02–02–2007)**

ದಾದಾ ವಿಶ್ವರತನ್‌ರವರು 26ನೇ ಫೆಬ್ರವರಿಯಂದು ಆಕಸ್ಮಿಕವಾಗಿ ತಮ್ಮ ಹಳೆಯ ಶರೀರವನ್ನು ಬಿಟ್ಟರು. ಏಕೆಂದರೆ ಡ್ರಾಮಾದಲ್ಲಿ ಕೆಲವು ಆತ್ಮಗಳಿಗೆ ಅಚಾನಕ್ (ಆಕಸ್ಮಿಕ) ಮತ್ತು ಎವರೆಡಿಯ ಪಾಠವನ್ನು ಪಕ್ಕಾ ಮಾಡಿಸಬೇಕಾಗಿದೆ. ನೋಡಿ, ಚಂದ್ರಮಣಿಯವರು ಶರೀರ ಬಿಟ್ಟಾಗ ಸ್ವಲ್ಪ ಸಮಯದವರೆಗೂ ಆ ವಾತಾವರಣ ಚೆನ್ನಾಗಿತ್ತು. ಎಲ್ಲರೂ ಅಚಾನಕ್ ಎಂಬ ಪಾಠದಲ್ಲಿ ಪಕ್ಕಾ ಆಗಿದ್ದರು, ನಂತರ ನಿಧಾನವಾಗಿ ಹಗುರವಾಗಿ ಬಿಟ್ಟಿತು. ನಂತರ ಡ್ರಾಮಾದಲ್ಲಿ ಯಾವ ಪಾತ್ರವು ನಡೆಯಿತೋ, ಅದು ಈ ವಾಯುಮಂಡಲದಲ್ಲಿ ಅಚಾನಕ್ ಮತ್ತು ಎವರೆಡಿಯ ಪಾಠವನ್ನು ಪುನಃ ಪಕ್ಕಾ ಮಾಡಿಸಲು ನಿಮಿತ್ತವಾಯಿತು. ವಿಶ್ವರತನ್‌ರವರ ನಿರಾಕಾರಿ ಸ್ಥಿತಿಯ ಗಮನ ಚೆನ್ನಾಗಿತ್ತು, ಗುಪ್ತವಾಗಿ ಈ ಪಾಠ ಪಕ್ಕಾ ಆಗಿತ್ತು. ಆದ್ದರಿಂದ ಬೇಗ ಸೆಕೆಂಡ್‌ನಲ್ಲೇ ಪಾತ್ರವು ಪೂರ್ತಿಯಾಯಿತು. ಈ ಸಮಯವೂ ಸಹ ಎಲ್ಲರಿಗೂ ಗಮನವನ್ನು ಸೆಳೆಯುವ ಸಲುವಾಗಿ ನಿಮಿತ್ತವಾಗಿದೆ. ಎಲ್ಲರೂ ಈಗ ಸ್ವಲ್ಪ ಸ್ವಲ್ಪ ತಿಳಿಯುತ್ತಿದ್ದಾರೆ, ಇನ್ನೂ ಸಮಯವಿದೆ ಎಂಬ ಅಲೆಯು ಈಗ ಏಳಬಾರದು. ಎವರೆಡಿ ಆಗಿ ಇರಬೇಕಾಗಿದೆ, ಏಕೆಂದರೆ ಬಹಳ ಕಾಲದ ಗಮನ ಇರಬೇಕಾಗಿದೆ. ಒಳ್ಳೆಯದು.

**ದಾದಿಯವರೊಂದಿಗೆ:** ತಮ್ಮ ಗ್ರೂಪ್ ಅಂತೂ ಅಟೆನ್‌ಷನ್ (ಗಮನ ಕೊಡುವವರು) ಇಡುವವರ ಗುಂಪಾಗಿದೆಯಲ್ಲವೇ? ಅಟೆನ್‌ಷನ್ ಇರುತ್ತದೆ. ತಮ್ಮ ಗಮನವಂತೂ ಇರುತ್ತದೆಯಲ್ಲವೇ, ಎವರಡಿಯಾಗಿದ್ದೀರಲ್ಲವೇ?

**ದಾದಾರವರ ಸೇವಾಧಾರಿ ಮನೋಜ್‌ರವರೊಂದಿಗೆ:** ಡ್ರಾಮಾವನ್ನು ನೋಡಿ ಖುಷಿಯಾಗಿದ್ದೀರಾ, ಡ್ರಾಮಾದಲ್ಲಿ ಏನು ಆಗುತ್ತದೆಯೋ ಅದು ಒಳ್ಳೆಯದೇ ಆಗುತ್ತದೆ. (ದಾದಾರವರ ನೆನಪು ಬಹಳ ಬರುತ್ತದೆ) ನೆನಪು ಬರಲೀ, ಅವರ ಗುಣ ಮತ್ತು ಅವರ ಕರ್ತವ್ಯಗಳು ನೆನಪಿಗೆ ಬರಬೇಕು ನಂತರ ಅವುಗಳನ್ನು ಫಾಲೋ (ಅನುಕರಣೆ) ಮಾಡಿರಿ. ನೆನಪಂತೂ ಬರಲೇ ಬೇಕಾಗಿದೆ. ಕೇವಲ ಫಾಲೋ ಮಾಡಿ, ಖುಷಿಯಾಗಿರಿ ಮತ್ತು ಖುಷಿಯನ್ನು ಹಂಚಿರಿ ಎಂಬ ಆಜ್ಞೆ ಇದೆ. **(03–03–2007)**

ಬಾಪ್‌ದಾದಾರವರು ನೋಡುತ್ತಾರೆ – ಈಗಿನ ಸಮಯದಲ್ಲಿ ಪ್ರತಿಯೊಂದು ವರ್ಗದವರ ಮೀಟಿಂಗ್ಸ್ (ಸಭೆ) ಬಹಳ ಆಗುತ್ತಿದೆ. ಡಬಲ್ ವಿದೇಶಿಯರ ಮೀಟಿಂಗ್ ಬಗ್ಗೆಯೂ ಸಹ ಬಾಪ್‌ದಾದಾರವರು ಕೇಳಿದರು. ಬಹಳ ಚೆನ್ನಾಗಿದೆ ಎನಿಸಿತು. ಎಲ್ಲಾ ಮೀಟಿಂಗ್ಸ್ ಬಾಪ್‌ದಾದಾರವರ ಬಳಿಯಂತೂ ತಲುಪಿಯೇ ಬಿಡುತ್ತದೆ. ಅಂದಾಗ ಬಾಪ್‌ದಾದಾರವರು ಕೇಳುತ್ತಾರೆ – ಇದರ ದಿನಾಂಕವನ್ನು ಯಾವಾಗ ಎಂದು ಫಿಕ್ಸ್ (ನಿಗದಿ) ಪಡಿಸಿದ್ದೀರಿ? ಅಥವಾ ಈ ದಿನಾಂಕವನ್ನು ಡ್ರಾಮಾ ನಿಗದಿ ಮಾಡುತ್ತದೆಯೋ ಅಥವಾ ನೀವು ನಿಗದಿ ಮಾಡುತ್ತೀರೋ? ಯಾರು ಮಾಡುತ್ತಾರೆ? ಲಕ್ಷ್ಯವಂತೂ ನೀವು ಇಟ್ಟುಕೊಳ್ಳಲೇ ಬೇಕಾಗಿದೆ. ಮತ್ತು ಲಕ್ಷ್ಯವನ್ನಂತೂ ಬಹಳ ಚೆನ್ನಾಗಿರುವುದನ್ನು ಇಟ್ಟುಕೊಂಡಿದ್ದೀರಿ, ಈಗ ಕೇವಲ ಹೇಗೆ ಲಕ್ಷ್ಯವನ್ನು ಇಟ್ಟುಕೊಂಡಿದ್ದೀರೋ ಅದರ ಅನುಸಾರವಾಗಿಯೇ ಲಕ್ಷಣಗಳು, ಶ್ರೇಷ್ಠ ಲಕ್ಷ್ಯದ ಸಮಾನ ಆಗಬೇಕಾಗಿದೆ. ಈಗ ಲಕ್ಷ್ಯ ಮತ್ತು ಲಕ್ಷಣದಲ್ಲಿ ಅಂತರವಿದೆ. ಯಾವಾಗ ಲಕ್ಷ್ಯ ಮತ್ತು ಲಕ್ಷಣವು ಸಮಾನವಾಗಿಬಿಡುತ್ತದೋ, ಆಗ ಲಕ್ಷ್ಯವು ಪ್ರಾಕ್ಟಿಕಲ್‌ನಲ್ಲಿ ಬಂದುಬಿಡುತ್ತದೆ. ಎಲ್ಲಾ ಮಕ್ಕಳು ಯಾವಾಗ ಅಮೃತವೇಳೆಯಲ್ಲಿ ಮಿಲನವನ್ನು ಮಾಡುತ್ತಾರೋ ಮತ್ತು ಸಂಕಲ್ಪವನ್ನು ಮಾಡುತ್ತಾರೋ, ಅವುಗಳನ್ನು ಬಹಳ ಚೆನ್ನಾಗಿ ಮಾಡುತ್ತಾರೆ. ಪುರುಷಾರ್ಥವನ್ನೂ ಬಹಳ ಚೆನ್ನಾಗಿ ಮಾಡುತ್ತಾರೆ, ಆದರೆ ಪುರುಷಾರ್ಥದಲ್ಲಿ ಒಂದು ಮಾತಿನಲ್ಲಿ ತೀವ್ರತೆಯು ಬೇಕಾಗಿದೆ. ತೀವ್ರತೆಯ ದೃಢತೆಯ ಅಡಿಷನ್ (ಸೇರ್ಪಡೆ) ಬೇಕಾಗಿದೆ.

ಈ ದಿನ ನಿಮ್ಮ ದಾದಿಯವರು ನೆನಪಿಗೆ ಬರುತ್ತಿದ್ದಾರೆ, ದಾದಿಯವರ ಯಾವ ವಿಶೇಷತೆಯನ್ನು ನೋಡಿದಿರಿ? ಹೇಗೆ ಕಂಟ್ರೋಲ್ ಮಾಡಿದರು? ಯಾವುದೇ ರೀತಿಯ ವೃತ್ತಿಯುಳ್ಳವರ ಕಡಿಮೆಗಳನ್ನು ದಾದಿಯವರು ಎಂದಿಗೂ ಮನಸ್ಸಿನಲ್ಲಿ ಇಟ್ಟುಕೊಳ್ಳಲಿಲ್ಲ. ಎಲ್ಲರಿಗೂ ಉಮ್ಮಂಗವನ್ನು ತಂದುಕೊಟ್ಟರು. ತಮ್ಮ ಜಗದಂಬ ತಾಯಿಯ ವಾಯುಮಂಡಲವನ್ನು ತಯಾರು ಮಾಡಿದರು. ತಿಳಿದಿದ್ದರೂ ತಮ್ಮ ವೃತ್ತಿಯನ್ನು ಸದಾ ಶುಭವನ್ನಾಗಿ ಇಟ್ಟುಕೊಂಡಿದ್ದರು. ಈ ವಾಯುಮಂಡಲದ ಅನುಭವವನ್ನು ನೀವು ಮಾಡುತ್ತಿದ್ದೀರಿ. ಫಾಲೋ ಫಾದರ್ ಆಗಿದ್ದೀರಿ, ಆದರೆ 'ಸದಾ ಪ್ರತಿಯೊಬ್ಬರ ವಿಶೇಷತೆಗಳನ್ನು ತಿಳಿದುಕೊಂಡು ಆ ವಿಶೇಷತೆಗಳನ್ನು ನಿಮ್ಮದನ್ನಾಗಿ ಮಾಡಿಕೊಳ್ಳಿ' ಎಂದು ಬಾಪ್‌ದಾದಾರವರು ಹೇಳುತ್ತಾರೆ. ಮತ್ತು ಪ್ರತಿಯೊಬ್ಬ ಮಕ್ಕಳಲ್ಲಿ, ಯಾರು ಬಾಪ್‌ದಾದಾರವರ ಮಕ್ಕಳಾಗಿದ್ದಾರೋ ಆ ಒಬ್ಬೊಬ್ಬ ಮಕ್ಕಳಲ್ಲಿ, ಮೂರನೇ ನಂಬರಿನವ ರಾಗಿರಬಹುದು, ಆದರೆ ಇದು ಡ್ರಾಮಾದ ವಿಶೇಷತೆಯಾಗಿದೆ – ಬಾಪ್‌ದಾದಾರವರ ವರದಾನವಿದೆ ಎಲ್ಲಾ ಮಕ್ಕಳಲ್ಲಿ, 99% ತಪ್ಪಿರಬಹುದು, ಆದರೆ ಒಂದು ವಿಶೇಷತೆ ಅವಶ್ಯವಾಗಿ ಇದೆ.

ಈ ವಿಶೇಷತೆಯಿಂದ 'ನನ್ನ ಬಾಬಾ' ಎಂದು ಕರೆಯುವ ಹಕ್ಕುದಾರರಾಗಿದ್ದಾರೆ ಎಂಬುದನ್ನು ಗಮನಿಸಬೇಕು. ಪರವಶರಾಗಿದ್ದಾರೆ, ಆದರೆ ತಂದೆಯೊಂದಿಗೆ ಅಖಂಡವಾದ ಪ್ರೀತಿ ಇರುತ್ತದೆ. ಈ ಕಾರಣದಿಂದಾಗಿ ಬಾಪ್‌ದಾದಾರವರು ಈಗ ಸಮಯದ ಸಮೀಪತೆಯ ಅನುಸಾರ ಯಾವೆಲ್ಲಾ ಬಾಬಾರವರ ಸ್ಥಾನವಿದೆಯೋ, ಹಳ್ಳಿಯಲ್ಲಿರಬಹುದು, ದೊಡ್ಡ ಜೋನ್‌ನಲ್ಲಿರಬಹುದು, ಸೆಂಟರ್‌ನಲ್ಲಿರಬಹುದು, ಆದರೆ ಪ್ರತಿಯೊಂದು ಸ್ಥಾನ ಮತ್ತು ಜೊತೆಗಾರರಲ್ಲಿ ಶ್ರೇಷ್ಠ ವೃತ್ತಿಯ ವಾಯುಮಂಡಲದ ಅವಶ್ಯಕತೆ ಇದೆ. **(17–03–2007)**

ದಾದಿಯವರು ತಮ್ಮ ತರಗತಿಯಲ್ಲಿ ಬರುತ್ತಿರುತ್ತಾರೆ, ಬರದೆ ಇರುವುದಿಲ್ಲ. ತಾವು ಯಾವ ಸಮಾಧಿಯನ್ನು ಮಾಡಿದ್ದೀರೋ, ಅದರ ಹತ್ತಿರವೂ ಬರುತ್ತಿರುತ್ತಾರೆ. ಆದರೆ ನಿಮ್ಮೊಂದಿಗೆ ಬಹಳ ಬಹಳ ಆತ್ಮಿಕ ವಾರ್ತಾಲಾಪವನ್ನು ಮಾಡಲು ಇಚ್ಛಿಸುತ್ತಾರೆ. ಆದ್ದರಿಂದ ಸ್ವಲ್ಪ ಸಮಯ ಬೇಕಾಗಿದೆ. ಉಳಿದಂತೆ ದಾದಿಯವರ 12 ದಿನಗಳು ಸಮಾಪ್ತಿಯಾಗುತ್ತಿದೆ. ದಾದಿಯವರಿಗೆ ಸಾಕಾರ ವತನದಲ್ಲಿ ವಿಶೇಷವಾಗಿ ನ್ಯಾರಾ ಮತ್ತು ಪ್ಯಾರಾ ಆಗಿದ್ದು, ಅತೀ ಅವಶ್ಯಕವಾಗಿರುವ ಕಾರ್ಯಕ್ಕಾಗಿ ನಿಮಿತ್ತಮಾತ್ರವಾಗಿ ಪಾತ್ರವನ್ನು ಅಭಿನಯಿಸಬೇಕಾಗುತ್ತಿದೆ. ಆದರೆ ದಾದಿಯವರ ಜನ್ಮ ಮತ್ತು ಕಾರ್ಯ ಅತಿ ನ್ಯಾರಾ ಆಗಿದೆ. ಅವರು ಬಂದು ವಿಸ್ತಾರವಾಗಿ ತಿಳಿಸಿಕೊಡುತ್ತಾರೆ. ಬಾಪ್‌ದಾದಾರವರಿಗೂ ಡ್ರಾಮಾದಲ್ಲಿ ನಿಗದಿಯಾದ ಪಾತ್ರವನ್ನು ಅಭಿನಯಿಸಬೇಕಾಗುತ್ತದೆ ಮತ್ತು ಅನ್ಯರನ್ನೂ ಅಭಿನಯಿಸುವಂತೆ ಮಾಡಬೇಕಾಗುತ್ತದೆ. ಅಲೌಕಿತೆಯು ಏನು ಎಂಬುದನ್ನು ನಂತರ ತಿಳಿಸಿಕೊಡುತ್ತೇವೆ. ಚೆನ್ನಾಗಿದ್ದೀರಾ? ಮೊದಲನೇ ಸಾಲಿನವರೆಲ್ಲರೂ ಚೆನ್ನಾಗಿದ್ದೀರಾ? ದಾದಿಯವರು ಚೆನ್ನಾಗಿದ್ದಾರಾ? ಪಾಂಡವರು ಚೆನ್ನಾಗಿದ್ದಾರಾ? ಎಲ್ಲಾ ಪಾಂಡವರು ಚೆನ್ನಾಗಿದ್ದೀರಲ್ಲವೇ? ಡಬಲ್ ವಿದೇಶಿಯರು ದಾದಿಯವರ **ನಿಮಿತ್ತ, ನಿರ್ಮಾಣ ಮತ್ತು ನಿರ್ಮಲ ವಾಣಿ** ಎಂಬ ಮೂರು ಶಬ್ದಗಳನ್ನು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕು. ಈ ಮೂರು ಶಬ್ದಗಳು ಪ್ರತಿ ಕ್ಷಣದಲ್ಲಿ, ಪ್ರತಿ ಕಾರ್ಯವನ್ನು ಪ್ರಾರಂಭ ಮಾಡುವುದಕ್ಕೆ ಮೊದಲು, ಕಾರ್ಯವು ಬದಲಾವಣೆ ಯಾಗಬಹುದು, ಆದರೆ ಈ ಮೂರು ಶಬ್ದಗಳ ಸ್ಮೃತಿ ಬದಲಾಗಬಾರದು. ಎಂತಹದ್ದೇ ಕಠಿಣವಾದ ಕಾರ್ಯವಿರಲಿ, ಆದರೆ ಈ ಮೂರು ಶಬ್ದಗಳು – ಹೇಗೆ ತಿಳಿದುಕೊಳ್ಳಬೇಕೆಂದರೆ, ಹೇಗೆ ಬಾಪ್‌ದಾದಾರವರು, ದೀದಿಯವರು, ದಾದಿ – ಮೂವರು ಇದ್ದಾರಲ್ಲವೇ. ಅದೇ ರೀತಿಯಲ್ಲಿ ಈ ಮೂರು ಶಬ್ದಗಳನ್ನು ಮರೆಯಬಾರದಾಗಿದೆ. ಪ್ರತಿಯೊಂದು ಕಾರ್ಯವನ್ನು ಪ್ರಾರಂಭ ಮಾಡುವುದಕ್ಕೆ ಮೊದಲು ಇದನ್ನು ನೆನಪು ಮಾಡಬೇಕು, ನಂತರ ಕಾರ್ಯವನ್ನು ಪ್ರಾರಂಭ ಮಾಡಬೇಕಾಗಿದೆ. ಆಗ ಬಹಳ ಬೇಗ ದಾದಿಯವರ ಸಮಾನ, ಸಹಜವಾಗಿ ಸಮಾನ ಆಗಿಬಿಡುವಿರಿ. ಒಳ್ಳೆಯದು. ಈಗ ಏನು ಮಾಡಬೇಕಾಗಿದೆ. **(06–09–2007)**

ಎಷ್ಟೊಂದು ಸಹಜವಾದ ವಿಧಿಯನ್ನು ತಿಳಿಸಿಕೊಡಲಾಗಿದೆ. ಕೇವಲ ಸಂಗಮಯುಗದಲ್ಲೇ ಬಿಂದುವಿನ ಕಮಾಲ್ (ಚಮತ್ಕಾರ) ಇದೆ. ಕೇವಲ ಬಿಂದುವನ್ನು ಉಪಯೋಗಿಸಿ, ಅನ್ಯ ಯಾವ ಚಿಹ್ನೆಯ ಅವಶ್ಯಕತೆ ಇಲ್ಲ. ಮೂರು ಬಿಂದುಗಳನ್ನು ಉಪಯೋಗಿಸಿ. ಆತ್ಮ ಬಿಂದು, ತಂದೆಯು ಬಿಂದು ಮತ್ತು ಡ್ರಾಮಾವು ಬಿಂದು. ಮೂರು ಬಿಂದುಗಳನ್ನು ಉಪಯೋಗಿಸುತ್ತಾ ಇದ್ದಾಗ ತಂದೆಯ ಸಮಾನರಾಗುವುದು ಯಾವುದೇ ಕಷ್ಟವಲ್ಲ. ಬಿಂದು ಇಡಲು ಬಯಸುತ್ತೀರಿ ಆದರೆ ಇಡುವ ಸಮಯದಲ್ಲಿ ಕೈ ಅಲುಗಾಡಿಬಿಡುತ್ತದೆ. ಆಗ ಪ್ರಶ್ನಾರ್ಥಕ ಚಿಹ್ನೆ ಅಥವಾ ಆಶ್ಚರ್ಯದ ಚಿಹ್ನೆ ಆಗಿಬಿಡುತ್ತದೆ. ಅಲ್ಲಿ ಕೈ ಅಲುಗಾಡುತ್ತದೆ, ಇಲ್ಲಿ ಬುದ್ಧಿಯು ಅಲುಗಾಡುತ್ತದೆ. ಇಲ್ಲದಿದ್ದರೆ ಮೂರು ಬಿಂದುಗಳನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳುವುದು ಕಷ್ಟವೇನು? **(15–10–2007)**

**ದಾದಿಯರೊಂದಿಗೆ:** ಮಕ್ಕಳು ಹಾಜರಾಗಿದ್ದಾರೆ ಎಂದಾಗ ತಂದೆಯು ಹಾಜರ್ ಆಗಿಯೇ ಆಗುತ್ತಾರೆ. ತಂದೆಯು ಮಕ್ಕಳ ವಿನಹ ದೂರವಿರುವುದಿಲ್ಲ, ಮಕ್ಕಳು ತಂದೆಯಿಂದ ದೂರವಾಗುವುದಿಲ್ಲ. ನಾವು ಜೊತೆಯಲ್ಲಿರುತ್ತೇವೆ, ಜೊತೆಯಲ್ಲಿ ಹೋಗುತ್ತೇವೆ ಮತ್ತು ಅರ್ಧ ಕಲ್ಪ ಬ್ರಹ್ಮಾಬಾಬಾರವರ ಜೊತೆಯಲ್ಲಿ ಇರುತ್ತೇವೆ ಎಂಬ ಪ್ರತಿಜ್ಞೆ ಇದೆ. (ಅವರೂ ಸಹ ಸಮಾವೇಶವಾಗಿದ್ದು ಜೊತೆಯಲ್ಲಿದ್ದಾರೆ ಎಂದು ಜಾನಕಿ ದಾದಿಯವರು ಹೇಳಿದರು) ತಮ್ಮ ಈ ಅನುಭವ ಸರಿಯಾಗಿದೆ. ಈಗಂತೂ ಗ್ಯಾರಂಟಿ ಇದೆ, ಆದರೆ ರಾಜ್ಯಭಾರವನ್ನು ಮಾಡುವಾಗ ಬರುವುದಿಲ್ಲ. ನೋಡುವವರೂ ಬೇಕಲ್ಲವೇ? (ಮೇಲೆ ಇದ್ದಾಗ ಮನಸ್ಸು ಹೇಗೆ ಜೋಡಿಸುತ್ತೀರಿ) ಡ್ರಾಮಾದಲ್ಲಿ ಪಾತ್ರವಿದೆ. ಬ್ರಹ್ಮಾಬಾಬಾರವರಂತೂ ಜೊತೆಯಲ್ಲಿ ಇದ್ದಾರಲ್ಲವೇ? ಡ್ರಾಮಾ ಏನು ಮಾಡುತ್ತದೆ ನೋಡಿರಿ? ಒಳ್ಳೆಯದು. ಎಲ್ಲರೂ ಒಬ್ಬರಿಗೊಬ್ಬರು ಗೌರವವನ್ನು ಕೊಡುತ್ತಾ, ಸ್ವಮಾನದಲ್ಲಿ ಇರುತ್ತಾ ನಡೆಯುತ್ತಾ ಇದ್ದೀರಿ, ನಡೆಯುತ್ತಾ ಇರಿ. **(15–12–2007)**

ಡ್ರಾಮಾದಲ್ಲಿ ಏನು ಆಗುತ್ತದೆಯೋ ಅದು ಒಳ್ಳೆಯದಕ್ಕಿಂತಲೂ ಒಳ್ಳೆಯದೇ ಆಗುತ್ತದೆ. ಹೊಸ ಹೊಸ ನಗರಗಳಲ್ಲಿ ಯಾವ ಮಕ್ಕಳು ಇದ್ದಾರೋ ಅವರು ಈಗ ಸೇವೆಯ ಉಮ್ಮಂಗ ಉತ್ಸಾಹದಲ್ಲಿದ್ದಾರೆ ಮತ್ತು ಎಲ್ಲರಿಗಿಂತಲೂ ಧೈರ್ಯಶಾಲಿಯು ತಮ್ಮ ಒಬ್ಬರು ಮಗುವಿದ್ದಾರೆ. ಅವರು ಧೈರ್ಯಶಾಲಿ ಯಾಗಿದ್ದಾರೆ. ಬಾಪ್‌ದಾದಾರವರು ಅವರಿಗೆ ಪ್ರತಿದಿನ ಅಮೃತವೇಳೆಯಲ್ಲಿ ವರದಾನವನ್ನು ಕೊಡುತ್ತಾರೆ ಮತ್ತು ಮಗುವೂ ಸಹ ಅಕ್ಯೂರೇಟ್ ಆಗಿದ್ದಾರೆ. ಅವರ ಹೆಸರೇನು? (ವಜಿಹಾ) ಇಂತಹ ಕೆಲಸವನ್ನು ಮಾಡಿ ತೋರಿಸಿದರು, ಹೆದರಲಿಲ್ಲ, ಧೈರ್ಯಶಾಲಿಯಾಗಿದ್ದರು, ಹೆದರಲಿಲ್ಲ. ಮತ್ತು ನೋಡಿರಿ ತಮ್ಮ ಮನೆಯವರಿಗೂ ಯುಕ್ತಿಯಿಂದ ಸರಿಪಡಿಸಿದರು, ಚುರುಕ್ಕಾಗಿದ್ದಾರೆ. ಮತ್ತು ನೈರೋಭಿಯವರೂ ಬಹಳ ಚೆನ್ನಾಗಿ ಪುರುಷಾರ್ಥ ಮಾಡಿದರು. ಅವರ ವಿಶೇಷತೆ, ನೈರೋಭಿಯವರ ಕಡೆಯ ವಿಶೇಷತೆ ಇದಾಗಿದೆ – ಅಕ್ಕಂದಿರು ಕಡಿಮೆ ಆಗಿಬಿಡುತ್ತಾರೆ, ಆದರೆ ಯಾವ ವಿದ್ಯಾರ್ಥಿಗಳು ಬರುತ್ತಾರೋ ಅವರು ಸೆಂಟರ್‌ನ್ನು ಸಂಬಾಲನೆ ಮಾಡುತ್ತಾರೆ. ಇದೂ ಸಹ ವಿಶೇಷತೆಯಾಗಿದೆ. ಅಂದಾಗ ಎಲ್ಲರ ವಿಶೇಷತೆಗಳನ್ನು ಒಟ್ಟಾಗಿ ಸೇರಿಸಿ ಪ್ರತಿಯೊಬ್ಬರೂ ತಮ್ಮ ತಮ್ಮ ಸ್ಥಾನವನ್ನು ವಿಶೇಷವನ್ನಾಗಿ ಮಾಡಿರಿ. ಉಳಿದಂತೆ ಚೆನ್ನಾಗಿದೆ. ಡಬಲ್ ಪುರುಷಾರ್ಥಿಗಳು ಚೆನ್ನಾಗಿ ಪುರುಷಾರ್ಥವನ್ನು ಮಾಡುತ್ತಾ ಮುಂದುವರೆಯು ತ್ತಿದ್ದಾರೆ, ಆದರೆ ಬಾಬಾರವರು ಚಾರ್ಟ್‌ನ್ನು ನೋಡುತ್ತಾರೆ. ಏನು ಸಮಾಚಾರವನ್ನು ಹೇಳಲಾಗಿದೆಯೋ, ಅವರು ಸಂಪೂರ್ಣ ಪವಿತ್ರತೆಯ ಚಾರ್ಟ್‌ನ್ನು ನೋಡುತ್ತಾರೆ. ಚೆನ್ನಾಗಿದೆ. ಎಲ್ಲರ ಲಕ್ಷ್ಯವು ಬಹಳ ಚೆನ್ನಾಗಿದೆ. ಆದರೆ ಮಧ್ಯದಲ್ಲಿ ಹುಡುಗಾಟಿಕೆಯ ಮಾಯೆ ಬಹಳ ಬರುತ್ತದೆ. ಈಗ ಅದಕ್ಕೆ ಬೀಳ್ಕೊಡುಗೆಯನ್ನು ಕೊಡಬೇಕಾಗಿದೆ. ಹುಡುಗಾಟಿಕೆಯ ಬೀಳ್ಕೊಡುಗೆ ಮತ್ತು ಫುಲ್‌ಸ್ಟಾಪ್‌ನ ಆಹ್ವಾನ. ಚೆನ್ನಾಗಿದೆಯಲ್ಲವೇ? ಮಾಡುತ್ತೀರಲ್ಲವೇ? ಹುಡುಗಾಟಿಕೆಯನ್ನು ತೋರಿಸಬೇಡಿರಿ. ಬಾಪ್‌ದಾದಾರವರು ಹುಡುಗಾಟಿಕೆಯ ಆಟವನ್ನು ಬಹಳ ನೋಡಿದ್ದಾರೆ. ಈಗ ಒಂದು ಸೆಕೆಂಡ್‌ನಲ್ಲಿ ಫುಲ್‌ಸ್ಟಾಪ್ ಇಡುವಂತಹ ಆಟವನ್ನು ತೋರಿಸಬೇಕಾಗಿದೆ. ಲೆಕ್ಕಾಚಾರದಲ್ಲೂ ನೋಡಿದಾಗ, ಎಲ್ಲದಕ್ಕಿಂತಲೂ ಸಹಜವಾದುದ್ದು ಫುಲ್‌ಸ್ಟಾಪ್. ಪೆನ್ಸಿಲ್ ಇಡಿ, ಫುಲ್‌ಸ್ಟಾಪ್ ಬಂದುಬಿಡುತ್ತದೆ. ಒಳ್ಳೆಯದು. ಡಬಲ್ ವಿದೇಶಿಯರು ಸದಾ ಅವಕಾಶವನ್ನು ಪಡೆಯುತ್ತಿರುತ್ತಾರೆ. ಇದು ಬಹಳ ಚೆನ್ನಾಗಿದೆ. ತೆಗೆದುಕೊಳ್ಳುತ್ತಾ ಇರುವುದು ಚೆನ್ನಾಗಿದೆ. **(30–11–2008)**

ಒಬ್ಬರೊಬ್ಬರ ಅನುಭವನ್ನು ಕೇಳುವುದರಿಂದ ಉಲ್ಲಾಸದಲ್ಲಿ ಬಂದು ಬಿಡುತ್ತೀರಿ. ಒಬ್ಬರೊಬ್ಬರ ಅನುಭವ ಕಡಿಮೆಯೇನು ಆಗುವುದಿಲ್ಲ. ಪ್ರತಿಯೊಬ್ಬರಿಗೂ ಡ್ರಾಮಾನುಸಾರವಾಗಿ ಒಂದಲ್ಲ ಒಂದು ವಿಶೇಷತೆಯು ಬಾಪ್‌ದಾದಾರವರಿಂದ ಸಿಕ್ಕಿದೆ. ಆ ಅನುಭವವನ್ನು ಕೇಳುವುದರಿಂದ ಇವರು ಮಾಡಬಲ್ಲವರಾಗಿದ್ದಾರೆ ಎಂದಾಗ ನಾನು ಏಕೆ ಮಾಡಲಾಗುವುದಿಲ್ಲ ಎಂಬ ಉಮ್ಮಂಗದಲ್ಲಿ ಬರುತ್ತಾರೆ. ಎಂದಿಗೂ ಮನಸ್ಸನ್ನು ಚಿಕ್ಕದನ್ನಾಗಿ ಮಾಡಿಕೊಳ್ಳ ಬಾರದು. ದೊಡ್ಡ (ವಿಶಾಲ) ಹೃದಯ, ದೊಡ್ಡ ಬಾಬಾ. ಚಿಕ್ಕ ಬಾಬಾ ಆಗಿದ್ದಾರೇನು? ಶ್ರೇಷ್ಠಾತಿ ಶ್ರೇಷ್ಠ ತಂದೆಯಾಗಿದ್ದಾರೆ. ಅಂದಾಗ ಮಕ್ಕಳ ಹೃದಯ ಸದಾ ದೊಡ್ಡದಾಗಿರಲಿ. ಬಾಪ್‌ದಾದಾರವರ ಸ್ಲೋಗನ್ **"ದೊಡ್ಡ ಹೃದಯ, ಸತ್ಯವಾದ ಹೃದಯ ಮತ್ತು ಸ್ವಚ್ಛ ಹೃದಯ ಇದ್ದಾಗ ಪ್ರತಿಯೊಂದು ಇಚ್ಛೆ ಪೂರ್ಣಗೊಳ್ಳುತ್ತದೆ"** ಎಂಬುದಾಗಿದೆ. **(05–02–2009)**

**ಅತಿಥಿಗಳೊಂದಿಗೆ:** ತಾವು ಅತಿಥಿಗಳೋ (ಮೆಹಮಾನ್) ಅಥವಾ ಮಹಾನ್ ಆಗಿಬಿಟ್ಟಿದ್ದೀರೋ? ಅತಿಥಿಗಳೆಂದು ತಿಳಿದುಕೊಳ್ಳುವುದಿಲ್ಲವಲ್ಲವೇ? ಮಹಾನ್ ಆಗುವವರಾಗಿದ್ದೀರಿ. ಮಹಾನ್ ಆಗಲೇ ಬೇಕಾಗಿದೆ. ಇಲ್ಲಿಗೆ ಬರುವುದು, ಸಂಬಂಧದಲ್ಲಿ ಬರುವುದು ಎಂದರೆ ಮುಂದುವರೆಯುತ್ತಲೇ ಇರುತ್ತೀರಿ. ಆಶೀರ್ವಾದಗಳು ಇದ್ದೇ ಇದೆ. ನೋಡಿ – ನೀವು ಇಲ್ಲಿಯವರೆಗೆ ತಲುಪಿದ್ದೀರೋ, ಇಲ್ಲಿಗೆ ಯಾರು ಕಳುಹಿಸಿದ್ದಾರೋ, ಡ್ರಾಮಾವು ನಿಮ್ಮನ್ನು ಇಲ್ಲಿಯವರೆಗೆ ತಲುಪಿಸಿದೆ. **(24–03–2009)**

ಯಾರು ಮೊದಲನೇ ಸಲ ಬಂದಿದ್ದಾರೋ, ಮೊದಲನೇ ಸಲ ಬಾಪ್‌ದಾದರವರೊಂದಿಗೆ ಮಿಲನ ಮಾಡಲು ಬಂದಿದ್ದೀರೋ ಅವರು ಮೇಲೆದ್ದೇಳಿ. ನೋಡಿರಿ, ಅರ್ಧ ಕ್ಲಾಸ್ ಮೊದಲನೇ ಸಲ ಬಂದಿರುವವರಾಗಿದ್ದಾರೆ. ಹಿಂದೆ ಇರುವವರು ಕೈ ಎತ್ತಿರಿ. ಎದ್ದು ನಿಂತುಕೊಂಡು ನೋಡಿರಿ. ಯಾರೆಲ್ಲಾ ಮೊದಲನೇ ಸಲ ಬಂದಿದ್ದಾರೋ ಅವರಿಗೆ ಬಾಪ್‌ದಾದಾರವರು ಹೊಸ ಜನ್ಮದ, ಜನ್ಮ ದಿನದ ಶುಭಾಶಯಗಳನ್ನು ಕೊಡುತ್ತಿದ್ದಾರೆ. ಜನರು ಲಕ್ಷ ಲಕ್ಷ ಶುಭಾಶಯಗಳೆಂದು ಹೇಳುತ್ತಾರೆ. ತಂದೆಯು ಪದಮ ಪದಮದಷ್ಟು ಶುಭಾಶಯಗಳೆಂದು ಹೇಳುತ್ತಾರೆ. ಮತ್ತು ಈಗ ಬರುವವರಿಗೆ ಬಾಪ್‌ದಾದಾರವರು ಸದಾ ಒಂದು ಅವಕಾಶವನ್ನು ಕೊಡುತ್ತಾರೆ, ಆ ಅವಕಾಶವಾಗಿದೆ, ಒಂದುವೇಳೆ ಈಗ ಬಂದಿರುವವರೂ ಸಹ ತೀವ್ರವಾಗಿ ಪುರುಷಾರ್ಥ ಮಾಡಿದಿರಿ ಎಂದರೆ ಬಾಪ್‌ದಾದಾರವರು ಮತ್ತು ಡ್ರಾಮಾ ಅವರಿಗೆ ಲಾಸ್ಟ್ ಸೋ ಫಾಸ್ಟ್, ಫಾಸ್ಟ್ ಸೋ ಫಸ್ಟ್ (ಕೊನೆಯಲ್ಲಿ ಬರುವವರೂ

ತೀವ್ರವಾಗಿ ಪುರುಷಾರ್ಥ ಮಾಡಿ ಮೊದಲಿನ ನಂಬರ್‌ನಲ್ಲಿ ಬರಬಹುದು) ಇವರೂ ಸಹ ಮುಂದಿನ ನಂಬರನ್ನು ಪಡೆಯಬಹುದಾಗಿದೆ. ಚಾನ್ಸ್ (ಅವಕಾಶ) ಇದೆ, ಚಾನ್ಸಲರ್ ಆಗಿರಿ. ಕೇವಲ ಗಮನವನ್ನು ಕೊಡಬೇಕಾಗಿದೆ. **(07–04–2009)**

**ಶಿವ ಭಗವಾನುವಾಚ:** ಮಧುರ ಮಧುರ ಮಕ್ಕಳೇ, ತಮ್ಮ ಸ್ಥಿತಿಯನ್ನು ಏಕರಸವನ್ನಾಗಿ ಮಾಡಿಕೊಳ್ಳುವುದಕ್ಕಾಗಿ ಎಂದಿಗೂ ಹೇಳಿ ಕೇಳಿದ ಮಾತುಗಳ ಮೇಲೆ ವಿಶ್ವಾಸವನ್ನು ಇಡಬೇಡಿರಿ. ನೀವು ಒಬ್ಬ ತಂದೆಯಿಂದಲೇ ಕೇಳಿರಿ. ವ್ಯರ್ಥ ಮಾತುಗಳಿಂದ ದೂರವಾಗಿಬಿಡಿ. ನೀವು ಎಂದಿಗೂ ಯಾರ ನಿಂದನೆಯನ್ನೂ ಮಾಡಬೇಡಿರಿ. ಏಕೆಂದರೆ ಈ ಅನಾದಿ ಡ್ರಾಮಾದಲ್ಲಿ ಪ್ರತಿಯೊಂದು ಆತ್ಮವು ತನ್ನ ಅಕ್ಯೂರೇಟ್ (ನಿಖರವಾದ) ಪಾತ್ರವನ್ನು ಅಭಿನಯಿಸುತ್ತಿದೆ. ಈ ಡ್ರಾಮಾದ ಪ್ರತಿಯೊಂದು ದೃಶ್ಯವು ಮಕ್ಕಳಾದ ನಿಮಗೆ ಇಷ್ಟವಾಗಬೇಕಾಗಿದೆ. ಏಕೆಂದರೆ ಈ ಡ್ರಾಮಾವು ಸ್ವಯಂ ರಚೆಯಿತ ತಂದೆಗೆ ಬಹಳ ಇಷ್ಟವಾಗಿದೆ. ಇದು ದುಃಖ–ಸುಖ, ಸೋಲು–ಗೆಲುವಿನ ಬಹಳ ಸುಂದರವಾದ ನಾಟಕವು ಮಾಡಲ್ಪಟ್ಟಿದೆ. ಇದರಲ್ಲಿ ಪ್ರತಿಯೊಬ್ಬ ಪಾತ್ರಧಾರಿಯು ತನ್ನ ವಿಶೇಷವಾದ ಪಾತ್ರವನ್ನು ಅಭಿನಯಿಸುತ್ತಿದ್ದಾರೆ. ಆದ್ದರಿಂದ ಡ್ರಾಮಾದ ಪ್ರತಿಯೊಂದು ದೃಶ್ಯವನ್ನು ನೋಡುತ್ತಾ ಸದಾ ಹರ್ಷಿತರಾಗಿರಿ. ನೀವು ಈ ಕಲ್ಯಾಣಕಾರಿ ಡ್ರಾಮಾದಲ್ಲಿ ಯಾರನ್ನೂ ದೋಷಿಗಳೆಂದು ಹೇಳಲಾಗುವುದಿಲ್ಲ. ಏಕೆಂದರೆ ಏನೆಲ್ಲಾ ನಡೆದು ಹೋಯಿತೋ ಅದೇ ಆಗಬೇಕಾಗಿದೆ. ಮಾಡಿ, ಮಾಡಲ್ಪಟ್ಟ ಮತ್ತು ಮಾಡುತ್ತಿರುವ ಡ್ರಾಮಾ ಆಗಿದೆ. ಆದ್ದರಿಂದ ಯಾರನ್ನೂ ದೋಷಿಗಳೆಂದು ಮಾಡಲು ಸಾಧ್ಯವಿಲ್ಲ. ಇದು ಡ್ರಾಮಾದ ಬಹಳ ಸುಂದರವಾದ ಪಾತ್ರವು ಮಾಡಲ್ಪಟ್ಟಿದೆ. ಯಾವ ಮಕ್ಕಳು ಸಾಕ್ಷಿ ದ್ರಷ್ಟ ಆಗಿ ಡ್ರಾಮಾದಲ್ಲಿ ಪ್ರತಿಯೊಂದು ಪಾತ್ರವನ್ನು ನೋಡುತ್ತಾರೋ ಅವರ ಸ್ಥಿತಿಯು ಜೇನಿನ ಸಮಾನ ಮಧುರವಾಗಿಬಿಡುತ್ತದೆ. ಅವರು ಸದಾ ಏಕರಸ, ಅಚಲ, ಅಡೋಲರಾಗಿರುತ್ತಾರೆ. **(ಸಾಕಾರ ಮುರುಳಿ – 18–01–1995)**